ಸಮಗ್ರ ವಚನ ಸಂಪುಟ

೪

ಜನಪ್ರಿಯ ಆವೃತ್ತಿ

ಸಿದ್ಧರಾಮೇಶ್ವರ ವಚನ ಸಂಪುಟ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು

ಸಿದ್ಧರಾಮೇಶ್ವರ ವಚನಸಂಪುಟ

ಸಂಪಾದಕ

ಡಾ. ಎಸ್. ವಿದ್ಯಾಶಂಕರ

ಕನ್ನಡ ರೀಡರ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಬೆಂಗಳೂರು

SIDDARAMESHWARA VACHANASAMPUTA : Complete Vachanas of Shree Siddarameshwara/ Ed. by Dr. S. Vidyashankar, Reader, Centre of Kannada Studies, Bangalore University, Bangalore - 560 056 and Published by Sri P.S.V. Rao, Commissioner, Department of Kannada and Culture, No. 14/3A, Nrupatunga Road, Bangalore-560 002.

P.P. XXXVI + 498

ಪ್ರಥಮ ಮುದ್ರಣ : ೧೯೯೩

ಪ್ರತಿ : ಐದು ಸಾವಿರ

ಬೆಲೆ : ರೂ ೪೦೦–೦೦
(೧೫ ಸಂಪುಟಗಳ ಸೆಟ್)

ಅಕ್ಷರ ಜೋಡಣೆ :
ಶ್ರೀ ರೇಣುಕಾ ಪವರ್ ಪ್ರೆಸ್
ಬೆಂಗಳೂರು

ಮುದ್ರಣ :
ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್
ನ್ಯೂ ತರಗುಪೇಟೆ, ಬೆಂಗಳೂರು -2
ಫೋನ : 609026

ಪರಿವಿಡಿ

B ಸಿದ್ಧರಾಮೇಶ್ವರ ವಚನಗಳು :

B ಅನುಬಂಧ :

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ

ಸಂಪಾದಕ ಮಂಡಳಿ

ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಕನ್ನಡ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸದಸ್ಯರು

ಡಾ. ಎಂ. ಚಿದಾನಂದಮೂರ್ತಿ

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಡಾ. ಸಿ. ಪಿ. ಕೃಷ್ಣಕುಮಾರ

ಕನ್ನಡ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಡಾ. ಎಸ್. ವಿದ್ಯಾಶಂಕರ

ಕನ್ನಡ ರೀಡರ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಕಮಿಷನರ್

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ಮುನ್ನುಡಿ

"ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯ ಅಂಗವಾಗಿ ಬೆಳಕು ಕಾಣುತ್ತಲಿರುವ ಎಲ್ಲ ಶರಣರ ಎಲ್ಲ ವಚನಗಳ ೧೫ ಸಂಪುಟಗಳನ್ನು ಏಕಕಾಲಕ್ಕೆ ಕರ್ನಾಟಕದ ಜನತೆಯ ಕೈಗೆ ನೀಡಲು ತುಂಬ ಸಂತೋಷವೆನಿಸುತ್ತದೆ.

ಕನ್ನಡ ನಾಡಿನ ಪ್ರಥಮ ಪ್ರಜಾಸಾಹಿತ್ಯವಾದ ವಚನವಾಙ್ಮಯ ನಮ್ಮ ಪರಂಪರೆಯ ಅಪೂರ್ವ ಸಾಂಸ್ಕೃತಿಕ ಆಸ್ತಿಯಾಗಿದೆ. ಅನೇಕ ಜನ ವಿದ್ವಾಂಸರು, ಅನೇಕ ಸಂಸ್ಥೆಗಳು ಈ ಸಾಹಿತ್ಯವನ್ನು ಬೆಳಕಿಗೆ ತರಲು ಕಳೆದ ನೂರು ವರ್ಷಗಳಿಂದ ದುಡಿಯುತ್ತ ಬಂದುದು ಇದರ ವ್ಯಾಪಕತೆಯ ದ್ಯೋತಕವಾಗಿದೆ. ಹೀಗೆ ಪ್ರಕಟವಾಗಿದ್ದ ಮತ್ತು ಅಪ್ರಕಟಿತ ಸ್ಥಿತಿಯಲ್ಲಿದ್ದ ಈ ಸಾಹಿತ್ಯವನ್ನು ಸಮಗ್ರರೂಪದಲ್ಲಿ ವಚನ ಪಾರಿಭಾಷಾಕೋಶವೂ ಒಳಗೊಂಡಂತೆ ೧೫ ಸಂಪುಟಗಳ ಮೂಲಕ ಕರ್ನಾಟಕ ಸರ್ಕಾರ ಹೊರತರುತ್ತಿರುವುದು, ನಮ್ಮ ಸಾಹಿತ್ಯ ಪ್ರಕಟಣೆಯ ಇತಿಹಾಸದಲ್ಲಿ ಒಂದು ಗಣ್ಯ ಸಾಧನೆಯೆಂದೇ ಹೇಳಬೇಕು. ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ತನ್ನ ಕರ್ತವ್ಯವೆಂದು ಭಾವಿಸಿ, ಕರ್ನಾಟಕದ ಪ್ರಜಾಸರ್ಕಾರ ಈ ಕೆಲಸವನ್ನು ಪೂರೈಸಿದೆ.

ವಚನಸಾಹಿತ್ಯಕ್ಕೆ ನಮ್ಮ ನಾಡಿನಲ್ಲಿ ಸುಮಾರು ೮೦೦ ವರ್ಷಗಳ ಇತಿಹಾಸವಿದೆ. ಈವರೆಗೆ ಬಸವಯುಗದ ಬರವಣಿಗೆಯನ್ನು ಹೊರತರಲು ವಿದ್ವಾಂಸರು ಹೆಚ್ಚು ಗಮನ ಕೊಟ್ಟಿದ್ದಾರೆ. ಈ ಯೋಜನೆ ಅದನ್ನೂ ಒಳಗೊಂಡು ಬಸವೋತ್ತರ ಯುಗದ ಮೇಲೆಯೂ ಒತ್ತುಕೊಟ್ಟುದು ವಿಶೇಷವೆನಿಸಿದೆ. ಇದರಿಂದಾಗಿ ಈ ಯೋಜನೆಗೆ ಒಂದು ಸಾಹಿತ್ಯ ಪ್ರಕಾರದ ಪ್ರಕಟಣೆ ಎಂಬ ಕೀರ್ತಿ ಸಲ್ಲುತ್ತದೆ.

ವಚನವೆಂಬುದು ಚಳುವಳಿ ಸಾಹಿತ್ಯಪ್ರಕಾರವಾಗಿದೆ. ಆತ್ಮಕಲ್ಯಾಣದೊಂದಿಗೆ ಸಮಾಜಕಲ್ಯಾಣವನ್ನೂ ಕಾರ್ಯಗತಗೊಳಿಸಲು ಹೋರಾಡಿ ಮಡಿದ ಹುತಾತ್ಮರ ಸಾಹಿತ್ಯವಿದು. ರಾಜಸತ್ತೆ, ಪುರೋಹಿತಸತ್ತೆ, ಪುರುಷಸತ್ತೆಗಳೆಂಬ ಪ್ರತಿಗಾಮಿ ಸತ್ತೆಗಳ ವಿರುದ್ಧ, ಕರ್ನಾಟಕದ ಎಲ್ಲ ಸಮಾಜದ ಜನರೂ ನಡೆಸಿದ ಹೋರಾಟದ ಉಪನಿಷ್ಪತ್ತಿಯಾದ ಈ ಸಾಹಿತ್ಯದಲ್ಲಿ ಜೀವಪರಧ್ವನಿಗಳು ದಟ್ಟವಾಗಿ ಕೇಳಿಸುತ್ತವೆ. ಪ್ರಾಚೀನ ಕರ್ನಾಟಕದ ಬೌದ್ಧಿಕ ಶ್ರಮದ ವಿದ್ವತ್‌ಜನತಾಪ್ರತಿಭೆಯ ಸಾಹಿತ್ಯಕ್ಕಿಂತ ದೈಹಿಕ ಶ್ರಮದ ಜನತಾ ಪ್ರತಿಭೆಯ ಸಾಹಿತ್ಯ ಹೇಗೆ ಭಿನ್ನವಾಗಿದೆಯೆಂಬುದನ್ನು ಕಾಣಬೇಕಾದರೆ ನಾವು ವಚನಸಾಹಿತ್ಯಕ್ಕೇ ಮೊರೆಹೊಗಬೇಕು. "ವಿಪ್ರ ಮೊದಲು ಅಂತ್ಯಜ ಕಡೆಯಾಗಿ"

ಸಮಾಜದ ಎಲ್ಲ ವರ್ಗದ ಪುರುಷ ಮತ್ತು ಮಹಿಳೆಯರ ಸಂಕೀರ್ಣ ಧ್ವನಿಗಳು ಇದರಲ್ಲಿ ತುಂಬ ಕಲಾತ್ಮಕವಾಗಿ ಎರಕಗೊಂಡಿವೆ. ಹೀಗಾಗಿ ಸಮಗ್ರ ಕರ್ನಾಟಕದ ಪ್ರಾತಿನಿಧಿಕ ಧ್ವನಿಯೆನಿಸಿದ ಈ ಸಾಹಿತ್ಯವನ್ನು ತನ್ನ ಕರ್ತವ್ಯದ ಭಾಗವೆಂದು ಕರ್ನಾಟಕ ಸರ್ಕಾರ ಪ್ರಕಟಿಸಿ, ಸುಲಭ ಬೆಲೆಯಲ್ಲಿ ಜನತೆಗೆ ನೀಡುತ್ತಿದೆ.

ಈ ಯೋಜನೆಯ ನೇತೃತ್ವ ವಹಿಸಿ ದುಡಿದ ಡಾ. ಎಂ. ಎಂ. ಕಲಬುರ್ಗಿ ಅವರ ಶ್ರದ್ಧೆಯನ್ನು, ಸಂಪಾದಕ ಮಂಡಳಿಯ ಮಾರ್ಗದರ್ಶನವನ್ನು, ಸಂಪಾದಕರ ಶ್ರಮವನ್ನು ಸ್ಮರಿಸುತ್ತ ಕನ್ನಡ ಜನತೆಯ ಕೈಗೆ ಈ ಐತಿಹಾಸಿಕ ಪ್ರಕಟಣೆಗಳನ್ನು ಸಂತೋಷದಿಂದ ಅರ್ಪಿಸುತ್ತೇನೆ.

ಜನವರಿ ೩೦, ೧೯೯೩ | ಎಂ. ವೀರಪ್ಪ ಮೊಯಿಲಿ
ಬೆಂಗಳೂರು | ಮುಖ್ಯಮಂತ್ರಿಗಳು

☆

ಪ್ರಕಾಶಕರ ಮಾತು

ವಚನಸಾಹಿತ್ಯ, ಕರ್ನಾಟಕದ ಬಹುದೊಡ್ಡ ಸಾಂಸ್ಕೃತಿಕ ಸಂಪತ್ತು. ಪ್ರಾಚೀನ ಕರ್ನಾಟಕದ ಜನಸಾಮಾನ್ಯರ ಧ್ವನಿಯಾಗಿರುವ ಇದನ್ನು ಪ್ರಕಟಿಸುವುದು, ಪ್ರಸಾರ ಮಾಡುವುದು ಜನತಂತ್ರ ಸರಕಾರದ ಮುಖ್ಯಕರ್ತವ್ಯವಾಗಿದೆ.

ಭಾರತದಲ್ಲಿ ಆತ್ಮೋದ್ಧಾರದ ಬಗ್ಗೆ ಉದಾತ್ತ ತತ್ವಗಳನ್ನು ಪ್ರತಿಪಾದಿಸುತ್ತ ಬಂದಿದ್ದರೂ ಸಮಾಜೋದ್ಧಾರದ ಬಗ್ಗೆ ಉಪೇಕ್ಷೆ ಬೆಳೆದು, ಅಲ್ಲಿ ಶೋಷಣೆ ವರ್ಧಿಸುತ್ತ ಬಂದುದು ನಮ್ಮ ಇತಿಹಾಸದ ಒಂದು ವಿಪರ್ಯಾಸವೇ ಸರಿ. ೧೨ನೆಯ ಶತಮಾನದಲ್ಲಿ ಉಲ್ಬಣಗೊಂಡಿದ್ದ ಈ ವಿಷಮ ಪರಿಸ್ಥಿತಿಯನ್ನು ನಾಶಗೊಳಿಸಿ, ಸಮಸ್ಥಿತಿಯನ್ನು ಸಮಾಜದಲ್ಲಿ ತರಲು ಹೋರಾಡಿದವರು, ಕಲ್ಯಾಣದ ಶರಣರು. ಈ ಕಾರ್ಯಕ್ಕಾಗಿ ಅವರು ಕೈಕೊಂಡ ಜನಪರ ಆಂದೋಲನ ನಮ್ಮ ದೇಶದ ಇತಿಹಾಸದಲ್ಲಿಯೇ ಒಂದು ವಿಶಿಷ್ಟ ಘಟನೆಯಾಗಿದೆ.

ಭಾರತದಲ್ಲಿ ರಾಜಸತ್ತೆಯ ಸ್ಥಾಪನೆಗಾಗಿ ರಾಜರು, ಮತಸತ್ತೆಯ ಸ್ಥಾಪನೆಗಾಗಿ ಧರ್ಮಗಳು ಪರಸ್ಪರ ಸಂಘರ್ಷಕ್ಕಿಳಿದುದು ಸರ್ವಶ್ರುತ. ಆದರೆ ಸಾಮಾಜಿಕ-ನ್ಯಾಯದ ಸ್ಥಾಪನೆಗಾಗಿ ಈ ರಾಜಸತ್ತೆ, ಮತಸತ್ತೆಗಳ ವಿರುದ್ಧ ಸಮಾಜದ ವಿವಿಧ ಸ್ತರಗಳ ಜನತೆ ಅದರಲ್ಲಿಯೂ ದೀನರು–ದಲಿತರು–ಮಹಿಳೆಯರು ಬೀದಿಗಿಳಿದು ನಡೆಸಿದ ಈ ಆಂದೋಲನ, ಇಪ್ಪತ್ತನೆಯ ಶತಮಾನವೂ ಆಶ್ಚರ್ಯಪಡುವ ಸಂಗತಿಯಾಗಿದೆ.

ಅಂದಿನ ಸನ್ನಿವೇಶಕ್ಕೆ ಅನುಗುಣವಾಗಿ ಧಾರ್ಮಿಕ ಕ್ಷೇತ್ರದಲ್ಲಿ ಅಂಕುರಿಸಿದ ಈ ಆಂದೋಲನ ಸಾಮಾಜಿಕ ಕ್ಷೇತ್ರವನ್ನೂ ಆವರಿಸಿದ ಕಾರಣ, ಇದನ್ನು 'ಸಮಾಜೋಧಾರ್ಮಿಕ' ಆಂದೋಲನವೆಂದು ಗುರುತಿಸಲಾಗುತ್ತದೆ. ಸಮಾಜವೆನ್ನುವುದು ಸಂಕೀರ್ಣ ವ್ಯವಸ್ಥೆ. ಅದರ ಎಲ್ಲ ಸ್ತರಗಳನ್ನೂ ಎಲ್ಲ ಮಗ್ಗಲುಗಳನ್ನೂ ಬದಲಿಸಲು ಮಾಡಿದ ಪ್ರಯತ್ನವಾಗಿರುವುದರಿಂದ ಇದು ಒಂದು "ಸಮಗ್ರ ಆಂದೋಲನ"ವಾಗಿದೆ. ಈ ಆಂದೋಲನದ ನೇರ ಧ್ವನಿ, ವಚನಸಾಹಿತ್ಯ.

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನಿಂದಾಗಿ ವ್ಯಕ್ತಿಸ್ವಾತಂತ್ರ್ಯ ಪಡೆದ ಜನವರ್ಗವು ವ್ಯಕ್ತಪಡಿಸಿದ ಅಭಿಪ್ರಾಯಸ್ವಾತಂತ್ರ್ಯದ ಫಲ, ಈ ಸಾಹಿತ್ಯ. ಹೀಗಾಗಿ ಇಲ್ಲಿ ಆತ್ಮವಿಮರ್ಶೆಯಷ್ಟೇ ವಿಪುಲವಾಗಿ ಸಮಾಜವಿಮರ್ಶೆಯನ್ನೂ ಕಾಣಬಹುದಾಗಿದೆ.

ಆದರಲ್ಲಿಯೂ ವರ್ಣಭೇದ ನಿರಾಕರಣೆ, ವರ್ಗಭೇದ ನಿರಾಕರಣೆ, ಲಿಂಗಭೇದ ನಿರಾಕರಣೆಗಳಂಥ ವಿಚಾರಗಳು ಸ್ಫೋಟಗೊಂಡುದು ಲಕ್ಷಿಸತಕ್ಕ ಸಂಗತಿಯಾಗಿದೆ. ಇಲ್ಲಿ ಪುರುಷರಷ್ಟೇ ಪ್ರಧಾನವಾಗಿ ಮಹಿಳೆಯರೂ ಕುಲಜರಷ್ಟೇ ಪ್ರಧಾನವಾಗಿ ಅಂತ್ಯಜರೂ ಪ್ರಭುಗಳಷ್ಟೇ ಪ್ರಧಾನವಾಗಿ ಪ್ರಜೆಗಳೂ ಬಾಳಿದುದು, ಬರೆದುದು ಬಹುಶಃ ಜಗತ್ತಿನ ಇತಿಹಾಸದಲ್ಲಿಯೇ ಏಕೈಕ ಉದಾಹರಣೆಯಾಗಿದೆ. ಇಂಥ ವಿಚಾರಶೀಲರ, ಇವರ ತತ್ವ–ಸಾಹಿತ್ಯಗಳ ಉತ್ತರಾಧಿಕಾರಿಗಳಾದುದು ನಮ್ಮ ಭಾಗ್ಯ; ಇವರ ಸಾಹಿತ್ಯಸಂಪತ್ತನ್ನು ರಕ್ಷಿಸುವುದು, ಪ್ರಸಾರ ಮಾಡುವುದು ನಮ್ಮ ಕರ್ತವ್ಯ. ಈ ಕರ್ತವ್ಯದ ಭಾಗವಾಗಿ "ಸಮಗ್ರ ವಚನ ಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯನ್ನು ಕರ್ನಾಟಕ ಸರಕಾರ ಕೈಗೆತ್ತಿಕೊಂಡಿತು.

ಈ ವರೆಗೆ ವಚನಸಾಹಿತ್ಯ ಬಿಡಿಬಿಡಿಯಾಗಿ ಭಾಗಶಃ ಪ್ರಕಟವಾಗಿದ್ದಿತು, ಕೆಲವು ಭಾಗ ಅಪ್ರಕಟಿತ ಸ್ಥಿತಿಯಲ್ಲಿ ಉಳಿದಿದ್ದಿತು. ಇದೆಲ್ಲವನ್ನು ಕ್ರೋಡೀಕರಿಸಿ, ಪರಿಷ್ಕರಿಸಿ ಪ್ರಕಟಿಸುವುದು ಶ್ರಮದ ಕೆಲಸ. ಡಾ. ಎಂ. ಎಂ. ಕಲಬುರ್ಗಿಯವರ ಸಂಪಾದಕತ್ವದಲ್ಲಿ, ಅನೇಕ ಜನ ವಿದ್ವಾಂಸರ ಮತ್ತು ಸಂಪಾದಕ ಮಂಡಳಿಯ ಸದಸ್ಯರ ಸಂಯುಕ್ತ ಪರಿಶ್ರಮದಿಂದ ಈ ಬೃಹತ್ ಯೋಜನೆ ಪೂರ್ತಿಗೊಂಡುದು ಸಂತೋಷದ ಸಂಗತಿ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಆಶ್ರಯದಲ್ಲಿ ಅಸ್ತಿತ್ವಕ್ಕೆ ಬಂದು, ನಿರ್ದಿಷ್ಟ ಅವಧಿಯಲ್ಲಿ ಪೂರ್ಣಗೊಂಡ ಈ ಐತಿಹಾಸಿಕ ಯೋಜನೆಗಾಗಿ ಸಂಬಂಧಪಟ್ಟ ಎಲ್ಲ ವಿದ್ವಾಂಸರನ್ನು ಅಭಿನಂದಿಸುತ್ತ, ಕನ್ನಡ ಜನತೆಗೆ ಈ ಸಂಪುಟಗಳನ್ನು ಅರ್ಪಿಸುತ್ತೇವೆ.

ಪಿ. ಎಸ್. ವಿ. ರಾವ್
ಕಮಿಷನರ್

ಸಂಪಾದಕೀಯ

☆

ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕದ ಇತಿಹಾಸದಲ್ಲಿ ಶಿವಶರಣರ ಚಳುವಳಿ ಒಂದು ಅಪೂರ್ವಘಟನೆ, ವಚನಗಳ ಸೃಷ್ಟಿ ಒಂದು ಅನನ್ಯಪ್ರಯೋಗ. ಸಮಾಜದ ಎಲ್ಲ ವರ್ಗ, ಎಲ್ಲ ವರ್ಣಗಳ ಜನಸಮುದಾಯ ಬಸವಣ್ಣನವರ ನೇತೃತ್ವದಲ್ಲಿ ಕೈಕೊಂಡಿದ್ದ ವ್ಯಕ್ತಿಕಲ್ಯಾಣ ಮತ್ತು ಸಮಾಜಕಲ್ಯಾಣ ಚಳುವಳಿಯ ಸೃಷ್ಟಿಯೆನಿಸಿದ ಈ ವಚನಗಳು, ಜಾಗತಿಕ ಸಾಹಿತ್ಯದ ಮಹತ್ವಪೂರ್ಣ ಭಾಗವೆನಿಸಿವೆ.

'ವಚನ' ಶಬ್ದಕ್ಕೆ ಇಲ್ಲಿ ಗದ್ಯ ಸಾಹಿತ್ಯಪ್ರಕಾರವೆಂದು ಅರ್ಥವಲ್ಲ; ಪ್ರತಿಜ್ಞೆ, ಆತ್ಮಸಾಕ್ಷಿಯ ಮಾತು ಎಂದು ಅರ್ಥ. ನಡೆ ಹೇಗೇ ಇರಲಿ, ನುಡಿ ಮಾತ್ರ ಕಲಾತ್ಮಕವಾಗಿದ್ದುದು 'ರಚನೆ'ಯಾದರೆ, ನಡೆದಂತೆ ನುಡಿದ ಆತ್ಮಸಾಕ್ಷಿಯ ವಾಣಿ 'ವಚನ'ವೆನಿಸುತ್ತದೆ.

ವಚನಗಳು ಆಚಾರ್ಯರ ಸಾಹಿತ್ಯವಲ್ಲ, ಅನುಭಾವಿಗಳ ಸಾಹಿತ್ಯ. ಆಚಾರ್ಯರು ಜೀವಿಸಿರುವಾಗಲೇ ತಮ್ಮ ವಿಚಾರಗಳನ್ನು ಬರೆದು, ಅವುಗಳಿಗೆ ಸಂವಿಧಾನಾತ್ಮಕ ಮುದ್ರೆ ಒತ್ತುತ್ತಾರೆ. ಅನುಭಾವಿಗಳು ಮಾತ್ರ ತಮ್ಮ ಚಿಂತನೆಯನ್ನು ಹೃದಯದಿಂದ ಹೃದಯಕ್ಕೆ ಮುಟ್ಟುವಂತೆ ಬಿಡಿಮಾತುಗಳ ಮೂಲಕ ಹೇಳುತ್ತಾರೆ. ಬಿಡಿಮುತ್ತುಗಳಂತೆ ಸೂರೆಯಾದ ಅವುಗಳನ್ನು ಸಂಗ್ರಹಿಸುವ, ಸಂಕಲಿಸುವ, ಸಂಪಾದಿಸುವ ಕೆಲಸವನ್ನು ಉತ್ತರಕಾಲೀನ ಅನುಯಾಯಿಗಳು ಮಾಡುತ್ತಾರೆ. ಏಸುವಿನ ವಾಣಿಯಾದ ಬೈಬಲ್, ಮಹಮ್ಮದನ ಉಪದೇಶವಾದ ಕುರಾನ್, ಬುದ್ಧನ ಬೋಧೆಯಾದ ತ್ರಿಪಿಟಕ, ಶರಣರ ಸಂದೇಶವಾದ ವಚನಕೃತಿಗಳು ಈ ಬಗೆಯ ಉತ್ತರಕಾಲೀನ ಸಂಕಲನಗಳಾಗಿವೆ.

ಮೂಲತಃ ವಚನನಿಧಿ ಜನರಿಂದ, ಜನರಿಗಾಗಿ ಹುಟ್ಟಿ ಜನರ ಮಧ್ಯದಲ್ಲಿ ಬಾಳಿದ ಸಾಹಿತ್ಯವಾಗಿದೆ. ಹೀಗಾಗಿ ಹನ್ನೆರಡರಿಂದ ಹದಿನೈದನೆಯ ಶತಮಾನಕ್ಕೆ ಬರುವಷ್ಟರಲ್ಲಿ ಅದಕ್ಕೆ ವಿಪುಲ ಭಿನ್ನಪಾಠಗಳು ಹುಟ್ಟಿಕೊಂಡವು. ಆಮೇಲೆ ಸಂಕಲನ–ಸಂಪಾದನ ಕಾರ್ಯದಿಂದಾಗಿ ಕೆಲವೊಮ್ಮೆ ಪ್ರಕ್ಷಿಪ್ತ ವಚನಗಳೂ ತಲೆಯೆತ್ತಿದವು. ಈ ಗೊಂದಲ ಕಾರಣವಾಗಿ ಕವಿಸಾಹಿತ್ಯಕ್ಕಿಂತ ವಚನಸಾಹಿತ್ಯದ ಸಂಪಾದನಕಾರ್ಯ ತುಂಬ ಜಟಿಲಸ್ವರೂಪದ್ದಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯದ ಪ್ರಕಟನಕಾರ್ಯವನ್ನು ಮೊದಲು ಕೈಗೆತ್ತಿಕೊಂಡವರು, ಕ್ರೈಸ್ತ ಪಾದ್ರಿಗಳು. ಜೈನ ಪುರಾಣ–ಕಾವ್ಯಗಳನ್ನು, ವೈದಿಕ ಪುರಾಣ–ಕೀರ್ತನೆಗಳನ್ನು, ವೀರಶೈವ ಶಾಸ್ತ್ರ–ಪುರಾಣಗಳನ್ನು ಪ್ರಕಟಿಸಿದ ಇವರು ವಚನಸಾಹಿತ್ಯವನ್ನು ಮಾತ್ರ ತಪ್ಪಿಯೂ ಪ್ರಕಟಿಸಲಿಲ್ಲ. ದೇಶೀ ವಿದ್ವಾಂಸರೇ ಈ ಕೆಲಸವನ್ನು ಪ್ರಾರಂಭ ಮಾಡಬೇಕಾಯಿತು.

ಈ ದಿಸೆಯಲ್ಲಿ ಮೊದಲು ಪ್ರಕಟವಾದ ಕೃತಿ (೧೮೮೩) 'ಅಪ್ರಮಾಣ ಕೂಡಲ ಸಂಗಮದೇವಾ' ಮುದ್ರಿಕೆಯ ವಚನಗಳನ್ನೊಳಗೊಂಡ "ಶಿಖಾರತ್ನಪ್ರಕಾಶ". ಆಮೇಲೆ ಒಂದು ಮೈಲಿಗಲ್ಲಿನಂತೆ ಪ್ರಕಟವಾದ ವಚನಕೃತಿ, ಬಸವಣ್ಣನವರ ಷಟ್‌ಸ್ಥಲವಚನ ಸಂಪುಟ. ಅದು ಬೆಳಕು ಕಂಡುದು ೧೮೮೯ರಲ್ಲಿ. ಅಲ್ಲಿಂದ ಸರಿಯಾಗಿ ಒಂದು ಶತಮಾನ ಮುಗಿಯುವಷ್ಟರಲ್ಲಿ ಅಂದರೆ ೧೯೮೮ರಲ್ಲಿ ಈ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ' ಅಸ್ತಿತ್ವಕ್ಕೆ ಬಂದುದು ಒಂದು ಯೋಗಾಯೋಗವಾಗಿದೆ; ವಚನಸಾಹಿತ್ಯದ ಪ್ರಕಟನಚರಿತ್ರೆಯ ಶತಮಾನಸ್ಮರಣೆಯಾಗಿದೆ.

ವಚನಸಾಹಿತ್ಯ ಪ್ರಕಟನೆಯ ಪ್ರಥಮ ವ್ಯಾಪಕ ಪ್ರಯತ್ನವೊಂದು ವಿಜಾಪುರದ ಶಿವಾನುಭವ ಗ್ರಂಥಮಾಲೆಯ ಮೂಲಕ ಡಾ. ಫ. ಗು. ಹಳಕಟ್ಟಿ ಅವರಿಂದ ಜರುಗಿತು. ಆಮೇಲೆ ಮತ್ತೊಂದು ಯೋಜನಾಬದ್ಧ ಪ್ರಯತ್ನವು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಆಶ್ರಯದಲ್ಲಿ ಡಾ. ಆರ್. ಸಿ. ಹಿರೇಮಠ ಅವರಿಂದ ನಡೆಯಿತು. ಇತ್ತೀಚೆಗೆ ಗದುಗಿನ ತೋಂಟದಾರ್ಯಮಠದ ವೀರಶೈವ ಅಧ್ಯಯನ ಸಂಸ್ಥೆಯು ಒಂದು ಕ್ರಮಬದ್ಧ ಯೋಜನೆಯ ಮೂಲಕ ಈ ಕೆಲಸವನ್ನು ಮುಂದುವರಿಸಿ, ಮುಗಿಸುವ ಹಂತದಲ್ಲಿದೆ. ವಚನಸಾಹಿತ್ಯದ ಪ್ರಕಟನಕಾರ್ಯ ಹೀಗೆ ವಿಜಾಪುರದಲ್ಲಿ ಪ್ರಾರಂಭವಾಗಿ, ಧಾರವಾಡದಲ್ಲಿ ಬೆಳೆದು, ಗದುಗಿನಲ್ಲಿ ಒಂದು ನಿಲುಗಡೆಗೆ ಬರುತ್ತಿದ್ದಂತೆಯೇ ಈಗ ನಾಲ್ಕನೆಯ ಘಟ್ಟದಲ್ಲಿ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ'ಯ ಹೆಸರಿನಲ್ಲಿ, ಕರ್ನಾಟಕ ಸರಕಾರದ ಮೂಲಕ ಹದಿನೈದು ಸಂಪುಟಗಳು (ವಚನ ಪರಿಭಾಷಾಕೋಶ ಸೇರಿ) ಪ್ರಕಟವಾಗುತ್ತಲಿವೆ. ಸುಮಾರು ೧೧೦ ಜನ ಪ್ರಕ್ಷಿಪ್ತ ವಚನಕಾರರನ್ನೂ ಪ್ರಕ್ಷಿಪ್ತವಾಗಿರಬಹುದಾದ ಅನೇಕ ವಚನಗಳನ್ನೂ ಕೈಬಿಟ್ಟು ಸಂಯೋಜಿಸಲಾದ ಈ ಹದಿನೈದು ಸಂಪುಟಗಳ ಒಟ್ಟು ಪುಟ ಸುಮಾರು ಹತ್ತು ಸಾವಿರ; ಒಟ್ಟು ವಚನ ಸಂಖ್ಯೆ ಸುಮಾರು ಇಪ್ಪತ್ತು ಸಾವಿರ. ವಚನಸಾಹಿತ್ಯವನ್ನು ಒಮ್ಮೆ ಸಮಗ್ರವಾಗಿ ಹೊರತಂದ ಪ್ರಥಮ ಮಹತ್ವಾಕಾಂಕ್ಷೆಯ ಯೋಜನೆಯಿದು. ಈ ಸಾಹಿತ್ಯದ ಗಡಿಗೆರೆಗಳನ್ನು, ಸಂಖ್ಯಾಬಾಹುಳ್ಯವನ್ನು ವ್ಯವಸ್ಥೆಗೊಳಿಸಿಕೊಟ್ಟು, ವಿದ್ವಾಂಸರ ಅಧ್ಯಯನದ ಮುಂದುವರಿಕೆಗೆ ಒಂದು ನಿರ್ದಿಷ್ಟ ಚೌಕಟ್ಟನ್ನು ಒದಗಿಸಿದ ಹಿರಿಮೆ ಈ ಪ್ರಯತ್ನಕ್ಕೆ ಸಲ್ಲುತ್ತದೆ.

ಈ ಯೋಜನೆಯ ಅಂಗವಾಗಿ ಬಸವಣ್ಣನವರ ವಚನ, ಪ್ರಭುದೇವರ ವಚನ, ಚೆನ್ನಬಸವಣ್ಣನವರ ವಚನ, ಸಿದ್ಧರಾಮೇಶ್ವರ ವಚನ, ಶಿವಶರಣೆಯರ ವಚನ–ಹೀಗೆ ಐದು ಸಂಪುಟಗಳು, ಬಸವ ಸಮಕಾಲೀನ ಮಿಕ್ಕ ಶರಣರ ವಚನಗಳ ನಾಲ್ಕು ಸಂಪುಟಗಳು, ಬಸವೋತ್ತರ ಕಾಲೀನ ಶರಣರ ವಚನಗಳ ಐದು ಸಂಪುಟಗಳು ಮತ್ತು ಒಂದು ವಚನ ಪರಿಭಾಷಾಕೋಶ – ಹೀಗೆ ಹದಿನೈದು ಸಂಪುಟಗಳು ಬೆಳಕು ಕಾಣುತ್ತಲಿವೆ. ಇವುಗಳಲ್ಲಿ ಮೊದಲಿನ ಐದು ಸಂಪುಟಗಳು ಈಗಾಗಲೇ ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಪ್ರಕಟವಾಗಿದ್ದು, ಆ ಬಳಿಕ ಲಭ್ಯವಾದ ಹೊಸ

ವಚನಗಳನ್ನು ಸೇರಿಸಿ, ಅವುಗಳಿಗೆ ಸಮಗ್ರರೂಪ ಕೊಟ್ಟಿದ್ದೇವೆ ಮತ್ತು ಪರಿಷ್ಕರಿಸಿದ್ದೇವೆ. ಬಸವ ಸಮಕಾಲೀನ ಮಿಕ್ಕ ಶರಣರ ನಾಲ್ಕು ಸಂಪುಟಗಳ ಕೆಲಸ ಈವರೆಗೆ ಸಮರ್ಪಕವಾಗಿ ನಡೆದಿರಲಿಲ್ಲ. ಬಸವೋತ್ತರ ಕಾಲೀನ ಶರಣರ ಕೊನೆಯ ಐದು ಸಂಪುಟಗಳ ಕೆಲಸವೂ ಅಲಕ್ಷಿಸಲ್ಪಟ್ಟಿದ್ದಿತು. ಈ ಎಲ್ಲ ಕೊರತೆಗಳನ್ನು ತುಂಬಿಕೊಡುವ ಒಂದು ಪರಿಪೂರ್ಣ ಯೋಜನೆ ಇದಾಗಿದೆ. ಮೊದಲಬಾರಿಗೆ ೧೯ನೆಯ ಶತಮಾನದ ವರೆಗಿನ ಎಲ್ಲ ಶರಣರ ಎಲ್ಲ ವಚನಗಳನ್ನು ಒಂದೆಡೆ ಸಂಗ್ರಹಿಸಿ, ಒಂದು ಕ್ರಮಕ್ಕೆ ಅಳವಡಿಸಿ, ಸಂಪುಟ ಶ್ರೇಣಿಯಲ್ಲಿ ಹೊರತಂದ ದೊಡ್ಡ ಪ್ರಯತ್ನ ಇಲ್ಲಿದೆ.

ವಚನಸಾಹಿತ್ಯದ ಪರಿಷ್ಕರಣಕಾರ್ಯ ತುಂಬ ಜಟಿಲವಾದುದು. ೧. ಎಲ್ಲ ಶರಣರ ವಚನಗಳನ್ನು ಎಲ್ಲ ಪ್ರಾಚೀನ ಆಕರಗಳಿಂದ ಸಂಗ್ರಹಿಸುವುದು, ೨. ಪ್ರಕ್ಷಿಪ್ತವಾಗಿರಬಹುದಾದ ವಚನಕಾರರನ್ನು, ವಚನಗಳನ್ನು ಕೈಬಿಡುವುದು, ೩. ನಿಜವಚನಗಳ ಪಾಠವನ್ನು ಪರಿಷ್ಕರಿಸುವುದು—ಇದು ಈ ಯೋಜನೆಯ ಉದ್ದೇಶವಾಗಿದೆ. ಈ ಉದ್ದೇಶ ಸಾಧನೆಗಾಗಿ ಎಲ್ಲ ಪ್ರಾಚೀನ ಆಕರಗಳಿಂದ ಅಂದರೆ ೧೦೪ ಆಕರಗಳಿಂದ ವಚನಗಳನ್ನು ಸಂಗ್ರಹಿಸಿ, ಪ್ರತಿಯೊಂದು ವಚನದ ಕೆಳಗೆ ಅದರ ಎಲ್ಲ ಆಕರಗಳನ್ನು ನಮೂದಿಸಿದ 'ವಚನ ಬ್ಯಾಂಕ'ನ್ನು ಅಸ್ತಿತ್ವಕ್ಕೆ ತರಲಾಯಿತು. ಒಂದು ವಚನಕ್ಕೆ ಇರುವ ವಿವಿಧ ಪಾಠಾಂತರ, ರೂಪಾಂತರಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಲು, ಮುದ್ರಿಕೆಯ ವ್ಯತ್ಯಾಸವನ್ನು ಗಮನಿಸಲು, ಒಬ್ಬ ವಚನಕಾರನ ಒಟ್ಟು ವಚನಗಳ ಸಂಖ್ಯೆಯನ್ನು ನಿರ್ಧರಿಸಲು, ಕೊನೆಯದಾಗಿ ವಚನದ ನಿಜಪಾಠವನ್ನು ನಿರ್ಣಯಿಸಲು ಈ ಬ್ಯಾಂಕ್ ತುಂಬ ನೆರವಾಯಿತು.

ಇವು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿ, ಅನ್ಯಪಾಠಗಳನ್ನು ಅಡಿಯಲ್ಲಿ ನಮೂದಿಸದೆ ಕೈಬಿಟ್ಟಿದ್ದೇವೆ. ಜನಸಾಮಾನ್ಯರ ಅನುಕೂಲತೆಗಾಗಿ ಶಕಟರೇಫೆಗೆ ಬದಲು ರೇಫೆ ಇಟ್ಟುಕೊಂಡಿದ್ದೇವೆ. ಅಭ್ಯಾಸಿಗಳ ಉಪಯೋಗ ದೃಷ್ಟಿಯಿಂದ ಕಠಿಣ ಪದಕೋಶ, ಅಕಾರಾದಿ, ಆಕರಸೂಚಿಗಳನ್ನು ಅನುಬಂಧದಲ್ಲಿ ಕೊಡಲಾಗಿದೆ. ಹೆಚ್ಚಿನದಾಗಿ ಪಾರಿಭಾಷಿಕ ಪದಗಳ ಒಂದು ಸ್ವತಂತ್ರ ಕೋಶವನ್ನೇ ಪ್ರಕಟಿಸಿದ್ದೇವೆ. ಒಟ್ಟಿನಲ್ಲಿ ಇವು ಜನಪ್ರಿಯ ಆವೃತ್ತಿಗಳಾದರೂ ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ಆದರ್ಶದಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

ಕೃತಜ್ಞತೆ

ವಿಶ್ವವಿದ್ಯಾಲಯದಂಥ ಶಿಕ್ಷಣ ಸಂಸ್ಥೆಗಳು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಂಥ ಸಾರ್ವಜನಿಕ ಸಂಸ್ಥೆಗಳು, ವೀರಶೈವ ಮಠಗಳಂಥ ಧಾರ್ಮಿಕ ಸಂಸ್ಥೆಗಳು, ಡಾ. ಫ.ಗು. ಹಳಕಟ್ಟಿಯವರಂಥ ವಿದ್ವಾಂಸ ವ್ಯಕ್ತಿಗಳು ನಿರಂತರ ದುಡಿದರೂ ವಚನಸಾಹಿತ್ಯ ಪೂರ್ಣ ಪ್ರಮಾಣದಲ್ಲಿ ಪ್ರಕಟವಾಗಲು ಒಂದುನೂರು ವರ್ಷ ಹಿಡಿದುದು ಅದರ ಗಾತ್ರಬಾಹುಳ್ಯಕ್ಕೆ ಸಾಕ್ಷಿಯಾಗಿದೆ. ನೂರುವರ್ಷ ದುಡಿದು, ವಿಪುಲ ಸಾಮಗ್ರಿಯನ್ನು ಪ್ರಕಟಿಸಿದ ಈ ಎಲ್ಲ ವ್ಯಕ್ತಿ–ಸಂಸ್ಥೆಗಳಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆಯ ಕಾರ್ಯಾಲಯ ಅಸ್ತಿತ್ವಕ್ಕೆ ಬಂದು ಕೆಲಸ ಪ್ರಾರಂಭವಾದದ್ದು ೧೫ ಅಕ್ಟೋಬರ ೧೯೮೮ರಂದು. ಹಸ್ತಪ್ರತಿಗಳು ಅಚ್ಚಿಗೆ ಹೋದದ್ದು ೧೬ ಮಾರ್ಚ ೧೯೯೦ರಂದು. ಹೀಗೆ ಮೊದಲೇ ಯೋಜಿಸಿದಂತೆ ಎರಡು ವರ್ಷಗಳ ನಿರ್ದಿಷ್ಟ ಅವಧಿಯಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಿದ್ದೇವೆ. ಪ್ರತಿಯೊಂದು ಹಂತದಲ್ಲಿಯೂ ಈ ಯೋಜನೆ ಸಕ್ರಮವಾಗಿ ಮುನ್ನಡೆಯುವುದಕ್ಕಾಗಿ 'ಸಂಪಾದಕ ಮಂಡಳಿ'ಯ ಸದಸ್ಯರಾದ ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ, ಡಾ. ಎಸ್. ವಿದ್ಯಾಶಂಕರ, ಶ್ರೀ ಎಸ್. ಶಿವಣ್ಣ ಅವರು ಉದ್ದಕ್ಕೂ ಬೆಲೆಯುಳ್ಳ ಸಲಹೆ–ಮಾರ್ಗದರ್ಶನ ನೀಡಿದ್ದಾರೆ. ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ಆರಂಭದ ಕೆಲವು ತಿಂಗಳು ಸಂಪಾದಕ ಮಂಡಳಿಯ ಸದಸ್ಯರಾಗಿ, ವಿಶ್ವಾಸದಿಂದ ನೆರವಾಗಿದ್ದಾರೆ. ಸಂಪಾದಕ ಮಿತ್ರರಾದ ಡಾ. ಬಿ. ವ್ಹಿ. ಮಲ್ಲಾಪುರ, ಡಾ. ಎಸ್. ವಿದ್ಯಾಶಂಕರ, ಡಾ. ವ್ಹಿ. ಬಿ. ರಾಜೂರ, ಡಾ. ಬಿ.ಆರ್. ಹಿರೇಮಠ, ಶ್ರೀ ಎಸ್. ಶಿವಣ್ಣ ತುಂಬ ಶ್ರಮ–ಶ್ರದ್ಧೆಗಳಿಂದ ಸಂಪಾದನ ಕೆಲಸ ಪೂರೈಸಿದ್ದಾರೆ. ಸಹಾಯಕ ಸಂಶೋಧಕರಾದ ಶ್ರೀಮತಿ ವಿಜಯಶ್ರೀ ಹಿರೇಮಠ, ಶ್ರೀ ವಾಯ್. ಎಂ. ಯಾಕೊಳ್ಳಿ, ಶ್ರೀ ಬಿ. ವ್ಹಿ. ಕೋರಿ ಅವರು ದಣಿವನ್ನು ಲೆಕ್ಕಿಸದೆ ದುಡಿದಿದ್ದಾರೆ. ಇವರೆಲ್ಲರಿಗೆ ನಾವು ಕೃತಜ್ಞರಾಗಿದ್ದೇವೆ.

ಈ ಯೋಜನೆಯನ್ನು ಅನುದಾನ ಮಾಡಿದ ಕರ್ನಾಟಕ ಸರಕಾರದ ಔದಾರ್ಯಕ್ಕೆ ನಮ್ಮ ಅಭಿನಂದನೆಗಳು ಸಲ್ಲುತ್ತವೆ. ಈ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಎಸ್. ಆರ್. ಬೊಮ್ಮಾಯಿ, ಶ್ರೀ ವೀರೇಂದ್ರ ಪಾಟೀಲ, ಶ್ರೀ ಎಸ್. ಬಂಗಾರಪ್ಪ ಅವರಿಗೂ ಸಾಹಿತಿಗಳೂ ಸಾಹಿತ್ಯ–ಸಂಸ್ಕೃತಿಗಳ ಗಾಢ ಆಸಕ್ತರೂ ಆಗಿರುವ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಂ. ವೀರಪ್ಪ ಮೊಯಿಲಿ ಅವರಿಗೂ ಋಣಿಯಾಗಿದ್ದೇವೆ.

ಈ ಯೋಜನೆ ಅಸ್ತಿತ್ವಕ್ಕೆ ಬರುವಲ್ಲಿ ವಿಶೇಷ ಆಸಕ್ತಿ ವಹಿಸಿದವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಂದಿನ ಸಚಿವರಾಗಿದ್ದ ಶ್ರೀ ಎಂ. ಪಿ. ಪ್ರಕಾಶ ಅವರು. ಸಾಹಿತ್ಯ–ಸಂಸ್ಕೃತಿಗಳ ಬಗ್ಗೆ ಅನನ್ಯ ಪ್ರೀತಿ–ಗೌರವ ಬೆಳೆಸಿಕೊಂಡಿರುವ ಶ್ರೀಯುತರಿಗೆ ನಾವು ಕೃತಜ್ಞರಾಗಿದ್ದೇವೆ. ಆಮೇಲೆ ಈ ಇಲಾಖೆಗೆ ಸಚಿವರಾಗಿ ಬಂದ ಶ್ರೀ ಎಂ. ವೀರಪ್ಪ ಮೊಯಿಲಿ, ಶ್ರೀ ಕೆ. ಎಚ್. ರಂಗನಾಥ, ಶ್ರೀ ಎಸ್. ರಮೇಶ್, ಇಂದಿನ ಸಚಿವರಾದ ಮಾನ್ಯ ಶ್ರೀ ಎಚ್. ವಿಶ್ವನಾಥ್ ಅವರಿಗೆ ನಮ್ಮ ಗೌರವಗಳು ಸಲ್ಲುತ್ತವೆ.

ಈ ಪ್ರಸಂಗದಲ್ಲಿ ಆತ್ಮೀಯ ಆಡಳಿತ ನಿರ್ದೇಶನ ಮಾಡಿದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಂದಿನ ನಿರ್ದೇಶಕರಾಗಿದ್ದ ಶ್ರೀ ಐ. ಎಂ. ವಿಠ್ಠಲಮೂರ್ತಿ, ಶ್ರೀ ಬಿ. ಪಾರ್ಥಸಾರಥಿ, ಕಮಿಷನರ್ ಡಾ. ಪಿ. ಎಸ್. ರಾಮಾನುಜಂ, ಇಂದಿನ ಕಮಿಷನರ್‌ರಾದ ಶ್ರೀ ಪಿ. ಎಸ್. ವಿ. ರಾವ್ ಅವರನ್ನೂ ಅಧಿಕ ನಿರ್ದೇಶಕರಾದ ಶ್ರೀ ಕೆ. ದೇವರಸಯ್ಯ, ಉಪನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರನ್ನೂ ನೆನೆಯುವುದು ಪ್ರೀತಿಯ ವಿಷಯವಾಗಿದೆ.

ಇಂಥ ಒಂದು ಬೃಹತ್‌ಯೋಜನೆಗೆ ಕಾರ್ಯಾಲಯವೊಂದು ಅತ್ಯವಶ್ಯ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಈ ಅವಕಾಶ ಕಲ್ಪಿಸಿಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿ ಡಾ. ಜಿ. ಕೆ. ನಾರಾಯಣರೆಡ್ಡಿ, ಇಂದಿನ ಕುಲಪತಿ ಡಾ. ಎಸ್. ರಾಮೇಗೌಡ ಅವರ ಔದಾರ್ಯವನ್ನು, ಪೀಠದ ಮುಖ್ಯಸ್ಥರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುತ್ತೇವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳೂ ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ದಾಳಿಗೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಮುದ್ರಿಕೆ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ವಚನಗಳನ್ನು ಶುದ್ಧೀಕರಿಸುವುದು–ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ವಚನಸಾಹಿತ್ಯದ ಮೇಲಿನ ಗೌರವ, ಕೆಲಸದ ಮೇಲಿನ ಪ್ರೀತಿಗಳು ನಮ್ಮಿಂದ ಈ ಕಾರ್ಯ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತ, ಎರಡು ವರ್ಷ ರಾತ್ರಿಯನ್ನೂ ಹಗಲುಮಾಡಿ ದುಡಿದು ರೂಪಿಸಿದ ಈ ಹದಿನೈದು ಸಂಪುಟಗಳನ್ನು ಸಹೃದಯಲೋಕಕ್ಕೆ ಅರ್ಪಿಸುತ್ತೇವೆ. 'ಶಿವಶರಣರ ಸಮಗ್ರ ವಚನ ಸಾಹಿತ್ಯ' ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ–ಮನಗಳನ್ನು ಬೆಳಗಲೆಂದು ಹಾರೈಸುತ್ತೇವೆ.

❑ ❑

★

ಪ್ರಸ್ತಾವನೆ

ಸಿದ್ಧರಾಮೇಶ್ವರರು ಅಲ್ಲಮ-ಬಸವ-ಚೆನ್ನಬಸವ ಇವರೇ ಮೊದಲಾದ ಶಿವಶರಣರ ಸಮಕಾಲೀನರೂ ಶ್ರೇಷ್ಠ ಅನುಭಾವಿಗಳೂ ಆಗಿದ್ದರು. ಅವರು "ಯೋಗಿಗಳ ಯೋಗಿ ಶಿವಯೋಗಿ ಸೊಡ್ಡಳ ಸಿದ್ಧರಾಮನೊಬ್ಬನೆ ಯೋಗಿ' ಎಂದು ಸೊಡ್ಡಳ ಬಾಚರಸರಿಂದ ಹೊಗಳಿಸಿಕೊಳ್ಳುವಷ್ಟು ಮಹಾನ್ ಯೋಗಿಗಳೂ, ಅನುಪಮ ಸಾಧನೆಯಿಂದ ಅಲೌಕಿಕ ಶಕ್ತಿಯನ್ನು ಪಡೆದಿದ್ದ ಸಿದ್ಧಪುರುಷರೂ ಆಗಿದ್ದರು. "ಅರುವತ್ತೆಂಟು ಸಾವಿರ ವಚನಂಗಳ ಹಾಡಿ ಹಾಡಿ ಸೋತಿತ್ತೆನ್ನ ಮನ...." ಎಂದು ಅವರೇ ತಮ್ಮ ವಚನವೊಂದರಲ್ಲಿ (ವ. ೯೦೯) ಹೇಳಿಕೊಂಡಿದ್ದರೂ ಇಂದು ಉಪಲಬ್ಧವಿರುವ ಅವರ ವಚನಗಳ ಸಂಖ್ಯೆ ಸು. ೧೬೭೯ ಮಾತ್ರ. ಅವರ ವಚನಗಳಲ್ಲಿ ಸುಪರಿಚಿತವಾದ ಅಂಕಿತ 'ಕಪಿಲಸಿದ್ಧಮಲ್ಲಿಕಾರ್ಜುನಾ' ಅಥವಾ 'ಕಪಿಲಸಿದ್ಧಮಲ್ಲಿನಾಥಾ'. ಇವಲ್ಲದೆ ಕಪಿಲಸಿದ್ಧಮಲ್ಲೇಂದ್ರ (ವ. ೯೦೧, ೧೫೦೩, ೧೫೮೫) ; ಕಪಿಲಸಿದ್ಧಮಲ್ಲೇಶ್ವರಾ (ವ. ೯, ೪೩, ೭೯, ೯೩, ೬೨೬) ; ಕಪಿಲಸಿದ್ಧಮಲ್ಲೇಶ್ವರದೇವರು (ವ. ೭೯, ೧೧೪, ೧೭೮) ; ಕಪಿಲಸಿದ್ಧಮಲ್ಲೇಶ (ವ. ೨೮೭ ೮೭೧) ; ಕಪಿಲಸಿದ್ಧಮಲ್ಲಿಕಾರ್ಜುನಲಿಂಗ (ವ. ೨೩೩, ೫೦೨) ; ಕಪಿಲಸಿದ್ಧಮಲ್ಲ (ವ. ೮೯೧. ೮೯೭, ೮೯೮)—ಈ ಅಂಕಿತಗಳೂ ಕಾಣಬರುತ್ತವೆ. ಒಂದೆರಡು ಕಡೆ 'ವಿಚಿತ್ರಮೂಲ ಕಪಿಲಸಿದ್ಧಮಲ್ಲಿಕಾರ್ಜುನ' ಎಂಬ ಅಂಕಿತವೂ ನೋಡಸಿಗುತ್ತದೆ (ವ. ೫೮೭, ೬೦೦). ಇತ್ತೀಚೆಗೆ ಚಿತ್ರದುರ್ಗದ ಬೃಹನ್ಮಠದಲ್ಲಿ ದೊರೆತ ಓಲೆ ಪ್ರತಿಯೊಂದರಲ್ಲಿ 'ಕವಿಲಸಿದ್ಧಮಲ್ಲಿಕಾರ್ಜುನ' 'ಕವಿಲಸಿದ್ಧಮಲ್ಲಿಕಾರ್ಜುನಲಿಂಗ' 'ಕವಿಲಸಿದ್ಧಮಲ್ಲೇಶ್ವರ' 'ಕವಿಲಸಿದ್ಧಮಲ್ಲಿನಾಥಯ್ಯಾ' ಎಂಬ ಅಂಕಿತಗಳು ಬಳಕೆಯಾಗಿರುವುದು ಕಂಡುಬಂದಿದೆ (ನೋಡಿ : ಪು. ೪೬೧-೪೬೩). ಸಾಮಾನ್ಯವಾಗಿ ಸಿದ್ಧರಾಮೇಶ್ವರರವಚನಗಳಲ್ಲಿ 'ಕಪಿಲಸಿದ್ಧ' ಎಂಬುದು ವ್ಯತ್ಯಾಸ ಅಥವಾ ಮಾರ್ಪಾಟು ಆಗದೆ ಬಂದಿದ್ದು, ಮುಂದಿನ 'ಮಲ್ಲಿಕಾರ್ಜುನ' ಅಥವಾ 'ಮಲ್ಲಿನಾಥಾ' ಎಂಬ ಪದಗಳಲ್ಲಿ ಸ್ವಲ್ಪ ಬದಲಾವಣೆಯಾಗುವುದನ್ನು ನಾವು ಕಾಣುತ್ತೇವೆ. ವಿರಳವಾಗಿ ಅವರ ವಚನಗಳಲ್ಲಿ 'ಕಪಿಲಸಿದ್ಧಮಲ್ಲಿಕಾರ್ಜುನ ಯೋಗಿನಾಥ' ಎಂಬ ಅಂಕಿತ ಬರುತ್ತದೆ.

ಸಿದ್ಧರಾಮೇಶ್ವರರು ತಮ್ಮ ವಚನರಚನೆಯ ಪ್ರಾರಂಭದಲ್ಲಿ ಉಪಯೋಗಿಸಿದ ಅಂಕಿತ ಬಹುಶಃ 'ಕಪಿಲಸಿದ್ಧಮಲ್ಲಿಕಾರ್ಜುನಾ' ಅಥವಾ 'ಕಪಿಲಸಿದ್ಧಮಲ್ಲಿನಾಥಾ

ಎಂಬುದಿರಬಹುದು. ಅವರು ಆಧ್ಯಾತ್ಮಿಕವಾಗಿ ಬೆಳೆದಂತೆ, ಕಲ್ಯಾಣದಲ್ಲಿ ಪ್ರಭು ಬಸವ ಚೆನ್ನಬಸವ ಮೊದಲಾದ ಮಹಾನ್ ಶರಣರ ಸಂಪರ್ಕಕ್ಕೆ ಬಂದ ಮೇಲೆ 'ಯೋಗಿನಾಥಾ' ಎಂಬ ಅಂಕಿತವನ್ನು ಬಳಸಿರಬಹುದು. ಅವರ ಸಂಕೀರ್ಣ ತ್ರಿವಿಧಿ, ಬಸವ ಸ್ತೋತ್ರದ ತ್ರಿವಿಧಿ, ಅಷ್ಟಾವರಣ ಸ್ತೋತ್ರದ ತ್ರಿವಿಧಿಗಳಲ್ಲಿ ಯೋಗಿನಾಥಾಂಕಿತ ವನ್ನು ಕಾಣುತ್ತೇವೆ.

ದೂಳಿಮಾಕಾಳನೆನ್ನುವ ದನಕಾಯುವ ಮುಗ್ಧ ಹುಡುಗನೋರ್ವ ಆದರ್ಶ ಶಿವಯೋಗಿಯಾದುದು ಸಿದ್ಧರಾಮೇಶ್ವರರ ಬದುಕಿನಲ್ಲಿ ನಂಬಲಸಾಧ್ಯವಾದ ಪವಾಡ ! ಒಂದು ಕುಗ್ರಾಮವಾಗಿದ್ದ ಸೊನ್ನಲಿಗೆಯನ್ನು ಪ್ರಸಿದ್ಧ ಪಟ್ಟಣವಾಗಿ 'ಭೂಕೈಲಾಸ'ವಾಗಿ ಕಟ್ಟಿ ಬೆಳಸಿದ ಮಹಾನ್ ಕನಸುಗಾರ 'ಶಿಲ್ಪಿ' ಸಿದ್ಧರಾಮೇಶ್ವರರು. ಅವರು ಬರಿಯ ಕನಸುಗಾರರಾಗಿರದೆ ಕರ್ತವ್ಯಶಾಲಿಗಳಾಗಿ ತಮ್ಮ ಆದರ್ಶಗಳನ್ನು ವಾಸ್ತವವಾಗಿಸಿದರು. 'ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು ಅನು ಗೊಂಬನಿತು ಕಾಯಕಂ ನಡೆಯುತಿರಬೇಕು' ಎಂಬುದು ಸಿದ್ಧರಾಮೇಶ್ವರರ ಬದುಕಿನ ನಿತ್ಯಮಂತ್ರ. ಇದು ಸಂಕಲ್ಪವಾಗಿ ಅನೇಕ ಸಮಾಜೋಧಾರ್ಮಿಕ ಚಟುವಟಿಕೆಗಳಿಗೆ ಹಾದಿಮಾಡಿಕೊಟ್ಟಿರಬಹುದು. ಇದರಿಂದಾಗಿ ಜನಪ್ರಿಯತೆಯ ಉತ್ತುಂಗ ಶಿಖರಕ್ಕೆ ಏರಿದ ಅವರು ಸಹಜವಾಗಿ ರಾಜಪೂಜಿತರಾದರು. ಸೊನ್ನಲಿಗೆಯಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನನ ಲಿಂಗವನ್ನು ಸ್ಥಾಪಿಸಿ ದೇವಾಲಯ ನಿರ್ಮಾಣಮಾಡಿ ಅಲ್ಲಿ ಸಾಂಗ ವಾಗಿ ಲಿಂಗಾಭಿಷೇಕ, ಯೋಗಮಜ್ಜನ, ಅಭಿಷೇಕ, ನೈವೇದ್ಯ ಸಮರ್ಪಣೆ, ದಾನ ವಿನಿಯೋಗ, ಉತ್ಸವ, ಹೋಮ ಹವನಗಳು ನೆರವೇರಿಸುತ್ತಿರುವಾಗ ಈ ಎಲ್ಲ ಕಾರ್ಯಗಳಿಂದ ಪ್ರಭಾವಿತರಾದ, ಸಿದ್ಧರಾಮೇಶ್ವರರ ಅಲೌಕಿಕ ಶಕ್ತಿಗೆ ಬೆರಗಾದ ನಾಡಿನ ಬೇರೆ ಬೇರೆ ಭಾಗದ ಜನತೆ ಈ ದೇವರಿಗೆ ದಾನ ದತ್ತಿಗಳನ್ನು ಬಿಟ್ಟ ಬಗೆಗೆ ಅನೇಕ ಶಾಸನಗಳು ದೊರೆಯುತ್ತವೆ. ಈ ವೇಳೆಗಾಗಲೇ ಸಿದ್ಧರಾಮೇಶ್ವರರು ಪ್ರಸಿದ್ಧರಾಗಿದ್ದರೆಂಬುದನ್ನು ಶಾಸನಗಳು ತಿಳಿಸುತ್ತವೆ. ಸಿದ್ಧರಾಮೇಶ್ವರರ ಪ್ರಸಿದ್ಧಿಯ ಪ್ರಯೋಜನ ಪಡೆದುಕೊಳ್ಳುವ ಪ್ರಯತ್ನ ಕರ್ಣದೇವನಿಂದಾಯಿತೆಂಬು ದನ್ನು ರಾಘವಾಂಕ ತನ್ನ 'ಸಿದ್ಧರಾಮ ಚಾರಿತ್ರ' ದಲ್ಲಿ ಹೇಳಿರುವನು. ಚಕ್ರವರ್ತಿ ಯಾಗುವ ಹಾಗೂ ಅದರಿಂದ ಬರುವ ರಾಜಕೀಯ ಲಾಭಕ್ಕಾಗಿ ಸಿದ್ಧರಾಮೇಶ್ವರರ ಪ್ರಸಿದ್ಧಿಯನ್ನು ಬಳಸಿಕೊಳ್ಳಹೊರಟ ತಂತ್ರವೇ ಸಿದ್ಧರಾಮೇಶ್ವರರು ಜನಮನದಲ್ಲಿ ಆರಾಧ್ಯಮೂರ್ತಿಯಾಗಿದ್ದರೆಂಬುದನ್ನು ಸ್ಪಷ್ಟಪಡಿಸುತ್ತದೆ.

ಸಿದ್ಧರಾಮೇಶ್ವರರ ಬದುಕು–ವ್ಯಕ್ತಿತ್ವವನ್ನು ತಿಳಿಯಲು ಅವರು ಬರೆದಿರುವ ವಚನಗಳೇ ಮೂಲ ಆಕರ. ಆದರೂ, ಅವರ ಬದುಕಿನ ಎಲ್ಲ ಸಂಗತಿಗಳನ್ನೂ ವಚನ ಗಳು ತಿಳಿಯ ಹೇಳಲು ಸಾಧ್ಯವಿಲ್ಲ. ಏಕೆಂದರೆ, ವಚನಗಳು ಅಂದಂದಿನ ಅನುಭವ–

ಅನುಭಾವಗಳಿಗೆ ವಚನಕಾರನ ಮನಸ್ಸು ಹೇಗೆ ಸ್ಪಂದಿಸಿತೆಂಬುದನ್ನು ಅಕ್ಷರ ಮಾಧ್ಯಮದ ಮೂಲಕ ತಿಳಿಯಪಡಿಸುತ್ತವೆ. ಈ ಇತಿಮಿತಿಯಿಂದಾಗಿ ಯಾವುದೇ ಶರಣನ ಸಮಗ್ರ ಬದುಕಿನ ವಿವರಗಳನ್ನು ಅವನು ಬರೆದಿರಬಹುದಾದ ವಚನಗಳು ಹೇಳಲಾರವು. ಆದ್ದರಿಂದ ನಾವು ಅನಿವಾರ್ಯವಾಗಿ ಕಾಲಕಾಲಕ್ಕೆ ಶರಣನನ್ನು ಕುರಿತು ಕೃತಿರಚನೆ ಮಾಡಿದ ಕವಿಗಳ ಕೃತಿಗಳನ್ನು ಆಧರಿಸಬೇಕಾಗುತ್ತದೆ. ಸಿದ್ಧರಾಮೇಶ್ವರರ ಬದುಕನ್ನು ಕುರಿತು ಹರಿಹರ ರಗಳೆಯೊಂದನ್ನು ಬರೆದಿರುವ ಸಾಧ್ಯತೆಯದೆ. ವಿದ್ವಾಂಸರು ಅಭಿಪ್ರಾಯಪಡುವಂತೆ ರಗಳೆಯನ್ನು ಆಧರಿಸಿ ಬಹುಶಃ ರಾಘವಾಂಕನು 'ಸಿದ್ಧರಾಮ ಚಾರಿತ್ರ' ವನ್ನು ಬರೆದಿರಬಹುದು. ಹರಿಹರನು ಸಿದ್ಧರಾಮೇಶ್ವರರ ಬಗೆಗೆ ಬರೆದಿರಬಹುದಾದ ರಗಳೆಯ ಕೃತಿ, ಜನತೆಯಲ್ಲಿ ಸಿದ್ಧರಾಮೇಶ್ವರರ ಬಗೆಗೆ ಪ್ರಚಲಿತವಿದ್ದ ಅನೇಕ ಕಥೆಗಳು ಮತ್ತು ಸ್ವತಃ ಸಿದ್ಧರಾಮೇಶ್ವರರೇ ಬರೆದಿರುವ ವಚನಗಳು–ಈ ಮೂಲಸಾಮಗ್ರಿಗಳನ್ನು ಉಪಯೋಗಿಸಿಕೊಂಡು ರಾಘವಾಂಕನು 'ಸಿದ್ಧರಾಮ ಚಾರಿತ್ರ' ಗ್ರಂಥರಚನೆ ಮಾಡಿರುವ ಸಾಧ್ಯತೆಯಿದೆ.

ರಾಘವಾಂಕನ ದೃಷ್ಟಿಯಲ್ಲಿ ಕಥಾನಾಯಕ ಸಿದ್ಧರಾಮನು ಅಯೋನಿಜನು ; ಭೂವಳಯದೊಳಗುಳ್ಳ ಸರ್ವ ಜೀವಾಳಿಗಳ ಪಾವನಂ ಮಾಡಲೆಂದು ಬಂದವನು ; ಕಾರಣರುದ್ರನು. 'ಧರೆಗೆ ಸೊನ್ನಲಿಗೆಪುರ ಕೈಲಾಸ. ಆ ಜಗದಗುರು ಸಿದ್ಧರಾಮನು ಈಶ್ವರನು. ಅಲ್ಲಿ ಮೆರೆವ ಗುಡ್ಡರು ಗಣೇಶ್ವರರು. ಅಖಿಳ ಜನವು ಅಮರರು. ಅವರ ಸತಿಯರು ರುದ್ರಕನ್ನೆಯರು. ನೆರೆದ ಶಿವಭವನಂಗಳು ಅಷ್ಟಾಷಷ್ಟಿಕ್ಷೇತ್ರ. ಇದನ್ನು ಅಲ್ಲಗಳೆಯುವ ಪರವಾದಿ ಯಾರೋ ಅವನ ಶಿರದ ಮೇಲೆ ನನ್ನ ಎಡಪಾದದ ಪಾದ ರಕ್ಷೆಯನ್ನು ಇಳುಹುವೆನು'– ಎನ್ನುವ ಉಗ್ರನಿಷ್ಠೆ ರಾಘವಾಂಕನದು. ರಾಘವಾಂಕ ತನ್ನ ಕಥಾನಾಯಕನ ಜೀವನಾದರ್ಶವನ್ನು 'ಸಾಕಾರನಿಷ್ಠೆ ಭೂತಂಗಳೊಳಗ[illegible]ಂಪೆ ತಾನೆ ಪರಬೊಮ್ಮ' ಎಂದು ಹೇಳಿಸಿರುವನು. ಪ್ರೊ|| ಡಿ ಎಲ್ ನರಸಿಂಹಾಚಾರ ರವರು ಅಭಿಪ್ರಾಯಪಡುವಂತೆ "ಈ ಸೂತ್ರ ಸಿದ್ಧನ ಬದುಕಿನ ಸಾರ, ಅವನ ಕಥೆ ಇದಕ್ಕೆ ವ್ಯಾಖ್ಯಾನ. ಅಲ್ಲಿ ಬರುವ ಎಲ್ಲ ಸಂದರ್ಭಗಳನ್ನೂ ಆಖ್ಯಾನಗಳನ್ನೂ ಇದು ಪೋಣಿಸಿ ಕಥೆಯನ್ನು ಮಾಲಾಕಾರವಾಗಿ ಮಾಡಿದೆ."[1] ಸಾಕಾರನಿಷ್ಠೆ ಸಿದ್ಧರಾಮನಿಗೆ ಅಗತ್ಯವಿಲ್ಲವಾದರೂ ಅದು ಲೋಕದ ಜನರಿಗಾಗಿ ಬೇಕಾಗಿದೆ. ಜನರ ನಂಬಿಕೆಯನ್ನು ಸಿದ್ಧರಾಮ ಪ್ರಶ್ನಿಸುವವನಲ್ಲ. ಏಕೆಂದರೆ, ಸಾಕಾರನಿಷ್ಠೆ ಭಾರತೀಯರ ನರನಾಡಿ ಗಳಲ್ಲಿ ಹಂಚಿಹೋಗಿರುವ ಭಾವನೆ. ಜನರ ಭಾವನೆಯನ್ನು ಗೌರವಿಸಲು ಅವನು ದೇವಾಲಯ ನಿರ್ಮಾಣ ಲಿಂಗಪ್ರತಿಷ್ಠೆ ಇತ್ಯಾದಿಗಳನ್ನೆಲ್ಲ ಮಾಡುವನು. ಅವನು 'ದಯಾ ಸಮುದ್ರ' ನಾಗಿರುವುದರಿಂದ ಸರ್ವಜೀವಾಳಿಗಳ ಕ್ಷೇಮಚಿಂತನೆ ಮಾಡು ವನು. 'ಹೆಂವನಣುಮೊದಲಿರುಹೆ ಪಶುಪಕ್ಷಿಮೃಗವಾನೆ'ಗಳ ಹಿತವನ್ನು ಬಯಸು

---

1 ಸಿದ್ಧರಾಮ ಚಾರಿತ್ರ, ಪೀಠಿಕೆ, ಪು. xlvii (೧೯೭೫)

ವನು ; ಭೂದಾನ, ಗೋದಾನ, ಕನ್ಯಾದಾನ, ವಸ್ತ್ರದಾನ, ಮಹಿಷದಾನ ಅನ್ನದಾನಗಳನ್ನು ಮಾಡುವನು. "ಸಾಕಾರ ನಿಷ್ಠೆಯಿಂದ ಬರುವ ಆತ್ಮಕಲ್ಯಾಣವೂ ಭೂತಾನುಕಂಪೆಯಿಂದ ದೊರೆಯುವ ಲೋಕಕಲ್ಯಾಣವೂ ಅಹಮಹಮಿಕೆಯಿಂದ ವೃದ್ಧಿಗೊಂಡಾಗ ಅವು ಸಮಸ್ತ ಸನ್ಮಂಗಳಸ್ವರೂಪಿಯಾದ ಪರಬ್ರಹ್ಮವಲ್ಲದೆ ಮತ್ತೇನು ? ಈ ತತ್ತ್ವದ ತಳಹದಿಯ ಮೇಲೆ ಸಿದ್ಧನ ಚರಿತ್ರೆ ಕವಿಯಿಂದ ನಿರ್ಮಿತವಾಗಿದೆ.…."[2]

ಸಿದ್ಧರಾಮೇಶ್ವರರಿಗೆ 'ವಚನ'ವು ಕೇವಲ ಅಭಿವ್ಯಕ್ತಿಮಾಧ್ಯಮವಾಗಿಲ್ಲ. ಅದು 'ಕಪಿಲಸಿದ್ಧಮಲ್ಲಿಕಾರ್ಜುನನನ್ನು ತಿಳಿಯಲಿಕ್ಕೆ' ನೆರವಾಗುವ ಸಾಧನ (ವ. ೧೨೨೧). ವಚನವು ಅವರ ಪಾಲಿಗೆ 'ಆದ್ಯರ ಆಜ್ಞೆ' 'ಈಶ್ವರನಿಗೆ ಬೆಳಗುವ ಜ್ಯೋತಿ' (ವ. ೧೨೬೧). ಮಾತಿಗಿಂತ ನಡೆಗೆ, ಅನುಭವಕ್ಕೆ ಹೆಚ್ಚಿನ ಪ್ರಾಧಾನ್ಯ ನೀಡುವ ಅವರು 'ಅನುಭವವೆಂಬುದು ಅನುಭಾವಿಕಗಲ್ಲದೆ ಹೊತ್ತಗೆಯಲ್ಲಿಲ್ಲ ನೋಡಾ, ಎಂದಿರುವರು. ಪುಸ್ತಕ ವಿದ್ಯೆಯೆ ವಿದ್ಯೆ ಎನ್ನುವ ಪರಂಪರೆಯ ಹುಸಿ ನಂಬಿಕೆಯನ್ನು 'ವಿದ್ಯೆ ಎಂದಡೆ ಭಾರತ-ರಾಮಾಯಣವಲ್ಲ….' (ವ. ೧೩೧೦) ಎನ್ನುವ ಮೂಲಕ ಖಂಡಿಸುವರು. ಇದೇ ಧೋರಣೆ ಕೆಳಗಿನ ಈ ವಚನದಲ್ಲೂ ನಾವು ಕಾಣಬಹುದು :

ವಚಿಸಿ ವಚಿಸಿ ಅನುಭಾವಿಯಾಗದವ ಪಿಶಾಚಿಯಯ್ಯಾ ;
ವಚಿಸಿ ಅನುಭವಿಯಾದವ ಪಂಡಿತನಯ್ಯಾ.
ವಿದ್ಯೆ ಎಂಬುದು ಅಭ್ಯಾಸಿಕನ ಕೈವಶ,
ಅವಿದ್ಯೆಯೆಂಬುದು ಸರ್ವರಲ್ಲಿ ವಶ.
ವಿದ್ಯಾವಿದ್ಯೆಯನರಿತು ಜಗದ್ವೇದ್ಯನಾಗಬಲ್ಲಡೆ,
ಮಹಾಪಂಡಿತ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ.
(ವ. ೧೨೯೫)

ಪಾಂಡಿತ್ಯಕ್ಕಿಂತ ಅನುಭಾವಕ್ಕೆ, ಹೃದಯಶುದ್ಧಿಗೆ, ಸರ್ವಜೀವಾನುಕಂಪೆಗೆ ಹೆಚ್ಚಿನ ಮಹತ್ವ ನೀಡಬೇಕೆಂಬುದು ಸಿದ್ಧರಾಮೇಶ್ವರರ (ಮೇಲಾಗಿ ಎಲ್ಲ ವಚನಕಾರರ) ಆಶಯ. ಹೀಗಾಗಿ, ವಚನ ರಚನೆಯ ಬಿಟ್ಟು ಕುತ್ಸಿತ ಕಾವ್ಯಾಲಂಕಾರ ನೋಡುವರ ನೋಡಿ ಮಹಾದೇವ ಕಪಿಲಸಿದ್ಧಮಲ್ಲಿಕಾರ್ಜುನನು 'ಹುಡಿಮಣ್ಣ ಹೊಯ್ಯದೆ ಮಾಬನೆ' ಎನ್ನುವರು(ವ. ೧೨೯೨). ಅಷ್ಟೇ ಅಲ್ಲ,

ಶಾಸ್ತ್ರವೆಂಬುದು ಮನ್ಮಥಶಸ್ತ್ರವಯ್ಯಾ.
ವೇದಾಂತವೆಂಬುದು ಮೂಲ ಮನೋವ್ಯಾಧಿಯಯ್ಯಾ.

---

2 ಅದೇ, ಪು.xlvii

ಪುರಾಣವೆಂಬುದು ಮೃತವಾದವರ ಗಿರಾಣವಯ್ಯಾ.
ತರ್ಕವೆಂಬುದು ಮರ್ಕಟಾಟವಯ್ಯಾ.
ಆಗಮವೆಂಬುದು ಯೋಗದ ಘೋರವಯ್ಯಾ.
ಇತಿಹಾಸವೆಂಬುದು ರಾಜರ ಕಥಾಭಾಗವಯ್ಯಾ.
ಸ್ಮೃತಿಯೆಂಬುದು ಪಾಪ ಪುಣ್ಯ ವಿಚಾರವಯ್ಯಾ.
ಆದ್ಯರ ವಚನವೆಂಬುದು ಬಹುವೇದ್ಯವಯ್ಯಾ,
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ತಿಳಿಯಲಿಕ್ಕೆ.

(ವ. ೧೨೨೧)

ಎಂಬ ಈ ವಚನದ ಧೋರಣೆಯನ್ನು ಗಮನಿಸಿದಾಗ ಪರಂಪರೆಯಿಂದ ಬಂದ ಕಾವ್ಯ, ಶಾಸ್ತ್ರ, ವೇದಾಂತ, ಪುರಾಣ, ತರ್ಕ, ಆಗಮ, ಇತಿಹಾಸ, ಸ್ಮೃತಿ–ಇವಾವೂ ಜನಸಾಮಾನ್ಯನನ್ನು ಸ್ಪಂದಿಸದೆ, ಅವನ ಅಂತರಂಗದ ವಿಕಾಸಕ್ಕೆ ಕಾರಣವಾಗದೆ ಹೋದುದರ ಬಗೆಗೆ ನಿರಾಶೆ ಟೀಕೆಯ ರೂಪದಾಳಿರುವಂತೆ ತೋರುತ್ತದೆ.

ಶಿವಶರಣರ ವಚನಗಳು ನಮ್ಮ ನಡಾವಳಿಗಳನ್ನು ತಿದ್ದಿಕೊಳ್ಳುವ ಒರೆಗಲ್ಲು. 'ನಮ್ಮ ನಡಾವಳಿಗೆ ನಮ್ಮ ಪುರಾತರ ನುಡಿಯೆ ಇಷ್ಟವಯ್ಯಾ' ಎಂಬ ಮಾತಿನಿಂದ (ವ. ೧೨೯೪) ಇದು ಸ್ಪಷ್ಟವಾಗುತ್ತದೆ. ನಮ್ಮ ಶಿವಶರಣರ ವಚನಗಳನ್ನು ಮೇಲಿಂದ ಮೇಲೆ ಆಸ್ವಾದಿಸುವುದರಿಂದ ಅವುಗಳಲ್ಲಿ ಅಂತರ್ಗತವಾಗಿರುವ ದಿವ್ಯ ಜೀವನಾನುಭವ ವೇದ್ಯವಾಗುತ್ತದೆ ಎಂಬುದು 'ಆಗಿದಗಿದು ನೋಡುವುದು' ಎಂಬ ಮಾತಿನಿಂದ (ವ. ೧೨೬೧) ವಿದಿತವಾಗುತ್ತದೆ. ಕನ್ನಡದ ವಿಶಿಷ್ಟ ಕಾಣಿಕೆಯಾದ ವಚನಸಾಹಿತ್ಯವು ಬರಿಯ ವಾಗ್ರಚನೆಯಲ್ಲ ಎಂಬುದನ್ನು 'ವಚನಾನುಭವೊ ವಚೋ ನ' ಎಂಬ ವಾಕ್ಯದ ಮೂಲಕ ಅವರು ವಿಷದಪಡಿಸುವರು. (ವ. ೧೨೭೬). ಅವರಿಗೆ ವಚನಗಳ ಮೇಲಿನ ಅಭಿಮಾನ ಅತಿಶಯವಾದುದೆಂಬುದನ್ನು ಈ ಕೆಳಗಿನ ವಚನ ಶ್ರುತಪಡಿಸುತ್ತದೆ :

ಎಮ್ಮ ವಚನದೊಂದು ಪಾರಾಯಣಕ್ಕೆ
ವ್ಯಾಸನದೊಂದು ಪುರಾಣ ಸಮ ಬಾರದಯ್ಯಾ.
ಎಮ್ಮ ವಚನದ ನೂರೆಂಟಧ್ಯಯನಕ್ಕೆ
ಶತರುದ್ರಿಯಯಾಗ ಸಮಬಾರದಯ್ಯಾ.
ಎಮ್ಮ ವಚನದ ಸಾಸಿರ ಪಾರಾಯಣಕ್ಕೆ
ಗಾಯತ್ರೀ ಲಕ್ಷ ಜಪ ಸಮ ಬಾರದಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ.

(ವ. ೧೨೯೩)

ಸಿದ್ಧರಾಮೇಶ್ವರರ ವಚನಗಳಲ್ಲಿ ಅವರ ಅನೇಕ ವೈಯಕ್ತಿಕ ಸಂಗತಿಗಳು ದಾಖಲುಗೊಂಡಿವೆ. ಮಲ್ಲಿಕಾರ್ಜುನನು ಲಿಂಗಪ್ರತಿಷ್ಠೆ ಮಾಡೆಂದು ನಿರೂಪಿಸಿದುದು, ತನಗೆ ಬೇರೆ ಸ್ವಾತಂತ್ರ್ಯವಿಲ್ಲದ ಕಾರಣ ಲಿಂಗಪ್ರತಿಷ್ಠೆ ಮಾಡಿದುದು ; ಯೋಗಿಯ ಶರೀರ ವೃಥಾಯ ಹೋಗಲಾಗದು ಪುಣ್ಯವ ಪುಣ್ಯವ ಮಾಡುವುದು ಲೋಕಕ್ಕೆ' ಎಂಬ ಆದರ್ಶವನ್ನು ಮುಂದಿಟ್ಟುಕೊಂಡು ಪುಣ್ಯಕಾರ್ಯಗಳನ್ನು ನೆರವೇರಿಸಿದ್ದು; ಮಲ್ಲಿಕಾರ್ಜುನನ ಪ್ರೇರಣೆಯಂತೆ ಕೆರೆ, ಬಾವಿ, ಹೂದೋಟ, ಚೌಕ ಛತ್ರಗಳನ್ನು ಮಾಡಿಸಿದುದು ; ತಾನು ಕಟ್ಟಿಸಿದ ಕೆರೆಯ ನೀರು ತನ್ನ ಮನದ ಸರ್ವಜೀವದಯಾ ಪರತ್ವಗಳು ಎಂದಿಗೂ ಬತ್ತಿಹೋಗುದಿಲ್ಲವೆಂದು ಪ್ರತಿಜ್ಞೆಮಾಡಿದುದು ; ತಾನು ನಡೆಸಿದ ಹೋಮ ನೇಮ ಕೆರೆದೋಟ ಕೆಲಸಗಳನ್ನು ಮಲ್ಲಿಕಾರ್ಜುನನ ಮನ ನೋಡಿ ಮರೆತದ್ದು ; ತನಗೆ ಮೂರು ಕಣ್ಣಿರುವುದನ್ನು ಲೋಕವೆಲ್ಲ ತಿಳಿದಿರುವುದು ; ಚೆನ್ನ ಬಸವಣ್ಣನು ತನಗೆ ದೀಕ್ಷೆಯನ್ನಿತ್ತುದು ; ಇಷ್ಟಲಿಂಗವನ್ನು ಧರಿಸಿದ ಮೇಲೆ ಸ್ಥಾವರ ಲಿಂಗಪೂಜೆಯನ್ನು ನಿಲ್ಲಿಸಿದುದು ; ಕಪಿಲಸಿದ್ಧಮಲ್ಲಿಕಾರ್ಜುನನು ತನ್ನಿಂದ ತುಪ್ಪದ ಅಭಿಷೇಕ, ಅಮೃತದ ಅಭಿಷೇಕ, ಸರ್ವಾಭಿಷೇಕ ಸ್ವೀಕರಿಸಿದುದು–ಹೀಗೆ ಸಿದ್ಧ ರಾಮೇಶ್ವರರ ಬದುಕಿನ ಅನೇಕ ವಿವರಗಳು ವಚನಗಳಲ್ಲಿ ಅಂತರ್ಗತವಾಗಿರುವುದು ಕಂಡುಬರುತ್ತದೆ.

ಸಿದ್ಧರಾಮೇಶ್ವರರ ಜೀವನದಲ್ಲಿ ಎರಡು ಹಂತಗಳಿವೆ : 1. ಕಲ್ಯಾಣಕ್ಕೆ ಬರುವ ಮುನ್ನ ಸೊನ್ನಲಿಗೆಯಲ್ಲಿ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿದ್ದುದು. 2. ಕಲ್ಯಾಣಕ್ಕೆ ಬಂದು ಬಸವಾದಿ ಶಿವಶರಣರ ಜೊತೆ ಸೇರಿಕೊಂಡು ತಾವು ಹಿಂದೆ ಕೈಕೊಂಡ ಲೌಕಿಕ ಸಾಮಾಜಿಕ ಕಾರ್ಯಗಳ ಬಗೆಗೆ ಒಂದು ರೀತಿಯ ಅತೃಪ್ತಿಯನ್ನೂ ಪಶ್ಚಾತಾಪವನ್ನೂ ಹೊಂದಿದ್ದುದು (ನೋಡಿ : "ಹಸುಳೆಯಾಗಿಯು ನಾನು ಕೆರೆ ಬಾವಿ ದೇವಾಲ್ಯ। ವಿರಚಿಸಿ ಭವಕ್ಕೆ ಬಂದು ಫಲವನುಂಡು। ನರಕಕೆ ಬೀಳುವನ ಕರುಣ ಕರದಿಂದೆತ್ತಿ । ನಿನ್ನ ಹೊರೆಯೊಳಗಿರಿಸಿದೆ ಯೋಗಿನಾಥ॥" –ಬಸವ ಸ್ತೋತ್ರದ ತ್ರಿವಿಧಿ). ಮೊದಲನೆಯ ಹಂತದ್ದು ಲೋಕೋಪಕಾರಿಯಾಗಿದ್ದದ್ದು, ಸರ್ವಜೀವ ದಯಾಪಾರಿಯಾದದ್ದು. ಎರಡನೆಯ ಹಂತದ್ದು ಲೋಕವನ್ನು ನಿರಾಕರಿಸದೆ 'ಅನುಭಾವವನ್ನು ಸಂಪಾದಿಸುವ ಕಡೆಗೆ ಲಕ್ಷ್ಯವಿರುವಂತಹದ್ದು.

ವಚನಕಾರರಲ್ಲಿ ಹೆಚ್ಚಿನ ಸಾಮಾಜಿಕ ಹೊಣೆಗಾರಿಕೆಯನ್ನು (Social Commitment) ಹೊತ್ತವರಲ್ಲಿ ಮುಖ್ಯರು ಬಸವಣ್ಣ ಹಾಗೂ ಸಿದ್ಧರಾಮೇಶ್ವರರು. ಒಂದು ರಾಜ್ಯದ ಪ್ರಧಾನಿಯಾದ ಬಸವಣ್ಣನಿಗೆ ರಾಜಕೀಯದ ಜೊತೆಗೆ ಸಾಮಾಜಿಕ ಹೊಣೆಗಾರಿಕೆಯು ಬಹಳವಿದ್ದಿತು. ಅದನ್ನು ಚೆನ್ನಾಗಿ ನಿರ್ವಹಿಸಿದವನು ಬಸವಣ್ಣ. ಬಸವಣ್ಣ ನಿರ್ವಹಿಸಿದ ಸಾಮಾಜಿಕ ಹೊಣೆಗಾರಿಕೆಯ ಬಗೆಗೆ ನಾವು ಅವನ ವಚನಗಳ

ಮೂಲಕ ಅರಿಯಬಹುದು. ಸಿದ್ಧರಾಮೇಶ್ವರರಿಗೂ ಪ್ರಮುಖವಾದುದು ಸಾಮಾಜಿಕ ಹೊಣೆಗಾರಿಕೆ. 'ಮರ್ತ್ಯಲೋಕವು ಕರ್ತಾರನ ಕಮ್ಮಟ'ವೆಂದು ಭಾವಿಸಿ 'ಇಹ'ವನ್ನು ಪ್ರೀತಿಸುವುದು, ಬದುಕನ್ನು ಪ್ರೀತಿಸುವುದು ಸಾಮಾಜಿಕ ಹೊಣೆಗಾರಿಕೆಯಲ್ಲಿ ಪ್ರಧಾನವಾದುದು. ಸಾಮಾಜಿಕ ಹೊಣೆಗಾರಿಕೆಯ ಅರಿವು ಬರಬೇಕಾದರೆ ಜನ ಸಾಮಾನ್ಯರ ನಡುವೆ ಬೆರೆಯುವ, ಅವರ ಬದುಕು ಹಸನಾಗಬೇಕಾದರೆ ಏನು ಮಾಡ ಬೇಕೆಂಬುದನ್ನು ಚಿಂತಿಸುವ ಮನೋಭಾವ ಬೇಕು ; ಹೊಗಳಿಕೆ ತೆಗಳಿಕೆಗಳನ್ನು ಸಮಾನವಾಗಿ ಸ್ವೀಕರಿಸುವ ಗಟ್ಟಿ ಮನಸ್ಸು ಬೇಕು ; ಎಷ್ಟೇ ಕಷ್ಟ ಬಂದರೂ ತನ್ನ ಗುರಿ ಮುಟ್ಟಿಯೇ ಮುಟ್ಟುತ್ತೇನೆನ್ನುವ ಛಲಬೇಕು; ಮೇಲಾಗಿ, ಮಾನವೀಯತೆ ಸದಾ ಹೃದಯದಲ್ಲಿ ಮಿಡಿಯುತ್ತಿರಬೇಕು. ಸಿದ್ಧರಾಮೇಶ್ವರರು ಕೈಗೊಂಡ ಕೆರೆ, ಬಾವಿ, ಹೂದೋಟ, ಚೌಕ, ಛತ್ರ, ಸಾವಿರ ಮದುವೆಗಳು, ಬಡವರ ನಿರ್ಗತಿಕರ ಋಣಪರಿಹಾರ–ಇವೇ ಮೊದಲಾದ ಕಾರ್ಯಗಳಲ್ಲಿ ಸಾಮಾಜಿಕ ಹೊಣೆಗಾರಿಕೆಯನ್ನು ಗುರುತಿಸಬಹುದು. ಬಿಲ್ಲೇಶ ಬೊಮ್ಮಯ್ಯನ ಪ್ರಸಂಗ, ಏಲೇಶನಿಗೆ ಪ್ರಾಣವಿತ್ತ ಪ್ರಸಂಗಗಳಲ್ಲಿ ('ಸಿದ್ಧರಾಮ ಚಾರಿತ್ರ') ಮಾನವೀಯತೆಯ ಪರಾಕಾಷ್ಠೆಯನ್ನು ನಾವು ಕಾಣಬಹುದು.

ಸಾಮಾಜಿಕ ಹೊಣೆಗಾರಿಕೆಯಲ್ಲಿ ವೈಚಾರಿಕತೆಯ ಪಾತ್ರ ಅಷ್ಟೇ ಮುಖ್ಯ ವಾದುದು. ಸಾಮಾಜಿಕ ಸ್ಥಿತ್ಯಂತರಕ್ಕೆ ತಹತಹಿಸುವ ವೈಚಾರಿಕ ಮನೋಭಾವದ ವ್ಯಕ್ತಿ ಕ್ರಿಯಾಶೀಲನಾಗುವುದು ಮುಖ್ಯವಾಗಿದೆ. ಮನ ವಚನ ಕಾಯ ಶುದ್ಧನಾದ ವ್ಯಕ್ತಿ ಜನತೆಯ ನಡುವೆ ನಿಂತು ಸಾಮಾಜಿಕ ಪರಿವರ್ತನೆಗೆ ತೊಡಗಿದಾಗ ಜನ ಸಹಜ ವಾಗಿ ಅದಕ್ಕೆ ಸ್ಪಂದಿಸುವರು. ಇದು ಎಲ್ಲ ಕಾಲದ ಚಳುವಳಿಗಳಲ್ಲಿ ಕಂಡುಬರುವ ವಾಸ್ತವ ಸತ್ಯ. ಸಾಮಾಜಿಕ ನೆಲೆಯಲ್ಲಿ ಯಾವುದೇ ಬದಲಾವಣೆ ಕ್ಷಣ ಮಾತ್ರದಲ್ಲಿ ಆಗುವಂತಹದ್ದಲ್ಲ. ಪರಂಪರೆಯಿಂದ ಜಡ್ಡುಗಟ್ಟಿದ ಜನರ ಮನಸ್ಸನ್ನು ತಿದ್ದಬೇಕು. ಮಾನಸಿಕ ಪರಿವರ್ತನೆ ನಡೆಸಬೇಕು. ಇದಕ್ಕೆ ತಾಳ್ಮೆ ಬೇಕು ; ಜನರ ಮನಸ್ಸನ್ನು ಅರ್ಥ ಮಾಡಿಕೊಂಡು ಹಿತವಾದ ರೀತಿಯಲ್ಲಿ ಬೋಧಿಸಿ ತಿದ್ದಬೇಕು ; ಜನರ ಮನಸ್ಸನ್ನು ಗೆಲ್ಲುವ ಜಾಣ್ಮೆ, ಪ್ರಭಾವಶಾಲಿ ಮಾತುಗಾರಿಕೆ ಬೇಕು.

ನಮ್ಮ ಬದುಕಿನ ಸಾರ್ಥಕ್ಯಸ್ವರ್ಗವನ್ನು ಪಡೆಯುವುದೆಂಬುದು ಪಾರಂಪಾರಿಕ ನಂಬುಗೆ. ಹಾಗೆಯೇ ಪಾಪದಭೀತಿಗಾಗಿ ನರಕದ ಕಲ್ಪನೆ ಬೆಳೆದುಬಂದಂತಿದೆ. ಕಣ್ಣಿಗೆ ಕಾಣದ ಸ್ವರ್ಗ–ನರಕಗಳು ಸುಖ–ಅಸುಖಗಳಿಗೆ ಸಂಕೇತವಾಗಿವೆ. ತಪಸ್ಸನ್ನು ಮಾಡಿ ಸ್ವರ್ಗವನ್ನು ಪಡೆಯುವೆನೆನ್ನುವರ ಮುಖವನ್ನು ನೋಡಲಾಗದು ಎನ್ನುವ ಸಿದ್ಧ ರಾಮೇಶ್ವರರು 'ಸ್ವರ್ಗವೆಂದರೆ ಸುಖಕ್ಕೆ ನಾಮ, ನರಕವೆಂದರೆ ಬಾಧೆಗೆ ನಾಮ, ಎಂದು ಹೇಳಿ ಪರಂಪರೆಯ ನಂಬುಗೆಯನ್ನು ಸರಳವಾಗಿ ನಿರಾಕರಿಸುವರು. ಶಿವಭಕ್ತರ ಪರಮಗುರಿ ಕೈಲಾಸವನ್ನುಸೇರುವುದು ಎಂಬ ಪರಂಪರೆಯ ನಂಬುಗೆಯನ್ನು ಅಲ್ಲ

ಗಳೆಯುವ ಅವರು 'ಕೈಲಾಸವೆಂಬುದೊಂದು ಭೂಮಿಯೊಳಿರುವ ಹಾಳುಬೆಟ್ಟ, ಅಲ್ಲಿರುವ ಮುನಿಗಳೆಲ್ಲ ಜೀವಗಳ್ಳರು. ಅಲ್ಲಿರುವ ಚಂದ್ರಶೇಖರನು ಬಹು ಎಡ್ಡ....' ಎಂದು (ವ. ೧೧೬೯) ಟೀಕಿಸುವರು. ಸ್ವರ್ಗ–ನರಕ, ಕೈಲಾಸಗಳ ಪಾರಂಪರಿಕ ಕಲ್ಪನೆಯನ್ನು ಬದಲಿಸಿ ವಾಸ್ತವ ಜಗತ್ತಿನೆಡೆಗೆ ನಮ್ಮ ಆಲೋಚನೆಯನ್ನು ಹೊರಳಿಸುವುದು ಬಹುಶಃ ಈ ಟೀಕೆಯ ಹಿನ್ನೆಲೆಯಲ್ಲಿರುವಂತಿದೆ. ಪುಣ್ಯಪಾಪಗಳು ಪೂರ್ವಾರ್ಜಿತವೆನ್ನುವ ನಂಬುಗೆಯನ್ನು ಸಿದ್ಧರಾಮೇಶ್ವರರು 'ಅಲ್ಲಗಳೆಯುವರು : 'ಮೊದಲಲ್ಲಿಯ (=ಪೂರ್ವದ)ಪುಣ್ಯ ಪಾಪವದು ಇದರಲ್ಲಿಯ (=ಮರ್ತ್ಯದ) ಜೀವಕ್ಕೆ ಸುಖ ದುಃಖ ನೋಡಾ ಎಂದೆನಲಾರೆ....ಸಂಗದಿಂ ಸುಖದುಃಖವಲ್ಲದೆ ಪೂರ್ವಾರ್ಜಿತ ಪುಣ್ಯಪಾಪವೆಂಬುವ ತಿಳಿಯಬಾರದು.' 'ಮನಸ್ಸಿನ ಕಾರ್ಯವೆ ಪುಣ್ಯ–ಪಾಪ ನೋಡಯ್ಯ' (ವ. ೧೧೫೨)ಎಂಬ ಅವರ ಹೇಳಿಕೆಯಲ್ಲಿ ನಾವು ಮಾಡುವ ಸತ್‌ಕಾರ್ಯವು ಪುಣ್ಯಕ್ಕೆ ಕಾರಣವಾಗಿಯೂ ದುಷ್ಟಕಾರ್ಯವು ಪಾಪಕ್ಕೆ ಕಾರಣವಾಗಿಯೂ ಬರುವುವೆಂಬುದನ್ನು ಹೇಳಲಾಗಿದೆ. ಸುಖ ಬಂದರೆ ದೈವಕೃಪೆಯೆಂದೂ ದುಃಖ ಬಂದರೆ ದೈವದ ಅವಕೃಪೆಯೆಂದೂ ನಂಬಿರುವ ಜನರ ನಂಬುಗೆಯನ್ನು ಪ್ರಶ್ನಿಸುವ ಅವರು 'ಸುಖವು ಮಾಡುವ ಕ್ರಿಯೆಯಿಲ್ಲರಿಯ ಬಂದಿತ್ತು, ಸುಖವು ದೈವವಲ್ಲ....' ಎಂದು ಮನವರಿಕೆ ಮಾಡಿಕೊಡುವರು. ಗಂಗೆಯಲ್ಲಿ ಮುಳುಗಿದವರಿಗೆ ಪಾಪ ನಿವಾರಣೆಯಾಗುತ್ತದೆಂಬ ನಂಬುಗೆಯನ್ನು ಪ್ರಶ್ನಿಸುವ ಅವರು 'ಗಂಗೆಯ ಮುಳುಗಿ ಬಂದವರೆಲ್ಲಾ ಪಾಪವ ಮಾಡಿ ಸತ್ತಡೆ, ಅವರಿಗೆ ಪುಣ್ಯದ ಪದವಿಯುಂಟಾದಡೆ, ಗಂಗೆ ಘನವೆಂಬೆ. ಮುಳುಗಿಪಾಪವ ಮಾಡದೆ ಸತ್ತುಹೋದಡೆ, ಪುಣ್ಯದ ಪದವಿಯವರಿಗುಂಟಾದಡೆ ಘನವೆಂಬೆ....' ಎನ್ನುವರು (ವ. ೩೭೧).

ಜಂಗಮವು ಜ್ಞಾನದ ಸಂಕೇತವಾಗಿ ಒಂದೆಡೆ ನಿಲ್ಲದೆ ಚರಿಸುತ್ತಿರಬೇಕು. ಅಂದು ಇದಕ್ಕೆ ವ್ಯತಿರಿಕ್ತವಾದ ಜಂಗಮರಿದ್ದರು. ಭೂಷಣವುಳ್ಳ ಜಂಗಮವನ್ನು ಭೂಪಾಲ ಪೂಜಿಸುವನು ; ವೇಷವುಳ್ಳ (=ಸುಂದರನಾದ) ಜಂಗಮವನ್ನು ವೇಶಿ ಪೂಜಿಸುವಳು ; ವೇಷಧಾರಿ ಜಂಗಮನನ್ನು ಲೋಕವೆಲ್ಲ ಪೂಜಿಸುವುದು. ಆದರೆ ಜ್ಞಾನಿಯಾದ ಜಂಗಮನನ್ನು ಯಾರೂ ಪೂಜಿಸುತ್ತಿಲ್ಲವಲ್ಲಾ ಎಂಬ ಪ್ರಶ್ನೆ ಸಿದ್ಧರಾಮೇಶ್ವರರದು (ವ. ೧೧೪೦). ಪರಂಪರೆಯಿಂದ ಬಂದ ಜಾತಿ ಅಥವಾ ಕುಲದ ಪ್ರಶ್ನೆಯ ಬಗೆಗೆ ಶಿವಶರಣರು ಸಾಕಷ್ಟು ವಿಚಾರ ಮಾಡಿರುವರು. ವ್ಯಕ್ತಿಯ ಹುಟ್ಟನ್ನು ಪ್ರಶ್ನಿಸದೆ ಗುಣವನ್ನು ಮನ್ನಿಸುವ ವಿಚಾರಧಾರೆ ಶಿವಶರಣರದು. ಜಾತಿ ರಹಿತ ಸಮಾಜ ನಿರ್ಮಾಣ ಮಾಡಹೊರಟ ಶಿವಶರಣರಿಗೆ ಮಾನವ ಕುಲದಲ್ಲಿ ಕಂಡದ್ದು ಗಂಡು ಹೆಣ್ಣು ಎಂಬ ಎರಡೇ ಜಾತಿ ; ಭಕ್ತ ಭವಿ ಎಂಬ ಎರಡೇ ವರ್ಗ. ಸಿದ್ಧರಾಮೇಶ್ವರರೂ ಕುಲದ ಬಗೆಗೆ ಸಾಕಷ್ಟು ವಿಚಾರ ಮಾಡಿರುವರು. ''ಕುಲದಲ್ಲಿ

ಶೂದ್ರನಾದಡೇನು ? ಮನದಲ್ಲಿ ಮಹಾದೇವ ನೆಲೆಗೊಂಡವನೆ ವೀರಶೈವ ನೋಡಾ" ; "ಆವ ಯೋನಿಜನಾದಡೇನು ನೀನೊಲಿದವನೆ ಕುಲಜನಯ್ಯಾ" ; "ಕುಲವೆಂದು ಹೋರಾಡುವ ಅಣ್ಣಗಳಿರಾ, ಕೇಳಿರೋ ; ಕುಲವೇ ಡೋಹಾರನ ? ಕುಲವೇ ಮಾದಾರನ ? ಕುಲವೇ ದೂರ್ವಾಸನ ? ಕುಲವೇ ವ್ಯಾಸನ ? ಕುಲವೇ ವಾಲ್ಮೀಕನ ? ಕುಲವೇ ಕೌಂಡಿಲ್ಯನ ? ಕುಲವ ನೋಳ್ಪಡೆ ಹುರುಳಿಲ್ಲ ; ಅವರ ನಡೆಯ ನೋಳ್ಪಡೆ ನಡೆಯುವರು ತ್ರಿಲೋಕದಲ್ಲಿಲ್ಲ ನೋಡಾ...."

ಇಷ್ಟಲಿಂಗವು ಕಳೆದುಹೋದರೆ ಜಲ, ನೇಣು, ಬೆಂಕಿ, ಆತ್ಮಘಾತ (=ಕತ್ತಿಯಿಂದ ಇರಿದುಕೊಳ್ಳುವುದು), ಬೆಟ್ಟದ ಮೇಲಿಂದ ಬೀಳುವುದು – ಹೀಗೆ ಹಲವು ಬಗೆಯಿಂದ ಜೀವ ಕಳೆದುಕೊಳ್ಳುವ ದುಷ್ಟ ಪದ್ಧತಿ ಸಾಮಾಜಿಕ ನೆಲೆಯಲ್ಲಿದ್ದಿತು. ಅದನ್ನು ನೋಡಿ 'ಎನ್ನಂಗ ನಡುಗಿತ್ತಯ್ಯಾ' ಎಂದು ಸಿದ್ಧರಾಮೇಶ್ವರರು ನುಡಿದಿರುವರು (ವ. ೧೨೧೦). ಲಗ್ನಕ್ಕೆ ವಿಘ್ನ ಬಾರದೆ ? ಎಂದು ಜ್ಯೋತಿಷ್ಯ ಕೇಳುವ ಪರಿಪಾಠ ಎಂಟುನೂರು ವರ್ಷಗಳ ಹಿಂದೆಯೂ ಇದ್ದಿತ್ತು. ಸಿದ್ಧರಾಮೇಶ್ವರರು ಹೇಳುವಂತೆ "ಜ್ಯೋತಿಷ್ಯವದು ಜ್ಯೋತಿಯಂತಯ್ಯಾ ; ಕೂಡುವ ಕಾಲಕ್ಕೆ ಪ್ರಕಾಶಮಯವು ; ಕೂಡದ ಕಾಲಕ್ಕೆ ದಗ್ಧಮಯವು...." (ವ. ೧೨೧೮). ಸಾಮಾಜಿಕ ಮನ್ನಣೆಗಾಗಿ ಕೆಳವರ್ಗದವರು ಇಷ್ಟಲಿಂಗಧಾರಿಗಳಾಗಲು ಹೊರಟಾಗ ಯೋಗ್ಯರೊಂದಿಗೆ ಅಯೋಗ್ಯರೂ ಸೇರಿಕೊಂಡರು. ಅಂತಹವರಲ್ಲಿ ಹಣ ಕೊಟ್ಟು ಲಿಂಗವನ್ನು ಖರೀದಿಸಿ ಧನದಾಸೆಯ ಗುರುವಿನಿಂದ ಲಿಂಗದೀಕ್ಷೆಯನ್ನು ಪಡೆದವರೂ ಇದ್ದರು. ಅಂತಹವರನ್ನು ಕುರಿತು "ದುಡ್ಡಿನ ಲಿಂಗವು ಮೋಕ್ಷವ ಕೊಡಬಲ್ಲಡೆ, ಅಡ್ಡಬೀಳುವುದೇಕಯ್ಯಾ ಗುರುವಿಗೆ ?" (ವ. ೧೨೨೫) ಎಂದು ಸಿದ್ಧರಾಮೇಶ್ವರರು ವ್ಯಂಗ್ಯವಾಡಿರುವರು. ಇಷ್ಟಲಿಂಗವನ್ನು ಧರಿಸಿದ ಮೇಲೂ ಸ್ಥಾವರಲಿಂಗವನ್ನು ಪೂಜಿಸುವ ಭಕ್ತರನ್ನು ನೋಡಿ "ಕಟ್ಟಿದ ಲಿಂಗವ ಬಿಟ್ಟು ನಟ್ಟಿದ ಲಿಂಗವನಟ್ಟಿ, ಮೊಟ್ಟೆ ಮೊಟ್ಟೆ ತಾವರೆ ಮೊದಲಾದ ಪುಷ್ಪವ ಧರಿಸುವಾತನಿರವು ಚಾಂಡಾಲನ ಇರವು ನೋಡಾ ; ಆತನ ಸಂಗ ಮಾದಿಗರ ಸಂಗ ನೋಡಾ...." (ವ. ೧೨೨೨) ಎಂದು ಕಟುವಾಗಿ ಅವರು ಟೀಕಿಸುವರು. ಯತಿಗಳು ತಪಸ್ಸಿಗಾಗಿ ಪರ್ವತ, ಕಾಡುಗಳಿಗೆ ಹೋಗುವುದು ಬರಿಯ ಭ್ರಮೆಯಾಗಿ ಸಿದ್ಧರಾಮೇಶ್ವರರಿಗೆ ತೋರುತ್ತದೆ. ಮನಸ್ಸಿನ ಏಕಾಗ್ರತೆ ಸಾಧಿಸಿ ಶಿವನೇ ತಾನಾಗಬಲ್ಲವರಿಗೆ ಗಿರಿ ಗ್ರಾಮ ವನವಾಸದ ಗೊಂದಿ ಏಕಯ್ಯಾ ? ಎಂದು ಅವರು ಪ್ರಶ್ನಿಸುವರು (ವ. ೧೨೪೨). ಇಂದ್ರಿಯನಿಗ್ರಹ ಮಾಡಿದೆನೆನ್ನುವ ಯತಿಗಳನ್ನು ನೋಡಿ "ಇಂದ್ರಿಯನಿಗ್ರಹ ಮಾಡಿದಡೇನಯ್ಯಾ, ಚಂದ್ರಧಾರಿಯಾಗಬಲ್ಲನೆ? ಇಂದ್ರಿಯ ಕಟ್ಟಿದ ಕುದುರೆ ಇಂದ್ರನ ಉಚ್ಚೈಶ್ರವವಹುದೆ ? ಅಯ್ಯಾ. ಇಂದ್ರಿಯಂಗಳೆಂಬುದು ಮಾಯಾಜಾಲವು ತಾನೆ...," ಎಂದು ಪ್ರಶ್ನಿಸಿರುವರು (ವ. ೧೩೨೦).

ಸಿದ್ಧರಾಮೇಶ್ವರರ ವಚನಗಳಲ್ಲಿ ದೈವದ ಸಾಕ್ಷಾತ್ಕಾರಕ್ಕಾಗಿ ಅವರು ಪಟ್ಟ ನೋವು ಹಂಬಲಗಳು ಸ್ಪಷ್ಟವಾಗಿ ಗೋಚರಿಸುತ್ತವೆ. "ಎನ್ನ ತನು ಕರಗಿ ಎನ್ನ ಮನ ಕರಗಿ ಕೊರಗಿದ ದುಃಖವಿದಾರದಯ್ಯಾ ? 'ಅಯ್ಯಾ ಅಯ್ಯಾ' ಎಂದಳುವ ಅಕ್ಕಿ ಇದಾರದಯ್ಯಾ ? ಮರಹೆಂಬ ಕೊರಸಿಗೆ ಗುರಿಮಾಡಿದವರಾರಯ್ಯಾ ? ಅಹಾ ಎಂಬ ಧ್ವನಿಯ ಕೇಳಲಾರದೆ, ಕಂಡು ಕರುಣದಿಂದ ಶಿರವ ಹಿಡಿದೆತ್ತಿ, ಎನ್ನ ಕಣ್ಣ ನೀರ ತೊಡೆದನು ಕಪಿಲಸಿದ್ಧಮಲ್ಲಿನಾಥಯ್ಯನು" ಎನ್ನುವಲ್ಲಿ ಭಕ್ತನಾಗಿ ಅನುಭವಿಸಿದ ದುಃಖ ವೇದ್ಯವಾಗುತ್ತದೆ. "ಅಯ್ಯಾ ನಿಮ್ಮ ವಿಕಳದಲ್ಲಿ ನೆನೆವುತ್ತ ಗಾಳಿಯು ಸರವೆ ನೀವೆಂದು ಬಗೆದೆ ಕಂಡಯ್ಯಾ...." ; "ಅತ್ತಲಿತ್ತ ಸುತ್ತಿ ಬಳಲಿ ವ್ಯರ್ಥವಪ್ಪ ಮನಸ ನಿಮ್ಮ ಚಿತ್ತದತ್ತ ಧ್ಯಾನಿಸಿ ಇರಿಸಯ್ಯ...." ; ಅಯ್ಯಾ ! ನೀ ಬಾರಯ್ಯಾ ! ಬಂದು ಎನ್ನ ಹೃದಯ ಮನ ಶಾಸನವ ಮಾಡಿ ನಿಲ್ಲಯ್ಯ. ಹಾ ! ಅಯ್ಯಾ ! ಅಯ್ಯಾ ! ನೀರ ಬಾರ ! ನಿನ್ನ ಧರ್ಮ ! ..." ; "ಅಯ್ಯಾ, ಸಂಸಾರವೆಂಬ ರಾಹುವಿನ ಅಣಲೊಳಗಿದ್ದೆನಯ್ಯ. ಅಯ್ಯಾ, ಎನ್ನನಾವಾಗ ನುಂಗೀತೆಂದರಿಯೆ ನಯ್ಯಾ. ಅಯ್ಯಾ, ಎನ್ನನಾವಾಗ ಉಗುಳೀತೆಂದರಿಯೆನಯ್ಯ. ಅದರ ಬಾಯಿಂದ ಲೆನ್ನ ತೆಗೆದು ಕಾಯಯ್ಯ...." – ಇಂತಹ ವಚನಗಳಲ್ಲಿ ಭಕ್ತನ ಆರ್ತರವ ಹೃದಯ ಮಿಡಿಯುವಂತಿದೆ. ಸಿದ್ಧರಾಮೇಶ್ವರರ ವಚನಗಳಲ್ಲಿ ಸತಿಪತಿಭಾವದ ವಚನಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಬರುತ್ತವೆ. ತಮ್ಮನ್ನು ಕಪಿಲಸಿದ್ಧಮಲ್ಲಿನಾಥನ ಸತಿಯಾಗಿ ಪರಿಭಾವಿಸಿ ನಡೆಸುವ ಭಕ್ತಿರತಿ ಮನೋಜ್ಞವಾಗಿದೆ.*

ಸಿದ್ಧರಾಮೇಶ್ವರರದು ಕವಿಹೃದಯ. ಹೇಳುವುದನ್ನು ಮನಮುಟ್ಟುವಂತೆ ಹೇಳುವುದು ಅವರ ವಚನಗಳ ಶೈಲಿಯ ಪ್ರಮುಖಗುಣ. ಕಿರಿದಾದ ವಾಕ್ಯಗಳಲ್ಲಿ ಹಿರಿದಾದ ಅರ್ಥವನ್ನು ತುಂಬುವ ಜಾಯಮಾನ ಅವರದು. ಭಾಷೆಯ ಬಳಕೆಯಲ್ಲಿ ಎಚ್ಚರವಹಿಸಿರುವ ಅವರು 'ಮಜ್ಜಿಗೆ ಹುಳಿ ಎಂದಡೆ ಅದು ಗೋಜ್ಜಿನ ಹಾದಿ', 'ಸಾಕುವವರು ತಾವಾದ ಬಳಿಕ ನೂಕುವವರು ತಾವಾಗಬಾರದು' 'ನಿನ್ನ ಕಾಟ ಎನ್ನ ಪ್ರಾಣದ ಓಟ', 'ಜಪವೆಂಬುದು ಪಾಪಕ್ಕೆ ಬಹು ತಾಪ', 'ಶರಣನ ನೋಟ ಭವದ ಕಾಟ', 'ಅನುಭವವೆಂಬುದು ಅನುಭಾವಿಕಂಗಲ್ಲದೆ ಹೊತ್ತಗೆಯಲಿಲ್ಲ', 'ಹಾಲುಳ್ಳಲ್ಲಿ ಹಬ್ಬವ ಮಾಡಿ ಗಾಳಿಯುಳ್ಳಲ್ಲಿ ತೂರಿಕೊಳ್ಳಿರಿ', 'ಶುಭಕ್ಕೆ ವಿಘ್ನವಲ್ಲದೆ ಅಶುಭಕ್ಕೆ ವಿಘ್ನವೆ', 'ಸಿಂಬಿಗೆ ರಂಭೆತನವುಂಟೆ', 'ರಂಭೆ ಎಂದಡೆ ನಿನ್ನಂಗನೆಯಾಗಲಿಲ್ಲವು : ಒಂದಿನ ಸ್ವಪ್ನದಲ್ಲಾದಡೂ ರತಿಸಲಿಲ್ಲ', 'ಅಯ್ಯಗಳು ಅನುಭವಕ್ಕಲ್ಲದೆ ನಿನ್ನ ಪಾಪ ಕ್ಕೆಮಯು ಅಯ್ಯಗಳೆ', 'ನೀರಲ್ಲಿಯ ಕ್ರೀಡೆ ಕುಂಬಳಕಾಯಿಗಲ್ಲದೆ ದೊಡ್ಡ ಬಂಡೆ ಗುಂಟೇನಯ್ಯಾ', 'ಓದುವುದದು ಸದ್ಗುಣಕ್ಕಲ್ಲದೆ ಕಿವಿಯನೂದುವುದಕ್ಕೇನೊ'— ಹೀಗೆ ಅರ್ಥಪೂರ್ಣವಾದ ಮಾತುಗಳನ್ನು ಸಂದರ್ಭೋಚಿತವಾಗಿ ಬಳಸಬಲ್ಲರು.

* ವಿವರಗಳಿಗೆ ನೋಡಿ : ಡಾ|| ಎಸ್. ವಿದ್ಯಾಶಂಕರ : ವಚನಾನುಶೀಲನ, ಪು, 247-272

ಸಿದ್ಧರಾಮೇಶ್ವರರ ಮೇಲೆ ಬಸವಣ್ಣನವರ ವಚನಗಳ ಪ್ರಭಾವ ಗಾಢವಾಗಿ ಆಗಿರುವಂತೆ ತೋರುತ್ತದೆ. ಇದಕ್ಕೆ ನೂರಾರು ಉದಾಹರಣೆಗಳನ್ನು ಕೊಡಬಹುದು. 'ಚರಿಸುವ ಚರನಿಗೆ ಚರ್ಚೆಯೆ ಭೂಷಣ...' ಎಂಬುದು 'ನೀರಿಂಗೆ ನೈದಿಲೆಯೆ ಶೃಂಗಾರ' ಎಂಬ ವಚನವನ್ನು ನೆನಪಿಸಿದರೆ ; 'ಶರಣನ ಜಾಗ್ರತಿಯೆ ಶಿವರಾತ್ರಿ ಕಂಡಾ ಮನವೆ' ಎಂಬುದು 'ಶರಣ ನಿದ್ರೆಗೆಯ್ದಡೆ ಜಪ ಕಾಣಿರಣ್ಣಾ' ಎಂಬ ವಚನವನ್ನು ನೆನಪಿಸುತ್ತದೆ. 'ವೇದಪ್ರಿಯನಲ್ಲಯ್ಯಾ ನೀನು .. ನಾದಪ್ರಿಯನಲ್ಲಯ್ಯಾ ನೀನು ... ಭಕ್ತಿಪ್ರಿಯ' ಎಂಬ ವಚನವು 'ನಾದಪ್ರಿಯ ಶಿವನೆಂಬರು....' ಎಂಬ ಬಸವಣ್ಣನ ವಚನದ ನೇರವಾದ ಅನುಕರಣೆಯಂತೆ ತೋರುತ್ತದೆ. ಬಸವಣ್ಣನವರ ಅನೇಕ ವಚನಗಳ ಬಂಧ, ಭಾವ, ಉಕ್ತಿಗಳನ್ನು ಸಿದ್ಧರಾಮೇಶ್ವರರು ಅನುಕರಿಸಿದಂತೆ ತೋರುತ್ತದೆಯಾದರೂ ಅನುಕರಣೆಯೇ ಅವರ ಪ್ರಧಾನ ಗುಣವಲ್ಲ. ಅವರು ಪ್ರತಿಭಾವಂತ ವಚನಕಾರರೆಂಬುದನ್ನು ಅವರ ವಚನಗಳನ್ನೋದಿದ ಯಾರೇ ಆಗಲಿ ಅಲ್ಲಗಳೆಯಲಾರರು. ಅವರ ಪ್ರಾಂಜಲ ಭಕ್ತಿ ಅನೇಕ ವಚನಗಳಲ್ಲಿ ಮೈದೋರಿದೆ. ಅವರು ಶ್ರೇಷ್ಠ ಅನುಭಾವಿಗಳೆಂಬುದು ಅವರ ವಚನಗಳಿಂದ ವಿದಿತವಾಗುತ್ತದೆ.

ಸಂಪಾದನೆಯ ವಿಧಾನ :

'ಸಿದ್ಧರಾಮೇಶ್ವರ ವಚನಸಂಪುಟ'ದಲ್ಲಿ ಅವರ ವಚನಗಳನ್ನು ಎರಡು ಕಾಂಡಗಳಲ್ಲಿ ಸಂಕಲಿಸಲಾಗಿದೆ. ಕಾಂಡ : ಒಂದು–ಬೇರೆ ಬೇರೆ ಸಂಕಲನ ಗ್ರಂಥಗಳಲ್ಲಿ ಬಂದಿರುವ ಸಿದ್ಧರಾಮೇಶ್ವರ ವಚನಗಳನ್ನು ಅಕಾರಾದಿಯಾಗಿ ಕೊಡಲಾಗಿದೆ. (ಸಂಪಾದನೆಗೆ ಬಳಸಿಕೊಳ್ಳಲಾಗಿರುವ ಹಸ್ತಪ್ರತಿ/ಮುದ್ರಿತ ಪ್ರತಿಗಳ ವಿವರಗಳನ್ನು ಈ ಸಂಪುಟದ ಕೊನೆಯಲ್ಲಿ ಕೊಡಲಾಗಿದೆ.) ಕಾಂಡ : ಎರಡು–ಷಟ್‌ಸ್ಥಲ ವಚನಗಳನ್ನು ಕೊಡಲಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಕಾಗದದ ಪ್ರತಿ ೭೫೭ ನ್ನು ಷಟ್‌ಸ್ಥಲ ವಚನಗಳ ಸಂಪಾದನೆಯಲ್ಲಿ ಬಳಸಲಾಗಿದೆ (ಇದರ ಶುದ್ಧಾಶುದ್ಧತೆಯನ್ನು ಕುರಿತು ಮುಂದೆ ಪ್ರಸ್ತಾಪಿಸಲಾಗುವುದು). ವಚನಗಳನ್ನು ಮಾತ್ರ ಸಂಪಾದಿಸಿ ಪ್ರಕಟಿಸುವ ಉದ್ದೇಶ 'ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ'ಯದ್ದು. ಹೀಗಾಗಿ, ತ್ರಿಪದಿ ರೂಪದ ಯೋಗಿನಾಥಾಂಕಿತದ ಸಂಕೀರ್ಣ ತ್ರಿವಿಧಿ, ಬಸವಸ್ತೋತ್ರದ ತ್ರಿವಿಧಿ, ಮಿಶ್ರಸ್ತೋತ್ರದ ತ್ರಿವಿಧಿ, ಅಷ್ಟಾವರಣ ಸ್ತೋತ್ರದ ತ್ರಿವಿಧಿಗಳನ್ನು ಈ ಸಂಪುಟದಲ್ಲಿ ಸೇರಿಸದೆ ಬಿಡಲಾಗಿದೆ. ಸೊಲ್ಲಾಪುರದ ಕುಂಟೋಜಿಮಠವು ಪ್ರಕಟಿಸಿರುವ ಕ್ರಿಯಾಸಮರಸ (ಅಲ್ಲಮಪ್ರಭು ಸಿದ್ಧರಾಮೇಶ್ವರನ ವಾದದ ವಚನ)ದ ೪೮೨ ವಚನಗಳು ಹಾಗೂ ಸಿದ್ಧರಾಮ ಶಾಂತಿಶೆಟ್ಟಿ ವಾದದ ೨೪೬ ವಚನಗಳು–ಈ ಗ್ರಂಥಗಳನ್ನು ಮತ್ತು 'ಮುಕ್ತಿಕಂಠಾಭರಣ' ಸಂಕಲನ ಗ್ರಂಥವನ್ನು ಸಂಪಾದನೆಗೆ ಬಳಸಿಲ್ಲ.

ಅಂಕಿತದ ಸಮಸ್ಯೆಯಲ್ಲಿ ಯೋಗಿನಾಥಾಂಕಿತ ತ್ರಿವಿಧಿಗಳು ಕಪಿಲಸಿದ್ಧ ಮಲ್ಲಿಕಾರ್ಜುನಾ ಎಂಬ ಅಂಕಿತದ ವಚನಗಳಾಗಿ ಹಲವು ಸಂಕಲನ ಗ್ರಂಥಗಳಲ್ಲಿ ಕಂಡುಬರುವುದು ಪರಿಶೀಲನಾರ್ಹವಾಗಿದೆ. ಉದಾಹರಣೆಗೆ 'ಯೋಗಭೂಷಣನೆ, ನಿಮ್ಮ ನೆರೆಯಲು ಬೇಕು....' ಎಂಬ ಸಂಕೀರ್ಣ ತ್ರಿವಿಧಿಯು (೭೫) ಗುಮ್ಮಳಾ ಪುರದ ಸಿದ್ಧಲಿಂಗಯತಿಗಳ ಶೂನ್ಯಸಂಪಾದನೆಯಲ್ಲಿ 'ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ' ಎಂಬ ಅಂಕಿತದ ವಚನವಾಗಿ ಬಂದಿದೆ ; 'ತುಂಬಿ ಇಂಬಿನ ಕೊಳನ ....' ಎಂಬ ಸಂಕೀರ್ಣ ತ್ರಿವಿಧಿಯು (೧೦೯) 'ವಿಶೇಷಾನುಭವ ಷಟ್‌ಸ್ಥಲ' ಹಾಗೂ 'ಪ್ರಸಾದಿ ಸ್ಥಲದ ವಚನಗಳು' ಸಂಕಲನ ಗ್ರಂಥಗಳಲ್ಲಿ 'ಕಪಿಲಸಿದ್ಧಮಲ್ಲಿನಾಥಾ' ಎಂಬ ಅಂಕಿತದ ವಚನವಾಗಿ ಬಂದಿದೆ; 'ಆರೇನನೆಂದಡೆಯು ಮೌನಗೊಂಬುದೆ ಸಮತೆ....' ಎಂಬ ಸಂಕೀರ್ಣ ತ್ರಿವಿಧಿಯು (೯೦) 'ವಿಶೇಷಾನುಭವ ಷಟ್‌ಸ್ಥಲ' ಹಾಗೂ 'ಪ್ರಸಾದಿಸ್ಥಲದ ವಚನಗಳು' ಎಂಬ ಸಂಕಲನ ಗ್ರಂಥಗಳಲ್ಲಿ 'ಕಪಿಲಸಿದ್ಧಮಲ್ಲಿನಾಥಾ' ಎಂಬ ಅಂಕಿತದ ವಚನವಾಗಿ ಬಂದಿದೆ. ಸಿದ್ಧರಾಮೇಶ್ವರರ ಅನೇಕ ವಚನಗಳಲ್ಲಿ ತ್ರಿಪದಿಯ ಲಯವನ್ನು ಗುರುತಿಸಬಹುದು. ಮೂಲತಃ ಇವು ತ್ರಿಪದಿ ಗಳಾಗಿದ್ದವೆ ? ಎಂಬುದನ್ನು ಖಚಿತವಾಗಿ ಹೇಳಲಾಗದು. ಕೆಲವು ವಚನಗಳಲ್ಲಿ ತ್ರಿವಿಧಿಯ ಲಯ ಕಂಡುಬಂದರೂ ವಚನದ ಭಾವ ವಿಸ್ತರಣೆಗೊಳ್ಳುವಾಗ ತ್ರಿಪದಿಯ ಲಯದ ಹಿಡಿತ ತಪ್ಪಿದಂತೆ ಭಾಸವಾಗುತ್ತದೆ. ಜೇಡರ ದಾಸಿಮಯ್ಯನಲ್ಲಿ ತ್ರಿಪದಿಯ ಲಯ ಕಾಣುವಂತೆ ಸಿದ್ಧರಾಮೇಶ್ವರರಲ್ಲೂ ಕಾಣಬರುವುದು ಆಕಸ್ಮಿಕ ವಾಗಿರುವಂತೆ ತೋರುವುದಿಲ್ಲ. ವಚನದ ಮೂಲಸೆಲೆ ದೇಸೀ ಛಂದಸ್ಸಾದ ತ್ರಿಪದಿ ಯಲ್ಲಿಯೇ ಕಾಣಬರುತ್ತಿದೆ.

ಯೋಗಿನಾಥಾಂಕಿತ ತ್ರಿವಿಧಿಗಳು ವಚನಗಳಾಗಿರುವಂತೆ ವಚನಗಳು ಯೋಗಿ ನಾಥಾಂಕಿತ ತ್ರಿವಿಧಿಗಳಾಗಿ ಉಲ್ಲೇಖಗೊಂಡಿರುವುದನ್ನು ಸಂಕಲನ ಗ್ರಂಥಗಳಲ್ಲಿ ನೋಡಬಹುದಾಗಿದೆ. ಉದಾಹರಣೆಗೆ 'ಬಸವ ಕಾರಣ ವಸುಧೆ, ವಸುಧೆ ಕಾರಣ ಬಸವ'; 'ನಿನ್ನಾಜ್ಞೆಯಿಂದ ಲೋಕವೊಪ್ಪಿಪ್ಪುದಯ್ಯಾ....'; 'ಯೋಗಭೂಷಣ, ನಿಮ್ಮ ಆದಿ ಅಕ್ಷರಭೇದ....' ಎಂದು ಪ್ರಾರಂಭವಾಗುವ ವಚನಗಳು ಗುಮ್ಮಳಾಪುರದ ಸಿದ್ಧ ಲಿಂಗಯತಿಗಳ ಶೂನ್ಯಸಂಪಾದನೆಯಲ್ಲಿ ಯೋಗಿನಾಥಾಂಕಿತವಾಗಿದೆ. 'ಬಸವನನ್ನು ಹೊಗಳುವರ....' ಎಂದು ಪ್ರಾರಂಭವಾಗುವ ವಚನವು 'ಭಕ್ತ್ಯಾನಂದ ಸುಧಾರ್ಣವ' ದಲ್ಲಿ ಯೋಗಿನಾಥಾಂಕಿತವಾಗಿದೆ. 'ಸುರಭಿಮಧ್ಯದಲ್ಲಿಪ್ಪ ವಿರಳಕೂಪವ....' ಎಂದು ಪ್ರಾರಂಭವಾಗುವ ವಚನವು 'ಪ್ರಸಾದಿಸ್ಥಲದ ವಚನಗಳು' ಸಂಕಲನ ಕೃತಿಯಲ್ಲಿ ಯೋಗಿನಾಂಥಾಂಕಿತವಾಗಿದೆ. 'ತತ್ತ್ವಮಸಿಯಿಂದತ್ತ ಮಿಥ್ಯವಾಗಲು....' ಎಂದು ಪ್ರಾರಂಭವಾಗುವ ವಚನವು 'ವಿಶೇಷಾನುಭವ ಷಟ್‌ಸ್ಥಲ' ದಲ್ಲಿ ಯೋಗಿ ನಾಥಾಂಕಿತವಾಗಿದೆ.

ಯೋಗಿನಾಥ ಅಂಕಿತವು ಸಿದ್ಧರಾಮನಿಗೆ ಶಿವಯೋಗಿಯಾದ ಮೇಲೆಯೇ ಹೊಳೆದಿರಬೇಕೇನೊ ! ಎಂದೂ, ಯೋಗಿನಾಥ ಮತ್ತು ಚೆನ್ನಬಸವಣ್ಣ ಇವರಲ್ಲಿ ಅವಿನಾಭಾವವಿರಬೇಕು, ಅಭಿನ್ನತೆಯಿರಬೇಕೆಂದು ತೋರುತ್ತದೆ ಎಂದೂ ಡಾ॥ ಆರ್. ಸಿ. ಹಿರೇಮಠ ಅವರು ಅಭಿಪ್ರಾಯಪಡುವರು.[3] ಈ ಅಭಿಪ್ರಾಯದಲ್ಲಿ ಸತ್ಯಾಂಶವಿದೆ. ಸಾಮಾನ್ಯವಾಗಿ ಯೋಗಿನಾಥ ಅಂಕಿತವನ್ನು ತ್ರಿವಿಧಿಗಳಿಗೆ ಬಳಸಿರು ಮಂತೆ ಕಂಡುಬರುತ್ತದೆ. ವಚನಗಳಲ್ಲಿ ಯೋಗಿನಾಥ ಅಂಕಿತ ಕ್ವಚಿತ್ತಾಗಿ ಸೇರ್ಪಡೆ ಮಾಡಿರಬಹುದು. ವಿಶೇಷವೆಂದರೆ, 'ಕಪಿಲಸಿದ್ಧಮಲ್ಲಿಕಾರ್ಜುನ' 'ಯೋಗಿನಾಥ' ಎರಡೂ ಅಂಕಿತಗಳು ಒಮ್ಮೆಗೆ ಕೆಲವು ವಚನಗಳಲ್ಲಿ ಕಂಡುಬಂದಿರುವುದು (ಉದಾಹರಣೆಗೆ ವ. ೧೩೦೬, ೧೩೦೭, ೧೩೧೨, ೧೩೧೭, ೧೩೨೨). ಇಲ್ಲಿ ಎರಡೂ ಅಂಕಿತಗಳು ಉಲ್ಲೇಖಿತ ವಚನಗಳಲ್ಲಿ ಸಹಜವೆನ್ನುವಂತೆ ಬಂದಿವೆ. ಉದಾಹರಣೆಗೆ ಕೆಳಗಿನ ವಚನವನ್ನು ಪರಿಭಾವಿಸಬಹುದು.

ಯೋಗಿನಾಥನ ಒಲುಮೆ ಯೋಗಿಯಾದವಂಗಲ್ಲದೆ
ಭೋಗಿಯಾದಾತಂಗೆಲ್ಲಿಹುದಯ್ಯಾ ?
ಪಂಚಮಸ್ವರದಾಯತ ಕೋಗಿಲೆಗಲ್ಲದೆ ಕಾಗೆಗೆಲ್ಲಿಹುದೊ ?
ಕಪಿಲಸಿದ್ಧಮಲ್ಲಿಕಾರ್ಜುನ ಯೋಗಿನಾಥಾ.

(೧೩೦೭)

ಸಿದ್ಧರಾಮೇಶ್ವರರು ನಿರೂಪಿಸಿದ ಷಟ್‌ಸ್ಥಲ ವಚನಗಳು-ಕಾಗದದ ಪ್ರತಿ, ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ವಿಭಾಗದ ೭೫೭ನೇ ನಂಬರಿನ ಪ್ರತಿ. ಇದಕ್ಕೆ ಸಮಾನವಾದ ಪ್ರತಿ ೭೬೦ನೇ ನಂಬರಿನದು. ಶ್ರೀ ಪಿ ಎಂ. ಗಿರಿರಾಜು ಅವರು ಹೇಳುವ ಸಿದ್ಧರಾಮೇಶ್ವರರ ೮೫೮ ಖೋಟಾ ವಚನಗಳಲ್ಲಿ ಬಹುಪಾಲು ಇಲ್ಲಿ ಸಾಚಾ ವಚನಗಳಾಗಿವೆ. ಶ್ರೀಯುತರು ೭೫೭ ಮತ್ತು ೭೬೦ನೇ ನಂಬರಿನ ಕಾಗದದ ಪ್ರತಿಗಳು ಸಂಶಯಾತೀತವಲ್ಲದ ಪ್ರತಿಗಳೆಂದು ಪರಿಗಣಿಸುವರು. ಕಾಗದದ ಪ್ರತಿಗಳು ನಂಬಿಕೆಗೆ ಅರ್ಹವಲ್ಲವೆನ್ನುವ ಅವರ ತೀರ್ಮಾನ ಸಾಧುವಾದುದಲ್ಲ ; ಕಾಲನಮೂದಿತವಲ್ಲದ ಕಾಗದದ ಪ್ರತಿಗಳು ಇತ್ತೀಚಿನವೆನ್ನುವ ಅವರ ತೀರ್ಮಾನವೂ ಸಹಾ ಆತುರದ್ದು. ಎಲ್ಲ ಪ್ರತಿಕಾರರು ತಾವು ನಕಲು ಮಾಡಲು ಆಧರಿಸಿದ ಪ್ರತಿಗಳ ವಿವರಗಳನ್ನು ನೀಡಿಲ್ಲ. ಹೀಗಾಗಿ, ಒಂದು ಕಾಗದದ ಪ್ರತಿ ಪ್ರಾಚೀನ ಪ್ರತಿಯೊಂದನ್ನು ಮೂಲ ಆಕರವಾಗಿ ಏಕೆ ಹೊಂದಿರಬಾರದು ? ಶ್ರೀ ಪಿ. ಎಂ. ಗಿರಿರಾಜುರವರು ನಂಬಿಕೆಗೆ ಅರ್ಹವಲ್ಲವೆಂದು ತಿರಸ್ಕರಿ

---

3 ಸಿದ್ಧರಾಮೇಶ್ವರರ ವಚನಗಳು, ಪ್ರಸ್ತಾವನೆ, ಪು. ೨೧.

ಸಿರುವ ೭೫೭ ನೇ ನಂಬರಿನ ಕಾಗದದ ಪ್ರತಿಯ ಒಂದು ವಚನವನ್ನು ಪರಿಶೀಲಿಸೋಣ :

ಇಂದ್ರ ನೋಡುವಡೆ ಭಗದೇಹಿ ;
ಚಂದ್ರ ನೋಡುವಡೆ ಗುರುಪತ್ನಿಗಮನಿ ;
ಉಪೇಂದ್ರ ನೋಡುವಡೆ ಬಾರದ ಭವದಲ್ಲಿ ಬಂದ ಅವತಾರಿ.
ಬ್ರಹ್ಮ ನೋಡುವಡೆ ಸ್ವಪುತ್ರೀಪತಿ ;
ಮುನಿಗಣ ನೋಡುವಡೆ ಕುಲಹೀನರು ;
ಗಣಪತಿ ನೋಡುವಡೆ ಗಜಾನನ ;
ವೀರಭದ್ರ ನೋಡುವಡೆ ಮಹತ್ಪ್ರಳಯಾಗ್ನಿ ಸಮಕ್ರೋಧಿ ;
ಷಣ್ಮುಖ ನೋಡುವಡೆ ತಾರಕಧ್ವಂಸಿ–
ಇವರೆಲ್ಲರು ಎಮ್ಮ ಪೂಜೆಗೆ ಬಾರರು.
ನೀ ನೋಡುವಡೆ ಶ್ಮಶಾನವಾಸಿ, ರುಂಡಮಾಲಾದ್ಯಲಂಕಾರ ;
ನಿನ್ನ ವಾಹನ ಚಿದಂಗ ಆದಿವೃಷಭ.
ನಿರೂಪಿಸಾ, ಕಪಿಲಸಿದ್ಧಮಲ್ಲಿಕಾರ್ಜುನಾ.

ಈ ವಚನವು ರಾಘವಾಂಕನ 'ಸಿದ್ಧರಾಮ ಚಾರಿತ್ರ' ದಲ್ಲಿ (ಸಂಧಿ ೩. ಪದ್ಯ ೨೨) ಷಟ್ಪದಿ ರೂಪತಾಳಿದೆ.* ರಾಘವಾಂಕನು 'ಸಿದ್ಧರಾಮ ಚಾರಿತ್ರ' ರಚಿಸುವಾಗ ಸಿದ್ಧರಾಮೇಶ್ವರರ ವಚನಗಳನ್ನು ಓದಿ ಪ್ರಭಾವಿತನಾಗಿರುವಂತಿದೆ. ಹಲವೆಡೆ ಅವನು ಸಿದ್ಧರಾಮೇಶ್ವರರ ವಚನಗಳನ್ನು ಉಚಿತವೆನಿಸುವಷ್ಟು ಪ್ರಮಾಣದಲ್ಲಿ ಷಟ್ಪದಿಗೆ ರೂಪಾಂತರಿಸುವನು. ಉದಾಹರಣೆಗೆ

ವಚನ

ಸಂಸಾರವೆಂಬ ಘೋರ ಕಾಂತಾರದೊಳಗೆನ್ನನಾಸುರದಿ
ಬಿಡದಿರಾ ಬೊಪ್ಪ.
ಎನ್ನ ಬೆಂಬಳಿಯೊಳಿರ್ದುದ ಸಾಕಾ ಬೊಪ್ಪ.

(ವ. ೭೬೧)

ಷಟ್ಪದಿ

ಹಿರಿದೆನಿಪ ಘೋರ ಸಂಸಾರದಾರಣ್ಯದೊಳು
ಹರವರಿಯ ಕಾಮನೆಂದೆಂಬ ಬೇಂಟೆಯ ಬೇಡ
ನುರವಣೆಯನನ್ಯಾಯ ಮಾಣಸ್ಸೆ ಎಂಬ ಗೀತವ ಹಾಡಿ ಸುಖದೊಳಿರಲು।

(೪. ೨೫)

*ಈ ಸಂಗತಿಯನ್ನು ತಿಳಿಸಿ ಉಪಕರಿಸಿದವರು ಮಾನ್ಯ ಗುರುಗಳಾದ ಡಾ॥ ಎಂ. ಚಿದಾನಂದ ಮೂರ್ತಿಯವರು.

ವಚನ

ಕಂಡೆನಯ್ಯಾ, ನೀನೊಡ್ಡಿದೊಡ್ಡಣೆಯ.
ಕಿರಿಕಿರಿದಾಗಿ ತರಿದಡೆ ಹಿರಿಹಿರಿದಾಗಿ ನೆನೆವೆನು ;
ಕಾಯುವ ಬೇಡಿದಡೀವೆನು.
ಪ್ರಾಣ ನಿಮ್ಮದಾಗಿ, ಉಳಿದ ಹಂಗು ನಮಗಿಲ್ಲ,
ಕಪಿಲಸಿದ್ಧಮಲ್ಲಿನಾಥಯ್ಯಾ.

(ವ. ೩೦೪)

ಷಟ್ಪದಿ

ಅಯ್ಯ ಕೇಳಯ್ಯ ನೀನೊಡ್ಡಿದೊಡ್ಡಿದ ಸಮಂ
ಮೆಯ್ಯನಿರಿದಿರಿದು ಕಿರಿಕಿರಿದಾಗಿ ಕಡಿದಡಂ
ಅಯ್ಯಯೆಂದಳುಕೆ ಹಿರಿಹಿರಿದಾಗಿ ನೆನೆವೆ ಕೇಳಯ್ಯ ಅಯ್ಯಯೆನುತ।
ಕಯ್ಯ ಲಾಕುಳವನಂದಲುಗುತ್ತ ಹಾಡುತ್ತ
ಲೊಯ್ಯನೀ ಕಾಯವಿವಳಿಗೆ ಜೀವ ನಿಮಗೆಂದು
ಸಯ್ಯಮಿವ್ರತನಿರತ ಶ್ರೀ ಸಿದ್ಧರಾಮನಾಥಂ ಹಾಡಿದಂ ಗೀತವ॥

(೬.೬)

ಮೇಲೆ ಉಲ್ಲೇಖಿಸಿರುವ 'ಇಂದ್ರ ನೋಡುವಡೆ ಭಗದೇಹಿ' ಎಂದು ಪ್ರಾರಂಭವಾಗುವ ವಚನವು 'ಸಿದ್ಧರಾಮ ಚಾರಿತ್ರ'ದಲ್ಲಿ ಷಟ್ಪದಿಗೆ ರೂಪಾಂತರಗೊಂಡಿರುವುದನ್ನು ಪರಿಶೀಲಿಸೋಣ :

ಸರಸಿಜಸುತಂ ಸ್ವಪುತ್ರೀವರಂ ವಾಯು ವಿಷ
ಧರನಿಕರಪೀತಾವಶೇಷನಿನಸತ್ಯುಷ್ಣ
ಕರನಿಂದು ದೋಷಾಕರಂ ವಿಷ್ಣು ಪುಷ್ಪಾಕ್ಷನಗ್ನಿ ತಾಂ ಸರ್ವಭಕ್ಷಂ ।
ವರಮುನಿಗಳೆಲ್ಲ ಕುಸ್ಥಾನಜಾತರು ಮಹಾ
ಸುರಪನತಿಜಾರನಿಂತಿವರಾಗದಿಂದೆಮ್ಮ
ಸರಿ ಸರ್ವಧರ್ಮರೂಪಂ ವೃಷಭನಾಚಾರ್ಯನಾದಪಂ ಹೋಗೆಂದೆನು॥

'ಇಂದ್ರ ನೋಡುವಡೆ ಭಗದೇಹಿ' ಎಂಬುದು 'ಮಹಾಸುರಪನತಿಜಾರಂ' ಎಂದಾಗಿಯೂ, 'ಚಂದ್ರ ನೋಡುವಡೆ ಗುರುಪತ್ನಿಗಮನಿ' ಎಂಬುದು 'ಇಂದು ದೋಷಾಕರಂ' ಎಂದಾಗಿಯೂ, 'ಉಪೇಂದ್ರ ನೋಡುವಡೆ ಬಾರದ ಭವದಲ್ಲಿ ಬಂದ ಅವತಾರಿ'

ಎಂಬುದು ವಿಷ್ಣು ಪುಷ್ಪಾಕ್ಷಂ ಎಂದಾಗಿಯೂ, ‘ಬ್ರಹ್ಮ ನೋಡುವಡೆ ಸ್ವಪುತ್ರೀ ಪತಿ’ ಎಂಬುದು ‘ಸರಸಿಜಸುತಂ ಸ್ವಪುತ್ರೀವರಂ’ ಎಂದಾಗಿಯೂ, ‘ಮುನಿಗಣ ನೋಡುವಡೆ ಕುಲಹೀನರು’ ಎಂಬುದು ‘ವರಮುನಿಗಳೆಲ್ಲ ಕುಸ್ಥಾನಜಾತರು’ ಎಂದಾಗಿಯೂ ರೂಪಾಂತರಗೊಂಡಿರುವುದು ಗಮನಾರ್ಹ. ವಚನವು ಇನ್ನಷ್ಟು ಮುಂದುವರೆದಿದೆಯಾದರೂ ರಾಘವಾಂಕನು ವಚನದಲ್ಲಿ ತನಗೆ ಅಗತ್ಯವೆನಿಸುವಷ್ಟು ಭಾಗಗಳನ್ನು ಮಾತ್ರ ಬಳಸಿಕೊಂಡಿರುವನು. ೭೫೭ನೇ ನಂಬರಿನ ಕಾಗದದ ಪ್ರತಿ ಶ್ರೀ ಪಿ. ಎಂ. ಗಿರಿರಾಜುರವರ ಪ್ರಕಾರ ಖೋಟಾ ವಚನಗಳನ್ನೊಳಗೊಂಡ ಪ್ರತಿಯಾಗಿದ್ದರೆ ‘ಇಂದ್ರ ನೋಡುವಡೆ ಭಗದೇಹಿ....’ ಎಂದು ಪ್ರಾರಂಭವಾಗುವ ವಚನ ‘ಸಿದ್ಧರಾಮ ಚಾರಿತ್ರ’ದಲ್ಲಿ ಉಲ್ಲೇಖಗೊಳ್ಳುವುದು ಹೇಗೆ ಸಾಧ್ಯ ? ‘ಸಿದ್ಧರಾಮ ಚಾರಿತ್ರ’ ದಲ್ಲಿ ಈ ವಚನ ರೂಪಾಂತರಗೊಂಡು ಬಂದಿರಬೇಕಾದರೆ ರಾಘವಾಂಕನ ಈ ವಚನ ಆಕಾಲಕ್ಕೆ ಬಳಕೆಯಲ್ಲಿದ್ದಿರಬೇಕು. ಈ ವಾಸ್ತವ ಸತ್ಯವನ್ನು ಒಪ್ಪಿಕೊಂಡರೆ, ೭೫೭ನೇ ನಂಬರಿನ ಕಾಗದದ ಪ್ರತಿ ಖೋಟಾ ವಚನಗಳನ್ನೊಳಗೊಂಡದ್ದೆಂಬ ವಾದ ಅಸಮಂಜಸವಾಗುತ್ತದೆ. ನಮ್ಮ ವಾದಕ್ಕೆ ಉಪಷ್ಟಂಭಕವಾಗಿ ಇನ್ನಷ್ಟು ಆಧಾರವನ್ನು ಕೊಡಬಹುದು. ಸಿದ್ಧರಾಮೇಶ್ವರರು ತಾವು ಮಾಡಿದ ಎರಡು ಪವಾಡಗಳನ್ನು ಪ್ರಾಸಂಗಿಕವಾಗಿ ತಮ್ಮ ವಚನಗಳಲ್ಲಿ ಉಲ್ಲೇಖಿಸಿರುವುದು. ಮೊದಲನೆಯದು, ಏಲೇಶನಿಗೆ ಪ್ರಾಣವಿತ್ತುದು. ಮಾಡದುದ ಮಾಡಲು ದೈವಬಲವೆಂಬುದೀಲೋಕ. ಎಲೆ ಕಪಿಲಸಿದ್ಧಮಲ್ಲಯ್ಯಾ, ಏಲೇಶಂಗೆ ಪ್ರಾಣವ ಕೊಟ್ಟುದಾವ ಬಲ ಹೇಳಾ, ಸೆರಗೊಡ್ಡಿ ಬೇಡುವೆ. ಈ ವಚನವು ೭೫೭ನೇ ನಂಬರಿನ ಪ್ರತಿಯಲ್ಲಿ ಬಂದಿದ್ದು, ‘ಸಿದ್ಧರಾಮ ಚಾರಿತ್ರ’ ದಲ್ಲಿ ಈ ಪವಾಡ ವಿವರಣೆಗೊಂಡಿದೆ (ನೋಡಿ ಸಂ. ೯. ಪ. ೨೭–೩೫). ಎರಡನೆಯದು ವಿಷದ ಪವಾಡ. ‘ವಿಷ ಉಂಡು ದಣಿಯಲಾರದೆ ವಿಷ ನೈವೇದ್ಯವ ಮಾಡಿಕೊಂಡ ನೋಡಾ, ಈ ದೇವ’ ಎಂಬ ಈ ಸಾಲು ೭೫೭ ನೇ ನಂಬರಿನ ಪ್ರತಿಯ ವಚನವೊಂದರಲ್ಲಿ ಬಂದಿದ್ದು ‘ಸಿದ್ಧರಾಮ ಚಾರಿತ್ರ’ದಲ್ಲಿ ಈ ಪವಾಡ ವಿವರಣೆಗೊಂಡಿದೆ (ನೋಡಿ : ಸಂ. ೫. ಪ. ೯–೧೬). ನರಕದಲ್ಲಿದ್ದ ಬಿಲ್ಲೇಶ ಬೊಮ್ಮಯ್ಯನನ್ನು ಹಾಗೂ ಇತರ ನರಕಿಗಳನ್ನು ಅಲ್ಲಿಂದ ಮೇಲೆತ್ತಲು ಸಹಸ್ರ ಕಂಡುಗ ಕಪಿಲೆಯಮೃತವನ್ನು ಶಿವನು ಲಂಚವಾಗಿ ಪಡೆದ (ವ. ೧೩೯೨) ಪ್ರಸಂಗ ‘ಸಿದ್ಧರಾಮ ಚಾರಿತ್ರ’ದಲ್ಲಿ ವರ್ಣಿತವಾಗಿದೆ (ಸಂ. ೪. ಪ. ೩೭–೩೯). ಇಲ್ಲಿ ಶಿವನು ಲಂಚವಾಗಿ ಕೇಳುವುದು ಆದಿಲಿಂಗಕ್ಕೆ 12 ಸಾವಿರ ಸೊಲಿಗೆ ತುಪ್ಪದ ಅಭಿಷೇಕ ಹಾಗೂ ನಿರ್ಧನಿಕರಾದ ತಂದೆ ತಾಯಿಯರ ಸಾವಿರ ಕನ್ಯೆಯರ ಕಲ್ಯಾಣ ಕಾರ್ಯವನ್ನು.

ಮೇಲಿನ ಆಧಾರಗಳಿಂದ ಶ್ರೀ ಪಿ.ಎಂ. ಗಿರಿರಾಜುರವರು ಪಟ್ಟಿಮಾಡಿರುವ ಖೋಟಾ ವಚನಗಳನ್ನು ಅವರು ಹೇಳಿರುವ ಕಾರಣಕ್ಕಾಗಿ ಸಾರಾಸಗಟು ಖೋಟಾ

ವಚನಗಳೆಂದು ಕೈಬಿಡಲಾಗದು. ಸಿದ್ಧರಾಮೇಶ್ವರರ ವಚನಗಳ ಶೈಲಿಯನ್ನು ಚೆನ್ನಾಗಿ ಅಧ್ಯಯನ ಮಾಡಿದವರಿಗೆ ಖೋಟಾ ವಚನಗಳೆಂದು ತಲೆಪಟ್ಟಿ ಅಂಟಿಸಿಕೊಂಡಿರುವ ವಚನಗಳು ಖೋಟಾ ಆಗಿರಲಿಕ್ಕೆ ಸಾಧ್ಯವಿಲ್ಲ. ಖೋಟಾ ವಚನಗಳೆಂದು ಪಟ್ಟಿ ಮಾಡಿದವುಗಳಲ್ಲಿ ಬಹಳಷ್ಟು ವಚನಗಳು ಸಾಹಿತ್ಯಕವಾಗಿ ಮೌಲಿಕವಾಗಿವೆ. 'ಅರುವತ್ತೆಂಟು ಸಾವಿರ ವಚನಂಗಳ ಹಾಡಿ ಹಾಡಿ ಸೋತಿತೆನ್ನ ಮನ ನೋಡಯ್ಯಾ'; 'ಅಲ್ಲಯ್ಯಗಳ ವಚನ ಎರಡೆಂಬತ್ತು ಕೋಟಿ....' ; 'ಎಲ್ಲ ಪ್ರಮಥರು ಲಿಂಗವ ಧರಿಸುತ್ತಿರಲು....' ಇಂತಹ ಐತಿಹಾಸಿಕ ಮಹತ್ವವುಳ್ಳ ವಚನಗಳೂ ಖೋಟಾ ವಚನಗಳ ಪಟ್ಟಿಗೆ ಸೇರುವುದಾದರೆ ಹೇಳುವುದಾದರೂ ಏನಿದೆ ? ಒಂದು ವೇಳೆ ಶ್ರೀ ಪಿ. ಎಂ. ಗಿರಿರಾಜುರವರು ಹೇಳುವ ಖೋಟಾ ವಚನಗಳನ್ನೆಲ್ಲಾ ತೆಗೆದುಬಿಟ್ಟರೆ ಸಿದ್ಧರಾಮೇಶ್ವರರ ವಚನಗಳ ಸ್ವರೂಪ ಹೇಗಿರಬಹುದು–ರಕ್ತ ಮಾಂಸಗಳಿಲ್ಲದಂತ ಅಸ್ತಿಪಂಜರದಂತೆ !

ಇನ್ನೊಂದು ಮಾತನ್ನು ನಾವಿಲ್ಲಿ ಸ್ಪಷ್ಟಪಡಿಸಬೇಕಾಗಿದೆ : ಯೋಗಿನಾಥಾಂಕಿತ ಗಳು ಸಿದ್ಧರಾಮೇಶ್ವರರವಲ್ಲ ಎಂಬ ಅಭಿಪ್ರಾಯ ನಮ್ಮದಲ್ಲ. ಅವುಗಳನ್ನು ಕೈಬಿಡ ಬೇಕು ಎಂಬ ಉದ್ದೇಶವೂ ನಮ್ಮದಲ್ಲ. ಯೋಗಿನಾಥಾಂಕಿತದಲ್ಲಿ ಬಂದಿರುವವು ತ್ರಿಪದಿಗಳು–ಹಾಡುಗಳು. ಅವನ್ನು ಹಾಗೂ ಸಿದ್ಧರಾಮೇಶ್ವರರ ಸ್ವರಬೊಲ್ಲಿಗಳನ್ನು ಪ್ರತ್ಯೇಕವಾಗಿ ಬೇರೆ ಸಂದರ್ಭದಲ್ಲಿ ಪ್ರಕಟಿಸಬೇಕೇ ಹೊರತು ವಚನಗಳ ಜೊತೆ ಸೇರಿಸುವುದು ಬೇಡವೆಂದು ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿಯ ಸಂಪಾದಕ ಮಂಡಲಿ ತೀರ್ಮಾನಿಸಿರುವುದರಿಂದ ಅವನ್ನು ಇಲ್ಲಿ ಕೊಡಲಾಗಿಲ್ಲ.

೭೫೭ನೇ ನಂಬರಿನ ಕಾಗದದ ಪ್ರತಿ ಷಟ್‌ಸ್ಥಲ ವಚನಗಳ ಪ್ರತಿ. ಸಂಕಲನಕಾರ ಹಾಗೆಂದು ಕರೆದು ವಚನಗಳನ್ನು ಜೋಡಿಸಿದ್ದರೂ ಷಟ್‌ಸ್ಥಲಗಳ ಉಲ್ಲೇಖ ವಿಂಗಡಣೆಯಲ್ಲಿ ಕಂಡುಬರುವುದಿಲ್ಲ. (ಸ್ಥಲ ವಿಂಗಡಣೆಯಲ್ಲಿ ಅವನದೇ ಆದ ಒಂದು ವಿಧಾನವಿರುವಂತಿದೆ.) ನಾವು ಈ ಪ್ರತಿಯಲ್ಲಿರುವಂತೆಯೇ ವಚನಗಳನ್ನು ಕ್ರಮಾಗತ ವಾಗಿ ಕೊಟ್ಟಿರುವೆವು. ಈ ಪ್ರತಿಯಲ್ಲಿ ಸಂಕಲನಕಾರನು ಸಿದ್ಧರಾಮೇಶ್ವರರ ಅಂಕಿತ ವಲ್ಲದ ಕೆಲವು ವಚನಗಳನ್ನೂ ಸೇರಿಸಿರುವನು. ಉದಾಹರಣೆಗೆ

ವಚನ	ಅಂಕಿತ
"ಎನ್ನ ಕಾಯ ಪ್ರಸಾದವಾಯಿತ್ತು...."	ಘನಲಿಂಗ ಮೋಹದ ಚೆನ್ನಮಲ್ಲಿಕಾರ್ಜುನಯ್ಯಾ
"ಲಿಂಗಸುಖದಲ್ಲಿ ಮನ ವೇದ್ಯವಾಯಿತ್ತು, ಇನ್ನೆಂತಯ್ಯಾ...."	ಚೆನ್ನಮಲ್ಲಿಕಾರ್ಜುನಪ್ರಭುವೆ
"ಕಾಯ ಪ್ರಸಾದವೆನ್ನ ಧನ ಪ್ರಸಾದವೆನ್ನ...."	ಚೆನ್ನಮಲ್ಲಿಕಾರ್ಜುನಯ್ಯಾ
"ಪಾತಾಳವಿತ್ತಿತ್ತ ಪಾದಂಗಳತ್ತತ್ತ...."	ಚೆನ್ನಮಲ್ಲಿಕಾರ್ಜುನಯ್ಯಾ

"ಒಪ್ಪುವ ಶ್ರೀವಿಭೂತಿಯ ನೊಸಲಲ್ಲಿ ಧರಿಸಿ...."	ಚೆನ್ನಮಲ್ಲಿಕಾರ್ಜುನಾ
"ಓಂ ಎಂದಲ್ಲಿ ನಿರಾಕಾರವಾದೆಯಲ್ಲ ..."	ನಿಷ್ಕಳಂಕ ಮಲ್ಲಿಕಾರ್ಜುನಾ
"ಎನ್ನ ತನ್ನವನೆನಿಸಿ ಮನ್ನಿಸಿದ .."	ಶ್ರೀಗುರುಮಲ್ಲಿಕಾರ್ಜುನಾ
"ಕಲ್ಪಿತೋದಕ ಒಂದು ಅರ್ಪಣೋದಕ...."	ಶ್ರೀಗುರುಮಲ್ಲಿಕಾರ್ಜುನಾ
ಹಿತವಿದೆ ಸಕಲಲೋಕದ ಜನ್ಮಕ್ಕೆ .."	ಶ್ರೀಮಲ್ಲಿಕಾರ್ಜುನಾ
"ಏಳುಕೋಟಿ ಮಹಾಮಂತ್ರ ..."	ಸದ್ಗುರು ಮಲ್ಲಿಕಾರ್ಜುನ

ಸಿದ್ಧರಾಮೇಶ್ವರರ ವಚನಗಳನ್ನು ಸಂಪಾದಿಸುವಾಗ ಒಂದು ವಚನ ಬೇರೆ ಹಸ್ತಪ್ರತಿಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳಿಗೆ ಒಳಗಾಗಿ ಮತ್ತೊಂದು ಸ್ವತಂತ್ರ ವಚನವಾಗಿ ಬಂದಿರುವುದು ನಮಗೆ ಕಂಡುಬಂದಿದೆ. ಉದಾಹರಣೆಗೆ 'ವ್ಯಾಘ್ರದಿಂ ದಿನ ರಾತ್ರಿಗಳಲ್ಲಿಯು....' ಎಂಬ ವಚನದ (ವ. ೭೩೧) ಉತ್ತರಾರ್ಧವು (ಶಿವಾಚಾರ ಸಂಪನ್ನರಾಗಿ....) ಒಂದು ಸ್ವತಂತ್ರ ವಚನವಾಗಿ 'ಪ್ರಸಾದಿಸ್ಥಲದ ವಚನಗಳು' ಸಂಕಲನ ಗ್ರಂಥದಲ್ಲಿ ಕಂಡು ಬಂದಿದೆ. 'ಉಸುರ ಹಿಡಿದು ಮಜ್ಜನಕ್ಕೆರೆವೆನಯ್ಯಾ....' (ವ. ೨೨೧) ಎಂದು ಪ್ರಾರಂಭವಾಗುವ ವಚನವು 'ಎನ್ನ ತನುವೆ ಅಗ್ಗವಣಿಯ ಬಿಂದಿಗೆ ಮನವೆ ಸಿಂಹಾಸನ' ಎಂಬ ಒಂದು ಸಾಲನ್ನು ಪ್ರಾರಂಭದಲ್ಲಿ ಹೊಸದಾಗಿ ಸೇರಿಸಿಕೊಂಡು ಒಂದು ಸ್ವತಂತ್ರ ವಚನವಾಗಿ ಕಂಡುಬಂದಿದೆ. 'ಎನಿಸೆನಿಸಾದಳೆ ಆನಿಸರಲ್ಲಿ ನಿಲ್ಲಳು ...' (ವ. ೨೪೩) ಎಂಬ ವಚನವು 'ಎನಿತಾದಡನಿತರಲ್ಲಿಯೂ ನಿಲ್ಲಳು ....' ಎಂದು ಸ್ವಲ್ಪ ಪಾಠ ವ್ಯತ್ಯಾಸದೊಂದಿಗೆ ಒಂದು ಸ್ವತಂತ್ರ ವಚನವಾಗಿ ಕಂಡುಬಂದಿದೆ. 'ಎಮ್ಮ ನಲ್ಲ ಮನೆಯೊಳಗೆ ಏಕಾಂತಂಬೊಕ್ಕಹನು....' (ವ. ೨೪೭) ಎಂಬ ವಚನವು 'ಎನ್ನ ನಲ್ಲನೆನ್ನಮನದೊಳಗೆ....' ಎಂದು ಸ್ವಲ್ಪ ಪಾಠ ವ್ಯತ್ಯಾಸದೊಂದಿಗೆ ಒಂದು ಸ್ವತಂತ್ರ ವಚನವಾಗಿ ಕಂಡುಬಂದಿದೆ. 'ಅಯ್ಯಾ ನೀವು ಕೈಯ ಬಿಚ್ಚಲೊಡನೆ ಅಣ್ಣ ಕೇಳಿರಣ್ಣ, ಬ್ರಹ್ಮ ತಾ ಮೈಮರೆದ ವಿಷ್ಣು ತಾ ಮರೆದೊರಗಿದ ವೇದಗಳು ತವುತವುಗೆ ದೆಸೆದೆಸೆ ಬಾಯಬಿಟ್ಟವಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನನ ಮೈಯ ಶಬ್ದಕ್ಕೆ' (ವ. ೮೧) ಎಂಬ ವಚನವು ಪಾಠ ವ್ಯತ್ಯಾಸದೊಂದಿಗೆ ಬೇರೊಂದು ಸ್ವತಂತ್ರ ವಚನವಾಗಿ,(ವ.೮೭೯) ಹೀಗೆ ಬಂದಿದೆ. 'ಅಯ್ಯಾ ನಿಮ್ಮ ಕೈ ಬಿರ್ಚಲೊಡನೆ ಬ್ರಹ್ಮಾಂಡಂಗಳು ತಳತಳಿಸುತ್ತವೆ. ಬ್ರಹ್ಮ ಮರೆದನು, ವಿಷ್ಣು ತಾನೊರಗಿದನು, ವೇದಂಗಳು ದೆಸೆದೆಸೆಗೆ ಬಾಯ್ವಿಡಲು, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ, ನಿಮ್ಮ ಕೈಯ ಶಬ್ದದ ಹವಣೆಂತುಂಟು.' (ವ. ೮೧ ಮತ್ತು ವ. ೮೭೯ ರಲ್ಲಿ ಒಂದನ್ನು ಉಳಿಸಿಕೊಂಡು (ವ. ೮೭೯), ಇನ್ನೊಂದನ್ನು (ವ. ೮೧) ಬಿಡಬಹುದಿತ್ತು. ಎಷ್ಟೇ ಎಚ್ಚರವಹಿಸಿದರೂ ಕಣ್ತಪ್ಪಿನಿಂದಾಗಿ ಈ ಸಂಪುಟದಲ್ಲಿ ಎರಡೂ ವಚನಗಳು ಉಳಿದುಬಿಟ್ಟಿವೆ.)

ಮುದ್ರಿತ ಶ್ರೀ ಸಿದ್ಧರಾಮೇಶ್ವರರ ವಚನಗಳು ಗ್ರಂಥದಲ್ಲಿ (ಸಂಪಾದಕರು : ಡಾ॥ ಆರ್. ಸಿ. ಹಿರೇಮಠ) ವ. ೧೩೧೩ ರಿಂದ ೧೩೧೯ರ ವರೆವಿಗೆ ಬಂದಿರುವ

ಏಳು ವಚನಗಳು 'ಸದ್ಗುರು ಮಲ್ಲಿಕಾರ್ಜುನ' ಎಂಬ ಅಂಕಿತವನ್ನು ಒಳಗೊಂಡಿವೆ. ವ. ೩೬೩ 'ಶ್ರೀಗುರುಮಲ್ಲೇಶ್ವರಾ' ಎಂಬ ಅಂಕಿತವನ್ನೊಳಗೊಂಡಿದೆ. ವ. ೩೬೨ 'ಶ್ರೀಗುರುಮಲ್ಲಿಕಾರ್ಜುನ' ಎಂಬ ಅಂಕಿತವನ್ನು ಒಳಗೊಂಡಿದೆ. ವ. ೧೩೨೭ 'ಮಲ್ಲಿಕಾರ್ಜುನಾ' ಎಂಬ ಅಂಕಿತವನ್ನೊಳಗೊಂಡಿದೆ. ವ. ೬೫೫, ವ. ೭೫೭ 'ಶ್ರೀಮಲ್ಲಿಕಾರ್ಜುನಾ' ಎಂಬ ಅಂಕಿತವನ್ನೊಳಗೊಂಡಿದೆ. ಇವು ಸಿದ್ಧರಾಮೇಶ್ವರರ ವಚನಗಳೆನ್ನುವುದರಲ್ಲಿ ಸಂದೇಹ, ಆದ್ದರಿಂದ ಕೈಬಿಡಲಾಗಿದೆ. ನಮ್ಮ ಗಮನಕ್ಕೆ ಬಂದ 'ಕುತ್ತಿಗೆಯನೆತ್ತಿ ಸ್ಥಾವರಲಿಂಗಕ್ಕೆ ಅಷ್ಟವಿಧಾರ್ಚನೆ....' ಎಂದು ಪ್ರಾರಂಭವಾಗುವ ವಚನವು 'ಸದ್ಗುರು ಮಲ್ಲಿಕಾರ್ಜುನ' ಎಂಬ ಅಂಕಿತವುಳ್ಳದ್ದು ; 'ಆರು ಗುಣವು ಹಿಂಗಿ ಭಕ್ತ ಲಿಂಗಸಂಗಿಯಾಗಿ....' ಎಂದು ಪ್ರಾರಂಭವಾಗುವ ವಚನವು 'ಸದುಗುರು ಚೆನ್ನ ಮಲ್ಲೇಶ್ವರ' ಎಂಬ ಅಂಕಿತವುಳ್ಳದ್ದು ; 'ನಿರ್ಮಲನ ಸಲಹಲ್ಕೆ ನಿರ್ಮಾಯ ಬಂದನೈ....' ಎಂದು ಪ್ರಾರಂಭವಾಗುವ ವಚನವು 'ಗುರು ಮಲ್ಲಿಕಾರ್ಜುನಾ' ಎಂಬ ಅಂಕಿತವುಳ್ಳದ್ದು ; 'ಎನ್ನ ತನ್ನವನೆನಿಸಿ ಮನ್ನಿಸಿದ ಭಕ್ತಿಯೊಳು....' 'ನಾದಬಿಂದುವಿನಲ್ಲಿ ಆದಿಯಕ್ಷರ ದ್ವಯವನೆಯ್ದಿಸಿದ....' 'ಆರನಾದಡೂ ಅಯ್ಯಾ ಎಂದೆನಲಾರೆ ' ಎಂದು ಪ್ರಾರಂಭವಾಗುವ ವಚನಗಳು 'ಶ್ರೀ ಮಲ್ಲಿಕಾರ್ಜುನಾ' ಎಂಬ ಅಂಕಿತವುಳ್ಳದ್ದು. 'ಸಂಸಾರಸಾಗರದ ನಡುಗಡಲ....' ಎಂದು ಪ್ರಾರಂಭವಾಗುವ ವಚನವು 'ಶ್ರೀ ಮಲ್ಲಿನಾಥಲಿಂಗ' ಎಂಬ ಅಂಕಿತವುಳ್ಳದ್ದು. ಇವು ಸಿದ್ಧರಾಮೇಶ್ವರರ ವಚನವೆನ್ನುವುದರಲ್ಲಿ ಸಂದೇಹ, ಆದ್ದರಿಂದ ಕೈಬಿಡಲಾಗಿದೆ. 'ಕೆರೆಯು ಗಂಗೆಯೆಂದು ಅರಿಯದೆ ಸ್ಥಾಪಿಸಿದೆನಲಾ....' ಎಂದು ಪ್ರಾರಂಭವಾಗುವ ವಚನವು ಸಿದ್ಧರಾಮೇಶ್ವರ-ಶಾಂತಶೆಟ್ಟಿ ಇವರ ನಡುವೆ ನಡೆದ ಸಂವಾದದ ವಚನ. ವಾದದ ವಚನಗಳನ್ನು ಕೈಬಿಡಬೇಕೆಂದು ಸಂಪಾದಕ ಮಂಡಳಿ ನಿರ್ಣಯ ಕೈಗೊಂಡಿರುವ ಕಾರಣ ಈ ವಚನವನ್ನು ಬಿಡಲಾಗಿದೆ.

ಈ ಸಿದ್ಧರಾಮೇಶ್ವರರ ವಚನಸಂಪುಟವು ಜನಪ್ರಿಯ ಆವೃತ್ತಿ. ಹೀಗಾಗಿ ಇದರಲ್ಲಿ ಶಕಟರೇಫದ ಬಳಕೆಯನ್ನಾಗಲೀ, ಪಾಠಾಂತರಗಳನ್ನು ಅಡಿಟಿಪ್ಪಣಿರೂಪದಲ್ಲಿ ಕೊಡುವುದನ್ನಾಗಲೀ ಮಾಡಿಲ್ಲ. ಸಾಧ್ಯವಾದಷ್ಟು ಹೆಚ್ಚಿನ ಸಂಖ್ಯೆಯ ಪ್ರತಿಗಳನ್ನು ಆಧರಿಸಿ ವಚನಗಳ ಶುದ್ಧಪಾಠವನ್ನು ಕೊಡುವುದು ಸಮಗ್ರ ವಚನ ಸಾಹಿತ್ಯದ ಜನಪ್ರಿಯ ಆವೃತ್ತಿಯ ಉದ್ದೇಶ. ಡಾ|| ಆರ್. ಸಿ. ಹಿರೇಮಠ ಅವರು ಸಂಪಾದಿಸಿದ ವಚನಗಳಿಗಿಂತ ಈ ಸಂಪುಟದಲ್ಲಿ ಸ್ವಲ್ಪ ಹೆಚ್ಚಿನ ವಚನಗಳಿವೆ. ಹಿಂದೆ ತಿಳಿಸಿರುವಂತೆ ಸಿದ್ಧರಾಮೇಶ್ವರರವಲ್ಲದ ಹಲವು ವಚನಗಳನ್ನು ಈ ಸಂಪುಟದಲ್ಲಿ ತೆಗೆದುಹಾಕಲಾಗಿದೆ. ನಾವು ಎಷ್ಟೇ ಎಚ್ಚರವಹಿಸಿದರೂ ನಮ್ಮ ಕಣ್ತಪ್ಪಿ ಈ ಸಂಪುಟದಲ್ಲಿ ವ. ೪ (೮೮೨), ೨೦೦ (೯೭೨), ೩೪೫ (೯೩೯), ೬೩೦ (೧೧೨೨) ೬೬೦ (೮೬೮) —ಈ ಐದು ವಚನಗಳು ಪುನರುಲ್ಲೇಖಗೊಂಡಿವೆ. ಈ ತಪ್ಪಿಗಾಗಿ ವಿಷಾದಿಸುತ್ತೇವೆ. ಈ ಸಂಪುಟದಲ್ಲಿ ಬಂದಿರುವಷ್ಟೇ ವಚನಗಳು ಸಿದ್ಧರಾಮೇಶ್ವರರ

ನಿಜವಾದ ವಚನಗಳೆಂದು ನಾವು ವಾದಿಸಹೋಗುವುದಿಲ್ಲ. ಸಂಶೋಧನೆಯಲ್ಲಿ ಸತ್ಯದೆಡೆಗೆ ಸಾಗುವುದು ಮುಖ್ಯವೇ ಹೊರತು ನಮ್ಮ ಪೂರ್ವಾಗ್ರಹವನ್ನು ಸಾಧಿಸುವುದಲ್ಲ. ಇಲ್ಲಿ ನನ್ನದೇ ಸರಿಯಾದುದೆನ್ನುವ ಹಠ, ಅಹಂಕಾರ ಸಲ್ಲದು. ಸತ್ಯದೆದುರು ನಾವೆಲ್ಲರೂ ಸಣ್ಣವರೇ. ಕಾಲನ ನಿರಂತರ ಪ್ರವಾಹದಲ್ಲಿ ಒಂದಲ್ಲ ಒಂದು ದಿವಸ ಸತ್ಯವನ್ನು ಮುಸುಕಿರುವ ತೆರೆ ಸರಿಯಲೇ ಬೇಕು. ಈ ಅನುಭವದ ಹಿನ್ನೆಲೆಯಲ್ಲಿ ನಾವು ನಮ್ಮ ಪ್ರಾಂಜಲ ಪ್ರಯತ್ನವನ್ನು ನಡೆಸಿರುವೆವು. ನಮ್ಮ ಸಂಪುಟದಲ್ಲಿ ತಪ್ಪುಗಳೇ ಇಲ್ಲವೆಂದಲ್ಲ, ಇರಬಹುದು. ಪ್ರಾಜ್ಞರು ಸಹೃದಯರು ಅವನ್ನು ತೋರಿಸಿಕೊಟ್ಟರೆ ಮುಂದೆ ತಿದ್ದಿಕೊಳ್ಳುವೆವು.

ಈ ಸಂಪುಟವ ಕೆಲಸ ಅತ್ಯಂತ ಜವಾಬ್ದಾರಿಯುತವಾದುದೆಂದು ನಾವು ಭಾವಿಸಿರುವೆವು. ಈ ಸಂಪುಟದ ಸಂಪಾದನೆಯ ಸಂದರ್ಭದಲ್ಲಿ ನನಗೆ ಎದುರಾದ ಸಮಸ್ಯೆಗಳು ಹಲವಾರು. ಅವನ್ನೆಲ್ಲ ಸಂಪಾದಕ ಮಂಡಲಿ ತಾಳ್ಮೆಯಿಂದ ಕೇಳಿ ಪರಿಹಾರ ತೋರಿಸಿದೆ. ಅದಕ್ಕಾಗಿ ನಾನು ಮಂಡಲಿಯ ಎಲ್ಲ ಸದಸ್ಯರಿಗೂ ಋಣಿಯಾಗಿರುವೆನು. ಸಮಸ್ಯೆಗೆ ಪರಿಹಾರ ಕಾಣದೆ ವಿಕ್ಷಿಪ್ತ ಸ್ಥಿತಿಯಲ್ಲಿದ್ದಾಗ ನನ್ನಲ್ಲಿ ನೈತಿಕವಾಗಿ ಧೈರ್ಯ ತುಂಬಿದವರು ಡಾ॥ ಎಂ. ಚಿದಾನಂದಮೂರ್ತಿಯವರು ಹಾಗೂ ಆತ್ಮೀಯ ಮಿತ್ರರಾದ ಡಾ॥ ಎಂ. ಎಂ. ಕಲ್ಬುರ್ಗಿ ಅವರು. ನಿಜವಾಗಿ ಹೇಳುವುದಾದರೆ, ಖೊಟಾ ವಚನಗಳ ಅಬ್ಬರದ ಪ್ರಚಾರದಲ್ಲಿ ಮಾನಸಿಕವಾಗಿ ಹಿಂಸೆಗೆ ಒಳಗಾದ ನನ್ನ ಪಾಲಿಗೆ ಶ್ರೀರಕ್ಷೆಯಾಗಿ ನಿಂತವರು ಡಾ॥ ಎಂ. ಚಿದಾನಂದಮೂರ್ತಿಯವರು. ಸಮಸ್ಯೆಗಳಿಗೆಲ್ಲ ಪರಿಹಾರದ ದಾರಿ ತೋರಿಸಿ ನನ್ನಲ್ಲಿ ಧೈರ್ಯ ತುಂಬಿದವರು ನನ್ನ ಈ ವಿದ್ಯಾಗುರುಗಳು. ಅವರ ಉಪಕಾರಕ್ಕೆ ಪ್ರತಿಯಾಗಿ ಹೇಳಲು ನನ್ನಲ್ಲಿ ಮಾತುಗಳಿಲ್ಲ. ಡಾ॥ ಎಂ. ಎಂ. ಕಲ್ಬುರ್ಗಿಯವರು ಉದ್ದಕ್ಕೂ ನನ್ನನ್ನು ಪ್ರೋತ್ಸಾಹಿಸುತ್ತ ಬಂದವರು. ಈ ಸಂಪುಟದ ಸಂದರ್ಭದಲ್ಲಂತೂ ಅವರ ಸಲಹೆ, ಸಹಕಾರ ವಿಶೇಷವಾದುದು. ಅವರಿಗೂ ನನ್ನ ಪ್ರೀತಿಯ ನೆನಕೆಗಳು. ಪ್ರೀತಿಯ ಗೆಳೆಯರಾದ ಶ್ರೀ ಎಸ್. ಶಿವಣ್ಣನವರು ಈ ಸಂಪುಟದ ಸಂಪಾದನೆಯ ಸಂದರ್ಭದಲ್ಲಿ ನನಗೆ ಬಹಳಷ್ಟು ನೆರವು ನೀಡಿರುವರು, ಪ್ರಸ್ತಾವನೆಯನ್ನು ಓದಿ ಸಲಹೆ ಸೂಚನೆ ನೀಡಿರುವರು, ಇತ್ತೀಚೆಗೆ ಚಿತ್ರದುರ್ಗದ ಬೃಹನ್ಮಠದಲ್ಲಿ ದೊರೆತ ಸಿದ್ಧರಾಮೇಶ್ವರರ ಅಪ್ರಕಟಿತ ವಚನಗಳನ್ನು ನನ್ನ ಗಮನಕ್ಕೆ ತಂದು, ಅವನ್ನು ಬಳಸಿಕೊಳ್ಳಲು ಅನುಮತಿಸಿರುವರು. ಈ ಸಂಪುಟವನ್ನು ತಪ್ಪಿಲ್ಲದೆ ಚೆನ್ನಾಗಿ ಮುದ್ರಿಸಿಕೊಟ್ಟವರು ಮಿತ್ರರಾದ ಶ್ರೀ ಪಿ. ಎಸ್. ಪ್ರಸಾದ್‌ರವರು. ಅದಕ್ಕಾಗಿ ಇವರುಗಳಿಗೆ ನನ್ನ ವಂದನೆಗಳು.

—ಎಸ್. ವಿದ್ಯಾಶಂಕರ

೧

ಅಂಕುಸದರಳಿನ ಸಂಪಗೆಯು ಹುವ್ವಿನ ಕಂಪು !
ಇತ್ತಲಿತ್ತ ಬಿಜಯಂಗೈಯದಿರು ಶಿವನೆ !
ಅರಿಯಾ ಮಗನೆ! ಮನೆಯು ಮಲ್ಲಯ್ಯ ನಿನಗೆಂದು ಬಂದುದನು.
ನೀವು ಭಕ್ತರಂಗಳದಲ್ಲಿ ಆಡುವ
ತೊತ್ತು ವೇಶಿಯು ಮಗನೆಂದು ಬಂದಿರಿ ಶಿವನೆ !
ಕಪಿಲಸಿದ್ಧಮಲ್ಲಿಕಾರ್ಜುನ ! ॥ ೧ ॥

೨

ಅಂಗದಲ್ಲಿ ಲಿಂಗ ! ಆ ಲಿಂಗಧ್ಯಾನದಲ್ಲಿಪ್ಪ
ಒಡಲೊಡವೆ ಒಡೆಯರಿಗೆಂಬ ;
ಮಾಡಿ ಮನದಲ್ಲಿ ಹೊಳೆಯದೆ ಬಾಳೆಯ ಫಲದಂತಿಪ್ಪ
ಮಾತಿನ ಬಟ್ಟೆಗೆ ಹೋಗ [ದ] ; ಸೂತಕಶ್ರುತವ ಕೇಳದ ;
ಸದ್ಭಕ್ತರ ನೆನೆವುದೆ ಮಂತ್ರವಯ್ಯ,
ಕಪಿಲಸಿದ್ಧಮಲ್ಲಿಕಾರ್ಜುನ. ॥ ೨ ॥

೩

ಅಂಗಲಿಂಗವ ಹಿಡಿದು ಅಗಲದೆ
ನಡೆಯೆಂದಿರಾಗಿ ನಡೆವುತಿರ್ದೆನು.
ಲಿಂಗಪ್ರತಿಷ್ಠೆಯ ಮಾಡೆಂದು ಎನಗೆ ನಿರೂಪಿಸುತಿರ್ದ ಕಾರಣ
ಮಾಡುತಿರ್ದೆನಲ್ಲದೆ ಎನಗೆ ಬೇರೆ ಸ್ವತಂತ್ರವುಂಟೆ ?
ಹಿಂದೆ ನೀವು ಕೊಟ್ಟ ನಿರೂಪ ನಿಮಗೆ ಹುಸಿಯಾದಡೆ
ಇನ್ನು ಮುಂದೆ ಸಯವಪ್ಪಂತೆ ನಡೆಸಾ ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೩ ॥

೪

ಅಂಗಲಿಂಗ ಸಂಬಂಧಿಯಾದ ಬಳಿಕ,
ಗುರುವಿನನುಮತದಿಂದ ಸ್ವಾನುಭಾವಲಿಂಗಸಂಬಂಧಿಯಾದ ಬಳಿಕ,
ಪ್ರಾಣನಿರ್ವ ನೆಲೆಯನರಿ.
ಆ ಲಿಂಗಮಜ್ಜನೋದಕದಿಂದ ನಿನ್ನ ಕಾಯಶುದ್ಧಿ.
ಆ ಲಿಂಗನಿರೀಕ್ಷಣೋದಕದಿಂದ ನಿನ್ನ ಅವಯವಶುದ್ಧಿ.
ಆ ಲಿಂಗಪ್ರಸಾದೋದಕ ನಿನ್ನ ಪರಮಪದವು.
ಇಂತು ಪಾದೋದಕತ್ರಯದಲ್ಲಿ ಸುಖಿಯಾಗಿ,
ಕಪಿಲಸಿದ್ಧಮಲ್ಲಿಕಾರ್ಜುನನ ಕೂಡಿ ನಿತ್ಯನಾಗು ಸಂದಿಲ್ಲದೆ. ॥ ೪ ॥

೫

ಅಂಗವ ಬೆರಸದ ಲಿಂಗ ಪ್ರಾಣವ ಬೆರಸುವ ಪರಿಯೆಂತೊ ?
ಬೆನಕನ ತೋರಿ ಬೆಲ್ಲವ ಮೆಲುವಂತೆ

ಇಷ್ಟಲಿಂಗವ ತೋರಿ ಹೊಟ್ಟೆಯ ಹೊರೆವರು.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ, ದೂರ ನೀ ಹೊತ್ತೆ ;
ಸೂರೆಯನಾರಿಕೆ ಕೊಂಡರು. ॥ ೫ ॥

೬

ಅಂಗವ ಮರೆವನ್ನಕ್ಕರ,
ಲಿಂಗಾ, ನಿಮ್ಮ ಚೆಲುವ ಕಂಗಳು ತುಂಬಿ ನೋಡುತ್ತಲೆಂದಿಪ್ಪೆನೊ !
ಪರಿಪರಿಯ ನೋಟದಿಂದ ಹರುಷವನ್ನೈದಿಕೊಂಡು
ಪರಮೇಕಾಂತದೊಳೆಂದಿಪ್ಪೆನೊ !
ವರಗುರು ಕಪಿಲಸಿದ್ಧಮಲ್ಲಿಕಾರ್ಜುನಾ,
ನಿಮ್ಮ ಶರಣ ಪ್ರಭುವಿನ ಕರುಣವೆಂದಪ್ಪುದೊ ! ॥ ೬ ॥

೭

ಅಂಗವರತು ನಿಂದವಂಗೆ
ಜಗದ ಹಂಗಿನಲ್ಲಿ ಸಿಕ್ಕಿ ಜಂಗುಳಿಗಳ ಕೂಡದೆ
ಲಿಂಗವೇ ಅಂಗವಾಗಿ ನಿಂದುದು
ಕಪಿಲಸಿದ್ಧಮಲ್ಲಿಕಾರ್ಜುನಲಿಂಗವು ತಾನಾದುದು. ॥ ೭ ॥

೮

ಅಂಗವಸ್ತ್ರವನುಟ್ಟುಕೊಂಡಳವ್ವೆ.
ಕಾಳಿಗೆವಟ್ಟೆಯ ಕುಪ್ಪಸವ, ತೊಟ್ಟುಕೊಂಡಳವ್ವೆ.
ಕಣ್ಣಲಿ ಬಟ್ಟಂಬಳೆಯ ಬೊಟ್ಟನಿಟ್ಟುಕೊಂಡಳವ್ವೆ.
ತನ್ನುರವರದ ಕುಚದ ಮೇಲೆ ತೊಟ್ಟಿಲ್ಲದ ಮಣಿಯ ಸರವ
ಇನಿಸುವ ಸಿಂಗಾರವ ಮಾಡಿ ಒಪ್ಪಿದಾಕೆಯನರಸುವನವ್ವ !
ಕಪಿಲಸಿದ್ಧಮಲ್ಲಿನಾಥಯ್ಯ ! ॥ ೮ ॥

೯

ಅಂಗವಿಸದಿರು ಇನ್ನು ಹಿಂಗಿಹೋಗೆಂದೆನುತ
ಮಂಗಳಾತ್ಮಕ ನುಡಿದ ಗುರುಕರುಣದಾ

ಅಂಗವಿಸದಿರು ಎಂದನಂಗಹರ ಪ್ರಭುರಾಯ
ಬಂದು ನೂಕಿದನೆನ್ನನೇಡಿಸುವ ಮಾಯೆಯನು.
ಮಂಗಳಾತ್ಮಕ ಕಪಿಲಸಿದ್ಧಮಲ್ಲೇಶ್ವರನೆ,
ಲಿಂಗ, ನಿಮ್ಮನು ಅರಿವೆ ; ಮಾಯೆಯ ಗೆಲುವೆ ಪ್ರಭುವಿನಂದದಲಿ. ॥ ೯ ॥

೧೦

ಅಂಗವಿಸನನ್ಯಕ್ಕೆ ಹಿಂಗಿಹ ಮಾಯಕ್ಕೆ
ಸಂದ ಸುಖವೆ ಶಿವನ ಅಂಘ್ರಿಗಾಗಿ,
ಮಂಗಳ ಉರುತರ ಬೆಳಗು ಪ್ರಕಾಶಿಸುವ
ನಿಸ್ಸಂಗ ಗುರುವು ಚೆನ್ನಬಸವಣ್ಣನು
ಕಪಿಲಸಿದ್ಧಮಲ್ಲಿಕಾರ್ಜುನಾ. ॥೧೦॥

೧೧

ಅಂಗಾಲಕೋಪವ ಮನಕ್ಕೆ ತಂದಿಪ್ಪವನ,
ಆ ಮನದ ಕೋಪವ ಹೃದಯದಲ್ಲಿಟ್ಟುಕೊಂಡಿಪ್ಪವನ
ಅವನ ಪಾದಕ್ಕೆ ಎನ್ನ ನೊಸಲ ತಂಪ ತಂದು ತಳಿವೆ,
ಎನ್ನ ನೊಸಲ ಅಮೃತದಿಂದ ಅವನ ಮನವ ತಿಳುಹುವೆ,
ಕಪಿಲಸಿದ್ಧಮಲ್ಲಿಕಾರ್ಜುನನ. ॥ ೧೧ ॥

೧೨

ಅಂಗೋದಕದಿಂದ ಅಂಗರಕ್ಷಣಂಗಳ ಮಾಡುವೆ ;
ಲಿಂಗೋದಕದಿಂದ ಸರ್ವಪವಿತ್ರವ ಮಾಡುವೆ ;
ಪ್ರಸಾದೋದಕದಿಂದ ಪ್ರಾಣನ ನೆಲೆಯನರಿವೆ.
ಇಂತೀ ತ್ರಿವಿಧೋದಕದಿಂದ ಶುದ್ಧನಹೆ, ಸಿದ್ಧನಹೆ, ಪ್ರಸಿದ್ಧನಹೆ,
ಕಪಿಲಸಿದ್ಧಮಲ್ಲಿಕಾರ್ಜುನ ತಾನಹೆ. ॥ ೧೨ ॥

೧೩

ಅಂಜನಗಾರನ ಕೈ ನಂಜುಗೊಂಡಿದೆ ಅಯ್ಯಾ.
ಅಂಜನಗಾರ ಹರುಷವಾಗಲೆಂದು
ಹರಸಿಕೊಂಡ ಹರಕೆ ಈಡೇರಿತ್ತೆನಗಿಂದು.

ಕುಂಜರಂಗಳೆಂಟಂಜಿ ಕೆಲ ಸಾರಿದವು.
ಅಂಜನವ ಬಲ್ಲ ನೀನೊಬ್ಬನಲ್ಲದಿಲ್ಲ ಕಾಣಾ,
ಕಪಿಲಸಿದ್ಧಮಲ್ಲಿನಾಥಾ. ॥ ೧೩ ॥

೧೪

ಅಂಜನದಗಿರಿ ರಂಜಿಸುತ್ತಿರೆ ಆಯತವಿಡಿದು ಸುಖವ ಕಂಡು
ಅನುಭವದವಳಿಗೆ ಅಂಜನವರ್ಣವನೇಕೀಕರಿಸಿ ನೋಡಲು
ಅನುವಾಯಿತ್ತಯ್ಯಾ ಅಂಜನದ ಹತ್ತೆಸಳ ಪೀಠ.
ಆ ಪೀಠವಲ್ಲಿ ಭೃತ್ಯನೆಂಬವ ನಿಂದು ಲಿಂಗವಿಡಿದು ನಡೆಯೆ
ಉರಿ ನಂದಿ ನೆಲೆಗೊಂಡನಯ್ಯಾ ನಿಮ್ಮ ಶರಣ ಚೆನ್ನಬಸವಣ್ಣನು.
ಕಪಿಲಸಿದ್ಧಮಲ್ಲಿನಾಥಯ್ಯಾ, ಚೆನ್ನಬಸವಣ್ಣನಿಂದ ಬದುಕಿದೆನು. ॥ ೧೪ ॥

೧೫

ಅಂತರಾತ್ಮ ಪರಮಾತ್ಮ ಭೂತಾತ್ಮವೊಳಗಾದ ಅಧ್ಯಾತ್ಮಿ ಕೇಳಾ.
ನೀನು ಯೋಗದ ಪ್ರಮಾಣ ಬಲ್ಲ ಅಯ್ಯನು,
ಶ್ರೋತ್ರೇಯ ಮನೆಯಲ್ಲಿ, ನೇತ್ರೆಯ ಜಿಹ್ವೆಯಲ್ಲಿ, ಆನಂದ ಪಾತ್ರೆಯಲ್ಲಿ,
ಸಂಗತಿ ಸದಾಚಾರ ನಿಷ್ಕಳ ಪರಮಸೀಮೆ ಎಂಬ ಪಾತ್ರೆಯಲ್ಲಿ,
ಪಂಚಬ್ರಹ್ಮವನೊಡಗೂಡಿದ ಪಂಚಸ್ತ್ರೀಯರಿಗೆ ಪ್ರಸಾದವನಿಕ್ಕುವಾಗ
ಪ್ರಸನ್ನತೆಯೆಂಬ ಪ್ರಸಾದವನನುಗ್ರಹಿಸಲರಿಯದೆ
ಇದ್ದ ಕಾರಣ ಅಂತರಿಸಿದೆಯಯ್ಯಾ.
ಅದ್ಯಂತಪ್ರಸಾದವ ಕೊಂಡ ಕಾರಣದಲ್ಲಿ ಆನು ನೀನಾದೆ ;
ಕಪಿಲಸಿದ್ಧಮಲ್ಲಿಕಾರ್ಜುನನ ಕೂಡಿ ಸಂದಳಿದೆ. ॥ ೧೫ ॥

೧೬

ಅಂದು ಬಸವಣ್ಣ ಬಂದು ಜರಿದು ಹೋದುದ
ಮರೆದೆನೆ ಆ ನೋವ !
ಜರಿದುದೆ ಎನಗೆ ದೀಕ್ಷೆಯಾಯಿತ್ತು !
ಆ ದೀಕ್ಷೆಯ ಗುಣದಿಂದ ಫಲಪದಕ್ಕೆ ದೂರವಾದೆ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಬಸವಣ್ಣನೆನ್ನ ಪರಮಾರಾಧ್ಯ ! ॥ ೧೬ ॥

೧೭

ಅಂದೊಮ್ಮೆ ಜಗನ್ನಾಥ ಭಸ್ಮವ ತೊಡದು ಕೈಯ ಬಿರ್ಚಿದರೆ
ಕೇಳಿರಣ್ಣ ! ಅಣ್ಣ ! ಅಣ್ಣ ! ಕೇಳಿರಣ್ಣ !
ಬ್ರಹ್ಮ ತಾ ಮರದೊರಗಿ ವಿಷ್ಣು [ತಾ] ಜುಮ್ಮೆಂದು
ವೇದಗಳು ಮತಿಗೆಟ್ಟು ದೆಸೆಗೆ ಬಾಯ ಬಿಟ್ಟವಯ್ಯ !
ಎನಿಸೆನಿಸು ಲೋಕಂಗಳು ಅನಿಸು ಬಾಯ ಬಿಟ್ಟವು !
ಕೇಳಿರಣ್ಣ ! ಅಣ್ಣ ! ಅಣ್ಣ ! ಕೇಳಿರಣ್ಣ !
ತಮ್ಮ ಬಲ ಆವಕುಂಟು ಕೇಳಿರಣ್ಣ !
ಆಯುಷ ತನಗೆನಿಸೆಂಬುದಪ್ಪೆ
ಎನ್ನ ಕಪಿಲಸಿದ್ಧಮಲ್ಲಿನಾಥಯ್ಯನ ಕೈಯ ಸಬುದಕಣ್ಣ ! ॥ ೧೭ ॥

೧೮

ಅಂಧಕಾರದ ಗಿರಿ ಅರಿವೇರಿತು ಅನುವಿಡಿದು ಸುಖವ ಕಂಡು
ಅನುಭವದವಳಿಗೆ ಅಂಧಕಾರದ ಸುಖವನೇಕೀಕರಿಸಿ ನೋಡಲು
ಆಯತವಾಯಿತ್ತು ಈ ಅಂಧಕಾರದ ಎರಡೆಸಳ ಪೀಠ.
ಆ ಪೀಠದಲ್ಲಿ ಸಮಯಾಚಾರಿಯೆಂಬವ ನಿಂದು
ಪರಿಣಾಮವಿಡಿದು ನಡೆಯೆ,
ಆತ್ಮನ ಗುಣ ಕೆಟ್ಟು ನೆಲೆಗೊಂಡನಯ್ಯಾ ನಿಮ್ಮ ಶರಣ ಚೆನ್ನಬಸವಣ್ಣನು.
ಕಪಿಲಸಿದ್ಧಮಲ್ಲಿನಾಥಯ್ಯಾ,
ಚೆನ್ನಬಸವಣ್ಣನ ಧರ್ಮ ಬದುಕಿದೆನು. ॥ ೧೮ ॥

೧೯

ಅಕ್ಷರತ್ರಯದಲ್ಲಿ ಆನಂದಬ್ರಹ್ಮದಲ್ಲಿ
ಅಕ್ಷರತ್ರಯದಲ್ಲಿ ನಿತ್ಯರೂಪ
ಅಕ್ಷರತ್ರಯವೆಂಬ ಆನಂದಬ್ರಹ್ಮದ
ಅಕ್ಷರವು ಆರರಲ್ಲಿ ಭಕ್ತಿ ಶಕ್ತಿ
ನಿತ್ಯಾಂಗನೆಯ ಹಸ್ತ ತತ್ವಮಸಿಯಿಂದತ್ತ
ಭಕ್ತಿಕಾರಣ ಶಿವನು ಕಪಿಲಸಿದ್ಧಮಲ್ಲಿಕಾರ್ಜುನ. ॥ ೧೯ ॥

೨೦

ಅಕ್ಕಟ ! ಎನಗೆ–ನಿನಗೆ ನೆರೆಗೆ, ಹೊರೆಗೆ
ಹೇಳುವನಲ್ಲ ಕಂಡಯ್ಯ ! ಅಯ್ಯ !
ಹಾ ! ಅಯ್ಯ ! ಹೇಳಿದರಲ್ಲದೆ ತೋರಿದಲ್ಲದೆ ಕಾಬವನಲ್ಲ ಕಂಡಯ್ಯ.
ಹಾ ! ಅಯ್ಯ ! ಎನ್ನ ಕಾಣದ ಕೇಳದ ಪ್ರಾಣಿಗೆ
ಅನುಮಿಷನಾಗಿರಿಸೆನ್ನ ಕಪಿಲಸಿದ್ಧಮಲ್ಲಿನಾಥಯ್ಯ. ॥ ೨೦ ॥

೨೧

ಅಗ್ನಿಸ್ತಂಭವ ಬಲ್ಲೆವೆಂಬರಯ್ಯ !
ಅನ್ನವನಿಕ್ಕುವರಯ್ಯ !
ಜಲಸ್ತಂಭವ ಬಲ್ಲೆವೆಂಬರಯ್ಯ !
ಅರವಟ್ಟಿಗೆಯನಿಕ್ಕುವರಯ್ಯ !
ಖಡ್ಗಸ್ತಂಭವ ಬಲ್ಲೆವೆಂಬರಯ್ಯ !
ಮರೆಹೊಕ್ಕರ ಕಾವರಯ್ಯ !
ಇಂತೀ ತ್ರಿವಿಧಗುಣವ ಮೀರಿದವರು
ದೇವರಿಗೆ ದೇವರಾಗಿಪ್ಪರು ಕಾಣಾ !
ಕಪಿಲಸಿದ್ಧಮಲ್ಲಿಕಾರ್ಜುನಾ, ದೇವರ ದೇವ. ॥ ೨೧ ॥

೨೨

ಅಚ್ಚಪ್ರಸಾದ ನಿಚ್ಚಪ್ರಸಾದ ಸಮಯಪ್ರಸಾದವನರಿಯದ ಮೂಢರಿಗೆ
ಷಡ್ವಿಧ ಲಿಂಗಾಂಗ ಪ್ರಸಾದ ಪಾದೋದಕವ ಹೇಳುವನೊಬ್ಬ
ಪಾದೋದಕದ್ರೋಹಿ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೨ ॥

೨೩

ಅಜನ ಕಲ್ಪಿತವಲ್ಲದ ಭಕ್ತಿ
ವಿಷ್ಣುವಿನ ಕಲ್ಪಿತವಲ್ಲದ ಭಕ್ತಿ
ರುದ್ರನ ಕಲ್ಪಿತವಲ್ಲದ ಭಕ್ತಿ
ನಿನ್ನ ಕಲ್ಪಿತವಾಯಿತ್ತಯ್ಯಾ ಬಸವಾ.

ನೋಟಕಾರರ ನೋಟಕ್ಕೆ ಸಿಕ್ಕಿದ ಭಕ್ತಿ
ಕೂಟಕ್ಕೆ ಕೂಟವಾಯಿತ್ತಯ್ಯಾ ಬಸವಾ.
ಈ ಬೇಟದ ಭಕ್ತಿಯ ನಿಮ್ಮಿಂದ ಕಂಡೆನಯ್ಯಾ, ಬಸವ ಗುರುವೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. || ೨೩ ||

೨೪

ಅಜಲೋಕದೊಳಗಿಪ್ಪ ಬಹುಪರಿಯ ಕುಸುಮಕ್ಕೆ
ಬಂದು ಕರಂಗಳು ಬಂದು ಪೀಡಿಸುತ್ತಾ
ಬಂಡುಂಬ ತುಂಬಿಯನು ಇಂಬಪ್ಪ ಕುಸುಮವನು
ಸಂಭ್ರಮದಿ ನುಂಗಿತಾ ಜ್ಯೋತಿ ಬಂದು
ಜ್ಯೋತಿಯನು ಸೂಕ್ಷ್ಮ ಸಿದ್ಧಿಯನು
ಹಲವೆನಿಸಿ ರೀತಿಯಾದುದು ದೆಸೆಯ ಪ್ರಬಲಕಾಗಿ
ಅಜಾತನ ರೀತಿವಿಡಿದವರೆಲ್ಲಾ ನಿತ್ಯರಯ್ಯಾ
ಕಪಿಲಸಿದ್ಧಮಲ್ಲಿಕಾರ್ಜುನ. || ೨೪ ||

೨೫

ಅಟ್ಟಿಮುಟ್ಟಿ ಆತುರದಿಂದ ಹಿಡಿದು ಮುಟ್ಟಿ
ನಂಬಲರಿಯದ ಕಷ್ಟರನೇನೆಂಬೆನಯ್ಯಾ.
ನಿಶ್ಚಯವಿದೆ ಲಿಂಗ ; ಸತ್ಯವಿದೆ ಪ್ರಸಾದ ; ಪ್ರಸಿದ್ಧವಿದೆ ಜಂಗಮ.
ಇನಿತನರಿಯದವರ ಹೊದ್ದಿಸದಿರಯ್ಯ ಎನ್ನತ್ತಲಿ,
ಕಪಿಲಸಿದ್ಧಮಲ್ಲಿಕಾರ್ಜುನಾ. || ೨೫ ||

೨೬

ಅಣ್ಣಗಳು ಕೇಳಿರೆ, ಅಣ್ಣಗಳು ಕೇಳಿರೆ,
ಲೋಹಿತೇಶ್ವರದೇವರ ಮರೆ ಬಂದು ಒರಸೀತು,
ಸುವರ್ಣದ ಕಳಸ ವೆಚ್ಚವಾದೀತು,
ಜಪತಾವಡ ಮಣಿ ಹರಿದಾವು,
ಗುರುಹಿರಿಯರೆಲ್ಲಾ ಪೆಡೆಗುಡಿಯ ಕಟ್ಟಿಗೊಳಗಾದಾರು,
ಕಪಿಲೆ ಬಾಣಸಕ್ಕೆ ಬಂದೀತು,

ಸೊನ್ನಲಿಗೆಯು ಪುಣ್ಯಕ್ಷೇತ್ರವಳಿದೀತು,
ಇಂತೀ ಎನ್ನ ಕಪಿಲಸಿದ್ಧಮಲ್ಲಿಕಾರ್ಜುನದೇವರು
ಇಲ್ಲಿಯೂ ಇಲ್ಲ, ಅಲ್ಲಿಯೂ ಇಲ್ಲ. ॥ ೨೬ ॥

೨೭

ಅಡವಿಯಲ್ಲಿ ತಡೆಗಡಿದ ಪಶುವಿನಂತಾದೆವಾವೆಲ್ಲ ಅಯ್ಯಾ !
ಅಕ್ಕಟಾ, ಒಡೆಯರಿಲ್ಲದ ಅನಾಥರಾದೆವಾವೆಲ್ಲ ಅಯ್ಯಾ !
ಅಕ್ಕಟಾ, ನಮಗಿನ್ನು ದಿಕ್ಕಾರು, ದೆಸೆಯಾರು ?
ಅಕ್ಕಟಾ, ನಮಗಿನ್ನು ಒಡೆಯರಾರು ? ಹೇಳಾ ತಂದೆ !
ಅಯ್ಯಾ, ಶ್ರೀಮಲ್ಲಿನಾಥಲಿಂಗಾ, ಅವಧರಿಸು ಎನ್ನ ಬಿನ್ನಹವ
ಗಣಾಚಾರಕ್ಕೆ ಬುದ್ಧಿಗಲಿಸುವುದೆನ್ನ ತಂದೆ ! ॥ ೨೭ ॥

೨೮

ಅತ್ತಲಿತ್ತ ಸುತ್ತಿ ಬಳಲಿ ವ್ಯರ್ಥವಪ್ಪ ಮನಸ
ನಿಮ್ಮ ಚಿತ್ತದತ್ತ ಧ್ಯಾನಿಸಿ ಇರಿಸಯ್ಯ.
ಇನ್ನು ನಿಮ್ಮತ್ತಲಲ್ಲದೆ ಅತ್ತಲಿತ್ತ ಸುತ್ತಿ ಬಂದಡೆ
ವಿಚಿತ್ರಮೂಲ ನಿಮ್ಮಾಣೆಯಯ್ಯ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೮ ॥

೨೯

ಅತ್ಯತಿಷ್ಠರ್ದಶಾಂಗುಲನನರ್ಚಿಸಿ ಕಂಡೆನೆಂಬ
ಬಚ್ಚಬರಿಯ ಮರುಳ ನೀ ಕೇಳಾ.
ಅರ್ಚನೆ ಪೂಜೆಯಲ್ಲಿ ಸಿಕ್ಕುವನೆ ?
ಗುರು ತೋರಿದ ಸಚ್ಚಿದಾನಂದ ಚಿನ್ಮಯ ಚರಲಿಂಗವ
ಅರ್ಚಕರು ಅರ್ಚಿಸಿ ಪಡೆಯರೊ.
ಪದ ನಾಲ್ಕ ಮೀರಿದ ಪದವ
ನೀವೆಂಬುರುತರ ಪರಮ ಸೀಮೆಯನಯ್ಯ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೯ ॥

೩೦

ಅತಿಮಥನವೆಂಬ ಯೋಗವೆನ್ನ ಗತಿಗೆಡಿಸಿತ್ತಯ್ಯ
ದಿತಿಗೆಟ್ಟೆ ನಾನು ಆದರಿಂದ

ಅತಿಶಯದ ತಾತ್ಪರ್ಯ ಗುರುಭಕ್ತಿಯನರಿಯದೆ
ದಿತಿಗೆಟ್ಟೆನಯ್ಯಾ ತಾತ್ಪರ್ಯವನರಿಯದೆ.
ತವಕಿಸುವ ಮನವನು ನಿಮ್ಮ ಕಡೆಗೆ ತೆಗೆದುಕೊಂಡು
ಅತಿಶಯದ ತಾತ್ಪರ್ಯ ಗುರುಭಕ್ತಿಯ ಈಯಯ್ಯಾ
ಕಪಿಲಸಿದ್ಧಮಲ್ಲಿಕಾರ್ಜುನ. ॥ ೩೦ ॥

೩೧

ಅತಿಶರಣರ ಕೂಡೆ ಮತಿವಂತ ಭಕ್ತರು ಸಂಗ ಮಾಡಲಾಗದು.
ದಾಸಿಯ ಸಂಗ ವೇಶಿಯ ಸಂಗ ದಾಸರಲ್ಲದೆ ರಾಜರು ಮಾಡಲಾಗದು.
ಚಂಪಕಸಂಗ ಭ್ರಮರ ಮಾಡಲಾಗದು.
ಕಪಿಲಸಿದ್ಧಮಲ್ಲಿಕಾರ್ಜುನಾ,
ಅತಿ ಶರಣರ ಸಂಗ ಗುರುಭಕ್ತರು ಮಾಡಲಾಗದು. ॥ ೩೧ ॥

೩೨

ಆರ್ತಿಯಲ್ಲಿ ಮುತ್ತೈದೆ ಆರತಿವಿಡಿದು ಬಂದು
ನಿಂದೈದಾಳೆಯಯ್ಯಾ ನಿಮ್ಮ ಮುಂದೆ.
ನಿಜ ಶುದ್ಧ ಸಾರಸನ್ಮತವಾದ ಮುಖವಂತೆ
ಕಪಿಲಸಿದ್ಧಮಲ್ಲಿನಾಥಯ್ಯಾ, ನಿಮ್ಮ ಮುಖವಂತೆ
ನಿಯತವ ಕಂಡಳು ಚೆನ್ನಬಸವಣ್ಣನ ಧರ್ಮದಿಂದ. ॥ ೩೨ ॥

೩೩

ಅನೇಕ ತೆರದ ಯೋನಿಮುಖಂಗಳ ಪೊಕ್ಕು
ನೀರ್ಗುಡಿಯಲು ಪೋದಡೆ
ಸುಡು ! ಪೋಗೆಂದು ನೂಂಕಿತ್ತೆ ಜಲ ?
ಆದರಂತಿರಬೇಡ ಹಿರಿಯರ ಮನ.
ಮನವಿಚ್ಛಂದವಾಗದೊಂದೆಯಂದದಲಿಪ್ಪಂತಪ್ಪಾ
ನಿಮ್ಮದೊಂದು ಸಮತಾಗುಣವೆನ್ನನೆಂದು ಬಂದು ಪೊದ್ದಿರ್ಪುದು ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೩ ॥

೩೪

ಅಭ್ಯಸದ ಅನುಭಾವಿಗಳಿಗೆ ಅಧಿಕಭಕ್ತಿ ಎಂತಪ್ಪುದಯ್ಯಾ ?
ವಾಕ್ಯದಲ್ಲಿ ನುಡಿದು, ಕಾಯಕದಲ್ಲಿ ಮಾಡಲು

ಭಕ್ತಿಯುಪ್ಪುದೆ ಮಾನಸವು ಮುಟ್ಟದನ್ನಕ್ಕರ ?
ಮಾನಸ ಭಕ್ತಿಸಂಪನ್ನರಾದಡೆ ತಾವು ನೀನಪ್ಪುದೇನರಿದು ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೪ ॥

೩೫

ಅಯ್ಯ ! ನೀ ಬಾರಯ್ಯ !
ಬಂದು ಎನ್ನ ಹೃದಯ ಮನ ಶಾಸನವ ಮಾಡಿ ನಿಲ್ಲಯ್ಯ.
ಹಾ ! ಅಯ್ಯಾ ! ಅಯ್ಯಾ ! ನೀ ಬಾರ ! ನಿನ್ನ ಧರ್ಮ !
ಕಪಿಲಸಿದ್ಧಮಲ್ಲಿನಾಥಯ್ಯ. ॥ ೩೫ ॥

೩೬

ಅಯ್ಯ ಬಂದಾನವ್ವಾ, ನೀನು ತನು ಚಿತ್ತ ಶುದ್ಧವಾಗಿರು.
ಅಯ್ಯ ಬಂದಾನವ್ವಾ, ನೀನು ಮನವ ಮಂಚವ ಮಾಡಿ ಪಚ್ಚಡಿಸಿರು.
ಅಯ್ಯ ಬಂದುದ ಕಂಡಳು ಚಿದಂಗನೆ.
ಅಯ್ಯ, ಶುದ್ಧ ಸಂಗಮಕೆ ಒಬ್ಬನೆ ಬಂದನು,
ಕಪಿಲಸಿದ್ಧಮಲ್ಲಿಕಾರ್ಜುನಯ್ಯನು. ॥ ೩೬ ॥

೩೭

ಅಯ್ಯ ಬಂದಾನು ಆನಂದ ಮಂಟಪಕ್ಕೆ,
ಎಚ್ಚತ್ತಿರಿರೋ ದ್ವಾರಕಿಂಕರರು ;
ಎಚ್ಚತ್ತಿರಿರೋ ಅವಸರಿಗರು.
ಅಯ್ಯ ಸುತ್ತಿಮುತ್ತಿಗೆಗೊಳಗಾದನಾದಡೆ,
ಪಟ್ಟಣ ಸರ್ವಸ್ವವೂ ವಶವಹುದು,
ಕಪಿಲಸಿದ್ಧಮಲ್ಲಿಕಾರ್ಜುನಯ್ಯನು ಹಿಡಿಗಟ್ಟಿಗೊಳಗಹನು. ॥ ೩೭ ॥

೩೮

ಅಯ್ಯಯ್ಯಾ, ನೀ ಬಾರಯ್ಯ ಬಾರಯ್ಯ.
ಆನಂದದಾಡಿಯಲ್ಲಿ ಬಂದೆನ್ನ ಕರದಲ್ಲಿ ನಿಲ್ಲಯ್ಯ.
ಅಯ್ಯಯ್ಯಾ, ಒಯ್ಯನೆ ಕೈಯುಗುಡಯ್ಯ.
ಕಂಗೆಟ್ಟ ಪಶುವಾದೆನು ಎಲೆ ಅಯ್ಯಾ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ, ಕರುಣಿಸು ನಿಮ್ಮ ಧರ್ಮ. ॥ ೩೮ ॥

೩೯

ಅಯ್ಯಾ, ಅನಂತ ಭವಂಗಳಲ್ಲಿ ಬಂದು ನಾನು ಶಾಂತನಾದೆ.
ಅಯ್ಯಾ, ನಿನ್ನ ಪ್ರಸಾದವ ನಾನಾ ಭವಂಗಳಲ್ಲಿ ಕಾಣೆ ತಂದೆ.
ನಿನ್ನ ಪಾದೋದಕವ ನಾನಾ ಭವಂಗಳಲ್ಲಿ ಕಾಣೆ ತಂದೆ.
ಇನ್ನು ನೀಂ ಕರುಣಿಸಾ ತಂದೆ, ಕವಿಲೆಯು ಕಂದನಂತಾದೆನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೯ ॥

೪೦

ಅಯ್ಯಾ, ಅನೇಕ ಪುರಾತರ ಅನುಮತದಿಂದ
ಚನ್ನಬಸವಣ್ಣನೆನ್ನನಾಗುಮಾಡಿದ ಪರಿಯ ಹೇಳುವೆನಯ್ಯ.
ಮುನ್ನಾದಿಯಲಾದ ಸ್ವಯಂಭುಜ್ಞಾನಮಂ ತಿಳುಪಿ
ಆನಂದದ ಕರದಲ್ಲಿ ಇಟ್ಟು
ಬಸವಾಕ್ಷರಸಂಯುತ ಧ್ಯಾನಮೌನಾದಿ ಸಮ್ಯಜ್ಞಾನವನರುಪಿದ.
ಗುರುಕರುಣದಿಂದ ಆ ನೀನಾದೆನ್ನೆ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೦ ॥

೪೧

ಅಯ್ಯಾ, ಅಯ್ಯಾ, ಆನಂದದಲ್ಲಿ ಎಂದಿಪ್ಪೆನೊ ?
ಅಯ್ಯಾ, ಅಯ್ಯಾ, ಆದಿತ್ರಯದೊಳಗಾನು
ಭೇದಾದಿಭೇದವನರಿದು ಎಂದಿಪ್ಪೆನೊ ?
ಹೋದ ಬಟ್ಟೆಯ ನೋಡಿ ಬೆರಗಾದೆನಯ್ಯಾ
ವಿಚಿತ್ರಮೂಲ ಕಪಿಲಸಿದ್ಧಮಲ್ಲಿಕಾರ್ಜುನಾ,
ಎನ್ನ ಚಿತ್ತವ ವಿಚಿತ್ತವ ಮಾಡದಿರು ತಂದೆ ! ॥ ೪೧ ॥

೪೨

ಅಯ್ಯಾ, ಆ ಜ್ಞಾನಸಿದ್ಧನನರ್ಚಿಸುವ
ಆನಂದಮಯ ಶರಣರ ಧ್ಯಾನ ಧಾರಣ ಸಮಾಧಿಗಳೆಂತೆಂದಡೆ–
ಪ್ರಸಾದವ ಬಯಸಿ ಪರವನರಿಯದಿಪ್ಪುದೆ ಧ್ಯಾನ.
ಚಿದ್ಘನಮಹಾಲಿಂಗವಲ್ಲದೆ ಅತಃಪರ ದೈವವಿಲ್ಲೆಂದು
ಅನ್ಯರ ಕೂಡೆ ನುಡಿಯದಿರ್ಪುದೆ ಧಾರಣ.

ಧ್ಯಾನ ಮೌನ ನೇಮ ನಿತ್ಯ ಶೀಲ ವ್ರತವಾರರಲ್ಲಿ
ತದ್ಗತನಾಗಿಪ್ಪುದೆ ಸಮಾಧಿ.
ಇಂತಿಪ್ಪುದೀಗ ಶಿವಯೋಗ !
ಇಂತಪ್ಪವರ ತೋರಿಸಿ ನಿನ್ನ ಅರ್ಚನೆಯನೊತ್ತಿ
ಅವರ ಗಡಣಸಂಗಮಾತ್ರದಲ್ಲಿ ನಿನ್ನ ಪದವಯ್ಯ
ಕಪಿಲಸಿದ್ಧಮಲ್ಲಿಕಾರ್ಜುನಯ್ಯ. ॥ ೪೨ ॥

೪೩

ಅಯ್ಯಾ, ಎನ್ನ ನಾ ಸಂತೈಸಿ ಸಂತೈಸಲಾರೆನು.
ಆಹಾ ಅಯ್ಯಾ, ನಿನ್ನ ಕೂಟದ ಸವಿಗಳ ನೆನೆನೆನೆದು,
ಬೇಯುದ ಬೇಗೆಯು ಬೆಂದೆ ನೋಡಯ್ಯಾ.
ಅಯ್ಯಾ, ಎನಗಂತಿಂತೆಂದು ಹೇಳುವ ನಲ್ಲ,
ಮರೆಗೆ ಮರೆಯುದ ಕಿಚ್ಚನಿಕ್ಕಿ ಹೋದೆಯಲ್ಲಾ,
ಎನ್ನ ಕಪಿಲಸಿದ್ಧಮಲ್ಲೇಶ್ವರಯ್ಯಾ ! ॥ ೪೩ ॥

೪೪

ಅಯ್ಯಾ, ಎನ್ನ ಮನದಲು ನಿಮಗೀ ಒಡವೆ ಕೆರೆಯೆಂದೂ
ತಿದ್ದುವುದೆಂಬ ಚಿಂತೆಯೆನಗೆ ಹೋ ! ವಾ ! ಹಾ !
ಅಯ್ಯಾ, ಇದ ಮಾಡಿಸು ಒಡೆಯಾ,
ಕೇಳು, ಕೇಳು, ಸಿದ್ಧಮಲ್ಲಿನಾಥಯ್ಯ. ॥ ೪೪ ॥

೪೫

ಅಯ್ಯಾ, ಎನ್ನಮನ ಘುತ್ತೊಂದಕ್ಕಿಂಬಿಲ್ಲ ಕಂಡಯ್ಯಾ.
ಅಯ್ಯಾ, ನಿನ್ನ ನೆನೆವೆ ನಾನು, ನನ್ನ ನೆನೆವೆ ನೀನಯ್ಯಾ.
ನಿನಗೆಯೂ ಎನಗೆಯೂ ಒಂದೆ ಮನ ನೋಡಯ್ಯಾ.
ನೀನು ಮನಮುಕ್ತನಾದ ಕಾರಣ,
ನಿನ್ನೊಡನೆ ಎನ್ನ ಮನ ನೋಡಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೫ ॥

೪೬

ಅಯ್ಯಾ, ಎನ್ನ ಶಿರ ನಿಮ್ಮ ಚರಣವ ಮುಟ್ಟಿದ ಬಳಿಕ
ಎನ್ನಲ್ಲಿ ಗುಣದೋಷವನರಸುವರೆ ?

'ಭೃತ್ಯಾಪರಾಧಃ ಸ್ವಾಮಿನೋದಂಡಃ'
ಕಪಿಲಸಿದ್ಧಮಲ್ಲಿಕಾರ್ಜುನದೇವಾ, ತ್ರಾಹಿ ತ್ರಾಹಿ ಕಾಯಯ್ಯಾ. ॥ ೪೬ ॥

೪೭

ಅಯ್ಯಾ, ಒಯ್ಯನೆ ಕರಸ್ಥಲಕ್ಕೆ ಬಂದಿರಾಗಿ
ತನುಪ್ರಾಣ ಇಷ್ಟಲಿಂಗಿಯಾದೆ ;
ಪ್ರಸಾದ ಪಾದೋದಕಕ್ಕೆ ಯೋಗ್ಯನಾದೆ.
ಅಜಾತನೇ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಆನು ನೀನೆಂಬ ಕನ್ನಡ ಕಳೆಯಿತ್ತು. ॥ ೪೭ ॥

೪೮

ಅಯ್ಯಾ, ಕರುಣ ಕಂಬನಿಯು ದೆಸೆಗೆಟ್ಟ ವಾರುಧಿಯೊಳಗೆ
ಮುಸುಕಿ ಮುಸುಕಿ ಮೋಹಿಸುತಿದ್ದೆ.
ಅಯ್ಯಾ, ದೆಸೆಗೆಟ್ಟ ಪಶುವಾನು
ಪಶುಪಾಶಮೋಚನ ಹಸುಳೆಯು
ನಿನ್ನ ವಶಕ್ಕೆ ತೆಗೆದಿತ್ತಬಾ ಎನ್ನ ಕರುಣಿ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೮ ॥

೪೯

ಅಯ್ಯಾ, ಕಾಮು ಕಾಡಿತ್ತು
ಕ್ರೋಧ ಕೊಂದಿತ್ತು
ಆಮಿಷ ತಾಮಸಂಗಳೆಳವುತ್ತಿವೆ.
ಕರುಣಮಾಡಾ ಹರಹರಾ ಮಹಾದೇವ
ಕರುಣಮಾಡಾ ಶಿವಶಿವ ಮಹಾದೇವ
ಕರುಣಮಾಡಾ ದೆಸೆಗೆಟ್ಟ ಪಶುವಿಂಗೊಮ್ಮೆ
ಕರುಣಮಾಡಾ ವಸವಲ್ಲದ ಪಶುವಿಂಗೊಮ್ಮೆ
ಕರುಣಮಾಡಾ ನೀವಲ್ಲದೆ ಬಲ್ಲವರಿಲ್ಲ
ಕರುಣಮಾಡಾ ಅನ್ಯವ ನಾನರಿಯೆ
ನಿಮ್ಮ ಪಾದವನುರೆ ಮಚ್ಚಿದೆ,
ಎನ್ನ ಕಪಿಲಸಿದ್ಧಮಲ್ಲಿಕಾರ್ಜುನಯ್ಯ ತಂದೆ. ॥ ೪೯ ॥

೫೦

ಅಯ್ಯಾ, ಗುರುವೆಂಬ ಮಹಾಜ್ವಾಲೆಯಲ್ಲಿ ದಹನವಾದೆ
ಬಸವಾಕ್ಷರವೆಂಬ ಮರುಜೇವಣಿಯಲ್ಲಿ ಭವಿಸಿದೆ
ಉಂಡೆ ನಾನು ಶಿಶುವಾಗಿ ಶುದ್ಧಸಿದ್ಧಪ್ರಸಿದ್ಧವೆಂಬ ಪ್ರಸಾದತ್ರಯ
ಏಕೀಭವಿಸಿ ಕೊಂಡೆ ಎನಗಿನ್ನರಿದಿಲ್ಲ.
ನೀನೊಟ್ಟಿತ್ತೆ ಮಾರಿದ ಮಾರಿಂಗೆ ಸಂದೆ ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೦ ॥

೫೧

ಅಯ್ಯಾ, ಜಗತ್ಪಾವನ ನಿಮಿತ್ಯರ್ಥವಾಗಿ
ಸಾಕಾರಲೀಲೆಯ ಧರಿಸಿದ ಸ್ವಯಚರಪರಗುರುಚರಮೂರ್ತಿಗಳ
ಅರ್ಪಿತಾವಧಾನದ ನಿಲುಕಡೆಯೆಂತೆಂದಡೆ :
ಲಿಂಗಾಚಾರ ಮೊದಲಾದ ಸದ್ಭಕ್ತ ಶರಣಗಣಂಗಳಲ್ಲಿ
ಲಿಂಗಾರ್ಪಿತಭಿಕ್ಷಲೀಲೆಯ ಧರಿಸಿ ಹೋದ ವ್ಯಾಳ್ಯದೊಳು
ಆ ಭಕ್ತಗಣಂಗಳು ಶರಣುಹೊಕ್ಕು
ಸಮಸ್ತ ಆಚರಣೆಯ ಒದಗಿಸಿಕೊಟ್ಟಲ್ಲಿ
ದಶವಿಧ ಪಾದೋದಕ ಏಕಾದಶ ಪ್ರಸಾದದಾಚರಣೆಯಾಗುವದಯ್ಯಾ.
ಇಂತು ಲಿಂಗಾಚಾರ ಭಕ್ತಗಣಂಗಳು ದೊರೆಯದಿರ್ದಡೆ
ವೇದಾಂತಿ ಸಿದ್ಧಾಂತಿ ಭಿನ್ನಯೋಗಿ ಮೊದಲಾದ ಸಮಸ್ತಮತದಿಂದ
ಏಕಶಬ್ದಭಿಕ್ಷವ ಸಪ್ತಗೃಹವ ಬೇಡಿ
ದುರ್ಗುಣಯುಕ್ತವಾದ ಅಯೋಗ್ಯದ್ರವ್ಯವನುಳಿದು
ಸದ್ಗುಣಯುಕ್ತವಾದ ಯೋಗ್ಯದ್ರವ್ಯವ ಕೈಕೊಂಡು,
ಧೂಳಪಾದಜಲದಿಂದ ಭವಿತನವ ಕಳೆದು ಭಕ್ತಪದಾರ್ಥವೆನಿಸಿ
ಅರ್ಘ್ಯಪಾದ್ಯಾಚಮನವ ಮಾಡಿ,
ಧಾನ್ಯವಾದಡೆ ಪರಿಣಾಮಜಲದಿಂ ಶೋಧಿಸಿ ಪಾಕವ ಮಾಡಿ,
ಫಲಾಹಾರವಾದಡೆ ಶೋಧಿಸಿ ಪಕ್ವವ ಮಾಡಿಟ್ಟು
ಆಮೇಲೆ, ಅಯ್ಯಾ, ನಿನಗೆ ಭಕ್ತಗಣಂಗಳು ದೊರೆಯದ ಸಮಯದಲ್ಲಿ
ಚತುರ್ವಿಧ ಪಾದೋದಕವೆಂತುಟೆಂದಡೆ :
ಏಕಾಂತವಾಸದಲ್ಲಿ ಪರಿಣಾಮತರವಾದ
ಹಳ್ಳ ಹೊಳೆ ಕೆರೆ ಬಾವಿ ಮಡು ಹೊಂಡ ಚಿಲುಮೆ ಕೊಳ
ಮೊದಲಾದ ಸ್ಥಾನಕ್ಕೆ ಹೋಗಿ

ಪ್ರಥಮದಲ್ಲಿ 'ಶಿವ ಶಿವ ! ಹರಹರ ! ಗುರುಬಸವಲಿಂಗ !' ಎಂಬ
ಮಂತ್ರಧ್ಯಾನದಿಂದ ಪಾದವನಿಟ್ಟು ಚರಣಸೋಂಕಿನಿಂ ಪವಿತ್ರವಾದುದಕವೆ
ಧೂಳಪಾದೋದಕವೆನಿಸುವದಯ್ಯ ;
ಆ ಮೇಲೆ ತಂಬಿಗೆಯೊಳಗೆ ಶೋಧಿಸಿ ಬಸವಾಕ್ಷರವ ಲಿಖಿಸುವದೆ
ಗುರುಪಾದೋದಕವೆನಿಸುವದಯ್ಯ ;
ಆ ಮೇಲೆ ಅರ್ಚನಾಕ್ರಿಯೆಗಳ ತೀರ್ಚಿಸಿಕೊಂಡು
ನಿಚ್ಚಪ್ರಸಾದಿ ಸಂಬಂಧಾಚರಣೆಯಂತೆ ಮುಗಿದಲ್ಲಿ
ಜಂಗಮ ಪಾದೋದಕವನಿಸುವದಯ್ಯ.
ಇಂತು ಚತುರ್ವಿಧ ಪಾದೋದಕದೊಳಗೆ ಷಡ್ವಿಧ ಪಾದೋದಕ ಉಂಟಯ್ಯ.
ಅದೆಂತೆಂದಡೆ :
ಹಸ್ತವಿಟ್ಟು ಸ್ಪರ್ಶನವ ಮಾಡೆ ಸ್ಪರ್ಶನೋದಕವೆನಿಸುವದಯ್ಯ ;
ಲಿಂಗಕ್ಕೆ ಧಾರೆಯಿಂದ ಅಭಿಷೇಕವ ಎರೆದಲ್ಲಿ
ಅವಧಾರೋದಕವೆನಿಸುವದಯ್ಯ ;
ಲಿಂಗಾರ್ಪಿತವ ಮಾಡಬೇಕೆಂಬ ಆನಂದವೆ
ಆಪ್ಯಾಯನೋದಕವೆಂದೆನಿಸುವದಯ್ಯ ;
ಅರ್ಪಿತಮುಖದಲ್ಲಿ ಹಸ್ತವ ಪ್ರಕ್ಷಾಲಿಸಿ ಖಂಡಿತವ ಮಾಡಿದಲ್ಲಿಗೆ
ಹಸ್ತೋದಕವೆನಿಸುವದಯ್ಯ ;
ಲಿಂಗಕ್ಕೆ ಸಂತೃಪ್ತಿಪರಿಯಂತರವು ಅರ್ಪಿತವ ಮಾಡಿ[ದಲ್ಲಿ]
ಪರಿಣಾಮೋದಕವೆನಿಸುವದಯ್ಯ ;
ತಟ್ಟೆ ಬಟ್ಟಲ ಲೇಹವ ಮಾಡಿದಲ್ಲಿ ನಿರ್ನಾಮೋದಕವೆನಿಸುವದಯ್ಯ ;
ಲೇಹವ ಮಾಡಿದ ಮೇಲೆ ದ್ರವ್ಯವನಾರಿಸಿ ಸರ್ವಾಂಗದಲ್ಲಿ
ಲೇಪಿಸುವದೆ ಸತ್ಯೋದಕವೆನಿಸುವದಯ್ಯ.
ಇಂತೀ ದಶವಿಧ ಪಾದೋದಕದ ವಿಚಾರವ ತಿಳಿದು
ಆ ಮೇಲೆ ನಿಚ್ಚಪ್ರಸಾದಿಯು ಸಂಬಂಧಾಚರಣೆಯಂತೆ
ಪ್ರಸಾದವ ಮುಗಿವದಯ್ಯ.
ಅದರೊಳಗೆ ಏಕಾದಶಪ್ರಸಾದದ ವಿಚಾರವೆಂತೆಂದಡೆ :
ಪ್ರಥಮದಲ್ಲಿ ಹಸ್ತಸ್ಪರ್ಶ ಮಾಡಿದಂತಹದೆ
ಗುರುಪ್ರಸಾದವೆನಿಸುವದಯ್ಯ ;
ಇಷ್ಟ ಮಹಾಲಿಂಗಕ್ಕೆ ಮಂತ್ರಸ್ಮರಣೆಯಿಂದ ಮೂರು ವೇಳೆ
ರೂಪನರ್ಪಿಸಿದಲ್ಲಿಗೆ ಲಿಂಗಪ್ರಸಾದವೆನಿಸುವದಯ್ಯ ;
ಎರಡುವೇಳೆ ಇಷ್ಟಮಹಾಲಿಂಗದೇವಂಗೆ
ರೂಪನರ್ಪಿಸಿ ಜಿಹ್ವೆಯಲ್ಲಿಟ್ಟಲ್ಲಿ

ಜಂಗಮು ಪ್ರಸಾದವೆನಿಸುವದಯ್ಯ ;
ಆ ಮೇಲೆ ಲಿಂಗದೇವಂಗೆ ತೋರಿ ಬೋಜೆಗಟ್ಟಿ
ಲಿಂಗದೇವಂಗೆ ತೋರಿ ಜಿಹ್ವೆಯಲ್ಲಿಟ್ಟಂತಹದೆ
ಪ್ರಸಾದಿಯು ಪ್ರಸಾದವೆನಿಸುವದಯ್ಯ.
ಆ ಭೋಜ್ಯರೂಪಾದ ಪ್ರಸಾದಿಯು ಪ್ರಸಾದದೊಳಗೆ
ಮಧುರ ಒಗರು ಕಾರ ಆಮ್ಲ ಕಹಿ ತೃಪ್ತಿ–ಮಹಾತೃಪ್ತಿಯೆ–
ಆಪ್ಯಾಯನ, ಸಮಯ, ಪಂಚೇಂದ್ರಿಯವಿರಹಿತ,
ಕರಣಚತುಷ್ಟಯವಿರಹಿತ, ಸದ್ಭಾವ, ಸಮತೆ, ಜ್ಞಾನಪ್ರಸಾದ
ಮೊದಲಾದವು ಸಪ್ತವಿಧಪ್ರಸಾದವೆನಿಸುವದಯ್ಯ.
ಇಂತು ಪರಾಧೀನತೆಯಿಂ ಭಿಕ್ಷವ ಬೇಡಲಾರದಿರ್ದಡೆ,
ಆರಣ್ಯದಲ್ಲಿ ಫಲರಸಯುಕ್ತವಾದ ಹಣ್ಣು ಕಾಯಿಗಳ
ಲಿಂಗಾರ್ಪಿತಭಿಕ್ಷೆಯೆಂದು ಆ ಫಲಾದಿಗಳ ತೆಗೆದುಕೊಂಡು ಶೋಧಿಸಿ,
ಪವಿತ್ರವ ಮಾಡಿ ಲಿಂಗಾರ್ಪಿತ ಭೋಗಿಯಾದಾತನೆ
ಸ್ವಯಂಭು ಪ್ರಸಾದ ಭಕ್ತನಾದ ಚಿತ್ಕಲಾಪ್ರಸಾದಿ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೧ ॥

೫೨

ಅಯ್ಯಾ, ಜನಕ ಜನನಿಯರಿಬ್ಬ[ರಿ]ರುವ ಕೇಳಾ,
ಸಸಿ ಬಿಂಬದಂತೆ ಶಿವಶಕ್ತಿ ಕಂಡಯ್ಯ,
ಇಲ್ಲಿ ಒಮ್ಮೆಯೂ ಭೇದವಿಲ್ಲ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೨ ॥

೫೩

ಅಯ್ಯಾ, ದೃಷ್ಟವಪ್ಪ ಗುರುಕಾರುಣ್ಯದಲ್ಲಿ
ಇಷ್ಟಲಿಂಗವ ಸಂಬಂಧಿಸಿ ಕೊಟ್ಟ ಬಳಿಕ
ಮರಳಿ ಯೋಗವುಂಟೆ ?
ಸರ್ವ ಯೋಗಕ್ಕೆ ಶಿವಯೋಗವೆ ಮಹಾಯೋಗವೆಂದರಿದ ಬಳಿಕ
ಮತ್ತೆ ಕಿರಿದು ಯೋಗವೆಂದು ಪಾದೋದಕ ಪ್ರಸಾದಕ್ಕೆ ಹೊರಗಾಗಿ
ಗುರುವಾಜ್ಞೆ ಮೀರಿದ ಗುರುದ್ರೋಹಿಗಳ ಎನಗೊಮ್ಮೆ ತೋರದಿರಯ್ಯ
ನಿಮ್ಮ ಧರ್ಮ ! ನಿಮ್ಮ ಧರ್ಮ !!
ದೀಕ್ಷಾತ್ರಯದಲ್ಲಿ ಸಂಪನ್ನರಾಗಿ, ಪ್ರಸಾದದಲ್ಲಿ ಲೋಲುಪ್ತರಾಗಿ

ಜಂಗಮವೆ ಲಿಂಗವೆಂಬವರ ಎನಗೊಮ್ಮೆ ತೋರಿಸಯ್ಯ !
ಕಪಿಲಸಿದ್ಧಮಲ್ಲಿಕಾರ್ಜುನಯ್ಯ,
ನಿಮ್ಮ ಧರ್ಮ ! ನಿಮ್ಮ ಧರ್ಮ ! ! ॥ ೫೩ ॥

೫೪

ಅಯ್ಯಾ, ನರಸಮುದ್ರವೆಂಬ ಕೊಳಚೆಯೊಳಗಣ ಚಿಕ್ಕ ಕೊಳಚೆಯೊಳಗೆ
ಅಯ್ಯಾ, ಲೋಕ ಬಿದ್ದು ತೇಕುತಿದ್ದುದಯ್ಯ.
ಇದರಿಂದ ಹೊಲ್ಲ, ಕಯ್ಯ ನೀಡು
ಕಪಿಲಸಿದ್ಧಮಲ್ಲಿಕಾರ್ಜುನ. ॥ ೫೪ ॥

೫೫

ಅಯ್ಯಾ, ನಾನು ಸಂಸಾರವೆಂಬ ತೆಪ್ಪದೊಳಗಿರ್ದು
ಭವವೆಂಬ ಸಮುದ್ರದೊಳಗದ್ದಿ ಮುಳುಗುತ್ತಿದ್ದೇನಯ್ಯಾ
ಬೇಗ ಬಾರಾ, ಬಾರಯ್ಯಾ ಬಾರಾ.
ವಜ್ರಲೇಪದಲ್ಲಿ ಬಿದ್ದಿದ್ದೇನೆ ಬೇಗ ಬಂದೆತ್ತಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೫೫ ॥

೫೬

ಅಯ್ಯಾ, ನಾನೆಂಬುದನು ಒಯ್ಯನೆ ಒಯ್ಯನೆ ಮರೆದೆ.
ಅಯ್ಯಾ, ನೀ ಗುರುವಾಗಿ ಕರುಣದಿಂದ ಒಯ್ಯನೆ ಬಂದೆನ್ನ
'ಅಯ್ಯೊ ಮಗನೆ' ಎಂದು ಕೈವಿಡಿದು
ತೆಗೆದೆನ್ನ ಸಲಹಿದಿರಿ ಕರುಣದಿಂದ
ಆನೀಗ ನಿಮ್ಮ ಅವ್ಯಯದ ಪದಕಾನು ಮೂಲನಾದೆ
ಕಪಿಲಸಿದ್ಧಮಲ್ಲಿಕಾರ್ಜುನ. ॥ ೫೬ ॥

೫೭

ಅಯ್ಯಾ ನಾನೊಂದ ಬೇಡುವೆ ನಿಮ್ಮಲ್ಲಿ
ಎವಗೊಂದು ಲೇಸ ಮಾಡಯ್ಯ.
ನಾರಿಯುರುರದ ಗಾಳಿ ಸೋಂಕದಂತೆ
ಎನ್ನುವ ಮಂತ್ರಿಸಿ ರಕ್ಷಿಸಯ್ಯ.

ಎನಗಿನಿಸುಮಾಡಿ ಬದುಕಿಸಯ್ಯ ಎನ್ನ
ಕಪಿಲಸಿದ್ಧಮಲ್ಲಿಕಾರ್ಜುನ. ॥ ೫೭ ॥

೫೮

ಅಯ್ಯಾ, ನಿತ್ಯನು ನೀನೆ ;
ಆ ಸತ್ಯಶುದ್ಧ ದೇಹಿ ನೀನೆ ಕಾಣಾ, ಎಲೆ ಅಯ್ಯಾ.
ಅಯ್ಯಾ, ನೀನು ಕಾರುಣ್ಯವುಳ್ಳ ಮಹದಾಶ್ರಯ ಕಾಣಾ, ಎಲೆ ಅಯ್ಯಾ.
ನೀನು ಭಕ್ತದೇಹಿಕ ದೇವನಾದ ಕಾರಣ ಮೆಚ್ಚಿದೆನಯ್ಯಾ.
ಒಲುಮೆಯ ಮಚ್ಚು ನಿಶ್ಚಯವೆಂದು ನಂಬಿದೆನಯ್ಯಾ.
ಗುರುವೇ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೮ ॥

೫೯

ಅಯ್ಯಾ, ನಿನಗೆರಗಿದವರಿಗೆ ಜನವೆರಗಿ
ಮರುಗುವದಿದೆ ಕಾರಣವಯ್ಯ.
ಅಯ್ಯಾ, ಹಾ ಹಾ, ನಾಲಗೆಯೆರಳಿಗೆ ಗುಣವೆಂಬ ತಂಪಿಗೆ
ಜನವೆರಗಿ ಮರಗುವದಯ್ಯ.
ಹಾಹಾ, ಅಲ್ಲಿ ನೀನಿಪ್ಪ ಕಾರಣ ತಂಪಿನ ಸಿಂಪುಳಿಕ
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೫೯ ॥

೬೦

ಅಯ್ಯಾ, ನಿನ್ನ ಆಜ್ಞೆಯಲ್ಲಿ ಇರದವರಾರು ?
ಬ್ರಹ್ಮೇಂದ್ರಾದಿ ದೇವತೆಗಳೆಲ್ಲ !
ಅಯ್ಯಾ, ನಿಮ್ಮಾಜ್ಞೆಯಲ್ಲಿ ಆಗದವರಾರು ?
ವಿಷ್ಣು ಮೊದಲಾದ ಮನುಜರೆಲ್ಲ !
ಸರ್ವ ಚೈತನ್ಯಾತ್ಮ ಮುಖಲಿಂಗವೆ ಅವಧಾರು
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೦ ॥

೬೧

ಅಯ್ಯಾ, ನಿನ್ನ ಕರವೆಂಬ
ಉರುತರ ಗರ್ಭದಲ್ಲಿ ಭವಿಸಿದೆನಯ್ಯಾ.

ನಿನ್ನ ಕರುಣವೆ ಎನಗೆ ಮಹಾಕಾನನವಾಯ್ತು.
ಲೋಕದ ಪಾತಕಿಗಳು ಉಂಡಂತೆ ಉಂಡೆನಾದಡೆ,
ಬಂದಂತೆ ಬಂದೆನಾದಡೆ ನಿಜ ನಿಮ್ಮಾಣೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೧ ॥

೬೨

ಅಯ್ಯಾ, ನಿನ್ನವರ ಕಂಡು ಕರಗದನ್ನಕ್ಕರ
ನಿನ್ನವರ ಕಂಡು ನೀನೆಂದೆ ಕಾಣದನ್ನಕ್ಕರ
ನಿನ್ನವರ ಮೂರ್ತಿಧ್ಯಾನದಲ್ಲಿ ಮೂರ್ಛೆವೋಗದನ್ನಕ್ಕರ
ವೇಷದ ಗೌಳೆಯರ, ಲಾಂಛನದ ಲಂಪಟರ
ಮಜ್ಜನಕ್ಕೆರೆವ ಭವಿಗಳಿಗೆ ಏಕೊಲಿವೆಯಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೨ ॥

೬೩

ಅಯ್ಯಾ, ನಿನ್ನವರ ಸಂಗದಲ್ಲಿ ಸಂಗಿಯಾದೆ.
ನಿನ್ನವರ ಸಂಗದಿಂದ ಕಾಕತನವ ಬಿಟ್ಟು ಬೇಕಾದ ಹಾಂಗೆಯಾದೆ.
ನಿನ್ನವರ ಒಲವು ಅನೇಕ ಪ್ರಕಾರದಲ್ಲಿ
ಪಸರಿ ಪರ್ಬಿತ್ತು ಎನ್ನ ಸರ್ವಾಂಗದಲ್ಲಿ
ನಿನ್ನವರ ಒಲುಮೆಯಾನಂದವನೆನಗೆ ಕರುಣಿಸಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೩ ॥

೬೪

ಅಯ್ಯಾ, ನಿನ್ನ ವಿಕಳತೆಯಿಂದ ಹಾಹಾ ! ಭೂತನಾದೆ.
ಅಯ್ಯಾ, ನಿನ್ನ ನೆನಹಿನ ಧ್ಯಾನದಿಂದ ಮೂರ್ಛೆಹೋದೆ.
ಅಯ್ಯಾ, ನಿನ್ನ ಭಕ್ತಿತ್ರಯದಿಂದ ಶುದ್ಧಮುಕ್ತನಾದೆನಯ್ಯಾ.
ತಾತ್ಪರ್ಯದಲ್ಲಿ ಶುದ್ಧಾತ್ಮನಾಗಿ ನಿನ್ನ ಭಕ್ತಿರತಿಯಲ್ಲಿ ಸಂಪನ್ನನಾದೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೪ ॥

೬೫

ಅಯ್ಯಾ, ನಿನ್ನಾಳಾಗಿ ಆರೆನಯ್ಯಾ ಕೆಲಬರ ಬೋಸರಿಸಲು.
ಅಯ್ಯಾ, ನಿನ್ನಾಳಾಗಿ ಆರೆನಯ್ಯಾ ಕೆಲಬರ ಸ್ತುತಿಯಿಸಲು.

ಅಯ್ಯಾ, ನೀ ನಿತ್ಯನೆಂದು ಮರೆವೊಕ್ಕಡೆ ಸೀಯದಂತಿಪ್ಪರೆ
ಶಿವನೆ ನಿನ್ನ ಕಾಮ್ಯಾರ್ಥವ ಬೇಡಿ ಬಾಧೆಬಡಿಸೆ.
ನಿನಗೇನುಂಟಯ್ಯಾ, ನೀನು ನಿಃಕಾಮಿ.
ಅಂಜದಿರು, ಫಲಪದವ ಬೇಡೆ ; ನೀನಿಹ ಲೋಕ ನಿನಗಿರಲಿ.
ಕಾಡದೆ ನಿನ್ನವರೊಳಗೆ ಕೂಡಿರುವ ಪದವ ಕರುಣಿಸಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೫ ॥

೬೬

ಅಯ್ಯಾ, ನಿಮ್ಮ ಕಂಡು ಕಂಗಳು ನೋಡಲಮ್ಮದೆ
ಬೆಚ್ಚಿ ಬೆದರಿದುವಯ್ಯಾ ;
ನೀನು ಶತಕೋಟಿ ಸೂರ್ಯಪ್ರಕಾಶಕ್ಕತೀತನು !
ನಿನ್ನ ಕಂಡ ಬಳಿಕ ಕರ್ಮವುಂಟೆ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೬ ॥

೬೭

ಅಯ್ಯಾ, ನಿಮ್ಮನೆನ್ನ ಕರದಲಿ
ಆರುಕಾಯದ ಕಳೆಯಿಂದೆತ್ತಲಿ.
ಅಯ್ಯಾ, ಜೀವ ಸಂಭೋಗನಾದೆನು.
ವಾಯದ ಕಾಯವೆಂಬವ ಮೀರಿ ನೀನಾದೆ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೭ ॥

೬೮

ಅಯ್ಯಾ, ನಿಮ್ಮ ಬರವಿಂಗೆ ಕಣ್ಬೇಟಗೊಂಡೆನು.
ಎಲೆ ಅಯ್ಯಾ, ನಿಮ್ಮ ಬರವಿಂಗೆ ಎನ್ನ ಮನದ ಮಂಚವ ಪಚ್ಚಡಿಸಿದೆ.
ಎಲೆ ಅಯ್ಯಾ, ನಿಮ್ಮ ಬರವಿಂಗೆ ಚಿತ್ತಸುಯಿದಾನಿಯಾಗಿದ್ದೇನೆ.
ಎಲೆ ಅಯ್ಯಾ, ನಿಮ್ಮ ಬರವಿಂಗೆ ಸುಜ್ಞಾನದ ಸೆವಿಗೆ ಹಾಸಿ
ಆಸೆಬಡುತ್ತಿದ್ದೇನೆ.
ಎಲೆ ಅಯ್ಯಾ, ನೀ ಬಂದು ಅವಿರತವಿಲ್ಲದೆ ಕೂಡಿ
ನಿನ್ನವಳೆಂದೆನಿಸಾ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೬೮ ॥

೬೯

ಅಯ್ಯಾ, ನಿಮ್ಮ ಮಹಾತ್ಮೆಯನಾರಿಗೆಯೂ ಉಪಮಿಸಬಾರದು.
ಹಾ ಹಾ, ಅಯ್ಯಾ, ನೀ ಮಹಾಗರುವ ಕಂಡಯ್ಯಾ,

ನೀ ಮಹಾಮಹಾದೇವನ್ನೆ,
ಎನ್ನ ಕಪಿಲಸಿದ್ಧಮಲ್ಲೇಶ್ವರ, ದೇವರ ದೇವನಯ್ಯಾ. ॥ ೭೯ ॥

೭೦

ಅಯ್ಯಾ, ನಿಮ್ಮ ಮಹಾನುಭಾವರಿಂದ
ಮಹಾವಸ್ತುವಿನ ಪ್ರಮಾಣವನರಿದೆ ;
ಶುದ್ಧ ಸಿದ್ಧ ಪ್ರಸಿದ್ಧವಿದೆಂದರಿದೆ ;
ಪಾದೋದಕ ಪ್ರಸಾದ ಭಕ್ತಿಯೆಂಬ ನಿಶ್ಚಯುವನರಿದೆ.
ನಿಮ್ಮ ಮಹಾನುಭಾವರಿಂದ ಪರತತ್ವಪ್ರಮಾಣುವನರಿದು
ಶರಣು ಶರಣೆನುತಿದ್ದೆನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೦ ॥

೭೧

ಅಯ್ಯಾ, ನಿಮ್ಮವರ ಕಂಡಡೆ ನೀವೆಂದೆ ನಂಬುವ
ನಂಬುಗೆಯು ಕರುಣಿಸಯ್ಯಾ.
ಅಯ್ಯಾ, ನಿಮ್ಮವರ ವಾಕ್ಯವ ಕೇಳಿದಡೆ,
ನಿಮ್ಮ ವಾಕ್ಯವೆಂದೆ ನಂಬುವ ನಂಬುಗೆಯು ಕರುಣಿಸಯ್ಯಾ.
ಅಯ್ಯಾ, ನಿಮ್ಮವರ ಕೀಳು ಕಾಯ್ದುಕೊಂಡಿಪ್ಪೆನಯ್ಯಾ.
ಎನ್ನ ಮಾನಸ-ವಾಚಕ-ಕಾಯಕಕ್ಕೆ ಇದನೆ ಕರುಣಿಸಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಧರ್ಮ. ॥ ೭೧ ॥

೭೨

ಅಯ್ಯಾ, ನಿಮ್ಮ ವಿಕಳದಲ್ಲಿ ನೆನೆವುತ್ತ
ಗಾಳಿಯು ಸರವ ನೀವೆಂದು ಬಗೆದೆ ಕಂಡಯ್ಯಾ.
ಕಪಿಲಸಿದ್ಧಮಲ್ಲಿನಾಥಯ್ಯಾ,
ನಿಮ್ಮ ವಿಕಳದಲ್ಲಿ ಮಹಾಭ್ರಾಂತಿಯಾಗಿದ್ದೆನಯ್ಯಾ. ॥ ೭೨ ॥

೭೩

ಅಯ್ಯಾ, ನಿಮ್ಮ ಶ್ರೀಪಾದವ ಹರಿದು ಹತ್ತುವೆ.
ನೆನೆವ ಮನವ ಕೆಡಿಸಲೆಂದು ಮೋಹದ ಗಾಳಿ ಬೀಸಲೊಡನೆ
ಕೋಪದ ಕಿಚ್ಚು ಹತ್ತಿ ಬೇವೆನಯ್ಯಾ.

ಅಯ್ಯಾ, ನಿಮ್ಮ ನೆನೆವ ಮನವ ಕಾಡುವ ವಿಧಿಯ ಕೊಂದು
ಎನ್ನಲ್ಲಿ ನೆಲಸಯ್ಯ ಗುರುವೆ ದೇವರದೇವ
ಕಪಿಲಸಿದ್ಧಮಲ್ಲಿಕಾರ್ಜುನಾ. || ೭೩ ||

೭೪

ಅಯ್ಯಾ, ನಿಮ್ಮ ಸತ್ಕೃಪೆ !
ಎನ್ನ ಸುಕೃತಾಂಗಿಯ ಮಾಡಿ ಮರ್ತ್ಯಕ್ಕೆ ತಂದಿರಯ್ಯಾ.
ಅಯ್ಯಾ, ನಿಮ್ಮ ಕೃಪೆಯಿಂದ
ನಿಷ್ಠಾಮಾಹೇಶ್ವರನೆನಿಪ ಅಮುಗಿದೇವಯ್ಯಗಳಿಂದ
ಪ್ರಭುದೇವರೆಂಬ ಅನಾದಿ ಜಂಗಮವ ಕಂಡೆನಯ್ಯಾ.
ಅಯ್ಯಾ, ನಿಮ್ಮ ಪ್ರಭುದೇವರೆಂಬ ಅನಾದಿ ಜಂಗಮದಿಂದ
ಪರಮ ಗುರುವಪ್ಪ ಬಸವೇಶ್ವರನ ಕಂಡೆನಯ್ಯಾ.
ಆ ಬಸವಣ್ಣನಿಂದ ಅಸಂಖ್ಯಾತ ಪ್ರಮಥಗಣಂಗಳ ಕಂಡೆನಯ್ಯಾ.
ಆ ಗಣಂಗಳ ಕೃಪೆಯಿಂದ ಚೆನ್ನಬಸವಣ್ಣನ ಪಡೆದು
ನಿಮ್ಮನಂಗದ ಮೇಲೆ ಸಾಹಿತ್ಯವ ಮಾಡಿಕೊಂಡೆನಯ್ಯಾ.
ನಿಮ್ಮ ಸಾಹಿತ್ಯದ ಪ್ರಸನ್ನಮೂರ್ತಿ ಎನ್ನ ಕಣ್ಣಮುಂದೆ ಪ್ರತ್ಯಕ್ಷವಾಗಿಪ್ಪ
ಮರುಳಶಂಕರದೇವರ ಶ್ರೀಪಾದವ ಕಂಡು
ನಾನು ನಿಶ್ಚಯ ಕೃತಾರ್ಥನಾದೆನಯ್ಯಾ,
ಕಪಿಲಸಿದ್ಧಮಲ್ಲಿನಾಥ ಪ್ರಭುವೇ, ನಿಮ್ಮ ಧರ್ಮ. || ೭೪ ||

೭೫

ಅಯ್ಯಾ, ನಿಮ್ಮ ಹಾಡಿ ಹಾಡಿ ಹಂಬಲಿಸಿದೆನಯ್ಯ.
ನಿಮ್ಮ ಬೇಡಿ ಬೇಡಿ ಬಾಯಿ ಬೋಡಾದೆನಯ್ಯ.
ನುಡಿಗೆಟ್ಟ ಬ್ರಹ್ಮದಲ್ಲಿ ನಡೆದಹೆನೆಂದರೆ
ಎನ್ನೊಡಲಾಮಿಷ ಕಾಡುತ್ತಿಪೆ.
ಮೃಡನೆ, ಕಪಿಸಿದ್ಧಮಲ್ಲಿಕಾರ್ಜುನಯ್ಯ,
ಇವನೆಲ್ಲವ ಕಳೆದು ನಿಮ್ಮದೊಂದು ಭಕ್ತಿಯ ಕರುಣಿಸಯ್ಯಾ, ತಂದೆ !
|| ೭೫ ||

೭೬

ಅಯ್ಯಾ, ನಿಮ್ಮಾಜ್ಞೆಯಲ್ಲಿಪ್ಪವು ಕಂಡಾ ಸಕಲ ಲೋಕಂಗಳು.
ಅಯ್ಯಾ, ನಿಮ್ಮಿಚ್ಛಾಮಾತ್ರದಲ್ಲಿಪ್ಪರು ಕಂಡಾ ಕೋಟಿ ಹರಿವಿರಿಂಚ್ಯಾದಿಗಳು.

ಅಯ್ಯಾ, ನಿಮ್ಮ ಮೀರಿದಾಧಿಕ್ಯವೊಂದೂ ಇಲ್ಲ.
ಎಲೆ ಅಯ್ಯಾ, ಸಮಸ್ತ ಬ್ರಹ್ಮಾಂಡಗಳು ನಿಮ್ಮ ರೋಮಕೂಪದಲ್ಲಿಪ್ಪವು.
ಉರುತರ ಶಿವನೆ ! ನಿಮ್ಮನರಿಯದೆ ಏಕೆ ಕೆಡುವರಯ್ಯಾ ನರರು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೬ ॥

೭೭

ಅಯ್ಯಾ, ನೀನಾಡುವ ಹೊಲನ, ನೀನಿಪ್ಪ ಇರವ
ಕಂಡೆನೆಂಬ ಸಿದ್ಧರೆಲ್ಲ ನಿಸ್ಸಿದ್ಧರಾದರು.
ಆದಿಮಧ್ಯಾವಸಾನವನು ಭೇದಿಸುವ ಭೇದವನು
ಸಾಧಿಸುವ ತರ್ಕವನು ತಂತ್ರಗಳ
ತನುಗುಣ ಮಲತ್ರಯಂಗಳನತಿಗಳೆದು
ಅನುಗುಣವ ಕಂಡಯ್ಯ ಕಪಿಲಸಿದ್ಧಮಲ್ಲಿಕಾರ್ಜುನ. ॥ ೭೭ ॥

೭೮

ಅಯ್ಯಾ, ನೀನು ಅತಿಶಯ ಜ್ಯೋತಿರ್ಮಯನು ಆನಂದಸ್ಥಾನದಲ್ಲಿ.
ಅಯ್ಯಾ, ನೀನು ಅತಿಶಯ ನಿತ್ಯಮಯನು,
ಬಾಹ್ಯಾಭ್ಯಂತರದಲ್ಲಿ ಪರಿಪೂರ್ಣನು ;
ನಿನ್ನಾಧಿಕ್ಯವನರಿಯಲ್ಕೆ ನಿಗಮಕ್ಕಭೇದ್ಯನು.
ಗುರುವಿನ ಕರುಣದಿಂದ ಎನ್ನ ಕರಸ್ಥಲಕ್ಕೆ ಬಂದು ಸಿಕ್ಕಿ ಒಳಗಾದೆ ಶಿವನೆ,
ಮಹಾಲಿಂಗ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೮ ॥

೭೯

ಅಯ್ಯಾ, ನೀನು ಅನಾಹತ ಲೋಕದಲ್ಲಿ ಪ್ರವೇಶಿಸುವಾಗ
ಅಕ್ಷರವೆರಡರ ತದ್ರೂಪವಾಗಿರ್ದೆಯಯ್ಯಾ.
ನೀನಾದಿ ಬ್ರಹ್ಮಾಂಡವನರಿವಾಗ ಶಕ್ತಿತ್ರಯದ ಸಾಖೆಯಾಗಿರ್ದೆಯಯ್ಯಾ.
ನೀನು ಸಕಲದಲ್ಲಿ ನಿಃಕಲದಲ್ಲಿ ಸ್ವಾನುಭಾವಸಂಬಂಧದಲ್ಲಿ
ಅಕ್ಷರವೆರಡರಲ್ಲಿ ಆಂದೋಳನಾಗಿ ಪ್ರವೇಶಿಸುವಾಗ,
ಶುದ್ಧ ನೀನಾಗಿ, ಸಿದ್ಧ ನೀನಾಗಿ, ಪ್ರಸಿದ್ಧ ನೀನಾಗಿ
ಪಂಚ ಮಹಾವಾಕ್ಯಂಗಳೆ ನಿನ್ನ ಮನೆಯಾಗಿ,
[ಓಂ]ಎಂಬುದೆ ನಿನ್ನ ತನುವಾಗಿ,

ಆನಂದವೆಂಬುದೆ ನಿನ್ನ ಮೂರ್ತಿಯಾಗಿ,
ಪರಾಪರ ರೂಪೆ ನಿನ್ನವಯವವಾಗಿ ನೀನಿಪ್ಪೆಯಯ್ಯಾ.
ನಿತ್ಯಮಂಗಳರೂಪನಾಗಿ, ಸ್ವತಂತ್ರನಾಗಿ, ಪರಮಸೀಮೆಯ ಮೀರಿಪ್ಪ
ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಏಕಾರ್ಥವ ಮಾಡಿದ
ಬಸವಣ್ಣ ಗುರುವೇ, ಶರಣು. ॥ ೮೯ ॥

೯೦

ಅಯ್ಯಾ, ನೀನೇಕೆ ಬರಲೊಲ್ಲೆ ಹೇಳಯ್ಯಾ.
ನೀ ಬಾರೆಯೆಂದಾನು ಕಲ್ಮರನಾಗಿರ್ದೆನಯ್ಯಾ.
ಅಯ್ಯಾ, ನೀ ಬಾರಯ್ಯಾ ;
ಬಂದೆನ್ನ ಹೃದಯ ಸಿಂಹಾಸನವ ಮಾಡಿ ನಿಲ್ಲಯ್ಯಾ.
ಆಹಾ ! ನೀ ಬಾರಾ, ಎನ್ನ ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೯೦ ॥

೯೧

ಅಯ್ಯಾ, ನೀವು ಕೈಯ ಬಿಟ್ಟಲೊಡನೆ
ಅಣ್ಣ ಕೇಳಿರಣ್ಣ, ಬ್ರಹ್ಮ ತಾ ಮೈಮರೆದ
ವಿಷ್ಣು ತಾ ಮರೆದೊರಗಿದ
ವೇದಂಗಳು ತಮತಮಗೆ ದೆಸೆದೆಸೆಗೆ ಬಾಯಬಿಟ್ಟವಯ್ಯಾ
ಕಪಿಲಸಿದ್ಧಮಲ್ಲಿಕಾರ್ಜುನನ ಮೈಯ ಶಬ್ದಕ್ಕೆ. ॥ ೯೧ ॥

೯೨

ಅಯ್ಯಾ, ನೀವೆನ್ನ ಕರಸ್ಥಲಕ್ಕೆ ಬಂದಿರಾಗಿ
ಆನು ತನುಪ್ರಾಣ ಇಷ್ಟಲಿಂಗಿಯಾದೆನು.
ಅಯ್ಯಾ, ನಿನ್ನ ಪ್ರಸಾದ ಪಾದೋದಕಕ್ಕೆ ಯೋಗ್ಯನಾದೆ.
ಅಜಾತನೆ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಆನು ನೀನೆಂಬ ಕನ್ನಡವಿನ್ನೇಕಯ್ಯ ? ॥ ೯೨ ॥

೯೩

ಅಯ್ಯಾ, ಫಲಪದಕ್ಕೆ ತಾರದಿರಯ್ಯ ಎನ್ನ ನಿಮ್ಮ ಧರ್ಮ.
ಫಲದಿಂದ ಪದದಿಂದ ಭವ, ಭವದಿಂದ ನರಕ.

ಇಂತಪ್ಪವನೆನಗೆ ತೋರದಿರಯ್ಯಾ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೩ ॥

೮೪

ಅಯ್ಯಾ, ಬಾರಯ್ಯಾ, ನಿಮ್ಮಾಯತದ ಕರದೊಳಿಪ್ಪನೇ.
ಅಯ್ಯಾ, ಬಾರಯ್ಯಾ, ನಿನ್ನ ಕರದಲ್ಲಿ ಪಿಡಿದೆಯ್ದಿದೆ.
ಕಪಿಲಸಿದ್ಧಮಲ್ಲಿನಾಥಯ್ಯಾ, ಶರಣು, ಶರಣದೇಹಿಕದೇವಾ. ॥ ೮೪ ॥

೮೫

ಅಯ್ಯಾ, ಬಾರಾ ಬಾರಾ ಆನಂದದಾದಿಯಲಿ.
ಅಯ್ಯಾ, ಒಯ್ಯನೆ ಕೈಗುಡಯ್ಯ.
ಅಯ್ಯಾ, ಕಂಗೆಟ್ಟ ಪಶುವಾನು
ಎಲೆ ಅಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನ. ॥ ೮೫ ॥

೮೬

ಅಯ್ಯಾ, ಬ್ರಾಹ್ಮರಿಗೆ ಬ್ರತಂಗೊಟ್ಟು
ಮುಂಜಿಗಟ್ಟಿ ಅಯ್ಯಾ, ಅಯ್ಯಾ,
ಅಥರ್ವಣವೇದವನು ಬ್ರಾಹ್ಮರಿಗೆ ಉಪದೇಶವ ಮಾಡುವಂದು
ಅಲ್ಲಿ ಅವನ ಶಿರಸ್ಸ ನಿನ್ನ ಹಸ್ತಮಾಣಿಕವೆಂದು ಕಟ್ಟಿದೆ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೮೬ ॥

೮೭

ಅಯ್ಯಾ, ಮಹಾಭಕ್ತರ ಹೃದಯದಲ್ಲಿ ನೀನಿಪ್ಪೆಯಾಗಿ,
ಅವರ ವಚನವೆನ್ನ ಕರ್ಣದೊಳಗೆ ತುಂಬಲೊಡನೆ,
ವಿರಕ್ತಿ ಬೆದೆಯಾಗಿ, ಭಕ್ತಿ ಮೊಳೆಯಾಗಿ,
ನಿಮ್ಮ ಶ್ರೀಪಾದದೊಳಗೆನ್ನ ಸುತ್ತಿತ್ತು,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೮೭ ॥

೮೮

ಅಯ್ಯಾ, ವಾಣಿ ನಾಲ್ಕರ ಮೇಲೆ ಮಾಣದೆ ನುಡಿವ
ನಿರ್ವಾಣಿಯ ಸಂಭಾಷಣೆಯ ಮಾಡಬಲ್ಲಡೆ ನಿರ್ವಾಣ.
ವರ್ಣ ಏಳರೊಳಗೆ ಪರಿಪೂರ್ಣವಾಗಿಪ್ಪ

ಮಹಾವರ್ಣದ ತನ್ಮಯುವ ಮಾಡಬಲ್ಲಡೆ ನಿರ್ವಾಣ.
ಸ್ಥಾನ ಹತ್ತರಲ್ಲಿ ಆನಂದಸಿಂಹಾಸನದ
ನಾನಾ ಬೆಳಗಿನ ಬೀಜದ ತಿರುಳನನುಭವಿಸಬಲ್ಲಡೆ ಲಿಂಗಾನುಭಾವಿ.
ಪ್ರಣವ ಹತ್ತರಲ್ಲಿ ಧ್ಯಾನಚತುಷ್ಟಯು ಕೂಡಿ
ತಲ್ಲೀಯದ ಕೀಲ ಬಲ್ಲಡೆ ಲಿಂಗೈಕ್ಯ.
ಇದು ಕಾರಣ ಕಪಿಲಸಿದ್ಧಮಲ್ಲಿಕಾರ್ಜುನಯ್ಯ,
ನಿಮ್ಮ ಶರಣ ಚೆನ್ನಬಸವಣ್ಣನ ಶ್ರೀಪಾದಕ್ಕೆ
ನಮೋ ನಮೋ ಎನುತ್ತಿರ್ದೆನು. ॥ ೮೮ ॥

೮೯

ಅಯ್ಯಾ, ಸಂಸಾರದುಪಟಳವು ಕಾಡಿತ್ತು ಇನ್ನೇವೆನಿನ್ನೇವೆ ?
ಕಾಮಕಿಚ್ಚೈಸಿತ್ತು ಇನ್ನೇವೆನಿನ್ನೇವೆ ?
ಕ್ರೋಧಕಿಚ್ಚೈಸಿತ್ತು ಇನ್ನೇವೆನಿನ್ನೇವೆ ?
ನಿನ್ನ ಮಚ್ಚಲೀಯದು ಇನ್ನೇವೆನಿನ್ನೇವೆ ?
ಭಕ್ತಿ ತಾತ್ಪರ್ಯವ ಅವಮನ್ನಣೆಯು ಮಾಡಿತ್ತು
ಶ್ರೀಗುರುವೆ ಕಪಿಲಸಿದ್ಧಮಲ್ಲಿಕಾರ್ಜುನ. ॥ ೮೯ ॥

೯೦

ಅಯ್ಯಾ, ಸಂಸಾರ ನಿಸ್ಸಾರವೆಂಬ ವಿಂಧ್ಯದೊಳಗೆ
ಅಯ್ಯಾ, ಕಾಮನೆಂಬ ಕಳ್ಳನ ತೋರಿ ಬೆಚ್ಚಿ ಬೆದರಿಸುವೆ.
ಅಯ್ಯಾ, ಕಾಮನ ಕರೆದು ಎನ್ನವನೆನ್ನವನೆನ್ನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನ., ॥ ೯೦ ॥

೯೧

ಅಯ್ಯಾ, ಸಂಸಾರವೆಂಬ ಅರಣ್ಯದೊಳಗೆ
ಅಸುರವು ಬಿಡದಿರೆನ್ನ ಬೊಪ್ಪ
ಬೆನ್ನಲಿದ್ದು ಸಲಹುದೆನ್ನ.
ಪಂಚೇಂದ್ರಿಯುವೆಂಬ ಐನಾಯುಬಿಟ್ಟು
ಕಾಮನೆಂಬ ಬೇಟೆಕಾರನ ಬಾರಿಗೊಪ್ಪಿಸದಿರು
ಕಪಿಲಸಿದ್ಧಮಲ್ಲಿಕಾರ್ಜುನ. ॥ ೯೧ ॥

೯೨

ಅಯ್ಯಾ, ಸಂಸಾರವೆಂಬ ರಾಹುವಿನ ಆಣಲೊಳಗಿದ್ದೆನಯ್ಯ.
ಅಯ್ಯಾ, ಎನ್ನನಾವಾಗ ನುಂಗೀತೆಂದರಿಯೆನಯ್ಯ.
ಅಯ್ಯಾ, ಎನ್ನನಾವಾಗ ಉಗುಳೀತೆಂದರಿಯೆನಯ್ಯ.
ಅದರ ಬಾಯಿಂದಲೆನ್ನ ತೆಗೆದು ಕಾಯಯ್ಯ,
ಕಪಿಲಸಿದ್ಧಮಲ್ಲಿಕಾರ್ಜುನ. ‖ ೯೨ ‖

೯೩

ಅಯ್ಯಾ, ಸಂಸಾರವೆಂಬ ಸಾಗರಕ್ಕೆ ಒಡಲೆಂಬುದೊಂದು ಬೈತ್ರ ಕಂಡಯ್ಯಾ.
ಪುಣ್ಯ–ಪಾಪಂಗಳೆಂಬ ಭಂಡವನೆ ತುಂಬಿ ಪಂಚೈವರು ಏರಿದಡೆ,
ಜ್ಞಾನವೆಂಬ ಕೂಕಂಬಿಯಲ್ಲಿ ಲಿಂಗವೆಂಬ
ತಾರಾಮಂಡಲವ ನೋಡಿ ನಡೆಸುವುದು.
ಜವನ ಕಾಲಾಳು ಕರಹಿರಿದು ಕಂಡಾ,
ಸಮಭೋಗವೆಂಬ ನೇಣ ನವನಾಳದಲ್ಲಿ ಕಟ್ಟಿ,
ಮನವೆಂಬ ಪಾವೆಯನು ವಾಯುಗೊಳಲು,
ಕಳವಳವೆಂಬ ಕಡಲೊಳಗೆ ಸಿಲುಕೆ,
ತೆರೆಯ ಹೊಯ್ಲು ಕರ ಹಿರಿದು ಕಂಡಯ್ಯಾ.
ಉದಮದವೆಂಬ ಸುಳಿಯಲ್ಲಿ ತಿರುಗಿಸದೆ
ಗುರುಪದವೆಂಬ ಬೆಂಗುಂಡ ಹಿಡಿ ಕಂಡಾ.
ಇಹಲೋಕ_ಪರಲೋಕ ಕಪಿಲಸಿದ್ಧಮಲ್ಲೇಶ್ವರನ ಕಾಂಬೆ ಕಂಡಾ. ‖ ೯೩ ‖

೯೪

ಅಯ್ಯಾ, ಸಂಸಾರವೆಂಬ ಹಾಯಿ ಪೊಡೆದು
ಆನು ಬೆಚ್ಚುತ್ತಿದ್ದೇನೆ, ಬೆದರುತ್ತಿದ್ದೇನೆ.
ಎಲೆಲೆ ಸಂಸಾರವೈರಿ ! ನಿನ್ನವ ನಿನ್ನವ ನಿನ್ನವನೆನಿಸಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ, ದೇವರ ದೇವ ! ‖ ೯೪ ‖

೯೫

ಅಯ್ಯಾ, ಸೇವ್ಯನಾಗಿ ಸ್ವಯವಾದೆ ;
ಸಂಗಿಯಾಗಿ ನಿಸ್ಸಂಗಿಯಾದೆ ;

ಆನಂದನಾಗಿ ಅನಾಮಯನಾದೆ,
ಸರ್ವದೊಳೊಡಗೂಡಿ ಸಾದಾಖ್ಯತತ್ತ್ವವ ಮೀರಿದೆ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿಜಸ್ವರೂಪವನರುಹಿ ಎನಗೆ ಚುಳುಕಾದೆ. ॥ ೯೫ ॥

೯೬

ಅಯ್ಯಾ, ಹಾ ! ದೈವವ ನಿರ್ದೈವವ ಮಾಡಿದಾ,
ಅಯ್ಯಾ, ಮುನ್ನ ಅರ್ಚನೆ ಪೂಜನೆಗೊಡವೆ ದಕ್ಷನೇನಾದ ?
ಇನಿಸನರಿದು ಕೆಡುವಡೆ ನಿಮ್ಮ ಮೇಲೆ ಪೊಲ್ಲಹಪಿಲ್ಲಯ್ಯಾ
ಎನ್ನ ಕಪಿಲಸಿದ್ಧಮಲ್ಲೇಶ್ವರದೇವಾ. ॥ ೯೬ ॥

೯೭

ಅಯ್ಯಾ, ಹಿಂದೆ ಬಂದ ಭವಂಗಳ ನೀನು ಬಲ್ಲೆ ನಾನು ಬಲ್ಲೆ.
ಅಯ್ಯಾ, ನೀನೆನ್ನ ನಿಲಿಸಿದ ಪರಿಯ ನೀನು ಬಲ್ಲೆ ನಾನು ಬಲ್ಲೆ.
ತಲೆಯೊಡೆಯಂಗೆ ಕಣ್ಣ ಬೈಚಿಡುವ ಹಾಂಗೆ
ವಂಚನೆಯ ಮಾಡಿಹೆನೆ ನಾನಯ್ಯಾ ನಿನಗಾನು ?
ನೀ ಬರಹೇಳಿದ ಹಾಂಗೆ ಇದ್ದೆ.
ನೀ ಮಾಡಹೇಳಿದ ಹಾಂಗೆ ಮಾಡಿದೆ.
ನೀನು ಗುರುವಾಗಿ ಬಂದು ಪರಮಸೀಮೆ ಇದೆಂದು ತೋರಿದೆ.
ನಾನು ಅಲ್ಲಿಯೆ ಇದ್ದೆನು.
ಇನ್ನು ನೀನೊಯ್ವಲ್ಲಿಗೆ ಬಂದೆನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೯೭ ॥

೯೮

ಅಯ್ಯಾ, ಹಿಂದೆ ಹಲವು ಯುಗಂಗಳು ತಿರುಗಿ ಬರುತ್ತಿಪ್ಪಲ್ಲಿ,
ಅವನು ನೀ ಮಾಡಿದೆಯಲ್ಲದೆ ತಮ್ಮಾಜ್ಞೆಯಿಂದ ಬಂದುದಿಲ್ಲವಯ್ಯಾ.
ಬಸವಣ್ಣಾ, ನಿಮ್ಮಾಜ್ಞೆಯಲ್ಲಿ ಯುಗಂಗಳು ಭವಭವದಲ್ಲಿ ಕಾಡಿದವು.
ಬಸವಣ್ಣಾ, ಸಂಸಾರವಾಗಿ ಎನ್ನನೆ ಕಾಡಿದವು
ಬಸವಣ್ಣಾ, ಹೊನ್ನು ಹೆಣ್ಣು ಮಣ್ಣು ತ್ರಿವಿಧವಾಗಿ ಎನ್ನನೆ ಕಾಡಿದವು.
ಬಸವಣ್ಣಾ, ಆಶಾಪಾಶಂಗಳಾಗಿ ಎನ್ನನೆ ಕಾಡಿದವು.
ಬಸವಣ್ಣಾ, ಗುರು ಬಸವಣ್ಣಾ, ಇವೆಲ್ಲಾ ನಿಮ್ಮಾಧೀನದವು :
ನೀ ಮಾಡಿದವಾದವು, ಬೇಡಾ ಎಂದಡೆ ಮಾದವು.

ಅವಕ್ಕೆ ಎನ್ನನೊಪ್ಪಿಸದೆ. 'ನಿನ್ನವ ನಿನ್ನವ' ಎನಿಸಾ,
ಕಪಿಲಸಿದ್ಧಮಲ್ಲಿಕಾರ್ಜುನನ ತೋರಿದ ಗುರು ಬಸವಣ್ಣಾ. ॥ ೯೮ ॥

೯೯

ಅಯ್ಯಾ, ಹಿಂದೆ ನಾ ಬಂದ ಹಲವು ಭವ ಸಾಲದೆ ?
ಏಕೆ ಕಾಡುವೆಯಯ್ಯಾ.
ಹಿಂದೆ ನಿನ್ನನರಿಯದೆ ದಾನಿಗಳಾಗಿ ಹಲವು ಭವದಲ್ಲಿ
ಕುಡಿದು ಆನುಂಡ ನರಕವ ನೀನರಿಯು,
ಅರಿದರಿದೆನ್ನ ಕಾಡುವರೆ ?
ಅಯ್ಯಾ, ನಾನು ಬಂದ ಸುಖಂಗಳಲ್ಲಿ ನಿನ್ನನರಿಯದ ಕಾರಣದಲ್ಲಿ
ನೀನಿಕ್ಕಿದೆ ನರಕದಲ್ಲಿ,
ಆನದನುಣ್ಣದಿದ್ದಡೆ ಎನ್ನ ವಶವೆ ?
ಕಪಿಲಸಿದ್ಧಮಲ್ಲಿಕಾರ್ಜುನ. ॥ ೯೯ ॥

೧೦೦

ಅಯ್ಯಾ, ಹೊಟ್ಟೆ ಬೆನ್ನ ಮಚ್ಚಿದಂತೆ
ನಾ ನಿನ್ನ ಮಚ್ಚಿದೆನಯ್ಯಾ.
ಅಯ್ಯಾ, ನೀ ಬಾರಯ್ಯಾ,
ನಿಮ್ಮ ಬರವ ಹಾರುತ್ತಿರ್ದೆನಯ್ಯಾ.
ನಿಮ್ಮ ಬರವ ಹಾರಿ ಹಾರಿ ಕಣ್ಮುಚ್ಚದೆನ್ನ ಮನವಯ್ಯ.
ಅಯ್ಯಾ, ನೀ ಬಾರಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೧೦೦ ॥

೧೦೧

ಅಯಿದಾರೇಳೆಂಟೆಂಬ ಬಲೆಯಲ್ಲಿ ಸಿಲುಕಿ–
ಯೆಯ್ದೆ ನಾರಾಗುತ್ತಿದೇನೆ
ಮೀರಲಾರೆನು ಕರ್ಮಗಳನು
ಗಾರು ಮಾಡಿಹವೆನ್ನ ಬೇರೆ ಮತ್ತೊಂದುಳ್ಳ
ತೋರಾರುವ ಶ್ರುತಿಗಳಿಂದತ್ತತ್ತಲಾದ
ಮಹಾಘನ ನೀನು ನೀರ ಕಪಿಲಸಿದ್ಧಮಲ್ಲಿಕಾರ್ಜುನಯ್ಯ. ॥ ೧೦೧ ॥

೧೦೨

ಅಯ್ಯೋ ಮಹಾದೇವ ಸುಮ್ಮನೇಕಿದ್ದಪೆ ಕರುಣಿ
ಮುಂಬಾಗಿಲಲು ಬಿದ್ದ ಪಶುವೈ.

ಓರಂತೆ ಎನ್ನುವನು ಆರಯ್ಯದಿದ್ದಡೆ ಹಾನಿ ನಿನಗಪ್ಪುದೈ
ಕಪಿಲಸಿದ್ಧಮಲ್ಲಿಕಾರ್ಜುನ. ॥ ೧೦೨ ॥

೧೦೩

ಆರಣ್ಯದೊಳಗರಸಿಯರ ಪ್ರಾಣವಲ್ಲಭರು ಬಂದುಣುತ್ತೈದಾರೆ,
ನೀ ಬೇಗನೇಳೆಂದಡೆ ಏಳದ ಮೊದಲೆ ಉಂಡ,
ನಮ್ಮ ಕಪಿಲಸಿದ್ಧಮಲ್ಲಿನಾಥಯ್ಯ. ॥ ೧೦೩ ॥

೧೦೪

ಅರಲುಗೊಂಡ ಕೆರೆಗೆ ತೊರೆ ಬಂದು ಹಾಯ್ವಂತೆ,
ಎಲೆ ಅಯ್ಯಾ, ನಿಮ್ಮ ಕಂಡು ಕಂಗಳು ಕಡೆಗೋಡಿವರಿವುವಯ್ಯಾ.
ಎನ್ನ ಮನಕ್ಕೆ ಮನ ವೇದ್ಯವಾದಡೆ ಕೈಮರೆದೆನೆಲೆ ಅಹಾ, ಅಯ್ಯಾ,
ಕಪಿಲಸಿದ್ಧಮಲ್ಲಿನಾಥನ ಕಂಡ ಸುಖವು ಆರಿಗೆಯೂ ಇಲ್ಲ. ॥ ೧೦೪ ॥

೧೦೫

ಅರಿತವನೆಂತು ಸತ್ತನು ? ಅರಿತವನೆಂತು ಹುಟ್ಟಿದನು ?
ಅರಿತವನೆಂತು ಅಘೋರಪಾಶಕ್ಕೆ ಒಳಗಾದನು ?
ಅರಿತವನೆ ಚಿರಂಜೀವಿ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೦೫ ॥

೧೦೬

ಅರಿಯಬಹುದು, ಕುರುಹಿಡಬಾರದು ;
ಭಾವಿಸಬಹುದು, ಬೆರಸಬಾರದು ;
ಕಾಣಬಹುದು, ಕೈಗೆ ಸಿಲುಕದು.
ಅಖಂಡ ನಿರಾಳವ, ಕಪಿಲಸಿದ್ಧಮಲ್ಲಿಕಾರ್ಜುನಾ,
ನಿಮ್ಮ ಶರಣರು ಬಲ್ಲರು. ॥ ೧೦೬ ॥

೧೦೭

ಅರಿಯಬಾರದ ಘನವನರಿದು ಸಾಧಿಸಿ ಗೆದ್ದ
ಘನಮಹಿಮ ಶರಣರ ಮುಂದೆ ಎನ್ನ ಪ್ರತಾಪ ನಿಲುಕುವುದೆ ?
ಅವರಿಪ್ಪರು ಲಿಂಗಪ್ರಭೆಯೊಳಗೆ : ನಾನಿಪ್ಪೆನು ಅಹಂಕಾರ ಪಂಜರದೊಳಗೆ.
ಎನ್ನ ನೊಸಲ ಕಣ್ಣನ ಕಿಚ್ಚುಡುಗಿ ಲಜ್ಜಿತವಾಗಿ

ಮರಳಿ ಬಂದೆನ್ನ ಸುತ್ತಿ ಮುತ್ತಿತ್ತು.
ನಾನು ಶರಣೆಂಬ ಗುರುವಚನವಿದಿರೆದ್ದು ಕೊಲುವಡೆ,
ಕಪಿಲಸಿದ್ಧಮಲ್ಲಿನಾಥನೊಳಗೆ ಅಳಿವೆನಲ್ಲದೆ ಉಳಿವನಲ್ಲ. ॥ ೧೦೭ ॥

೧೦೮

ಅರಿವಿನ ಅರಿವು ಸಾಧ್ಯವಾಯಿತ್ತು ನಿಮ್ಮಿಂದ
ಕುರುಹಿನ ವಕ್ತ್ರವ ತಿಳಿಸಿದನಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ,
ಚೆನ್ನಬಸವಣ್ಣನಿಂದ ನಿಮಗೆ ಪ್ರಸನ್ನಮುಖವಾಯಿತ್ತಯ್ಯಾ. ॥ ೧೦೮ ॥

೧೦೯

ಅರಿವಿನ ಗುಣ ಬಸವಣ್ಣನೊಳಗಡಕವಯ್ಯಾ;
ಮರಹಿನ ಜ್ಞಾನ ಚೆನ್ನಬಸವಣ್ಣನೊಳಗಡಕವಯ್ಯಾ.
ಅರಿವು ಮರವೆ ತಾನೆ ಶಿವರೂಪುಪ್ರಭೆ ಪ್ರಭುಲಿಂಗಮೂರ್ತಿಯಾಯಿತ್ತು,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೧೦೯ ॥

೧೧೦

ಅರುವತ್ತಾರು ಕೋಟಿ ಬಂಟರು ಹೆಚ್ಚಿ ಬಾಳಲಿಕೆ ಸತ್ತರೆಂದೆನಿಸಿದೆ.
ಆಟ್ಟೋಗರವನವರ ಹಿಂಡೆಯು ಕೂಳಿಗಿಕ್ಕಿಸಿದೆ.
ನಾನುಂಬುದೇನು ಹೇಳಾ, ಕಪಿಲಸಿದ್ಧಮಲ್ಲಿನಾಥಾ,
ನೀನೊಬ್ಬನೆಯಾದೆ. ॥ ೧೧೦ ॥

೧೧೧

ಅರೂಪರೂಪ ಭಾವನೆ ; ರೂಪ ಅರೂಪ ಭಾವನೆ,
ಸಾರೂಪ್ಯಲಿಂಗವೆ ಶರಣು ಶರಣು
ಅವಧಾರವಧಾರು ಅಯ್ಯಾ,
ಎನ್ನ ಕರಣಶುದ್ಧವ ಮಾಡುವನೆ : ಕರುಣಾಕರರೂಪನೆ
ತನುಮನಧನಕ್ಕೆ ಒಡೆಯನೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೧೧ ॥

೧೧೨

ಅವನಾದ ಗತಿಯು ನಾನಪ್ಪೆನು ; ಅವ ನಿಂದ ನಿಲವ ನಿಲುವೆನು ;
ಆತ ಬಿಟ್ಟುದ ಬಿಡುವೆನು ; ಅವನ ಬೆಂಬಳಿಯು ಸಲುವೆನು ;
ಎನ್ನ ಪ್ರಾಣವನವನ ಮೇಲಿಕ್ಕಿ ನೆರೆವೆನು,
ಕಪಿಲಸಿದ್ಧಮಲ್ಲಿಕಾರ್ಜುನನ. ॥ ೧೧೨ ॥

೧೧೩

ಅವರನಿವರಿಗೆ ಹೇಳಲದೇಕೆ, ಇವರನವರಿಗೆ ಹೇಳಲದೇಕೆ ?
ಒಬ್ಬರಿಗೆ ಹೇಳಿ ಕೂಗಿಡಲೇಕೆ, ಒಬ್ಬರಿಗೆ ಕಣ್ಣುಗಳ ಹರಹರಿಕೆ.
ಕಪಿಲಸಿದ್ಧಮಲ್ಲಿನಾಥಾ,
ನೀನಿಕ್ಕಿದ ತೊಡಕಿನ ನಾಟಕವೆಂಬುದ ನಾನರಿದೆ ನೋಡಯ್ಯ. ॥ ೧೧೩ ॥

೧೧೪

ಅವರವರ ನುಡಿದ ನುಡಿಯು
ಅವರವರಿಗೆ ಹಾಸುವೆನಯ್ಯಾ, ನೋಡಾ ! ಅಯ್ಯಾ !
ಮತ್ತೆ ಮಾರುಗೊಂಡಡೆ ಮಾರಾಟಕ್ಕೆ ಸಂದಿತೆಂಬೆ ನೋಡಯ್ಯಾ.
ಮತ್ತೆ ಮಾರುಗೊಳ್ಳದಿರ್ದಡೆ ಮಾರಾಟಕ್ಕೆ ಸಲ್ಲದೆಂಬೆ ನೋಡಯ್ಯಾ.
ನೋಡಯ್ಯಾ, ಈ ಹುಟ್ಟು ಸೈರಣೆ ಸಮತೆಯುಳ್ಳಡೆ ತನ್ನನೆ ಕೂಡಿಕೊಂಬನ್ನೆ
ಎನ್ನ ಕಪಿಲಸಿದ್ಧಮಲ್ಲೇಶ್ವರದೇವ, ಹಾ ! ಅಯ್ಯಾ ! ॥ ೧೧೪ ॥

೧೧೫

ಅಷ್ಟದಳ ದ್ವಾತ್ರಿಂಶಕುಸುಮಮಧ್ಯದಲ್ಲಿಪ್ಪನಾ ಸೂರ್ಯ.
ಆ ಸೂರ್ಯನ ಮಧ್ಯದಲ್ಲಿಪ್ಪನಾ ಚಂದ್ರ.
ಆ ಚಂದ್ರನ ಮಧ್ಯದಲ್ಲಿಪ್ಪನಾ ಅಗ್ನಿ.
ಆ ಅಗ್ನಿಯ ಮಧ್ಯದಲ್ಲಿಪ್ಪುದಾ ಕಾಂತಿ.
ಆ ಕಾಂತಿಯ ಮಧ್ಯದಲ್ಲಿಪ್ಪುದಾ ಸುಜ್ಞಾನ.
ಆ ಸುಜ್ಞಾನದ ಮಧ್ಯದಲ್ಲಿಪ್ಪನಾ ಚಿದಾತ್ಮ.
ಆ ಚಿದಾತ್ಮನ ಮಧ್ಯದಲ್ಲಿಪ್ಪನಾ ಚಿತ್ಪ್ರಕಾಶಸ್ವರೂಪನಪ್ಪ ಪರಶಿವನು.
ಅಂತಪ್ಪ ಪರಶಿವನ ಎನ್ನ ಕಾಯದ ಮಸ್ತಕದ ಮೇಲೆ ಹಸ್ತವನಿರಿಸಿ
ಮನ ಭಾವ ಕರಣೇಂದ್ರಿಯಾದಿಗಳಿಂ ಸ್ವರೂಪೀಕರಿಸಿ ದೃಷ್ಟಿಗೆ ತೋರಿ,

ಕೈಯಲ್ಲಿ ಲಿಂಗವ ಕೊಟ್ಟ ಚೆನ್ನಬಸವಣ್ಣನ ಶ್ರೀಪಾದಕ್ಕೆ
ನಮೋ ನಮೋ ಎಂದು ಬದುಕಿದೆನಯ್ಯಾ ಪ್ರಭುವೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೧೫ ॥

೧೧೬

ಅಷ್ಟಮ ಬ್ರಹ್ಮಕ್ಕೆ ಪಟ್ಟಗಟ್ಟಿತು, ಮಾತೆ
ಹೆತ್ತು ಹೆಸರಿಟ್ಟಿತ್ತೈ, ಅಕ್ಷರಾಂಕ
ಆರುವನು ಐದುವನು ಮೇಲಪ್ಪ ಮೂರುವನು
ಕೂಡೆ ಹದಿನಾಲ್ಕರೊಳು ಲೋಕವಾಗೆ ;
ಐಕ್ಯೈಕ ರುದ್ರ ನಿಸ್ಸಾಕಾರ ಚತುಷ್ಟಯಕೆ
ಅನೇಕ ಪರಿಯಿಂ ಮಾತೆ ಬಸವಾಕ್ಷರ.
ಅನಾದಿ ಮುಖಶೂನ್ಯವಾಗಿಪ್ಪ ಲಿಂಗವನು
ಖ್ಯಾತಿ ಮಾಡಿದ ಬಸವ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೧೧೬ ॥

೧೧೭

ಅಳಿಯ ಬಂದಾನೆಂಬರಯ್ಯ, ಎಲ್ಲವ ನೀನಿಗಳಿವೆಯಾಗಿ.
ಅಳಿಯುನಿದ್ದಹರೆಂಬರಯ್ಯ, ಅಳಿಯದಂತೆ ನೀನಿಪ್ಪೆಯಯ್ಯಾ.
ಇದೆಲ್ಲವನಳಿದು ನೀನುಳಿದೆಯಯ್ಯಾ,
ಎನ್ನ ಕಪಿಲಸಿದ್ಧಮಲ್ಲಿನಾಥ ನೀನೊಬ್ಬನಯ್ಯಾ. ॥ ೧೧೭ ॥

೧೧೮

ಅರ್ಚಿಸಲು ಬೇಡವದ, ಪೂಜಿಸಲು ಬೇಡವದ
ನಿತ್ಯ ಜಪತಪವು ನಿನಗೆ ಬೇಡ.
ಸಚ್ಚಿದಾನಂದ ಗುರು ಕಪಿಲಸಿದ್ಧಮಲ್ಲಿಕಾರ್ಜುನಯ್ಯನ
ಬಸವಾಕ್ಷರತ್ರಯವ ನೆನೆ ನಿನಗೆ ನಿತ್ಯಪದವು. ॥ ೧೧೮ ॥

೧೧೯

ಆ ಕರವು ಅಪ್ರಮಾಣವು
ಸದಾಕಾಲದಲ್ಲಿ ಏಕೋದೇವನ ಹಿಡಿದು ನಿತ್ಯವಾಗಿರ್ಪುದು.

ಆ ಹಸ್ತ ಅವ್ಯಕ್ತ ಹಸ್ತ ಶಿವಪಾಶ.
ಆ ಹಸ್ತ ಸಕಲ ದೈವಾದಿ ಶ್ರೇಷ್ಠ
ಅನೇಕ ರೂಪನ ಏಕೋರೂಪಾಗಿ ಹಿಡಿಪುದ್ಥೆ
ಕಪಿಲಸಿದ್ಧಮಲ್ಲಿಕಾರ್ಜುನ. ॥ ೧೧೯ ॥

೧೨೦

ಆ ಕಾಲವಾಗಲು ಧರೆ ಹತ್ತಿ ಉರಿಯಲಿ ಕೇಳಿರಣ್ಣಾ,
ಅಣ್ಣಾ ಕೇಳಿರಣ್ಣಾ.
ಅಂದು ಕಾಮನ ಸುಳುಹನೆಂದೂ ಕಾಣೆವಣ್ಣ.
ಅಂದು ಕಾಮು ನೆಲಸಿ ನಿಂದುದ ಕಾಣೆವಣ್ಣ.
ಅಂದು ಕಾಮು ನೆಲಸಿರಲಿ, ಬಿಲ್ಲು ಮುರಿದು ಧರೆ ಹರಿದು
ಕಾಮನ ಕಾಣೆ, ಕಾಣೆ, ಕಾಣೆ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೧೨೦ ॥

೧೨೧

ಆಗಮಜ್ಞಾನಕ್ಕೆ ನೀನೆ ಕರ್ತನು ಬಸವಾ ಬಸವಾ ;
ಆಗಮವಿಡಿದ ಶಿವಭಕ್ತಿಗೆ ನೀನೆ ಕರ್ತನು ಬಸವಾ ಬಸವಾ ;
ಕರುಣಿ ಕಪಿಲಸಿದ್ಧಮಲ್ಲಿನಾಥಯ್ಯಾ, ಬಸವಾ. ॥ ೧೨೧ ॥

೧೨೨

ಆಗಮಜ್ಞಾನಿ ಅಜ್ಞಾನಿಯಯ್ಯಾ.
ನಿಯಮಜ್ಞಾನಿ ನೀಚದೇಹಿಯಯ್ಯಾ.
ಶೀಲಜ್ಞಾನಿ ಸಂಕಲ್ಪದೇಹಿಯಯ್ಯಾ.
ನಿಮ್ಮನರಿದ ಜ್ಞಾನಿ ಏನಾಗುಣವನರಿಯನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೧೨೨ ॥

೧೨೩

ಆಗಮದ ಅನು ನಿಯಮದ ಸಂದೇಹ, ಯೋಗದ ಭ್ರಾಂತು
ಕ್ರೀಯು ಸಂಕಲ್ಪ, ನಷ್ಟದ ಚಿಂತೆ

ಈ ಪಂಚಮಹಾಪಾತಕವುಳ್ಳಾತ ಭಕ್ತಿಯ ನಿಯಮಿಗನಲ್ಲ.
ಚಿಂತೆ, ಸಂಕಲ್ಪ, ಭ್ರಾಂತು, ಸಂದೇಹ,
ಅನುವಿನ ಗುಣವಳಿದು ತಾನಾದಡೆ,
ತಾನೆ ನಿತ್ಯ ಕಾಣಾ, ಕಪಿಲಸಿದ್ಧಮಲ್ಲಿನಾಥಾ. ॥ ೧೨೩ ॥

೧೨೪

ಆಗಮವಿಚಾರ ಅಪ್ರಮಾಣ, ನಮೋ ಬಸವಾ ಬಸವಾ,
ನಮೋ ಜಯತು ಜಯತು ಕರುಣಾಕರ, ಪಾಹಿಮಾಂ ಬಸವಾ ಬಸವಾ,
ಮಾರ್ಗವಲಯ ನಿಯಮಾಚಾರ ಸಮಯಭಕ್ತ ಭಕ್ತ ನಮೋ ಬಸವಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೧೨೪ ॥

೧೨೫

ಆಗಳು ಎನ್ನ ಮನ ಉದರಕ್ಕೆ ಹರಿವುದು
ಕಾಣಲಾರೆನಯ್ಯಾ.
ಅಯ್ಯಾ, ಭೇದಿಸಲಾರೆ ತಂದೆ.
ಎನ್ನನುದರಬಲೆಯಲ್ಲಿ ಸಿಲುಕಿಸಿ ತಾ ಹೋದ
ಕಪಿಲಸಿದ್ಧಮಲ್ಲಿಕಾರ್ಜುನ. ॥ ೧೨೫ ॥

೧೨೬

ಆಚಾರವಿಚಾರ, ಗುರುವಿಚಾರ, ಲಿಂಗವಿಚಾರ,
ಸರ್ವವಿಚಾರ ತಿಳುಹಿದವರು ನೀವೆ.
ನುಡಿವಂತೆ ನಡೆವಲ್ಲಿ ಭೇವದ ಅನುಭವ ಮಾಡಿ ಹೇಳುವವರು ನೀವೆ.
ಈ ನುಡಿಗಡಣವು ಕಪಿಲಸಿದ್ಧಮಲ್ಲಿಕಾರ್ಜುನಲಿಂಗಕ್ಕೆ ಸೊಗಸದು,
ಕೇಳಾ ಪ್ರಭುವೆ. ॥ ೧೨೬ ॥

೧೨೭

ಆಜ್ಞಾಸಿದ್ಧನಸರ್ಜಿಸುವ ಆನಂದಮಯ ಶರಣರ
ಧ್ಯಾನ ಮೌನ ಸಮಾಧಿಗಳೆಂತೆಂದಡೆ :
ಪ್ರಸಾದವ ಬಯಸಿ ಪರವನರಿಯುದಿಪ್ಪುದೆ ಧ್ಯಾನ :

ಶಿವನಲ್ಲದೆ 'ಅತಃಪರ' ವಿಲ್ಲೆಂದು ಅನ್ಯರ ಕೂಡೆ
ನುಡಿಯದಿಪ್ಪುದೆ ಮೌನ ;
ವ್ರತವಾರರಲ್ಲಿ ತದ್ಗತವಾಗಿಪ್ಪುದೆ ಸಮಾಧಿ ;
ಇಂತಿಪ್ಪುದೀಗ ಶಿವಯೋಗ.
ಇಂತಿಪ್ಪವರ ತೋರು, ನಿನ್ನ ಅರ್ಚನೆಯನೊಲ್ಲೆ ;
ಅವರ ಗಡಣಸಂಗಮಾತ್ರದಲ್ಲಿ ನಿನ್ನ ಪದವಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. || ೧೨೭ ||

೧೨೮

ಆತನೆನ್ನ ನೆನೆವನಾಗಿ ನೆನೆವೆ ;
ಆತನೆನಗೆ ಕೂಪನಾಗಿ ಕೂಪೆ.
ಹತ್ತಿದಡೆ ಹರಿಯು ಕಾಣೆ, ಬಿಚ್ಚಿದಡೆ ಬೇರೆ ಕಾಣೆ.
ಇಂತೊಬ್ಬರೊಬ್ಬರನು ನೆರೆದು ತಾನು ತಾನಾಗಿದ್ದ,
ಕಪಿಲಸಿದ್ಧಮಲ್ಲಿನಾಥ ದೇವರ ದೇವ. || ೧೨೮ ||

೧೨೯

ಆತ್ಮತೇಜದಿಂದ ಹಣೆಗಣ್ಣ ತೆಗೆದಲ್ಲಿ,
ಆತ್ಮಘಟವಳಿದವಂಗೆ,
ಕಾಲಕಣ್ಣ ತೆಗೆದು ಹಣೆಗಣ್ಣ ಮುಚ್ಚಿದೆನೆಂಬ
ಅಹಂಕಾರವಡಗಿಯಲ್ಲದೆ,
ಕಪಿಲಸಿದ್ಧಮಲ್ಲಿಕಾರ್ಜುನಲಿಂಗಕ್ಕೊಳಗಲ್ಲ. || ೧೨೯ ||

೧೩೦

ಆವ್ಯಕ್ಷರದ ಭೇದವನರಿದೆನೆಂಬ ಯೋಗಿ ನೀ ಕೇಳಾ :
ಆದಿಗೆ ಅನಾದಿ ಅಂತ್ಯವಾಗಿಪ್ಪುದು, ನಿತ್ಯವು ತಾ.
ನಿನಗರಿಯಬಪ್ಪುದೆ ?
ಆದಿಯ ನಾದದ ಆಮೋದವನು ಭೇದಿಸಿ ಹಿಡಿದಾತ ಸಾಧಕ ಸಿದ್ಧನೆ ?
ಅಲ್ಲ, ಆತ ಸುಸಿದ್ಧ !
ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ,
ಅನಾಹತಬ್ರಹ್ಮದಲ್ಲಿ ಆಂದೋಳನು. || ೧೩೦ ||

೧೩೧

ಆದ್ಯರ ವಚನಕ್ಕೆ,
ಅಷ್ಟಾವರಣದ ಸಂಗನಬಸವಯ್ಯನ ವಚನವ ಕೇಳಿ
ಪದ್ಮಿನಿಯಲ್ಲಿ ಬೆರಗಾದ ಕಾಮಿಯಂತೆ,
ಎರೆದು ನಿದ್ರಿಪ ಬಾಲನಂತೆ,
ಕಾಯುವ ದಣಿಸಿದ ಕೃಷೀವಲನ ನಿದ್ರೆಯಂತೆ
ಪರವಶನಾದೆ ಕಾಣಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೩೧ ॥

೧೩೨

ಆದಿ ಅಕ್ಷರದ ಭೇದವನರಿಯದವರ
ಎಂತಯ್ಯಾ ಭಕ್ತರೆಂದೆಂಬೆ ?
ಆನಂದ ತನುಮನಕರಸ್ಥಳದ ಬಹಳವರಿಯದವರಿಗೆ
ನೀನೇಕೊಲಿವೆಯಯ್ಯಾ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೩೨ ॥

೧೩೩

ಆದಿ ಅಕ್ಷರವನು ಆರೈದು ತೋರಿದಿರಿ
ಓರಂತೆ ಎನ್ನ ಸದುಹೃದಯನೆನಿಸಿ
ನಾದ ಕಳೆಗಳನೆನ್ನ ಆದಿಕರದೊಳಗಿಟ್ಟು
ಅಭೇದ್ಯ ಪರಮಾನಂದ ಸತ್ಯರೂಪ ನಿತ್ಯಾನಂದ
ಶ್ರೀ ಗುರು ಚನ್ನಬಸವಣ್ಣನುನ್ನತವನಾರು ಬಲ್ಲರು ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೩೩ ॥

೧೩೪

ಆದಿ ಅಕ್ಷರವನು ಭೇದಿಸುವ ಭಕ್ತರನು
ಆನಂದದಿಂದವರ ನೀನೆಂದೆಂಬೆ
ಧ್ಯಾನ ಜಪದಿಂದವರ ಆನಂದವಂ ನೆನೆವೆ
ಕಾರುಣ್ಯಾಕರನೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೩೪ ॥

೧೩೫

ಆದಿಮಧ್ಯಾವಸಾನವನರಿಯದೆ
ನಾನು ಭಕ್ತ, ನಾನು ಜಂಗಮವೆಂದು ನುಡಿವ
ಉದ್ದೇಶದ ಬರುಬಾಯ ಭುಂಜಕರ ನಾನೇನೆಂಬೆನಯ್ಯಾ.
ಆದಿಯನರಿದಡೆ ಗುರುಕರಜಾತನೆಂಬೆ ;
ಮಧ್ಯವನರಿದಡೆ ಜಂಗಮಸಹಚರಿಯೆಂಬೆ ;
ಅವಸಾನವನರಿದಡೆ ಮಹಾಲಿಂಗೈಕ್ಯನೆಂಬೆ.
ಇಂತೀ ತ್ರಿವಿಧವನರಿದಡೆ ತುರ್ಯನೆಂಬೆ.
ಅರಿವರತು ಮರಹು ನಷ್ಟವಾದಡೆ
ಕಪಿಲಸಿದ್ಧಮಲ್ಲಿಕಾರ್ಜುನದೇವರು ತಾನೆಂಬೆ. ॥ ೧೩೫ ॥

೧೩೬

ಆದಿಯಾಧಾರವಿಲ್ಲದಂದಿನ ಪ್ರಸಾದ ;
ಅಗಮ್ಯ ಅಗೋಚರ ಅಪ್ರಮಾಣವೆಂದೆನಿಸುವ ಪ್ರಸಾದ ;
'ಅಣೋರಣೀಯಾನ್ ಮಹತೋ ಮಹೀಯಾನ್'
ಎಂದೆನಿಸುವ ಪ್ರಸಾದ ;
'ನಿಜತ್ವ ಪ್ರಾಣನಿರ್ಮಲಂ' ಎಂದೆನಿಸುವ ಪ್ರಸಾದ ;
'ಶಿವೈಕ್ಯಂ ಸುಖಸಂಬಂಧಂ' ಎಂದೆನಿಸುವ ಪ್ರಸಾದ ;
'ಪರಮಾತ್ಮೇತ್ಯಯಂ ರುದ್ರಃ' ಎಂದೆನಿಸುವ ಪ್ರಸಾದ ;
'ಅಕ್ಷರಾತ್ಮಾ ಶಿವಂ ಸೂತ್ರಂ' ಎಂದೆನಿಸುವ ಪ್ರಸಾದ ;
ಇನಿತಪ್ಪ ಪರಮಸುಖದ ಪರಮಪ್ರಸಾದವು ಒಂದಾಗಿ,
ನಿತ್ಯಮುತ್ತೈದೆಯ ಭಾವದಲ್ಲಿ ಶುದ್ಧವಾಯಿತ್ತಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೧೩೬ ॥

೧೩೭

ಆದಿರುದ್ರನೆಂಬಾತನ ಭೇದಿಸಿಹೆನೆಂದೆಂಬಡೆ
ವಾದಿಗಳಿಗಾಗದು ಕಂಡಾ,
ಸಾಧಾರಣತನುವ ಕಳೆದು ಭೇದಿಸುವ ರೀತಿಯರಿವು
ಮಾಧವಗೀಧವನೆಂಬವರು ಅನಾದಿಬ್ರಹ್ಮವನರಿಯರು
ಕಪಿಲಸಿದ್ಧಮಲ್ಲಿಕಾರ್ಜುನದೇವಾ. ॥ ೧೩೭ ॥

೧೩೮

ಆಧಾರಸ್ಥಾನದಲ್ಲಿ ಅರ್ಪಿತವಾರರಲ್ಲಿ ಅರ್ಪಿಸುವ ಭೇದ ;
ಅನಿಮಿಷವೆಂಬ ಆನಂದಸ್ಥಾನದಲ್ಲಿ ನಿತ್ಯಾರ್ಪಿತದ ತೃಪ್ತಿಯ ಭೇದ ;
ಸಂಯೋಗ ಸಮನಿಸಿ ಅರ್ಪಿಸುವ ಮುಖದಲ್ಲಿ ಆರುವಿಧದಾನಂದ,
ಶ್ರೋತ್ರ, ನೇತ್ರ, ಘ್ರಾಣ, ಜಿಹ್ವೆ, ತ್ವಕ್ಕು
ಪಂಚೇಂದ್ರಿಯಂಗಳ ಭೇದವಲ್ಲದೆ,
ಲಿಂಗಪ್ರಾಣವ ಮಾಡಿ, ನಿಜಪ್ರಸಾದವ ನೆಲೆಗೊಳಿಸುವ ಭೇದ ;
ಅರುವತ್ತುನಾಲ್ಕು ಅನುಬಂಧಂಗಳಿಂದವೆ
ನೂರೆಂಟು ಕರಣಂಗಳಲ್ಲಿ ಸ್ವಾದಿಸುವ ಸುಖಿಸುವ
ಭೇದವನಾರು ಬಲ್ಲರಯ್ಯಾ ?
ದೀಕ್ಷೆಯಲ್ಲಿ ದಿವ್ಯಜ್ಞಾನಿ, ಶಿಕ್ಷೆಯಲ್ಲಿ ಸಮ್ಯಗ್‌ಜ್ಞಾನಿ,
ಸ್ವಾನುಭಾವದಲ್ಲಿ ತಾನೆ ರೂಪು.
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಅವಗ್ರಹಿಸಿದ
ಪ್ರಸನ್ನಪ್ರಸಾದಿಯನಾರು ಬಲ್ಲರಯ್ಯಾ,
ನೀನು-ನಿನ್ನ ಶರಣರಲ್ಲದೆ ? ॥ ೧೩೮ ॥

೧೩೯

'ಆಧಾರಾಧೇಯ ಧರ್ಮಕೂಲಂ' ನಮೋ, ಬಸವ ಬಸವಾ.
'ಸ್ವಾದುಸಜ್ಜನಸಮಯಾಚಾರಂ' ನಮೋ, ಬಸವ ಬಸವಾ.
'ಪ್ರಾಣಲಿಂಗಸಂಬಂಧಿತಂ' ನಮೋ, ಬಸವ ಬಸವಾ.
'ಕಪಿಲಸಿದ್ಧಮಲ್ಲಿನಾಥಂ' ನಮೋ, ಬಸವ ಬಸವಾ. ॥ ೧೩೯ ॥

೧೪೦

ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ
ವಿಶುದ್ಧಿ ಆಜ್ಞೆ ಎಂದೆಂಬರು.
ಈ ಆರ ಬಲ್ಲಡೆ ನೀವು ಹೇಳಿರೇ.
ಆದಿಯನುಳ್ಳುದೆ ಆಧಾರ ;
ಆಧಾರವ ಕೂಡಿಪ್ಪುದೆ ಸ್ವಾಧಿಷ್ಠಾನ ;

ಮಣಿಯು ಬೆಳಗಿನಲ್ಲಿಪ್ಪುದೆ ಮಣಿಪೂರಕ ;
ಆಸೆಯಿಲ್ಲದುದೆ ಅನಾಹತ ;
ಅಲ್ಲ ಆಹುದೆಂಬುದನತಿಗಳೆಯದಿಹುದೆ ವಿಶುದ್ಧಿ ;
ಸರ್ವ ಜೀವಂಗಳಲ್ಲಿ ದಯವನುಳ್ಳುದೆ ಆಜ್ಞೆ ;
–ಇಂತಪ್ಪುದೀಗ ಶಿವಯೋಗ.
ಉಳಿದ ಅಭ್ಯಾಸಯೋಗಿಗಳ ಕಂಡು ನಗುತಿರ್ದೆನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೧೪೦ ॥

೧೪೧

ಆಧೇಯಾಧಾರವಿಲ್ಲದಂದಿನ ಶ್ರೀವಿಭೂತಿಯುನೆನ್ನ
ಲಲಾಟದಲ್ಲಿ ಪಟ್ಟವ ಕಟ್ಟಿದನಯ್ಯಾ, ಎನ್ನ ತಂದೆ ಬಸವಣ್ಣನು.
ಆ ವಿಭೂತಿಯುನೆನ್ನಂಗದಲ್ಲಿ ಧರಿಸಿದಲ್ಲದೆ ಲಿಂಗಾರ್ಚನೆಯ ಮಾಡೆನಯ್ಯಾ.
ಆ ವಿಭೂತಿಯುನಾಗಮಸ್ಥಾನವನರಿದು ಧರಿಸಿ
ನಿಮ್ಮಡಿಯ ನಂಬಿದೆನಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೧೪೧ ॥

೧೪೨

ಆನಂದ ಬ್ರಹ್ಮನಲಿ ತಾನೊಂದು ರೂಪಾಗಿ
ತಾನು ತನ್ನೊಳಗೆ ತುರಿಯಾ ತುರಿಯದ
ಭಾನುವಿನ ಉದಯದೊಳು ಆನತವು ಕಮಳಕ್ಕೆ
ಸ್ವಾನುಭೂತ್ಯೈಕ್ಯದೊಳು ತನುಲಿಂಗದ
ಸೀಮೆಯನು ಪರದಲ್ಲಿ ಭಾವವನು ಮನದಲ್ಲಿ
ಆನತದ ದೀಕ್ಷಿತಾ ತನುತ್ರಯದಲಿ
ನಾಮದರ ಕಪಿಲಸಿದ್ಧಮಲ್ಲಿಕಾರ್ಜುನನೆಂಬವನ
ಕಾಮ್ಯಾರ್ಥದಲಿ ತಾನು ಕಾಣಲರಿದು. ॥ ೧೪೨ ॥

೧೪೩

ಆನಂದಲೋಕದಲಿ ತಾನೊಂದು ರೂಪಾಗಿ
ಸಾನಂದವನು ಬೆಳಸಿ ಹಲವರೊಳು
ಹಲವು ಬಣ್ಣದ ಹಕ್ಕಿ ಶೂನ್ಯವ ನುಂಗಿದ

ಕುರುಹಿಲ್ಲದ ಯೋಗಕ್ಕೆ ನೆಲೆ ಮುನ್ನಿಲ್ಲ.
ಅನಿಮಿಷನೆಂಬಾತನ ಕರಸ್ಥಲದಲ್ಲಿ ಸಕಲಯೋಗವಡಗಿತ್ತು
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೪೩ ॥

೧೪೪

ಆನಂದಸ್ಥಾನದಲ್ಲಿ ಅರ್ಪಿತವಾರರಲ್ಲಿ ಅರ್ಪಿಸುವ ಭೇದ ;
ಅನಿಮಿಷವೆಂಬ ಆನಂದಸ್ಥಾನದಲ್ಲಿ ನಿತ್ಯಾರ್ಪಿತವ ತೃಪ್ತಿಯ ಭೇದ ;
ಸಂಯೋಗ ಸಮನಿಸಿ ಅರ್ಪಿಸುವ ಮುಖದಲ್ಲಿ ಆರುವಿಧದಾನಂದ.
ಶ್ರೋತ್ರ ನೇತ್ರ ಘ್ರಾಣ ಜಿಹ್ವೆ ತ್ವಕ್ಕು ಪಂಚೇಂದ್ರಿಯಂಗಳ ಭೇದವಲ್ಲದೆ,
ಲಿಂಗಪ್ರಾಣವ ಮಾಡಿ ನಿಜಪ್ರಸಾದವ ನೆಲೆಗೊಳಿಸುವ ಭೇದ ;
ಅರುವತ್ತುನಾಲ್ಕು ಅನುಬಂಧಂಗಳಿಂದವೆ
ನೂರೆಂಟು ಕರಣಂಗಳಲ್ಲಿ ಸ್ವಾದಿಸುವ ಸುಖಿಸುವ
ಭೇದವನಾರು ಬಲ್ಲರಯ್ಯಾ ?
ದೀಕ್ಷೆಯಲ್ಲಿ ದಿವ್ಯಜ್ಞಾನಿ, ಶಿಕ್ಷೆಯಲ್ಲಿ ಸಮ್ಯಗ್‌ಜ್ಞಾನಿ,
ಸ್ವಾನುಭಾವದಲ್ಲಿ ತಾನೆ ರೂಪು.
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಅವಗ್ರಹಿಸಿದ ಪ್ರಸನ್ನಪ್ರಸಾದಿಯ
ಆರು ಬಲ್ಲರಯ್ಯಾ, ನೀನು ನಿನ್ನ ಶರಣರಲ್ಲದೆ ? ॥ ೧೪೪ ॥

೧೪೫

ಆನರಿಯೆನಯ್ಯಾ, ಪಶು ನಂಬುವಂತೆ ನಂಬುವೆ.
ನೀನು ಕೊಂದಲ್ಲಿ ಸಾವೆ, ಆನರಿಯೆನಯ್ಯಾ,
ನೀನು ಕಾಯ್ದಲ್ಲಿ ಬದುಕುವೆ, ಆನರಿಯೆನಯ್ಯಾ.
ಪಶು ನಂಬುವಂತೆ ನಂಬುವೆ, ಶಿಶು ಬೇಡುವಂತೆ ಬೇಡುವೆ.
ಅರಿವಿಲ್ಲದವನಲ್ಲಿ ಅರಿವ ನೀನರಸುವರೆ ?
ನೀನರಿಯೆಂದಡರಿವೆ, ಎನ್ನ ಕಪಿಲಸಿದ್ಧಮಲ್ಲಿನಾಥಯ್ಯನ. ॥ ೧೪೫ ॥

೧೪೬

ಆನೀ ಲೋಕದ ಹರಕೆಯ ಹರಸೆನಯ್ಯಾ.
ಆನೀ ಲೋಕದ ಕೊಡ ಬೇಡೆನಯ್ಯಾ.
ಆನು ಘನ ಹರಸುವೆ.

ಎನಗೆ ನಿಮ್ಮನೆ ಬೇಡಿಹ ಘನವ ಹರಸುವೆ.
ಎನಗಿಂತಪ್ಪ ಕೊಡಕೊಡುವುದು ಇಲ್ಲದಿದ್ದೊಡೊಲ್ಲೆ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೧೪೬ ॥

೧೪೭

ಆನು_ನೀನು ಎಂಬ ಭೇದವುಳ್ಳನ್ನಬರ
ಎಂತಪ್ಪುದಯ್ಯಾ ಶಿವಭಕ್ತಿ ?
ಸಂದು ಸಂಶಯ ಒಂದಾಗದನ್ನಕ್ಕರ
ಎಂತಪ್ಪುದಯ್ಯಾ ಸಮಯಭಕ್ತಿ ?
ಆಯತರಲ್ಲದೆ ಸ್ವಾಯತರಲ್ಲ,
ಸ್ವಾಯತರಲ್ಲದೆ ಸಂಬಂಧಿಗಳಲ್ಲ.
ಸಂಬಂಧಿಗಳಿಗಲ್ಲದೆ ಸದಾಚಾರವಿಲ್ಲ,
ಸದಾಚಾರಿಗಳಿಗಲ್ಲದೆ ಸ್ವಾನುಭಾವವಿಲ್ಲ.
ಸ್ವಾನುಭಾವಿಗಳಿಗಲ್ಲದೆ ನೀ ಸಿಕ್ಕೆ.
ಸೂರೆಯೆ ಎಲ್ಲರಿಗೆ ಸದಾಚಾರದ ಮಾತು ?
ಸೂರೆಯೆ ಎಲ್ಲರಿಗೆ ಗಣಾಚಾರದ ಮಾತು ?
ಸೂರೆಯೆ ಎಲ್ಲರಿಗೆ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣ ಬಸವಣ್ಣಂಗಲ್ಲದೆ. ॥ ೧೪೭ ॥

೧೪೮

ಆನು ಭಕ್ತನೆಂಬೆ.
ಹೊರ ಹಚ್ಚೆ ಒಳ ಬೊಳ್ಳೆಯಾನಯ್ಯ.
ತನುಮನಭಕ್ತಿ ಇನಿಸಿಲ್ಲ
ನಿಮಗಾನು ಮುಚ್ಚಲರಿಯೆ ಕಂಡಯ್ಯಾ.
ಬೇರೆ ಬಲ್ಲವರಿಗೆ ಎಲೆಯ ಬಣ್ಣಿಸುವಂತೆ
ನಿಮಗಾನು ಮುಚ್ಚಿದರೆ ಗತಿಯೊಳವೆ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೪೮ ॥

೧೪೯

ಆನೆಂಬ ಕುಸುಮಕ್ಕೆ ತಾನೆಂಬ ಮಧುಕರನು
ಭಾನುವಿನ ಉದಯದಲಿ ವಿಕಸವಾಗಿ

ಸೋಮವೀಥಿಯ ಬೆಳಗಿ ಹೇಮಶೈಲದ ಉದಯ
ಕಾಮದಂಡಿಯ ಹಿಡಿದು ಮನೆಮನೆಗಳ
ಸೀಮೆಯನು ಸಂಬಂಧ ಗ್ರಾಮವನು ಮನೆಗಳನು
ಆನಳಿದು ಕಂಡೆನ್ನೈ ಹವಣು ಹಲವ.
ನಿಸ್ಸೀಮನಾ ಕಪಿಲಸಿದ್ಧಮಲ್ಲಿಕಾರ್ಜುನನ
ಸೀಮೆಯನು ಕಾಬವರು ಹಲಬರಿಲ್ಲ. ॥ ೧೪೯ ॥

೧೫೦

ಆನೆತ್ತ ಪರಬ್ರಹ್ಮದಿರವೆತ್ತ ? ಎಲೆ ಶಿವನೆ
ನೀನೆತ್ತಲೆನ್ನ ಕರನಿವಾಸವು.
ಆನತದ ಶ್ರೀಗುರು ಚನ್ನಬಸವಣ್ಣನಾಜ್ಞೆವಿಡಿದೀಗ
ನಾ ನಿಮ್ಮ ಹೋಬಳಿಯನರಿದೆನಯ್ಯಾ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೫೦ ॥

೧೫೧

ಆನೆತ್ತ ಪರಮ ಸೂಕ್ಷ್ಮದ ನೆಲೆ ತಾನೆತ್ತ ?
ನಾನಾ ಗುಣದ ಅತ್ಯಧಿಕ ಲಿಂಗವನು
ಭಾನುಮಂಡಲದೊಳಗೆ ನೆಲೆಗೊಳಿಸಿದಾತ
ಸುಜ್ಞಾನಭರಿತನಯ್ಯಾ ಚೆನ್ನಬಸವಣ್ಣ
ಕಪಿಲಸಿದ್ಧಮಲ್ಲಿಕಾರ್ಜುನ. ॥ ೧೫೧ ॥

೧೫೨

ಆನೆತ್ತಲಯ್ಯಾ, ಕ್ರಿಮಿಕೀಟಕನಾಗಿ ಹುಟ್ಟುವನ ಹುಟ್ಟ ಕೆಡಿಸಿದೆ.
ಇನ್ನಹುದಾನೇನರಿದು ಹೇಳಾ, ಎಲೆ ಅಯ್ಯಾ.
ಶುದ್ಧಸಿದ್ಧಪ್ರಸಿದ್ಧವನು ತೋರಿ
ಪ್ರಾಪ್ತಭೋಕ್ತಭುಕ್ತಿಯೆಂಬುವಕ್ಕೆ ಹೊರಗು ಮಾಡಿದೆ.
ಇನ್ನು ನಾನಿಪ್ಪುದೇನರಿದ್ದೈ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೫೨ ॥

೧೫೩

ಆನೆ ಮದಸೊಕ್ಕಿ ಮಾವತಿಗನನರಿಯದು ಕೇಳಿರಣ್ಣಾ.
ಮದವುಡುಗಿ ಬೆದರಿ ಇನ್ನೇವೆನಿನ್ನೇವೆನೆಂಬುದಯ್ಯಾ.
ಇದಕಂಕುಶವ ಹಿಡಿದಿದ್ದನಯ್ಯಾ,
ಎನ್ನ ಕಪಿಲಸಿದ್ಧಮಲ್ಲಿನಾಥ ಹಾ ! ಅಯ್ಯಾ ! ॥ ೧೫೩ ॥

೧೫೪

ಆನೆಯ ಕಾವವನ, ಆಡ ಕಾವವನ ಅಂತರವನರಿ ಕಂಡಾ.
ಕೋಡಗನ ಪರಿಯಲಿ ಕುಳ್ಳಿರಲು ನೀನು ಕಲಿ ಕಂಡಾ.
ಮರುಳಿನ ಮನದ ಪರಿಯನರಿ ಕಂಡಾ.
ಕಪಿಲಸಿದ್ಧಮಲ್ಲಿನಾಥಯ್ಯಾ, ಕತ್ತಲೆಯೆಂಬುವ ಕಳೆ ಕಂಡಾ,
ಮಕ್ಕಳ ಮತವನರಿ ಕಂಡಾ. ॥ ೧೫೪ ॥

೧೫೫

ಆಯತವಾದ ಆರು ಗ್ರಾಮಕ್ಕೆ ಆರುವರು
ತಳವಾರನಿಕ್ಕಿದ ನಮ್ಮರಸು.
ಆ ಅರಸಿಂಗೆ ಕಟ್ಟಿತ್ತು ತೊಟ್ಟಿಯ ಮುಖಸಾಲೆಯ ಮಂಟಪ.
ಆ ತಳವಾರರಿಗೆ ಕಟ್ಟಿತ್ತು ಕೈಸಾಲೆಯ ಮಂಟಪ.
ಆ ಒಬ್ಬೊಬ್ಬ ತಳವಾರಂಗೆ ಆರಾರು ಗೆಣೆಯರ ಕೂಡಿಸಿ ಕೊಡಲು,
ಆ ಗೆಣೆಯರು ತಮಗೊಬ್ಬೊಬ್ಬರಿಗೆ
ಆರಾರು ಸಖರ ಕೂಡಿಕೊಂಡ ಪರಿಯನೋಡಾ.
ಆ ಸಖರು ಆ ಗೆಣೆಯರೊಳಡಗಿ,
ಆ ಗೆಣೆಯರು ಆ ತಳವಾರರೊಳಡಗಿ,
ಆ ತಳವಾರರ ಕಂಡು ಅರಸು ತನ್ನ ಹೆಂಡತಿಯ
ತಬ್ಬಿಕೊಂಡು ಉರಿಯ ಪೊಗಲಾಗಿ,
ಎನ್ನ ಗಂಡ ಕಪಿಲಸಿದ್ಧಮಲ್ಲಿಕಾರ್ಜುನನ
ನಾ ಕೇಳಲು ಬಯಲ ಬಿತ್ತಿ ಎಂದನು. ॥ ೧೫೫ ॥

೧೫೬

ಆಯಿತ್ತಾಯಿತ್ತು ಗುರುಸ್ವಾಯತ ;
ಆಯಿತ್ತಾಯಿತ್ತು ಲಿಂಗ ನಿಜನಿಷ್ಠೆ ;
ಆಯಿತ್ತಾಯಿತ್ತು ಜಂಗಮದರಿವು ಸಂಭಾಷಣೆ ;
ಆಯಿತ್ತಾಯಿತ್ತು ಪ್ರಸಾದದ ರುಚಿಭೋಗ ;
ಆಯಿತ್ತಾಯಿತ್ತು ಸಯವಾದ ಭಕ್ತಿ ಜ್ಞಾನ ವೈರಾಗ್ಯದ ನಿರಿಗೆ.
ಆಯಿತ್ತಾಯಿತ್ತು ಸರ್ವಾಚಾರ ಸಂಪತ್ತಿನ ಸೌಖ್ಯವೆನಗೆ.
ಕಪಿಲಸಿದ್ಧಮಲ್ಲಿಕಾರ್ಜುನ ದೇವರ ದೇವಾ,
ನೀವು ಗುರುಮೂರ್ತಿಯಾದ ಕಾರಣ. || ೧೫೬ ||

೧೫೭

ಆಯಿತ್ತಾಯಿತ್ತು ಮನದಂತೆ ಮಂಗಳ ;
ಆಯಿತ್ತಾಯಿತ್ತು ನೆನೆದಂತೆ ಕುರುಹು ;
ಆಯಿತ್ತಾಯಿತ್ತು ಸೀಮೆಯುಳಿವಟ್ಟ ಸಂಬಂಧ ;
ಆಯಿತ್ತಾಯಿತ್ತು ಸ್ವಾನುಭಾವ ಸ್ವಯವಾದ ದೀಕ್ಷೆ ;
ಆಯಿತ್ತಾಯಿತ್ತು ಕಪಿಲಸಿದ್ಧಮಲ್ಲಿಕಾರ್ಜುನಾ,
ನಿಮ್ಮಲ್ಲಿ ಸಂದು ಸವೆದು ಒಂದಾದ ನಿರ್ವಾಣವು. || ೧೫೭ ||

೧೫೮

ಆಯಿಸ ಬಗುಸೆಯ ಬಲವು ತಮಗಿಲ್ಲ ಕೇಳಿರಣ್ಣಾ.
ತಮ್ಮ ಬಲ ಆವಕುಂಟು ಕೇಳಿರಣ್ಣಾ.
ಆಯಿಸ ತನಗಿನಿಸೆಂಬುದದಿಲ್ಲ ಕಾಣಿರಣ್ಣಾ.
ಬಗುಸೆ ತನಗಿನಿಸೆಂಬುದದಿಲ್ಲ ಕಾಣಿರಣ್ಣಾ.
ಕೇಳಿರಣ್ಣಾ, ಅಣ್ಣಾ, ಅಣ್ಣಾ, ಕೇಳಿರಣ್ಣಾ.
ಕಪಿಲಸಿದ್ಧಮಲ್ಲಿನಾಥಯ್ಯ ನಿಸ್ಸೀಮ ಕಾಣಿರಣ್ಣಾ. || ೧೫೮ ||

೧೫೯

ಆರ ಕಂಡು ಕೈಯೆತ್ತಿ ಮುಗಿದರೆ
ನಾನು ಮುಗಿವೆನಾಗಿ, ಆದೇನು ಕಾರಣವೆಂದರೆ

ಅವರ ನಿಟಿಲತಟದ ಭ್ರೂಮಧ್ಯದಲ್ಲಿ
ಕಪಿಲಸಿದ್ಧ ಮಲ್ಲಿಕಾರ್ಜುನನಿಪ್ಪನಾಗಿ
ಅವರರಿಯರು ನಾ ಬಲ್ಲೆನಾಗಿ ಕೈಮುಗಿವೆನು. ॥ ೧೫೯ ॥

೧೬೦

ಆರೂ ಕಾಣಬಾರದ ಪ್ರಸಾದ ಅಡಕವಾಯಿತ್ತು
ಅರುಹಿನಲ್ಲಿ ಚೆನ್ನಬಸವಣ್ಣಾ.
ಈ ಪ್ರಸಾದವ ನಿಮ್ಮ ಸುಳುಹಿನಲ್ಲಿ ತೋರಿದೊ,
ನಿಮ್ಮ ನೆನಹಿನಲ್ಲಿ ತೋರಿದೊ ?
ತೋರುವ ಪ್ರಸಾದ ತೋರದೆ ಹೋಯಿತ್ತೆಂಬುದೇನಯ್ಯಾ,
ಚೆನ್ನಬಸವಣ್ಣಾ ?
ಕಾಯವಿಡಿದ ಪ್ರಸಾದ ಕರಣಂಗಳಿಗೆ
ಹೋಯಿತ್ತೆಂಬುದೇನಯ್ಯಾ, ಚೆನ್ನಬಸವಣ್ಣಾ ?
ಲಾಭಕ್ಕೆ ವ್ಯವಹರಿಸಲು ನಷ್ಟವಾಗಿದೆ ;
ಈ ನಷ್ಟ ತುಷ್ಟಿಯು ಕೂಡಿಕೊಂಡು ನಿನ್ನಲ್ಲಿ ನೀ ಪ್ರಸಾದಿಯಾಗಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ,
ನಿಮ್ಮ ಧರ್ಮದಲ್ಲಿ ಚೆನ್ನಬಸವಣ್ಣ ನಿಂದ ನಿಜಪ್ರಸಾದಿಯಾದೆನಾಗಿ —
ನಿಮ್ಮ ಹರಿಯ ಕೊಂದೆ. ॥ ೧೬೦ ॥

೧೬೧

ಆರೂಢದ ಮನದಲ್ಲಿ ನೀನೆ ನಿಂದ ಕಾರಣ,
ತೋರುವ ಶಿವಜ್ಞಾನದ ದೀಪ್ತಿ ಬಸವಣ್ಣನಯ್ಯಾ ;
ತೋರುವ ಬೀರುವ ಐಕ್ಯದ ಭಕ್ತಿ ಬಸವಣ್ಣನದಯ್ಯಾ,
ನಿಜದಲ್ಲಿ ನಿಂದು ನಿರ್ಮಯಲಾಯಿತ್ತಯ್ಯಾ ಬಸವಣ್ಣನ ಕರುಣದಿಂದ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೧೬೧ ॥

೧೬೨

ಆರೂಢದೈಕ್ಯದಲ್ಲಿ ಆನು ನೀನಪ್ಪೆ ಹೇಳಾ.
ತೋರಿಪ್ಪೆ ಬ್ರಹ್ಮಾಂಡದ ಮೇಲೆ ನಿನ್ನ ಸಂಯೋಗವ.

ವಿಕಲವಿಯೋಗದಲ್ಲಿ ಸಕಲ ನೀನೆ ಆನಾದೆನು,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೧೬೨ ॥

೧೬೩

ಆರೂಢದೈಕ್ಯವನು ತೋರಿಪ್ಪ ಸೀಮೆಯನು
ಮೀರಿಪ್ಪುದೊಂದು ಬಿಂದುರೂಪು.
ಬಿಂದುಗಳು ಕಳೆಗಳನು ಸಂಧಿಸುವ ಭೇದವನು
ಚಂದ್ರಮಂಡಲದಲ್ಲಿಯೊಪ್ಪಿ ತೋರೆ
ಆನಂದದಕ್ಷರಂಗಳ ಛಂದವಿದೆಂದಡೆ
ಹಿಂದುಮುಂದುಗೆಡುವೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೬೩ ॥

೧೬೪

ಆರೆನಯ್ಯೋ ಭವನೆ ಗಾರುಗೆಡಿಸಿತ್ತೆನ್ನ
ಕಾಣುತೊಡನಂಜಿ ಕೊಕ್ಕರಿಸಿತು.
ಕಾರುಣ್ಯಕರನೆ, ಕಪಿಲಸಿದ್ಧಮಲ್ಲೇಶ್ವರನೆ
ಮಾಯಾವಿದಾರಣನೆ ಸಲಹು ತಂದೆ. ॥ ೧೬೪ ॥

೧೬೫

ಆರೆನಯ್ಯೋ ಶಿವನೆ ತೆರಹುಗೆಡಿಸುತ್ತಲಿದೆ
ಕುರುಹೆಂದು ತೋರಿದಿರಿ ಎನ್ನ ನೀವು
ಉಸುರದಂತಿದ್ದರೆ ನರಕಕ್ಕೆ ಒಯ್ದಿತ್ತು
ಸಸಿಧರ ಕಾಯಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೬೫ ॥

೧೬೬

ಆರೇನೆಂದಡೂ ಓರಂತಿಪ್ಪುದೆ ಸಮತೆ.
ಆರು ಜರಿದವರೆನ್ನ ಮನದ ಕಾಳಿಕೆಯ
ಕಳೆದರೆಂಬುದೆ ಸಮತೆ.
ಆರು ಸ್ತೌತ್ರ್ಯವ ಮಾಡಿಹರೆನ್ನ ಜನ್ಮಜನ್ಮದ ಪಗೆಗಳೆಂಬುದೆ ಸಮತೆ.

ಇಂತಿದು ಗುರುಕಾರುಣ್ಯ.
ಮನವಚನಕಾಯದಲ್ಲಿ ಅವಿತತವಿಲ್ಲದಿರ್ದಡೆ,
ಕಪಿಲಸಿದ್ಧಮಲ್ಲಿಕಾರ್ಜುನಾ, ನಿನ್ನವರ ನೀನೆಂಬುದೆ ಸಮತೆ. ॥ ೧೬೬ ॥

೧೬೭

ಆ ಲಿಂಗವತ್ಯಂತ ಉನ್ನತೋನ್ನತವಪ್ಪ
ಭಾವಿಸುವ ಭಾವಕ್ಕೆ ಇಂಬುಗೊಡನು
ಆವಾವ ಪರಿಯಲ್ಲಿ ನೋಡಿ ಕೂಡುವಡವರ್ಗೆ
ನಾಮವಿಲ್ಲದೆ ರೂಪನಿರವು ಇಲ್ಲ
ಶ್ರೀಗುರು ಚೆನ್ನಬಸವಣ್ಣನಾಜ್ಞೆಯಲಿ
ಎನ್ನ ಕರಸ್ಥಳಕ್ಕೆ ನಾಮರೂಪಾದೆಯಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೬೭ ॥

೧೬೮

ಆವ ಕಳೆಯೆಂಬುದು ನೀನೆಯಾದೆ, ಬಸವಲಿಂಗವೆ.
ಮುಕ್ತಿಗೆ ಮೂಲಸ್ವರೂಪು ನೀನಾಗಿ ನಿಂದ ರೂಪು.
ನಿನ್ನಲ್ಲಿಯೆ ತಲ್ಲೀಯವಾಯಿತ್ತು, ಬಸವಗುರುವೆ.
ನಿಯಮಾಚಾರದ ರೂಪು ನಿನ್ನಲ್ಲಿಯೆ ತಲ್ಲೀಯವಾಯಿತ್ತಯ್ಯಾ,
ಕಪಿಲಸಿದ್ಧಮಲ್ಲಿನಾಥನ ಗುರು ಬಸವಾ. ॥ ೧೬೮ ॥

೧೬೯

ಆವ ಕೆಲಸ ಕೆಲಸದಲೆಲ್ಲಾ ತಾನೆ ಸಿಂಹಾಸನಗೊಂಡಿಪ್ಪನಯ್ಯಾ.
ಕೆಲಸದ ತಲೆಯಲ್ಲಿ ಕೆಲಸ ಪೂರಣೆಗೊಂಬ ಅವರ ಶರೀರಕ್ಕೆ
ಸಂಪನ್ನ ಮನದಿಂದ ಹಿಂಗ,
ಕಪಿಲಸಿದ್ಧಮಲ್ಲಿನಾಥಯ್ಯನಾ. ॥ ೧೬೯ ॥

೧೭೦

ಆವನಾಗಿ ಒಬ್ಬನು ಅವಿಚಾರದಿಂದ ಪಿಡಿದೊಯ್ದು
ಸರಿಯ ಮೇಲಿಕ್ಕುಗೆ ಮೇಣು ಹಾಸಿನ ಮೇಲಿಕ್ಕುಗೆ.

ಇಕ್ಕಿದಡೆ ಮನವಿಚ್ಛಂದವಾಗದೊಂದೆಯುಂದದಲ್ಲಿಪ್ಪಂತಪ್ಪಾ
ನಿಮ್ಮದೊಂದು ಸಮತಾಗುಣ ಎನ್ನನೆಂದು
ಬಂದು ಪೊದ್ದಿರ್ಪುದು ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೭೦ ॥

೧೭೧

ಆವನಾಗಿ ಒಬ್ಬನು ಅವಿಚಾರದಿಂದ
ಶಿರಸ್ಸಿನ ಮೇಲೆ ಕೈದುವಿಕ್ಕುಗೆಯು.
ಮೇಣು ಗಂಧಾಕ್ಷತೆ ಪುಷ್ಪದಲ್ಲಿ ಪೂಜೆ ಮಾಡುಗೆಯು ;
ಪೂಜೆ ಮಾಡಿದಡೆ ಮನ
ವಿಚ್ಛಂದವಾಗದೊಂದೆಯುಂದದಲ್ಲಿಪ್ಪಂತಪ್ಪ
ನಿಮ್ಮದೊಂದು ಸಮತಾಗುಣ ಎನ್ನನೆಂದು
ಬಂದು ಪೊದ್ದಿಪ್ಪುದು ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೭೧ ॥

೧೭೨

ಆವನಾಗಿ ಒಬ್ಬನು ಕರವ ಪಿಡಿದು ಒಡಗೊಂಡು ಒಯ್ದು
ಒಳ್ಳಿತ್ತನಾದಡೂ ನೀಡುಗೆಯು, ಮೇಣು ಮಣ್ಣನಾದಡೂ ನೀಡುಗೆಯು ;
ನೀಡಿದಡೆ ಮನವಿಚ್ಛಂದವಾಗದೊಂದೆಯುಂದದಲ್ಲಿಪ್ಪಂತಪ್ಪ
ನಿಮ್ಮದೊಂದು ಸಮತಾಗುಣ ಎನ್ನನೆಂದು
ಬಂದು ಪೊದ್ದಿಪ್ಪುದು ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೭೨ ॥

೧೭೩

ಆವನಾಗಿ ಒಬ್ಬನು ನಾಸ್ತಿಕವನಾಡಿ ನಗುತಿಪ್ಪುದನು ತಾ ಕೇಳಿ,
ಮತ್ತಾವನಾಗಿ ಬಂದು ಪೇಳ್ವಡೆ,
ಮನ ವಿಚ್ಛಂದವಾಗದೊಂದೆಯುಂದದಲಿಪ್ಪಂತಪ್ಪ
ನಿಮ್ಮದೊಂದು ಸಮತಾಗುಣ ಎನ್ನನೆಂದು

ಬಂದು ಪೊದ್ದಿಪ್ಪುದು ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೭೩ ॥

೧೭೪

ಆವನಾಗಿ ಒಬ್ಬನು ನಿಡುಮುಳ್ಳಿನ ಮೇಲೆ ಪೊರಳ್ಚುಗೆಯು,
ಮೇಣು ಹಂಸೆಯು ಹಾಸಿನ ಮೇಲೆ ಪೊರಳ್ಚುಗೆಯು,
ಪೊರಳ್ಚಿದಡೆ ಮನ ವಿಚ್ಛಂದವಾಗದೊಂದೆಯಂದದಲ್ಲಿಪ್ಪಂತಪ್ಪ
ನಿಮ್ಮದೊಂದು ಸಮತಾಗುಣ ಎನ್ನನೆಂದು
ಬಂದು ಪೊದ್ದಿಪ್ಪುದು ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೭೪ ॥

೧೭೫

ಆವನಾಗಿ ಒಬ್ಬನು ಪಿಡಿದೊಯ್ಯುದ್ದ ಕಾಳಕೂಟವಿಷವನೆರುಗೆಯು
ಮೇಣು ಪಾಯಸಾಮೃತವನೆರುಗೆಯು.
ಎರದಡೆ ಮನವಿಚ್ಛಂದವಾಗದೊಂದೆಯಂದದಲ್ಲಿಪ್ಪಂತಪ್ಪ
ನಿಮ್ಮದೊಂದು ಸಮತಾಗುಣ ಎನ್ನನೆಂದು
ಬಂದು ಪೊದ್ದಿಪ್ಪುದು ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ, ॥ ೧೭೫ ॥

೧೭೬

ಆವನಾಗಿ ಒಬ್ಬನು ಬಾಯಿಗೆ ಬಂದಂತೆ ಬೈಗೆಯು,
ಮೇಣುವಾತ ಬಂದು ಸ್ತುತಿಸುಗೆಯು.
ಮನವಿಚ್ಛಂದವಾಗದೊಂದೆಯಂದದಲಿಪ್ಪಂತಪ್ಪ
ನಿಮ್ಮದೊಂದು ಸಮತಾಗುಣ ಎನ್ನನೆಂದು
ಬಂದು ಪೊದ್ದಿಪ್ಪುದು ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೭೬ ॥

೧೭೭

ಆವನಾನೊಬ್ಬನು ತಗುಳ್ದಟ್ಟಿ ಕಲ್ಲುಗುಂಡಿನಲ್ಲಿಡುಗೆ
ಮೇಣು ಪ್ರಾವಿಸಲ್ಲಿಡುಗೆಯು.

ಇಟ್ಟಡೆ ಮನವಿಚ್ಛಂದವಾಗದೊಂದೆಯುಂದದಲ್ಲಿಪ್ಪಂತಪ್ಪ
ನಿಮ್ಮದೊಂದು ಸಮತಾಗುಣ ಎನ್ನನೆಂದು
ಬಂದು ಪೊದ್ದಿಪ್ಪುದು ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೭೭ ॥

೧೭೮

ಆವ ಲೋಕವಾದಡೇನು ? ಅಯ್ಯಾ.
ಇನ್ನಾವ ಸಮಯವಾದಡೇನು ? ಅಯ್ಯಾ.
ಇನ್ನಾವ ದೇವರಾದಡೇನು ? ಅಯ್ಯಾ.
ನೀನು ಇರಿಸಿದಂತೆ ಇರದವರಾರಯ್ಯಾ ?
ನೀನು ಮಾಡಿದಂತೆ ಆಗದವರಾರಯ್ಯಾ ?
ನಿಮ್ಮ ಇಚ್ಛೆಮಾತ್ರದೊಳಗೆ ಲೋಕವಪ್ಪುದಡಗುವುದೈ,
ಎನ್ನ ಕಪಿಲಸಿದ್ಧಮಲ್ಲೇಶ್ವರದೇವಾ. ॥ ೧೭೮ ॥

೧೭೯

ಆವಾವ ಕಾಲದೊಳು ದೇವಪೂಜೆಯ ಮಾಡು,
ಮಾಡುವ ಸುಖವೆ ನೀನೆಯಯ್ಯಾ.
ಜೀವಕಾಯಕ್ಕೆ ನೀ ಚೇಷ್ಟಿತನಾದೆಯಯ್ಯಾ,
ಕಪಿಲಸಿದ್ಧಮಲ್ಲಿನಾಥಾ. ॥ ೧೭೯ ॥

೧೮೦

ಆವಾವ ದೆಸೆಗೆ ಬಾಯ ಬಿಟ್ಟು ಅರಸಿ ಕಾಣದೆ ಕಂಗೆಡುತ್ತಿದ್ದೆನಯ್ಯಾ.
ದೇವಾ, ಈ ಬಾಯ ಬಿಡುವುದ ಮಾಣಿಸಿ,
ಎನಗೆ ಪರಮಪ್ರಸಾದವ ಕರುಣಿಸಿ ರಕ್ಷಿಸಯ್ಯಾ ;
ಕಪಿಲಸಿದ್ಧಮಲ್ಲಿನಾಥಯ್ಯಾ, ನಿಮ್ಮ ಧರ್ಮವಯ್ಯಾ. ॥ ೧೮೦ ॥

೧೮೧

ಆವಾವ ಭಾವದಲ್ಲಿ ನಿಮ್ಮನಲ್ಲದೆ ನಾನರಿಯದಿದ್ದೆನಯ್ಯಾ,
ದೇವ ದೇವಾ, ಕಾಯಯ್ಯಾ, ಕಾಯಯ್ಯಾ.

ಕರುಣಿ ಕರುಣಿ, ಕೃಪಾವಲ್ಲಭ ಗುರುವೆ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೧೮೧ ॥

೧೮೨

ಆವುದರಲಾದಡೇನು ನೀನು ?
ನೀನು ಮಹಾಸಮರ್ಥನಯ್ಯಾ.
ಧನದಲ್ಲಿ ಗುಣದಲ್ಲಿ ಹೆಂಪಿನ ಹೆಸರಲಿ ಹಿರಿಯನು ನೀನಯ್ಯಾ.
ಅಯ್ಯಾ, ನೀನೆಲ್ಲರಲ್ಲಿ ಸಂಪನ್ನನಯ್ಯಾ,
ಎನ್ನ ಕಪಿಲಸಿದ್ಧಮಲ್ಲೇಶ್ವರ ದೇವರ ದೇವ. ॥ ೧೮೨ ॥

೧೮೩

ಆವುದಾನೊಂದು ಭಕ್ತಿ ಬಸವಣ್ಣನದಯ್ಯಾ.
ಆವುದಾನೊಂದು ಯುಕ್ತಿ ಬಸವಣ್ಣನದಯ್ಯಾ.
ಆವುದಾನೊಂದು ಯೋಗ ಬಸವಣ್ಣನದಯ್ಯಾ.
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೧೮೩ ॥

೧೮೪

ಆವುದೊಂದು ಸುಖವು ದೇವಾ,
ನಿಮ್ಮಿಂದ ಕಾಣಬಂದಿತ್ತಯ್ಯಾ.
ಇದನರಿದ ಮೇಲೆ, ಇನ್ನಾವ ಪರಿಯಲ್ಲಿ ನಿಮ್ಮಡಿಯ ಬಿಡುವೆನೆ ?
ಅಯ್ಯಾ, ದೇವದೇವಾ, ಕರುಣಿಸಯ್ಯಾ ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೧೮೪ ॥

೧೮೫

ಆಸನ ಸ್ಥಿರವಾಗಿ ಆಧಾರವಂ ಬಲಿದು,
ಅಧೋಮುಖದ ವಾಯುವನೂರ್ಧ್ವಮುಖಕ್ಕೆ ತಿದ್ದಿ
ಅತ್ತಿತ್ತ ಒಲೆಯದೆ, ನೆಟ್ಟನೆ ಕುಳ್ಳಿರ್ದು,
ತೊಟ್ಟೆವೆ ಮಿಡುಕದೆ, ಅಟ್ಟೆಯ ಹಂಗಳಿದು,
ಕರವೆರಡ ತಿರ್ಯಕವಾಗಿರಿಸಿ,
ಸಿರವ ಸುಸರವಂ ಮಾಡಿ
ದಿನಕರ–ಹಿಮಕರ–ವಾಯುಸಖರ ಮೇಲೆ

ಶಿಖಿ ಶಶಿ ರವಿಕೋಟಿಕೋಟಿಯು ಬೆಳಗಿನ ಸಿಂಹಾಸನದಲ್ಲಿ ಒಪ್ಪಿಪ್ಪ
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ನೆನೆದು ಸುಖಿಯಾದೆನು. ॥ ೧೮೫ ॥

೧೮೬

ಆಸೆಯೆಂಬವಳು ಆರನಾದಡೆಯೂ ತನ್ನತ್ತಲೆಳೆವಳು ನೋಡಾ,
ಈ ಆಸೆಯೆಂಬವಳು ಅವರಿವರೆನ್ನದೆ ಆರನಾದಡೆಯೂ
ಕೊಲಲಿಕೆ ಬಗೆವಳು.
ಈ ಆಸೆಯೆಂಬವಳಿಂದವೆ ನಿಮ್ಮಡಿಗಾಣದಿಪ್ಪೆ,
ಈ ಆಸೆಯೆಂಬವಳನೆಂದಿಂಗೆ ನೀಗಿ,
ಎಂದು ನಿಮ್ಮನೊಡಗೂಡಿ ಬೇರಾಗದಂತಿಪ್ಪೆನೋ,
ಎನ್ನ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೮೬ ॥

೧೮೭

ಆಳುವ ಅರಸನಾ ಹೆಂಡತಿಯು ಹಾದರಗಿತ್ತಿಯೆಂದಡೆ
ಆಳುವ ಅರಸು ಕೈಕಾಲನು ತರಿಸದೆ ಬಿಡುವನೆ ?
ಶರಣಸತಿ ಲಿಂಗಪತಿಯಪ್ಪ ಶಿವಭಕ್ತನ ಅಂತವನಿಂತವನೆಂದಡೆ,
ಅಘೋರ ನರಕದಲ್ಲಿಕ್ಕುವನವ್ವಾ, ನಮ್ಮ ಕಪಿಲಸಿದ್ಧಮಲ್ಲಿನಾಥ. ॥ ೧೮೭ ॥

೧೮೮

ಇಂತಪ್ಪ ಘನತರಲಿಂಗವ ಕರಸ್ಥಲದಲ್ಲಿ ಬಿಜಯಂಗೆಯ್ಸಿಕೊಂಡು
ಗುರುತೋರಿದ ಸದ್ಭಕ್ತಿಕ್ರೀಯಲ್ಲಿರದೆ,
ಪಾದೋದಕ ಪ್ರಸಾದವ ಕೊಳ್ಳದೆ,
ಯೋಗವೆಂದು ಅದ್ವೈತವೆಂದು ಭಂಡನೆ ಬಳಸುತಿಪ್ಪ
ಮಿಟ್ಟೆಯ ಭಂಡರನೇನೆಂಬೆನ್ನೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೮೮ ॥

೧೮೯

ಇಂತಪ್ಪ ಸತ್ಯಾರ್ಥವನರಿದು ಸರ್ವಪ್ರಪಂಚ ಮರದು
ಹಾಲುಳ್ಳಲ್ಲಿ ಹಬ್ಬವ ಮಾಡಿ, ಗಾಳಿ ಉಳ್ಳಲ್ಲಿ ತೂರಿಕೊಳ್ಳಿ !
ಬಳಿಕ ಆರಸಿದರುಂಟೆ, ಪರಮಸುಖವು
ನಿಜಗುರು ಸ್ವತಂತ್ರ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ?
ಮರುಗೋಲ ಪಡೆವಲ್ಲಿ ತೊರೆಯ ದಾಂಟಿಕೊಳ್ಳಿರಣ್ಣಾ. ॥ ೧೮೯ ॥

೧೯೦

ಇಂದಿನ ಅವಸ್ಥೆಗೆ ಪ್ರಾಪಿತವೇಕೆ ಬಾರದಯ್ಯಾ.
ಇಂದಿನ ಅವಸ್ಥೆಗೆ ಕಲ್ಪಿತವೇಕೆ ಬಾರದಯ್ಯಾ.
ಇಂದಿನ ಅವಸ್ಥೆಗೆ ಲಿಕ್ಕವೇಕೆ ಬಾರದಯ್ಯಾ.
ಇಂದಿನ ಅವಸ್ಥೆಗೆ ಇಂದು ಇನಿತು ಏಕೆ ಬಾರದೊ ?
ಕಪಿಲಸಿದ್ಧಮಲ್ಲಿನಾಥಯ್ಯಾ,
ನಿನ್ನ ಕೂಪವಸ್ಥೆಯಲು ಪ್ರಾಣ ಬಿಡದು. || ೧೯೦ ||

೧೯೧

ಇಂದ್ರಿಯಾರ್ಪಣ ಸುಖಾರ್ಪಣವಾಯಿತ್ತಯ್ಯಾ,
ಚೆನ್ನಬಸವಣ್ಣಾ ನಿಮ್ಮ ಅರಿವಿನಿಂದ ;
ಇಂದ್ರಿಯಾರ್ಪಣ ನಿಜಾರ್ಪಣವಾಯಿತ್ತಯ್ಯಾ,
ಚೆನ್ನಬಸವಣ್ಣಾ ನಿಮ್ಮ ಭಾವದಿಂದ ;
ಇಂದ್ರಿಯಾರ್ಪಣ ಗುರುಮುಖಕ್ಕೆ ಯೋಗ್ಯವಾಯಿತ್ತಯ್ಯಾ,
ಚೆನ್ನಬಸವಣ್ಣಾ ನಿಮ್ಮ ದಯದಿಂದ ;
ಕಪಿಲಸಿದ್ಧಮಲ್ಲಿನಾಥಯ್ಯ, ನಿಮಗೆ ಚೈತನ್ಯ. || ೧೯೧ ||

೧೯೨

ಇಂದಿಗೆ, ನಿಮಿಷಕ್ಕೆ ಬದುಂಕದೆ ಹೋಗೆಯು ;
ಅನಂತಕಾಲ ಬದುಂಕುಗೆಯು ;
ಬದುಂಕಿದಡೆ ಮನ ವಿಚ್ಛಂದವಾಗದೊಂದೆಯಂದದಲ್ಲಿಪ್ಪಂತಪ್ಪ
ನಿಮ್ಮದೊಂದು ಸಮತಾಗುಣ ಎನ್ನನೆಂದು ಬಂದು ಪೊದ್ದಿಪ್ಪುದು ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. || ೧೯೨ ||

೧೯೩

ಇಂಬಪ್ಪ ಶರಧಿಯು ಸಂಭ್ರಮದ ಮೊರಹಿನಲಿ
ಶಂಭುವೆ, ನಿನ್ನನೊಡಗೂಡಿದೆನಯ್ಯಾ.
ಬೇರೊಂದ ಕೇಳೆ, ಬೇರೊಂದ ಕಾಣೆ.
ಮಹಾ ಉಲುಹೆ ಒಡವುನೆಯಾದೆನಯ್ಯಾ.
ಅನಿಮಿಷನೆಂಬ ಶರಧಿಯು ಮಹಾ ಉಲುಹಿನಲಿ

ಉಲುಹುಗೆಟ್ಟೆ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನೀನೆಂಬ ಸಮುದ್ರದಲಿ ಆನದ್ದೆನು. ॥ ೧೯೩ ॥

೧೯೪

ಇಚ್ಛಾಜ್ಞಾನ ಕ್ರಿಯಾಶಕ್ತಿ ನಿನ್ನಾಧೀನ ಕಂಡಯ್ಯಾ.
ಇಚ್ಛೈಸುವುದೇನು, ಶಕ್ತಿಯೊ ಶಿವನೊ ? ಬಲ್ಲಡೆ ನೀವು ಹೇಳಿರೆ.
ಆನಂದಜಲದಲ್ಲಿ ಆಶ್ರಯವಾಗಿ ನಿತ್ಯಮಹೋತ್ಸವವನುಳ್ಳುದೇನು ?
ಶಕ್ತಿಯೊ ಶಿವನೊ ? ಬಲ್ಲಡೆ ನೀವು ಹೇಳಿರೆ.
ಬ್ರಹ್ಮಾಂಡಂಗಳು ಹಲವು ಕಂಪನವಪ್ಪಾಗ ನಿಷ್ಕಂಪವಾಗಿರಲುಳ್ಳುದೇನು ?
ಶಕ್ತಿಯೊ ಶಿವನೊ ? ಬಲ್ಲಡೆ ನೀವು ಹೇಳಿರೆ.
ಆನಂದಬ್ರಹ್ಮದಲ್ಲಿ ಆಂದೋಳವಾಗಿ ಅಕ್ಷರಬ್ರಹ್ಮವನ್ನೈದಿದ
ಆದಿಶಕ್ತಿಯುಃ ಹೋಬಳಿ ಎನ್ನ ಕಪಿಲಸಿದ್ಧಮಲ್ಲಿಕಾರ್ಜುನಯ್ಯನ. ॥ ೧೯೪ ॥

೧೯೫

ಇಚ್ಛೆಯಲ್ಲಿ ನಡೆವ ಅಚ್ಚಿಗಬಡುವ ತುಚ್ಛರಿಗೆ
ಎಂತಪ್ಪುದಯ್ಯ ಶಿವಭಕ್ತಿ ?
ಸಾಕ್ಷಾತ್ ಇದು ನಿಶ್ಚಯವೆಂದರಿದು ನಂಬದನ್ನಬರ
ಮಾತಿನ ಬೂತುಗಳಿಗೆ, ಭ್ರಾಂತುಳ್ಳ ಚಿತ್ತರಿಗೆ
ನಿತ್ಯ ಶಿವಭಕ್ತಿ ಎಂತಪ್ಪುದಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೯೫ ॥

೧೯೬

ಇತ್ತವರಿಲ್ಲ ಹೆತ್ತವರಿಲ್ಲ ನಿನಗೆ
ಆದಿಶೂನ್ಯ ತಮಂಧನಾಗಿದ್ದೆ ನೀನಯ್ಯಾ.
ನೀ ಶಕ್ತಿ ಪೂರವಿಸಲಿಕೆ ಎಲ್ಲವಾಗಿದ್ದೆಯ್ಯ,
ಎನ್ನ ಕಪಿಲಸಿದ್ಧಮಲ್ಲಿನಾಥಯ್ಯನಪ್ಪಾ ॥ ೧೯೬ ॥

೧೯೭

ಇದಿರಿಂಗೆ ಕಿಂಕರನಾಗಿ ತನ್ನ ದೇಹಗುಣವಡಗಬಲ್ಲಡೆ,
ಅಲ್ಲಿರ್ಪ ಆ ಮಹಾಮಹಿಮನ ನಿಜವ ಕೂಡಿ,
ಗಡಣದಲ್ಲಿರ್ಪಾತ್ಮನ ಕೂಡೆ ಆಡುತಿಪ್ಪನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನದೇವರ ದೇವನು ಭಕ್ತದೇಹಿಕನಾಗಿ ॥ ೧೯೭ ॥

೧೯೮

ಇದೇನಯ್ಯಾ, ಮುಂಡವಿಲ್ಲದ ರುಂಡ ಮಾತನಾಡುತ್ತಿದೆ !
ಮುಂಡಕ್ಕೆ ಸಮಾಧಿಯೊ ?
ಮುಂಡ–ರುಂಡಕ್ಕೆಸಂಬಂಧವ ಮಾಡಹೋದಡೆ ಸಿಗದಿಪ್ಪದು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೯೮ ॥

೧೯೯

ಇನ್ನಾವ ಹಿರಿಯರೇನಾದಡೇನಯ್ಯಾ,
ಇನ್ನಾವ ಸಮಯವಾದಡೇನಯ್ಯಾ,
ನೀ ಮಾಡಿದಂತೆ ಆದದವರಾರಯ್ಯಾ,
ನೀನಿರಿಸಿದಂತೆ ಇರದವರಾರಯ್ಯಾ,
ನಿನ್ನಿಚ್ಛಾಮಾತ್ರದಲ್ಲಿ ಜಗವು ಅಪ್ಪುದಡಗುವುದಯ್ಯಾ,
ಎನ್ನ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೧೯೯ ॥

೨೦೦

ಇನ್ನು ಜಗವು ಇಲ್ಲ ; ಮುನ್ನವೆ ಸಂದಳಿದೆ.
ಮನ್ನಣೆಯಿಂದ ನೀ ಕಳುಹಿದಂತೆ ಉನ್ನತೋನ್ನತನಾದೆ.
ಚೆನ್ನಬಸವಣ್ಣನ ಕರುಣದಿಂದ ನಿನ್ನ ರೂಪಾದೆ.
ಇನ್ನೆನಗೆ ಅರಿದುಂಟೆ ? ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೦೦ ॥

೨೦೧

ಇಪ್ಪತ್ತುನಾಲ್ವರು ಚವುಕವ ಹೊಕ್ಕಾರು.
ಆ ಚವುಕ ನಾಗರಕಟ್ಟೆಗೆ ಒಲೆದೀತು.
ಆ ನಾಗರಕಟ್ಟೆಯಲ್ಲಿ ಇಪ್ಪತ್ತು ನಾಲ್ವರು ದುಃಖಬಟ್ಟಾರು.
ನುಚ್ಚಿನ ನುಚ್ಚು ಕೊನೆನುಚ್ಚು ಮೂಗಂಡುಗವಾದಾವು
ಚಿಟ್ಟೆಯು ಹುಳು ಬಾಣಸಕ್ಕೆ ಬಂದಾವು.
ಲೋಕಕ್ಕೆ ಕೆಂಡದ ಮಳೆ ಸುರಿದಾವು.
ಹದಿನೆಂಟು ಜಾತಿಯೆಲ್ಲ ಏಕವರ್ಣವಾದೀತು.
ಉತ್ತರ ದಕ್ಷಿಣ ಪೂರ್ವ ಪಶ್ಚಿಮದ ರಾಯರುಗಳೆಲ್ಲಾ
ಗುಡ್ಡರುಗಳಾಗಿ ನಡೆದಾರು.

ಕಪಿಲಸಿದ್ಧಮಲ್ಲಿಕಾರ್ಜುನದೇವರು ಲಕ್ಷದ ಮೇಲೆ
ತೊಂಬತ್ತಾರು ಸಾವಿರ ಲಿಂಗವ
... ...ಕಲಿ ಕಲಿಯಾದೀತು
ಸತ್ಯ ಸತ್ತೀತು, ಸಾತ್ವಿಕವಡಗೀತು,
ಠಕ್ಕುಕಠವಳಿ ಮುಂಡುಮೂರು ಗನ್ನಘಾತಕ ಪದುರು ಚದುರು
ಭೂಮಂಡಲವೆಲ್ಲಾ ಆದೀತು.
ಆಗವೆ ಭಕ್ತರು, ಆಗವೆ ಭವಿಗಳು ಅಂಗೈಮೇಗೈಯಾದಾರಲ್ಲಾ.
ನಿಜಗುರು ನಿಶ್ಚಿಂತ ಕಪಿಲಸಿದ್ಧಮಲ್ಲಿಕಾರ್ಜುನ ದೇವಯ್ಯಾ. ॥ ೨೦೧ ॥

೨೦೨

ಇಬ್ಬಟ್ಟೆಯಲ್ಲಿ ಮನೆಯ ಮಾಡಿಕೊಂಡಿಪ್ಪನಲ್ಲ ;
ನಿನ್ನ ಕಂಗಳ ಮುಂದಿಂದಗಲಿದಡೆ ಎಂತು ಜೀವಿಸುವೆನಯ್ಯಾ ?
ಎಂತು ಬದುಕುವೆನಯ್ಯಾ ?
ಎನ್ನಳಲಬಳಲ ಕಂಡು ಕರುಣದಿಂದ ನೋಡಿ
ನಿನ್ನಳಲೇನುಸುರುಸುರೆಂದು ಕಣ್ಣೀರ ತೊಡೆದೊಡಗೂಡಾ,
ಕಪಿಲಸಿದ್ಧಮಲ್ಲಿನಾಥಾ. ॥ ೨೦೨ ॥

೨೦೩

ಇಬ್ಬರೆಡೆಗೆ ಹರಿವ ಕುಂಟಣಿ ಒಬ್ಬಳೆಯವ್ವ !
ತಾ ಮುನ್ನ ನೆರವಳವನ ಬಳಿಕ ತಂದು ನೆರಹುವಳೆಮಗೆ
ಇವಳ ಕುಂಟಣಿತನವಿಂತುಟವ್ವಾ
ನಾವಿಬ್ಬರು ಮಾಡಿ ನೆರೆವವನ ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೨೦೩ ॥

೨೦೪

ಇಲ್ಲಿಯ ವಿಸ್ತಾರ ಮಹಾಗುರುವಿನ ಹೃದಯವೊ, ನಾನರಿಯೆನು.
ಇಲ್ಲಿಯ ವಿಸ್ತಾರ ಪ್ರಭುವಿನ ಹೃದಯವೊ, ನಾನರಿಯೆನು.
ಇದ ನೀನೆ ಬಲ್ಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೦೪ ॥

೨೦೫

ಇವನ ಪರಿಯ ಗಂಡುಗೂಸು ಪೃಥುವಿಯ ಮೇಲಿಲ್ಲವಯ್ಯಾ,
ಅವ್ವಾ, ಗಂಡುಮಕ್ಕಳು ಗಂಡುಬೇಟಗೊಂಬರು.
ಹೆಮ್ಮಕ್ಕಳು ಹೆಂಬೇಟಗೊಂಬರು.

ಇವಗೆ ಕೂರದವರಾರು ? ಹೇಳಾ ! ಅವ್ವಾ ! ಅಯ್ಯಾ !
ಜಗದ ಗಂಡರ ಹೆಂಡಿರು ಇವನ ಮೇಲೆ ಮೂಗೂರಿಕೊಂಡಿಪ್ಪರು,
ಕಪಿಲಸಿದ್ಧಮಲ್ಲಿನಾಥಯ್ಯನವ್ವಾ. ॥ ೨೦೫ ॥

೨೦೬

ಇವಳಾವಾವ ವಂಚಕದಲಿ ಹುಟ್ಟಿ ಬೆಳದವನೆಂದರಿಯೆ.
ನೋಡಯ್ಯಾ, ಇಂತೀ ಲೋಕವ ಹೊಂಸೆಂದು ತಲೆವಗ್ಗವಿಕ್ಕಿಕೊಟ್ಟಾ,
ಕಪಿಲಸಿದ್ಧಮಲ್ಲಿನಾಥಯ್ಯನವ್ವಯು ! ॥ ೨೦೬ ॥

೨೦೭

ಇಹತ್ರ ಪರತ್ರದಲ್ಲಿ ಎರಡರಲ್ಲಿ ಇಪ್ಪುದು ಗೀತವು ನೋಡಯ್ಯಾ.
ಇತ್ತ ಬಾರಾ, ಸಾರಾ ಎಂಬುದು ಗೀತವು ನೋಡಯ್ಯಾ.
ಗೀತವನೂ ಗಿರಿಜೆಯನೂ ಬಾಯೆಂದು ಕೈವೀಸುವನ್ನೆ
ಎನ್ನ ಕಪಿಲಸಿದ್ಧಮಲ್ಲೇಶ್ವರದೇವ, ಓ ! ಅಯ್ಯಾ ! ॥ ೨೦೭ ॥

೨೦೮

ಇಹಪರದ ಪರಿಯನು ಅಯ್ಯಾ ನೀನೇ ಬಲ್ಲೆ.
ನಿನ್ನ ಶರಣನು ಬಲ್ಲ ಪ್ರಭುರಾಯನು.
ಆತನನುಮತದಿಂ ಮಾಯೆಯ ಗೆಲುವ ಪರಿಯ
ನೀನೆನಗೆ ಕಲಿಸುವುದು ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೦೮ ॥

೨೦೯

ಇಹಪರವೆಂಬ ಇದ್ದೆಸೆಯನರಿತು ಇದ್ದೆಸೆಯಾದ
ಗುರುಚರವಿಡಿದು ಇಹಪರವೆಂದರಿಯ.
ಭಕ್ತನ ತನುವೆ ಶಿವನಿಪ್ಪಾಲಯವಾಗಿ
ಇಹಲೋಕವೆ ಪರಲೋಕ ; ಪರಲೋಕವೆ ಇಹಲೋಕ
ನಿನ್ನ ಭಕ್ತಂಗೆ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೦೯ ॥

೨೧೦

ಈ ಆಶೆಯೆಂಬವಳು ಆರನಾದಡಯೂ ತನ್ನತ್ತಲೆ ಎಳೆವಳು.
ಈ ಆಶೆಯೆಂಬವಳು ಅವರಿವರೆನ್ನದೆ ಆರನಾದಡೆಯೂ ಕೊಲ್ಲಲಿಕೆ ಬಗೆವಳು.

ಎನಿತಾದಡನಿತರಲ್ಲಿಯುು ನಿಲ್ಲಳು ;
ಮತ್ತಂ ಸರ್ವ ಸುರಪದವಿಗಳನಾಸೆಗೆಯ್ವಳು.
ಈ ಆಶೆಯೆಂಬವಳಿಂದವೆ ನಿಮ್ಮೆಡೆಗಾಣದಿಪ್ಪೆನು.
ಈ ಆಶೆಯೆಂಬುವಳನೆಂದಿಂಗೆ ನೀಗಿ, ಎಂದು ನಿಮ್ಮೊಡಗೂಡಿ
ಬೇರಾಗದಿಪ್ಪೆನೊ, ಎನ್ನ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೧೦ ॥

೨೧೧

ಈ ಆಶೆಯೆಂಬುವಳು ಒಂದು ನಿಮಿಷಂ ಬರಿದಿರಲೀಯಳು ;
ಆರನಾದಡೆಣಿಸುತ್ತಿರ್ಪಳು.
ಈ ಆಶೆಯೆಂಬ ಪಾತಕಿಯನೆಂದಿಂಗೆ ನೀಗಿ,
ಎಂದು ನಿಮ್ಮೊಡಗೂಡಿ ಬೇರಾಗದಿಪ್ಪೆನೋ
ಎನ್ನ ಕಪಿಲಸಿದ್ಧಮಲ್ಲಿಕಾರ್ಜುನಾ ! ॥ ೨೧೧ ॥

೨೧೨

ಈ ಆಶೆಯೆಂಬುವಳು ವಾಹಿಗೊಟ್ಟಿಗೆಗಳಂ ಕಟ್ಟಿಸಿ,
ನದಿಯೊಳಗಂ ಪೊಗಿಸಿ, ಪರದೇಶಕ್ಕಂ ನೂಂಕುವಳು.
ಈ ಆಸೆಯೆಂಬ ಪಾತಕಿಯಿಂದವೆ ನಿಮ್ಮೆಡೆಗಾಣದಿಪ್ಪೆನು.
ಈ ಆಸೆಯೆಂಬ ಪಾತಕಿಯನೆಂದಿಂಗೆ ನೀಗಿ,
ಎಂದು ನಿಮ್ಮನೊಡಗೂಡಿ ಬೇರಾಗದಿಪ್ಪೆನೊ ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೧೨ ॥

೨೧೩

ಈಗರಸುವ ನುಡಿವಿರಹಿತ ಲಿಂಗದ ನಿಲುಕಡೆ ಬೇರೆ ಉಂಟೆ ?
ಮುಕುಳದಲ್ಲಿ ಪರಿಮಳ ತೋರುವ ಕಾಲಕ್ಕೆ ತೋರದಿಪ್ಪುದೆ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೧೩ ॥

೨೧೪

ಈಗಳಿಂತು ಕಾಯದಲ್ಲಿ ಗುರುವ ನೆರೆವೆನೆಂಬವಂಗೆ ಹೇಳುವೆನಯ್ಯಾ.
ಧನವೊಂದೆ ಧನವಾಗಿ, ಮನವೊಂದೆ ಮನವಾಗಿ,
ಅಂದೆ ಹಿಂದಾಗಿ ಇದ್ದನಾಗಿ,
ಆತ ಹಿಡಿವ ಗತಿಯಿಂದ ಶಿವಕೂಟವೊಂದೆ,
ಎನ್ನ ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೨೧೪ ॥

೨೧೫

ಈ ಋತುಕಾಲ ಹುಟ್ಟಿ ಮುಟ್ಟಿ ಕೆಡುವಡೆ
ಒಳಗೆ ಬೆಳೆಯಲೇಕಯ್ಯಾ ! ಹೋ ! ವಾ ! ಹೋ ! ಅಯ್ಯಾ !
ನೀ ಮುಟ್ಟಿ ಕೆಡುವಡೆ ಒಳಗೆ ಬೆಳೆಯಲೇಕಯ್ಯಾ.
ಈ ಬಟ್ಟೆ ಹುಸಿಬಟ್ಟೆ.
ಕಪಿಲಸಿದ್ಧಮಲ್ಲಿನಾಥಯ್ಯನ ಅಂಜದೆ ನೆನೆಯಿರೊ,
ನೆನೆಯಿರೊ ! ಹೋ ! ವಾ ! ಹೋ ! ಅಯ್ಯಾ ! ॥ ೨೧೫ ॥

೨೧೬

ಈರೈದು ಸೀಮೆಯಿಂದಾರಯ್ಯ ಬಂದಾರೆ,
ಓರಂತೆ ಆವರುವನು ನೀನೆಂಬೆನು ;
ಕಾರುಣ್ಯಕರ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಆವರ ದ್ವಾರಕಿಂಕರನಾಗಿಯಾನಿಪ್ಪೆನು. ॥ ೨೧೬ ॥

೨೧೭

ಉಣ್ಣದ ಊಡದ ಫಲಪ್ರಾಣಿಗಳ ನಾ ಕಂಡು ನೋಡುತಿರ್ದೆ.
ಅಂಧಕ ರೂಪಿನ ಉರಗನ ಮೋಹಕ್ಕೆ ಬೆರಗಾಗಿ ನೋಡುತಿರ್ದೆ.
ಎರಡರ ಮೋಹಕ್ಕೆ ನೋಡಿ ತಾನು ನಗುತಿರ್ದ,
ಕಪಿಲಸಿದ್ಧಮಲ್ಲಿನಾಥಾ. ॥ ೨೧೭ ॥

೨೧೮

ಉತ್ತರಕೋಣೆಯ ಉತ್ತರೋತ್ತರ ವಾಕ್ಯವ ಕೇಳಿ ಧನ್ಯನಾದೆನಯ್ಯಾ.
ಉತ್ತರಕೋಣೆಯ ನಿಮಿತ್ತ ಪರಮಗುರುವಿನ
ದೂಷಣೆಯ ಕೇಳಿ ಪಾಪಿಯಾದೆನಯ್ಯಾ.
ಇದು ಕಾರಣ, ಶರಣರ ದೂಷಣೆಯಿಂದ ಶರಣರ ಮನಕ್ಕೆ ಭೂಷಣವೆ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೧೮ ॥

೨೧೯

ಉದಕ ಹೋಗಿ ಗುರುಪಾದೋದಕವೆನಿಸಿತ್ತು ;
ಗುರುಪಾದೋದಕ ಹೋಗಿ ಕ್ರಿಯಾಪಾದೋದಕವೆನಿಸಿತ್ತು ;

ಕ್ರಿಯಾಪಾದೋದಕ ಹೋಗಿ ಜ್ಞಾನಪಾದೋದಕವೆನಿಸಿತ್ತು ;
ಜ್ಞಾನಪಾದೋದಕವೆ ಶರಣನ ಮನದ ಮೊನೆಯಲ್ಲಿ
ಕಪಿಲಸಿದ್ಧಮಲ್ಲಿಕಾರ್ಜುನನಾಗಿ ನಿಂದಿತ್ತು. ॥ ೨೧೯ ॥

೨೨೦

'ಉದಯೇ ಜನನಂ ನಿತ್ಯಂ ರಾತ್ರ್ಯಾಂ ಚ ಮರಣಂ ತಥಾ ॥
ಅಜ್ಞಾನಂ ಸರ್ವಜಂತೂನಾಂ ತದ್ವಿಧಿಶ್ಚ ಪುನಃ ಪುನಃ ॥
ಕ್ಷೀಣಾಯುರಗ್ನಿಮಾಂದ್ಯಂ ಚ ರೋಗೋದ್ರೇಕಶ್ಚ ಕಾರ್ತಿಕ !
ನಿದ್ರಾಮಾತ್ರೇಣ ಜಾಯಂತೇ ಮನಃ ಪವನಸಂಯುತಂ ॥'
ಎಂದುದಾಗಿ,

ರೂಪಿಲ್ಲದವಳೊಡನಾಡಿ ಮೃತ್ಯುವಿಪ್ಪ ಠಾವನರಿಯಬಾರದು.
ಹಿತವೆಯಂತಿಪ್ಪಳು ಒತ್ತಿ ಕೆಡಹುವಳು.
ತೊಪ್ಪನೆ ಭೂಮಿಗೆ ಒರಗಿಸುವಳು.
ಇವಳು ಅಪ್ಪುವ ಅಗಲುವ ಪರಿಯ ನೋಡಯ್ಯಾ.
ಈ ಲೋಕದೊಳಗೆಲ್ಲರೂ ಅಜ್ಞಾನನಿದ್ರಾಮಾಯಾಶಕ್ತಿಯ ಸಂಗದಿಂದ
ಮರೆದೊರಗುತ್ತೈದಾರೆ.
ಎನಗಿದ ತಪ್ಪಿಸಿ ನಿಮ್ಮೊಳಗಿರಿಸಿಕೊಳ್ಳಯ್ಯಾ ಪ್ರಭುವೆ,
ಕಪಿಲಸಿದ್ಧಮಲ್ಲಿನಾಥದೇವರ ದೇವ. ॥ ೨೨೦ ॥

೨೨೧

ಉಸುರ ಹಿಡಿದು ಮಜ್ಜನಕ್ಕೆರೆವೆನಯ್ಯಾ ನಿಮಗೆ ;
ವಿಷಯ ಮಾದು ಗಂಧವನೀವೆನಯ್ಯಾ ನಿಮಗೆ ;
ನೆನಹ ನೆಲೆಗೊಳಿಸಿ ಕೊಡುವೆನು ಕುಸುಮವನು ;
ತನುಗುಣಾದಿಗಳನುರುಹಿ ದಶಾಂಗಧೂಪವನಿಕ್ಕುವೆನು.
ಎನ್ನನೆ ನಿಮಗೆ ಬೋನಕ್ಕೆ ಸವೆವೆನಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನಾ,
ಹೊರ ಬಳಕೆಯ ಪೂಜೆಗೆ ಎರಗದೆನ್ನ ಮನವು. ॥ ೨೨೧ ॥

೨೨೨

ಉಸುರುಸುರ ಸರಪಿನೊಳಗಡಗಿಕೊಂಡು
ಜೀವಿಸುತಿಪ್ಪುದು ಲೋಕ !

ಇದನು ನೀನೆಂತು ಅರಿದೆ ಹೇಳಾ.
ಆ ನಿನ್ನ ಪ್ರಸಾದದಿಂದರಿತೆ ನಾ,
ಎನ್ನ ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೨೨೨ ॥

೨೨೩

ಊರೂರ ಮಧ್ಯದಲಿ ಆತನಿಪ್ಪರಮನೆಯು
ಆರು ಅರಿಯರು ಆರು ದ್ವಾರಂಗಳ.
ಅಂಗ ಅಂಗದಲಿದ್ದು ಸಂಗವಂ ತೊರೆದೀಗ
ಸುಸಂಗ ಸಾನಂದವಾದವರರಿಯರು.
ಅನಂಗವಿದಾರಣ ಕಪಿಲಸಿದ್ಧಮಲ್ಲಿಕಾರ್ಜುನ-
ಲಿಂಗವಿಪ್ಪರ ಮನೆ ಈ ಪರಿಯಯ್ಯಾ. ॥ ೨೨೩ ॥

೨೨೪

ಎಂಟಕ್ಕೆ ಗಂಟಾಗಿ ನಂಟನ ತಾಯಿ ನಮ್ಮೂರಿಗೆ ಹೋದಳು.
ಅರಸುಗಳೈವರು ಅರಸಿಯ ಮುದ್ದಾಡ ಹೋದರು.
ರೂಪುಳ್ಳ ಹೆಂಡತಿ ಕಂಡಡೆ ಏನೆಂದೂ :
ನಮ್ಮ ಕಪಿಲಸಿದ್ಧಮಲ್ಲಿನಾಥ ಉಂಬಡೆ ಓಗರವಿಲ್ಲವೆಂದನು. ॥ ೨೨೪ ॥

೨೨೫

ಎಂತು ಮಾಯಾಸುಖವ ಸಂತತಂ ಗೆಲುವಾತ
ನಿಶ್ಚಿಂತನಕ್ಕು ತಾನಿಹಪರದಲಿ.
ಸಂತತ ನಿಶ್ಚಿಂತನಪ್ಪಾತ ಕಪಿಲ
ಸಿದ್ಧಮಲ್ಲಿಕಾರ್ಜುನ ತಾನಪ್ಪನು. ॥ ೨೨೫ ॥

೨೨೬

ಎಂತೆಂತು ನೋಡಿದಡೀ ಮನವು
ಸಂತವಿಡಲೀಯದಯ್ಯಾ.
ನಿಮ್ಮಯ ಚಿಂತೆಗೆ ಒಳಗಾಗದೆ
ದೆಸೆದೆಸೆವರಿವುದು,

ಕಾಮಕಿಚ್ಚೈಸೂದು,
ಕ್ರೋಧಕಿಚ್ಚೈಸೂದು,
ಆಮಿಷ ತಾಮಸಕ್ಕೆ ತಾನೆ ಮುಂದಾಗಿಪ್ಪುದು.
ಇದ ಮೂಲನಾಶವ ಮಾಡೆ
ನೀ ಮುಂದಾಗಯ್ಯ ತಂದೆ
ಕಪಿಲಸಿದ್ಧಮಲ್ಲಿಕಾರ್ಜುನ. ॥ ೨೨೬ ॥

೨೨೭

ಎಂದಡಾ ಮಾಯೆಯನು ಕರದಿಂ ತಂದೆ
ಇಕ್ಕಿ ಜಾರಿ ಕೆಡುಹುವುದು.
ಮಾಯೆ ಆರೂಢವೆಂಬವರ ಏಡಿಸುವುದು.
ಕರುಣಾಕರನು ಕಪಿಲಸಿದ್ಧಮಲ್ಲೇಶ್ವರನ
ಶರಣರಿಗೆ ಅಂಜಿ ನಿಂದಿತು ಮಾಯೆ. ॥ ೨೨೭ ॥

೨೨೮

ಎಂದಪ್ಪುದಯ್ಯಾ ಶಿವಭಕ್ತಿರಸ ?
ಎನಗೆಂದಪ್ಪುದಯ್ಯಾ ನಿಮ್ಮ ಕರುಣ ?
ಕ್ರಿಯಾಕಾರಕ್ಕೆ ತಾನೆ ಮೂಲಿಗನಾದೆ.
ಮೊದಲುಗೆಟ್ಟೆನು ಶುದ್ಧಮೂಲದಲ್ಲಿ.
ನಿರ್ವಾಣದೀಕ್ಷೆಯಲಿ ಒಯ್ಯನೆ ಮುಖದೋರೆ
ಅಯ್ಯಾ ನೀನೆಯ್ದಿಕೊ ಮನ ಮಧ್ಯವ.
ಮಥನದಲಿ ಸಂಗಮಿಸಿ ಯಥಾ ಕಥನಕ್ಕೆ ತಾನಾಗಿ
ಸದಮಳ ಜ್ಞಾನಕ್ಕೆ ಮಾತೆಯಾಗಿ
ಅತಿಶಯದ ರೂಪ ನಿನ್ನ ನೆನಹಿನ ನಿರ್ಮಳದಲ್ಲಿ ಲೀಯ್ಯವಾದೆ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೨೮ ॥

೨೨೯

ಎಂದೆಂದೂ ಎನ್ನಂಗ ಮನ ಪ್ರಾಣ ನಿನ್ನದಯ್ಯಾ ಬಸವಾ.
ಎಂದೆಂದೂ ಎನ್ನಂಗ ಮನ ಪ್ರಾಣ ನಿನ್ನದಯ್ಯಾ ಬಸವಾ.
ಕಪಿಲಸಿದ್ಧಮಲ್ಲಿನಾಥಯ್ಯನ ಗುರುಬಸವಾ. ॥ ೨೨೯ ॥

೨೩೦

ಎಂದೋ ದಂದುಗ ಮಾಬುದು ಎನಗೆಂದೊ ?
ದಂದುಗ ಮಾಬುದು ಎನ್ನ ಮನಕ್ಕಿನ್ನೆಂದೊ ?
ತಂದೆ ಪರಮಾನಂದವೆಂದಪ್ಪುದೊ ?
ಎನಗಿನ್ನೆಂದೊ ಎಂದೋ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೩೦ ॥

೨೩೧

ಎಣಿಕೆಯಿಲ್ಲದ ಘನವೆನ್ನ ಕಣ್ಣ ಮುಂದೆ ತೋರುತ್ತಿದೆ, ಎಲೆ ಅಯ್ಯಾ.
ಇದ ಕಂಡು ಮನಕ್ಕೆ ಸಂತಸವಾಯಿತ್ತಯ್ಯಾ.
ಎಣಿಕೆಯಿಲ್ಲದ ಘನವ ಕರುಣಿಸಿದಡಾನು ಬದುಕುವೆನಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೨೩೧ ॥

೨೩೨

ಎನಗೆನ್ನ ಬಸವಣ್ಣನ ತೊತ್ತು ನಮ್ಮ ತಾಯಿಯಾಗಬೇಕು ;
ಎನಗೆನ್ನ ಬಸವಣ್ಣನ ತೊಂಡ ನಮ್ಮ ತಂದೆಯಾಗಬೇಕು.
ಎನಗೆನ್ನ ಬಸವಣ್ಣನ ತೊತ್ತು ತೊಂಡರು ನಮ್ಮ ತಾಯಿ ತಂದೆಗಳಾದರೆ ;
ನಿಮ್ಮ ತಂದೆ ತಾಯಿಗಳಾರು ಹೇಳಾ, ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೨೩೨ ॥

೨೩೩

ಎನಗೆ ಹರಿಯಿತ್ತು ತಮವೆಂಬ ಸಂಸಾರದ ಬಂಧ.
ಅಡಗಿ ಉಡುಗಿ ಕಂಡೆಹೆನೆಂಬ ಭ್ರಮೆ ಭಾವಕ್ಕೆ ಬಯಲಾಯಿತ್ತು.
ನಿತ್ಯನಿರಂಜನ ಪರಂಜ್ಯೋತಿ ಪ್ರಕಾಶವಾಯಿತ್ತು.
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ
ಕಪಿಲಸಿದ್ಧಮಲ್ಲಿಕಾರ್ಜುನಲಿಂಗವು ಕಾಣಬಂದಿತ್ತು,
ಪ್ರಭುದೇವರ ಕಾರುಣ್ಯದಿಂದ. ॥ ೨೩೩ ॥

೨೩೪

ಎನ್ನ ಕಾಡದ ಮುನ್ನ ನಿನ್ನ ಮತವೀಯಯ್ಯ
ನಿನ್ನ ಪ್ರಭುರಾಯಂಗೆ ಹೇಳಿ ಕಳೆಯಯ್ಯೆ.

ಎನ್ನ ಗುರು ಕಪಿಲಸಿದ್ಧಮಲ್ಲಿಕಾರ್ಜುನ
ಮನ್ನಣೆಗೆಡಿಸಿತ್ತು ಮಾಯೆ ಜಗವ. ॥ ೨೩೪ ॥

೨೩೫

ಎನ್ನ ತನುಮನದೊಡೆಯ ನೀನೆ ಕಂಡಯ್ಯಾ.
ಮನದ ಮಹಾದೇವ ನೀನಾದ ಬಳಿಕ
ಇನ್ನು ನಾ ಮನವ ಕದ್ದಲ್ಲಿ ಬೈಚಿಡುವೆಸಯ್ಯಾ ?
ಎನ್ನ ಮನೋವಾಕ್ಕಾಯದೊಡೆಯ ನೀನೆ
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ, ಶರಣು ಶರಣು ! ॥ ೨೩೫ ॥

೨೩೬

ಎನ್ನ ತನುವ ಕಡಿವುದು ಬಸವಣ್ಣನ ಧರ್ಮವಯ್ಯಾ,
ಎನ್ನ ಮನವನೊರೆದು ನೋಡುವುದು ಬಸವಣ್ಣನ ಧರ್ಮವಯ್ಯಾ,
ಎನ್ನ ಧನವ ಸೂರೆಮಾಡುವುದು ಬಸವಣ್ಣನ ಧರ್ಮವಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೨೩೬ ॥

೨೩೭

ಎನ್ನ ತನು ಶುದ್ಧವಾಯಿತ್ತು ಚೆನ್ನಬಸವಣ್ಣನಿಂದ ;
ಎನ್ನ ಜೀವ ಶುದ್ಧವಾಯಿತ್ತು ಬಸವಣ್ಣನಿಂದ ;
ಎನ್ನ ಭಾವ ಶುದ್ಧವಾಯಿತ್ತು ಪ್ರಭುದೇವರಿಂದ.
ಇಂತೆನ್ನ ತನು-ಜೀವ-ಭಾವಂಗಳಲ್ಲಿ
ಇಷ್ಟ ಪ್ರಾಣಭಾವಂಗಳ ಕುರುಹ ಕಂಡು
ನಿಷ್ಠೆ ನಿಬ್ಬೆರಗಾದೆ ನಾನು, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೨೩೭ ॥

೨೩೮

ಎನ್ನ ನೀ ಒಲುವೆ, ಒಲ್ಲೆ ಎಂಬುದನು
ಅರಿಯಲು ಬಾರದು ಹಾ ! ಹಾ ! ಅಯ್ಯಾ !
ನೀನೊಲಿವಂತೆ ಗೆಯ್ವೆ ನಾನು.
ಒಲ್ಲದಂತೆ ಬಿರುವೆ ನೀನಯ್ಯಾ.
ಎನ್ನ ನೀ ಕರಕೇಡ ಕಾಡದಿರಯ್ಯಾ,
ಎನ್ನ ಕಪಿಲಸಿದ್ಧಮಲ್ಲೇಶ್ವರ ದೇವರ ದೇವಯ್ಯಾ. ॥ ೨೩೮ ॥

೨೩೯

ಎನ್ನ ಪಾತಕಜನ್ಮವ ಕಳೆದಿರಿ.
ಎನ್ನ ಭೂತಪ್ರಾಣವನುಳಿದು ಲಿಂಗಪ್ರಾಣಿಯ ಮಾಡಿದಿರಿ.
ಎನ್ನ ನಿಮ್ಮ ಶರಣರ ಸಂಗಕ್ಕೆ ಸಲಿಸಿದಿರಿ.
ಭವಿಯ ಮನೆಯನ್ನಪಾನ [ಪಿಶಿತ] ಸುರಪಾನವೆಂದೆಂಬೆ.
ಎನ್ನದಿದ್ದೆನಾದಡೆ ನಾಯಕನರಕ, ನಿಮ್ಮಾಣೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೩೯ ॥

೨೪೦

ಎನ್ನ ಭವಕ್ಕೆ ತಂದಿರಿಸಿ ನರಕವನೂಡಿಹೆನೆಂದಡೆ ಉಂಡೆನೆ ?
ನಾನುಣ್ಣೆನುಣ್ಣೆ, ನಿನ್ನ ಕರುಣವುಂಟು !
ನಿನ್ನ ಬಸವಣ್ಣನ ಕರುಣದಿಂದ ನೀನಪ್ಪೆ.
ನಿನ್ನ ಕಕ್ಕುಲತೆ ಉಳಿದುದು, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೪೦ ॥

೨೪೧

ಎನ್ನ ಸಕಲಕ್ಕೆ ಗುರು ಬಸವಣ್ಣ,
ಎನ್ನ ನಿಃಕಲಕ್ಕೆ ಗುರು ಬಸವಣ್ಣ ;
ಎನ್ನ ಸಕಲ ನಿಃಕಲ ಕೂಡಿದಾನಂದದಾದಿ ಪದವೆನಿತ ಆಗೆನಿಸಿ,
ಪದವ ಮೀರಿದ ಸದಮಲಜ್ಞಾನಜ್ಯೋತಿರ್ಮಯನೈ.
ಬಸವಣ್ಣನೇ ಶರಣು, ಬಸವಣ್ಣನೇ ಶರಣು.
ಬಸವಣ್ಣನೇ ಭಕ್ತಿಮುಕ್ತಿಗೆ ಮೂಲವು.
ಬಸವಣ್ಣನ ನೆನೆದು ಅನುಮಿಷಾಕ್ಷರದಿಂದ ಬಸವಪದವಾಯಿತ್ತಯ್ಯ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೪೧ ॥

೨೪೨

ಎನ್ನ ಸ್ವಸ್ಥಿರವೆಂಬ ಭೂಮಿಯಲ್ಲಿ
ಒಂದು ಬೀಜ ಮೊಳೆದೋರಿ,
ಮೂರು ಶಾಖೆಗಳಾಗಿ ಫಲವಾರಾದವು.

ಮೂವತ್ತಾರರ ಮೇಲೆ ಇನ್ನೂರ ಹದಿನಾರು ಹಣ್ಣಾದವು.
ಇಂತೀ ಫಲವನುಂಡುಂಡು ಮೀರಿ
ಮೇಲಣದೊಂದು ಫಲದಲ್ಲಿ ಮೈಮರೆದು,
ಕಪಿಲಸಿದ್ಧಮಲ್ಲಿಕಾರ್ಜುನನ ತತ್ವವಿದೆಂದರಿದು
'ತತ್ವಮಸಿ'ಯಾದೆನು. ॥ ೨೪೨ ॥

೨೪೩

ಎನ್ನ ಹೃದಯಕಮಲದ ಅಷ್ಟದಳದ
ದ್ವಾತ್ರಿಂಶತ್‌ಕುಸುಮ ಮಧ್ಯದಲ್ಲಿಪ್ಪನಾ ಸೂರ್ಯ.
ಆ ಸೂರ್ಯನ ಮಧ್ಯದಲ್ಲಿಪ್ಪನಾ ಚಂದ್ರ.
ಆ ಚಂದ್ರನ ಮಧ್ಯದಲ್ಲಿಪ್ಪನಾ ಚಿದಾಗ್ನಿ.
ಆ ಚಿದಾಗ್ನಿಯ ಮಧ್ಯದಲ್ಲಿಪ್ಪುದಾ ಚಿತ್ಕಾಂತಿ.
ಆ ಚಿತ್ಕಾಂತಿಯ ಮಧ್ಯದಲ್ಲಿಪ್ಪುದಾ ಚಿತ್ಸುಜ್ಞಾನ.
ಆ ಚಿತ್ಸುಜ್ಞಾನದ ಮಧ್ಯದಲ್ಲಿಪ್ಪನಾ ಚಿದಾತ್ಮ.
ಆ ಚಿದಾತ್ಮನ ಮಧ್ಯದಲ್ಲಿಪ್ಪನಾ ಚಿತ್ಪ್ರಕಾಶಸ್ವರೂಪಮಪ್ಪ ಪರಶಿವನು.
ಅಂತಪ್ಪ ಪರಶಿವನ ಎನ್ನ ಸುಜ್ಞಾನಕಾಯದ
ಮಸ್ತಕದ ಮೇಲೆ ಹಸ್ತವನಿರಿಸಿ
ಮನೋಭಾವ ಕರಣೇಂದ್ರಿಯಂಗಳ ಸ್ವರೂಪೀಕರಿಸಿ ದೃಷ್ಟಿಗೆ ತೋರಿ
ಕೈಯಲ್ಲಿ ಲಿಂಗವ ಕೊಟ್ಟ ಶ್ರೀಗುರುವಿನ ಶ್ರೀಚರಣಕ್ಕೆ
ನಮೋನಮೋ ಎಂದು ಬದುಕಿದೆನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೪೩ ॥

೨೪೪

ಎನ್ನ ಹೊತ್ತಿಪ್ಪವಳ ನೆತ್ತಿಯ ಕಣ್ಣಿನಲ್ಲಿಪ್ಪ
ಲಿಂಗವ ನಾನೆಚ್ಚತ್ತು ನೋಡುವ ತೆರನೆಂತಯ್ಯಾ.
ನೋಡ ಹೋದಡೆ ನೆತ್ತಿ ಒಡೆದು ಕಣ್ಣಾಯಿತ್ತು.
ನೋಡದಿರ್ದಡೆ ಎನಗವಳು ತೋರಳು.
ಎನಗೆ ಕಾಬ ತೆರನ ತೋರಾ,
ಕಪಿಲಸಿದ್ಧಮಲ್ಲಿಕಾರ್ಜುನಪ್ರಭುವೆ. ॥ ೨೪೪ ॥

೨೪೫

ಎನಿಸೆನಿಸಾದಡೆ ಅನಿಸರಲ್ಲಿ ನಿಲ್ಲಳು.
ಮತ್ತಂ ಪರಾತ್ಪರ ಪದವಿಗಳಿಗಾಸೆಗೆಯ್ಯುತ್ತಿರ್ಪಳು.
ಈ ಅತ್ಯಾಶೆಯೆಂಬವಳಿಂದ ನಿಮ್ಮಡಿಗಾಣೆನು.
ಈ ಅತ್ಯಾಶೆಯೆಂಬ ಪಾತಕಿಯನೆಂದಿಂಗೆ ನೀಗಿ,
ಎಂದು ನಿಮ್ಮೊಡಗೂಡಿ ಬೇರಾಗದಿಪ್ಪೆನೋ.
ಎನ್ನ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೪೫ ॥

೨೪೬

ಎಪ್ಪತ್ತೆರಡು ಸಾವಿರ ಇಚ್ಛಾನಾಡಿಗಳಲ್ಲಿ ತಪ್ಪದೆ ಚರಿಸುವಾತನ
ಉಪಪ್ರಯೋಗ ಹಂಸನೆಂದೆಂಬೆ. ಆತನ ಪರಿಯದಂತಿರಲಿ.
ದ್ವಾರ ಒಂಬತ್ತರಲ್ಲಿ ನಾಯಕದ್ವಾರವನರಿಯಬೇಕು ಯೋಗಿಗಳು ;
ಬೇರೆ ಜಪ ನಿಮಗೇಕೆ ಹೇಳಿರೆ.
'ಹಂಸ ಹಂಸ' ಎಂಬ ಜಪ ಸಂಪೂರ್ಣವಾಗಿ
ಅತ್ತಲಿತ್ತಲಿತ್ತೆರಕ್ಕೆ ಕಂಪಿಸದಿದ್ದಡೆ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯನು ಕೂರ್ತು
'ತತ್ವಮಸಿ' ಯೆಂಬ ಛತ್ರದಿಂದೊಯ್ವನವ್ವಾ. ॥ ೨೪೬ ॥

೨೪೭

ಎಮ್ಮ ನಲ್ಲ ಮನೆಯೊಳಗೆ ಏಕಾಂತಂಬೊಕ್ಕಹನು,
ಬೇಗ ಬೇಗ ಹೊರವಂಡಿರಣ್ಣಗಳಿರಾ.
ನೀವಿದ್ದಡೆ ಮೃತ್ಯು ಬಪ್ಪುದು ;
ಆತ ಮನೆಯೊಳಗೊಬ್ಬರಿದ್ದಡೂ ಸೈರಿಸ
ಕಪಿಲಸಿದ್ಧಮಲ್ಲಿಕಾರ್ಜುನನೆಂಬ ನಲ್ಲನು. ॥ ೨೪೭ ॥

೨೪೮

ಎಮ್ಮ ನೋವೆ ನೋವು ನಿಮಗೆ,
ಎಮ್ಮ ಸುಖವೆ ಸುಖವು ನಿಮಗೆ,
ಮತ್ತೆ ನಿಮ್ಮ ರೂಪ ತೋರೆಯಯ್ಯಾ.
ನೀನು ಕರಕರಸೂಕ್ಷ್ಮನು.
ಸೂಕ್ಷ್ಮನಲ್ಲಿ ತಿಮಿರ ಹೂಸಿ ಬೆರಸಿ ನೋಡು ನೋಡೆಂಬೆನಯ್ಯಾ.

ನಾ ಕಾಣಿಸಲಿಕಾರೆನಯ್ಯಾ ; ನೀ ಬೆರಸಿ ಬೆರಸಿ ಒಲ್ಲೆನೆ.
ಎನ್ನ ಕಪಿಲಸಿದ್ಧಮಲ್ಲಿನಾಥಾ, ನೀ ಶೂನ್ಯನಯ್ಯಾ. ॥ ೨೪೮ ॥

೨೪೯

ಎಲವೆಲವೊ ನಲ್ಲ,
ನಿನ್ನ ಕೂಡದ ಮುನ್ನ ಕಾಣೆ.
ಕೂಡಿದ ಬಳಿಕ ಮತ್ತೆ ಕಾಣೆನಯ್ಯಾ.
ನಿನ್ನ ಕೂಡಿದ ಸುಖದಿಂದ ಆನೇನೆಂದರಿಯೆನಯ್ಯಾ,
ಎನ್ನ ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೨೪೯ ॥

೨೫೦

ಎಲ್ಲರ ನೆನಹಿನ ಆಯುಷ್ಯದ ಪುಂಜವೆ,
ಅವಧಾರು ಅವಧಾರು ;
ಅಯ್ಯಾ, ಎನ್ನ ನೆನಹಿನ ಮಂಗಳನೆ,
ಅವಧಾರು ಅವಧಾರು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೫೦ ॥

೨೫೧

ಎಲ್ಲರ ಪರಿಯಲ್ಲ ಆವನ ಪರಿ ಹೊಸತು :
ಕಾಲಾರರಲ್ಲಿ ನಡೆವ, ಕಿವಿಯಲ್ಲಿ ಉಂಬ,
ಮೂಗಿನಲ್ಲಿ ನೋಡುವ, ಬಾಯಲ್ಲಿ ಭಾವಿಸುವ,
ಕಣ್ಣಿನಲ್ಲಿ ಮೂರ್ಛೆಹೋಹ.
ಬಂದುದನತಿಗಳೆವ, ಬಾರದುದ ತನ್ನದೆಂಬ ;
ಇಂಥಾ ವಿನೋದವಿಚಿತ್ರನವ್ವಾ, ಕಪಿಲಸಿದ್ಧಮಲ್ಲಿಕಾರ್ಜುನನು. ॥ ೨೫೧ ॥

೨೫೨

ಎಲ್ಲರ ಪರಿಯಲ್ಲ ಎಮ್ಮ ಗಂಡನ ಪರಿ.
ಒಬ್ಬರು ಬಲ್ಲುದ ತಾನರಿಯ, ತಾ ಬಲ್ಲುದನೊಬ್ಬರರಿಯರು.
ತವಕ ಬಂದಲ್ಲಿ ಕೂಡುವ, ಅಲ್ಲವಡೊಲ್ಲದ ಹಾಂಗಿರ್ಪ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯನು. ॥ ೨೫೨ ॥

೨೫೩

ಎಲ್ಲ ವಾಹಿ ಇವಗೆ ನೋಡಾ !
ನೀರೆಣ್ಣೆ ಬೆಣ್ಣೆ ಇವಗೆ ನೋಡಾ !
ಈ ವಾಹಿ ಕಿಚ್ಚು ಇವಗೆ ಸವದನವ್ವಾ !
ಎಂತುಟನು ಸರಿಮಾಡಿ ನುಂಗುವ ಕಪಿಲಸಿದ್ಧಮಲ್ಲಿನಾಥಯ್ಯ ! ॥ ೨೫೩ ॥

೨೫೪

ಎಲ್ಲ ಹೆಂಗೂಸುಗಳು ಬಂದು ಮುಟ್ಟಿ ಮೂವಟ್ಟೆಯು
ನೆರವಳು ನಲ್ಲನ ಇವಳ್ಯೆವರವರೆಲ್ಲರ !
ನಾವೀ ಮೂಗಿನ ನೆರವವ್ವಾ !
ಉಸುರದೆ ಬಂದನ, ಉಸುರದೆ ನೆನವ
ಕಪಿಲಸಿದ್ಧಮಲ್ಲಿನಾಥನ. ॥ ೨೫೪ ॥

೨೫೫

ಎಲ್ಲಿ ನೋಡಲು ತಾಯ ಕೊಂದವರೂಟ ಘನವಾಗಿದೆ.
ಈ ಗುಣ ಹರಿವ ಹಕ್ಕಿಗೆ ಸಂಬಂಧವಿಲ್ಲ.
ನಿಮ್ಮೂಟವಂ ಕಂಡವರೊಳರೆ ಚೆನ್ನಬಸವಣ್ಣನಲ್ಲದೆ.
ಕಪಿಲಸಿದ್ಧಮಲ್ಲಿನಾಥಯ್ಯಾ,
ನಿಮ್ಮ ಧರ್ಮವಿಡಿದ ಚೆನ್ನಬಸವಣ್ಣನಿಂದ ಸುಖವ ಕಂಡೆನು. ॥ ೨೫೫ ॥

೨೫೬

ಎಲೆ ಅಯ್ಯಾ, ಎನಗೆ ಜವ್ವನವೇರಿತ್ತಯ್ಯಾ, ಹರೆಯ ಹತ್ತಿತ್ತಯ್ಯಾ,
ಪ್ರಾಯ ಸಮರೂಪಿಗೆ ಬಂದಿತ್ತಯ್ಯಾ.
ಜವ್ವನಕ್ಕೆ ಜಯುವಂತನಿಲ್ಲ, ಹರೆಯಕ್ಕೆ ಹರುಷಿತನಿಲ್ಲ.
ಪ್ರಾಯಕ್ಕೆ ಪ್ರೌಢಿಗನಿಲ್ಲದೆ ಭ್ರಮೆಬಡುತ್ತಿದ್ದೇನಯ್ಯಾ.
ಜವ್ವನಿಗ ಜಯುವ ಮಾಡಿದಡೆ ಆನು ಬದುಕುವೆನಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೨೫೬ ॥

೨೫೭

ಎಲೆ ಅಯ್ಯಾ, ಎಲೆ ನಲ್ಲ,
ಎನ್ನ ಮಾಯೆ ಮಕ್ಕಳು ದಂಡ ಕೇಳಾ.
ಆಹಾ ! ಅಯ್ಯಾ, ಎನ್ನ ಮನದ ಬೆನ್ನ ಬೆನ್ನ ಬಾರೊ.
ಬಂದು ನಿಂದು ಕೂಡಿಸಯ್ಯಾ.
ಅಯ್ಯಾ, ಎನ್ನ ಮನ ಸಂಗಡ ಮನ ನಿಮ್ಮ ಕಂಡಡಿಮಾಡುವುದು,
ಕಪಿಲಸಿದ್ಧಮಲ್ಲಿನಾಥಯ್ಯನ. ॥ ೨೫೭ ॥

೨೫೮

ಎಲೆ ಅಯ್ಯಾ, ಎಲೆ ನಲ್ಲ,
ನಿನ್ನ ಕೈಯ ಬಿಲ್ಲ ಗುಣವ ಕಂಡೆ ನಾನಯ್ಯ.
ಗುರಿ ಎರಡ ಕೊಂದಂಬನೆಸುವ !
ಅದ ಒಂದೆಡೆಗೆ ಒರ ಪರಿಯ ಹುಟ್ಟ ಹರಿಯಲೆಸುವ !
ವಿರಿಂಚನ ಬಿಡ ! ಅಭಿನ್ನದಲೆಸುವ !
ಎನ್ನ ಕಪಿಲಸಿದ್ಧಮಲ್ಲಿನಾಥಯ್ಯನು. ॥ ೨೫೮ ॥

೨೫೯

ಎಲೆ ಅಯ್ಯಾ, ನಿನ್ನ ಬೆಳಗಿನ ಪರಿಯ ಕೇಳು ಕಂಡಾ.
ನಾನಾರೆಂಬುದ ತಿಳಿದು ನೋಡಿ
ಕಂಡು ಕಂಡು ಬೆಳಗ ಕಾಬ ಪರಿ ಎಂತು ಹೇಳಾ.
ಕಂಡುದ ಕಂಡು ಕಾಯದೊಳಗೆ ಸಂತವಿಡುವ ಪರಿ ಎಂತಯ್ಯಾ ?
ಕಪಿಲಸಿದ್ಧಮಲ್ಲಿನಾಥಯ್ಯಾ,
ನೀನೆನ್ನ ಮನವ ತಿಳಿವಡೆ ಅಸಾಧ್ಯವುಂಟೆ ದೇವರ ದೇವಾ ? ॥ ೨೫೯ ॥

೨೬೦

ಎಲೆ ಅಯ್ಯಾ, ನಿಮ್ಮ ಬರವಿಂಗೆ ಕಣ್ಬೇಟಗೊಂಡೆನು.
ಎಲೆ ಅಯ್ಯಾ, ನಿಮ್ಮ ಬರವಿಂಗೆ ಎನ್ನ ಮನವೆಂಬ
ಮಂಚವ ಪಚ್ಚಡಿಸಿದೆ.
ಎಲೆ ಅಯ್ಯಾ, ನಿಮ್ಮ ಬರವಿಂಗೆ ಚಿತ್ತ ಸುಯಿಧಾನಿಯಾಗಿದ್ದೇನೆ.
ಎಲೆ ಅಯ್ಯಾ, ನಿಮ್ಮ ಬರವಿಂಗೆ ಜ್ಞಾನದ

ಸೆರಗ ಹಾಸಿ ಆಸೆಬಡುತ್ತಿದ್ದೇನೆ.
ಎಲೆ ಅಯ್ಯಾ, ನೀ ಬಂದು ವಿರತವಿಲ್ಲದೆ ಕೂಡಿ ನಿನ್ನವಳೆಂದೆನಿಸಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. || ೨೬೦ ||

೨೬೧

ಎಲೆ ಅಯ್ಯಾ, ಪುರದ ಮೇಲುಪ್ಪರಿಗೆಯು
ಕೆಲಸವನೇನೆಂಬೆನಯ್ಯಾ !
ಮುತ್ತಿನ ಕಳಸದ ಮೇಲೆ ಒಂದು ಅರಳಿದ ಪುಷ್ಪ.
ಆ ಪುಷ್ಪದ ಪರಿವೀಥಿಯೊಳಗೆ ಅಗ್ನಿಯ ಕಂಡೆನಾಗಿ,
ಕಪಿಲಸಿದ್ಧಮಲ್ಲಿನಾಥಾ ನಿಮ್ಮ ಶರಣ
ಚೆನ್ನಬಸವಣ್ಣ ತೋರಿದ ಹಾದಿ ಸುಪಥವಾಯಿತ್ತು.
ನಾನು ಚೆನ್ನಬಸವಣ್ಣಂಗೆ ನಮೋನಮೋ ಎನುತಿರ್ದೆನು. || ೨೬೧ ||

೨೬೨

ಎಲೆ ಬಸವಾ, ಎಲೆ ಚೆನ್ನಬಸವಾ,
ಸಟೆ ಏಕೋನಿಷ್ಠೆಯಾಯಿತ್ತಯ್ಯಾ,
ದಿಟ ಪುಟ ಮುಕ್ತಿಯಾಯಿತ್ತಯ್ಯಾ,
'ಮೃತಿಕಾಲನಾಶಂ' ನಮೋ ಕಪಿಲಸಿದ್ಧಮಲ್ಲಿನಾಥಯ್ಯಾ,
ಬಸವಣ್ಣನಿಂದ ಪ್ರಾಣಲಿಂಗಸಂಬಂಧವಡಗಿತ್ತು. || ೨೬೨ ||

೨೬೩

ಎಲೆ ಭವಗೇಡಿ ನಿನ್ನುಪಸು ತೋರದೆ ಕಾಡಿದೆ ಹಿಂದೆ
ಅಯ್ಯಾ, ತನುಗುಣ ಸಾಹಿತ್ಯ ನೀನೆ.
ನೀನೆನ್ನ ಮನದ ಮಹೋತ್ಸವನೆ ಅಯ್ಯಯ್ಯಾ,
ಅವ್ವೆಯು ಅಯ್ಯನಾಗಿರ್ದೆಂದಿಪ್ಪೆ
ಕಪಿಲಸಿದ್ಧಮಲ್ಲಿಕಾರ್ಜುನಾ. || ೨೬೩ ||

೨೬೪

ಎಲೆ ಭ್ರಾಂತುಗೊಂಡ ಮರುಳೆ, ನೀ ಕೇಳಾ, ಹಾ ! ಹಾ !
ಅಯ್ಯಾ, ಈಶ್ವರ ತಾ ಮುನ್ನ ಹರಸಿ ಕಟ್ಟಿದ ನೊಸಲಪಟ್ಟವ
ಬೇರೆ ಮತ್ತೊಬ್ಬರು ಹೆಚ್ಚಿಸಿ ಕುಂದಿಸಿ ಕಟ್ಟಬಲ್ಲರೆ ?

ಅಯ್ಯಾ, ಎನ್ನ ಕಪಿಲಸಿದ್ಧಮಲ್ಲಿನಾಥಯ್ಯಾ,
ತಾ ಮುನ್ನ ಹರಸಿ ಕಟ್ಟಿದಂತಹುದಯ್ಯಾ. ॥ ೨೬೪ ॥

೨೬೫

ಎಲೆಯುವ್ವ, ಆತನ ಬಾಯಲ್ಲಿ ಬೆಳವುತ್ತಲಿದ್ದೆ ನಾ,
ಎಲೆಯುವ್ವ, ಆತನ ಸರದೊಳಗೆ ಕೂಡಿ ಸರಹುತ್ತಿದ್ದೆ ನಾ,
ಎಲೆಯುವ್ವ, ಎಲೆಯುವ್ವ, ಆತನ ಗಳದೊಳಗೆ ಕೂಡಿ ಗಳಹುತ್ತಿದ್ದೆ ನಾ,
ಎಲೆಯುವ್ವ, ಎಲೆಯುವ್ವ, ಆತನ ಅಪ್ಪುದಪ್ಪಿನೊಳಗೆ ಹುಟ್ಟಿ
ದಪ್ಪಗೊಂಡು ಬೆಳವುತ್ತಿದ್ದೆ ನಾ,
ಕಪ್ಪ ಕಪ್ಪಗಳನೆ ನುಂಗಿ ತನ್ನ ಕಪ್ಪ ಮೆರೆವನವ್ವಾ
ಎನ್ನ ಕಪಿಲಸಿದ್ಧಮಲ್ಲಿನಾಥ, ದೇವರ ದೇವ. ॥ ೨೬೫ ॥

೨೬೬

ಎಲೆಯುವ್ವ, ಎಲೆ ಎಲೆಯುವ್ವ,
ಹುಟ್ಟಿದ ಮಕ್ಕಳು ತಂದೆಗೆ ಬೇಟಗೊಂಬರೆ ? ಅಯ್ಯಾ.
ಎಲೆಯುವ್ವ, ಎಲೆ ಎಲೆಯುವ್ವ
ಹಡೆದ ಮಕ್ಕಳ ಕೈವಿಡಿವರೆ ? ಎಲೆಯುವ್ವ.
ಪಾಪವಿನಾಶಿ ನೀನಾಗಿ ನಿನಗೆ ಮೂಗಿಸಲ್ಕೈವ ದೆಸೆ ಕಾಣ !
ಎನ್ನ ಕಪಿಲಸಿದ್ಧಮಲ್ಲಿನಾಥಯ್ಯ. ॥ ೨೬೬ ॥

೨೬೭

ಎಲೆ ಶಿವನೆ ಫಲಪದಾದಿಗಳ ಕೊಟ್ಟೆನೆಂಬೆ ಶರಣರಿಗೆ.
ಕೊಟ್ಟೆನೆಂಬೆ, ಅವನವರೊಲ್ಲರು.
ಅವರು ನಿನಗೆ, ನಿನ್ನ ರೂಪಿಂಗೆ
ತನು ಮನ ಧನಾಧಿಗಳ ಕೊಡುವರು.
ಎಲೆ ವಂಚಕನಾದ ಶಿವನೆ, ನಿರ್ವಂಚಕರೆನ್ನವರು.
ನಿನ್ನನೆ ಬೇಡುವರು, ನೀನೆನ್ನವರಿಗೇನ ಕೊಡುವೆ ?
ನಿನ್ನ ಕೊಡನೆಮ್ಮವರೊಲ್ಲರು ಕಾಣಾ, ಕೊಡದೆ ಹೋಗು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೬೭ ॥

೨೬೮

ಎಸಳ ಕುಸುಮ ನಿವಾರಿಸಲು ಅಯ್ಯಾ,
ನಾನು ನಿನ್ನ ದೆಸೆಗೆ ಕಂಬೇಟಗೊಂಡೆನಯ್ಯಾ.
ಪಶುಪಾಶಮೋಚನ ಅಯ್ಯಾ,
ನಿನ್ನ ದೆಸೆ ಇದ್ದೆಸೆಯಾಗಯ್ಯಾ.
ಶಶಿಧರಾ, ನಿಮ್ಮ ವಶಕ್ಕೆನ್ನ ತೆಗೆದುಕೊಳ್ಳಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೬೮ ॥

೨೬೯

ಎಸಳ ಮಂಟಪದಲ್ಲಿ ಕುಸುಮನಾಳದ ಭೇಧ
ಶಶಿಧರನ ಮಸ್ತಕದ ಧವಳಗಿರಿಯು
ಒಸರುವ ಆನಂದ ವಿಪರೀತ ಭಾಷ್ಪವಿನ-
ಲೆಸೆದಿದಿರ್ದುದ್ದೈದೆ ಸದ್ಭಕ್ತಿಕ್ರೀಯುು.
ಶಶಿಧರ ಕಪಿಲಸಿದ್ಧಮಲ್ಲಿಕಾರ್ಜುನಯ್ಯನ
ವಶದೊಳಿರ್ಪಂಗಲ್ಲದೆ ಕಾಣಲರಿದು. ॥ ೨೬೯ ॥

೨೭೦

ಎಸಳೆಸಳ ಸೋಹೆಯಲ್ಲಿದ್ದು ಅಟ್ಟಿ ಕರೆದಡೆ ಬಂದ
ನಾ ಅವನ ಬೆನ್ನ ಬೆನ್ನ ಹೊಗಲಿ ಹೊಗಲಿಯುವ್ವಾ.
ಆ ಸುಳಿಗೊಂಡ ಸುಕ್ಷೋಣಿದ್ವಾರದೊಳಗೆ
ಲಕ್ಕದ ಮೇಲೆ ತೊಂಬತ್ತು [ಆರು] ಸಾಸಿರ ಲಿಂಗವವ್ವಾ.
ಅವನ ಬೆನ್ನ ಬೆಳಗಿನ ಆದಿಲಿಂಗ ನಾಳಪಟ್ಟಣ,
ರೂಪನಾಶನಾದ ಕಪಿಲಸಿದ್ಧಮಲ್ಲಿನಾಥನ. ॥ ೨೭೦ ॥

೨೭೧

ಎಸುಗೆ ಕಂಗಳಲ್ಲಿಕ್ಕು ಕುಸುಮದಂಬಿನ ಘಾಯ
ದೆಸೆಗೆಟ್ಟು ಹೋಹರ್ಕೈ ಮೂಜಗದವರು.
ಮದೀಶ ನಿಮ್ಮ ದೆಸೆಗವನು ಪೊದ್ದನ್ನೈ
ಸಲಹು ಎನ್ನ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೭೧ ॥

೨೭೨

ಎಸೆವಡೆದ ಮೃಗದಂತೆ ಎನ್ನ ಮನ ಶಂಭುವೆ
ಕಲ್ಲೆನ್ನದು ಮುಳ್ಳೆನ್ನದು.
ಭಕ್ತಿಯೆಂಬ ಸಂಕಲೆಯನಿಕ್ಕೆನ್ನ ಮನಕ್ಕೆ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೭೨ ॥

೨೭೩

ಏಕೆನ್ನ ಸಿರಿಗಳು ಕೆರೆಗಳು ಮರಗಳು ಫಲಗಳು
ಬೀಯದ ಮುನ್ನ ಒಯ್ಯನೆ ಮಾಡಿ ಭೋ,
ಹಾಲುಳ್ಳಲ್ಲಿ ಹಬ್ಬವನು.
ಎನ್ನ ಭಕ್ತಿ-ಯುಕ್ತಿ ಸವೆಯದ ಮುನ್ನ
ಲಿಂಗವೆ ಜಂಗಮವೆಂದು ಮಾಡಿ ಭೋ.
ಸ್ವಾತಂತ್ರ್ಯ ತನ್ನನೀವ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೭೩ ॥

೨೭೪

ಏನಯ್ಯಾ, ಏನಯ್ಯಾ ! ಮಕ್ಕಳಿಗೆ ಜನಕರು ಕಾಡುವರೊ ?
ನಾನು ಗುರುಸ್ಥಲಕ್ಕೆ ಯೋಗ್ಯನಲ್ಲ, ಲಿಂಗಸ್ಥಲಕ್ಕೆ ಯೋಗ್ಯನಲ್ಲ,
ಜಂಗಮಸ್ಥಲಕ್ಕೆ ಯೋಗ್ಯನಲ್ಲ,
ನಾ ನಿಮ್ಮ ರಾಜಾಂಗಣದ ಕೂಲಿಕಾರ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೭೪ ॥

೨೭೫

ಏನೆಂದೆನಲಿಲ್ಲದ ಅಖಂಡ ಪರಿಪೂರ್ಣ ಪರಮಾನಂದ ಪರಬ್ರಹ್ಮವು
ತಾನೆಂಬ ಅರಿವಿನ ಬಲವ ಅಹಂಕಾರವಿಲ್ಲವಾಗಿ, ಅದ್ವೈತಿಯಲ್ಲ ;
ಉಭಯವಿಟ್ಟರಸುವ ಗಜಬಜೆಯಲ್ಲಿ ಸಿಲುಕನಾಗಿ, ದ್ವೈತಿಯಲ್ಲ.
ಇಂತೀ ದ್ವೈತಾದ್ವೈತವೆಂಬ ಉಭಯನಾಮ
ನಷ್ಟವಾದ ಅಭೇದ್ಯಮಹಿಮನ
ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಶರಣರೆ ಬಲ್ಲರು. ॥ ೨೭೫ ॥

೨೭೬

ಏನೆಂದೆನಿಸದ ವಸ್ತು, ಅಪ್ರಮಾಣಮೂರ್ತಿ
ಬಸವ ಎಂಬ ಪದಕ್ಕೆ ನಿಂದಿತ್ತಯ್ಯಾ ನಿಮ್ಮ ಪ್ರಸಾದ.
ಆವುಬಾರದ ಬಸವನೆಂಬ ವಸ್ತುವಸರುಹಿತ್ತಯ್ಯಾ ನಿಮ್ಮ ಪ್ರಸಾದ.
ಬಸವನೆಂಬ ನಿಜವ ನಿಮ್ಮಲ್ಲಿ ನಿಲಿಸಿತ್ತಯ್ಯಾ ನಿಮ್ಮ ಪ್ರಸಾದ.
ಕಪಿಲಸಿದ್ಧಮಲ್ಲಿನಾಥಯ್ಯಾ,
ನಿಮ್ಮ ಅರ್ಪಿತ ಅನರ್ಪಿತವಾಯಿತ್ತಯ್ಯಾ,
ನಿಮ್ಮ ಬಸವವಿಡಿದು. ॥ ೨೭೬ ॥

೨೭೭

ಏನೋ ಏನೋ ಗಂಡಾ,
ನಿಮ್ಮ ತಂದೆ ಬಂದೈದಾನೆ ;
ನಾನೇನುವನರಿಯೆನ್ನೈ.
ನೀನೆ ನಿಮ್ಮ ತಂದೆಯ ಸಂತೈಸಿ,
ಎನಗವರ ಕರುಣವ ಪಾಲಿಸಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೨೭೭ ॥

೨೭೮

ಏರಿಯನೇರಿ ಬರುವಲ್ಲಿ
ಮೂವತ್ತಾರು ಮಂಟಪದ ಮಣೆಯ ತುಂಬಿ
ಕೇರಿ ಕೇರಿಯ ತುದಿಯ ತಿರುಗಲು,
ಸುಂಕಿಗರಿನ್ನೂರ ಹದಿನಾರು ಮಂದಿ
ಮೂವತ್ತಾರು ಮಂಟಪದಲ್ಲಡಗಿದರಯ್ಯಾ.
ಏರಿ ಬರುವ ಪುರುಷ ಮೂವರು ತಳವಾರರ ಕೂಡಿಕೊಂಡು,
ಮೂವತ್ತಾರು ಮಂಟಪದಲ್ಲಿ ಅಡಗಿದ
ಇನ್ನೂರ ಹದಿನಾರು ಸುಂಕಿಗರನರಸಲು,
ಮೂವರು ತಳವಾರರು ತನ್ನ ನುಂಗಿದರಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೨೭೮ ॥

೨೭೯

ಐಕ್ಯನೆಂಬಾತ ಅನ್ಯವನರಿಯ, ತನ್ನುವನರಿಯ ;
ಸಕಲವನರಿಯ ನಿಷ್ಕಲವನರಿಯ.
ಸರ್ವಸ್ವವೂ ಲಿಂಗವಾದಾತನಾಗಿ
ತನ್ನ ಮೀರಿದ ಪರತತ್ವ ಒಂದೂ ಇಲ್ಲವಾಗಿ,
ಎಲ್ಲಾ ತತ್ವಂಗಳಿಗೂ ಮಾತೃಸ್ಥಾನವಾದಾತನು.
ಲಿಂಗವನವಗ್ರಹಿಸಿಕೊಂಡಿಪ್ಪ ಪರಮ ಸೀಮೆ ತಾನಾಗಿ,
ಕಪಿಲಸಿದ್ಧಮಲ್ಲಿಕಾರ್ಜುನನ ಕೂಡಿ
ಕಳೆಗಳ ಲಿಂಗಕಳೆಗಳ ಮಾಡಿದ ಲಿಂಗೈಕ್ಯನು. ॥ ೨೭೯ ॥

೨೮೦

ಐದೆ ಬಿನ್ನಾಣಿಕೆ ಬಿನ್ನಾಣಿಯ ಬಸುರಲ್ಲಿ ಹುಟ್ಟಿದವಳು.
ಬಾಯಲ್ಲಿ ಬಳೆದೊಟ್ಟವಳು ; ಬಾಯಲ್ಲಿ ತಲೆಯಾದವಳು ;
ತಲೆಯೊಳಗೆ ಮೊಲೆಯಾದವಳು ; ಮೊಲೆಯೊಳಗೆ ನಾಭಿಯಾದವಳು ;
ನಾಭಿಯೊಳಗೆ ಬಸುರಾದವಳು ; ಬಸುರೊಳಗೆ ಬೆನ್ನಾದವಳು ;
ಬೆನ್ನೊಳಗೆ ಕಾಲಾದವಳು ;
ಗಂಡಂಗೆ ಕೈಯೆಂದು ಬಾಯಲ್ಲಿ ಹಿಡಿದು ಹರಿದವಳು
ಕಪಿಲಸಿದ್ಧಮಲ್ಲಿನಾಥನ ಬಾಯಲ್ಲಿ ಭೋಗಿಯಾದವಳು.
ಇಂತಪ್ಪ ವಿದ್ಯದ ಬೇಟದ ಮಾತಿನ ಕೊಂಬ ಹೇಳಿದಡೆ, ಅಲ್ಲಿಗೆ ಬಂದಡೆ
ತಾ ಕಂಡಯ್ಯಾ, ಐದೆ ಬಿನ್ನಾಣಿಕೆ ! ॥ ೨೮೦ ॥

೨೮೧

ಐವರ ಸಂಗಡ ಉದಯದಲ್ಲಿ ಹೊರವಂಟಿರಾದಡೆ, ಕೇಳಿರಣ್ಣಾ,
ಮಧ್ಯಾಹ್ನಕ್ಕೆ ಬಂದಿರಾದಡೆ,
ಕಳೆಯುಳಿದು ಕಳೆಯ ತಪ್ಪದೆ ನಿಂದಿರಾದಡೆ,
ಬಟ್ಟೆ ಸರಿಸ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿಗೆ ಹೋಯಿತ್ತು. ॥ ೨೮೧ ॥

೨೮೨

ಒಂದರಲ್ಲಿ ಓಂಕಾರ ಭವಿಸಿತ್ತು.
ಎರಡರಲ್ಲಿ ವ್ಯಾಪ್ತಿ ಭವಿಸಿತ್ತು.

ಮೂರರಲ್ಲಿ ಮುಕ್ತ್ಯಂಗನೆಯ ಸಂಗ ಸಮನಿಸಿತ್ತು.
ನಾಲ್ಕರಲ್ಲಿ ಆ ಎಂಬ ಅಕ್ಷರದಂತುವನರಿದೆ.
ಅಯ್ದರಲ್ಲಿ ಆ ಈ ಬ್ರಹ್ಮತಾತ್ಪರ್ಯಶುದ್ಧವ ನಿರೀಕ್ಷಿಸಿದೆ.
ಆರರಲ್ಲಿ ಅವ್ಯಯ ಅನಿಮಿಷಸ್ಥಾನವ ಕಂಡೆ.
ಮೀರಿದೆ ಮೂವತ್ತಾರ,
ಕಪಿಲಸಿದ್ಧಮಲ್ಲಿಕಾರ್ಜುನನೆಂಬ 'ತತ್ವಮಸಿ'
ಸಂಗಮದಲ್ಲಿ ಸಂಯೋಗಿಯಾದೆ. ॥ ೨೮೨ ॥

೨೮೩

ಒಂದು ಕೋಳಿ ಕೂಗುತ್ತದೆ ಇರುಳು ಹಗಲೆನ್ನದೆ ;
ಅದನರಿಯರಲ್ಲಾ ಮರ್ತ್ಯದ ಗಣಂಗಳು !
ಅರಿದಡೆ ಭವಬಂಧವಿಲ್ಲ, ಮರೆದಡೆ ಜನನ ಮರಣಕ್ಕಳವಿಲ್ಲ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೮೩ ॥

೨೮೪

ಒಂದು ಮೂಲಸ್ತಂಭವಿಡಿದ ದೇವಾಲಯದಲ್ಲಿ
ಚಂದಚಂದದ ಬಾಗಿಲು ಮೂವತ್ತಾರು.
ಒಂದೊಂದು ಎಂಟೆಂಟೆಂಬ ಘನಕ್ಕೆ ಘನ ಸಂತಸ ಸುಖವಾಯಿತ್ತಯ್ಯಾ.
ಇಂದ್ರಿಯಾರ್ಪಣ ಸುಖಗೋಷ್ಠಿ ಸಾಧ್ಯವಾಯಿತ್ತಯ್ಯಾ,
ನಿಮ್ಮ ದಯದಿಂದ, ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೨೮೪ ॥

೨೮೫

ಒಂದೂ ಅಲ್ಲದ ನೆಲನ ಸುರಿವುದ ಒಲೆಯ ಸುರಿವುದ ಕೇಳಿರಣ್ಣಾ.
ಒರಟಂಗೆ ಶಿಕ್ಷೆ ದೀಕ್ಷೆಯ ಮಾಡುವುದ ಸುಡುವುದಯ್ಯಾ.
ಒಂದೂ ಅಲ್ಲದವಂಗೆ ಕೊಟ್ಟ ದೀಕ್ಷೆಯ
ಸುಟ್ಟ ಫಲವೆಂದ ಕಪಿಲಸಿದ್ಧಮಲ್ಲಿನಾಥದೇವರ ದೇವ. ॥ ೨೮೫ ॥

೨೮೬

ಒಲಿವೆ ನಿನ್ನವರ ನೀನೆಂದಡೆ.
ಒಲಿವೆ ನಿನ್ನವರ ಮೂರ್ತಿಧ್ಯಾನದಲ್ಲಿ ಮೂರ್ಛೆವೋದರೆ,

ಒಲಿವೆ ವಿಭೂತಿ ರುದ್ರಾಕ್ಷಿ ಲಾಂಛನಧಾರಿಯ.
ಮಾನಸ ವಾಚಕ ಕಾಯಕದಲ್ಲಿ ನೀನೆಂದಡೆ ಒಲಿವೆ.
ಅಲ್ಲದಿದ್ದಡೆ ವೈತಾಳಿಕರ ಸಂಯೋಗದ ಹಾಂಗೆ
ವೈಶಿಕವ ಬಳಸಿದಡೆ ಏಕೊಲಿವೆಯಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೮೬ ॥

೨೮೭

ಒಂದೊಂದು ಪರಿಯ ಪ್ರಕೃತಿಯ ಬೊಂಬೆಗಳಾಡಲಿಕೆ
ಕಂಡೂ ಕಾಣದಂತೆ ಸೀಯ್ಯರವರು.
ಗಂಡುಗಲಿ ಕಾಮನನು ಭಂಡುಮಾಡಿಯೆ ತಗುಳ್ದ
ಗಂಡುಗಲಿ ಶರಣರಾಳಯ್ಯಾ ನಾನು.
ಕಾಮಹರ ನಿಸ್ಸೀಮ ಕಪಿಲಸಿದ್ಧಮಲ್ಲೇಶಾ,
ಶರಣು ಶರಣೆಂಬೆನಯ್ಯಾ, ನಿಮ್ಮವರ ಶ್ರೀಚರಣಕ್ಕೆ. ॥ ೨೮೭ ॥

೨೮೮

ಒಂದೊಂದು ವೇಷ ದುರ್ವೇಷದಲ್ಲಿ ಬಂದುದ
ಮಾಡಿತ ಮೇಲೆ ಕಂಡ ! ಓ ಓ ! ಅಯ್ಯಾ.
ಪೂರ್ವಾಚಾರಿಯ ಮರೆಯದಿರಾ, ಹಾ ! ಹಾ ! ಅಯ್ಯಾ.
ಅಲ್ಲಿ ಭಕುತಿ ವಿಕೃತಿಗಳ ಮಾಡುವರೆ ?
ಕಪಿಲಸಿದ್ಧಮಲ್ಲೇಶ್ವರನನು ಕಂಡಾ ! ॥ ೨೮೮ ॥

೨೮೯

ಒಡಗೂಡಿದ ಒಚ್ಚತನವ ಬಿಡುಮನರು ಬಲ್ಲರೆ,
ಮೃಡ, ನಿಮ್ಮ ಶರಣರಲ್ಲದೆ ?
ಕಡಲೊಳಗಣ ಮುತ್ತಿಪ್ಪ ಕಡು ಪೂತದ ಭೇದವನು
ಜಡಜೀವಿಗಳು ಬಲ್ಲರೆ, ಮೃಡ ನಿಮ್ಮ ಶರಣರಲ್ಲದೆ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೮೯ ॥

೨೯೦

ಒಬ್ಬರ ಮನವ ನೋಯಿಸಿ,
ಒಬ್ಬರ ಮನವ ಘಾತವ ಮಾಡಿ,
ಗಂಗೆಯು ಮುಳುಗಿದಡೇನಾಗುವುದಯ್ಯಾ ?
ಚಂದ್ರನು ಗಂಗೆಯು ತಡಿಯಲ್ಲಿದ್ದಡೇನು ? ಕಲಂಕ ಬಿಡದಾಯಿತ್ತಯ್ಯಾ.
ಅದು ಕಾರಣ, ಮನವ ನೋಯಿಸಿದವನೆ, ಒಬ್ಬರ ಘಾತವ ಮಾಡಿದವನೆ,
ಪರಮಪಾಪವನ ನೋಡಾ, ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೨೯೦ ॥

೨೯೧

ಒಬ್ಬರಸು ಮೋಹಿತನಾಗಿ, ಅಂದೇ ಲಗ್ನವಾಗಿ,
ಅಂದೇ ರತಿಯಾಗಿ ಅಂದೇ ಪತಿ ಮೃತಿಯಾದ
ದರಿದ್ರ ನಾರಿಯ ತೆರನಾಯಿತ್ತೆನ್ನ ಮನ.
ಒಬ್ಬರಸು ಭೂಪ್ರದಕ್ಷಿಣೆ ಮಾಡಿ,
ಭೂದೇವಿಯ ಮಗನ [ಜನನ] ವಾರ್ತೆಯನಂದೇ ಕೇಳಿ,
ಅಂದೇ ಮಗನ ಮೃತಿಯಾದರಸನ ಮನವಾದ ತೆರನಾಯಿತ್ತೆನ್ನ ಮನ.
ತನ್ನ ಕೊಟ್ಟು ತಾ ಹೋದಡೆ ಗುರುಸ್ಥಲ ಹೋಯಿತ್ತು,
ಲಿಂಗಸ್ಥಲ ಹೋಯಿತ್ತು, ಜಂಗಮಸ್ಥಲ ಮೊದಲೆ ಹೋಯಿತ್ತು. –
ಇನ್ನಾರ ಪಾದವಿಡಿವೆ ? ಕಪಿಲಸಿದ್ಧಮಲ್ಲಿಕಾರ್ಜುನನ
ಚೆನ್ನಬಸವ ಮಹಾಪ್ರಭುವೆ. ॥ ೨೯೧ ॥

೨೯೨

ಒಬ್ಬ ಸಿದ್ಧಸಾಧಕ ಚಿಗರಿಯ ಸಾಕುತಲಿದ್ದಾನೆ ;
ಮತ್ತೊಬ್ಬ ಸಿದ್ಧಸಾಧಕ ಚಿಗರಿಯ ಮರಿಯ ಸಾಕುತಲಿದ್ದಾನೆ.
ಆ ಸಿದ್ಧಸಾಧಕನ ನುಂಗಲು ಬರುತ್ತವೆ ಚತುರ್ದಶವ್ಯಾಘ್ರಂಗಳು.
ನುಂಗಲು ಬಂದ ವ್ಯಾಘ್ರಂಗಳ ಚಿಗರಿಯು, ಚಿಗರಿಯ ಮರಿಯು
ಹೊಡೆದುದ ಕಂಡು ನಾನಂಜಿ ಸಾಗರವ ಹೊಕ್ಕೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೯೨ ॥

೨೯೩

ಒಮ್ಮನವರಿತು ನಿಮ್ಮವರು ಸುಲಭವೆ ಅಯ್ಯಾ ?
ಲೋಕದಲ್ಲಿ ಲಿಂಗಭಕ್ತಿ ಜಂಗಮಭಕ್ತಿ ಗುರುಭಕ್ತಿ ಸುಲಭವೆ ಅಯ್ಯಾ ?

ಲಿಂಗಭಕ್ತ ಪ್ರಭುದೇವರು, ಜಂಗಮಭಕ್ತ ಬಸವಣ್ಣ,
ಗುರು ಮೊದಲಾದ ಪ್ರಸಾದ ಸರ್ವಕ್ಕೆ ಅನುಭಾವಿ ಚೆನ್ನಬಸವಣ್ಣ !
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿಮ್ಮವರ ಶ್ರೀಪಾದಕ್ಕೆ ನಮೋನಮಃ ಎನುತಿರ್ದೆನು ! ॥ ೨೯೩ ॥

೨೯೪

ಒಳಗಣವರ್ಯವರ ಎನ್ನ ಕಣ್ಣಿಂಗೆ ತಳವೆಳಗು ಮಾಡಯ್ಯಾ.
ಬೆಳವಿಗೆಯ ಬೀಜವ ಬಿತ್ತಿ,
ಆ ಫಲದ ರುಚಿಯನುಂಡುಕೊಳ್ಳಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೨೯೪ ॥

೨೯೫

ಒಳಗೆಯೆಂದಡೆ ಹೊರಗೆ ಹತ್ತುವೆ.
ಹೊರಗೆಯೆಂದಡೆ ಒಳಗೆ ಹತ್ತುವೆ.
ಅಯ್ಯಾ, ಹಾ ! ಅಯ್ಯಾ, ; ಹಿಡಿಹಿಡಿಯೊಳಗೊಂಬತ್ತೆಡೆಯ
ತಿರುಗಿ ಹೋದೆಯಯ್ಯಾ.
ಹಾ ! ಅಯ್ಯಾ, ಕಣ್ಣೀರ ಕಣ್ಣೊಳಗಡಗುವೆ
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೨೯೫ ॥

೨೯೬

ಓರಂತೆ ಮಾಡಯ್ಯಾ ನಿನ್ನವರೊಳಗೆ
ಮನ್ನಣೆಯಿಂದ ಮೆಚ್ಚಿಸಯ್ಯಾ
ನಿನ್ನವರ ಪಾದೋದಕವ ನಚ್ಚಿಸಯ್ಯಾ,
ನಿನ್ನವರ ಪ್ರಸಾದವ ನಚ್ಚಿಸಿ ಮೆಚ್ಚಿಸಿ
ಮನಕ್ಕೆ ನೀನೇ ಮಂಗಳವಾಗಿ
ಅಚ್ಚಿಗಬಡಿಸದಂತಿರಿಸಾ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೯೬ ॥

೨೯೭

ಕಂಗಳಂಗಳದಲಿಹ ಮಂಗಳಾಂಗನ ಬೆಳಗು
ಹಿಂಗದಂತಾದುದೈ ಸಕಲದೊಳಗೆ

ಮಂಗಳಮಯನೆ ಕಪಿಲಸಿದ್ಧಮಲ್ಲೇಶ್ವರಾ,
ಲಿಂಗ ನಿಮ್ಮಿಂದರಿದು ಧನ್ಯನಾದೆ. ॥ ೨೯೭ ॥

೨೯೮

ಕಂಗಳ ಬೇಟೆಯನಾಡುವ ಕಾಮನ ಸಂಗಕ್ಕೆನ್ನ ಸಲಿಸದೆ,
ಮಂಗಳಮಯವಪ್ಪ ಉರುತರ ಭಕ್ತಿಯ ಸಂಗಕ್ಕೆನ್ನ ಸಲಿಸಯ್ಯಾ,
ಅನಂಗವಿದಾರಣ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೯೮ ॥

೨೯೯

ಕಂಜಕರ್ಣಿಕೆ ನಿನ್ನ ಅಂಜನದ ನೇತ್ರವನು
ಕುಂಜರನ ಮಸ್ತಕದ ಸುಧೆಯ ಕೂಪ
ಭುಂಜಿಸುವ ಮಧುಕರನ ಕಂಜನಾಳದ ಸುದ್ದಿ
ಅಜಲೋಕದಾರೈದ ಸುದ್ದಿಯನು
ಓರಂತೆ ಅರಿದಾತ ತಾನು ನೀನಪ್ಪನೈ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೯೯ ॥

೩೦೦

ಕಂಜದೊಳಗಣ ಹಳದಿ ರಂಜಿಸುವ ಭೇದಕ್ಕೆ
ಅಂಜುತ್ತೈದಾರೆ ಸಕಲ ಯೋಗಿಗಳೆಲ್ಲ ಧಾತುಗೆಟ್ಟು
ಹಳದಿರಿಂತಿ ಧಾತುವ ನುಂಗಿದಾತ ಶಿವಯೋಗಿ.
ಈ ಯೋಗಿಯನಿತೀ ನಿಜ ಥಿಪ್ಪತಿಯ
ಓತೊಮ್ಮೆ ಅರಿದಡೆ, ಆತನೆ ಶಿವಯೋಗಿ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೦೦ ॥

೩೦೧

ಕಂಠಪ್ರಮಾಣ ಜಲವ ಹೊಕ್ಕು
ಪದುಮಾಸನವ ಕೊಂಡು ಇದ್ದೆನವ್ವಾ.
ಮುಖ ಮುಗಿದು ಆತನ ಧ್ಯಾನಿಸುತ್ತಿರ್ದೆನವ್ವಾ.

ಆತ ಬಂದು ಮುಟ್ಟಲೊಡನೆ, ಮುಖವರಳ್ದು ಹಿಡಿವೆನು,
ಕಪಿಲಸಿದ್ಧಮಲ್ಲಿಕಾರ್ಜುನನ. ॥ ೩೦೧ ॥

೩೦೨

ಕಂಡಲ್ಲಿ ಕರೆಯೆ ಮಾಯು, ನಿಂದಲ್ಲಿ ನಿರಾಮಯ.
ಇವಗೆ ಕೂತು ವಿಕಳಾವಸ್ಥೆಗೊಂಡೆನವ್ವಾ.
ಮತ್ತೆ ಮುಂದೆ ನಿಂದವರ ಸಾರೆಂಬೆನು, ಹಿಂದುಗಳೆವೆನು.
ಮುಂದಕ್ಕೆ ಸಾರಿದವರ ನೋಡುತ್ತಿದ್ದೆನವ್ವಾ.
ಕಂಡವರ ಸಾರೆಂಬೆ ; ನಿಂದ ಬಯಲ ನೆರೆವೆ.
ಎನ್ನ ಕಪಿಲಸಿದ್ಧಮಲ್ಲಿನಾಥಯ್ಯನವ್ವಾ. ॥ ೩೦೨ ॥

೩೦೩

ಕಂಡು ಕಂಟಣಿಸಿ ಓಸರಿಸದಿಪ್ಪಳು ನೋಡಾ,
ಆಕೆಯಂತಿರಬೇಡವೆ ಹಿರಿಯರು ?
ಆ ಮನ ವಿಚ್ಛಂದವಾಗದೊಂದೆಯಂದದಲಿಪ್ಪ
ನಿಮ್ಮದೊಂದು ಸಮತಾಗುಣ
ಎನ್ನನೆಂದು ಬಂದು ಪೊದ್ದಿಪ್ಪುದು ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೦೩ ॥

೩೦೪

ಕಂಡೆನಯ್ಯಾ, ನೀನೊಡ್ಡಿದೊಡ್ಡಣೆಯ,
ಕಿರಿಕಿರಿದಾಗಿ ತರಿದಡೆ ಹಿರಿಹಿರಿದಾಗಿ ನೆನೆವೆನು ;
ಕಾಯುವ ಬೇಡಿದಡೀವೆನು.
ಪ್ರಾಣ ನಿಮ್ಮದಾಗಿ, ಉಳಿದ ಹಂಗು ನಮಗಿಲ್ಲ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೩೦೪ ॥

೩೦೫

ಕಂಬುವಿನ ಭೇದದಲಿ ಅಂಬಿತ್ತು ಅಜಕೋಟಿ,
ಕಂಬುಪಿಂ ಭವಿಸಿತ್ತು ಜಗವೆಲ್ಲವು.

ಆ ಶಂಬುಯೋಗಕ್ಕೆ ತಾನೆಂಬಪ್ಪ ತಾತ್ಪರ್ಯ
ಶಂಭು ನೀನೆನಿಪ ಶುನ್ಯ ನೆಲೆ ತಾನದು.
ಸಂಭ್ರಮದ ಬಿಂಬದಿಂದೊಂಬತ್ತು ನಾಳದಲಿ
ತುಂಬಿಯಾಳಾಪದಾ ಮಧು ಪುಷ್ಪದ
ಸಂಭ್ರಮದ ಖೇಚರದ ಆನಂದರಚನೆಯು
ಶಂಭು ನೀನಾದೆ, ಕಪಿಲಸಿದ್ಧಮಲ್ಲೇಶ್ವರಾ. ॥ ೩೦೫ ॥

೩೦೬

ಕಣ್ಣಿಂಗೆ ಸತ್ವರಜ ತಮವೆಂಬ ತಿಮಿರ ಕವಿದು ಅಜ್ಞಾನವಶನಾದಲ್ಲಿ
ಸದ್ಗುರುವನುಪಥಾವಿಸಿ ಔಷಧಿಯ ಬೇಡಲೊಡನೆ
"ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರುವೆ ನಮಃ ॥"
ಎಂದುದಾಗಿ,
ಶಿವಜ್ಞಾನವೆಂಬ ಅಂಜನವನೆಚ್ಚಿ
ಎನ್ನ ಕಣ್ಣ ಮುಸುಂಕಿದ ಅಜ್ಞಾನ ಕಾಳಿಕೆಯ ಬೇರ್ಪಡಿಸಿ
ತನ್ನ ಶ್ರೀಪಾದವನರುಹಿಸಿಕೊಂಡನಯ್ಯಾ,
ಕಪಿಲಸಿದ್ಧಮಲ್ಲಿನಾಥಾ. ॥ ೩೦೬ ॥

೩೦೭

ಕಣ್ಬೇಟವೆಂಬ ಕಾನನವಲ್ಲಿ ಅರಸುತ್ತಿದ್ದೇನೆ.
ಭಕ್ತಿಯೆಂಬ ಪೊಮ್ಮೃಗವ ಸೋವುತ್ತಿದ್ದೇನೆ.
ಲಿಂಗತ್ರಯವೆಂಬ ಬಲೆಗಾಗಿ ಮಿಗ ಸಿಕ್ಕಿ ಬಲೆ ಹರಿದೊಂದಾದಡೆ,
ಎಯ್ದಿದೆನಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನನೆಂಬ
ಪರಮ ಮುಕ್ತರಾಜ್ಯವನು. ॥ ೩೦೭ ॥

೩೦೮

ಕತ್ತಲೆಯೊಳಗಡಗಿದ ನೆಳಲಿನ ಬೀಜ
ಬಿತ್ತದ ಮುನ್ನ ಮಾಮರನಾಯಿತ್ತು.
ತನ್ನ ನೆಳಲೆಲ್ಲ ಬೆಳುದಿಂಗಳು.

ನೋಡ ಹೋದವರ ಕಣ್ಣೆಲ್ಲಾ ಒಡೆದವು.
ಉಲುಹಿದ್ದೂ ಉಲುಹಿಲ್ಲ : ಕಪಿಲಸಿದ್ಧಮಲ್ಲಿಕಾರ್ಜುನಯ್ಯ,
ಆ ಮರದ ಹೋಟೆಯೊಳಗಣ ಮಧುವಿನಂತಿದ್ದನು. ॥ ೨೦೮ ॥

೨೦೯

ಕನಕದ ಗಿರಿಗೆ ಕಾಂತಿಯಿಟ್ಟಿತು ಪ್ರಭೆ
ವಿನಯದ ಅನುಭಾವಕ್ಕೆ ಚಿನ್ನದ ವರ್ಣವನೇಕೀಕರಿಸಲು
ಅನುವಾಯಿತ್ತು ನಾಲ್ಕೆಸಳ ಪೀಠ
ಆ ಪೀಠದಲ್ಲಿ ದಾಸ ನಿಂದು ಆಚಾರವಿಡಿದು ನಡೆಯಲು
ಭೂಮಿಯ ಕಳೆದುಕೊಂಡನಯ್ಯಾ ನಿಮ್ಮ ಶರಣ ಚೆನ್ನಬಸವಣ್ಣನು.
ಕಪಿಲಸಿದ್ಧಮಲ್ಲಿನಾಥಯ್ಯಾ, ಚೆನ್ನಬಸವಣ್ಣನಿಂದ ಬದುಕಿದೆನಯ್ಯಾ.
॥ ೨೦೯ ॥

೨೧೦

ಕಬ್ಬಿನ ಪರುಷವ ಮುಟ್ಟಿ
ಪರುಷವಾಗದೊಡಾ ಪರುಷಕ್ಕೆ ಕೊರತೆಯಲ್ಲವೆ ?
ಅಯ್ಯಾ, ನಿಮ್ಮ ಪೂಜಿಸಿ ನೀವೆಯಾಗದೊಡೆ
ನಿಮ್ಮ ದೇವತ್ವಕ್ಕೆ ಹಾನಿಯಲ್ಲವೆ !
ಅಯ್ಯಾ, ನಿಮ್ಮ ದೇವತ್ವಕ್ಕೆ ಹಾನಿಯಾಗದಂತೆ ಮಾಡಾ,
ಎನ್ನ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೧೦ ॥

೨೧೧

ಕಮಲ ಸಿಂಹಾಸನದ ವಿಮಲಾತ್ಮನನು ಮಾಡಿ
ಸುಮನ ಗುರುಲಿಂಗ ಜಂಗಮವನೊಂದುಮಾಡಿ
ಪರಮ ಜ್ಞಾನೋದಯದ ಚೇತನದೊಳಿಟ್ಟ
ಶ್ರೀಗುರು ಚೆನ್ನಬಸವಣ್ಣ ಪರಂಜ್ಯೋತಿರ್ಮಯನಯ್ಯ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೧೧ ॥

೩೧೨

ಕರಣಂಗಳ ಕಳೆದು ಇರವಿನ ಬ್ರಹ್ಮ ನಿಜದಲ್ಲಿ ನಿಂದಿತ್ತಯ್ಯಾ.
ಆತ್ಮಸಂಗ ಸಂಯೋಗದ ಇರವು ನಿಮ್ಮಲ್ಲಿ ನಿಜವಾಯಿತ್ತಯ್ಯಾ.
ಕಪಿಲಸಿದ್ಧಮಲ್ಲಿನಾಥಯ್ಯಾ,
ನಿಮ್ಮ ಚೆನ್ನಬಸವಣ್ಣನ ಕೃಪೆ ನಿಮ್ಮಿಂದ
ಸಾಧ್ಯವಾಯಿತ್ತಯ್ಯಾ, ಪ್ರಭುವೆ. || ೩೧೨ ||

೩೧೩

ಕರದ ಮಹಾತ್ಮೆಯನು ಹೊಗಳುವರೆ ಎನ್ನಳವೆ ?
ಕರುಣಾಕರನೆ ಬಲ್ಲ ಗುರುರಾಯನು.
ಪಲವು ಬ್ರಹ್ಮಾಂಡವನು ಒಳಗಿಟ್ಟ ಘನವನು
ಧರಿಸಿಪ್ಪುದದು ಭಕ್ತಿಕರವು ನೋಡಾ.
ಆ ಶರಣರ ಕರವನು ಹೊಗಳುವವು ವೇದಂಗಳಯ್ಯ,
ಕಪಿಲಸಿದ್ಧಮಲ್ಲಿಕಾರ್ಜುನಾ. || ೩೧೩ ||

೩೧೪

ಕರಮನವಲ್ಲಿ ತನುವಾದೆ ಆಯ್ಯ,
ಮನದ ಮಧ್ಯಸ್ಥಾನ ನೀನು.
ತನು ಪ್ರಾಣ ಇಷ್ಟವಾದೆ.
ಮನದ ಮಂಗಳನೆ ಅವಧಾರು
ತನುಗುಣದೂರನೆ ನಮೋ, ಕಪಿಲಸಿದ್ಧಮಲ್ಲಿಕಾರ್ಜುನಾ. || ೩೧೪ ||

೩೧೫

ಕರವೆ ಭಾಂಡವಾಗಿ ಜಿಹ್ವೆಯೆ ಕರವಾಗಿ,
ಇಂದ್ರಿಯಂಗಳೈಮುಖವಾಗಿಪ್ಪ ಪ್ರಸಾದಿಯ ಪರಿಯಿನ್ನೆಂತೋ ?
ಆನಂದದಲ್ಲಿ ಸಾನಂದವನರ್ಪಿಸಿ ಸಾನಂದದಲ್ಲಿ ನಯವಾಗಿಪ್ಪ
ಪ್ರಸಾದಿಯ ಪರಿಯಿನ್ನೆಂತೊ ?
ತನುತ್ರಯಂಗಳ ಮೀರಿ ಮನತ್ರಯಂಗಳ ದಾಂಟಿಪ್ಪ

ಪ್ರಸಾದಿಗೆ ಆವುದ ಸರಿಯೆಂಬೆ ?
ಬಂದುದನತಿಗಳೆಯೆ, ಬಾರದುದ ಬಯಸೆ.
ತನುಮುಖವೆಲ್ಲ ಲಿಂಗಮುಖ, ಸ್ವಾದಿಸುವವೆಲ್ಲ ಲಿಂಗಾರ್ಪಿತ ;
ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ
ಲಿಂಗಾರ್ಪಿತವಲ್ಲದೆ ಅನರ್ಪಿತವ ನೋಡ ;
ತಟ್ಟುವ ಮುಟ್ಟುವ ಭೇದಂಗಳೆಲ್ಲವು ಸರ್ವಾರ್ಪಿತ.
ಆತನುರುತರ ಸಮ್ಯಕ್‌ಜ್ಞಾನಿಯಾದ ಕಾರಣ ಪ್ರಸನ್ನತೆಯಾಯಿತ್ತು.
ಪ್ರಸನ್ನ ಪ್ರಸಾದತೆಯಲ್ಲಿ ನಿತ್ಯನಪ್ಪಾತ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ
ಉರುತರ ಮಹಾಜ್ಯೋತಿರ್ಮಯನು. || ೨೧೫ ||

೨೧೬

ಕರಸ್ಥಲಕೆ ಲಿಂಗ ಬರೆ
ಕರಣೇಂದ್ರಿಯಂಗಳಾ ಕರಗಳೆ ಅಯ್ಯಾ ಸಾ ಪರಿಯಾದವ್ವೆ.
ಪರಿಯ ಪರಿಯಾ ಒರೆದು ನೋಡುವ ಲೀಲೆ
ಪರೀಕ್ಷಿಸುವದೆಲ್ಲವದು ಶುದ್ಧಸಿದ್ಧಪ್ರಸಿದ್ಧ.
ಪರಿಣಾಮವನರಿವಡೆಯು ತವಕಿಗಳಿಗದು ದೂರ.
ಗುರುಕರುಣವುಳ್ಳವರ ಹೊಲಬು ತಾನು
ಕರುಣಿ ಮಹಾದಾನಿ ಕಪಿಲಸಿದ್ಧಮಲ್ಲಿಕಾರ್ಜುನನ ಜ್ಞಾನ,
ಕರಣೇಂದ್ರಿಯವು ಶುದ್ಧ. || ೨೧೬ ||

೨೧೭

ಕರ್ಪೂರದ ಕರದಲ್ಲಿ ಇದ್ದ ಮೂಜಗವೆಲ್ಲವು
ತಪ್ಪದತಿ ಸಿದ್ಧಾಂತವನು ಭೇದಿಸಿ,
ಶಬ್ದಬ್ರಹ್ಮವು ಮೀರಿದತ್ತ ಬ್ರಹ್ಮಾಂಡವು
ಇತ್ತೆರವು ಕಂಡೊಳಲು ಮೂಲೋಕಕೆ.
ಅಯ್ಯ ಕೇಳಯ್ಯ, ನಿನ್ನಮೃತ ಹಸ್ತವನೊಮ್ಮೆ
ಒಯ್ಯನೆ ನೀಡಿ ಪರಮಪದದಲ್ಲಿ
ಕೈಯ್ಯೆದರಲ್ಲಿ ಮುಖವು, ನಯನದಲ್ಲಿ ಜಿಹ್ವೆ
ತಾನುಣುತಿಪ್ಪ ಕರಮುಖದಲ್ಲಿ
ಚೋದ್ಯವ ಬೆಳಗಿನಲ್ಲಿ ಗುರುಕರಣವಿಡಿದಿಪ್ಪ

ಭಾವ ಸಜ್ಜನ ಶುದ್ಧ ಸದ್ಭಕ್ತರ
ಇಂದ್ರಿಯಂ ಐದು ನಿನ್ನೆಂಬ ಜಿಹ್ವೆಯಾಗಿ
ಸಂದಣಿಪ ಕರಣ ನಿನ್ನಯ ಚೇತನ.
ಇಂತು ಭಕ್ತಂಗೆ ಪ್ರಾಣವು ಶೂನ್ಯ ನಿನಗೀಗ
ಅಂತರಿಪ ಕಾಯವಿಲ್ಲದ ಪರಿಯನು,
ಇಂತು ವಿಚಾರಿಸುವಡೆ ಭಕ್ತಕಾರಣ ಪರಶಿವನು
ಸಂತತಂ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೧೭ ॥

೩೧೮

ಕರ್ಮಜಸವೆಂಬ ಹಮ್ಮಿನ ತೇಜದಲಿ
ನಿರ್ಮಳಜ್ಞಾನಿ ನಿಮ್ಮನರಿದೆನಯ್ಯಾ, ಕರ್ಮಕ್ಕೊಳಗಾದೆನು,
ಮೋಹಮೊಲಸ ಬಲೆಗೆ ಗುರಿಯಾದೆನು.
ಕಾಯಯ್ಯಾ ಕರುಣಿ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೧೮ ॥

೩೧೯

ಕರ್ಮದ ಗಡಣ ಹಿಂಗಿಸು ; ಪಾಪದ ರಾಶಿಯ ತೊಲಗಿಸು ;
ಸಂಸಾರದಾಶೆಯ ಬೆಂದ ಮನದ ಕಾಟವ ಮಾಣಿಸು.
ಮಾಯದ ತಲೆಯನರಿದು ಮರಳಿ ಬಾರಾ ಎನ್ನ ಕರಕ್ಕೆ, ನಿಮ್ಮ ಧರ್ಮ.
ನಿಮಗಾಣೆ ಗುರುವೆ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೧೯ ॥

೩೨೦

ಕರ್ಮವನರಿತೆನ್ನ ನಿಃಕರ್ಮಿಯ ಮಾಡಯ್ಯಾ ಗುರುವೆ.
ಈ ಕರ್ಮಕ್ಕಾನಾರೆನು ತಂದೆ.
ಅಯ್ಯಾ, ಎನ್ನ ನಿಃಕರ್ಮಿಯ ಮಾಡಯ್ಯಾ ಗುರುವೆ.
ಆನತ ಘನಗುರುವೆ ಕಪಿಲಸಿದ್ಧಮಲ್ಲಿನಾಥಾ,
ಎನ್ನ ನಿಸ್ಸವರಂತೆ ಮಾಡಾ, ನಿಮ್ಮ ಧರ್ಮ. ॥ ೩೨೦ ॥

೩೨೧

ಕರ್ಮಿಗಳು ಶಿವಪಥಕ್ಕೆ ಬಪ್ಪಾಗಳವರ
ಕರ್ಮ ಬೆಂಬತ್ತಿ ಕಾಡುವದಯ್ಯಾ.

ಲಿಂಗಾರಾಧನೆಯು ಮಾಡಲೀಯದು.
ಸಂದೇಹವನೆ ತೋರಿಸಿ ಕೆಡಿಸುವದಯ್ಯಾ.
ಏಕೆ ? ಅವರು ಮಾಡಿದ ಕರ್ಮವನುಣಬೇಕಾಗಿ !
ಇದನರಿದು ನಿಮ್ಮ ನೆರೆನಂಬಿ ಪೂಜಿಸೆ ಪರಿವುದು ಕರ್ಮ,
ಕಪಿಲಸಿದ್ಧಮಲ್ಲಿಕಾರ್ಜುನಾ, ದೇವರ ದೇವಾ. ॥ ೩೨೧ ॥

೩೨೨

ಕರುಣ ಕಾನನದೊಳಗಾನು ಹೊಲಬುಗೆಟ್ಟೆನಯ್ಯಾ ;
ನೆನಹೆಂಬ ಮಠದೊಳಗೆ ನಿರ್ಮಳನಾದೆನಯ್ಯಾ ;
ಘನತರ ಸಂಯೋಗದಲ್ಲಿ ನೀನು ನಾನಾದೆ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಸಂದು ಸವೆದು ಒಂದಾದೆ. ॥ ೩೨೨ ॥

೩೨೩

ಕರುಣರಸ ಹರಿವಲ್ಲಿ
ಮಹಾಕಾರುಣ್ಯ ಸುಧಾಪ್ರವಾಹವಪ್ಪಲ್ಲಿ
ಆರಯ್ಯಾ ನಿನ್ನನರಿವವರು ?
ಲೋಕಾದಿಲೋಕಂಗಳಿಗೆ ಏಕೋದೇವ ನೀನು
ಅನಾದಿಮೂಲಕ್ಕೆ ಮೂಲಸ್ವಾಮಿ ನೀನೆ ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೨೩ ॥

೩೨೪

ಕರುಣಾಕರ, ಕರತಳಾಮಳಕ ಎಂದಪ್ಪುದಯ್ಯಾ ?
ನಿನ್ನ ನೆನಹಿನ ಮಹಾಸಮುದ್ರದೊಳಗದ್ದಿ ಎಂದಾಳ್ವೆನಯ್ಯಾ ?
ಬಂದುದು ಬಾರದೆಂಬ ಸಂದೇಹವನೆಂದು ಸವೆವೆನಯ್ಯಾ ?
ಅನಂಗವಿದಾರಣ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಎಂದಯ್ಯಾ ಕರುಣ ಕಂದೆರೆವುದು ? ॥ ೩೨೪ ॥

೩೨೫

ಕರುಣಾಕರನೆ ಎಂದು ಹೊಗಳುತೈದಾವೆ ಶ್ರುತಿಯು ;
ಐದಿದಡೆ ಹಾನಿ ಬಿರಿದಿಂಗೆ.
ಅಯ್ಯಾ, ಅಯ್ಯಾ, ಕರುಣಾಕರ ಕಪಿಲಸಿದ್ಧಮಲ್ಲೇಶ್ವರಾ,
ಓರಂತೆ ಮಾಡಿ ಸಲಹಯ್ಯಾ ಎನ್ನನು. ॥ ೩೨೫ ॥

೩೨೬

ಕರುಣಾಕರನೆ, ಎನ್ನ ದೆಸೆಗೆಟ್ಟ ಪಶುವನು
ಹಸಗೆಡಿಸೂದು ನಿನಗುಚಿತವೆ ಹೇಳಾ !
ಸಕಲ ಸಾನಂದನೆ ಆನಂದರೂಪನೆ
ವಿಕಲವನು ಮಾಣಿಸಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೨೬ ॥

೩೨೭

ಕರುಣಾಕರನೆ, ನಿನ್ನ ವಸವಾದಪ್ಪುದಯ್ಯಾ,
ಸಕಲ ಬ್ರಹ್ಮಾಂಡವು-ನಾನು ಸಹಿತವಾಗಿ.
ವಸುಧೀಶ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿನ್ನ ಕರುಣ ಕಾನನದೊಳಗೆ ಲೀಯುವಾದೆ. ॥ ೩೨೭ ॥

೩೨೮

ಕರುಣಿ ಬಸವಾ, ಕಾಲಹರ ಬಸವಾ, ಕರ್ಮಹರ ಬಸವಾ,
ನಿರ್ಮಳ ಬಸವಾ, ಶಿವಜ್ಞಾನಿ ಬಸವಾ,
ನಿಮ್ಮ ಧರ್ಮವಯ್ಯಾ, ಈ ಭಕ್ತಿಯ ಪದವು.
ಕರುಣಿ ಕಪಿಲಸಿದ್ಧಮಲ್ಲಿನಾಥಯ್ಯಾ,
ನಿಮಗೂ ಎನಗೂ ಬಸವಣ್ಣನ ಧರ್ಮವಯ್ಯಾ. ॥ ೩೨೮ ॥

೩೨೯

ಕರುಣಿ, ಮಹಾದಾನಿ,
ನಿನ್ನವರಿಗೆ ನೀನು ಕರುಣ ಕಂದೆರೆವ ಭೇದವ,

ಅವರ ಮನದ ಮಸ್ತಕದಲ್ಲಿ
ನಿನ್ನ ಮಹಾಜ್ಯೋತಿ ಬೆಳಗುವ ಭೇದವ,
ಅರಿಯಬಹುದೆ ಎಲ್ಲರಿಗೆ,
ಅನಂಗವಿದಾರಕ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವೆ,
ನಿನ್ನ ಕರುಣವುಳ್ಳವರಿಗಲ್ಲದೆ ? ॥ ೩೨೯ ॥

೩೩೦

ಕರುಣಿಯೆಂದು ಮರೆವೊಕ್ಕಡೆ ನಿಃಕರುಣಿಯಪ್ಪೆ.
ಎಲೆ ಅಯ್ಯಾ, ಅರಿಯದೆ ಕಿರಿದು ಮಾಡಿವಡೆ
ದಾನಿಯೆಂದು ಭವಕ್ಕೆ ಗುರಿಮಾಡುವರೆ ?
ಎಲೆ ಅಯ್ಯಾ, ಮರಳಿ ಬಾರದಂತೆ ಮಾಡಯ್ಯಾ, ನಿಮ್ಮ ಧರ್ಮ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೩೦ ॥

೩೩೧

ಕಲಿಯಾಯಿತು, ಕಲಿಯಾಯಿತು.
ಕಲಿಯುಗದೊಳಗೊಂದು ಸೋಜಿಗವ ಕಂಡೆನು.
ಸತ್ಯವರತಿತ್ತು, ಸಾತ್ವಿಕ ಬೆಂದಿತ್ತು, ವೈಶಿಕ ಘನವಾಯಿತ್ತು.
ಠಕ್ಕು ಠವಣು ಮುಂಡುಮುರುಹು ಭೂಮಂಡಲವೆಲ್ಲ ತುಂಬಿತ್ತು.
ಆಗಳೆ ಭಕ್ತರು, ಆಗಳೆ ಭವಿಗಳು.
ಅಂಗಯ್ಯ ಮೇಗಯ್ಯಾದರು ನೋಡಯ್ಯಾ.
ಎನ್ನ ಸ್ವತಂತ್ರ ಕಪಿಲಸಿದ್ಧಮಲ್ಲೇಶ್ವರದೇವಯ್ಯಾ,
ದೃಷ್ಟ ಲಿಂಗ ಜಂಗಮವೆಲ್ಲ ಕಲ್ಲು ಕೊರಡಾಗಿ ಹೋದರು. ॥ ೩೩೧ ॥

೩೩೨

ಕಸವಕೊಂಡು ಹೊಸ ಧಾನ್ಯವ ಕೊಟ್ಟಡೆ, ಒಲ್ಲೆಂಬ ಚದುರರಾರು ?
ಜಲವ ಕೊಂಡು ಅಮೃತವ ಕೊಟ್ಟಡೆ, ಒಲ್ಲೆಂಬ ಭಾಷೆಯುದಾರದು ?
ಎನ್ನಂತರಂಗದ ಜ್ಞಾನವ ಕೊಂಡು ಸುಜ್ಞಾನವಪ್ಪ
ನಿಮ್ಮ ಕರತೇಜವ ಕೊಟ್ಟಡೆ,

ಒಲ್ಲೆನೆಂಬ ಪಾತಕಿ ಯಾರು ?
ಕಪಿಲಸಿದ್ಧಮಲ್ಲಿಕಾರ್ಜುನನ ಮಡಿವಾಳ ತಂದೆ. ॥ ೩೩೨ ॥

೩೩೩

ಕಳವಳದ ಕಂದೆರವಿಗೊಳಗು ಮಾಡಿದರಿ.
ಹಾ ! ಹಾ ! ಎಲೆ ಅಯ್ಯಾ,
ಎನ್ನ ವಿಕಾರದಲ್ಲಿ ಗುರಿ ಮಾಡಿದಿರಯ್ಯಾ.
ಕೋಪದ ಕಾಡುಗಿಚ್ಚಿಗೆ ಅಡವಿಯ ಗುರಿಮಾಡಿದಿರಿ.
ಎನ್ನ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೩೩ ॥

೩೩೪

ಕಳೆಯೊಳಗಣ ಭೇದ, ಕಳೆ ನಾದದ ಭೇದ
ಕಳಾವಿದರಿಗಲ್ಲದೆ ವೇದ್ಯವಲ್ಲ.
ಮಧುಕರನುಂಡಿಪ್ಪ ಸದಮುದದ ಪರಿಮಳವ
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣ ಬಲ್ಲ. ॥ ೩೩೪ ॥

೩೩೫

ಕಾಡದೆ ಎನ್ನ ಮನದಿಚ್ಛೆಯ ಮಾಡಯ್ಯಾ, ನಿಮ್ಮ ಧರ್ಮ !
ಕಾಡುವುದುಚಿತವೆ ಅಯ್ಯಾ, ನಿಮ್ಮ ಕರುಣದ ಕಂದ ನಾನು !
ನಿಮ್ಮ ಕರುಣದ ಕಂದ ನಾನಯ್ಯಾ !
ಎಂದುತನಕ ಕಾಡುವಿರಿ ಅಂದುತನಕ ನೋಡುವೆನು.
ಹಿಂದುಮುಂದುಗೆಟ್ಟವನೆಂದು ಏಡಿಸಿದಡೆ
ತಂದೆ ! ನಾ ನಿಮ್ಮನೇಕೆ ಬಿಡುವೆ.
ಕರುಣಿಸು ಎನ್ನ ಪರಮಗುರುವೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೩೫ ॥

೩೩೬

ಕಾಣಬಹುದು ಕೈಗೆ ಸಿಲುಕದು ;
ಆಲಿಸಬಹುದು ಕುರುಹಿಡಬಾರದು ;

ಭಾವಿಸಬಹುದು ಬೆರಸಬಾರದು.
ಇಂತೀ ಉಪಮಿಸಬಾರದ ಮಹಾಘನವ
ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಶರಣನೇ ಬಲ್ಲ. ॥ ೩೩೬ ॥

೩೩೭

ಕಾಮನನು ನೋಡಿದ ಕಂಗಳಲ್ಲಿ ನೋಡದೆ
ಸೋಮನಯನದಿ ನೋಡಿ ಸಲಹು ತಂದೆ
ಕಾಮಾರಿಯಯ್ಯ ನೀನು, ಕಾಮಂಗೆ ಒಪ್ಪಿಸದಿರು ಎನ್ನ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೩೭ ॥

೩೩೮

ಕಾಮವಿಕಾರಕ್ಕೆ ಕಳವಳಿಸಿ ಮನವು
ಹೇಮದಿಚ್ಛೆಗೆ ಹೆಚ್ಚಿ ಹೆಚ್ಚಿ
ಕಾಮಾರಿ ನಿಮ್ಮುವ ನೆನೆಯದೀಮನವು
ಓರಂತೆ ನರಕಕ್ಕಿಳಿದೆನೆಂಬುದು.
ಕಾರುಣ್ಯಾಕರ ಎನ್ನುವನಾರೈದು ಓರಂತೆ ಮಾಡು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೩೮ ॥

೩೩೯

ಕಾಮಸಂಗವನಳಿದು ಹೇಮದಿಚ್ಛೆಯ ತೊರೆದು,
ನಿಮ್ಮ ನಾಮ ನೆಲೆಯಾಗಿಪ್ಪವರ ತೋರಾ, ಅಯ್ಯಾ ನಿಮ್ಮ ಧರ್ಮ.
ಕಪಿಲಸಿದ್ಧಮಲ್ಲಿಕಾರ್ಜುನಾ,
ಅವರ ಪಾದವ ತೋರಿ ಬದುಕಿಸಯ್ಯಾ. ॥ ೩೩೯ ॥

೩೪೦

ಕಾಮಿಸಿದೆನಯ್ಯಾ ಬಸವಣ್ಣನ ಭಕ್ತಿಗೆ ;
ಕಾಮಿಸಿದೆನಯ್ಯಾ ಬಸವಣ್ಣನ ಯುಕ್ತಿಗೆ ;
ಕಾಮಿಸಿದ ಕಾಮವೆ ಕೈಸಾರಿತ್ತಯ್ಯಾ, ಬಸವಣ್ಣನ ಕರುಣದಿಂದ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೩೪೦ ॥

೩೪೧

ಕಾಮಿಸುವಲ್ಲಿ ಕಾಮಿಸದೆ ಇಪ್ಪಾತ,
ಮೋಹಿಸುವಲ್ಲಿ ಮೋಹಿಸದೆ ಇಪ್ಪಾತ,
ಆತ ಇಪ್ಪ ಇಪ್ಪ, ಎಡೆಎಡೆಯಲ್ಲಿ ಇರದೆ ಇಪ್ಪಾತ.
ಆತ ವಾಙ್ಮನಕ್ಕಗೋಚರನೆಂಬೆ,
ಆತ ಸಾಕ್ಷಾತ್ ಕಪಿಲಸಿದ್ಧಮಲ್ಲಿಕಾರ್ಜುನಾ, ನೀನೆಂಬೆ. ॥ ೩೪೧ ॥

೩೪೨

ಕಾಮುಖವಳಿದು ಕರಣಂಗಳು ದಮ ಒಂದಾಯಿತ್ತಯ್ಯಾ.
ವ್ಯೋಮಪ್ರಸಾದಿ ಸಮಯವಾಯಿತ್ತಯ್ಯಾ ನಿಮ್ಮಿಂದ.
ಇನಿತಾದ ಸುಖ ತಾನೊಂದೆ ಲಿಂಗಭಾವವಾಯಿತ್ತಯ್ಯಾ.
ಕಪಿಲಸಿದ್ಧಮಲ್ಲಿನಾಥಯ್ಯಾ,
ನಿಮ್ಮ ದಯದಿಂದ ಚೆನ್ನಬಸವಣ್ಣನ ಪ್ರಸಾದವಾಯಿತ್ತು. ॥ ೩೪೨ ॥

೩೪೩

ಕಾಯದ ಕರಸ್ಥಳದಲ್ಲಿ ನೀನು ಶೂನ್ಯನಾಗಿಪ್ಪೆಯಲ್ಲಾ, ಎಲೆ ಅಯ್ಯಾ.
ಆನಂದಸ್ಥಾನದಲ್ಲಿ ಅನಿಮಿಷನಾಗಿಪ್ಪೆ ಅಯ್ಯಾ.
ಆದಿಯಾಧಾರ ನಿನಗೆ ತಥ್ಯವಾಗಿಪ್ಪುದಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೩೪೩ ॥

೩೪೪

ಕಾಯದ ಹೊರಕಣ್ಣ ಮುಚ್ಚಿ
ಮನ ಭಾವದರಿವಿನೊಳಕಣ್ಣ ತೆರೆದು
ಒಂದಾನೆಂಬ ಪರವಶಕ್ಕೆ ಕಿವಿಯಾಂತು ಕೇಳುತ್ತಿದ್ದೇನೆ.
ಅದೆತ್ತಣಿಂದ ಸುಳಿವನೆಂದರಿಯೆನಯ್ಯಾ.
ಅರುಹಿನ ನೇತ್ರಕ್ಕೆ ಸರ್ವನ ಪ್ರತಿಬಿಂಬ ಸೂಚಿಸಿ ಹೊಳೆವಡೆ
ಕಣ್ದುಂಬಿ ನೋಡಿದೆ ಮನದುಂಬಿ ನೆನೆದೆ,
ಆ ಪ್ರತಿಬಿಂಬವಿಡಿದು ಕಪಿಲಸಿದ್ಧಮಲ್ಲಿಕಾರ್ಜುನನ ಕೂಡುವೆನು. ॥ ೩೪೪ ॥

೩೪೫

ಕಾಯ ಲಿಂಗವೊ ಕಾಯದಲಿ ಸಾರಿಪ್ಪ ಲಿಂಗ ಲಿಂಗವೊ ?
ಪ್ರಾಣ ಲಿಂಗವೊ ಪ್ರಾಣದಲ್ಲಿ ಸಾರಿಪ್ಪ ಲಿಂಗ ಲಿಂಗವೊ ?
ಜ್ಞಾನ ಲಿಂಗವೊ ಜ್ಞಾನದ ಮೊನೆಯ ಮೇಲೆ ತೋರುವ ಬೆಳಗು ಲಿಂಗವೊ ?
ಲಿಂಗ ಪ್ರಾಣ ಪ್ರಾಣಲಿಂಗವೆಂಬುದನೆಂತೆಂದರಿಯೆನು.
ನಿಮ್ಮ ಕಾಯದ ಕರಸ್ಥಲವ ಸಾರಿದ ಲಿಂಗ
ಪ್ರಾಣದೊಳು ವೇದ್ಯವಾದ ಪರಿಯ ಹೇಳಾ ಪ್ರಭುವೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೪೫ ॥

೩೪೬

ಕಾಯವ ನಿಶ್ಚೈಸಲಿಲ್ಲ, ಜೀವವ ನಿಶ್ಚೈಸಲಿಲ್ಲ ;
ಕಾಯ ಜೀವ ಎರಡಕ್ಕೂ ನೆಲೆಯಿಲ್ಲವಯ್ಯಾ.
ಸುಖವ ನಿಶ್ಚೈಸಲಿಲ್ಲ, ದುಃಖವ ನಿಶ್ಚೈಸಲಿಲ್ಲ ;
ಸುಖ–ದುಃಖ ಎರಡಕ್ಕೂ ನೆಲೆಯಿಲ್ಲವಯ್ಯಾ.
ರಾಜ್ಯವ ನಿಶ್ಚೈಸಲಿಲ್ಲ, ಲಕ್ಷ್ಮಿಯ ನಿಶ್ಚೈಸಲಿಲ್ಲ ?
[ರಾಜ್ಯ-ಲಕ್ಷ್ಮಿ ಎರಡಕ್ಕೂ ನೆಲೆಯಿಲ್ಲವಯ್ಯಾ.]
ಅಭ್ರಚ್ಛಾಯೆ, ಮರೀಚಿಕಾಜಲ, ಮಹೇಂದ್ರಜಾಲವಯ್ಯಾ ಸನ್ನದು,
ಮನೆ ನನ್ನದು, ಧನ ನನ್ನದು ಎಂಬ ಮರುಳ ಕೇಳಾ–
ಕನಸಿನ ಸುಖ ಕಣ್ದೆರದಲ್ಲಿ ಹೋಯಿತ್ತು.
ಹಾಲುಳ್ಳಲ್ಲಿ ಹಬ್ಬವ ಮಾಡಿ, ಗಾಳಿಯುಳ್ಳಲ್ಲಿ ತೂರಿಕೊಳ್ಳಿರಿ ;
ಬಳಿಕಲರಸಿದರುಂಟೆ ? ಪರಮ ಸುಖವು.
ನಿಜಗುರು ಕಪಿಲಸಿದ್ಧಮಲ್ಲಿಕಾರ್ಜುನನ
ಹರಿಗೋಲುಳ್ಳಲ್ಲಿ ತೊರೆಯ ದಾಂಟಿದೆ. ॥ ೩೪೬ ॥

೩೪೭

ಕಾಯವಿರೆ ಗುರುವ ನೆರೆವೆನೆಂಬವಂಗೆ ಹೇಳುವೆನಯ್ಯಾ.
ತನುವೊಂದೆ ತನುವಾಗಿ, ಧನವೊಂದೆ ಧನವಾಗಿ
ಮನವೊಂದೆ ಮನವಾಗಿ,
ಹಿಡಿವ ಗತಿ ಒಂದಾದ ಭಕ್ತಿಯ ಶಿವಕೂಟ ಒಂದೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೪೭ ॥

೩೪೮

ಕಾಲಜ್ಞಾನಿ, ಕರ್ಮವಿದೂರ, ನಿತ್ಯತೃಪ್ತನೆ,
ನಿಮ್ಮ ಭೇದಿಸುವರಾರು ಹೇಳಾ, ಎಲೆ ಅಯ್ಯಾ.
ಎನ್ನ ಭವಕರ್ಮವ ಕಳೆಯಲಿಕೆ ಏಕರೂಪವಾಗಿ ಬಂದೆಯಯ್ಯಾ.
ನಿಮ್ಮ ಪದಂಗಳೆ ಲಿಂಗವಾಗಿ, ನಿಮ್ಮ ಕರಣಂಗಳೆ ಶ್ರೀಗುರುವಾಗಿ,
ನಿಮ್ಮುತ್ತರಮುಪ್ಪ ಜಿಹ್ವೆಯೆ ಜಂಗಮವಾಗಿ ಬಂದೆಯಯ್ಯಾ.
ನೀನು ಶಿಷ್ಯ ಕಾರಣ ಪರಶಿವಮೂರ್ತಿಯಾದುದನು
ನಾನಿಂದು ಕಂಡೆ ಕಾಣಾ,
ಎನ್ನ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೪೮ ॥

೩೪೯

ಕಾಲವೇಕೆ ಬಾರದಯ್ಯಾ ಇಂದಿನ ಅವಸ್ಥೆಗೆ ?
ಲಿಖಿತವೇಕೆ ತೊಡೆಯದಯ್ಯಾ ಇಂದಿನ ಅವಸ್ಥೆಗೆ ?
ಇಂದಿನಿಸು ಬಾರದೇಕಯ್ಯಾ, ಎನ್ನ ದೇವ ಕಪಿಲಸಿದ್ಧಮಲ್ಲಿಕಾರ್ಜುನಾ,
ನಿಮಗೆ ಕೂರ್ತ ಅವಸ್ಥೆಯೊಳಗೆ ?
ಲಿಖಿತ ತೊಡೆಯದು, ಪ್ರಾಣ ಬಿಡದು,
ಇಂತಿರಿಸದಿರಾ, ಎನ್ನ ದೇವರ ದೇವಾ. ॥ ೩೪೯ ॥

೩೫೦

ಕಾಲಿಲ್ಲದವಂಗೆ ಕಾಲ ಕೊಟ್ಟೆ ಬಸವಾ ;
ಕಣ್ಣಿಲ್ಲದವಂಗೆ ಕಣ್ಣ ಕೊಟ್ಟೆ ಬಸವಾ ;
ಎನ್ನ ಕಣ್ಣು ಕಾಲಿಂಗೆ ನೀನೆಯಯ್ಯಾ ಬಸವಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೩೫೦ ॥

೩೫೧

ಕಾಳರಾಕ್ಷಸಿ[ಯಾಗಿ] ಕುತ್ತಿಗೆ ಪಿಡಿದು ಕೊಯ್ದು ತಿನ್ನುತ್ತಿರಲಿ.
ತಿನ್ನಲೊಲ್ಲದೆಚ್ಚ ಚಿರದಿಂದ ಕನ್ನಿಕೆಯಾಗಿ ತೆಗೆನಪ್ಪಿ[ಕೊಳ್ಳಲಿ]
ಕೊಂಡಡೆ, ಮನವಿಚ್ಛಂದವಾಗದೊಂದೆಯಂದದಲ್ಲಿಪ್ಪಂತಪ್ಪ
ನಿಮ್ಮದೊಂದು ಸಮತಾಗುಣ ಎನ್ನನೆಂದು ಬಂದು ಪೊದ್ದಿಪ್ಪುದು ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೫೧ ॥

೩೫೨

ಕುಂಕುಮಗಿರಿ ಕೊನೆಯೇರಿ ಬೆಳೆಯೆ, ಆಯುತವಿಡಿದು ಸುಖವ ಕಂಡು
ಅನುಭವದವಳಿಗೆ ಕುಂಕುಮದ ಸುಖವನೇಕೀಕರಿಸಿ ನೋಡಲು
ಆಯುತವಾಯಿತ್ತಯ್ಯಾ ಕುಂಕುಮದ ಹನ್ನೆರಡೆಸಳ ಪೀಠ.
ಆ ಪೀಠದಲ್ಲಿ ವೀರಭೃತ್ಯನೆಂಬವ ನಿಂದು,
ಜಂಗಮವಿಡಿದು ನಡೆಯೆ,
ಅನಿಲಗುಣ ಕೆಟ್ಟು ನೆಲೆಗೊಂಡನಯ್ಯಾ ನಿಮ್ಮ ಶರಣ ಚೆನ್ನಬಸವಣ್ಣನು,
ಕಪಿಲಸಿದ್ಧಮಲ್ಲಿನಾಥಯ್ಯಾ,
ಚೆನ್ನಬಸವಣ್ಣನಿಂದ ಬದುಕಿದೆನಯ್ಯಾ. ॥ ೩೫೨ ॥

೩೫೩

ಕುಂಡಲಿ ಭ್ರೂಮಧ್ಯವನೊಂದಿ ನಿಂದು, ಪೂರ್ವ ಹೃದಯವ ಪೂರೈಸಿ,
ಮಧ್ಯ ಹೃದಯವನವಗ್ರಹಿಸಿ, ಊರ್ಧ್ವ ಹೃದಯವನೊಡಗೂಡಿ,
ಪಶ್ಚಿಮಚಕ್ರದಲ್ಲಿ ಪ್ರಾಣನಿವಾಸಿಯಾಗಿಪ್ಪನಾ ಶರಣ.
ಓಂ ಮೂಲದ ಆ ಪ್ರಶಿಖಾಚಕ್ರದಲ್ಲಿ ಮನೋಭಾವವಡಗಿ,
ಸಹಸ್ರದಳ ಕಮಲದ ಬಯಲೊಳಗೆ ಬಯಲಾಗಿ,
ನೀನು ತಾನಾದ ಚೆನ್ನಬಸವಣ್ಣನ ಶ್ರೀಪಾದಕ್ಕೆ
ಶರಣೆಂದು ಬದುಕಿದೆನು ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೫೩ ॥

೩೫೪

ಕುಂಜರ ಮೇಲ್ವಾಯ್ದು ಸೀಳುಗೆ ಮೋಣ್ ಎತ್ತಿಕೊಳ್ಳೆ.
ಎತ್ತಿಕೊಂಡಡೆ, ಮನವಿಚ್ಛಂದವಾಗದೊಂದೆಯಂದದಲ್ಲಿಪ್ಪಂತಪ್ಪ
ನಿಮ್ಮದೊಂದು ಸಮತಾಗುಣ ಎನ್ನನೆಂದು ಬಂದು ಪೊದ್ದಿಪ್ಪುದು ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೫೪ ॥

೩೫೫

ಕುಡಿ ನಿಮಿರ್ದ ದಾಡೆಗಳ
ಅಸುರಗಣವೃಷ್ಟಿಯ ಹರಹು ಮಂಡೆಯ
ಕೆಲಬಲದೊಂದು ದಾಡೆ ಆಕಾಶವನಳ್ಳಿರಿವುದು,

ಒಂದು ದಾಡೆ ಭೂಮಿಯನುತ್ತರಿಸುವುದು.
ಭೂಮಿ ಭೂತಕೋಟಿಯಾಗಿ ಸುತ್ತಿದಡೆ ಉದ್ದಂಡ.
ಭೂತ ತೊಂಡಾಣೆಯ ಮಾಣಿಸಯ್ಯಾ,
ಎಲೆ ಕಪಿಲಸಿದ್ಧಮಲ್ಲಿನಾಥಾ,
ನೀ ಸದ್ಭಮಿರ್ಣಯಾದಡೆ ಅಯ್ಯಾ. ‖ ೩೫೫ ‖

೩೫೬

ಕುರುಡು ಸೂಳೆಗೆ ಕುಂಟ ಬೊಜಗನು
ಕೋಲ ಹಿಡಿದು ನಡೆವಂತೆ ಸೂಳೆತನಗಳ ಮಾಡುವಿರಿ ;
ಮೊಲೆ ಮುಡಿಗಳ ತೋರುವಿರಯ್ಯಾ.
ಶಿವಭಕ್ತ ಮರುಳ ಪ್ರಪಂಚುರಹಿತನು
ಕಪಿಲಸಿದ್ಧಮಲ್ಲಿಕಾರ್ಜುನಾ. ‖ ೩೫೬ ‖

೩೫೭

ಕುಲಜ ಅಕ್ಕುಲಜರು ಜಾತ್ಯಜಾತರು ಬಂದು
ಕರಂಗಳ ಮುಗಿಯಲೊಡನೆ ಕರಗಳ ಮುಗಿವುತಿಪ್ಪಡೆ
ಮನವಿಚ್ಛಂದವಾಗದೊಂದೆಯಂದದಲ್ಲಿಪ್ಪಂತಪ್ಪ
ನಿಮ್ಮದೊಂದು ಸಮತಾಗುಣ ಎನ್ನನೆಂದು ಬಂದು ಪೊದ್ದಿಪ್ಪುದು ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ‖ ೩೫೭ ‖

೩೫೮

ಕುಲಜನಾಗಿ ನಾನೇವೆನಯ್ಯಾ ?
ಕುಲದ ಬಳಿಯ ದೇವನಲ್ಲ; ಮನದ ಬಳಿಯ ದೇವನೈಸೆ.
ಆವ ಯೋನಿಜನಾದಡೇನು ?
ನೀನೊಲಿದವನೆ ಕುಲಜನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ‖ ೩೫೮ ‖

೩೫೯

ಕೂಟದ ತುರೀಯದಲಿ ಬೇಟ ಮತ್ತೆರಡಾಗಿ,
ಆಟವನು ಆಡಿದೆನು ಚಿತ್ರತರದ.
ಕೂಟವೂ ಬೇಟವೂ ಆಟ ಮತ್ತೊಂದಾಗಿ,

ನೋಟಂಗಳನಿಮಿಷದ ದೃಷ್ಟಿ ನಟ್ಟು,
ತಾನು ತಾನಾಗೀಗ ಸಾನಂದ ಸಂಬಂಧ.
ಆನಂದ ಮುಕ್ತ್ಯಂಗನೈಕ್ಯವಾಗಿ
ಲೋಕದೊಳಗಿದ್ದು ಲೌಕಿಕನು ತಾನಲ್ಲದೆ
ಏಕೈಕನಾದ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ. ॥ ೩೫೯ ॥

೩೬೦

ಕೂಟದ ರಚನೆಯು ಸಂದಳಿದು ನೋಟ ನಿಮ್ಮಲ್ಲಿ ನಟ್ಟು
ಸಮಕಳೆ ಎಂದಪ್ಪುದಯ್ಯಾ, ಸಮರತಿ ಎಂದಪ್ಪುದಯ್ಯಾ.
ಹಂಗ ಹರಿದು, ದಂದುಗ ಉಡುಗಿ
ಎನ್ನನೆಂದಿಂಗೆ ಒಳಕೊಂಬೆಯೊ ಗುರುವೆ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೩೬೦ ॥

೩೬೧

ಕೂಟದ ಸುಖವಲ್ಲಿ ನೋಟ ಕಂಬೆಳಗಾಗೆ,
ಬೇಟದಿಂ ದೆಸೆದೆಸೆವರಿದಳವ್ವೆ.
ಅವನಿಪ್ಪ ಗೂಢವನು ನಿರ್ದಾಟಿಸುತ್ತಲವೊ
ನಿನ್ನನೆನ್ನಂಗದಲಿ ಕೊಲ್ಲದಿರ್ದಡೆ,
ಕಪಿಲಸಿದ್ಧಮಲ್ಲಿಕಾರ್ಜುನನಹೆ. ॥ ೩೬೧ ॥

೩೬೨

ಕೆರೆಯು ಕಟ್ಟಿಸುವವನೆ ಕರ್ಮಿ ;
ಆಗ್ರವನೆತ್ತಿಸುವವನೆ ಪಾತಕಿ ;
ಶಿವಾಲಯುವ ಕಟ್ಟಿಸುವವನೆ ದ್ರೋಹಿ ;
ಗುರುಹಿರಿಯುರ ಕಂಡರೆ ನಮಿಸುವಾತನೆ ಚಾಂಡಾಲ ;
ಸತ್ಕ್ರೀಯಿಂದ ಶಿವಾರ್ಚನೆಯು ಮಾಡುವಾತನೆ ಅನಾಚಾರಿ ;
ಇಂತೀ ಆಯಿವರನೊಳಗೊಂಬನೆ
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೬೨ ॥

೩೬೩

ಕೇಳವ್ವಾ ಕೆಳದಿ, ನಾನಿದ್ದ ಪರಿಗಳ ಹೇಳುವೆ ನಿನಗೆ :
ಏಲೆಯ ಮೇಲೆ ಸ್ಯೈವೆರಗಾಗಿ ತಲೆಯ ಬಿಟ್ಟಿದ್ದ ಪರಿಯ ;
ವಾಯುಭಕ್ಷಕಳಾಗಿದ್ದ ಪರಿಗಳ ನೋಡವ್ವಾ.
ಆನಿದ್ದ ಪರಿಗಳ ಕಂಡು ಕರುಣಿಸಿ ಗಂಡನಾದನು,
ಎನ್ನ ಕಪಿಲಸಿದ್ಧಮಲ್ಲಿನಾಥದೇವರ ದೇವ ನೋಡವ್ವಾ. ॥ ೩೬೩ ॥

೩೬೪

ಕೇಳವ್ವಾ ಕೆಳದಿ, ಹೋಗೆಲಗವ್ವಾ, ನೋಡವ್ವಾ ಕೆಳದಿ ;
ಅವನಿಪ್ಪ ಠಾವಿನ ನೆಲೆಯೆನಗೆ ತೋರೆಲಗವ್ವಾ ;
ಅವನಿಬ್ಬಟ್ಟಿಗಾರನು, ಇಬ್ಬೀಡಲಿಪ್ಪನು ;
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಕಂಡೆನು, ಬಾರಾ. ॥ ೩೬೪ ॥

೩೬೫

ಕೇಳವ್ವಾ, ಕೇಳವ್ವಾ ಕೆಳದಿ, ಹೇಳುವೆ ನಿನಗೆ :
ಆಹಾ ! ಕಂಗಳಲ್ಲಿ ಕಾಬೆ, ಮತ್ತೆ ಕಾಣೆ !
ಮನದಲ್ಲಿ ಪಿಡಿವೆ, ಪಿಡಿದು ಮತ್ತೆ ಕಾಣೆನವ್ವಾ !
ಮಿಂಚಿನ ರವೆರವೆಯಂತೆ ತೋರುವನಡಗುವ,
ನಮ್ಮ ಕಪಿಲಸಿದ್ಧಮಲ್ಲಿನಾಥದೇವನು ! ॥ ೩೬೫ ॥

೩೬೬

ಕೇಳು ಕೇಳಾ, ಎಲೆ ಅಯ್ಯಾ,
ಬಸವಣ್ಣನು ಅನಿಮಿಷಂಗೆ ಲಿಂಗವ ಕೊಟ್ಟ ಕಾರಣ ಮರ್ತ್ಯಕ್ಕೆ ಬಂದನೆಂಬರು.
ಸಟೆ ಸಟೆ! ಆ ನುಡಿಯ ಕೇಳಲಾಗದು. ಅದೇನು ಕಾರಣವೆಂದಡೆ
ಜೈನ ಚಾರ್ವಾಕ ಕಾಳಾಮುಖ ಎನಿಸುವ ಷಡ್ದರ್ಶನಾದಿಗಳು ಹೆಚ್ಚಿ,
ವಿಭೂತಿ ರುದ್ರಾಕ್ಷಿ ಪಂಚಾಕ್ಷರವನರಿಯದೆ
ನರಕಕ್ಕೆ ಭಾಜನವಾಗಿ ಪೋಪರೆಂದು,
ದೇವರು ನಂದಿಕೇಶ್ವರನ ಮುಖವ ನೋಡಲು,

ಆ ಪ್ರಶ್ನೆಯಿಂದ ಬಂದನಯ್ಯಾ ಬಸವಣ್ಣ ಪರಹಿತಾರ್ಥನಾಗಿ.
ದೇವರು ದೇವಿಯರಿಗೆ ಪ್ರಣವಾರ್ಥವ ಬೋಧಿಸುವಾಗ,
ದೇವಿಯರ ಮುಡಿಯಲ್ಲಿ ಹೊನ್ನ ತುಂಬಿಯಾಗಿ
ಷಣ್ಮುಖ ಕೇಳಿದ ಪ್ರಶ್ನೆಯಿಂದ ಬಂದನೆಂಬರಯ್ಯಾ, ಚೆನ್ನಬಸವಣ್ಣನು.
ಸಟೆ ಸಟೆ ! ಆ ನುಡಿಯು ಕೇಳಲಾಗದು. ಅದೇನು ಕಾರಣವೆಂದಡೆ :
ಷಡ್ವಿಧಸ್ಥಲಕ್ಕೆ ಸ್ಥಾಪನಾಚಾರ್ಯನಾಗಿ
ಸಕಲ ಪ್ರಮಥರ್ಗೆ ವೀರಶೈವವ ಪ್ರತಿಷ್ಠೆಯ ಮಾಡಲೋಸ್ಕರ
ಬಂದನಯ್ಯಾ ಚೆನ್ನಬಸವಣ್ಣನು.
ದೇವರ ಸಭೆಯಲ್ಲಿ ನಿರಂಜನನೆಂಬ ಗಣೇಶ್ವರನು
ಮಾಯಾಕೋಳಾಹಳನೆಂದು ಹೊಗಳಿಸಿಕೊಂಡು ಬರಲಾಗಿ,
ಆ ಸಮಯದಲ್ಲಿ ದೇವಿಯರು ದೇವರ
ಮಾಯಾಕೋಳಾಹಳನಾದ ಪರಿಯಾವುದೆಂದು ಬೆಸಗೊಳಲು,
ಆ ಪ್ರಶ್ನೆಯಿಂದ ಪ್ರಭುದೇವರು ಮರ್ತ್ಯಕ್ಕೆ ಬಂದರೆಂಬರಯ್ಯಾ.
ಸಟೆ ಸಟೆ ! ಆ ನುಡಿಯು ಕೇಳಲಾಗದು. ಅದೇನು ಕಾರಣವೆಂದಡೆ :
ಸುಜ್ಞಾನಿ ನಿರಹಂಕಾರರ ಭಕ್ತಿಗೋಸ್ಕರ ಪ್ರತ್ಯಕ್ಷವಾಗಿ,
ಬಸವಾದಿ ಪ್ರಮಥರ್ಗೆ ಬೋಧಿಸಿ,
ತನ್ನ ನಿಜಪದವ ತೋರಬಂದರಯ್ಯಾ ಪ್ರಭುದೇವರು.
ದಕ್ಷಸಂಹಾರದಿಂದ ಬರುವಾಗ ಗುಪ್ತಗಣೇಶ್ವರನ ನಿರಿ ಸೋಂಕಲು,
ಆ ಪ್ರಶ್ನೆಯಿಂದ ಬಂದನೆಂಬರಯ್ಯಾ ಮಡಿವಾಳನು.
ಸಟೆ ಸಟೆ ! ಆ ನುಡಿಯು ಕೇಳಲಾಗದು. ಅದೇನು ಕಾರಣವೆಂದಡೆ :
ಬಿಜ್ಜಳ ಪರವಾದಿಗಳ ಸಂಹರಿಸಲೋಸ್ಕರ,
ಬಸವಣ್ಣನ ನಿಮಿತ್ತವಾಗಿ ಬಂದನಯ್ಯಾ ಮಡಿವಾಳ ಮಾಚಯ್ಯಗಳು.
ಇಂತಿವರು ಮುಖ್ಯವಾದ ಏಳುನೂರು ಎಪ್ಪತ್ತು ಅಮರಗಣಂಗಳಿಗೆ
ವಾಸನಾಧರ್ಮವೆಂದಡೆ ಅಘೋರ ನರಕ ತಪ್ಪದಯ್ಯಾ.
ಇವರು ಮುಖ್ಯವಾದ ಪ್ರಮಥಗಣಂಗಳಿಗೆ ಶಾಪವೆಂದು ಕಲ್ಪಿಸಿದಡೆ,
ನಾಯಕ ನರಕ ತಪ್ಪದು, ಎಲೆ ಶಿವನೆ,
ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮಾಣೆ. ‖ ೩೬೬ ‖

೩೬೭

ಕೋಗಿಲ ಶಬ್ದ ಕಿವಿಗೆ ಕೂಗಿ ಹೋಯಿತ್ತು—
ಕಂಡ ಕಂಡ ಪುರುಷನನಪ್ಪಲು

ಅಪ್ಪಿನ ಸುಖ ಸಂತಾನವಾಯಿತ್ತೆನಗೆ.
ಅಪ್ಪಿನ ಸುಖದ ಸಂತಾನದ ಬಗೆಯ ಕೇಳಲು
ಕರಣಿಕ ಹೇಳಿದನಯ್ಯಾ ಮೂವತ್ತಾರು ಕುಮಾರರನು.
ಆ ಕುಮಾರರ ಕೂಟದಲ್ಲಿರಲು, ಹೆತ್ತ ಮಕ್ಕಳ ಕೂಟವೆಂದಡೆ,
ಹುಟ್ಟಿದರಯ್ಯಾ ಇನ್ನೂರ ಹದಿನಾರು ರಾಜಕುಮಾರರು.
ಆ ಕುಮಾರರ ಚೆಲುವಿಕೆಯ ಕಂಡು,
ಆ ಚೆಲುವಿಕೆಯ ಮಕ್ಕಳ ನೆರೆಯಲು
ಪತಿವ್ರತೆಯೆನಿಸಿಕೊಂಡು, ಒಬ್ಬನೆ ಪುರುಷನೆಂದಳಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ, ನಿಮ್ಮ ಹೆಂಡತಿ. ॥ ೩೬೭ ॥

೩೬೮

ಕ್ರೀಯಲ್ಲಿ ಮಗ್ನವಾದ ಬಳಿಕ ಐಕ್ಯದ ವಿಚಾರ ಬೇಕಿಲ್ಲ ;
ಗುರುವಿನ ಗದ್ದುಗೆ ಬೇಕಿಲ್ಲ ;
ಗಣಸಮ್ಮೇಳನದ ಪೂಜೆ ಮೊದಲೆ ಬೇಕಿಲ್ಲ ;
ಕಪಿಲಸಿದ್ಧಮಲ್ಲಿಕಾರ್ಜುನಂಗೆ ನಿನಗೆ ಭೇದವಿಲ್ಲೆಂಬುವುದು
ಈಗಳೆ ಬೇಕಿಲ್ಲ, ಕೇಳಾ ಪ್ರಭುವೆ. ॥ ೩೬೮ ॥

೩೬೯

ಕ್ಲುಪ್ತವ ಮಾಡಿ ತನಗೆ ಬೇಕೆನ್ನ ಪ್ರಸಾದಿ ಬಸವಣ್ಣ.
ಬಂದುದನತಿಗಳೆದು 'ಅಲ್ಲ ಒಲ್ಲೆ' ಎನ್ನ ಪ್ರಸಾದಿ ಬಸವಣ್ಣ.
ತಾನೆಂಬ ರೂಪ ಅಯ್ಯನೆಂಬ ರೂಪಿನಲ್ಲಿ ಲೋಪಮಾಡಿದ
ಪ್ರಸನ್ನ ಪ್ರಸಾದಿ ಕಾಣಾ, ಬಸವಣ್ಣ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೩೬೯ ॥

೩೭೦

ಗಂಗೆಯ ಘನ ಮುಟ್ಟಿದ ಪ್ರಾಣಿಗಳೆಲ್ಲಾ ದೇವತೆಗಳೆಂದಡೆ,
ಗಂಗೆಯ ಸಂಚಾರ ಸಾವಿರಾರು ಗಾವುದ.
ಅದರಲ್ಲಿಯ ಪ್ರಾಣಿಗಳು ಅನಂತಾನಂತ,
ಇಪ್ಪ ಜೀವಿಗಳೆಲ್ಲಾ ದೇವರಾದಡೆ,

ಸ್ವರ್ಗದಲ್ಲಿ ನಿಯಮಿತ ದೇವತೆಗಳೆಂಬುದು ಅಪ್ರಸಿದ್ಧ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೭೦ ॥

೩೭೧

ಗಂಗೆಯು ಮುಳುಗಿ ಬಂದವರೆಲ್ಲಾ ಪಾಪವ ಮಾಡಿ ಸತ್ತಡೆ,
ಅವರಿಗೆ ಪುಣ್ಯದ ಪದವಿಯುಂಟಾದಡೆ, ಗಂಗೆ ಘನವೆಂಬೆ.
ಮುಳುಗಿ ಪಾಪವ ಮಾಡದೆ ಸತ್ತುಹೋದೆಡೆ,
ಪುಣ್ಯದ ಪದವಿಯವರಿಗುಂಟಾದಡೆ ಘನವೆಂಬೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೭೧ ॥

೩೭೨

ಗಂಡನ ಕಂಡ ಹೆಂಡತಿ ಭಂಡಾದಳು ;
ನಕ್ಕರು ನಾಣುಗೆಟ್ಟರೈವತ್ತುಕೋಟಿ ಮಂದಿ.
ಉಂಡವರುಪವಾಸಿಗಳಾದರು,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೩೭೨ ॥

೩೭೩

ಗಂಡ ಬಾರನು ಎನ್ನ ತವರೂರಿಗೆ ಹೋಗುವೆನೆನಲು,
ನೋಡೆ, ನೋಡೆಲಗವ್ವಾ.
ಬೇಟೆಯನಾಡುವ ನಾಯತಲೆಯ ಕೊಯ್ದಿಟ್ಟು,
ತಾ ಬೇರೆ ಬೇಟೆಕಾರನಾದ.
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ನೆಲೆಯಲ್ಲಿ ನಿಲವ ಕೊಂಡನು ;
ಹುಚ್ಚನ ಸಂಗ ನಿಶ್ಚಯವಾಯಿತ್ತು. ॥ ೩೭೩ ॥

೩೭೪

ಗಮನವರಿತು ಸುಳಿಯಬಲ್ಲಡೆ
ಆಪ್ಯಾಯನವರಿತು ಉಣಬಲ್ಲಡೆ
ಇಚ್ಛೆಯರಿತು ಬೇಡಬಲ್ಲಡೆ
ಈ ತ್ರಿವಿಧ ಗುಣದ ಅನುವ ಬಲ್ಲವರು

ದೇವರಿಗೆ ದೇವರಾಗಿಪ್ಪರು ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನ ದೇವರದೇವಾ. ॥ ३೭೪ ॥

३೭೫

ಗಿರಿಗಹ್ವರದೊಳಗರಸಿ ತೊಳಲಿ ಬಳಲಿದೆನವ್ವಾ.
ನೋಡಿ ನೋಡಿ ಕಣ್ಣು ನಟ್ಟಾಲಿ ಬಿದ್ದವವ್ವಾ.
ನೀನು ಗುರುವಾಗಿ ಬಂದು ಎನ್ನ ಭವವ ಹರಿದೆ.
ನೀನು ಭಕ್ತ ಕಾರಣ ಪರಶಿವಮೂರ್ತಿಯೆಂದರಿದೆ ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ३೭೫ ॥

३೭೬

ಗುರು ಆಜ್ಞೆಯ ಮೀರಿದೆನಾದಡೆ,
ಎನ್ನ ಸುಕೃತವೆಲ್ಲ ಕಿಲ್ಬಿಷವಾಗಲಿ ದೇವಾ.
ಗುರುಸಂಜ್ಞೆಯ ಅರಿಯೆನಾದಡೆ,
ಎನ್ನ ಬ್ರಹ್ಮಸಂಜ್ಞೆ ಬತ್ತಿಹೋಗಲಿ ದೇವಾ.
ಗುರುದ್ವಾರವ ಕಾಯದಿದ್ದೆನಾದಡೆ,
ಎನ್ನ ಪಶ್ಚಿಮದ್ವಾರ ಸಿಗದೆ ಹೋಗಲಿ ದೇವಾ.
ಗುರುಪುತ್ರರ ಗುರುವೆನ್ನದಿದ್ದೆನಾದಡೆ, ಯಮಗುಂಡು ನನಗಿರಲಿ,
ಕಪಿಲಸಿದ್ಧಮಲ್ಲಿಕಾರ್ಜುನದೇವಾ. ॥ ३೭೬ ॥

३೭೭

ಗುರುಗದ್ದಿಗೆಯ ಏರಿಯಲ್ಲಿ ಭೇದವಿಲ್ಲೆಂಬರಿವು ಅಚ್ಚೊತ್ತಿದಡೆ,
ಹೇಳುವೆ ಕೇಳಯ್ಯಾ :
ಗುರುಗದ್ದಿಗೆಯಲ್ಲಿ ಹರಿವ ಮಶಕ ತಿಗುಣೆಗಳಿಗೆ ಅಭೇದವೊ ಭೇದವೊ ?
ಅಲ್ಲಿ ಭೇದಾಭೇದವೆಂಬ ಜ್ಞಾನವಿಲ್ಲ.
ಇದು ಕಪಿಲಸಿದ್ಧಮಲ್ಲಿಕಾರ್ಜುನ ಶರಣನ ಮನಕ್ಕೆ ಸೊಗಸದು,
ಕೇಳಾ ಪ್ರಭುವೆ. ॥ ३೭೭ ॥

३೭೮

ಗುರು ತೋರಿದನು ಲಿಂಗ_ಜಂಗಮವ.
ಪಾದೋದಕ_ಪ್ರಸಾದವ ಕೊಳಹೇಳಿದನಲ್ಲದೆ
ಇವ ತೊರೆಯ ಹೇಳಿದನೆ ?

ಅಹವೆಮ್ಮೆಂದು ಪ್ರಸಾದದ್ರೋಹಿಗಳಾಗಿ,
ನಾನೆ ಎಂದು ಲಿಂಗದ್ರೋಹಿಗಳಾಗಿ,
ವಿಭೂತಿ–ರುದ್ರಾಕ್ಷಿ ಸಾಕ್ಷಾತ್‌ಶಿವನೆಂದರಿಯದೆ,
ಅವರಾಚರಣೆಯ ನೋಡಿ ನಿಂದಿಸಿ
ಜಂಗಮದ್ರೋಹಿಗಳಾಗ ಹೇಳಿದನೆ ?
ಜಂಗಮದಲ್ಲಿ ಜಾತಿಯ, ಪ್ರಸಾದದಲ್ಲಿ ರುಚಿಯ,
ಲಿಂಗದಲ್ಲಿ ಮೃದುವನರಸುವ, ಸಮಯದಲ್ಲಿ ವಿಶ್ವಾಸವಿಲ್ಲದ
ಮಿಟ್ಟಿಯ ಭಂಡರ ತೋರದಿರಯ್ಯಾ ಎನಗೆ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೭೮ ॥

೩೭೯

ಗುರುಪಾದುಕೆಯ ಮೆಟ್ಟಿ
ಅಮರಗುಂಡದ ಮಲ್ಲಿಕಾರ್ಜುನಭೃತ್ಯ ಭಂಗಬಟ್ಟು
ಗುರುಕರುಣವ ಪಡೆಯಲಿಲ್ಲವೆ ?
ಗುರುಪಾದುಕೆಯ ಮೆಟ್ಟಿ
ಅಮರಶೇಖರನೆಂಬರಸು ಪಾದವ ಕಡಿಸಲಿಲ್ಲವೆ ?
ಗುರುಪಾದುಕೆಯ ಮೆಟ್ಟಿ
ರಾಜೇಂದ್ರಚೋಳ ತನ್ನ ರಾಣಿಯ ಸಂಗ ಬಿಡಲಿಲ್ಲವೆ ?
ಗುರುಪಾದುಕೆಯ ಮೆಟ್ಟಿ
ಸಿಂಹಚೋಳ ಪಂಡಿತರ ಪಾದ ತುಂಡಿಸಲಿಲ್ಲವೆ ?
ಇದು ಕಾರಣ,
ಗುರುಪಾದುಕೆ ಶ್ರೀಗುರು ಕಪಿಲಸಿದ್ಧಮಲ್ಲಿಕಾರ್ಜುನನ
ಪೂಜೆಯ ಚಮ್ಮಾವುಗೆಂದು ನಂಬಿದೆ.
ಹುಸಿಯಾದಡೆ, ಪ್ರಮಥಸಂಕುಲದಲ್ಲಿ ಗುರು ಕೊಟ್ಟ ಗುರುಮೂರ್ತಿ
ಇಲ್ಲದಂತೆ ಮಾಡಾ ಪ್ರಭುವೆ. ॥ ೩೭೯ ॥

೩೮೦

ಗುರುಪಾದೋದಕದಿಂದ ಲಿಂಗಮಜ್ಜನ ಮಾಡಬಹುದಲ್ಲದೆ,
ಬರಿಯುದಕದಿಂದೆರೆಯಬಹುದೆ ಕರಸ್ಥಲದ ತೇಜವ ?
ಮೀರಿದ ಮೀರಿದ ಮಾರ್ಗ ಹೇಳಿದರಯ್ಯಾ, ಎನ್ನ ಗುರುಗಳು.
ಅನ್ಯಜಲವನೆರೆದೆನಾದಡೆ, ತಲೆ_ತಲೆದಂಡ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೮೦ ॥

೩೮೧

ಗುರುಪಾದೋದಕದಿಂದ ಲಿಂಗಮಜ್ಜನ
ಮಾಡುವೆನೆಂಬ ಭಾಷೆ ಎನ್ನದಯ್ಯಾ.
ಗುರುಪಾದೋದಕದಿಂದ ಸ್ವಯಂಪಾಕರಚನೆ ಎಂಬ ಭಾಷೆ ಎನ್ನದಯ್ಯಾ.
ಗುರುಪಾದೋದಕದಿಂದ ಶಿರಃಸ್ನಾನ, ಅಂಗಸ್ನಾನ,
ಮುಖಸ್ನಾನ ಎಂಬ ಭಾಷೆ ಎನ್ನದಯ್ಯಾ.
ಗುರುಪಾದೋದಕದಿಂದ ಸರ್ವಶುದ್ಧ ಎಂಬ ಭಾಷೆ ಎನ್ನದಯ್ಯಾ.
ಇದು ಕಾರಣ, ಗುರುವೆ ಘನವೆಂದು,
ಗುರುಪಾದೋದಕವೆ ಎನ್ನ ಮೋಕ್ಷದ ಬೀಡೆಂದು ಡಂಗುರ ಹೊಯ್ವೆ.
ಇದು ಕಿಂಚಿತ್ ಹುಸಿಯಾದಡೆ ಕಪಿಲಸಿದ್ಧಮಲ್ಲಿಕಾರ್ಜುನನ
ನಾಯಕನರಕದಲ್ಲಿಕ್ಕದೆ ಮಾಣ್ಬನೆ ? ಮಡಿವಾಳ ತಂದೆ. ॥ ೩೮೧ ॥

೩೮೨

ಗುರುಪಾದೋದಕದಿಂದ ಸ್ಥೂಲ ದೇಹಶುದ್ಧಿ ;
ಕ್ರಿಯಾಪಾದೋದಕದಿಂದ ಸೂಕ್ಷ್ಮ ದೇಹಶುದ್ಧಿ ;
ಜ್ಞಾನಪಾದೋದಕದಿಂದ ಕಾರಣ ದೇಹಶುದ್ಧಿ ;
ಗುರುಪಾದೋದಕದಲ್ಲಿ ಇಷ್ಟಲಿಂಗ ಸಂಬಂಧ ;
ಕ್ರಿಯಾಪಾದೋದಕದಲ್ಲಿ ಪ್ರಾಣಲಿಂಗ ಸಂಬಂಧ ;
ಜ್ಞಾನಪಾದೋದಕದಲ್ಲಿ ಭಾವಲಿಂಗ ಸಂಬಂಧ.
ಅದು ಕಾರಣ, ಪಾದೋದಕವೆ ಪ್ರತ್ಯಕ್ಷ ಪರಬ್ರಹ್ಮ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೮೨ ॥

೩೮೩

ಗುರುಪಾದೋದಕವಿಲ್ಲದಲ್ಲಿ, ಜಂಗಮಪಾದೋದಕವಿಲ್ಲದಲ್ಲಿ,
ಪ್ರಣವೋದಕದಿಂದಂಗಸ್ನಾನ ಮಾಳ್ಪುದಯ್ಯಾ.
ಪ್ರಣವೋದಕದಿಂದ ಲಿಂಗಸ್ನಾನ ಲಿಂಗಾಭಿಷೇಕ ಮಾಳ್ಪುದಯ್ಯಾ.
ಗರುವಿನಲ್ಲಿ ಗುರುಪಾದೋದಕವುಂಟು,
ಲಿಂಗಪಾದೋದಕವುಂಟು, ಜಂಗಮಪಾದೋದಕವುಂಟು.
ಲಿಂಗವಲ್ಲಿ ಗುರುಪಾದೋಕವಿಲ್ಲ, ಜಂಗಮ ಪಾದೋದಕವಿಲ್ಲದ ನಿಮಿತ್ತ
ಜಂಗಮವ ಬರಿಸಿಕೊಂಡು ಕ್ರೀಯ ಮಾಳ್ಪ ಭಕ್ತನ ಪಾದಕ್ಕೆ
ನಮೋ ನಮೋ ಎಂಬೆ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೮೩ ॥

೩೮೪

ಗುರುಪಾದೋದಕವೆಂದು, ಕ್ರಿಯಾಪಾದೋದಕವೆಂದು,
ಜ್ಞಾನಪಾದೋದಕವೆಂದು ಮೂರು ತೆರನುಂಟು.
ಗುರುಪಾದೋದಕವೆಂದಡೆ,
ಅಯ್ಯಗಳ ಪಾದಗಳ ಎರಡಂಗುಲಿಗಳಲ್ಲಿ,
ಪಾದಗಳೆರಡರ ಮೂಲಾಂಗುಲಿ ಹಿಮ್ಮಡಗಳ ಅಗ್ರದಲ್ಲಿ,
ತನ್ನ ಪಂಚಾಂಗುಲಿಯಿಂದ ಉದಕವನದ್ದಿ,
ಮಂತ್ರವಳಹುವುದೆ ಗುರುಪಾದೋದಕ.
ಕ್ರಿಯಾಪಾದೋದಕವೆಂದಡೆ,
ಪಾದದ್ವಯದ ಅಂಗುಲಿಗಳಲ್ಲಿ ಶಿವನಶಕ್ತಿಯ ಪ್ರಣವವ ಬರೆದು,
ಭಸ್ಮವ ಧರಿಸಿ, ನೇತ್ರದಳಗಳ ಅರ್ಪಣಂಗೈದು,
ತನ್ನ ತರ್ಜನಿಯು, ಮೂರು ವೇಳೆ ಪ್ರಣವಸಹಿತ ಪಂಚಾಕ್ಷರೀಮಂತ್ರದಿಂ
ಗುರುಪಾದೋದಕವನೆದ್ದಿ ಎಳೆಯುವುದೆ ಕ್ರಿಯಾಪಾದೋದಕ.
ಜ್ಞಾನಪಾದೋದಕವೆಂದಡೆ,
ದಶಾಂಗುಲಿಗಳಲ್ಲಿ ದಶಪ್ರಣವ ಮಂತ್ರದಿಂದ ಭಸ್ಮದಿಂ ಲಿಖಿಸಿ,
ಷೋಡಶೋಪಚಾರದಿಂ ಪೂಜೆಯ ಮಾಡಿ,
ಎರಡಂಗುಲಿ ಮಧ್ಯದಲ್ಲಿ ಮೂರು ಸ್ಥಾನಂಗಳಲ್ಲಿ,
ಪಂಚಾಕ್ಷರೀತ್ರಯದಿಂದ ಎರೆಯುವುದೆ ಜ್ಞಾನಪಾದೋದಕ.
ಇಂತಪ್ಪ ಪಾದೋದಕತ್ರಯಂಗಳ ಸೇವಿಸಿ ಸುಖಿಸಬಲ್ಲಡೆ
ಆತನೆ ಪರಾತ್ಪರವಸ್ತು, ಕಪಿಲಸಿದ್ಧಮಲ್ಲಿಕಾರ್ಜುನದೇವಾ. ॥ ೩೮೪ ॥

೩೮೫

ಗುರುಪಾದೋದಕ ಸಕಲಕ್ರಿಯೆಗಳಿಗೆ ಬರುವುದು.
ಕ್ರಿಯಾಪಾದೋದಕ ಭಸ್ಮಶುದ್ಧತೆಗೆ ಬರುವುದು.
ಜ್ಞಾನಪಾದೋದಕ ಅರ್ಪಣಂಗೈವುದಕ್ಕೆ ಬರುವುದು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೮೫ ॥

೩೮೬

ಗುರುವಾಕ್ಯದಿಂದ ನಾರದನಿಗನಂತ ಜನ್ಮ ಪ್ರಳಯವಾಯಿತ್ತು.
ಗುರುವಾಕ್ಯದಿಂದ ಚಿನ್ನನಶಿವಾಚಾರ್ಯರಿಗೆ ಬೋಧರತ್ನ ದೊರಕಿತ್ತು.

ಗುರುವಾಕ್ಯದಿಂದ ಮಳೆಯ ಮಲ್ಲೇಶಂಗೆ
ಪಾತಾಳ ಪದಾರ್ಥ ಸಿದ್ಧಿಯಾಯಿತ್ತು.
ಗುರುವಾಕ್ಯದಿಂದ ವೀರಸೇನಂಗೆ ರಣಭೂಮಿ ಕಂಪಿಸಿತ್ತು.
ಗುರುವಾಕ್ಯದಿಂದ ಅನಂತಜನರಿಗೆ ಅನಂತಫಲಗಳಾದವು.
ಗುರುವಾಕ್ಯದಿಂದ ಪ್ರಮಥರ ಮನೆಯಲ್ಲಿ ಪರಮಾತ್ಮ ಸಂಚರಿಸಿದನು.
ಗುರುವಾಕ್ಯದಿಂದ ಆ ರಾಮಸಿದ್ಧನಿಗೆ ಅಘೋರಮೂರ್ತಿ ಪ್ರಾಪ್ತವಾಯಿತ್ತು.
ಇದು ಕಾರಣ, ಗುರುವೆ ಘನವೆಂದರಿದು
ಗುರುವಾಗಿ ಗುರುಪೂಜೆಯ ಮಾಡಬೇಕಲ್ಲದೆ
ಗುರುಸಮ್ಮುಖದಲ್ಲಿ ಗದ್ದುಗೆಯನೇರಿದಡೆ,
ಕಪಿಲಸಿದ್ಧಮಲ್ಲಿಕಾರ್ಜುನ ಕರಸಿತಗ, ಕೇಳಾ ನಿಜಗುಣಯ್ಯಾ. ॥ ೩೮೬ ॥

೩೮೭

ಗುರುವಿಂಗಾದಡೆಯೂ ಬಸವಣ್ಣನೆ ಬೇಕು ;
ಲಿಂಗಕ್ಕಾದಡೆಯೂ ಬಸವಣ್ಣನೆ ಬೇಕು ;
ಜಂಗಮಕ್ಕಾದಡೆಯೂ ಬಸವಣ್ಣನೆ ಬೇಕು.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿಮಗೂ ಎನಗೂ ನಿಮ್ಮ ಶರಣರಿಗೂ ಬಸವಣ್ಣನೆ ಬೇಕು. ॥ ೩೮೭ ॥

೩೮೮

ಗುರುವಿಂದನ್ಯ ದೈವವಿಲ್ಲೆಂಬುದಕ್ಕೆ ಆಗಮವಾಣಿಯ ಸಾಕ್ಷಿ.
ಅದೆಂತೆಂದಡೆ :
"ಗುರುದೇವೋ ಮಹಾದೇವೋ ಗುರುದೇವಸ್ಸದಾಶಿವಃ ।
ಗುರುದೇವಾತ್ಪರಂ ನಾಸ್ತಿ ತಸ್ಮೈ ಶ್ರೀಗುರುವೆ ನಮಃ ॥
ಗುರುಃ ಶಂಭುರ್ಗುರುರ್ಜ್ಞಾನಂ ಗುರುರ್ಮಾತಾ ಗುರುಃ ಪಿತಾ ।
ಗುರುರ್ಬಂಧುರ್ಗುರು ಸಾಕ್ಷಾದ್ದೇವತಾಗಣಪುಂಗವಃ ॥
ಅನುಷ್ಠಾನಾದಿಕಾಂ ಪೂಜಾಂ ಯಃ ಕರೋತಿ ಗುರುಂ ವಿನಾ
ಯಾತಿ ನೀಚಾನಿ ಜನ್ಮಾನಿ ತಸ್ಮಾದ್ಗುರುವರಂ ಭಜೇತ್ ॥
ಷಣ್ಮಾಸೇ ವ್ಯಾಪಿ ವರ್ಷೇ ವಾ ವರ್ಷೇ ವಾ ದ್ವಾದಶಾತ್ಮಕೇ ।
ಗುರೋರಾಲೋಕನಂ ಯಸ್ತು ನ ಕರೋತಿ ಸ ಪಾಪವಾನ್ ॥"
ಇದನೆ ಪ್ರಮಾಣವಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೩೮೮ ॥

೩೮೯

ಗುರುವಿಗೆ ಘನಗುರು ಮಾಚಿತಂದೆಗಳು ;
ಲಿಂಗಕ್ಕೆ ಘನಲಿಂಗ ಮಾಚಿತಂದೆಗಳು ;
ಜಂಗಮಕ್ಕೆ ನಿರಂಜನ ವಸ್ತು ನಮ್ಮ ಮಾಚಿತಂದೆಗಳು.
ಅಂತಪ್ಪ ಮಾಚಿತಂದೆಗೆ ಪೇಳ್ವ ತ್ರಾಣ ಎನ್ನಲ್ಲಿಹುದೆ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೮೯ ॥

೩೯೦

ಗುರುವಿಗ್ರಹವಿಡಿದು ಸರ್ವಾನುಗ್ರಾಹಕ ನೀನೆ ದೇವಾ.
ಚರವಿಗ್ರಹವಿಡಿದು ಚರಾಚರಂಗಳಿಗೆ ಚರಿಸಿ
ಸುಕೃತಿಗತಿಯನೀವ ಚರರೂಪ ನೀನೆ ದೇವಾ.
ಲಿಂಗವಿಗ್ರಹವಿಡಿದು ಸರ್ವರಿಂ ಪೂಜೆಗೊಂಡು
ಅವರ ವರಾಭಿಷ್ಟಭೋಗವ ಕೊಡುವ ದೇವ ನೀನೆ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೯೦ ॥

೩೯೧

ಗುರುವಿಡಿದು ತನುವಾಯಿತ್ತು ;
ಲಿಂಗವಿಡಿದು ಮನವಾಯಿತ್ತು ;
ಜಂಗಮುವಿಡಿದು ಧನವಾಯಿತ್ತು ;
ಬಸವಣ್ಣವಿಡಿದು ಭಕ್ತಿಯಾಯಿತ್ತು
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೩೯೧ ॥

೩೯೨

ಗುರುವಿನ ಭಕ್ತಿಕ್ರೀಯು ಬೆಳಗಿನ್ನೆಂತೊ ?
ಶಿಷ್ಯನಳಿವ ಪೂಜಾಸಂಭ್ರಮವಿನ್ನೆಂತೊ ?
ಪ್ರಮಥರ ಶಿವಲಿಂಗಕೂಟವಿನ್ನೆಂತೊ ?
ಪ್ರಭುಗಳ ನಿರೀಕ್ಷಣೆಯಿನ್ನೆಂತೊ ?
ಮಡಿವಾಳನ ಮಹಾನುಭಾವವಿನ್ನೆಂತೊ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೯೨ ॥

೩೯೩

ಗುರುವಿಲ್ಲದಲ್ಲಿ ಜಂಗಮವಿಲ್ಲವೆ ?
ಜಂಗಮವಿಲ್ಲದಲ್ಲಿ ತಾ ಜಂಗಮವಲ್ಲವೆ ?
ತಾ ಜಂಗಮನಲ್ಲದಲ್ಲಿ ಲಿಂಗವಿಲ್ಲವೆ ?
ಲಿಂಗೋದಕದಿಂದ ಸರ್ವಾಚಾರ ಶುದ್ಧವಾಗವೆ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೯೩ ॥

೩೯೪

ಗುರುವಿಲ್ಲದೆ ಲಿಂಗಪೂಜೆಯ ಮಾಡಿದೆನಾದಡೆ
ಆ ಪೂಜೆ ಮೃತಮಹಿಷನ ಮೆರವಣಗೆಯಂತೆ.
ಗುರುವಿಲ್ಲದೆ ಗಣಾರಾಧನೆಯ ಮಾಡಿದೆನಾದಡೆ
ಪತಿವ್ರತೆಯರಿಲ್ಲದ ಪಾರ್ವತಿಯರ ಪೂಜೆಯಂತೆ.
ಗುರುವಿಲ್ಲದೆ ಲಗ್ನವ ಮಾಡಿದೆನಾದಡೆ
ಶೂಲವನೇರುವ ಪುರುಷನ ಭೋಗದಂತೆ.
ಗುರುವಿಲ್ಲದೆ ದೀಕ್ಷೆಯ ಮಾಡಿದೆನಾದಡೆ
ಪಾರ್ವತಿಯರಿಲ್ಲದ ರುದ್ರರಾಜನ ಮನೆಯಂತೆ
ಕಪಿಲಸಿದ್ಧಮಲ್ಲಿಕಾರ್ಜುನದೇವಾ. ॥ ೩೯೪ ॥

೩೯೫

ಗುರುವೆ ಎನ್ನ ತನುವಿಂಗೆ ಲಿಂಗದೀಕ್ಷೆಯ ಮಾಡಿ
ಎನ್ನ ಜ್ಞಾನಕ್ಕೆ ಸ್ವಾನುಭಾವದೀಕ್ಷೆಯ ಮಾಡಿ
ಎನ್ನ ತನು ಮನ ಧನದಲ್ಲಿ ವಂಚನೆಯಿಲ್ಲದೆ
ಮಾಡಲೆಂದು ಜಂಗಮದೀಕ್ಷೆಯ ಮಾಡಿ
ಎನ್ನ ಸರ್ವಾಂಗವು ನಿನ್ನ ವಿಶ್ರಾಮಸ್ಥಾನ
ಶುದ್ಧಮಂಟಪವಾದ ಕಾರಣ,
ಲೋಕವ್ಯಾಪ್ತಿಯನರಿಯದೆ ಲೋಕ ಎನ್ನೊಳಗಾಯಿತ್ತು,
ಆ ಲೋಕಕ್ಕೆ ಹೊರಗಾದೆ,
ಅದೇನು ಕಾರಣ ? ಜನನ ಮರಣ ಪ್ರಳಯಕ್ಕೆ ಹೊರಗಾದೆನಾಗಿ
ಗುರುವೆ ಸದ್ಗುರುವೆ ಎನ್ನ ಭವದ ಬೇರ ಹರಿದೆ ಗುರುವೆ.
ಭವಪಾಶವಿಮೋಚ[ನ]ನೆ,

ಅನ್ವಯ ಮನದ ಸರ್ವಾಂಗಲೋಲುಪ್ತ
ಭುಕ್ತಿಮುಕ್ತಿ ಫಲಪ್ರದಾಯಕ ಗುರುವೆ ಬಸವಣ್ಣ,
ಕಪಿಲಸಿದ್ಧಮಲ್ಲಿಕಾರ್ಜುನ ಚೆನ್ನಬಸವಣ್ಣನಾಗಿ
ಪ್ರಭು ಮೊದಲಾಗಿ ಅಸಂಖ್ಯಾತರನೆಲ್ಲರನು ತೋರಿದ ಗುರುವೆ. ॥ ೩೯೫ ॥

೩೯೬

ಗುರುಸಮ್ಮುಖದಲ್ಲಿ ಲಿಂಗಪೂಜೆಯ ಮಾಡಲಾಗದು.
ಗುರುಸಮ್ಮುಖದಲ್ಲಿ ತಾನೊಂದಾಸನದ ಮೇಲೆ ಇರಲಾಗದು.
ಗುರುಸಮ್ಮುಖದಲ್ಲಿ ವೀಳ್ಯವ ಭೋಗಿಸಲಾಗದು.
ಗುರುಸಮ್ಮುಖದಲ್ಲಿ ಸ್ವೇಚ್ಛಾಚಾರಿಯಾಗಿ ನಿದ್ರೆಗೈಯಲಾಗದು.
ಗುರುಸಮ್ಮುಖದಲ್ಲಿ ವಿದ್ಯೆಯ ಹೇಳಲಾಗದು.
ಗುರುಸಮ್ಮುಖದಲ್ಲಿ ಏನೊಂದು ನುಡಿಯಲಾಗದು.
ಗುರುಸಮ್ಮುಖದಲ್ಲಿ ಹಾಸ್ಯವ ಮಾಡಲಾಗದು.
ಅದು ಕಾರಣ, ಇಂತಪ್ಪ ಕೃತ್ಯಂಗಳ ಮಾಡಿದೆನಾದಡೆ,
ಕಪಿಲಸಿದ್ಧಮಲ್ಲಿಕಾರ್ಜುನದೇವರು, ಮನದಿಂದ ಮಹಾಜ್ಞಾನದಿಂದ
ದೂರಾಗಲಿ ಕೇಳಾ ಪ್ರಭುವೆ. ॥ ೩೯೬ ॥

೩೯೭

ಗುರುಸ್ವಾಮಿ ಧರಿಸುವ ಮುಡಿಯ ನಾ ಸುತ್ತಿದೆನಾದಡೆ,
ಶಿರವು ಬಿರಿದು ಬೀಳಾಗಲಿ ದೇವಾ.
ಗುರುಸ್ವಾಮಿ ಧರಿಸುವ ಕಂಠಮಾಲೆಯ ನಾ ಧರಿಸಿದೆನಾದಡೆ,
ಕಂಠ ಕತ್ತರಿಸಿ ಹೋಗಲಿ ದೇವಾ.
ಗುರುಸ್ವಾಮಿ ಪಾನವ ಮಾಡುವ ಗಿಂಡಿಯಲಿ ನಾ ಪಾನವ ಮಾಡಿದೆನಾದಡೆ
ನಾಲಗೆ ಸೀಳಿಹೋಗಲಿ ದೇವಾ.
ಗುರುಸ್ವಾಮಿ ಶಯನಿಸುವ ಸುಪ್ಪತ್ತಿಗೆಯಲ್ಲಿ ನಾ ಶಯನ ಮಾಡಿದೆನಾದಡೆ
ಎನ್ನಂಗದಲಿ ಕ್ರಿಮಿಗಳು ಬೀಳಲಿ ದೇವಾ,
ಕಪಿಲಸಿದ್ಧಮಲ್ಲಿಕಾರ್ಜುನದೇವಾ. ॥ ೩೯೭ ॥

೩೯೮

ಗ್ರಾಮಕ್ಕೊಬ್ಬರಸಿಲ್ಲದೆ ಗ್ರಾಮುವಳುತ್ತಿದೆ ನೋಡಾ.
ಗ್ರಾಮುವನಾಳುವ ಅರಸಿನ ಮನೆಯಲ್ಲಿ ಸವೆ ಬೆಳೆದಿದೆಯಯ್ಯಾ.

ಗ್ರಾಮಕ್ಕೆ ಬಂದ ಕಟ್ಟರಸಿಂಗೆ ಪಟ್ಟವ ಕಟ್ಟಿ,
ಅರಸಿನ ಮನೆಗಳನನುಗೆಯ್ವು, ಹರುಷದಿಂದ ಕಾಣಿಕೆಯಿಕ್ಕಿಸಿಕೊಳ್ಳಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೩೯೮ ॥

೩೯೯

ಗ್ರಾಮ ಪಟ್ಟಣವೈದು ಐದೈದು ನಾಯಕರು
ತೋರಿಪ್ಪರದ ಕಂಡು ಪ್ರತ್ಯಯವನು.
ಸೀಮೆ ಸಂಬಂಧವನು ಮೀರಿಪ್ಪ ನಾಯಕರು
ತಾವು ನಿಂದರು ಗಡಿಯ ಸಂಬಂಧದ.
ಪರದಳವು ಬರಲಾಗಿ ಅರಿಯದೆ ಇದಿರಾಡಿ
ಅರಿತು ಬಿಟ್ಟರು ವೀರಧೀರರಾಗಿ.
ಅರಿವು ಮರಹನೆ ನುಂಗಿ ಕುರುಹುಗೆಟ್ಟಾ ಸೀಮೆ
ತೆರಹಿಲ್ಲದಾತ [ತಾ] ಪರಮಯೋಗಿ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯನೆಂಬ
ತೆರಹಿನ ಪಟ್ಟಣದ ಪ್ರಭೆಯಿಂತುಟು. ॥ ೩೯೯ ॥

೪೦೦

ಘರ್ಜನೆಯಿಂ ಸಿಡಿಲು ಅಡಸಿ ಬಂದು ಪೊಯ್ವುತ್ತಿರಲಿ,
ಪೊಯ್ಯಪೊಲ್ಲದೆ ವಾಯುವಿಮಾನಂಗಳಿಂದ [ಎತ್ತಿಕೊಳ್ಗೆ],
ಎತ್ತಿಕೊಂಡಡೆ, ಪುನಃವಿಚ್ಛಂದವಾಗದೊಂದೆಯಂದದಲ್ಲಿಪ್ಪಂತಪ್ಪ
ನಿಮ್ಮದೊಂದು ಸಮತಾಗುಣ ಎನ್ನನೆಂದು ಬಂದು ಪೊದ್ದಿಪ್ಪುದು ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೦೦ ॥

೪೦೧

ಘಟಸರ್ಪನ ಫಣಾಮಣಿಯ ಬೆಳಗಿನ ಪ್ರಭೆ ಓರಿದು_
ಸ್ಥಿರವಾಗಿ ಇರಬಲ್ಲಡೆ.
ನಿಸ್ತಾರ, ನಿಸ್ತಾರ, ನಿಸ್ತಾರವೊ !
ಸತ್ಯಪ್ರಭೆಯಿಂದಲು ವಿಚಿತ್ರಸ್ಥಾನವಾದಡೆ,
ಮತ್ತೆ ನಿತ್ಯ ತಪ್ಪದು,
ಕಪಿಲಸಿದ್ಧಮಲ್ಲಿನಾಥಯ್ಯನ. ॥ ೪೦೧ ॥

೪೦೨

ಘನಕ್ಕೆ ಘನವಾದ ಪರವಸ್ತು ಲಿಂಗಮೂರ್ತಿ ಬಂದಿತ್ತೆನ್ನ ಕರಸ್ಥಲಕ್ಕೆ,
ಬಂದ ಲಿಂಗಮೂರ್ತಿಯಂ ಕಂಡು ಮನ ಹಾರೈಸಿ ತನು ಕರಗಿತ್ತು.
ಆ ಲಿಂಗವಂ ಕಂಡು ಕಪಿಲಸಿದ್ಧಮಲ್ಲಿನಾಥನೆನ್ನ
ಅಂತರಂಗದಲ್ಲಿದ್ದನು ॥ ೪೦೨ ॥

೪೦೩

ಘಾತವಪ್ಪ ಸರಧಿ ಪ್ರೇತವಪ್ಪ ಅಡವಿ
ಪಾತಕ ಭವಕೆ ಬಹ ಕೂಪದೊಳಗೆ
ನೂಕಿದರೆ ಬೀಳೆ, ನಿನ್ನಾಧಾರವುಂಟು.
ಅನಾದಿಸಂಸಿದ್ಧ ಯೋಗಮೂರ್ತಿ
ನಿನ್ನ ಒಡನಾಡಿ ನಾ ನಿನ್ನ ಠಕ್ಕನರಿಯೆನೆ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೦೩ ॥

೪೦೪

ಚರಣ ಲಿಂಗವಾಗಿ ಕರ ಜಿಹ್ವೆಯಾಗಿ
ಮಸ್ತಕದಲ್ಲಿ ಸಕಲ ಬ್ರಹ್ಮಾಂಡಗಳ ವ್ಯಾಪ್ತಿಯನು
ಅಕ್ಷರವೆರಡರಲ್ಲಿ ಆಂದೋಳವಂ ಮಾಡಿ
ಹರಿಯಲೀಯ್ಯದೆ ಹದುಳ ಮಾಡಿದಾತ ಗುರು !
ಎನ್ನ ಶಬ್ದ-ಸ್ಪರ್ಶ-ರೂಪು-ರಸ-ಗಂಧ-
ಧ್ಯಾನ-ಧಾರಣ-ಸಮಾಧಿ ಸನ್ನಿಹಿತ ಗುರು !
ದೀಕ್ಷೆ ಶಿಕ್ಷೆ ಸ್ವಾನುಭಾವ ಸಂಪನ್ನತೆಯನುಳ್ಳಾತ ಗುರು !
ಆದ್ಯಂತರದಲ್ಲಿ ಸಹಸ್ರ ಕಮಲದೊಳಗಣ
ಕಂಜಕರ್ಣಿಕೆಯ ಮನ್ಮಸ್ತಕದಲ್ಲಿ ಒಪ್ಪಿಪ್ಪ
ಅಕ್ಷರದ್ವಯದ ಆಂದೋಳನವನುಳ್ಳಾತ ಗುರು !
ಅನಾಮಯಸ್ಥಾನದಲ್ಲಿ ಬಹುದಳದ ಕಮಲದೊಳಗೆ ಒಪ್ಪಿಪ್ಪ
ಹಮ್ಮೆಂಬ ಬಿಂದುವಿನ ಆನಂದ ಮಧ್ಯಸ್ಥಾನದ
ಶುದ್ಧ ಸಿಂಹಾಸನವನಿಕ್ಕಿ ಅದೆ ಮನೆಯಾಗಿರಲುಳ್ಳಾತ ಗುರು !
ನಿತ್ಯ ನಿರಂಜನರೂಪೆ ತದ್ರೂಪಾಗಿ
ಶಕ್ತಿಪಂಚಕದ ಅಜ್ಞೆಯ ಹೊದ್ದದಿಪ್ಪಾತ ಗುರು !
ಅನಿಮಿಷಸ್ಥಾನದಲ್ಲಿ ಇಪ್ಪ ಶಕ್ತಿತ್ರಯದ

ಕ್ರಿಯಾಕಾರವ ನಡೆಸುವಾತ ಗುರು !
ತನಗುಣಪ್ರಾಪಂಚಿಕವನತಿಗಳೆದು
ಸೀಮೆಯ ಮೀರಿದ ಸಂಬಂಧಿ
ಪ್ರಮಾಣಿಲ್ಲದ ಪರಮಗುರುವೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೦೪ ॥

೪೦೫

ಚಿರಂಜೀವಿ ಎಂದಡೆ ನಿರೋಗಿ ; ಚಿರಂಜೀವಿ ಎಂದಡೆ ಸಶಕ್ತ ;
ಚಿರಂಜೀವಿ ಎಂದಡೆ ಬಹುಕಾಲ ಬದುಕುವವನು.
ಚಿರಂಜೀವಿ ಎಂದಡೆ ಪ್ರಳಯವ ಮೀರುವವನಲ್ಲ.
ಕಪಿಲಸಿದ್ಧಮಲ್ಲಿಕಾರ್ಜುನಾ, ಬ್ರಹ್ಮವೆಂಬ ಶಬ್ದ ಬೇರುಂಟೆ ? ॥ ೪೦೫ ॥

೪೦೬

ಜಗದೆರೆಯ ಮಾಡಿದನೊಂದು ಕುರಿಮರಿಯ.
ಆ ಕುರಿಮರಿ ಮೇಯುತ್ತಿದೆ.
ಸರ್ವಜಗದವರೆಲ್ಲ ಅನಂತರಕ್ಕಸರು ಹಿಂಸೆ ಮಾಡುತಲೈದಿದರು.
ಹೋದ ರಕ್ಕಸರು ಸತ್ತರು : ಇದ್ದ ಕುರಿಮರಿ ಇದ್ದಂತಿಪ್ಪುದು !
ಇದೇನು ಕೌತುಕ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೦೬ ॥

೪೦೭

ಜಗದೊಳಹೊರಗೆ ನೀನಿಪ್ಪೆಯಯ್ಯಾ.
ಇಪ್ಪ ನೆಲೆಯು ಹೋಹಗತಿಯು ಕಾಣಲಾರಿಗೆ ಬಾರದಯ್ಯಾ.
ನೋಡ ನೋಡಲಿ ಅಡಗಿ ಹೋಹೆ
ಎನ್ನ ಕಪಿಲಸಿದ್ಧಮಲ್ಲಿನಾಥಾ, ನೀ ಶೂನ್ಯನಯಾ. ॥ ೪೦೭ ॥

೪೦೮

ಜಗವನಾಡಿಸುವನು, ಜಗವನೇಡಿಸುವನು.
ಜಗದ ನಟನಾಟಕನ ಪರಿಯ ನೋಡಯ್ಯಾ !
ಜಗವ ರಂಜಿಸುವನು, ಜಗವ ಭಂಜಿಸುವನು
ಜಗದೊಳಗಿಪ್ಪನು. ಜಗದ ಹೊರಗಿಪ್ಪನು.
ಜಗಕೆ ತೋರಿಯೂ ತೋರದಂತಿಪ್ಪನು.
ದರ್ಪಣದೊಳಗಣ ಪ್ರತಿಬಿಂಬದಂತಿಪ್ಪನು.
ಉದಕ–ಪದ್ಮಪತ್ರದಂತಿಪ್ಪನು.

ನಿಜಗುರುವೆ, ಸ್ವತಂತ್ರ, ಕಪಿಲಸಿದ್ಧಮಲ್ಲೇಶ್ವರನೆ,
ನೋಟ ತೀರಲೊಡನೆ ಜಗದಾಟ ತೀರಿತು. ॥ ೪೦೮ ॥

೪೦೯

ಜನರ ಗೊತ್ತೆಂಬಲ್ಲಿ,
ಪಾಪವ ಕಳೆದು ಪುಣ್ಯರಾಗಬೇಕೆಂಬರುಹು ತಲೆದೋರ್ಪುದಲ್ಲದೆ,
ಭೋಗರಹಿತ, ಪುಣ್ಯದಾಶೆಯಿಲ್ಲ.
ಪುಣ್ಯದಾಶೆ ಇದ್ದಡೆ, ನಿಮ್ಮ ಲಿಂಗದಾಶೆ ಎನಗೆ ಸತ್ಯ ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೦೯ ॥

೪೧೦

ಜನಿತವಿಲ್ಲದೆ ನಿರ್ಜನಿತನಾದೆ
ಸ್ಥೂಲ ಸೂಕ್ಷ್ಮದಲ್ಲಿ ನಿತ್ಯನಾದೆ
ನಿಮ್ಮ ಘನವ ನೋಡಲ್ಕೆ ನಿಗಮಕ್ಕಭೇದ್ಯನು.
ಗುರುಕರುಣದಿಂದ ಎನ್ನ ಕರಸ್ಥಲಕ್ಕೆ ಬಂದೆ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೧೦ ॥

೪೧೧

ಜಪ ತಪವ ಮಾಡಿದಡೇನಯ್ಯಾ ತಾನು ?
ನೇಮ ಸಮಾಧಿಯ ಮಾಡಿದಡೇನಯ್ಯಾ,
ನಿಮ್ಮ ಪಾದೋದಕ ಪ್ರಸಾದವ ಮರ್ಮವನರಿಯದನ್ನಕ್ಕ ?
ಮುಂಡೆಯ ಬದುಕಿಂಗೆ ಮೂಲಸ್ವಾಮಿಯ ಕುರುಹಿಡಬಹುದೆ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೧೧ ॥

೪೧೨

ಜಯಸಮಯವನಪ್ಪಿಪ ಕರ ಬಸವಾ,
ಕರುಣಗೃಹ, ವಿಮಲ ಶುದ್ಧಸಮಯ ಭಾವಭರಿತ,
ಭರಿತಪೂರ ಪೂರೋಪಜೀವ, ನಮೋ ಬಸವಾ,
ನಮೋ ಪ್ರಾಣಲಿಂಗಿ ಬಸವಾ,
ಕಪಿಲಸಿಧ್ಧಮಲ್ಲಿನಾಥಾ, ನಮೋ ಬಸವಾ. ॥ ೪೧೨ ॥

೪೧೩

ಜಲದ ಸಿಂಹಾಸನದ ಕೆಲದಲಷ್ಟಮು ಬೆಟ್ಟ
ಕುಲಗಿರಿಗಳೆರಡು ಮತ್ತಿಕ್ಕೆಲದಲಿ.
ನೆಲೆಯನರಿಯರು ಬ್ರಹ್ಮಕುಲವನರಿಯರು
ಯೋಗ ಹೊಲಬುಗೆಟ್ಟರು ಯೋಗಸಿದ್ಧರೆಲ್ಲ.
ಈರಾರನೊಂದೆಂದು ಹಿಡಿದಾತ ನಿಷ್ಕಲ ಯೋಗಿ
ತಾ ಕಪಿಲಸಿದ್ಧಮಲ್ಲಿನಾಥ. ॥ ೪೧೩ ॥

೪೧೪

ಜಲದೊಳಗೆ ಭವಿಸಿತ್ತು ಜಲಕೆ ನಂದದ ಕಿಚ್ಚು.
ಆ ಜಲಂಗಳು ಹಲವು : ಮತ್ತೆ ತನ್ನೊಳಗೆ ಜನನವು ಆ ಸ್ಥಳ.
ಜಲಕೆ ನೆಲೆಯಾದ ಸೀಮೆ ತಾನೆ ಆ ಸ್ಥಳವು.
ಸೀಮೆಯ ಮೀರಿ, ಒಲವೆ ಒಡಮನೆಯಾದ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೧೪ ॥

೪೧೫

ಜಲದೊಳಗೆ ಭವಿಸಿಪ್ಪ ಜಲದ ನಾದದ ಭೇದ
ಜಲಶಿಲೆಯೊಪ್ಪುದೊಂದಾಸತ್ತದಲಿ
ಬಸವಾಕ್ಷರತ್ರಯದ ನೆನಹುವಿಡಿದಾತಂಗೆ
ನಿತ್ಯಪದವು ಕರುಣಾಕರನೆ,' ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೧೫ ॥

೪೧೬

ಜಲದೊಳಗೆ ಮತ್ಸ್ಯ ಜಲವ ತನ್ನ ನಾಸಿಕದತ್ತ
ಹೊದ್ದಲೀಯದ ಪರಿಯ ನೋಡಾ ಅಯ್ಯಾ.
ಶರಣ ಸರ್ವಪ್ರಪಂಚಿನೊಳಗಿದ್ದು
ಆ ಪ್ರಪಂಚು ತನ್ನತ್ತ ಹೊದ್ದಲೀಯದ ಪರಿಯ ನೋಡಾ ಅಯ್ಯಾ.
ಮತ್ಸ್ಯಂಗಾ ಬುದ್ಧಿಯ, ಶರಣಂಗೀ ಬುದ್ಧಿಯ ಕರುಣಿಸಿದೆಯಲ್ಲಾ,
ಎನ್ನ ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೪೧೬ ॥

೪೧೭

ಜಲದೊಳಗೆ ಹುಟ್ಟಿದ ಬುದ್ಬುದಂಗಳು ಜಲದೊಳಗಡುಗುವಂತೆ,
ನಿನ್ನವರೊಳಗೆ ನೀನಿಪ್ಪ ಭೇದವ ಬಲ್ಲವರಾರಯ್ಯಾ ?
ನೀನು ಶರಣದೇಹಿಕ ದೇವನಾಗಿ ಮಹವನೊಡಗೂಡಿಪ್ಪ
ಭೇದವ ಬಲ್ಲವರಾರಯ್ಯಾ ?
ಬಾರಯ್ಯಾ, ಎನ್ನ ಸರ್ವಾಂಗದ ಗಂಡನೆ,
ಬಾರಯ್ಯಾ, ಎನ್ನ ಹೃದಯ ಮಾನಸಾಸನನೆ,
ಬಾರಯ್ಯಾ, ಎನ್ನ ಚಿತ್ತದ ಸೌಂದರನೆ,
ಬಾರಯ್ಯಾ, ಎನ್ನ ಶುದ್ಧ–ಸಿದ್ಧ–ಪ್ರಸಿದ್ಧ ಪ್ರಾಣೇಶ್ವರನೆ,
ಬಾರಯ್ಯಾ, ಎನ್ನ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ, ಸಂದಿಲ್ಲದೆ. ॥ ೪೧೭ ॥

೪೧೮

ಜಲದೊಳಗೆ ಹುಟ್ಟಿದ ಬುದ್ಬುದಂಗಳು ಜಲದೊಳಗಡಗುವಂತೆ
ನಿನ್ನೊಳಗಡಗಿಪ್ಪುದನಾರು ಬಲ್ಲರಯ್ಯ ?
ಶರಣ ದೇಹಿಕ ದೇವ ಮಹವನೊಡಗೂಡಿಪ್ಪ ಭೇದವ ಬಲ್ಲವರಾರಯ್ಯ ?
ಕೊಡನೊಳಗಣ ಚಂದ್ರ ಹಲವರೊಳಗೆ ವರ್ತಿಸುವಂತೆ
ನೀನವರೊಳಗೆ ಹೊದ್ದದಿಪ್ಪುದನು ನಿನ್ನವರಲ್ಲದರಿವರಾರೈ
ಕಪಿಲಸಿದ್ಧಮಲ್ಲಿಕಾರ್ಜುನ. ॥ ೪೧೮ ॥

೪೧೯

ಜಲವಿಡಿಯು ಪರಿವಿಡಿಯು ಪದವಿಡಿಯು ಭವವಿಡಿಯು
ಒಲವನೊಲ್ಲೆನು ಅವನಕಾಂಕ್ಷೆ ಇಲ್ಲ.
ಗುರುಕರುಣದಾಜ್ಞೆಯಲಿ ಪರುಷಲಿಂಗವ ಪಡೆದು
ಒಳಹೊರಗೆನ್ನದೆ ಭೇದಿಸುವೆನು
ಶ್ರೀಗುರು ಚೆನ್ನಬಸವಣ್ಣ ಸಹರೂಪದ ಭಾವಶುದ್ಧನಪ್ಪೆ ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೧೯ ॥

೪೨೦

ಜಾತಿ ವಿಜಾತಿಯುಂ ನೀರ್ಗುಡಿಯುಂ ಹೋದರೆ
ಸುಡು ಹೋಗೆಂದು ನೂಂಕಿತ್ತೆ ಆ ಜಲವು !
ಆ ಜಲದಂತಾಗಬೇಡವೆ ಹಿರಿಯರಾದವರು.
ಎನ್ನ ಮನವಿಚ್ಛಂದವಾಗದೊಂದೆಯಂದದಲ್ಲಿಪ್ಪಂತಪ್ಪ
ನಿಮ್ಮದೊಂದು ಸಮತಾಬುದ್ಧಿ ಎನ್ನನೆಂದು ಬಂದು ಪೊರ್ದಿಪ್ಪುದೊ ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನದೇವರದೇವಾ. ॥ ೪೨೦ ॥

೪೨೧

ಜಾಗ್ರ ಸ್ವಪ್ನ ಸುಷುಪ್ತಿ ತುರೀಯದೊಳು ಲೇಸಾಗಿ
ತನ್ನ ತಾಮಸವ ಹರಹಿತಯ್ಯಾ.
ಒಂದನರಿಯಲ್ಕೆ ಆ ಮೂರು ನಾಶವೈ.
ಮಾಯೆಯು ಗೆಲು ಬಳಿಕ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೨೧ ॥

೪೨೨

ಜೀವವುಳ್ಳನ್ನಕ್ಕರ ಕ್ರೋಧದ ಮೂಲ
ಕಾಯವುಳ್ಳನ್ನಕ್ಕರ ಕಾಮದ ಮೂಲ
ಸಂಸಾರವ್ಯಾಪ್ತಿಯುಳ್ಳನ್ನಕ್ಕರ ಆಸೆಯು ಮೂಲ.
ಇಂತಪ್ಪಾಸೆಯು ಕೆಡಿಸಿ ಶಿವಯೋಗದ ಲೇಸ ತೋರು
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೪೨೨ ॥

೪೨೩

ಜ್ಞಾನಕ್ರಿಯಾದಿಗಳಿಂದ ಲಿಂಗದಲ್ಲಿ ನಿಬ್ಬೆರಗಾದ ನೀಲಮ್ಮನ
ಪಾದದ ಕಂಡ ನಾನು, ಪಾದದ ದಾಸ ನಾನು,
ಪಾದದ ಪಾದುಕೆ ನಾನು, ಪಾದುಕೆಯ ಧೂಳಿ ನಾನು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೨೩ ॥

೪೨೪

ಜ್ಞಾನ ಜ್ಞಾನವೆಂದು ಕೇಳಿದೆವಯ್ಯಾ ಗುರುಹಿರಿಯರಿಂದ.
ಕೇಳಿದಲ್ಲಿ ಅಂಗವಾಗಲಿಲ್ಲ, ಕೇಳದೆ ಬಿಟ್ಟಲ್ಲಿ ಅಂಗವಾಯಿತ್ತು.
ಇದೇನು ಕೌತುಕ ಕಪಿಲಸಿದ್ಧಮಲ್ಲಿಕಾರ್ಜುನಾ ! ॥ ೪೨೪ ॥

೪೨೫

ಜ್ಞಾನವೆ ಕಾರಣವಾಯಿತ್ತು ಭಕ್ತಿಯು ವ್ಯಕ್ತಿಗೆ.
ನಿಷ್ಕಾಮಭಾವವೆ ಕಾರಣವಾಯಿತ್ತು ನಿಮ್ಮ ಒಲುಮೆಗೆ,
ನಿಮ್ಮ ಸಮರಸಕ್ಕೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೨೫ ॥

೪೨೬

ಜ್ಞಾನಿಗಳಾದ ಬಳಿಕ ಪರಿಪೂರ್ಣ ಜಗತ್ತೆಂದರಿಯಬೇಕು.
ಜ್ಞಾನಿಗಳಾದ ಬಳಿಕ ಪಾಪವಾಸನೆ ತೊರೆದಿರಬೇಕು.
ಜ್ಞಾನಿಗಳಾದ ಬಳಿಕ ಅನ್ಯರ ನುಡಿಗೆ ಒಳಗಾಗಬಾರದು.
ಜ್ಞಾನಿಗಳಾದ ಬಳಿಕ ಅನ್ಯರ ನಿಂದೆಗೆ ಒಳಗಾಗಬಾರದು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೨೬ ॥

೪೨೭

ಜ್ಞಾನಿಗಳು ತಾವಾದ ಬಳಿಕ, ಅನ್ಯರ ಸ್ತೋತ್ರಕ್ಕೆ ಒಳಗಾಗಬಾರದು.
ಜ್ಞಾನಿಗಳು ತಾವಾದ ಬಳಿಕ, ಗುರುಹಿರಿಯರಿಗಂಜಿ ನಡೆಯಬೇಕು.
ಜ್ಞಾನಿಗಳು ತಾವಾದ ಬಳಿಕ, ಅನ್ಯಸ್ತ್ರೀ ತನ್ನ ಮಾತೆಯಂತಿರಬೇಕು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೨೭ ॥

೪೨೮

ಜ್ಞಾನಿಗಳು ತಾವಾದ ಬಳಿಕ ಅನ್ಯರ ಹಂಗಿನೊಳಗಾಗಬಾರದು.
ಜ್ಞಾನಿಗಳು ತಾವಾದ ಬಳಿಕ ಅನ್ಯರ ಕುಲವ ಬೆರಸಬಾರದು.
ಜ್ಞಾನಿಗಳು ತಾವಾದ ಬಳಿಕ ಅಸತ್ಯವ ನುಡಿಯಬಾರದು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೨೮ ॥

೪೨೯

ಜ್ಞಾನಿಗಳು ತಾವಾದ ಬಳಿಕ ತ್ರಿಕಾಲ ಲಿಂಗವ ಪೂಜಿಸಬೇಕು.
ಜ್ಞಾನಿಗಳು ತಾವಾದ ಬಳಿಕ ಜಂಗಮ ದಾಸೋಹದಲ್ಲಿರಬೇಕು.
ಜ್ಞಾನಿಗಳು ತಾವಾದ ಬಳಿಕ ನುಡಿಕೊಟ್ಟು ತಪ್ಪಬಾರದು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೨೯ ॥

೪೩೦

ಜ್ಞಾನಿಗಳು ತಾವಾದ ಬಳಿಕ ಮುಕುರದ ಬಿಂಬದಂತಿರಬೇಕು.
ಜ್ಞಾನಿಗಳು ತಾವಾದ ಬಳಿಕ ಜ್ಞಾನದಲ್ಲಿ ಕದಲದಂತಿರಬೇಕು.
ಜ್ಞಾನಿಗಳು ತಾವಾದ ಬಳಿಕ ಸಂಶಯರಹಿತರಾಗಿರಬೇಕು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೩೦ ॥

೪೩೧

ಜ್ಞಾನಿಗಳು ತಾವಾದ ಬಳಿಕ ವಿಶ್ವಾಸಘಾತವ ಮಾಡಬಾರದು.
ಜ್ಞಾನಿಗಳು ತಾವಾದ ಬಳಿಕ ಪರದೂಷಣೆ ಮಾಡಬಾರದು.
ಜ್ಞಾನಿಗಳು ತಾವಾದ ಬಳಿಕ ಪರದ್ರವ್ಯವನಪಹರಿಸಬಾರದು.
ಜ್ಞಾನಿಗಳು ತಾವಾದ ಬಳಿಕ ಗುರುಸೇವೆಯಲ್ಲಿರಬೇಕು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೩೧ ॥

೪೩೨

ಜ್ಞಾನಿಗಳು ನಾವೆಂದು ಕಂಡಂತಾಚರಿಸಿದಡೆ ಜ್ಞಾನಿಗಳಲ್ಲ.
ಆರೂಢ ನಾವೆಂದು ಕಂಡ ಕಂಡಂತಾಚರಿಸಿ
ಕಂಡಲ್ಲಿ ತಿಂದಡೆ ಆರೂಢರೆ ಅವರಲ್ಲ.
ಜ್ಞಾನಿಯ ಪರಿ ಬೇರೆ, ಆರೂಢನ ಪರಿ ಬೇರೆ, ಪರಮಹಂಸನ ಪರಿ ಬೇರೆ.
ಅರಿತಡೆ ಹೇಳಾ, ಅರಿಯದಿರ್ದಡೆ ಕೇಳಾ,
ಕಪಿಲಸಿದ್ಧಮಲ್ಲಿಕಾರ್ಜುನನ ಸಾನ್ನಿಧ್ಯದಲ್ಲಿ, ಕೇದಾರಯ್ಯಾ. ॥ ೪೩೨ ॥

೪೩೩

ತಂಡತಂಡದ ಅಜಾಂಡದ ಹಾಹೆಗಳ
ಒಂದೊಂದರ ಒಂದೊಂದರ ಕ್ರಿಯಾಳಾಪದಂದುಗ ಸಮನಿಸದೆ
ಹಿಂದುಮುಂದರ ಸಂದು ಹರಿದು ಎಂದಿಪ್ಪೆನಯ್ಯಾ.
ಶಿವಭಕ್ತಿಯಲ್ಲಿ ಅವ್ಯಯ ಆಲಯದಲ್ಲಿ ಆನಂದ ಕ್ರಿಯಾಳಾಪವ
ಹಾಡುತ್ತ ನಲಿನಲಿದಾಡುತ್ತ ಎಂದಿಪ್ಪೆನಯ್ಯಾ ?
ನಿನ್ನ ನೆನಹಿನ ಸಂಯೋಗ ಸಂಗಸುಖದಲ್ಲಿ ಎಂದಿಪ್ಪೆನಯ್ಯಾ ?
ಶುದ್ಧದ ಒಳಿತೆಯೆಂಬ ಮನೆಯಲ್ಲಿ
ತ್ವಂಪದ ಸೀಮೆಯ ಮೀರಿ ಎಂದಿಪ್ಪೆನಯ್ಯಾ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೩೩ ॥

೪೩೪

ತಂದೆಯೊಡನುಂಡ ಶಿಶು ತಾಯಿಯೊಡನುಣ್ಣದೆ ?
ಮನೆಯಲುಂಡ ಮಿತ್ರನು ತನ್ನ ಮಿತ್ರನಲ್ಲುಣ್ಣನೆ ?
ಇದು ಕಾರಣ,
ಅಲ್ಲಮಯ್ಯನ ಬೋಧೆಯನು, ತಮ್ಮ ಬೋಧೆಯನು
ಕೇಳುವ ಬಾಲರಿಗೆ ಜನನೀಜನಕರ ಭೋಜನ ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. || ೪೩೪ ||

೪೩೫

ತರ್ಕಸಿದಲ್ಲಿ ವಾದಿಸಿ ಶಿಖಾಮುದ್ರೆ ಸಾಧಿಸುವವರೊಂದು ಕೋಟಿ.
ವೇದಾಂತದಲ್ಲಿ ವಾದಿಸಿ ಶಿಖಾಮುದ್ರೆ ಸಾಧಿಸುವವರೊಂದು ಕೋಟಿ.
ಶರಣನ ವಾದಿಸಿ ಶಿಖಾಮುದ್ರೆ ಸಾಧಿಸುವುದದು,
ಶರಣನ ಬಿಟ್ಟು ಶಿರ ತಾಗಿದವರಲ್ಲೊರ್ವರಿಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. || ೪೩೫ ||

೪೩೬

ತಟ್ಟುವ ಮುಟ್ಟುವ ಭೇದವನು,
ತಟ್ಟದೆ ಮುಟ್ಟದೆ ಅರ್ಪಿಸುವಾನಂದವನು,
ಅರ್ಪಿತವಿಲ್ಲದೆ ಎಯ್ದುವ ತೃಪ್ತಿಯನು,
ತೃಪ್ತಿಯಲಾದ ಪರಿಣಾಮವನು,
ಪರಿಣಾಮದಲಾದ ಪ್ರಸನ್ನತೆಯನು,
ಪ್ರಸನ್ನತೆಯಲಾದ ಪ್ರಸಾದವನು ಕೊಂಡು
ನಿತ್ಯರಾಗಿಪ್ಪವರ ಎನಗೆ ತೋರಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ, ನಿಮ್ಮ ಧರ್ಮ. || ೪೩೬ ||

೪೩೭

ತಟ್ಟುವ ಮುಟ್ಟುವ ಭೇದವನೊಲ್ಲ ; ಅದೇನು ಕಾರಣ ?
ಐದಾರು ಪ್ರಸಾದದಲ್ಲಿ ಈರೈದು ಪಾದೋದಕದಲ್ಲಿ ಸಂಪನ್ನನಾಗಿ,
ಅವನ ಲಿಂಗತನುವೆನ್ನದಿರಿ ಕಂಡಿರೆ, ಅದು ಪ್ರಸಾದತನು.
ಆತನ ಮಸ್ತಕದಲ್ಲಿ ಒಪ್ಪಿಪ್ಪ ಲಿಂಗದ ಗುಣದಿಂದ,

ಆತನು ಲಿಂಗತನುವಾದನ್ನೆಸಲ್ಲದೆ,
ಆತನು ಸಾಕ್ಷಾತ್ ಪ್ರಸಾದತನು ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೩೭

೪೩೮

ತಟ್ಟುವ ಮುಟ್ಟುವ ಭೇದವುಳ್ಳನ್ನಬರ ಶರಣನಲ್ಲ.
ಅದೇನು ಕಾರಣವೆಂದಡೆ, ತಟ್ಟದೆ ಮುಟ್ಟದೆ ಕೊಂಬನಾಗಿ.
ತಟ್ಟುವ ಮುಟ್ಟುವ ಭೇದಂಗಳೆಲ್ಲಾ ತನುಗುಣಕ್ಕೆ ದಾರಿ.
ತಟ್ಟದೆ ಮುಟ್ಟದೆ ಬಟ್ಟಬಯಲಾಗಿ,
ಬಟ್ಟಬಯಲಾಗಿ ಕೊಂಬಾತನೆ ತತ್ವಮಸಿಯಾದ ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೪೩೮ ॥

೪೩೯

'ತತ್ತ್ವಮಸಿ'ಯಿಂದತ್ತ ಮಿಥ್ಯವಾಗಲು ಯೋಗ,
ತಥ್ಯವಾಯಿತು ನಿತ್ಯ ಭಕ್ತಿಯೋಗ,
ಮಿಥ್ಯವಪ್ಪೀ ದೇಹ ನಿತ್ಯಕಾಯುವಪ್ಪುದ ಕಂಡು,
ಮತ್ತೆ ನಚ್ಚಿ ಒಚ್ಚತಪೋದೆನಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ.
॥ ೪೩೯ ॥

೪೪೦

ತತ್ತ್ವಸಂಗತ್ವದಿಂದತ್ತಲಾಗಿಹ ಬ್ರಹ್ಮ
ಸುತ್ತಿಪ್ಪ ಕ್ರೀ ತಾನು ಭಕ್ತಿಯಾಗಿ
ತ್ವಮಸಿ ಸಂಗಮುದಂಗಪಾಶದ ತದ್ರೂಪವಾದ
ಈಷಣತ್ರಯುಗಳನು ಮೀರಿರ್ಪುದು
ಬಂದ ಬಟ್ಟೆಯು ಬಾರ, ಉಂಡ ಊಟವನುಣ್ಣ
ಬಂದ ಬಟ್ಟೆಯು ಬಾರ, ಉಂಡ ಊಟವನುಣ್ಣ
ಹಿಂದುಮುಂದರಿದಾತ ಸಂದಿಲ್ಲದೆ
ಶಿವಭಕ್ತಿಯನರಿದು ನೀವಿಪ್ಪೆಡೆಗೆ ಬಂದ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೪೦ ॥

೪೪೧

ತನ್ನಸರಸಿ ಬಪ್ಪವರ ತಾನರಸಿ ಬಪ್ಪ ನೋಡಾ.
ಎನ್ನ ದೇವನೆಲ್ಲಿದ್ದನಲ್ಲಿಗೆ ಹೋಗಿ,

'ಬಾರಾ' ಎಂದು ಮನದೊಳಗೆ ಅಚ್ಚೊತ್ತಿಕೊಂಬೆ,
ಎನ್ನ ಕಪಿಲಸಿದ್ಧಮಲ್ಲಿಕಾರ್ಜುನಯ್ಯನ. ॥ ೪೪೧ ॥

೪೪೨

ತನ್ನ ಮರೆದು ನಿನ್ನ ರೂಪಾದವರ
ನಿನ್ನವರೆ ಪ್ರಾಣವೆಂದೆಂಬವರ
ನಿನ್ನವರ ಮೂರ್ತಿಧ್ಯಾನದಲ್ಲಿ ಮೂರ್ಛೆವೋದವರ
ನಿನ್ನವರ ಕೀರ್ತಿಸುವವರ
ನೀನೆಂದೆ ನಿನ್ನವರನರ್ಚಿಸುವವರ ಸಂಗಸುಖದೊಳಗೆ
ಎನ್ನನಿರಿಸಯ್ಯಾ ನಿಮ್ಮ ಧರ್ಮ,
ಅನಂಗವಿದಾರಣ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೪೨ ॥

೪೪೩

ತನುಗುಣಗಳನತಿಗಳೆದ ಪ್ರಸಾದಿ ;
ತಾಮಸಂಗಳ ಮೀರಿದ ಪ್ರಸಾದಿ ;
ವರ್ಗಂಗಳ ದಾಂಟಿದ ಪ್ರಸಾದಿ ;
ಇಂದ್ರಿಯಂಗಳು ಈಶನ ಮುಖವಾದ ಪ್ರಸಾದಿ ;
ಕಪಿಲಸಿದ್ಧಮಲ್ಲಿಕಾರ್ಜುನನ ಕೂಡಿದ ಪ್ರಸಾದಿ. ॥ ೪೪೩ ॥

೪೪೪

ತನುಗುಣ ಪ್ರಪಂಚಿಕವ ಹೊದ್ದ ಬಸವಣ್ಣ ;
ಸೀಮಾ ಸಂಬಂಧಿಗಳಲ್ಲಿ ನಿಲ್ಲ ಬಸವಣ್ಣ ;
ಎರಡೆಂಟೆಂದರಿಯ ಬಸವಣ್ಣ ;
ಅಂಗಮುಖವೆಲ್ಲವು ಲಿಂಗಮುಖವಾಗಿಪ್ಪ ಬಸವಣ್ಣ ;
ಪ್ರಾಣವೆಲ್ಲವು ಲಿಂಗಪ್ರಾಣವಾಗಿಯೆ ಸಮನಿಸುವ ಬಸವಣ್ಣ.
ಅನರ್ಪಿತಾವಧಾನಂಗಳ ಭೇದವನು ಕಾಯದ ಕರದಿಂದರ್ಪಿಸದೆ,
ಸ್ವಾನುಭಾವ ಸಮ್ಯಕ್‌ಜ್ಞಾನ ಕರಂಗಳಿಂದರ್ಪಿಸುವ ಬಸವಣ್ಣ ;
ನಿತ್ಯ ಪ್ರಸಾದವ ಕೊಂಬ ಬಸವಣ್ಣ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯನೆಂಬ ಪರಸಮಯುವನೊಳಕೊಂಡಿಪ್ಪ
ಬಸವಣ್ಣನ ಪರಿ ಇಂತುಟು. ॥ ೪೪೪ ॥

೪೪೫

ತನುಗುಣಾದಿಗಳೆಲ್ಲ ನೀ ಮಾಡಲಾದವು.
ಮನ ಪ್ರಾಣ ನೆನಹಿನ ಸಂಗಮದಲಿ ಸಮನಿಸಬಲ್ಲನೆ ಅಯ್ಯ ?
ಸ್ಥೂಲ ಸೂಕ್ಷ್ಮ ಕಾರಣವೆಂಬವು ನೀ ಮಾಡಲಾದುವಲ್ಲದೆ ನಿಮ್ಮ ಧರ್ಮ.
ನಿನ್ನ ಮೀರಿ ಅಧಿಕವುಂಟೆ ? ಸರ್ವರಲ್ಲಿ ಸಿದ್ಧನು.
ಎನ್ನ ಹೊದ್ದಿಯೂ ಹೊದ್ದದಂತಿರೆ,
ಎನ್ನ ಸರ್ವಾಂಗದಲ್ಲಿ ನೀನೆಯಾಗಿ ತೋರಯ್ಯಾ !
[ಅನಂಗ]ವಿದಾರಣ ಕಪಿಲಸಿದ್ಧಮಲ್ಲಿಕಾರ್ಜುನಾ,
ನಿಮ್ಮ ಧರ್ಮ ! ನಿಮ್ಮ ಧರ್ಮ ! ॥ ೪೪೫ ॥

೪೪೬

ತನುತ್ರಯದ ಗುಣದಲ್ಲಿ ತಾಮಸಿಯಲ್ಲ ಬಸವಣ್ಣ ;
ಮನತ್ರಯದಲ್ಲಿ ಮತ್ತನಲ್ಲ ಬಸವಣ್ಣ ;
ಮಲತ್ರಯದಲ್ಲಿ ಮಗ್ನನಲ್ಲ ಬಸವಣ್ಣ ;
ಲಿಂಗತ್ರಯದಲ್ಲಿ ನಿಪುಣ ಬಸವಣ್ಣ ;
ಐದಾರು ಪ್ರಸಾದದಲ್ಲಿ ಪ್ರಸನ್ನ ಬಸವಣ್ಣ ;
ಈರೈದು ಪಾದೋದಕದಲ್ಲಿ ಪ್ರಭಾವ ಬಸವಣ್ಣ ;
ಎರಡು ಮೂರು ಭಕ್ತಿಯಲ್ಲಿ ಸಂಪನ್ನ ಬಸವಣ್ಣ
ಮೂವತ್ತಾರು ತತ್ತ್ವದಿಂದತ್ತತ್ತ ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಕೂಡಿ,
ಫಲಪದಕ್ಕೆ ದೂರವಾದನಯ್ಯಾ, ನಮ್ಮ ಬಸವಣ್ಣನು, ॥ ೪೪೬ ॥

೪೪೭

ತನುತ್ರಯದಲ್ಲಿ ಘನಲಿಂಗ ಪ್ರಾಣಸಂಬಂಧಿಯಾದವರ
ತೋರಯ್ಯಾ, ನಿಮ್ಮ ಧರ್ಮ.
ಅವಯವಂಗಳೆ ನಿಮ್ಮ ವದನಂಗಳಾಗಿ,
ಅರ್ಪಿತವಲ್ಲದ ಅನರ್ಪಿತವ ಕೊಳ್ಳರಾಗಿ.
ಐದಾರು ಪ್ರಸಾದದಲ್ಲಿ ಅನುಮಾನವಿಲ್ಲದೆ ನಿತ್ಯರಪ್ಪವರ,
ಈರೈದು ಪಾದೋದಕದಲ್ಲಿ ವಿರಳವಿಲ್ಲದೆ ವಿಮಲರಪ್ಪವರ,
ನೋಡಿ ಕಂಡೆಹೆನೆಂದಡೆ, ಎನಗೆ ಕಾಣಬಾರದು.
ಅವರಿಚ್ಛಾಮಾತ್ರದಲ್ಲಿ ನೀನಿಪ್ಪೆಯಾದಡೆ, ನಿನಗೆ ಕಾಣಬಹುದು.

ಅಲ್ಲದಿದ್ದಡೆ ನಿನಗೆಯೂ ಅಭೇದ್ಯ ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ ॥ ೪೪೭ ॥

೪೪೮

ತನು ತುಂಬಿ ದಕ್ಷಿಣೆಯ ಮಾಡಿ
ಒಂದು ಕೋಟಿ ಮಾನವರಿಗೆ ಇಚ್ಛಾಭೋಜನವನಿಕ್ಕಿ
ನಿರ್ಮಳಮನಭಕ್ತಿಯಿಂದ, ಒಂದು ಸಿಂಪುವಕದಿಂದ
ಆಯಿದೆರಡು ಪುಷ್ಪದಿಂದ ಲಿಂಗಪುರುಷನ ಮಿಗಿಲಿಂದ !
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೪೪೮ ॥

೪೪೯

ತನು ನಿಮ್ಮದಾಗಿ ಮನ ನಿಮ್ಮದಾಗಿ ಧನ ನಿಮ್ಮದಾಗಿ
ಇನಿತೆಲ್ಲ ನೋಡಲು ಸರ್ವಸ್ವವೂ ನಿಮ್ಮದಾಗಿ
ನಿಮಗರ್ಪಿತವಯ್ಯಾ, ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೪೪೯ ॥

೪೫೦

ತನುಮನದ ಒಡೆಯನೆ, ಮನದ ಮಹಾದೇವಾ,
ಈ ಮನವ ಕದ್ದು ಎಲ್ಲಿ ಬೈಚಿಡುವೆ ?
ಎನ್ನ ಮಾನಸ ವಾಚಿಕ ಕಾಯಕದ ಒಡೆಯ ನೀನೆ,
ಶರಣು, ಶರಣು, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೫೦ ॥

೪೫೧

ತನುಮನ ಮಧ್ಯದಲ್ಲಿ ಘನಸಿಂಹಾಸನವನಿಕ್ಕಿ
[ದಿ]ನವನೆನೆಸುತ್ತಿರ್ಪೆನಯ್ಯಾ,
ಒಂದೊಂದು ಒಂದೊಂದೆನುತ್ತ,
ಆನಂದಪದವ ನೆನೆಸುತ್ತ ಅಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿಮ್ಮ ಸಂದು ಸವೆದು ಬೆರಸುವೆನಯ್ಯಾ. ॥ ೪೫೧ ॥

೪೫೨

ತನುಮಧ್ಯದಲಿ ಲಿಂಗತ್ರಯುವ ನೆಲೆಗೊಳಿಸಿದ ಶ್ರೀಗುರು.
ಪ್ರಸಾದಲಿಂಗತ್ರಯಕ್ಕೆ ಲೋಭವಿಲ್ಲದವರನೇನೆಂಬೆನಯ್ಯಾ ?
ಲಿಂಗತ್ರಯು ನೆಲೆಗೊಂಡ ಹಾಗೆ
ಪ್ರಸಾದ ಲಿಂಗತ್ರಯು ನೆಲೆಗೊಳ್ಳದಿರ್ದಡೆ
ಅವರು ಗುರ್ವಾಜ್ಞೆಗೆ ದೂರವೆಂಬೆ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಎನಗೆ ನಿಮ್ಮ ತೋರಿದ ಬಸವಣ್ಣನಾಣೆ. ॥ ೪೫೨ ॥

೪೫೩

ತನುಮಧ್ಯ ವಿದಳಾಚಲದೊಳಗೆ
ಭಾಸ್ಕರಭವನ ಬೆಳಗುತಿಪ್ಪದು
ಲೋಕ ಹದಿನಾಲ್ಕರಲಿ ಅಜಲೋಕದೊಳಗೆ
ಆತ ಬೆಳಗುವ ಪ್ರಜ್ವಲದ ಪ್ರಭೆಯು ಮಂಟಪವು
ತಾನೆರಡಾಗುತ ದಿವ ರಾತ್ರೆ ಒಡಗೂಡಿ ಭರಿತ ಪರಿಮಳವಾಗೆ
ವಳಯು ಹದಿನಾಲ್ಕುರೊಳು ಬೆರೆಸಿಪ್ಪ ಜ್ಯೋತಿಯನು
ತಿಳಿದು ನೋಡಿದಡತ್ಯಧಿಕ ಸರ್ವಜ್ಞನೆನಿಪ
ಲೋಕಾಲೋಕವ ಏಕವ ಮಾಡಲಿಕಾತ
ಆಕಾರ ಚತುಷ್ಟಯುವ ಮೀರಿದಾತ
ವರ್ಣಾಶ್ರಮುವ ಕಳದು ನಿರ್ಮಳಾನಂದದೊಳು
ಸೊಮ್ಮುಗೆಟ್ಟಾತ ಪರಶಿವ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೫೩ ॥

೪೫೪

ತನುವ ಗುರುವಿಂಗಿತ್ತು ಗುರುವಾದನಯ್ಯಾ ಬಸವಣ್ಣನು.
ಮನವ ಲಿಂಗಕ್ಕಿತ್ತು ಲಿಂಗವಾದನಯ್ಯಾ ಬಸವಣ್ಣನು.
ಧನವ ಜಂಗಮಕ್ಕಿತ್ತು ಜಂಗಮವಾದನಯ್ಯಾ ಬಸವಣ್ಣನು.
ಇಂತೀ ತ್ರಿವಿಧವ ತ್ರಿವಿಧಕ್ಕಿತ್ತು, ಸದ್ಗುರು ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣ ಎಲ್ಲರಿಗೆ ಗುರುವಾದನಯ್ಯಾ ಬಸವಣ್ಣನು. ॥ ೪೫೪ ॥

೪೫೫

ತನುವಿಡಿದು ದಾಸೋಹವ ಮಾಡಿ ಗುರುಪ್ರಸಾದಿಯಾದ ಬಸವಣ್ಣ.
ಮನವಿಡಿದು ದಾಸೋಹವ ಮಾಡಿ ಲಿಂಗಪ್ರಸಾದಿಯಾದ ಬಸವಣ್ಣ.
ಧನವಿಡಿದು ದಾಸೋಹವ ಮಾಡಿ ಜಂಗಮಪ್ರಸಾದಿಯಾದ ಬಸವಣ್ಣ.
ಇಂತೀ ತ್ರಿವಿಧವಿಡಿದು ದಾಸೋಹವ ಮಾಡಿ,
ಸದ್ಗುರು ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣ ಸ್ವಯಪ್ರಸಾದಿಯಾದನಯ್ಯಾ ಬಸವಣ್ಣ. ॥ ೪೫೫ ॥

೪೫೬

ತನುವಿನ ಕ್ರಿಯಾಕಾರದಲ್ಲಿ ಒಡಲುಗೊಂಡಿಹವರು
ಉಣ್ಣೆನೆಂದಡೆ ಅವರ ವಶವೆ ?
ತನುಗುಣ ನಾಸ್ತಿಯಾದವರು ಉಣ್ಣೆನೆಂದಡೆ ಸಲುವುದಲ್ಲದೆ
ಕಾಮವಿಕಾರಕ್ಕೆ ಸಂದು, ತಾಮಸಕ್ಕೆ ಮೈಗೊಟ್ಟು ಇಪ್ಪವರೆಲ್ಲರೂ
ಉಣ್ಣೆನೆಂದಡೆ ಹರಿವುದೆ ?
ನಿಜಗುರು ನಿಜಲಿಂಗ ನಿಜಜಂಗಮ ನಿತ್ಯಪ್ರಸಾದವ
ಶ್ರೀಗುರು ಕರುಣದಿಂದ ಪಡೆದು ಅರಿದಾಚರಿಸಿದವರಿಗಲ್ಲದೆ
ಭವವ ತಪ್ಪಿಸಬಾರದು ಕಾಣಾ, ಪ್ರಭುವೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೫೬ ॥

೪೫೭

ತನುವೆಂಬ ಮಹಾಪರ್ವತದಲ್ಲಿ ಒಸರುತಿಪ್ಪ
ನಿರ್ಝರಗಳಿಂದ ಆ ಘನವನೊದಗುವಿರ ಹೇಳಿರೆ ?
ಸ್ಥೂಲಸಮುದ್ರ ಅರವತ್ತುನಾಲ್ಕು ಕೋಟಿಯು
ಮೂವತ್ತೆರಡು ಲಕ್ಷವು ಮೂವತ್ತೆರಡು ಸಾವಿರದ ಪರಿಪೂರ್ಣವಾಗಿಪ್ಪುದಾಗಿ
ಅವು ತಮ್ಮ ತಮ್ಮ ಘನತೆಗೆ ತಾವೆ ಘನವೆಂದು ಮೊರವುತೈದಾವೆ.
ಅವು ನೀವು ಸಿಡಿದುಬೀಳುವ ತುಂತುರುಮಾತ್ರಕ್ಕೆ ಸಮವಪ್ಪುದೆ ?
ಅಂತಪ್ಪ ಸಮುದ್ರಂಗಳು ಸವಾಲಕ್ಷಕೂಡಿ
ನೀನೆಯ್ದುವ ಮಹಾಸಮುದ್ರದ ಒಂದು ಬಿಂದುವಿಗೆ ಸರಿಯೆ ?
ಅಯ್ಯಾ ನೀವೆಂಬ ಮಹಾಸುಧಾಸಮುದ್ರಕ್ಕೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೫೭ ॥

೪೫೮

ತನುವೈದು, ತನು ಮೂರು, ಕರಣ ನಾಲ್ಕು, ಭ್ರಮೆಯೆರು,
ಅನುನಯನ ಗುರುವಿನ ಕರುಣವಿಡಿದಾತಂಗೆ,
ತನು ಬ್ರಹ್ಮ ಕಾಣಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೫೮ ॥

೪೫೯

ತನ್ನೊಳಗೆನ್ನ ಗತವ ಮಾಡಿದ ಬಳಿಕ
ಆದಿಯು ಪದವ ತೋರಿದ ಬಳಿಕ ಮತ್ತಾವುದೂ ಇಲ್ಲಯ್ಯ.
ಆದಿಪದವ ನುಂಗಿದ ಬಳಿಕ ಇನ್ನಾವುದೂ ಇಲ್ಲಯ್ಯ.
ನೋಡಯ್ಯ, ಎನ್ನ ಹಡದೂ ಕೂಡದಿದ್ದಡೆ
ನಿನಗಾವುದು ನಡೆವುದು ಹೇಳಾ,
ಎನ್ನ ಕಪಿಲಸಿದ್ಧಮಲ್ಲೇಶ್ವರದೇವಾ. ॥ ೪೫೯ ॥

೪೬೦

ತಮ್ಮ ನುಡಿಯಿಂದ ಅರಸು ಅರಸನಲ್ಲ ;
ಆಳುಗಳಿಂದರಸನೆಂಬ ಬಿರುದು ತೋರ್ದಡೂ ತೋರಲಿ ;
ಅಲ್ಲಿ ಅಧಿಕಾರದ ಕಲೆ ಅರಸಂಗಲ್ಲದೆ,
ಆಳಿಂಗಿಲ್ಲ ಕಾಣಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೬೦ ॥

೪೬೧

ತಮ್ಮೊಲಿದತ್ತ ಹರಿಹಂಚಮಾಡಿ ಕಾಡುತ್ತಿಪ್ಪ
ಎನಿತೆನಿತಿಂದ್ರಿಯಂಗಳ ಒಡಗಡಣದಲು ಪೋಗದೆಂದಿಪ್ಪೆಯೆಂದು
ನಿಮ್ಮೊಡಗೂಡಿ ಬೇರಾಗದೆಂದಿಪ್ಪೆನೊ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೬೧ ॥

೪೬೨

ತರುಗಳ ಮುರಿದು ಗಗನಕ್ಕೀಡಾಡುವ
ಅನಿಲರೂಪೋ: ನಿರೂಪೋ ? ಬಲ್ಲಡೆ ನೀವು ಹೇಳಿ ಭೋ !

ಗಜ ಸಿಂಹ ಶಾರ್ದೂಲವೆಂಬ ಅಧಿಕ ಮೃಗಂಗಳ ಮುರಿದೊತ್ತಿ ಕೆಡಹುತಿಪ್ಪ
ವ್ಯಾಧಿ ರೂಪೋ ನಿರೂಪೋ ? ಬಲ್ಲಡೆ ನೀವು ಹೇಳಿ ಭೋ !
ಕಾಣಲೀಯದೆ ಕೇಳಲೀಯದೆ ಅವಧಾನಂಗಳ ಕೆಡಿಸುತ್ತಿರ್ಪ
ನಿದ್ರೆ ರೂಪೋ ನಿರೂಪೋ ? ಬಲ್ಲಡೆ ನೀವು ಹೇಳಿ ಭೋ !
ಇಂತು ಆಳಿನಾಳಿನ ಅಂತಸ್ಥವನಾರಿಗೂ ಅರಿಯಬಾರದು.
ಅನಾದಿಮೂಲದೊಡೆಯನ ಬಲ್ಲೆನೆಂಬ ಪರಿ ಎಂತೋ ?
ರೂಪೆಂದಡೆ ಶಬ್ದ, ನಿರೂಪೆಂದಡೆ ಶೂನ್ಯ ;
ಈ ಎರಡರ ಆದಿಯಿಂದತ್ತತ್ತ ಕಾಣಾ.
ಎನ್ನ ತಂದೆ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವು
ಗುರುಕಾರುಣ್ಯವುಳ್ಳವರಿಗಲ್ಲದೆ ಅರಿಯಬಾರದು. ॥ ೪೬೨ ॥

೪೬೩

ತಲೆಯನುರಸ್ಥಲಕ್ಕೆ ಬಚ್ಚಿಡುವಳೀ ಶಿಶು ಕಣ್ಣಲಂಬಳು.
ಮಗಳ ಕಣ್ಣಲ್ಲಿ ದಹಿಸುವಳ
ಇವಳು ಬಾಯಲಾದರೆ ಹಿಡಿದುಂಡಹಳೆಂದು
ನಾಸಿಕದಲುಬಂತೆ ಮಾಡಿದ,
ಕಪಿಲಸಿದ್ಧಮಲ್ಲಿನಾಥಯ್ಯ. ॥ ೪೬೩ ॥

೪೬೪

ತವಕಿಸುವಡೆ ತಾಮಸಿಯೆ ? ಕೂಡುವಡೆ ಭೇದಿಯೆ ?
ಸಂದು ಸವೆದು ಒಂದಾದ ಬಳಿಕ ಕೂಡುವೆನೇನ ? ತವಕಿಸುವೆನೇನ ?
ಉರುತರವಪ್ಪ ಲಿಂಗವ ಕರಸ್ಥಲದಲ್ಲಿ ಬಿಜಯಂಗೈಸಿಕೊಂಡು,
ತವಕಿಸಿ ಕೂಡೆಹೆನೆಂಬ ಜಡಮತಿಗಳ ಎನ್ನತ್ತ ತೋರದಿರಯ್ಯ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೬೪ ॥

೪೬೫

ತಾತನಿಂದ ತೌರುಮನೆಯೂಟ ಸವಿಯಾಯಿತ್ತೆಂದನಯ್ಯಾ.
ಕಪಿಲಸಿದ್ಧಮಲ್ಲಿನಾಥಯ್ಯಾ,
ನಿಮ್ಮ ತಂದೆ ಚೆನ್ನಬಸವಣ್ಣನೆಂಬ ಮಾವ ತೌರಿಗನಾದನು. ॥ ೪೬೫ ॥

೪೬೬

ತಾನಿಟ್ಟ ಬೇತಾಳ ತನ್ನನಂಜಿಸಿತೆಂಬ
ನಾಣ್ಣುಡಿಯು ನಿಮ್ಮಲ್ಲಿ ಕಂಡೆನು.
ನಾಗೇಂದ್ರ ನೋಡಿ ನಗಲು ನಗಲು
ವಿಷದ ಸಿಡಿಕೆಗಳ ತಾಗಿ ಬೆಂದ ಕಾಮನು
ಎಸಲಟ್ಟಿದರೆಂಬ ಅವಗತಿಗಳ ತಂದು ತಂದು ಇಕ್ಕಿದಾರು ಕಾಣವ್ವಾ !
ಎಡೆಯು ಪಾತಕರು ನೆರೆದು ಮಾಡಿದರು ಕಾಣವ್ವಾ !
ಆನು ಮಾಡಿದೆನೆಂಬ ಚಿತ್ತಮಕ್ಕು.
ಕಪಿಲಸಿದ್ಧಮಲ್ಲಿನಾಥ ದೇವರ ದೇವನವ್ವಾ. ॥ ೪೬೬ ॥

೪೬೭

ತಾನೇನ ಮಾಡುವದೆಲ್ಲವನು ನೀನೆಂದೆ ಇದ್ದೆನಯ್ಯಾ.
ನಾನೇನ ಮಾಡುವದೆಲ್ಲವನು ನೀನೆ ಅಲ್ಲದೆಂದವಡೆ ಅದು ಮಾಣಲಿ, ನಿಮ್ಮಾಣೆ.
ಕಾಣಬಾರದ ಘನವ ಕಾಯದಲ್ಲಿ ಧರಿಸಿ
ಹೇಳಬಾರದ ನಿಜವ ಮನದಲ್ಲಿ ನೆಲೆಗೊಳಿಸಿ
ಹೇಳಬಾರದ ಕುರುಹ ಎನ್ನ ಅರಿವಿನಲ್ಲಿರಿಸಿ
ಇನ್ನು ನಿಮ್ಮ ಕಾಬಂತೆ ಮಾಡಾ ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೪೬೭ ॥

೪೬೮

ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು.
ತಾ ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು.
ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಿಗೆಯನೇರಿತ್ತು.
ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು.
ಅದು ಕಾರಣ, ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ ;
ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ ನೋಡಾ ! ॥ ೪೬೮ ॥

೪೬೯

ತಾಯು ಮದಾಯುಮನಾಗಳು ಹು ! ಹೂ ! ಹೊ ! ಹಾ ! ಅವ್ವೆ
ಆನು ತನ್ನ ಬಿಟ್ಟಡೆ ತಾನೆನ್ನ ಬಿಡಳು ನೋಡಾ !

ಆನು ತನ್ನ ಬಿಟ್ಟಡೆ ತಾನೆನ್ನ ಬಿಡಳು ನೋಡಾ !
ಬಿಟ್ಟಡೆ ಬಿಡದೆ ಒಪ್ಪಿಸುವೆ, ಕಪಿಲಸಿದ್ಧಮಲ್ಲಿನಾಥಯ್ಯಗೆ. ॥೪೭೯॥

೪೭೦

ತಾಯು, ತವರೆ, ಬಸವ ಬಸವಾ,
ಭಕ್ತಿಮುಕ್ತಿಯು ರೂಪು ಬಸವನ ಪ್ರಸಾದವಯ್ಯ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೪೭೦ ॥

೪೭೧

ತಾತ್ಪರಿಯುವೆಂಬ ಮನೆಯಲ್ಲಿ ಕರಣಂಗಳ ಬೆಳಗಿ
ಆನಂದವೆಂಬಾತಂಗೆ ಭಕ್ತಿಮುಕ್ತ್ಯಂಗನೆಯರು
ನಿಶ್ಚಲದಿಂದ ನಿತ್ಯಂಗೆ ಬೋನವ ಮಾಡುತ್ತೈದಾರೆ.
ಆ ಬೋನ ಧ್ಯಾನಸಮಾಧಿಯ ಮೀರಿತ್ತು.
ಆದೆ ನಿತ್ಯ ಚೊಕ್ಕರಸ[ವೆಂಬ] ಯೋಗಿಗಳಿಗೆ ಯೋಗಕ್ಕೆ ನೆಲೆಯಾಗುತ್ತದೆ.
ಬೀಜವು ತಾನೆ, ಒಗರವು ತಾನೆ, ತೃಪ್ತಿಯು ತಾನೆ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಕೂಡುವ ತತ್ವವು ತಾನೆ ! ॥ ೪೭೧ ॥

೪೭೨

ತ್ರಾಹಿ ತ್ರಾಹಿ, ಎನ್ನ ಭಾವಕ್ಕೆ ಮೂಲಿಗ ನೀನೆ ಅಯ್ಯಾ.
ತ್ರಾಹಿ ತ್ರಾಹಿ, ಎನ್ನ ಜ್ಞಾನಕ್ಕೆ ಮೂಲಿಗ ನೀನೆ ಅಯ್ಯಾ.
ತ್ರಾಹಿ ತ್ರಾಹಿ, ಎನ್ನ ಕಾಯಕ್ಕೆ ಮೂಲಿಗ ನೀನೆ ಅಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೪೭೨ ॥

೪೭೩

ತ್ರಾಹಿ ತ್ರಾಹಿ ಬಸವಾ,
ತ್ರಾಹಿ ತ್ರಾಹಿ ಚೆನ್ನಬಸವಾ,
ತ್ರಾಹಿ ತ್ರಾಹಿ ಪ್ರಭುವೆ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೪೭೩ ॥

೪೭೪

ತ್ರಾಹಿಮಾಂ ಪರಮೇಶ್ವರ ಜಯ
ಭಕ್ತಿಜ್ಞಾನಮಾಕಾರ ನೀನೆಯಯ್ಯ ಚೆನ್ನಬಸವಣ್ಣ.
ಏಕೋದೇವ ದೇವಧರ್ಮ ಧರ್ಮಗುಣ ಗುಣಪ್ರಕಾಶ
ಪ್ರಕಾಶ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ.
ನಿಮ್ಮಿಂದ ಪ್ರಾಣಲಿಂಗಸಂಬಂಧವಾಗಿ
ನಿಮಗೆ ನಮೋ ನಮೋ ಎನುತಿರ್ದೆನಯ್ಯಾ, ಚೆನ್ನಬಸವಣ್ಣ. ॥ ೪೭೪ ॥

೪೭೫

ತ್ರಿಣಯ ವಿನಯ ಇಷ್ಟದೃಷ್ಟ ಭಕ್ತಿಭೀಮ ಬಸವ,
ಗಮನಸುಮನ ನಿಯತ ಸಮಯ ಭಕ್ತರೂಪ ಬಸವ,
ಪ್ರಾಣಕಾಯರೂಪ ತತ್ವಜ್ಞಾನ ವಿನಾಯಕ ಬಸವ,
ಕಪಿಲಸಿದ್ಧಮಲ್ಲಿನಾಥಯ್ಯಾ, ಪ್ರಾಣಲಿಂಗ ಏಕ ಬಸವ. ॥ ೪೭೫ ॥

೪೭೬

ತ್ರೈಲಿಂಗಕಾನಂದ ಬೀಜಮಾತ್ರವು ನೀನು
ತ್ರೈವಿದ್ಯ ಮೂರಾರುವಿದ್ಯ ನೀನೆ
ತ್ರೈಲಿಂಗ ಮೂಲಕ್ಕೆ ಮುನ್ನಾದ ಮೂರೊಂದು ಪ್ರಸಾದಲಿಂಗ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೭೬ ॥

೪೭೭

ದರಿದ್ರಂಗೆ ಧನದಾಸೆ, ಶೂರಂಗೆ ರಣದಾಸೆ,
ಕಾಮಿಗೆ ಸ್ತ್ರೀಯಾಸೆ, ನೀಚಂಗೆ ಕಲಹದಾಸೆ,
ಪಂಡಿತಂಗೆ ಸಭೆಯಾಸೆ, ಕೋಗಿಲೆಗೆ ವಸಂತದಾಸೆ,
ಪತಿವ್ರತೆಗೆ ಗಂಡನು ಮುನಿದಿಹನು, [ಬಹ]ನೆಂಬಾಸೆ,
ಎನಗೆ ಶ್ರೀಗುರು ಚೆನ್ನಬಸವಸ್ವಾಮಿಗಳ ಪಾದೋದಕದಾಸೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೭೭ ॥

೪೭೮

ದೀಕ್ಷಾತ್ರಯದಲ್ಲಿ ವ್ಯಕ್ತನಾದೆ
ಶಿಕ್ಷ ಸಂಬಂಧಿಸುವಲ್ಲಿ ಭೀತನಾದೆ

ಮುಗ್ಧೆಯು ಕನಸಿನಲ್ಲಿ ಮುಕ್ತನಾದೆ
ಧನ-ತನು-ಮನಂಗಳ ಮೂರ ಮರೆದವನ
ತಾಮಸಂಗಳು ಹಲವನಳಿದವನ
ರಜಂಗಳು ಕೆಲವನುಳಿದವನ ಭೇದಿಸಿ ಕಂಡೆ
ಅದೇನು ಗುಣ ? ಅವ್ಯಯು ನಾನಾ ವಾಯುಸ್ಥಾನದಲ್ಲಿ
ಶುದ್ಧ ಸಂಗವು ಪ್ರಯೋಗಿಸಿದ ಕಾರಣ !
ದೀಕ್ಷೆಯಾಯಿತ್ತು ಕಾಯಕ್ಕೆ
ಶಿಕ್ಷೆಯಾಯಿತ್ತು ಸರ್ವಾಂಗಕ್ಕೆ
ಸ್ವಾನುಭಾವವಾಯಿತ್ತು ಕರಣೇಂದ್ರಿಯ ಸರ್ವಕ್ಕೆ
ದೀಕ್ಷಾತ್ರಯವು ಸಂಬಂಧಿಸಿದ ಕಾರಣ
ನೀ ನಾನಾದೆ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೭೮ ॥

೪೭೯

ದುರಿತಘರಟ್ಟಂಗೆ ಧೂಪಾರತಿಯನು ಕೊಡುವ ಪುರಾತರು ಕೇಳಿರಯ್ಯಾ.
ಹೋಗು ಹೋಗೆಂಬ ಬೀಸಣಿಗೆ
ಅಡಗಡಗೆಂಬ ಘಂಟೆಯ ಸಬುದಕ್ಕೆ
ತೆರಳ್ದೋಡಿಹೋದವು ಪಾಪಂಗಳು.
ಪಾಪಿಯ ಪಾದ ಬಂದರಸಿ ಕೊಂಡೊಯ್ದವು
ಕಪಿಲಸಿದ್ಧಮಲ್ಲಿನಾಥನೊಲ್ಲದವರ. ॥ ೪೭೯ ॥

೪೮೦

ದೂಷಣೆ ನಿಮಿತ್ತ ಲಿಂಗಧಾರಣಶಿಕ್ಷೆ ಎಂದಲ್ಲಿ,
ಬರಿಯ ಪ್ರಾಣಲಿಂಗಿಗಳೆಂದು ದೂಷಣೆಯಾದುದಿಲ್ಲವೆ,
ಪುರಾತರ ನುಡಿಯಲ್ಲಿ ?
ಇದು ಕಾರಣ, ಹಿರಿಯರಿಷ್ಟಲಿಂಗದ ಭಾವ ಧಾರಣಶಿಕ್ಷೆಯಾದಡೆ,
ನಿಮ್ಮ ಶರಣ ಲಿಂಗಧಾರಣಶಿಕ್ಷೆಗೆ ಮನಮಾಳ್ಪ ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೮೦ ॥

೪೮೧

ದೃಷ್ಟವಪ್ಪ ಗುರುಕರುಣದಲ್ಲಿ ಇಷ್ಟಲಿಂಗವ
ಸಂಬಂಧಿಸಿಕೊಟ್ಟ ಬಳಿಕ ಮರಳಿ ಯೋಗವುಂಟೆ ?

ಸರ್ವಯೋಗಕ್ಕೆ ಶಿವಯೋಗ ಮಹಾಯೋಗವೆಂದರಿದ ಬಳಿಕ,
ಮತ್ತೆ ಕಿರಿದು ಯೋಗವೆಂದು ಪಾದೋದಕ ಪ್ರಸಾದಕ್ಕೆ ಹೊರಗಾಗಿ
ಗುರುವಾಜ್ಞೆಯ ಮೀರಿದ ಗುರುದ್ರೋಹಿಗಳ ಎನ್ನತ್ತ ತೋರದಿರಯ್ಯ,
ನಿಮ್ಮ ಧರ್ಮ.
ದೀಕ್ಷಾತ್ರಯದಲ್ಲಿ ಸಂಪನ್ನರಾಗಿ, ಪ್ರಸಾದದಲ್ಲಿ ಲೋಲುಪ್ತರಾಗಿ,
ಜಂಗಮವೆ ಲಿಂಗವೆಂಬವರ ಎನಗೊಮ್ಮೆ ತೋರಯ್ಯ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ, ನಿಮ್ಮ ಧರ್ಮ. ॥ ೪೮೧ ॥

೪೮೨

ದೆಸೆದಿಕ್ಕು ವಲಯದಲಿ ಹೆಸರಿಡಬಾರದುದೊಂದು
ಪಸರಿ ಪರ್ಬಿತ್ತು ನೋಡಯ್ಯ.
ಮೂಲವೊಂದು, ಫಲಮೂರು, ಲೀಲೆಯಿಂದಾರಾಗಿ ತೋರಿದವು ;
ಬೇರೆ ಬೇರೆ ಅನ್ಯವಾದವು.
ತೋರದ ಒಂದರಲ್ಲಿ ಬೇರುಮಾಡಿ ಕಂಡೆಹೆನೆಂದಡೆ,
ತೋರಿತ್ತು ಆ ಮೂಲಕ್ಕೆ ಮೂಲ ಕಂಡಯ್ಯಾ.
ವಿಚಿತ್ರಮೂಲ ಕಪಿಲಸಿದ್ಧಮಲ್ಲೇಶ್ವರನ ಹತ್ತೆ ಸಾರಿದ ರೂಪು ! ॥ ೪೮೨ ॥

೪೮೩

ದೇವನಾಸಂದವ ಭಕ್ತರ ನಿಲವ ಕೇಳಿರಯ್ಯಾ
ಹರಿವ ನದಿಯ ತೆರಸಂತೆ ಪರವಾಗಿಪ್ಪರಯ್ಯಾ
ತಾವು ಮಾಡುವರಲ್ಲದೆ ಮಾಟದೊಳಗಿರರು
ಕಪಿಲಸಿದ್ಧಮಲ್ಲಿಕಾರ್ಜುನಾ.' ॥ ೪೮೩ ॥

೪೮೪

ದೇವ ನಿನ್ನಯ ಪರಿಯನಾರಯ್ಯಲರಿದಯ್ಯ
ಆರೈದ ಶರಣರು ನಿನ್ನ ಪದದಲ್ಲಿ
ಓರಂತೆ ಆನಂದಸ್ಥಾನದಲಿ ತಾವು
ನಿನ್ನಯ ರೂಪ ಭಾವ ತಪ್ಪದೆ ಇಪ್ಪರೈ ಗುರುವೆ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೪೮೪ ॥

೪೮೫

ದೇವನೊಂದೆರಡು ಬದಿಗಳ ಮಾಡಿಟ್ಟನು.
ಆ ! ಹೋ ! ವಾ ! ಹಾ ! ಅಯ್ಯಾ !
ಮೆಚ್ಚು ನಿಮ್ಮದೆನುತ್ತಿರಲು ಮತ್ತೆ ವಿಚಾರಿಸುತ್ತಿಹುದು
ನಿಮ್ಮದೆ ಮರುಳುತನವಯ್ಯಾ,
ಹೋ ! ವಾ ! ಅಯ್ಯಾ !
ಪರಿಣಾಮವುಳ್ಳಡೆ ಹಿಡುವುದು
ಅಲ್ಲದಿದ್ದರೆ ಬಿಟ್ಟು ಹೋಹುದು,
ಕಪಿಲಸಿದ್ಧಮಲ್ಲಿನಾಥನ. ॥ ೪೮೫ ॥

೪೮೬

ದೇವರ ದೇವನಾಣೆಯನೂ, ರಾಣಿವಾಸದಾಣೆಯನೂ ಇಡದಿರಯ್ಯಾ.
ಹಾ ! ಹಾ !ಅಯ್ಯಾ, ಬೇಡಯ್ಯಾ, ಮೇಲೆ ಕರ ದಿಮ್ಮಿತ್ತು.
ಅವರ ಹಿಂಬಲ್ಲು ಮುಂಬಲ್ಲುಗಳನೆ ಕೂರಹವಲೆ ತರಿತರಿದು
ನರಕವಲ್ಲಿಕ್ಕುವರು ಕಪಿಲಸಿದ್ಧಮಲ್ಲಿನಾಥನಾಳು ನೇಮಕರು. ॥ ೪೮೬ ॥

೪೮೭

ದೇವರ ದೇವ ! ಮುನಿಗಳ ಉಮಾದೇವಿ ಕನ್ನಿಕೆಯರ
ನಿಜವನೊಡಹರಿದು ಕೇಳವ್ವ ಕೇಳವ್ವ !
ನಿನ್ನ ಭಾಗ್ಯದಳತೆಗಳ ಉಂಗುಟದಲಾಳುತ್ತಿದ್ದೇನೆ ಜಗಜುಗವ
ನೀನಿನ್ನು ಮುನ್ನ ಹುಟ್ಟಿದವಂಗೆ ಭೋಗಿಯಾಗಿಪ್ಪೆಯವ್ವೆ
ಎನ್ನ ಕಪಿಲಸಿದ್ಧಮಲ್ಲಿನಾಥದೇವಗವ್ವ ! ॥ ೪೮೭ ॥

೪೮೮

ದೇವರು ಕೈವೀಸಲಿಕೆ ಅವರಿವರೆನ್ನೆ ಕಂಡಯ್ಯಾ !
ನೆಲೆಗೊಳ್ಳಲೀಯದು ಮೊಲೆಗಳಲೆಸೆವೆ ನೀ ಅಯ್ಯಾ !
ಭಾಷೆಯಾಳು ಕಾಮನು.
ಕಪಿಲಸಿದ್ಧಮಲ್ಲಿನಾಥನೆಸ ಹೇಳಿದವರನೆಸುವನಯ್ಯಾ. ॥ ೪೮೮ ॥

೪೮೯

ದೇವಿಯರಿಬ್ಬರಿಲ್ಲದಂದು,
ಪ್ರಧಾನಿ ಮಂತ್ರಿಗಳಿಲ್ಲದಂದು,
ಆರಾರೂ ಇಲ್ಲದಂದು,
ಸಂಕಲ್ಪ ವಿಕಲ್ಪವಿಲ್ಲದಂದು,
ಉತ್ಪತ್ತಿ–ಸ್ಥಿತಿ–ಲಯಂಗಳಿಲ್ಲದಂದು,
ನಿನ್ನಲ್ಲಿ ನೀ ನಾನೆಂಬುದಿಲ್ಲದಂದು ಶೂನ್ಯನಾಗಿದ್ದೆ
ಎನ್ನ ಕಪಿಲಸಿದ್ಧಮಲ್ಲಿನಾಥಾ. ॥ ೪೮೯ ॥

೪೯೦

ದೇವಿಯರಿಬ್ಬರಿಲ್ಲದಂದು,
ಪ್ರಧಾನಿ ಮಂತ್ರಿಗಳಿಲ್ಲದಂದು,
ಆರಾರೂ ಇಲ್ಲದಂದು ನೀನಾದಿಮುಖಶೂನ್ಯನಯ್ಯಾ.
ಅರ್ಥಾಂತಾನ್ವಯಕೆ ನೀ ಮೂಲನೆಂಬೆ,
ನಿನ್ನೊಡನೆ ಬಂದಾತ ಬಸವಣ್ಣ.
ನೀನು ತಮಂಧದಲ್ಲಿ ಜ್ಞಾನಭಾಸ್ಕರದೀಪ್ತಿಯಂ ಪ್ರವೇಶಿಸಲುಪಟ್ಟಡೆ,
ನೀ ಸಕಲವನು ನಿಃಕಲವನು ಪ್ರಾಪಂಚಿಕವನು ತಾತ್ಪರ್ಯವ ಮಾಡುವಾಗ
ನೀನೆ ಎಂದೆಂಬೆ, ಅದು ಬಸವಣ್ಣನನುಮತ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನೀನನಾದಿಮೂಲದೊಡೆಯನೆಂದೆಂಬೆ.
ನಿಮ್ಮ ಬಲ್ಲಾತ ಬಸವಣ್ಣ ;
ಗುರು–ಲಿಂಗ–ಜಂಗಮತ್ರಯವು ಬಸವಣ್ಣನಂಶಿಕವು. ॥ ೪೯೦ ॥

೪೯೧

ದೇಹದ ಸಿರಿಯ ಆಗುಹೋಗನರಿಯಬಾರದು
ಆಗೆಂದರಿಯಬಾರದು, ಈಗೆಂದರಿಯಬಾರದು
ಇದನೋಜೆಮಾಡಿಕೊಳ್ಳಿ ಶಿವಭಕ್ತಿಯಿಂದ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೯೧ ॥

೪೯೨

ದೇಹವೆಂಬ ದೇವಾಲಯದಲ್ಲಿ
ದೇವಾಲಯದವರ ಮೂವರು ಮುಂದಿಯ ಕಾಣದೆ

ಕಂಗೆಟ್ಟಿದ್ದೇನೆ ಗುರುವೆ.
ದೇಗುಲದೊಡೆಯರ ಕರತಂದು ದೇವಾಲಯವಂತುವ ತೋರಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೪೯೨ ॥

೪೯೩

ದೇಹಸಂಗವ ಕಳೆದು ವಾಯು ಪ್ರಾಣವ ಕೊಂದು
ಕಾಯ ನಿರ್ಮಳತೆಯ ಮಾಡಿ
ಎನ್ನ ವಾಯದನುಮತ ವ್ಯಾಕುಳವ ಬಿಡಿಸಿ
ಏಕಾಕ್ಷರದ ಭೇದವನರುಪಿ ಚತುಃಪದವನತಿಗಳೆದು
ಶುದ್ಧ ಆನಂದ ಭಾವತ್ರಯ ಲಿಂಗ ಮೂಲವನು ಮಾಡಿ [ಭಾ]ವಿಸುತ
ಸಕಳ ನಿಃಕಳ ತತ್ತ್ವ ತುರೀಯ ತ್ವಂಪದ ತತ್ತ್ವಾರ್ಥವನೋರಂತೆ ಅರುಪಿದ
ಆನಂದ ತತ್ತ್ವಾತೀತನು ಶ್ರೀಗುರು ಚೆನ್ನಬಸವಣ್ಣನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೯೩ ॥

೪೯೪

[ದೋಷವು ?] ಮನದಲ್ಲಿದ್ದು ಕಾಯದಲ್ಲಿಲ್ಲದವಗೆ ಶತಜನ್ಮಕ್ಕೆ ಮೋಕ್ಷ.
ಕಾಯದಲ್ಲಿದ್ದು ಮನದಲ್ಲಿಲ್ಲವವಗೆ ಮೂರು ಜನ್ಮಕ್ಕೆ ಮೋಕ್ಷ.
ಕಾಯ ಮನೋಯುಗದಲ್ಲಿಲ್ಲವವ ಮೋಕ್ಷರೂಪು ನೋಡಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೯೪ ॥

೪೯೫

ಧನಕ್ಕೆ ಮನಕ್ಕೆ ಕಾಮಿಸದಿರು ಎನ್ನಯ್ಯಾ,
ನಿಮ್ಮ ನೆನದು, ನಿಮ್ಮ ನೊಡಿ
ನಿಮ್ಮ ತೋರಿ ನಿಮ್ಮ ಚಿತ್ತದಲ್ಲಿರಿಸಾ.
ಸಲೆ ನಿಮ್ಮ ಬೇಡುವ ಮನ, ದಾಸಿಮನ ಮಾಡದಿರೆನ್ನ
[ಕಪಿಲಸಿದ್ಧ]ಮಲ್ಲಿಕಾರ್ಜುನಯ್ಯ ತಂದೆ. ॥ ೪೯೫ ॥

೪೯೬

ಧರೆ ದೆಸೆವಳಯವೆಲ್ಲ ತನಗಾದಡೂ ನಿಲ್ಲಳು.
ಎನಿತು ತ್ರಿಭುವನ ರಾಜ್ಯ ಪದಂಗಳು ತನಗಾದಡೂ ನಿಲ್ಲಳು.

ಅನಿತರೊಳು ತೃಪ್ತಿವಡೆಯಳು.
ಈ ಆಸೆಯೆಂಬವಳಿಂದವೆ ನಿಮ್ಮಡೆಗಾಣದಿಪ್ಪೆನು.
ಈ ಆಸೆಯೆಂಬ ಪಾತಕಿಯನೆಂದಿಂಗೆ ನೀಗಿ
ಎಂದು ನಿಮ್ಮನೊಡಗೂಡಿ ಬೇರಾಗದಿಪ್ಪೆನೊ, ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ ! ॥ ೪೯೬ ॥

೪೯೭

ಧರೆಯಗಲದ ಜಲವು
ಕರಣೇಂದ್ರಿಯಗುಣವು
ತರತರದ ತೇಜದ ತೆರೆಯು ಬಂದು
ಪರಿಭವದ ತಡಿಗೆ ಹಾಯಿಕದ ಮುನ್ನ
ಮೃಡನೆ ನೀ ಕೈಗುಡಯ್ಯ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೯೭ ॥

೪೯೮

ಧರೆಯಗಲದೊಳಗೊಂದು ಹಿರಿದಪ್ಪ ಲೋಭವು
ತನುವೆಂಬುದನು ತಾನು ಲೀಯ್ಯಮಾಡಿ
ಮನ ಮಗ್ನದೊಳಗೆ ನೆಲೆಗೊಂಡೆನೆಂದಡೆ
ನೆಲೆಗೊಳ್ಳಲೀಯ್ಯದೆ ತನ್ನ ಮಯವ ಮಾಡಿತ್ತು
ಕರುಣಾಕರನೆ ಕಳೆದು ಕಾಯಯ್ಯ ತಂದೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೯೮ ॥

೪೯೯

ನಂಬಿದೆನಯ್ಯಾ ಪ್ರಭುವಿನ ಪಾದವ.
ನಂಬಿದೆನಯ್ಯಾ ಬಸವಣ್ಣನ ಪಾದವ.
ನಂಬಿ ನಚ್ಚಿ ನಿಮ್ಮ ಮೊರೆಪೊಕ್ಕೆನಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೪೯೯ ॥

೫೦೦

ನಟ್ಟಡವಿಯೊಳಗೆ ಇರುಳು–ಹಗಲೆನ್ನದೆ,
'ಅಪ್ಪಾ ! ಅಯ್ಯಾ !' ಎಂದು ನಾನರಸುತ್ತ ಹೋದಡೆ,

'ನಾನಿದ್ದೇನೆ, ಬಾ ಮಗನೆ' ಎಂದು ಕರೆದು, ಎನ್ನ ಕಂಬನಿದೊಡೆದು,
ತನ್ನ ನಿಜವ ತೋರಿದ ಪಾದವಿಂದೆನ್ನಲ್ಲಿಗೆ ನಡೆದುಬಂದಡೆ
ನಾನರಿಯದೆ ಮರುಳುಗೊಂಡೆಹೆನೆಂದು ಎನ್ನ ಮನದೊಳಗೆಚ್ಚರ ಮಾಡಿದ.
ಆತನನರಸಿಕೊಂಡು ಬಂದೆನ್ನ ಹೃದಯದಲಿಂಬಿಟ್ಟುಕೊಂಬೆ,
ಎನ್ನ ಕಪಿಲಸಿದ್ಧಮಲ್ಲಿಕಾರ್ಜುನನ. ॥ ೫೦೦ ॥

೫೦೧

ನಡನಡ ನಡುಗುವ ಅವಗುಣ ಮನಂಗಳ
ಅವಧಿಗಳು ನೆರದೆಂದಿಂಗೆ ಪೋಪವೆಂದು
ನಿಮ್ಮೊಡಗೂಡಿ ಬೇರಾಗದೆಂದಿಪ್ಪೆನೊ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೦೧ ॥

೫೦೨

ನಡೆನುಡಿಗಳೊಂದಾದವರಿಗೊಲಿವೆ ಕಂಡಯ್ಯಾ.
ನುಡಿಯೆ ಬ್ರಹ್ಮವಾದವರ ನೀನೊಲ್ಲೆಯಯ್ಯಾ.
ಮೃಡನೆ, ಕಪಿಲಸಿದ್ಧಮಲ್ಲಿಕಾರ್ಜುನಲಿಂಗ,
ನುಡಿಯು ಬ್ರಹ್ಮಂಗಳಿಂದಪ್ಪುದೇನೊ ! ॥ ೫೦೨ ॥

೫೦೩

ನಡೆ–ನೋಟ–ಭಾವ–ದೃಷ್ಟಿ ಲಯವಾಯಿತ್ತು.
ಗಮನ ಗಾಂಭೀರ್ಯವಡಗಿತ್ತು ; ಕಾಲಕಂಠವಳಿಯಿತ್ತು.
ಗಮನ–ಸುಮನವಡಗಿತ್ತು, ಕದಳಿ ಲೋಕದಳವಾಯಿತ್ತು.
ಪ್ರಸಾದ ಸಂಬಂಧ ಬಲುಹಿನಲ್ಲಿ ನಿಂದಿತ್ತು.
ಮಾತು ಮನವಾಯಿತ್ತು, ಅನುಭಾವವೈಕ್ಯವಾಯಿತ್ತು.
ನಮ್ಮ ಕಪಿಲಸಿದ್ಧಮಲ್ಲಿನಾಥನಲ್ಲಿ
ನಮ್ಮ ಚೆನ್ನಬಸವಣ್ಣನ ಪ್ರಾಣಲಿಂಗಸಂಬಂಧ
ಪರಿಣಾಮದಲ್ಲಿ ನಿಂದಿತ್ತು. ॥ ೫೦೩ ॥

೫೦೪

ನಡೆ ನೋಡುವ ಸುಖದ ಸುಗ್ಗಿ ನೀನೆ ಅಯ್ಯಾ,
ಕಾಯ ಜೀವದ ಗುಣ ನೀನೆ ಅಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೫೦೪ ॥

೫೦೫

ನನ್ನ ಕೋಪವೆಂಬುದು ನಿಮ್ಮ ಕಣ್ಣು ನೋಡಯ್ಯಾ ;
ನಾನೇತರೊಳಗೇನು ಹೇಳಯ್ಯಾ !
ನಿಮ್ಮ ಜ್ಞಾನದ ತೇಜದ ಮುಂದೆ ಎನ್ನರಿವು ಏತರದು ಹೇಳಯ್ಯಾ !
ಎನ್ನ ದಿಟದ ಭಕ್ತಿ ನಿಮ್ಮ ರೂಪು ಕಂಡಯ್ಯಾ.
ಎನಗೆ ಬೇರೆ ಸ್ವತಂತ್ರತೆಯುಂಟೆ, ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೦೫ ॥

೫೦೬

ನಯನೇಂದ್ರಿಯಂಗಳು ಮುಟ್ಟದೆ,
ಶ್ರೋತ್ರೇಂದ್ರಿಯಂಗಳು ಮುಟ್ಟದೆ,
ಘ್ರಾಣೇಂದ್ರಿಯಂಗಳು ಮುಟ್ಟದೆ,
ಜಿಹ್ವೇಂದ್ರಿಯಂಗಳು ಮುಟ್ಟದೆ,
ತ್ವಗಿಂದ್ರಿಯಂಗಳು ಮುಟ್ಟದೆ
–ಇಂತು ಇಂದ್ರಿಯಂಗಳು ಹಲವ ಹರಿಯದೆ,
ಇವು ಈಶನಮುಖವೆಂದರ್ಪಿಸಾ ಸೂಸಲೀಯದೆ,
ಸರ್ವಕರಣಂಗಳು ಈಶನ ಕರಣಂಗಳೆಂದರ್ಪಿಸಾ.
ಎಲೆ ಅಯ್ಯಾ, ನಿನಗೆ ಗುರುಕರಣವಾದ ಬಳಿಕ,
ಸರ್ವಾಂಗ ಲಿಂಗಾಂಗವೆಂದರ್ಪಿಸಿ
ಕಪಿಲಸಿದ್ಧಮಲ್ಲಿಕಾರ್ಜುನಯ್ಯನೆಂಬ ನಿತ್ಯವ ಕೂಡಾ ಅಯ್ಯಾ. ॥ ೫೦೬ ॥

೫೦೭

ನರಸಮುದ್ರವೆಂಬುದೊಂದು
ಕೊಳಚೆಯೊಳಗಣ ಚಿಕ್ಕ ಮಹಾಕೊಳಚೆಯೊಳಗೆ
ಅಯ್ಯಾ, ಲೋಕ ಬಿದ್ದು ತೇಕಾಡುತ್ತಿದೆ.
ಇದರಿಂದ ಹೊಲ್ಲ ;
ಕೈಯ ನೀಡು, ಕಪಿಲಸಿದ್ಧಮಲ್ಲಿಕಾರ್ಜುನಾ, ನೀನು. ॥ ೫೦೭ ॥

೫೦೮

ನಲ್ಲನ ನೋಟದ ಬೇಟದ ಕೂಟದ ಪರಿಯ
ನಾನೇನೆಂದು ಹೇಳುವೆ ? ವಿಪರೀತ ಕೆಳದಿ.

ಕೂಟದ ಸುಖದಲ್ಲಿ ನೋಟ ಕಂಬೆಳಗಾದಡೆ
ಬೇಟ ಬೇರುಂಟೆ ? ಹೇಳು ಅವ್ವಾ.
ನೋಡಿದ ದೃಷ್ಟಿ ಎವೆಗುಂದದೆ ? ಮೋಹದ ಪರಿ ಎಂತುಟು ?
ಹೇಳಾ ಅವ್ವಾ.
ನೋಟ ಬೇಟ ಕೂಟ ಸಮಸುಖ ಸಮರತಿಯಾದಡೆ
ಕಪಿಲಸಿದ್ಧಮಲ್ಲಿನಾಥಯ್ಯ ಬೇರಿಲ್ಲವವ್ವಾ. ॥ ೫೦೮ ॥

೫೦೯

ನಲ್ಲ ! ನಿಮ್ಮ ಬೇಟ ವಿಷಮದ ಬೇಟವಯ್ಯಾ.
ನಲ್ಲ ! ನಿಮ್ಮ ಬಯಲಿಗೆ ಬೇಟಗೊಂಡೆನಯ್ಯಾ.
ಅಯ್ಯಾ, ಅಕ್ಕಟಾ, ಇವಳೆನ್ನ ಸಬುದಕ್ಕೆ ಬೇಟಗೊಂಡಳೆಂದು
ಕೂಡಿ ಕೂಡಿ ಕೂಡ್ದೆ ಎನ್ನ,
ಕಪಿಲಸಿದ್ಧಮಲ್ಲೇಶ್ವರದೇವಾ. ॥ ೫೦೯ ॥

೫೧೦

ನಸುನಗೆಯ ಥಾಳದಲ್ಲಿ ಎಸೆದಿಪ್ಪ ನನ್ನ ನಲ್ಲನೆ.
ಹೊಸ ಕುಸುಮದ ಕಾಣಿಕೆಯ ತಂದೆನು ;
ಶಿಶುವೆಂದು ಮನ್ನಿಸಿದ ಶಿಶು ಸಸಿಯ ಫಲಕ್ಕೆ
ಮೂಲಸ್ವಾಮಿಯಾಯಿತ್ತಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೫೧೦ ॥

೫೧೧

ನಾದ ಬಿಂದುವಿನಲ್ಲಿ ಆದಿಬ್ರಹ್ಮನ ಕೂಡಿ,
ವಾದ ಸಾದಾಖ್ಯಗಳನೊಡಗೂಡಿದ
ಆನಂದ ತುಂಬಿಗಳ ಭೇದ ಭೇದಿಯ ಕೂಡಿ,
ಮೋದ ಮೂವತ್ತಾರು ತತ್ತ್ವಂಗಳ ಭೇದಗಳ ಭೇದಿಸಿ,
ಅಕ್ಷರದ್ವಯದಲ್ಲಿ ತಾನು ಸಂಗವಾದ ನಿಶ್ಚಯದಲಿ ;
ತವಕಿಸುವ ಕರಣವನು, ಹರಿವ ಪ್ರಾಪಂಚುವನು,
ಒಸರುವ ಬಿಂದುವನು ಪಸರಿಸುವ ಭೇದವನು
ದೆಸೆಗೆಟ್ಟು ಕಂಡೆ, ಕಪಿಲಸಿದ್ಧಮಲ್ಲೇಶ್ವರಾ. ॥ ೫೧೧ ॥

೫೧೨

ನಾನು ನಾನೊ, ನೀನು ನೀನೊ,
ಬಸವ ಬಸವಾ,
ಮೌನಮುಗ್ಧ ಬಸವ ನೀನೆ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೫೧೨ ॥

೫೧೩

ನಾನೇನ ಮಾಡುವುದೆಲ್ಲವನು ನೀನೆಂದೆ ಇದ್ದೆನಯ್ಯಾ.
ನಾನೇನ ಮಾಡುವುದೆಲ್ಲವನು ನೀನೆ ಅಲ್ಲವೆಂದಡೆ,
ಅದು ಮಾಣಲಿ, ನಿಮ್ಮಾಣತಿ.
ಕಾಣಬಾರದ ಘನವ ಕಾಯದಲ್ಲಿ ಧರಿಸಿ,
ಹೇಳಬಾರದ ನಿಜವ ಮನದಲ್ಲಿ ನೆಲೆಗೊಳಿಸಿ,
ತೋರಬಾರದ ಕುರುಹ ಎನ್ನರಿವಿನಲ್ಲಿರಿಸಿ
ಇನ್ನು ನಿಮ್ಮ ಕಾಂಬಂತೆ ಮಾಡಾ,
ಕಪಿಲಸಿದ್ಧಮಲ್ಲಿನಾಥಾ. ॥ ೫೧೩ ॥

೫೧೪

ನಾನೇನೆಂಬ ಮನ ನೀನೆಯಾದೆ ಬಸವಾ.
ತಾನೆಂಬ ತನು ನೀನೆಯಾದೆ ಬಸವಾ.
ಕಪಿಲಸಿದ್ಧಮಲ್ಲಿನಾಥನೆ,
ನೀನೆಂಬ ಮಾಟ ನೀನೆ ಬಸವಾ. ॥ ೫೧೪ ॥

೫೧೫

ನಾ ಬಲ್ಲೆನೈ ನಿನ್ನ, ನೀ ಬಲ್ಲೆಯೈ ಎನ್ನ.
ಆರಯ್ಯ ಬಲ್ಲನೈ ಬಸವಣ್ಣನು.
ಭಾನುವಿನ ಉದಯಕ್ಕೆ ಆದಿಯಕ್ಷರ ಭೇದ
ಅನತದಿ ನೀನಾದೆ ಬಸವ ತಂದೆ.
ಸೀಮೆಗೆಟ್ಟಾ ಲೋಕ ಏನಾದಡೇನಯ್ಯಾ
ಆನು ನಿನ್ನೊಳಗಡಗಿ ಐಕ್ಯಪದದ
ಆನತವನ್ನೈದಿ ನಾ ಕೂಡೆ ಸುಖಿಯಾದ ಬಳಿಕೇನಾದಡೇನಯ್ಯಾ ಬಸವಣ್ಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೧೫ ॥

೫೧೬

'ನಾ ಭುಕ್ತಂ ಕ್ಷೀಯತೇ ಕರ್ಮ' ಎಂದುದಾಗಿ
ಭಾಳದಕ್ಷರವ ತೊಡೆಯಲಿಕೆ ಆರಳವಯ್ಯಾ,
ಗುರುಕಾರುಣ್ಯವುಳ್ಳವರಿಗಲ್ಲದೆ ?
ಗುರುವೆ, ಎನ್ನ ಪರಿಭವಕ್ಕೆ ಬಾರದಂತೆ ತಪ್ಪಿಸಿದೆ ;
ತೋರಿದೆ ಉರುತರ ಪಾದೋದಕ-ಪ್ರಸಾದವ ;
ನಿನ್ನ ಗುಣದಿಂದ ತನುಗುಣ ನಾಸ್ತಿಯಾದೆ.
'ನಾ ಭುಕ್ತಂ' ಎಂಬುದ ಮೀರಿ ಶಿವಭೋಕ್ತೃವಾದೆ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಕೂಡಿದೆ. ॥ ೫೧೬ ॥

೫೧೭

ನಾ ಮಾಡಿದ ಕೆರೆಯೆತ್ತ, ಕರಿಕಾಲಚೋಳ ಮಾಡಿದ ಕೆರೆಯೆತ್ತ ?
ನಾ ಮಾಡಿದ ಬತ್ತವೆತ್ತ, ದೇವಬತ್ತಗಳೆತ್ತ ?
ಕಪಿಲಸಿದ್ಧಮಲ್ಲಿಕಾರ್ಜುದೇವ[ನ] ಭಾಗ್ಯವೆತ್ತ,
ಪ್ರಮಥಚಿಂತಾಮಣಿಯ ಪಾದೋದಕವೆತ್ತ ? ಕೇಳಾ ಕೇದಾರಯ್ಯಾ.
॥ ೫೧೭ ॥

೫೧೮

ನಾ ಮಾಡುವ ಭಕ್ತಿ ಬಸವಣ್ಣನದಯ್ಯಾ.
ನಾ ಮಾಡುವ ಯೋಗ ಬಸವಣ್ಣನದಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೫೧೮ ॥

೫೧೯

ನಾ ಮುನ್ನ ಉಳಿದೆ ಕಳೆದೆ ಮಿಂಡರ
ನೀ ಹೋಗಿ ತಾರಗೆ ಅವ್ವಾ.
ಚಿತ್ತವು ಮನವು ಹೋಗಿ
ನಾನವನ ಹತ್ತಿದ ಮನವ ತರಲಿಕಾರೆನಹೊ.
ಅಯ್ಯಾ, ಕಪಿಲಸಿದ್ಧಮಲ್ಲಿನಾಥಯ್ಯಾ,
ನಾನೀಗ ಏಗೆಯ್ದುರೂ ಬಿಡಲಾರೆನವ್ವ. ॥ ೫೧೯ ॥

೫೨೦

ನಾಯಂತೆ ಮನುಜರಪ್ಪರೆ ಅಯ್ಯ.
ನಾಯಿ ಕಚ್ಚಿದಂತೆ ಕಚ್ಚುವರೆ ?
ಅವರು ಆರೆನಾಯಾದರೆ, ನಾವು ನೆರೆನಾಯಪ್ಪರೆ !
ಕಪಿಲಸಿದ್ಧಮಲ್ಲಿಕಾರ್ಜುನಾ, ದೇವರದೇವ. ॥ ೫೨೦ ॥

೫೨೧

ನಾಸಿಕವಿದ್ದು ನಾಸಿಕರೋಗವಿದ್ದಡೆಂತು ?
ಅಲ್ಲಿ ಯೋಗವ ನಡೆಸಲು ಮನಕ್ಕೆ ಶಾಂತಿಯಿಲ್ಲ.
ಶಾಂತಿಯಿಲ್ಲದಲ್ಲಿ ಭವಶಾಂತಿಯೆಂತು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೨೧ ॥

೫೨೨

ನಿಜದ ಪ್ರಭೆ ನಿತ್ಯಪ್ರಕಾಶ ತೋರುತ್ತಿದೆ ಎನಗಯ್ಯಾ.
ಮೂರ್ತಿಯಾಗಿದೆ ಎನ್ನ ಕಣ್ಣ ಮುಂದೆ ಅಯ್ಯಾ.
ಇದರ ಪ್ರಭೆಯು ಕಂಡು ಬೆರಗಾದೆನಯ್ಯಾ.
ಕಪಿಲಸಿದ್ಧಮಲ್ಲಿನಾಥಯ್ಯಾ,
ಕರುಣಿಸಯ್ಯಾ, ನಿಮ್ಮ ಧರ್ಮ. ॥ ೫೨೨ ॥

೫೨೩

ನಿಟಿಲಾ[ಕ್ಷಾ]ಕಾರ ಕರಣಿಕಂ ಭವಾ ಬಸವ ಬಸವಾ,
ನಿಜತತ್ವಜ್ಞಾನ[ತನು] ಬಸವ ಬಸವಾ.
ಕಪಿಲಸಿದ್ಧಮಲ್ಲಿನಾಥಯ್ಯಾ,
ಬಸವಣ್ಣನಿಂದ ನಿಮ್ಮ ಪ್ರಾಣಲಿಂಗವ ಕಂಡೆನಯ್ಯಾ. ॥ ೫೨೩ ॥

೫೨೪

ನಿತ್ಯಪ್ರಸಾದವಸು ತಥ್ಯ ಮಾಡೈ ಗುರುವೆ
ಭಕ್ತಿತ್ರಯದ ನಿತ್ಯನಿರುಪಮ
ಕಪಿಲಸಿದ್ಧಮಲ್ಲೇಶ್ವರನೆ,
ಭಕ್ತಿಪಥವನೆ ಕುಡುವುದೊಲಿದು ತಂದೆ. ॥ ೫೨೪ ॥

೫೨೫

ನಿಧಾನವ ಕಂಡರೆ ಜಲಗ ತೊಳೆಯಲೇಕೆ ?
ಮಾಣಿಕ್ಯ ದೊರಕೊಂಡರೆ ಕೊಳ್ಳಿಯ ಬೆಳಕೇಕೆ ?
ಕಾಮಧೇನು ಕರೆವರೆ ಕರುವಿನ ಹಂಗೇಕೆ ?
ಎಮ್ಮ ಕಪಿಲಸಿದ್ಧಮಲ್ಲಿಕಾರ್ಜುನದೇವರು
ತಮ್ಮ ನಿಜರೂಪವ ತೋರಿದ ಬಳಿಕ
ಆರಾಧನೆಯೆಂಬ ಉಪಚಾರದ ಹಂಗೇಕೆ ಹೇಳಾ. ॥ ೫೨೫ ॥

೫೨೬

ನಿನಗೆ ನೀನೆ ಕರ್ತನು ಬಸವಾ ;
ಎನಗೆ ನೀನೆ ಕರ್ತನು ಬಸವಾ ;
ನಾ ಮಾಡುವ ಭಕ್ತಿಗೆ ನೀನೆ ಕರ್ತನು ಬಸವಾ.
ಕರುಣಿ ಕಪಿಲಸಿದ್ಧಮಲ್ಲಿನಾಥ ಬಸವಾ. ॥ ೫೨೬ ॥

೫೨೭

ನಿನ್ನಡಕ ನೀನೆಯಾದೆ ಬಸವಲಿಂಗವೆ.
ಎನ್ನ ಚಿತ್ಪಿಂಡದ ರೂಪು ನಿಮ್ಮಲ್ಲಿ
ತಲ್ಲೀಯವಾಯಿತ್ತು ಬಸವ ಗುರುವೆ.
ಭಾವಿಸಿಹೆನೆಂಬ ಭಾವ ನಷ್ಟವಾಯಿತ್ತಯ್ಯಾ,
ಕಪಿಲಸಿದ್ಧಮಲ್ಲಿನಾಥನ ಗುರು ಬಸವಾ. ॥ ೫೨೭ ॥

೫೨೮

ನಿನ್ನನಾರು ಬಲ್ಲರು ಎನ್ನವರಲ್ಲದೆ ?
ಅಂದು ನೀನು ಅನಾಹತಲೋಕದಲ್ಲಿ ದೇಶಿಕನಾಗಿ ಇರಲಾಗಿ
ನಿನ್ನನೆನ್ನವರು ಸಲಹರೆ ?
ನೀನು ಶುದ್ಧ ಸಿದ್ಧ ಧವಳದಲಿ ಬಂದಡೆ
ನಿನ್ನೊಡನೆ ಬಂದು ಊಡಿಸಿದರೆಮ್ಮ [ವರು]
....
[ಕಪಿಲಸಿದ್ಧಮಲ್ಲಿಕಾರ್ಜುನಾ] ॥ ೫೨೮ ॥

೫೨೯

ನಿನ್ನನೊಲಿಸುವಡೆ ನಿರಂಪಭಾವವೆ ತೃಪ್ತಿ ;
ಅನ್ಯಭಾವಂಗಳನೊಲ್ಲೆನಯ್ಯಾ.
ಹೊನ್ನು ಹೆಣ್ಣು ಮಣ್ಣು ಮುನ್ನವೆ ಸಟೆ ಮಾಡಿ,
ದಾಸೋಹದಲ್ಲಿ ಸುಖಿಯಾದೆನಯ್ಯಾ,
ಕಪಿಲಸಿದ್ಧಮಲ್ಲೇಶ್ವರಾ. ॥ ೫೨೯ ॥

೫೩೦

ನಿನ್ನವರ ಮೂರ್ತಿಧ್ಯಾನದಿಂದ ನೀನಪ್ಪೆ
ಅಪ್ಪೆನಪ್ಪೆನಯ್ಯಾ ದ್ವಯವಿಲ್ಲದೆ.
ನೀ ಬಂದು ಇರಿಸಿದಂತೆ ಇದ್ದು ಹೇಳಿದ ಹಾಂಗೆ
ನೆನೆದೆನಾದಡೆ ಅನವರಪ್ಪುದೇನರಿವಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೩೦ ॥

೫೩೧

ನಿನ್ನಾಜ್ಞೆಯಿಂದ ಲೋಕ ಒಪ್ಪಿಪ್ಪುದಯ್ಯಾ, ತಂದೆ.
ಬಸವಣ್ಣನಾಜ್ಞೆಯಿಂದ ನೀನಿಪ್ಪೆಯಾಗಿ,
ಅನಿಮಿಷಾನಂದದಲ್ಲಿ, ಬಸವಾಕ್ಷರತ್ರಯ
ಗುರು ಬಸವಮೂರ್ತಿ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೫೩೧ ॥

೫೩೨

ನಿಬ್ಬಟ್ಟೆಯಲ್ಲಿ ಮನೆಯ ಮಾಡಿಕೊಂಡಿಪ್ಪ ನಲ್ಲಾ,
ನಿನ್ನ ನಾ ಕಂಗಳ ಮುಂದಿಂಥಗಲಿದೊಡೆ ಎಂತು ಜೀವಿಸುವೆನಯ್ಯಾ ?
ಎಂತು ಬದುಕುವೆನಯ್ಯಾ ?
ಎನ್ನ ಳಲ ಬಳಲ ಕಂಡು ಕರುಣದಿಂದ ನೋಡಿ,
ನಿನ್ನಳಲೇಸುಸುರುಸುರೆಂದು ಕಣ್ಣೀರ ತೊಡೆದೊಡಗೂಡಾ,
ಕಪಿಲಸಿದ್ಧಮಲ್ಲಿನಾಥಾ. ॥ ೫೩೨ ॥

೫೩೩

ನಿಮ್ಮನರಿವರನರಿವೆನಯ್ಯಾ.
ನಿಮ್ಮ ಮರೆವರ ಮರೆವೆನಯ್ಯಾ.

ಮಾಯಿದೇವಿಗೆ ಮತವ ಕೊಟ್ಟು
ಎಲ್ಲ ಹಿರಿಯರ ಜರಿವೆಯಯ್ಯಾ.
ಇವೆಲ್ಲವ ತೋರಿ ನೀ ಗೆಲುವೆಯಯ್ಯಾ
ಎನ್ನ ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೫೩೩ ॥

೫೩೪

ನಿಮ್ಮ ನುಡಿಯ ಇರವಿನಂತೆ, ಪ್ರಮಥರ ಇರವೊ, ನಿಮ್ಮ ಇರವೊ ?
ಒಂದಕ್ಕೊಂದು ಒಂದಕ್ಕೊಂಬತ್ತು ಮಾಡಿ ನುಡಿದಡೆ,
ಸಹಜವೆಂಬುವ ಭಾವ ಅದೆಂತು ?
ಕಪಿಲಸಿದ್ಧಮಲ್ಲಿಕಾರ್ಜುನ ಶರಣರಲ್ಲಿ ಸಹಜಪ್ರೇಮವುಳ್ಳಡೆ,
ಸಕಲರ ನುಡಿಯು ಇಷ್ಟ ಕೇಳಾ, ಕಿನ್ನರಯ್ಯಾ. ॥ ೫೩೪ ॥

೫೩೫

ನಿಮ್ಮ ಶ್ರೀಪಾದವ ಹರಿದು ಹತ್ತುವ
ನೆನೆವ ಮನವ ಕೆಡಿಸಲೆಂದು
ಮೋಹದ ಗಾಳಿ ಕೈವೀಸಲೊಡನೆ
ಕೋಪದ ಕಿಚ್ಚು ಹತ್ತಿ ಬೆಂದೆನಯ್ಯಾ.
ನಿಮ್ಮ ನೆನೆವ ಮನವ ಕಾಡುವ ವಿಧಿಯ
ಕೊಂದು ನೆಲಸೆನ್ನ ಕಪಿಲಸಿದ್ಧಮಲ್ಲಿನಾಥ ದೇವರದೇವ ! ॥ ೫೩೫ ॥

೫೩೬

ನಿರ್ವಾಣ ಪುರುಷರಿಗೆ ಕ್ಷುಧೆಯಾಗಿ ಕಾಡಿತ್ತು.
ಅಯ್ಯಾ, ಮಹಾಯೋಗಿಗಳಿಗಾಗಲೀ
ಕರ್ಮ ತಾತ್ಪರ್ಯಕ್ಕೆ ತನ್ನ ಮಯವಿತ್ತುದೈ
ಇನ್ನೇವೆನ್ನೈ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೩೬ ॥

೫೩೭

ನಿರ್ವಾಣ ಹೋಹರ ಕಂಡರೆ ಅವರನರಿವ ಕೇಳಿರಣ್ಣಾ.
ಕ್ರೋಧ-ಲೋಭ-ಹರುಷಾದಿವೆರಸಿಹರ ಕಾಣೆವಣ್ಣಾ.
ಅಯ್ಯಾ, ಆನೀಸುವೆರಸಿ ನಿರ್ವಾಣಿಯೆಂದರೆ,
ಕಪಿಲಸಿದ್ಧಮಲ್ಲಿನಾಥಯ್ಯನು ನಗುವನಯ್ಯಾ. ॥ ೫೩೭ ॥

೫೩೮

ನೀ ಕೂಪನಾಗಿದ್ದಲ್ಲಿ ಕೂಪೆ ನೋಡಯ್ಯಾ.
ನೀನೊಲ್ಲದಿರ್ದಡೆ ಒಲ್ಲೆ ನೋಡಯ್ಯಾ.
ಎನ್ನರಿವು ಮರವೆ ಇಬ್ಬರಿಗೂ ಸಮ ನೋಡಯ್ಯಾ.
ಎನ್ನ ಬಯಕೆಯೊಳಗಣ ಬಯಕೆಯ ನಿಧಾನವು
ನೀನೆಂದು ಕಂಡ ಬಳಿಕ, ಬಯಸುವಾತ ನೀನೆ ಕಾಣಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೫೩೮ ॥

೫೩೯

ನೀನಲ್ಲದವರ ಹಾರೆನಯ್ಯಾ ;
ನೀನಲ್ಲದವರ ಬೇಡೆನಯ್ಯಾ ;
ನೀನಲ್ಲದವರ ಮೂಗಳೆ[ಯೆ]ನಯ್ಯಾ ;
ನೀನಲ್ಲವವರ ಬೇಡಿದಡೆ ಹುರುಳಿಲ್ಲವಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೩೯ ॥

೫೪೦

ನೀನು ತಾನು ಹಿಡಿಯದುದೆಲ್ಲನ ತೇಜದಲುಡಿಸಿ
ಹೆರರಿಗೆ ಭಾಜನ ಮಾಡಿದೆಯವ್ವ.
ನೀನಿವನಲ್ಲಿದ್ದು ಉಣ್ಣದೆ ಹೋದೆ ಮಗಳೆ.
ಅವ್ವಾ, ಇಂತು ಬರಿದಾಗಿ ಬರಿದಾತನ ಕೂಡಿದೆ
ಕಪಿಲಸಿದ್ಧಮಲ್ಲಿನಾಥನನೆಯವ್ವಾ. ॥ ೫೪೦ ॥

೫೪೧

ನೀನು ಸಕಲದಲ್ಲಿ ಸ್ವಾತ್ಮಿಸುವ ಭೇದವ
ನೀನು ನಿಃಕಲದಲ್ಲಿ ಪ್ರವೇಶಿಸುವ ಭೇದವ
ನೀನು ಸಕಲ ನಿಃಕಲಾತ್ಮಕವಾಗಿ ತೊಳಗಿ ಬೆಳಗುತಿಪ್ಪ ಭೇದವ
ಅರಿಯಬಹುದೆ ಎಲ್ಲರಿಗೆ ?
ಆನಂದಸ್ಥಾನದಲ್ಲಿ ಬೆಳಗುತ್ತಿಪ್ಪ ಅಕ್ಷರದ್ವಯದ ಭೇದವ
ಅನ್ಯರಿಗೆಂತರಿಯಬಹುದಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೪೧ ॥

೫೪೨

ನೀನೆಂದಡವನೀಗ ಆರು ಬೇಲಿಯು ಕಳವ
ಆರೂಢವನು ಮಾಳ್ಪ ನಿನ್ನ ಪದಕೆ
ಆರೈದು ಎನ್ನುವನು ಓರಂತೆ ನೋಡದಡೆ
ಆನವಗೆ ಗುರಿಯುಪ್ಪೆನ್ನೈ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೪೨ ॥

೫೪೩

ನೀರಲಿ ಜಂತ್ರಗಳ ಮಾಡಿ ನಿರಾಮಯುವ ತುಂಬುವೆಯಯ್ಯ.
ತುಂಬಿದ ನೀರೊಳಗೊಲೆಯು ಮಾಡಿ ಅಡುವ ಸುಡುವ.
ಯಂತ್ರಂಗಳಿಂದ ಆಗಳು ನೋಡುತ್ತಿಪ್ಪನು ಕೇಳಿರಣ್ಣಾ.
ಅಯ್ಯಾ, ಇನಿಸು ಅವಿಳದ್ಧವಾಗಿ ಕೆಡುವವಯ್ಯ
ಎನ್ನ ಕಪಿಲಸಿದ್ಧಮಲ್ಲಿನಾಥನೋಸರಿಸಲೊಡನೆ. ॥ ೫೪೩ ॥

೫೪೪

ನೀರು ನೀರನೆ ಕಡೆದು ನೀರೊಳಗೆ ಉತ್ಪತ್ತ್ಯ
ನಿರಾಲಂಬರೂಪವು.
ಆರಣ್ಯದೊಳಗೆ ಮತ್ತೆ ಓರಂತೆ ಇದ್ದಡೆ
ಕಾರಣವ ಹೇಳುವನು ಭಕ್ತರೂಪಾ.
ಮೂರು ತಾನೇಯಾಗಿ, ಆರರಲಿ ಅನುಕರಿಸಿ
ಆರಾರನೇ ಮೀರಿ ಗುರುಕರುಣದಾ
ತೋರುವ ಶಿವಭಕ್ತಿ ಮೀರಿಪ್ಪ ವೈರಾಗ್ಯ
ನೀರು ನಿರ್ಮಲ ವಜ್ರ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೪೪ ॥

೫೪೫

ನೀರೊಳಗೆ ಯಂತ್ರವನೆ ಹೂಡಿ
ನಿರಾಮಯುವ ತುಂಬಿ
ತುಂಬಿದ ನೀರೊಳಗೆ ಒಲೆಯು ಹೂಡಿ
ಅಡುಕಿ ಸುಡುವಿನಂಶವ
ನೀವು ನೋಡಲೊಡನೆ ಎಲ್ಲಾ ಉತ್ಪತ್ಯ
ಕಪಿಲಸಿದ್ಧಮಲ್ಲಿಕಾರ್ಜುನ. ॥ ೫೪೫ ॥

೫೪೬

ನೀಲಕಂಧರಗಿರಿಯ ಮೇಲಿಪ್ಪ ನೀನಲ್ಲ.
ಆಲಸ್ಯವಿಲ್ಲದೆ ಅತಿಶಯದಲಿ
ಬಾಲ ಕನಸಿನ ಲೀಲೆಯಾಯಿತ್ತು ಭಕ್ತಿಯ
ಹೇಳುವಡೆ ಆಂಗೆಯೂ ಉಪಮೆಯಿಲ್ಲ.
ಭಾಳನಯನದ ಮೇಲೆ ಬಾಲೆಯರ ಸಂಯೋಗ.
ಈರಾರು ಬೆಳಕವರ ಇಕ್ಕೆಲದಲ್ಲಿ
ಸ್ಥೂಲ ಸೂಕ್ಷ್ಮದಲಿ ಮೇಲಿಪ್ಪ ಘನವದರ
ಈರೇಳು ಘಟಿಸುವ ಲೋಕಕ್ಕೆ
ದಿಕ್ಕರಿಗಳೆಂಟಾಗಿ ಬೆಟ್ಟವೆಂಟಾಗಿರ್ಪ
ಘನತರದ ನಿಜವ ಬಲ್ಲವರಾರು ? ಹೊಲಬನರಿವವರಾರು
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ನಿಜಭಕ್ತಿಯ ? ॥ ೫೪೬ ॥

೫೪೭

ನೀಲಕಂಧರನೆಂಬಾತ ಬಾಲತ್ವದಲ್ಲಿ
ಭಾಮಿನಿಯ ಒಡಗೂಡಿ ಸಂದು ಸವೆದು,
ಇದು ಕ್ರೀ ಇದು ನಿಷ್ಕ್ರೀ, ಇದು ಶುದ್ಧ ಇದು ಸಿದ್ಧ ಇದು ಪ್ರಸಿದ್ಧ,
ಇದು ಭಾವ ಇದು ನಿರ್ಭಾವವೆಂದು ಅರುಪ್ರವಾಗ
ಪಿಂಡಾಂಡಂಗಳಿಲ್ಲ ; ಅಷ್ಟಮೂರ್ತಿ ಕೂಡಿದ ರುದ್ರನಿಲ್ಲ.
ಆನಂದವೆ ಒಡಲಾಗಿಪ್ಪ ಮಹಾತ್ಮನ ನಿಜವ ಕಂಡಾತ ಬಸವಣ್ಣ.
ಆ ಬಸವಣ್ಣನೆನಗರುಹಿದ ಗುಣದಿಂದ ಶುದ್ಧನಾದೆನು.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ, ಬಸವಣ್ಣನೆನ್ನ ಪರಮಾರಾಧ್ಯರು.
॥ ೫೪೭ ॥

೫೪೮

ನುಡಿವಲ್ಲಿ ದೋಷವನಾರಿಸದೆ ಬಾಯಿಚ್ಛೆಗೆ ಬಂದಂತಾಡಿದಡೆ
ಅದು ಹೆಮ್ಮೆಯಲ್ಲದೆ ಸಹಜಜ್ಞಾನವಲ್ಲ.
ಅದೇನುಕಾರಣವೆಂದಡೆ,
ಪಾಷಾಣದ ಮೂರ್ತಿ ಘನವೆಂದಡೆ ಅಗ್ನಿಯಿಂದ ಭಂಗ.
ಅಗ್ನಿ ಘನವೆಂದಡೆ ತೋಯದಿಂದ ಭಂಗ.

ತೋಯ ಘನವೆಂದಡೆ ಮಾರುತನಿಂದ ಭಂಗ.
ಮಾರುತ ಘನವೆಂದಡೆ ಬಯಲಿನಿಂದ ಭಂಗ.
ಬಯಲು ಘನವೆಂದಡೆ ಅಂತಃಕರಣದಿಂದ ಭಂಗ.
ಅಂತಪ್ಪಂತಃಕರಣ ಘನವೆಂದಡೆ ಮಾಯೆಯಿಂದ ಭಂಗ.
ಮಾಯೆ ಘನವೆಂದಡೆ, ಮಹಾದೇವ ಕಪಿಲಸಿದ್ಧಮಲ್ಲಿಕಾರ್ಜುನ
ಪರಬ್ರಹ್ಮದಿಂದ ಭಂಗ ಕೇಳಾ, ಮಡಿವಾಳ ತಂದೆ. ॥ ೫೪೮ ॥

೫೪೯

ನುಡಿಹಿಡಿದು ತಾರ್ಕಿಕರಂತೆ ತರ್ಕಿಸುವಾತ ನಾನಲ್ಲ.
ಆಡುವ ಮಾತಿಗೆ ಈಡ ಮಾಡುವ ನುಡಿಯಲ್ಲಿ ವಾಕ್ಪಟುತನವು ನಿಜವಲ್ಲ.
ನಡೆಯುವ ನಂದಿ ಕುಂಟುವುದುಂಟು,
ಹೋಗುವ ಮನುಜ ಎಡಹುವುದುಂಟು.
ಮಾತಾಡುವ ಶರಣ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ
ತಪ್ಪಿದಡೆ ತಪ್ಪಲ್ಲ ಕೇಳಾ, ಪ್ರಭುವೆ. ॥ ೫೪೯ ॥

೫೫೦

ನೆನಹಿನ ನಲ್ಲನು ಮನೆಗೆ ಬಂದಡೆ
ಮನದಲ್ಲಿ ಗುಡಿಗಟ್ಟುವೆನವ್ವಾ.
ತೋರಣ ತೋರಣ ಮಾಮರ ಮಾಮರ ತೋರಣಗಟ್ಟುವೆನವ್ವಾ.
ಕಾಮಸಂಗವಳಿದು ನಿಷ್ಕಾಮಸಂಗಕ್ಕೆಳಸುವೆನವ್ವಾ
ಕಪಿಲಸಿದ್ಧಮಲ್ಲಿಕಾರ್ಜುನನ ಕೂಡುವೆನವ್ವಾ. ॥ ೫೫೦ ॥

೫೫೧

ನೆನಹಿನ ಮನೆಯೊಳಗೆ ಆನಿದ್ದೇನೆಂದಡೆ
ಮನವು ಮತ್ತನ್ಯಕ್ಕೆ ಹರಿವುದಯ್ಯಾ.
ಮನಕ್ಕಿನ್ನೇವೆನೇವೆ ?
ಎನ್ನ ಮನದೊಡೆಯ ಮಹಾದಾನಿ
ನಿನ್ನ ಪಾದಂಗಳನುರೆ ಮಚ್ಚಿಸಿ
ಎನ್ನ ಶುದ್ಧಾತ್ಮನ ಮಾಡಿ ಕರುಣಿಸಯ್ಯಾ. ಪರಮಗುರುವೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೫೧ ॥

೫೫೨

ನೆನೆವರ ಮನದೊಳಗೆ ಮನೆಗಟ್ಟಿಯಿಪ್ಪೆ ನೀನಯ್ಯಾ.
ನಂಬಿದ ಶರಣರಿಗೊಲಿದು ಕೈಲಾಸವನೊಲಿದಿಪ್ಪೆ ನೀನಯ್ಯಾ.
ನಿಮ್ಮ ನಂಬಲೊಡನೆ ಕೈಲಾಸವಲೊಡಬೀಡಾಗಿಪ್ಪೆಯಯ್ಯಾ,
ಎನ್ನ ಕಪಿಲಸಿದ್ಧಮಲ್ಲೇಶ್ವರದೇವ. ॥ ೫೫೨ ॥

೫೫೩

ನೆರೆದೆನು ನೆರೆದೆನು ಎಂಬಡೆ ನಾನೇನು ಎರವೆ ?
ಶ್ರೀಗುರುಸ್ವಾಮಿ ಎನ್ನ ನಿನ್ನ ನಿನ್ನನೆನ್ನ ಕರಸ್ಥಲದಲ್ಲಿ ಸ್ಥಾಪ್ಯಗೊಳಿಸಿದ ಬಳಿಕ,
ಮಹಾಜ್ಯೋತಿರ್ಮಯದಲ್ಲಿ ತಮವುಂಟೆ ?
ಕಪಿಲಸಿದ್ಧಮಲ್ಲಿಕಾರ್ಜುನನೆಂಬ ಮಹಾಪ್ರಸಾದವನೊಡಗೂಡಿದ ಬಳಿಕ,
ಬೇರೆ ನಾನೊಂದು ನದಿಯೆನಲುಂಟೆ ? ಪ್ರಭುವೆ. ॥ ೫೫೩ ॥

೫೫೪

ನೆಲ್ಲ ಗಿಡುವಿನಮರೆಯಲೊಂದು ಹುಲ್ಲು ಗಿಡವಾನಯ್ಯಾ.
ನಿಮ್ಮ ಚರಣವೆ ಶರಣು ಶರಣೆಂದು
ನಾನು ಧನ್ಯನಾದೆನು ನೋಡಯ್ಯಾ.
ನಿಮ್ಮ ನೆನೆದವರೆಲ್ಲ ಧನ್ಯರು,
ಕಪಿಲಸಿದ್ಧಮಲ್ಲಿನಾಥಯ್ಯ. ॥ ೫೫೪ ॥

೫೫೫

ನೈರುತಿಯೆಂಬಳು ಜಲಧ ಮನೆಯ ಸ್ಥಳದಲ್ಲಿ ಇಪ್ಪಳು
ಬಾಸಣಿಸಿದ ಶಿಖರದ ಮೇಲೆ.
ಧರಣಿಯ ಮೂರುತಿ ತನಗೆ ನೋಡಾ !
ವಿಕಟದ ವೀರೆಯರಿಬ್ಬರಿಗೆ ವಿಕಟದ ಗಂಡ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೫೫೫ ॥

೫೫೬

ನೋಟಕ್ಕೆ ನೋಟವಾಯಿತ್ತು ನಿಮ್ಮ ಪ್ರಸಾದ ;
ಶಬ್ದಕ್ಕೆ ಶಬ್ದವಾಯಿತ್ತು ನಿಮ್ಮ ಪ್ರಸಾದ ;
ಸ್ಪರುಷನಕ್ಕೆ ಸ್ಪರುಷನವಾಯಿತ್ತು ನಿಮ್ಮ ಪ್ರಸಾದ ;

ಗಂಧಕ್ಕೆ ಗಂಧವಾಯಿತ್ತು ನಿಮ್ಮ ಪ್ರಸಾದ ;
ರಸಕ್ಕೆ ರಸವಾಯಿತ್ತು ನಿಮ್ಮ ಪ್ರಸಾದ ;
ಪರಿಣಾಮಕ್ಕೆ ಪರಿಣಾಮವಾಯಿತ್ತು ನಿಮ್ಮ ಪ್ರಸಾದ.
ಕಪಿಲಸಿದ್ಧಮಲ್ಲಿನಾಥಯ್ಯಾ,
ನಿಮ್ಮ ಚೆನ್ನಬಸವಣ್ಣನ ಧರ್ಮವಯ್ಯಾ. ॥ ೫೫೬ ॥

೫೫೭

ನೋಟದ ಬೆರಗು ನೀನೆಯಯ್ಯಾ ;
ಕೂಟದ ಕೂಟ ನೀನೆಯಯ್ಯಾ,
ಕಪಿಲಸಿದ್ಧಮಲ್ಲಿನಾಥಾ. ॥ ೫೫೭ ॥

೫೫೮

ನೋಟದ ಭಕ್ತಿ ಬಸವನಿಂದಾಯಿತ್ತು ;
ಕೂಟದ ಜ್ಞಾನ ಬಸವನಿಂದಾಯಿತ್ತು ಕಾಣಾ.
ಎಲ್ಲಿಯು ಶಿವಜ್ಞಾನ ಎಲ್ಲಿಯು ಮಾಟಕೂಟ ಬಸವನಲ್ಲದೆ ?
ಮಹಾಜ್ಞಾನ ಮಹಾಪ್ರಕಾಶ ಬಸವಣ್ಣನ ಧರ್ಮವಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೫೫೮ ॥

೫೫೯

ನೋಟವೆ ಕೂಟವಾಗಿ
ಕೂಟವೆ ಜೀವನವಾಗಿ ನಿರ್ದಾಟಿಸುವ
ಗಂಡನೆನಗೆಂದಪ್ಪನಯ್ಯಾ, ಎಂದಪ್ಪನಯ್ಯಾ ?
ಅಪ್ಪ[ವೆ] ಗುರುಕರುಣದಿಂದ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೫೯ ॥

೫೬೦

ನೋಡಿದಡೆ ಮೂರ್ತಿಯಾಗಿದೆ
ಹಿಡಿದಡೆ ಬಯಲಾಗಿದೆ
ನುಡಿದಡೆ ಬ್ರಹ್ಮ ಬಾಯದೆಗೆದಂತಿದೆ,

ಶಿವ ಶಿವ ! ಈ ಸುಳುಹು ಎನ್ನ ಪರಮಗುರು,
ಕಪಿಲಸಿದ್ಧಮಲ್ಲಿನಾಥನಲ್ಲದೆ ಮತ್ತೊಂದಾಗಲರಿಯದು. ॥ ೫೬೦ ॥

೫೬೧

ನೋಡಿ ನೋಡಿ ಕಂದದಿದ್ದಡೆ,
ಕೂಡಿ ಕೂಡಿ ಲೀಯವಾಗದಿದ್ದಡೆ,
ಆ ನೋಟ ಕೂಟ ಏತಕ್ಕೆ ಹೇಳಾ, ಎಲೆ ಅವ್ವಾ ?
ಕಪಿಲಸಿದ್ಧಮಲ್ಲಿಕಾರ್ಜುನಾ,
ನಿನ್ನ ಕೂಡಿ ನೀನಾಗದಿದ್ದಡೆ,
ಆ ನೋಟ ಕೂಟ ಏತಕ್ಕೆ ಹೇಳಾ, ಅವ್ವಾ ? ॥ ೫೬೧ ॥

೫೬೨

ಪಂಚಬ್ರಹ್ಮವನೆನಗೆ ವಂಚಿಸದೆ ತೋರಿದಿರಿ ಚೆನ್ನಬಸವಣ್ಣಾ.
ಪಂಚಾಕ್ಷರದ ಭೇದವನರುಹಿದಿರಿ ಚೆನ್ನಬಸವಣ್ಣಾ.
ಪಂಚಭೂತಾತ್ಮವನು ಕಳೆದು ಶಿವಲಿಂಗವನು
ಪಂಚಮುದೊಳಗಿರಿಸಿದ್ಯೆ ಚೆನ್ನಬಸವಣ್ಣಗುರುವೆ,
ಕಪಿಲಸಿದ್ಧಮಲ್ಲಿನಾಥಾ. ॥ ೫೬೨ ॥

೫೬೩

ಪಂಚೇಂದ್ರಿಯವೆಂಬ ಸೊಣಗ ಮುಟ್ಟದ ಮುನ್ನ
ಮನ ನಿಮ್ಮನೆಯ್ದುವಂತೆ ಮಾಡಯ್ಯಾ.
ಮೀಸಲು ಬೀಸರವೋಗದ ಮುನ್ನ
ನೀ ನಿತ್ಯನಾಗಿ ಪ್ರಯೋಗಿಸಯ್ಯಾ.
ಎನ್ನಾಸುರದ ಸ್ನೇಹವಿಂಗಿಹೋಗದ ಮುನ್ನ ಈಶನ ನೀ ಕೂಡಿಕೊಳ್ಳಾ.
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೬೩ ॥

೫೬೪

ಪಚ್ಚೆಯುಗಿರು ಪ್ರಭೆಯೇರಿ ನಿಚ್ಚ ವಿನಯದ ಸುಖವ ಕಂಡು
ಅನುಭವದ ಹೆಣ್ಣಿಗೆ ಪಚ್ಚವರ್ಣವನೇಕೀಕರಿಸಲು
ನಿಚ್ಚಲನುವಾಯಿತ್ತಯ್ಯಾ ಅಚ್ಚ ಆರೆಸಳ ಪೀಠ.

ಆ ಪೀಠದಲ್ಲಿ ವೀರದಾಸಯ್ಯನೆಂಬವ ಗುರುವಿಡಿದು ನಡೆಯೆ
ನೀರಾಟ ನಿಂದು ನೆಲೆಗೊಂಡನಯ್ಯ ನಿಮ್ಮ[ಶರಣ] ಚೆನ್ನಬಸವಣ್ಣನು.
ಕಪಿಲಸಿದ್ಧಮಲ್ಲಿನಾಥಯ್ಯಾ, ಚೆನ್ನಬಸವಣ್ಣನಿಂದ ಬದುಕಿದೆನಯ್ಯಾ,
|| ೫೬೪ ||

೫೬೫

ಪರುಷ ಮುಟ್ಟಿದ ಕಬ್ಬುನ
ಪರುಷವಾಗದಿದ್ದರೆ ಕೊರತೆಯಯ್ಯಾ.
ನಿನ್ನ ಮುಟ್ಟಿ ಪೂಜಿಸಿದವರು ನೀನೆಯಾಗದಿದ್ದರೆ
ನಿನ್ನ ದೇವತನದ ಮಾನಕ್ಕೆ ಹಾನಿ ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. || ೫೬೫ ||

೫೬೬

ಪರುಷಲಿಂಗವ ಕೈಯಲ್ಲಿ ಹಿಡಿದು ಸ್ವರ
ಫಲವನೀಯೆಂಬರು.
ಶ್ರೀಗುರುಸ್ವಾಮಿ ಕರಸ್ಥಲಕಿತ್ತುದು ಹುಸಿಯೆ ?
ಇವಂದಿರು ಕೆಟ್ಟಕೇಡಿಂಗೆ ಕಡೆಯಿಲ್ಲ.
ಮುಟ್ಟಿಯೂ ಮುಟ್ಟದವರನೇನೆಂಬೆನಯ್ಯಾ
ಕಪಿಲಸಿದ್ಧಮಲ್ಲಿಕಾರ್ಜುನಾ. || ೫೬೬ ||

೫೬೭

ಪಸರಿ ಪರ್ಬಿ ಮಾಯೆ ದೆಸೆವರಿವುದಯ್ಯಾ
ವಿಷಮಾಕ್ಷನಾದಡೆಯು ಗೆಲುವೆನೆನುತ
ವಸುಧೀಶ ಕಪಿಲಸಿದ್ಧಮಲ್ಲಿಕಾರ್ಜುನ. || ೫೬೭ ||

೫೬೮

ಪಾತಕರಟ್ಟಿ ಪುಣ್ಯಪುರುಷರಿಗರುಹುವಲ್ಲಿ ತಮ್ಮಪ್ಪಣೆಯೆ ಅಯ್ಯಾ ?
ಆರೂ ಅರಿಯದ ಬೋಧೆಯನರುಹಬೇಕೆಂಬಪೇಕ್ಷೆ
ಲಿಂಗದಲ್ಲಿ ತೋರಿದುದು ಎನ್ನ ಸುಕೃತವಲ್ಲ, ಎನ್ನ ಯೋಗದ ಬಲವಲ್ಲ.
ನಿಮ್ಮ ಪಾದದ ಮಹಾಕೃಪೆ ಕಾಣಾ, ಕಪಿಲಸಿದ್ಧಮಲ್ಲಿಕಾರ್ಜುನಾ. || ೫೬೮ ||

೫೬೯

ಪಾದೋದಕವು ಲಿಂಗದ ಮೇಲೆ ಎಂದಲ್ಲಿ ಜಂಗಮ ಘನವಾಯಿತ್ತು.
ಆ ಲಿಂಗೋದಕ ಸ್ವೀಕರಿಸಿದಲ್ಲಿ ಜಂಗಮಕ್ಕೆ ಲಿಂಗ ಘನವಾಯಿತ್ತು.
ಲಿಂಗದ ಕಳೆಯೆ ಜಂಗಮ, ಜಂಗಮದ ಕಳೆಯೇ ಲಿಂಗ ;
ಆವುದ ಘನವೆಂಬೆ ; ಆವುದ ಕಿರಿದೆಂಬೆ ?
ಲಿಂಗ–ಜಂಗಮ ನೇತ್ರದಲ್ಲಿಯ ಪ್ರಕಾಶದಂತೆ ತಿಳಿದೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೬೯ ॥

೫೭೦

ಪಾದೋದಕವೆಂಬುದು ಪರಮಾತ್ಮನ ಚಿದ್ರೂಪು ನೋಡಾ.
ಪಾದೋದಕವೆಂಬುದು ಮೋಕ್ಷದ ಮಾರ್ಗ ನೋಡಾ.
ಪಾದೋದಕವೆಂಬುದು ಪಾಪದ ಕೇಡು ನೋಡಾ.
ಪಾದೋದಕವೆಂಬುದು ಪ್ರಮಥರ ಇರವು ನೋಡಾ.
ಪಾದೋದಕವೆಂಬುದು ಕಪಿಲಸಿದ್ಧಮಲ್ಲಿಕಾರ್ಜುನನ ಮಹಿಮೆ ನೋಡಾ.
॥ ೫೭೦ ॥

೫೭೧

ಪಾಪವ ಮಾಡಿ ಮುಳುಗಿದಡೇನು,
ಮುಳುಗಿ ಪಾಪವ ಮಾಡಿದಡೇನು ?
ಗಂಗೆ ಪದವಿಯ ಕೊಟ್ಟಡೆ ಅದು ದುರ್ಗುಣವೆ ಅಯ್ಯಾ.
ಸದ್ಗುಣವಾದಡೂ ಆಗಲಿ,
ಈ ಮನುಜರು ಮಾಡುವ ಕರ್ಮಕ್ಕೆ
ಆಕೆಯ ಸದ್ಗುಣ ಸಂಧಾನವಾಯಿತ್ತು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೭೧ ॥

೫೭೨

ಪಾವನವಾದೆನು ಬಸವಣ್ಣಾ,
ನಿಮ್ಮ ಪಾವನಮೂರ್ತಿಯ ಕಂಡು.
ಪರತತ್ವವನೈದಿದೆ ಬಸವಣ್ಣಾ,
ನಿಮ್ಮ ಪರಮಸೀಮೆಯ ಕಂಡು,

ಪದ ನಾಲ್ಕು ಮೀರಿದೆ ಬಸವಣ್ಣಾ,
ನಿಮ್ಮ ಪರುಷಪಾದವ ಕಂಡು.
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಕೂಡಿದೆ ;
ಬಸವಣ್ಣಾ, ಬಸವಣ್ಣಾ, ಬಸವಣ್ಣಾ,
ನೀನು ಗುರುವಾದೆಯಾಗಿ. ॥ ೫೭೨ ॥

೫೭೩

ಪುಣ್ಯಪಾಪಂಗಳಾದಡೇನು ? ಈಶ್ವರ ಕಲ್ಪನೆಯಿಲ್ಲದನ್ನಕ್ಕ
ಮಾಡೆಂದು ಮಾಡಿಸಬಾರದಯ್ಯಾ.
ನೋಡಯ್ಯಾ ನೋಡಯ್ಯಾ ಮುನ್ನಿನ ಕಲ್ಪನೆಯುಳ್ಳವರ
ಬೇಡೆಂದು ಮಾಣಿಸಬಾರದಯ್ಯಾ, ನೋಡಾ!
ಆಯ್ಯಾ, ನೀನೆಹಗೆ ಕಲ್ಪಿಸಿದೆ ಆಹಗೆ ಆಪರು
ಎನ್ನ ಕಪಿಲಸಿದ್ಧಮಲ್ಲೇಶ್ವರದೇವ. ॥ ೫೭೩ ॥

೫೭೪

ಪುತ್ರನ ಪೂಜೆಯು ಜನಕನಿಗೆ ದುಃಖಕರವಲ್ಲ.
ಸತಿಯ ವೈಭವವು ಪತಿಗೆ ಪ್ರಾಣಹಾನಿಯಲ್ಲ.
ತನ್ನ ಭೃತ್ಯನಿಗಾದ ಜಯಘೋಷ ಅರಸನಿಗೆ ಅಸಂತೋಷವಲ್ಲ.
ಇದು ಕಾರಣ, ಶಿಷ್ಯನ ಸಮರಸದಲ್ಲಿ
ಶ್ರೀಗುರು ಕಪಿಲಸಿದ್ಧಮಲ್ಲಿಕಾರ್ಜುನಂಗೆ ಕೇಳಲು ಅದು ಯೋಗ್ಯವಲ್ಲ,
ಅಲ್ಲಮ ಮಹಾಪ್ರಭುವೆ. ॥ ೫೭೪ ॥

೫೭೫

ಪುದುಗಿದ್ದ ಸಂಸಾರ ಬಂಧನಂಗಳ ಪೆರ್ದೊರೆ
ಎಂದಿಂಗೆ ಬಿಟ್ಟುಪೋಪುದು ?
ಎಂದಿಪ್ಪೆ ನಿಮ್ಮೊಡಗೂಡಿ ಬೇರಾಗದೆಂದಿಪ್ಪೆನು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೭೫ ॥

೫೭೬

ಪೂಗಂಧವವಂಗೆ ಗಂಧವಾರಣೆ ಮಾಡಿ ತೋರುತ ಬರಲಿ.
ಮೆಚ್ಚಿದನೆಂದು ಇವಳ ಕಂಡು ಅವ್ವ
ಎಲ್ಲ ಗುಣ ಇವಳಲುಂಟೆಂದು ಮೆಚ್ಚಿ[ದೆ] ನೆಂದು
ಕಪಿಲಸಿದ್ಧಮಲ್ಲಿನಾಥನೊಲಿದು ನೆರವರೆ ಕಾಮಿಯಾದೆನಗೆಯವ್ವಾ.
|| ೫೭೬ ||

೫೭೭

ಪೂಜೆಯ ಉಪಕರಣ ನೋಡಿ ಎನ್ನ ಮನಕ್ಕೆ ಬಹಳ ಬಾಧೆಯಾಯಿತ್ತು.
ಗುರುವಿನ ಪರಮಗುರು ಸಂಗನ ಬಸವಯ್ಯ ಪೂಜಿಸ ಬಂದಡೆ,
ಕಪಿಲಸಿದ್ಧಮಲ್ಲಿಕಾರ್ಜುನನ ಬಾಲಕ ಅಂಗವಿರಹಿತನಾದನು,
ಶ್ರೀಗುರುಮೂರ್ತಿಯೆ. || ೫೭೭ ||

೫೭೮

ಪೂರ್ವದ ಜೀರ್ಣಲಿಂಗ ಮೈ ತೊರೆದಲ್ಲಿ
ದುಃಖವಿಲ್ಲಿಪ್ಪು ದೇವಾ.
ಪೂರ್ವವಮೃತಕಲಹದಲ್ಲಿಲ್ಲಿಪ್ಪು ದುಃಖ ದೇವಾ.
ದುಃಖದಿಂದಖಿಲಾಂಗ ವಹ್ನಿಕಣಗಳಾದವು ದೇವಾ,
ಇಂತಪ್ಪಗ್ನಿಕಣಕ್ಕೆ ನಿಮ್ಮ ವಿಲೋಕನವೆ ವೃಷ್ಟಿಧಾರೆ,
ಕಪಿಲಸಿದ್ಧಮಲ್ಲಿಕಾರ್ಜುನದೇವಾ. || ೫೭೮ ||

೫೭೯

ಪ್ರಥಮದಲ್ಲಿ ಹಸ್ತಸ್ಪರ್ಶ ಮಾಡಿದಂತಹದೆ
ಗುರುಪ್ರಸಾದವೆನಿಸುವುದಯ್ಯಾ.
ಇಷ್ಟಮಹಾಲಿಂಗಕ್ಕೆ ಮಂತ್ರಸ್ಮರಣೆಯಿಂದ ಮೂರು ವೇಳೆ
ರೂಪನರ್ಪಿಸಿದಲ್ಲಿಗೆ ಲಿಂಗಪ್ರಸಾದವೆನಿಸುವುದಯ್ಯಾ.
ಎರಡು ವೇಳೆ ಇಷ್ಟಮಹಾಲಿಂಗದೇವಂಗೆ
ರೂಪನರ್ಪಿಸಿ ಜಿಹ್ವೆಯಲ್ಲಿಟ್ಟಲ್ಲಿ
ಜಂಗಮಪ್ರಸಾದವೆನಿಸುವುದಯ್ಯಾ.
ಆಮೇಲೆ ಲಿಂಗದೇವಂಗೆ ತೋರಿ ಬೋಜೆಗಟ್ಟಿ

ಲಿಂಗದೇವಂಗೆ ತೋರಿ ಜಿಹ್ವೆಯಲ್ಲಿಟ್ಟಂತಹದೆ,
ಪ್ರಸಾದಿಯು ಪ್ರಸಾದವೆನಿಸುವುದಯ್ಯಾ.
ಆ ಭೋಜ್ಯರೂಪಾದ ಪ್ರಸಾದಿಯು ಪ್ರಸಾದದೊಳಗೆ
ಮಧುರ ಒಗರು ಕಾರ ಆಮ್ಲ ಕಹಿ ತೃಪ್ತಿ–ಮಹಾತೃಪ್ತಿಯೆ–
ಆಪ್ಯಾಯನ, ಸಮಯ, ಪಂಚೇಂದ್ರಿಯವಿರಹಿತ,
ಕರಣಚತುಷ್ಟಯವಿರಹಿತ, ಸದ್ಭಾವ, ಸಮತೆ, ಜ್ಞಾನಪ್ರಸಾದ
ಮೊದಲಾದವು ಸಪ್ತವಿಧಪ್ರಸಾದವೆನಿಸುವುದಯ್ಯಾ.
ಇಂತು ಪರಾಧೀನತೆಯಿಂ ಭಿಕ್ಷವ ಬೇಡಲಾರದಿರ್ದಡೆ,
ಅರಣ್ಯದಲ್ಲಿ ಫಲರಸಯುಕ್ತವಾದ ಹಣ್ಣುಕಾಯಿಗಳ
ಲಿಂಗಾರ್ಪಿತಭಿಕ್ಷೆಯೆಂದು, ಆ ಫಲಾದಿಗಳ ತೆಗೆದುಕೊಂಡು
ಶೋಧಿಸಿ, ಪವಿತ್ರವ ಮಾಡಿ, ಲಿಂಗಾರ್ಪಿತ ಭೋಗಿಯಾದಾತನೆ
ಸ್ವಯಂಭುಪ್ರಸಾದಭಕ್ತನಾದ ಚಿತ್ಕಲಾಪ್ರಸಾದಿ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೭೯ ॥

೫೮೦

ಪ್ರಪಂಚದಿಂದ ಪಾರಮಾರ್ಥವ ಕಂಡೆನೆಂಬುದು ದುರ್ಲಭ.
ಶಿಷ್ಯನಾಗಿ ಗುರುವ ಕಾಣಬೇಕು ;
ಭಕ್ತನಾಗಿ ಜಂಗಮವ ಕಾಣಬೇಕು.
ಇದು ಕಾರಣ, ಕಪಿಲಸಿದ್ಧಮಲ್ಲಿಕಾರ್ಜುನನೆಂಬ ಗುರುವ ಕಂಡುದು ಸುಕೃತ ;
ಪ್ರಭುವಿನ ಪೂರ್ಣಕೃಪೆ ಕೇಳಾ, ಕೇದಾರಯ್ಯಾ. ॥ ೫೮೦ ॥

೫೮೧

ಪ್ರಭುವಿನ ದಯದಿಂದ ಬಂದೆನಿಲ್ಲಿಗೆ
ಇಷ್ಟಲಿಂಗದ ಮರ್ಮವನರಿದೆ.
ಗುರು ಬಸವನ ದಯೆ, ಚೆನ್ನಬಸವನ ಕೃಪೆ.
ಇದಕ್ಕೆ ಮಿಗಿಲಾಗಿ ಕಂಡು ಧನ್ಯನಾದೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೮೧ ॥

೫೮೨

ಪ್ರಸಾದಿಯಾದಾತ ಪ್ರಳಯಕ್ಕೊಳಗಾಗ,
ಇಂದ್ರಿಯಂಗಳ ಹರಿಯಲೀಯ,

ಬಂದುದನತಿಗಳೆಯು–ಅದು ಲಿಂಗಮುಖದಿಂ ಬಂದುದಾಗಿ.
ಆತನ ಅಂಗ ಸರ್ವಾಂಗಲಿಂಗಾಂಗ ;
ಆತನ ನಡೆ–ನುಡಿ ಚೈತನ್ಯ ಸಾಕ್ಷಾತ್ ಅಯ್ಯನ ಸದ್ಭಾವ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಕೂಡಿದ
ನಿತ್ಯಪ್ರಸಾದಿಯು ಪರಿಯಿಂತುಂಟು. ॥ ೫೮೨ ॥

೫೮೩

ಪ್ರಾಣ ಅಪಾನ ವ್ಯಾನ ಉದಾನ ಸಮಾನ ನಾಗ ಕೂರ್ಮ
ಕ್ರಕರ ದೇವದತ್ತ ಧನಂಜಯು-ಇಂತೀ ದಶವಾಯುಗಳು.
ಅಲ್ಲಿ ಪ್ರಾಣವಾಯು ಇಂದ್ರನೀಲವರ್ಣ, ಕಂದದ ಅಧೋಭಾಗೆಯಲ್ಲಿರ್ದ
ಹೃದಯ ಪಾದ ನಾಭಿ ನಾಶಿಕವಧರಂಗಳಲ್ಲಿ ಉಚ್ಛ್ವಾಸ ನಿಶ್ವಾಸಂಗಳಿಂದ
ಚರಿಸುತ್ತಿಹುದು.
ಅಪಾನವಾಯು ಇಂದ್ರಗೋಪವರ್ಣ, ಪಾಯು ಶಿಶ್ನ ಉರ
ಜಾನು ಪಾದ ಜಂಘೆ ನಾಭಿಮೂಲ ಜಠರದಲ್ಲಿರ್ದು
ಮಲಮೂತ್ರಂಗಳ ಪೊರಮಡಿಸುತ್ತಿಹುದು.
ವ್ಯಾನವಾಯು ಗೋಕ್ಷೀರವರ್ಣ, ಕರ್ಣ ಅಕ್ಷಿ ಘ್ರಾಣ
ಗಂಡಾಗ್ರ ಗುಲ್ಫಂಗಳಲ್ಲಿ ವರ್ತಿಸುತ್ತ ಹಿಡಿವುದು ಬಿಡುವುದು
ಇವು ಮೊದಲಾದ ವ್ಯಾಪಾರಂಗಳ ಮಾಡುತ್ತಿಹುದು.
ಉದಾನವಾಯು ಎಳೆಮಿಂಚಿನವರ್ಣ, ಹಸ್ತಪಾದಾದಿ ಸರ್ವಸಂದುಗಳಲ್ಲಿರ್ದು
ಸಂದು ಸಂದುಗಳಿಗೆ ಪಟುತ್ವಮಂ ಪುಟ್ಟಿಸುತ್ತಿಹುದು.
ಸಮಾನವಾಯು ಶುದ್ಧ ಸ್ಫಟಿಕವರ್ಣ, ದೇಹ ಮಧ್ಯದಲ್ಲಿರ್ದು
ಸರ್ವ ಸಂದುಗಳಲ್ಲಿ ವ್ಯಾಪಿಸಿಕೊಂಡು, ಕೊಂಡಂತಹ ಅನ್ನರಸವ
ಸರ್ವಾಂಗಕ್ಕೆ ಸಮಾನವಂ ಮಾಡಿ ಅಷ್ಟಕೋಟಿ ರೋಮನಾಳಂಗಳಿಗೂ
ಹಂಚಿಕ್ಕಿ ಅಂಗವಂ ಪೋಷಿಸುತ್ತಿಹುದು.
ನಾಗವಾಯು ಬಾಲಸೂರ್ಯನ ವರ್ಣ, ಕಂಠಸ್ಥಾನದಲ್ಲಿರ್ದು
ವರ್ಧಿ ನಿರೋಧಂಗಳಿಂದುದ್ಗಾರಮಂ ಮಾಡಿಸುತ್ತಿಹುದು.
ಕೂರ್ಮವಾಯು ಕುಂದೇಂದುವಿನ ವರ್ಣ, ನೇತ್ರಮೂಲದಲ್ಲಿರ್ದು
ಉನ್ಮೀಲನ ನಿಮೀಲನಾದಿಗಳನು ಮಾಡುತ್ತಿಹುದು.
ಕೃಕರವಾಯು ನೀಲವರ್ಣ, ಕಾಯದಲ್ಲಿರ್ದು ಕ್ಷುಧಾದಿ ಧರ್ಮಂಗಳಂ
ಮಾಡುತ್ತಿಹುದು.
ದೇವದತ್ತವಾಯು ಸ್ಫಟಿಕವರ್ಣ, ತಾಳಮೂಲದಲ್ಲಿರ್ದು

ಆಗುಳಿಕೆಯಾರಡಿಕೆಗಳಂ ಪುಟ್ಟಿಸುತ್ತಿಹುದು.
ಧನಂಜಯುವಾಯು ಸಪ್ತ ಜಾಂಬೂನದ ವರ್ಣ,
ಶೋಕರಾಗಂಗಳ ಪುಟ್ಟಿಸಿ ಹಾಡಿಸುತ್ತಿಹುದು.
ಇಂತೀ ದಶವಾಯುಗಳು ದೇಹವನುದ್ಧರಿಸುತ್ತಿಹವು.
ಈ ವಾಯುವನೇರಿ ಜೀವನು ಈಡಾಪಿಂಗಳ ಮಾರ್ಗದಲ್ಲಿ ವ್ಯವಹರಿಸುತ್ತಿಹನು.
ಈ ವಾಯುಗತಿಯನರಿದು ಯೋಗಿಸುವುದೇ ಯೋಗ.
ಕಪಿಲಸಿದ್ಧಮಲ್ಲಿಕಾರ್ಜುನನೆಂಬ ನಿಜವನೈದುವದೇ ಮಾರ್ಗವು. ॥ ೫೮೩ ॥

೫೮೪

ಪ್ರಾಣಲಿಂಗಿಯಾದಾತನು ಪ್ರಳಯಕ್ಕೊಳಗಾಗನು.
ಅನ್ಯಕ್ಕೆ ಕೈಯಾನನು, ಎಲ್ಲವೂ ತನ್ನೊಳಗೆ ಇಪ್ಪವಾಗಿ.
ತನ್ನ ಮೀರಿದುದೊಂದು ಆಧಿಕ್ಯ ಬೇರಿಲ್ಲಾಗಿ.
ಕೈವಲ್ಯಲಿಂಗವು ಪ್ರಾಣವೆಂಬ ಸತಿಗೆ ಸಂಯೋಗ ಸಮನಿಸಿದ ಬಳಿಕ
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಕೂಡಿದ ಉರುತರ ಪ್ರಾಣಲಿಂಗಿ. ॥ ೫೮೪ ॥

೫೮೫

ಫಲಪದಭವಕ್ಕೆ ತಾರದಿರಯ್ಯಾ ನಿನ್ನ ಧರ್ಮ.
ಫಲಪದದಿಂದ ಭವ, ಆ ಭವದಿ ನರಕ.
ಇಂತಪ್ಪವನೆನಗೆಯು ಎನ್ನವರಿಗೆಯು ತೋರದಿರಯ್ಯಾ, ನಿನ್ನ ಧರ್ಮ.
ನಾನು ಎನ್ನವರು ನಿನ್ನನೇ ಬೇಡಿಕೊಂಬೆವಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೮೫ ॥

೫೮೬

ಫಲಪದಾದಿಗಳ ಭಕ್ತರಿಗೆ ಕೊಟ್ಟೆನೆಂದೆಂಬೆ ;
ಅವರವನೊಲ್ಲರು !
ಅವರು ನಿನಗೆ ನಿನ್ನ ರೂಪಿಂಗೆ ತನುಮನಧನಾದಿಗಳ ಕೊಡುವರು.
ಎಲೆ ವಂಚಕನಾದ ಶಿವನೆ, ನಿರ್ವಂಚಕರೆಮ್ಮವರು !
ನಿನ್ನನೇನ ಬೇಡುವರವರು ? ನೀನೇನನವರಿಗೆ ಕೊಡುವೆ ?
ನಿನ್ನ ಕೊಡನೆಮ್ಮವರೊಲ್ಲರು ಕಾಣಾ,
ಕೊಡು, ಕೊಡದೆ ಹೋಗು, ಕಪಿಲಸಿದ್ಧಮಲ್ಲಿಕಾರ್ಜುನಾ ! ॥ ೫೮೬ ॥

೫೮೭

ಬಂದೆನಯ್ಯಾ ಬಾರದ ಭವವ
ಉಂಡೆನಯ್ಯಾ ನಾನು ಮಾಡಿದುದನು.
ಇನ್ನು ಭವಕ್ಕೆ ಬಾರದಂತೆ ಮಾಡಾ ತಂದೆ.
ಉಣ್ಣದಂತೆ ನೀ ರೂಪಿಸಯ್ಯ, ಅಯ್ಯಾ ನಿನ್ನ ಧರ್ಮ !
ವಿಚಿತ್ರಮೂಲ ಮಲ್ಲಿಕಾರ್ಜುನಯ್ಯಾ,
ಹತ್ತೆಸಾರುವ ಮನಕ್ಕೆ ಮಂಗಳವನೀಯಯ್ಯಾ, ಪ್ರಭುವೆ. ॥ ೫೮೭ ॥

೫೮೮

ಬಯಸುವೆನಯ್ಯಾ ನಿನ್ನವರ ಸಂಗವ
ಎಳಸುವೆನಯ್ಯಾ ನಿನ್ನವರ ಸಂಗಕ್ಕೆ
ಬಯಕೆ ಬೇರನ್ಯಕ್ಕೆಳಸದಂತೆ
ಹರುಷಿತನ ಮಾಡಯ್ಯಾ ಭಕ್ತಿಯೊಳಗೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೮೮ ॥

೫೮೯

ಬಸವ ಕಾರಣ ವಸುಧೆ, ವಸುಧೆ ಕಾರಣ ಬಸವ,
ಬಸವ ಕಾರಣ ಚೆನ್ನಬಸವ ಬಂದ.
ಬಸವ ಚೆನ್ನಬಸವ ಪ್ರಭು ಶಿವನೆಂಬ ಮಾತೆಯಲಿ
ಶಿಶುವಾಗಿ ಜನಿಸಿದೆನಯ್ಯಾ, ಕಪಿಲಸಿದ್ಧಮಲ್ಲಿನಾಥಾ. ॥ ೫೮೯ ॥

೫೯೦

ಬಸವಣ್ಣನ ನೆನೆದು ಮಾಡುವ ಭಕ್ತಿ ನಡೆವುದಯ್ಯಾ ;
ಬಸವಣ್ಣನ ನೆನೆಯದೆ ಮಾಡುವ ಭಕ್ತಿ ಎಳತಟವಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೫೯೦ ॥

೫೯೧

ಬಸವಣ್ಣನ ಸಮತೆ ಎನಗಾಗದಯ್ಯಾ.
ಅಯ್ಯಾ, ಲಿಂಗಸ್ಥಲ-ಜಂಗಮಸ್ಥಲ-ಪ್ರಸಾದಸ್ಥಲ ನಿನಗಾಗದಯ್ಯಾ.

ತ್ರಿವಿಧ ಸಕೀಲಸಂಬಂಧವನರಿದಡೆ
ಎನ್ನ ಕಪಿಲಸಿದ್ಧಮಲ್ಲಿನಾಥಯ್ಯಾ,
ಇತ್ತ ಬಾ ಎಂದೆತ್ತಿಕೊಳ್ಳನೆ ಅಯ್ಯ ! ॥ ೫೯೧ ॥

೫೯೨

ಬಸವಣ್ಣನೇ ತಾಯಿ, ಬಸವಣ್ಣನೇ ತಂದೆ,
ಬಸವಣ್ಣನೇ ಪರಮಬಂಧುವೆನಗೆ.
ವಸುಧೀಶ ಕಪಿಲಸಿದ್ಧಮಲ್ಲಿಕಾರ್ಜುನಾ,
ನಿಮ್ಮ ಹೆಸರಿಟ್ಟ ಗುರು ಬಸವಣ್ಣನಯ್ಯಾ. ॥ ೫೯೨ ॥

೫೯೩

ಬಸವಣ್ಣ ಬಸವಣ್ಣ, ಭಕ್ತಿಬೀಜ ನಷ್ಟ.
ಬಸವಣ್ಣ ಬಸವಣ್ಣ ಬಸವಣ್ಣ ಮುಕ್ತಿಬೀಜ ನಷ್ಟ.
ಬಸವಣ್ಣ ಮೋಕ್ಷವೆಂಬುದು ಮುನ್ನವೆ ಅಡಗಿತ್ತು.
ಬಸವಣ್ಣ ತೋರದೆ ಬೀರದೆ ಹೋದೆಹೆನೆಂಬೆ.
ಮಹಾಜ್ಞಾನಿ ಬಸವಣ್ಣಾ, ನೀನೆಲ್ಲಿಯಡಗಿದೆಯೊ,
ಕಪಿಲಸಿದ್ಧಮಲ್ಲಿನಾಥ ಬಸವಾ ? ॥ ೫೯೩ ॥

೫೯೪

ಬಸವನ ಹಾಡದವರ, ಬಸವನ ಹೊಗಳದವರ
ಬಸವಾಕ್ಷರತ್ರಯದ ಜಪವಿಲ್ಲದ ದೆಸೆಗೇಡಿ ಮನುಜರ
ಎನ್ನತ್ತ ತೋರದಿರಯ್ಯಾ, ತಂದೆ
ವಿಷಮಾಕ್ಷ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೫೯೪ ॥

೫೯೫

ಬಸವನನು ಹೊಗಳುವವರ, ಬಸವನನು ನೆನೆವವರ,
ಬಸವನನು ಗುರು ಚರ ಇಷ್ಟವೆನಿಪ
ಸದಮಲಜ್ಞಾನಪ್ರಕಾಶ ಸದ್ವರ್ತನರ
ಹೊರೆಯೊಳಗೆನ್ನನಿರಿಸಯ್ಯಾ ಗುರುವೆ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೫೯೫ ॥

೫೯೬

ಬಸವನೇ ಮಾತೆಯಯ್ಯ, ಬಸವನೇ ತಾತನಯ್ಯ.
ಬಸವನೇ ಇಹಪರಕೆ ದಾತ, ನಾಥ.
ಬಸವಾಕ್ಷರತ್ರಯದ ಸೋಪಾನವಿಡಿದೀಗ
ತ್ರೈಲಿಂಗಕ್ಕೆ ಆನು ಮೂಲವಾದೆ.
ಬಸವ ಚೆನ್ನಬಸವ ಪ್ರಭುವಿನ ಕರುಣದಿಂದ
ದೆಸೆಯೆರಡುಗೆಟ್ಟೆನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೫೯೬ ॥

೫೯೭

ಬಸವಾ ಬಸವಾ ಎಂಬ ಶಬ್ದವಡಗಿತ್ತು.
ಬಸವಾ ಬಸವಾ ಎಂಬ ಕಂಬ ಮುರಿಯಿತ್ತು.
ಬಸವಾ ಬಸವಾ ಎಂಬ ಘಾಟ ನಷ್ಟವಾಯಿತ್ತಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೫೯೭ ॥

೫೯೮

ಬಸವಾ ಬಸವಾ, ನಿಮ್ಮಿಂದ ಕಂಡೆನಯ್ಯಾ ಭಕ್ತಿಯ.
ಬಸವಾ ಬಸವಾ, ನಿಮ್ಮಿಂದ ಕಂಡೆನಯ್ಯಾ ಜ್ಞಾನವ.
ಬಸವಾ ಬಸವಾ, ನಿಮ್ಮಿಂದ ಕಂಡೆನಯ್ಯಾ ವೈರಾಗ್ಯವ.
ಕರುಣಿ ಕಪಿಲಸಿದ್ಧಮಲ್ಲಿನಾಥಯ್ಯಾ,
ನಿಮಗೂ ಎನಗೂ ಬಸವಣ್ಣನೆ ಶಿವಪಥಿಕನಯ್ಯಾ. ॥ ೫೯೮ ॥

೫೯೯

ಬಸವಾ ಬಸವಾ, ಭವರೋಗವೈದ್ಯ,
ಬಸವಾ ಬಸವಾ ನಿನ್ನರಿವು ನೀನೆ.
ಬಸವಾ ಬಸವಾ, ಕಾಲಕಲ್ಪಿತನಷ್ಟ ನೀನೆ.
ಬಸವಾ, ಕಪಿಲಸಿದ್ಧಮಲ್ಲಿನಾಥನಲ್ಲಿ
ನೀನೆಲ್ಲಿ ಅಡಗಿದೆಯೊ ಬಸವಾ. ॥ ೫೯೯ ॥

೬೦೦

ಬಾರದ ಭವವ ಬಂದೆನುಣ್ಣದುದನುಂಡೆನಯ್ಯಾ :
ನಾನು ಮಾಡಿದುದನು.
ಇನ್ನು ಭವಕ್ಕೆ ಬಾರದಂತೆ ಮಾಡಾ ತಂದೆ.
ಕರ್ಮವನುಣ್ಣದಂತೆ ನಿರೂಪಿಸಯ್ಯಾ,
ಅಯ್ಯಾ, ನಿಮ್ಮ ಧರ್ಮ.
ವಿಚಿತ್ರಮೂಲ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿಮ್ಮ ಹತ್ತೆ ಸಾರುವ ಮನಕ್ಕೆ ಮಂಗಳವನೀಯಯ್ಯಾ ಗುರುವೆ. ॥ ೬೦೦ ॥

೬೦೧

ಬಾರ[ದೆ] ಗಂಡ, ಬಡವಾ[ದೆ].
ಉಣ್ಣ[ದೆ] ಗಂಡ, ಉಪವಾಸವಿ[ದ್ದೆ].
ನನ್ನ ಕಣ್ಣನೀರು ನಿನ್ನ ಕಣ್ಣ ತಾಗಲೊ
ಕಪಿಲಸಿದ್ಧಮಲ್ಲಿನಾಥಾ. ॥ ೬೦೧ ॥

೬೦೨

ಬಾರಯ್ಯಾ, ಎನ್ನ ಸರ್ವಾಂಗದ ಗಂಡನೆ.
ಬಾರಯ್ಯಾ, ಎನ್ನ ಹೃದಯಕಮಲದಳಾಸನನೆ.
ಬಾರಯ್ಯಾ, ಎನ್ನ ಚಿತ್ತದ ಸೌಂದರನೆ.
ಬಾರಯ್ಯಾ, ಎನ್ನ ಶುದ್ಧ ಸಿದ್ಧ ಪ್ರಸಿದ್ಧ ಪ್ರಾಣೇಶ್ವರನೆ.
ಬಾರಯ್ಯಾ, ಎನ್ನ ಕಪಿಲಸಿದ್ಧಮಲ್ಲಿಕಾರ್ಜುನಾ, ಸಂದಿಲ್ಲದೆ. ॥ ೬೦೨ ॥

೬೦೩

ಬಾಲನಾಗಿದ್ದಂದು ಕರೆದು ಎತ್ತಿ ಮುದ್ದಿಕ್ಕಿ
ಮೊಲೆವಾಲಕೊಟ್ಟು ಸಲಹಿದ ಬಸವಾ.
ಮೂಲ ಶಿವಜ್ಞಾನಕ್ಕೆ ದೀಪ್ತಿಯನಿಕ್ಕಿ ಸಲಹಿದ ಬಸವಾ.
ಎನಗೆ ನೀನೆ ಗತಿಯಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯ ಬಸವಾ. ॥ ೬೦೩॥

೬೦೪

ಬಾಲರು ಇನಿದ ಮಚ್ಚಿದಂತೆ ನಾ ನಿಮ್ಮ ಮಚ್ಚಿ ಬಿಡುವೆನೆ ?
ಮಚ್ಚಿದ ಮನಕ್ಕೆ ತುಚ್ಛ ಬಾರದಂತೆ ಮಾಡು ಕಂಡಾ.

ಎಲೆ ಅಯ್ಯಾ, ಅಯ್ಯಾ, ನಿಮ್ಮ ಧರ್ಮ.
ಸರ್ವರೆಲ್ಲರೂ ಈ ನಿನ್ನವ ನಿನ್ನವನೆಂದೆಂಬರು.
ಎನ್ನ ಮಾನಸ–ವಾಚಕ–ಕಾಯಕದಲ್ಲಿ ನೀನಲ್ಲದೆ ಅನ್ಯವನರಿಯೆ.
'ಭೃತ್ಯಾಪರಾಧ ಸ್ವಾಮಿನೋ ದಂಡ' ಎಂಬುದುಂಟು.
ನಿನ್ನ ಬಲ್ಲಂತೆ ಸಲಹು ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೦೪ ॥

೬೦೫

ಬಿನ್ನಾಣ ದೇಹವನು ತನ್ನಮಯ ಮಾಡಿದನು
ಉನ್ನತೋನ್ನತ ಲಿಂಗವನು ತೋರಿ
ಫಲಪದವ ಹೊದ್ದದ ಹಾಂಗೆ ಮಾಡಿದನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನ. ॥ ೬೦೫ ॥

೬೦೬

ಬಿಳಿಯಗಿರಿ ತಳವೆಳಗಾಗಿ ಬೆಳೆಯೆ ಅನುವಿಡಿದು ಸುಖವ ಕಂಡು
ಅನುಭವದವಳಿಗೆ ಬೆಳ್ಪಿನ ಸುಖವನೇಕೀಕರಿಸಿ ನೋಡಲು
ಅನುವಾಯಿತ್ತಯ್ಯಾ ಬೆಳ್ಪಿನ ಪದಿನಾರೆಸಳ ಪೀಠ.
ಆ ಪೀಠದಲ್ಲಿ ಸಜ್ಜನನೆಂಬವ ನಿಂದು ಪ್ರಸಾದವಿಡಿದು ನಡೆಯೆ
ವ್ಯೋಮದ ಗುಣ ಕೆಟ್ಟು ನೆಲೆಗೊಂಡನಯ್ಯಾ
ನಿಮ್ಮ ಶರಣ ಚೆನ್ನಬಸವಣ್ಣನು.
ಕಪಿಲಸಿದ್ಧಮಲ್ಲಿನಾಥಯ್ಯಾ,
ಚೆನ್ನಬಸವಣ್ಣನಿಂದ ಬದುಕಿದೆನು. ॥ ೬೦೬ ॥

೬೦೭

ಬೀಜ ವೃಕ್ಷದಂತೆ ನೀನಿಪ್ಪೆಯಯ್ಯಾ.
ನಿರಾಕಾರವೆ ಮೂರ್ತಿಯಾಗಿ, ಮೂರ್ತಿಯೆ ನಿರಾಕಾರವಾಗಿ.
ಇಂತಿವೆಲ್ಲವನತಿಗಳೆದು ಬಯಲಾಗಿಪ್ಪೆಯಯ್ಯಾ ನೀನು,
ಎನ್ನ ಕಪಿಲಸಿದ್ಧಮಲ್ಲಿಕಾರ್ಜುನದೇವಯ್ಯಾ. ॥ ೬೦೭ ॥

೬೦೮

ಬೆಟ್ಟವ ನೆಮ್ಮಿ ಕಟ್ಟಿಗೆಯು ತಳುವದು ಅದಾವಚ್ಚರಿ !
ಪ್ರಾಣಕ್ಕೆ ಹೊಣೆಯಾದಲ್ಲಿ ಕಾದುವುದು ಅದಾವಚ್ಚರಿ !

ಪರಕಾಯುವ ತೊಟ್ಟಿದ್ದಲ್ಲಿ ಅಚ್ಚರಿ ಅರಿಬಿರಿದೆ.
ನಿಮ್ಮುವ ಕಾರುಣ್ಯವಾಗಿಪ್ಪಲ್ಲಿ ಎನಗೆಲ್ಲಿಯೂ ಸುಖ.
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಕಪಿಲಸಿದ್ಧಮಲ್ಲಿಕಾರ್ಜುನಲಿಂಗದಲ್ಲಿ
ಪ್ರಭುದೇವರಿಂದ ಬದುಕಿದೆ. ॥ ೬೦೮ ॥

೬೦೯

ಬೇಡ ಬೇಡಯ್ಯ ಕಾಡಲಾಗದು ಎನ್ನ
ರೂಢೀಶ ನೀನೆನ್ನ ತಡಿಗೆ ಚಾಚಾ.
ಗಾಡಿಗತನದಿಂದ ನೋಯಿಸಿದಡೆ
ನೋಡಿ ಮೊರೆಯಿಡುವೆನ್ನೈ ಬಸವಣ್ಣಂಗೆ
ಆರೂಢನೆ ನಿಮ್ಮ ಗಾರುಮಾಡಿಸುವರೆಮ್ಮವರಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೦೯ ॥

೬೧೦

ಬ್ರಹ್ಮ ಪೂಜಿಸುವ, ವಿಷ್ಣು ಪೂಜಿಸುವ, ಇಂದ್ರ ಪೂಜಿಸುವ,
ರವಿ ಪೂಜಿಸುವ, ಚಂದ್ರ ಪೂಜಿಸುವ–
ಅಂದಂದಿಂಗೆ ಬಂದ ಸುಖದುಃಖಗಳನುಣುತಿಪ್ಪರು.
ಅದು ಕಾರಣ, ಲಿಂಗಪೂಜಕರಿಗೆ ಭವವುಂಟೆಂದು ಹೇಳುತ್ತಿದೇನೆ.
ಪ್ರಸಾದಲಿಂಗಪ್ರಾಣಿಗಳಿಗೆ ಭವವಿಲ್ಲ, ಸಂದಿಲ್ಲ ;
ಇದು ನಿಶ್ಚಯ, ನಂಬು,
ಕಪಿಲಸಿದ್ಧಮಲ್ಲಿಕಾರ್ಜುನಯ್ಯನಾಣೆ. ॥ ೬೧೦ ॥

೬೧೧

ಬ್ರಹ್ಮಾಂಡಂಗಳಿಂದತ್ತ[ತ್ತ]ಲಾದ ಆದ್ಯಕ್ಷರದ
ಭೇದವ ಭೇದಿಸಿ ಸಾದಾಖ್ಯ ತತ್ತ್ವವನತಿಗಳೆದು
ಶುದ್ಧ ಸಿದ್ಧ ಪ್ರಸಿದ್ಧ ಪಂಚಮಬ್ರಹ್ಮಕ್ಕೆ ಸೊಮ್ಮಾದ
ಆರುವರ್ಣಂಗಳ ಐವತ್ತೆರಡಕ್ಷರದ
ಆನಂದಸ್ಥಾನವ ಬಲ್ಲಾತ ಗುರು.
ಇಪ್ಪತ್ತೈದಕ್ಷರದ ಹತ್ತೆ ಹೊದ್ದದಿಪ್ಪ ಪರಮಗುರುವೆ

ನೀನು ಶಿಷ್ಯ ಕಾರಣ ಪರಶಿವಮೂರ್ತಿ ಗುರುರೂಪಾದೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೧೧ ॥

೬೧೨

ಭಕ್ತನ ಮನ ಹೆಣ್ಣಿನೊಳಗಾದಡೆ, ವಿವಾಹವಾಗಿ ಕೂಡುವುದು.
ಭಕ್ತನ ಮನ ಮಣ್ಣಿನೊಳಗಾದಡೆ, ಕೊಂಡು ಆಲಯವ ಮಾಡುವುದು.
ಭಕ್ತನ ಮನ ಹೊನ್ನಿನೊಳಗಾದಡೆ, ಬಳಲಿ ದೊರಕಿಸುವುದು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೧೨ ॥

೬೧೩

ಭಕ್ತನಾದುದಕ್ಕೆ ಇದೆ ಚಿಹ್ನವು ನೋಡಾ, ಎಲೆ ದೇವಾ.
ಕೈಯಲ್ಲಿರಲು ಮಾಂಸದ ಮುದ್ದೆ,
ಬಾಯಲ್ಲಿರಲು ವಾರಾಂಗನೆಯ ತಾಂಬೂಲ,
ಮನದಲ್ಲಿರಲು ಕತ್ರಿಯ ಭಾವ,
ಕೊರಳಲ್ಲಿರಲು ಲಿಂಗ, ದೇಹದಲ್ಲಿರಲು ಲಿಂಗಲಾಂಛನ,
ಜಂಗಮವೆಂದು ನಂಬುವುದು ಕಾಣಾ,
ಕಪಿಲಸಿದ್ಧಮಲ್ಲಿನಾಥಾ. ॥ ೬೧೩ ॥

೬೧೪

ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನೆಂದು
ಹೆಸರಿಟ್ಟುಕೊಂಬಿರಿ.
ಆರು ಪರಿಯಲ್ಲಿ ಆರಾದವನರಿಯಿರಿ.
ಭಕ್ತನಾದಡೇಕೆ ಭವದ ಬೇರು ?
ಮಾಹೇಶ್ವರನಾದಡೇಕೆ ಪ್ರಳಯಕ್ಕೊಳಗಿಹ ?
ಪ್ರಸಾದಿಯಾದಡೇಕೆ ಇಂದ್ರಿಯವೈದ ಅನಿಗ್ರಹಿಯಾಗಿಹ ?
ಪ್ರಾಣಲಿಂಗಿಯಾದಡೇಕೆ ಉತ್ಪತ್ತಿ ಸ್ಥಿತಿ ಲಯಕೊಳಗಾಗಿಹ ?
ಶರಣನಾದಡೇಕೆ ಉಪಬೋಧೆಗೊಳಗಾಗಿಹ ?
ಐಕ್ಯನಾದಡೇಕೆ ಇಹ–ಪರವನರಿದಿಹ ?
ಇವೆಲ್ಲ ಠಕ್ಕ, ಇವೆಲ್ಲ ಅಭ್ಯಾಸ !

ಕಪಿಲಸಿದ್ಧಮಲ್ಲಿಕಾರ್ಜುನಯ್ಯ,
ನಿಮ್ಮ ಷಡುಸ್ಥಲವಭೇದ್ಯ ! ॥ ೬೧೪ ॥

೬೧೫

ಭಕ್ತರ ನುಡಿ ಆಭವನಲ್ಲದೆ
ಅನ್ಯವ ನುಡಿಯದು, ಅನ್ಯಕೆ ಎಡೆಯಾಗದು.
ಆತನ ಶ್ರೋತ್ರ ತ್ವಕ್ಕು ನೇತ್ರ ಜಿಹ್ವೆ ಘ್ರಾಣವೆಂಬ
ಪಂಚೇಂದ್ರಿಯಂಗಳು ಆತನ ಐದು ಮುಖಂಗಳಯ್ಯಾ !
ಆತ ಪತಿ, ಆತ ಸತಿ :
ಆತನ ಕರಣಂಗಳೆಲ್ಲವು ಈಶನ ಉಪಕರಣಂಗಳು.
ಆತನ ಕರಣಂಗಳೆಲ್ಲವು ಈಶನ ಹೇಮಶೈಲ
ಆತ ನಿತ್ಯವೂ ಲಿಂಗಾರ್ಚನೆಯ ಮಾಡುವ ಕಾರಣ,
ಆತಂಗೊಂದೂ ಇದಿರಿಲ್ಲ ; ಆತ ಲೋಕಕ್ಕೆ ಉಪದೇಶಿಕ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಕೂಡಿದ ತಾತ್ಪರ್ಯ ಭಕ್ತಿ. ॥ ೬೧೫ ॥

೬೧೬

ಭಕ್ತಿಗೆ ಭಕ್ತ ಬಸವಣ್ಣನಯ್ಯಾ.
ಯುಕ್ತಿಗೆ ಯುಕ್ತ ಬಸವಣ್ಣನಯ್ಯಾ.
ಮುಕ್ತಿಗೆ ಮುಕ್ತ ಬಸವಣ್ಣನಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೬೧೬ ॥

೬೧೭

ಭಕ್ತಿಯು ಕೂಟವಾಯಿತ್ತು ಬಸವಣ್ಣಂಗೆ.
ಶಕ್ತಿಯು ಕೂಟವಾಯಿತ್ತು ಶಿವದಾಸಣ್ಣಂಗೆ.
ಆಚಾರ ಕೂಟವಾಯಿತ್ತು ಏಲೇಶ್ವರದ ಕೇತಯ್ಯಂಗೆ.
ಅರ್ಪಿತ ಕೂಟವಾಯಿತ್ತು ಚೆನ್ನಬಸವಣ್ಣಂಗೆ.
ಐಕ್ಯ ಕೂಟವಾಯಿತ್ತು ಅನಿಮಿಷಂಗೆ.
ಪ್ರಾಣಲಿಂಗ ಕೂಟವಾಯಿತ್ತು ನಿಮಗೆ ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೬೧೭ ॥

೬೧೮

ಭಕ್ತಿಯು ಬಯಸುವಡೆ ನಿತ್ಯನಿತ್ಯ ನೆನೆಯಾ
ನಿಸ್ತಾರ ನಿಸ್ತಾರವೆಂದು ಮುಂದೆ ಬಂದಾಡಾ

ಆತ ಶುದ್ಧದೇವ ಎಲ್ಲರ ಪರಿಯಂತಲ್ಲ ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೧೮ ॥

೬೧೯

ಭಕ್ತಿಯ ಭಾವದ ಬಯಕೆಯ ಬಯಸುವೆ, ಅವಧಾರಯ್ಯಾ.
ಎನ್ನ ಮನ ನಿಮ್ಮ ನೆನೆವಂತೆ ಮಾಡಯ್ಯಾ.
ಎನ್ನ ಮನ ನಿಮ್ಮ ಶ್ರೀಪಾದವನಗಲದಂತೆ ಮಾಡು,
ಶ್ರೀಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೬೧೯ ॥

೬೨೦

ಭಕ್ತಿಯಿಲ್ಲದ ಬೇಗೆಯಲ್ಲಿ ಬೆಂದೆನಯ್ಯಾ ತಂದೆ.
ನಿತ್ಯವಪ್ಪ ಭಕ್ತಿಪಥವ ಕುಡು ತಂದೆ !
ತತ್ತ್ವ ಕಾಮ್ಯಾರ್ಥವನೊಲ್ಲೆನಯ್ಯಾ, ಭಕ್ತಿಯೊಳಗಿರಿಸಯ್ಯಾ.
ನಿತ್ಯನಿಗಮಗೋಚರ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಭಕ್ತರ ಸಂಗದೊಳಿರಿಸಯ್ಯಾ. ॥ ೬೨೦ ॥

೬೨೧

ಭಕ್ತಿಯುಕ್ತನುವಲ್ಲ ಮುಕ್ತಿಗ್ರಾಹಕನಲ್ಲ
ಪಥದ ವೇದ್ಯನುವಲ್ಲದೆಂತೆಂತೋ ?
ಕರ್ಮಕಾಯನಲ್ಲ ಕಾಲಾಗ್ನಿಯಲ್ಲ
ತನ್ನಲ್ಲಿ ತಾನೆ ಆಕಾರಂ ಬೊ
ಆಗಮವಾಯುಪೋನ್ನಮಃ ನಾ ದೇವದೇವ
ಲಿಂಗಾಯತ್ತಂ ಬೊ ಸ್ವತಂತ್ರಶೀಲ
ಕಪಿಲಸಿದ್ಧಮಲ್ಲಿನಾಥಾ,
ಆತನೆ ಅಚ್ಚಶರಣಂ ಬೊ. ॥ ೬೨೧ ॥

೬೨೨

ಭಕ್ತಿರೂಪನು ಬಸವ, ನಿತ್ಯರೂಪನು ಬಸವ,
ಮತ್ತಾನಂದಸ್ವರೂಪ ಬಸವಣ್ಣನು.

ಸತ್ತುರೂಪನು ಬಸವ, ಚಿತ್ತುರೂಪನು ಬಸವ ;
ಎತ್ತೆತ್ತ ನೋಡಿದಡೆ ಅತ್ತತ್ತ ಪರಿಪೂರ್ಣನಾಗಿಪ್ಪ
ಬಸವಣ್ಣನಿಂ ನಿತ್ಯಸುಖಿಯಾಗಿರ್ದೆನ್ನೈ
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೬೨೨ ॥

೬೨೩

ಭಕ್ತಿಸ್ಥಲದ ವರ್ಮವನು
ಲೋಕಕ್ಕೆ ನಿಶ್ಚಿಂತವ ಮಾಡಿ ತೋರಿದ ಬಸವಣ್ಣ.
ತನ್ನ ಪದದುನ್ನತವ ಏಕೈಕಸದ್ಭಾವರಿಗಿತ್ತ
ಎನ್ನ ಗುರು ಚೆನ್ನಬಸವಣ್ಣನು.
ಬಸವ, ಚೆನ್ನಬಸವನೆಂಬ ಮಹಾಸಮುದ್ರದೊಳಗೆ
ಹರುಷಿತನಾದೆನ್ನೈ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೨೩ ॥

೬೨೪

ಭವದ ಬೇರ ಹರಿಯಲ್ಕೆ ಪ್ರಭುವಾಗಿ ಬಂದ ;
ಮಲತ್ರಯಂಗಳ ಕೆಡಿಸಲ್ಕೆ ಪ್ರಭುವಾಗಿ ಬಂದ ;
ಅಜ್ಞಾನಿಗಳಿಗೆ ಸುಜ್ಞಾನವ ತೋರಲ್ಕೆ ಪ್ರಭುವಾಗಿ ಬಂದ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯ,
ಎನ್ನ ಭವದ ಬೇರ ಹರಿಯಲ್ಕೆ ಪ್ರಭುವಾಗಿ ಬಂದ. ॥ ೬೨೪ ॥

೬೨೫

ಭಸಿತ ರುದ್ರಾಕ್ಷಿಯು, ಎಸೆವ ಪಂಚಾಕ್ಷರಿಯು,
ಅಸಮ ಶ್ರೀಗುರು ಲಿಂಗ ಜಂಗಮದ ನಿಜವ,
ಅತಿಶಯದ ಪಾದೋದಕ ಪ್ರಸಾದವನರುಹಿ ಸಲಹಿದಾತನು ಗುರುವು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೨೫ ॥

೬೨೬

ಭಸಿತ ರುದ್ರಾಕ್ಷಿಯನು ಧರಿಸಿ,
ಸಂಪ್ರೀತಿಯಲ್ಲಿ ಬಸವಾಕ್ಷರತ್ರಯವ ನೆನೆಯುತಿಪ್ಪ
ಶರಣರೇ ಇಹಲೋಕ ಪರಲೋಕ ;

ಭ್ರಮೆಗೆಟ್ಟು ಇರುತಿಪ್ಪ ಇಹಲೋಕವೇ ರುದ್ರಲೋಕ ತಾನು.
ಕರುಣಾಕರ ಕಪಿಲಸಿದ್ಧಮಲ್ಲೇಶ್ವರನ
ಶರಣರು ಇರುತಿಪ್ಪುದೇ ರುದ್ರಲೋಕ ತಾನು. ॥ ೬೨೬ ॥

೬೨೭

ಭಸಿತವನಿಟ್ಟಿಹೆ, ರುದ್ರಾಕ್ಷಿಯ ಧರಿಸಿಹೆ,
ನೀನೊಲ್ಲೆ, ನೀನೊಲಿದೆ.
ನಿನ್ನೊಲುಮೆ ಏಕೆ ಎಲೆ ಅಯ್ಯಾ.
ನಿನ್ನವರೊಲ್ಲರು ! ಆ ಒಲುಮೆ ತಾನೆನಗೇಕೆ ? ಹೇಳಾ, ಎಲೆ ಅಯ್ಯಾ.
ಪುರುಷರಿಲ್ಲದ ಸ್ತ್ರೀಯರ ಶೃಂಗಾರದಂತೆ
ನಿನ್ನೊಲುಮೆ ಏಕೆ ? ಹೇಳಾ !
ನಿಜಭಕ್ತಿಯಲ್ಲಿರಿಸಿ ಸದ್ಭಕ್ತನೆಂದೆನಿಸಿ
ಸದಾಚಾರಿಗಳ ಸಂಗಡ ಎನ್ನ ಹುದುವಿನಲ್ಲಿ ಕುಳ್ಳಿರಿಸಿ
ಓರಂತೆ ಮಾಡಾ, ಕಪಿಲಸಿದ್ಧಮಲ್ಲಿಕಾರ್ಜುನಾ,
ನೀನೊಲಿದುದಕ್ಕೆ ಇದು ಕುರುಹು.
ಅಲ್ಲದಿರ್ದಡೆ ಇದು ವೈಶಿಕ ! ॥ ೬೨೭ ॥

೬೨೮

ಭಾವ ಬಲಿಸಬೇಕಲ್ಲದೆ ವಿಭಾವ ಮಾಡಲುಂಟೆ ?
ಗುರುಭಕ್ತಿಯಲ್ಲಿ ಭಾವ ಬಲಿದುದೆ ಬ್ರಹ್ಮಜ್ಞಾನ ;
ಗುರುಭಕ್ತಿಯಲ್ಲಿ ಭಾವ ನಿಂದುದೆ ಸಹಜಸ್ಥಿತಿ.
ಗುರುಭಕ್ತಿ ಮರೆವ ಅರಿವ ಮುರೆತುದೆ,
ಕಪಿಲಸಿದ್ಧಮಲ್ಲಿಕಾರ್ಜುನದೇವನ ಮಹಾಮನೆ ;
ಇದು ಸತ್ಯ ಕೇಳಾ ಶಿವತಾಯಿಯೆ. ॥ ೬೨೮ ॥

೬೨೯

ಭಾವಿಸಿದರೆ ಹೆಂಗೂಸು
ನಡುವೆ ನಿಂದಿರೆ ಹೆಂಪುಳ್ಳ ಗಂಡುಗೂಸು !
ಒಬ್ಬ ತನಗೆಂಬ ಒಬ್ಬ ತನಗೆಂಬ
ಸುತ್ತಿ ನೋಡಿ ಸುಯ್ವಳು ಹೋ !

ಎಮ್ಮಿಂದ ನಿಮಗೆ ವಿವಾಹ ಬೇಡಯ್ಯಾ,
ಎಮ್ಮ ಗಂಡ ಬಾಯಾಳು, ಕಪಿಲಸಿದ್ಧಮಲ್ಲಿನಾಥಾ. ॥ ೬೨೯ ॥

೬೩೦

ಭೂಮಿ ಒಂದೆಂದಡೆ ಬೆಳೆವ ವೃಕ್ಷ ಹಲವು ತೆರನುಂಟು.
ಉದಕ ಒಂದೆಂದಡೆ ಸವಿಸಾರದ ಸಂಪದ ಬೇರುಂಟು.
ನಿನ್ನೊಳಗು ನಾನಾದಡೆ ತಾಮಸದ ರಾಗ ವಿರಾಗವಾಗದು ;
ಕಪಿಲಸಿದ್ಧಮಲ್ಲಿಕಾರ್ಜುನಲಿಂಗವೆಂಬ ಪುರುಷ ರತಿಕೂಟಸ್ಥವಿಲ್ಲ. ॥ ೬೩೦ ॥

೬೩೧

ಭೇದಾದಿ ಭೇದವ ವಾದಿಸುವವರ ನೋಡಿಸದಿರಯ್ಯ.
ಏಕೋದೇವನೆಂಬವರ ಅನೇಕ ವಿಧದಿಂದ ತೋರಿಸಯ್ಯ.
ನಿರಾಕಾರವೆಂಬವರ ಸಂಗಕ್ಕೆಳಸದಂತೆ ಮಾಡಯ್ಯ.
ಏಕೋದೇವನೆಂಬವರ ಸಂಗದಲ್ಲಿರಿಸು ಎನ್ನ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೩೧ ॥

೬೩೨

ಭ್ರಮಣವಿಡಿದ ಭ್ರಮಿತರು
ಕಮಳದ ಎಸಳ ಅಕ್ಷರದ ವರ್ಣವ ಕಂಡೆಹೆನೆಂಬರಯ್ಯಾ.
ಕಾಬ ಕಾಣಿಕೆ ಯಾರಿಗೂ ಸಾಧ್ಯವಲ್ಲ
ಕಂಡ ಕಂಡ ನಮ್ಮ ಕಪಿಲಸಿದ್ಧಮಲ್ಲಿನಾಥನಲ್ಲಿ ಚೆನ್ನಬಸವಣ್ಣ. ॥ ೬೩೨ ॥

೬೩೩

ಭ್ರೂಮಧ್ಯದಿಂ ಮೇಲೆ ಒಪ್ಪಿಪ್ಪ ಕನ್ನಿಕೆಯು
ನಿನ್ನ ಜ್ಯೋತಿರ್ಮಯದ ಬೆಳಗ ತೋರಾ.
ಆ ಬೆಳಗಿನ ಬಳಗಂಗಳು ಶುದ್ಧ ಸಿದ್ಧ ಪ್ರಸಿದ್ಧವ ಪ್ರವೇಶಿಸಿಪ್ಪವು.
ನಿನ್ನಾನಂದಸ್ಥಾನದಲ್ಲಿ ಅತಿಶಯವಪ್ಪ ಬೀಜಾಕ್ಷರದ್ವಯಂಗಳುಂಟು.
ಅದರ ಮಹಾಪ್ರಭೆಯಲ್ಲಿ ಒಪ್ಪಿಪ್ಪ ಅವ್ಯಯ
ವಾಙ್ಮನಕ್ಕಗೋಚರನಾಗಿಪ್ಪ ಕಪಿಲಸಿದ್ಧಮಲ್ಲಿಕಾರ್ಜುನಯ್ಯನ
ನೋಡಿಹೆನೆಂಬ ಭರವಸ ಘನ, ತೋರಾ ಎಲೆ ಅವ್ವಾ ! ॥ ೬೩೩ ॥

೬೩೪

ಮಂಗಳದ ಸಂಗ ಅಂಗಕ್ಕೆ ಮುಟ್ಟಿದುದ
ಹಿಂಗಿ ಹೇಳಲ್ಕಿದಕೆ ಜಿಹ್ವೆಯುಂಟೆ ?
ಈರಾರು ಸುಖಗಳನು ಮೇಲಾದ ಮಧುರವನು
ಓರಂತೆ ಉಂಡುದಕೆ ಪ್ರಳಯವುಂಟೆ ?
ನಿಗಮಂಗಳರಿಯದಿಹ ಅಗಣಿತ ಮೆಟ್ಟದಾ
ಶ್ರುತಿಯ ತಪ್ಪಲಲಿರ್ಪ ನಿತ್ಯತೃಪ್ತಾ
ಮೂರಾರು ಈರಾರು ತೋರಿರ್ಪ ನಿಶ್ಚಯದ
ಆರರಿಂದಂ ಮೇಲೆ ಸಂಯೋಗವು
ಸ್ವಾನುಭಾವದ ದೀಕ್ಷೆ ತಾನು ತನಗಳವಟ್ಟು
ಹೇಳದೆ ಹೋದನಾ ಇರ್ದ ಮನೆಗೆ
ಮೂರನು ಮುಟ್ಟದೆ ಆರನು ತಟ್ಟದೆ
ಮೀರಿ ಉರವಣಿಸಿದನು ಸಾಯುಜ್ಯದಾ
ಫಲಪದವನತಿಗಳೆದು ನಿಗಮಕ್ಕಭೇದ್ಯನ ಕಂಡೆ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೩೪ ॥

೬೩೫

ಮಚ್ಚಿದೆ ಮಚ್ಚಿದೆ ನಲ್ಲನೆ, ಅಯ್ಯಾ ;
ನಿನ್ನ ಮಚ್ಚಿ ನಾನು ಅಗಲಲಾರೆ.
ಮಚ್ಚಿದ ಮನಕಿನ್ನು ಮಂಗಳವನೀಯಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೬೩೫ ॥

೬೩೬

ಮಜ್ಜನಕ್ಕೆರೆಯ ಹೇಳಿದಡೆ ನಾನೇನ ಮಜ್ಜನಕ್ಕೆರೆವೆನು ?
ಒಳಗೊಂದು ಪ್ರಾಣಲಿಂಗವ ಕಂಡೆನಯ್ಯಾ.
ಹೊರಗಣ ಹೂವ ಕೊಯ್ದು, ಹೊರಗನೆ ಮಜ್ಜನಕ್ಕೆರೆವರು ;
ಉಪಚಾರದ ನೇಮವ ನಾನೊಲ್ಲೆನಯ್ಯಾ.
ಸ್ವಾನುಭಾವವನರಿಯದವನೇತರ ಸುಖಿಯೊ ?
ಕಪಿಲಸಿದ್ಧಮಲ್ಲಿನಾಥನವನನೊಲ್ಲನಯ್ಯಾ. ॥ ೬೩೬ ॥

೬೩೭

ಮಠದೊಳಗೆ ಮೂವರು ಮಠದ ಹೊರಗೈವರು.
ಕುಟಿಲವನು ಬೆಳಸುತ್ತ ಅನುಪಮದಾನಿ
ನಿಟಿಲಾಕ್ಷ ಸೀಮೆಯನು ದಾರಿಯುಯೆಂದೀಗ
ಕುಟಿಲವೆ ತಮಗೊಂದು ಅಂಗವಾಗೆ
ಆಟಮಟವ ತೋರಿ ತಾನೆಯಗಲಿದ
ಕಪಿಲಸಿದ್ಧಮಲ್ಲಿಕಾರ್ಜುನಯ್ಯನು. ॥ ೬೩೭ ॥

೬೩೮

ಮಡದಿಯರೈವರ ಗಂಡರ ಪಿಡಿದೊಯ್ದರು ಕಳ್ಳರು.
ಮಡದಿ ಮೊರೆಯಿಟ್ಟೈಹೆನೆಂದು ಅರಸಿನ ಗ್ರಾಮಕ್ಕೆ ಬರಲು,
ಅರಸು ಅಂತಃಪುರದೊಳಗೈದಾನೆ.
ಅರಸನ ಕೂಡೆ ಏಕಾಂತವ ಮಾಡುವ ಪ್ರಧಾನಿಯು ಕಂಡು ಮೊರೆಯಿಟ್ಟಡೆ,
ಪ್ರಧಾನಿ ಪಾಲಿಸುತಿರ್ದ ಬಗೆಯ ನೋಡಾ,
ಕಪಿಲಸಿದ್ಧಮಲ್ಲಿನಾಥಯ್ಯಾ ! ॥ ೬೩೮ ॥

೬೩೯

ಮತ್ತೆ ಮತ್ತೆ ತನ್ನ ಚಿತ್ತ ಮುಟ್ಟಿದಲ್ಲಿಗೆ ತೊಳಲುತಿರ್ದಳವ್ವೆ.
ಚಿತ್ತ ಪರಿಪಾಕವಾದಡೆ, ಅವನಂಗದಲ್ಲಿ ಭೇದಿಸಿಹೆನೆಂದು
ಅಂಗ ಅನ್ಯಾಂಗವಾಗದ ಮುನ್ನಲ್ಲಿ,
ಲಿಂಗ, ನೀನೆಯಾದಳು ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನನವ್ವೆ. ॥ ೬೩೯ ॥

೬೪೦

ಮದನಂಗೆ ಮೋಹಿಸುವ ಮನವ ಸುಟ್ಟ ಪರಿಯ
ಪದುಳದಿಂ ಬಲ್ಲವರಾರು ಹೇಳಾ.
ಕರುಣಾಕರನೆ, ಕಪಿಲಸಿದ್ಧಮಲ್ಲೇಶ,
ನೀ ಕರುಣಿಸಿದವರಿಗಲ್ಲದೇ ಇಲ್ಲವೈ.

ಪರಮಪಾವನರವರು ಪರಮಮಾಹೇಶ್ವರರು,
ಪರುಕಿಸೆ ನೀನೆಂಬೆ ಕಾಣಾ, ಎನ್ನ ತಂದೆ. ॥ ೬೪೦ ॥

೬೪೧

ಮದಹಸ್ತಿ ಮದಹಸ್ತಿಯ ಹಿಡಿವುದಲ್ಲದೆ,
ಮತ್ತೊಂದು ರೂಪ ಹಿಡಿವುದೆ ?
ಆ ರೂಪಿಂಗಾ ರೂಪು ಹಿಡಿವುದಲ್ಲದೆ,
ಮತ್ತೊಂದು ರೂಪ ಹಿಡಿವುದೆ ?
ರೂಪಿಲ್ಲದಾತನ ರೂಪಿಸಿ ಹಿಡಿವೆನು,
ಕಪಿಲಸಿದ್ಧಮಲ್ಲಿನಾಥಯ್ಯನ. ॥ ೬೪೧ ॥

೬೪೨

ಮಧ್ಯದ ಮಧ್ಯದಲಿ ವೇದಾಡಿಮೂಲಿನಿ
ಆದಿಯ ಸಂತಕ್ಕೆ ಆದಿಯಾಗಿಪ್ಪಳು.
ಐದೇಳನಡರಿದಡೆ ವೈದೋರದಿಪ್ಪಳು.
ಪತಿಗೆ ಪತಿಯಾಗಿಪ್ಪಳು ಸತಿಗೆ ಬುದ್ಧಿಯಾಗಿಪ್ಪಳು.
ತನ್ನ ನೋಡಲೆಂದು ಹೋದಡೆ ಚಂದ್ರ ಸೂರ್ಯರ ನುಂಗಿ
ಕಣ್ಗಾಣದೆ ಹೋಗಿ ಅತ್ತೆಯ ಕೈವಿಡಿಯಲು,
ಈ ಮುವ್ವರಿಗೆರಹುಟ್ಟಿಗೆ ತಾನೆಯಾದಳು.
ತಾಯ ಕೈವಿಡಿದನೆಂದು ನಾನಂಜಿ ಸತಿಯಾದೆನೆನಗೆ ಪತಿಯಾದ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿನ್ನ ಕೂಡಿದ ಕೂಟ ನೀನರಿದಡರಿವೆ, ಮರದಡೆ ಮರವೆ. ॥ ೬೪೨ ॥

೬೪೩

ಮಧ್ಯನದಿಯ ನಾವು ಒಡೆದಡೆ ದುಃಖದಿಂದೇನು ?
ಜನಕ ಮರಣಹೊಂದಿದಡೆ ಮಾಡಿದ ದುಃಖದಿಂದೇನು ?
ಧೂಪನಾಗರ ಮುಟ್ಟಿಂದ ಮಾಡಿದ ದುಃಖದಿಂದೇನು ?
ನಾಗರನಂಗ ಗರುಡನ ಬಾಯಿಗೆ ಬಿದ್ದಂತಾಯಿತ್ತು
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೪೩ ॥

೭೪೪

ಮಧ್ಯಮದ ಸುಖವನು ಹೊದ್ದುವ ತತ್ವವನು
ಅರ್ಧಬಿಂಬಂಗಳ ಕಿರಣಂಗಳ
ಈ ಹೊದ್ದದ ಪ್ರಪಂಚಿಕವ ನಿತ್ಯದ ತತ್ವವನು
ಮಧ್ಯಮದಲಿ ಕಂಡೆ ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೪೪ ॥

೭೪೫

ಮನದ ಮುಂದಣ ಮಾಯಕ್ಕೆ ಒಡೆಯ ನೀನೆಯಯ್ಯಾ.
ಆವ ಪರಿಯಲ್ಲಿ ಎನ್ನ ನಡೆಸಿಕೊಂಡೆ ?
ನಿನ್ನ ಮನಬಂದಂತೆ ನಡೆಸಿಕೊಳ್ಳಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೭೪೫ ॥

೭೪೬

ಮನದಲ್ಲಿಯು ಘನವ ನೆನೆಯಬಾರದು.
ತೀರಲದು ಮಾಯಾಜಾಲವೆನಬಾರದು.
ಎಂದರದು ಕಪಿಲಸಿದ್ಧಮಲ್ಲಿಕಾರ್ಜುನನ ಮುಟ್ಟಲು ಬಾರದು. ॥ ೭೪೬ ॥

೭೪೭

ಮನನತ್ರಾಣರೂಪವಾದ ಚಿತ್ತೇ, ಮಂತ್ರವಲ್ಲದೆ
ಬೇರೆ ಮಂತ್ರಗಳುಂಟೆ ಅಯ್ಯಾ ?
ಸರ್ವಮಂತ್ರಮಾತೆ ಪಂಚಾಕ್ಷರಿಯೆ ತಾನಾಗಿ,
ಕಪಿಲಸಿದ್ಧಮಲ್ಲಿಕಾರ್ಜುನಂಗೆ ಅಂಗವಾದ ಚಿತ್ತೆ,
ಪ್ರಣಯುಮೂಲವಾದ ಮಂತ್ರವಯ್ಯಾ. ॥ ೭೪೭ ॥

೭೪೮

ಮನ ನಿಲುಕದು, ಭಾವ ಭಾವಿಸದು
ಅರಿವು ಕುರುಹಿಡದು
ಉಪಮೆ ಸ್ಥಳವಿಡಲರಿಯದು.

ಮಂತ್ರತಂತ್ರಗಳಿಗೆಂತೂ ಸಿಲುಕದು.
ಜಪತಪಧ್ಯಾನ ಮೌನಂಗಳಿಗೆ ಅಳವಲ್ಲದ ಘನವದು !
ಕಪಿಲಸಿದ್ಧಮಲ್ಲಿಕಾರ್ಜುನನ ನಿಲುವನು ಆತಿಂತೆನಬಹುದೆ ? ॥ ೬೪೮ ॥

೬೪೯

ಮನ ಮಹಾಮಂಗಳವನ್ನೈದಿ, ಹಿಂದು ಮುಂದು ಅರತು,
ಬಂದ ಬಟ್ಟೆಯು ಮುಚ್ಚಿ ಬಾರದಂತೆ ಹೋದರಯ್ಯಾ ನಿಮ್ಮವರು.
ನೀನು ಸಟೆಕಾರ, ನಿನ್ನಿಂದ ಊರು ಹಾಳಾಯಿತ್ತು.
ಎನ್ನ ನಿನ್ನವರಂತೆ ಮಾಡಿ, ಅವರ ಸಂಗದೊಳಗೆನ್ನನಿರಿಸಯ್ಯಾ,
ಇರಿಸದಿದ್ದಡೆ ನಿನ್ನ ಬಯಿವುದೆ ಸತ್ಯ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ ! ॥ ೬೪೯ ॥

೬೫೦

ಮನವೆಂಬ ಮಂಟಪದ ನೆಳಲಲ್ಲಿ ನೆನೆಹೆಂಬ ಜ್ಞಾನಜ್ಯೋತಿಯ ಬೆಳಗನಿಟ್ಟು
ಘನಪುರುಷ ಪವಡಿಸೈದಾನೆ, ಎಲೆ ಅವ್ವಾ.
ಅದನೊಂದೆರಡೆನ್ನದೆ ಮೂರು ಬಾಗಿಲ ಮುಚ್ಚಿ ನಾಲ್ಕ ಮುಟ್ಟದೆ
ಐದ ತಟ್ಟದೆ ಇರು ಕಂಡಾ, ಎಲೆ ಅವ್ವಾ.
ಆರೇಳೆಂಟೆಂಬ ವಿಹಂಗಸಂಕುಳದ ಉಲುಹು ಪ್ರಬಲವಾದಡೆ,
ಕಪಿಲಸಿದ್ಧಮಲ್ಲಿಕಾರ್ಜುನನು ನಿದ್ರೆಗೆಟ್ಟಲ್ಲಿರನು. ॥ ೬೫೦ ॥

೬೫೧

ಮರಳುತನದಲಿ ಭ್ರಮಿಸಿ ಫಲಪದಕ್ಕೊಳಗಪ್ಪವನ
ಎತ್ತಿದ ಗುರು ಬಸವಣ್ಣ
ಆಜ್ಞಾಸಿದ್ಧನನರ್ಚಿಸುವ ಪರಿಯಾಯವಿದೆಂದು
ತೋರಿದ ಗುರು ಬಸವಣ್ಣ.
ಸರ್ವಸ್ವವನೊಪ್ಪಿಸೆ ಎನ್ನ ತನ್ನಂತೆ ಮಾಡಿದ
ಕಪಿಲಸಿದ್ಧಮಲ್ಲಿಕಾರ್ಜುನ. ॥ ೬೫೧ ॥

೬೫೨

ಮಲತ್ರಯದ ಕೆಸರಿನೊಳಗೆ ಒಸೆದು ಬಿದ್ದವ ನಾನು.
ವಸುಧೆಪತಿ ನೀ ಎನ್ನ ತಡಿಗೆ ಚಾಚ.

ಮದೀಶನೆ, ಕರುಣಕಾನನದೊಳಗೆ ಸಂತವಿರಿಸ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೫೨ ॥

೬೫೩

ಮಹವನೊಡಗೂಡಿದ ತನು ನಿನ್ನಕ್ಷರತ್ರಯವು ಬಸವಣ್ಣಾ ;
ಕರುಣಾಮೃತಸಹಿತ ಇರುತಿಪ್ಪವಯ್ಯಾ ;
ಕರಣ ಕಾನನದೊಳಗೆ ಬೆಳಗುತಿಹವಯ್ಯಾ ;
ಸಮತೆ ಸಾಯುಜ್ಯದ ಅನಿಮಿಷಾಕ್ಷರದಿಂದ
ಬಸವಾಕ್ಷರತ್ರಯ ಮಧುರ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೬೫೩ ॥

೬೫೪

ಮಹವನೊಡಗೂಡಿಹೆವೆಂದೆಂಬಿರಿ :
ಮಹವೇನುತ್ತಮದಲ್ಲಿಪ್ಪುದೊ, ಮಧ್ಯಮದಲ್ಲಿಪ್ಪುದೊ,
ಅಧಮದಲ್ಲಿಪ್ಪುದೊ ?
ಇಪ್ಪುದಿಪ್ಪುದು ಉತ್ತಮದಲ್ಲಿ,
ಇಪ್ಪುದಿಪ್ಪುದು ಮಧ್ಯಮದಲ್ಲಿ,
ಇಪ್ಪುದಿಪ್ಪುದು ಅಧಮದಲ್ಲಿ,
ಮಹಾಪ್ರಸಾದಸಂಪನ್ನರಾದವರಿಗೆ ಮಹವು ಸರ್ವಾಂಗದಲ್ಲಿಪ್ಪುದಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೫೪ ॥

೬೫೫

ಮಹಾಜ್ಯೋತಿಯನೊಡಗೂಡಿಪ್ಪ
ಉರುತರ ಪರಮಜ್ಞಾನಿ ಘನತರದ ಸಂಯೋಗಿ
ಬ್ರಹ್ಮಾಂಡಂಗಳು ನಿನ್ನ ಮರೆಸಲರಿಯವು.
ಸಕಲ ಬ್ರಹ್ಮಾಂಡಂಗಳನೊಳಗು ಮಾಡಿ
ಮೇಲೆ ತೊಳಗಿ ಬೆಳಗುತಿಪ್ಪೆ
ಎಮ್ಮ ಶರಣರ ಕರಸ್ಥಲದಲ್ಲಿ ಸಿಕ್ಕಿ.
ಮಹಾದೀಪ್ತಿಯನಿಂಬುಗೊಂಡಿತ್ತಾ ಕರಸ್ಥಲವು.
ಆ ಕರಸ್ಥಲಕ್ಕೆ ಆವ ಬ್ರಹ್ಮಾಂಡಂಗಳ ಸರಿಯೆಂಬೆ ?

ನಿಮ್ಮ ಶರಣರ ಕರಸ್ಥಲವೆ ಪ್ರಮಾಣವಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೫೫ ॥

೬೫೬

ಮಹಾದೇವಂಗೇರಿಸುವೆ,
ಆರ ಹಸ್ತ ಮುಟ್ಟದ,
ಆರ ದೃಷ್ಟಿ ಮುಟ್ಟದ,
ಮನಪುಷ್ಪದಿಂದ ಪೂಜಿಸುವೆನೆನ್ನ
ಕಪಿಲಸಿದ್ಧಮಲ್ಲಿಕಾರ್ಜುನದೇವನ. ॥ ೬೫೬ ॥

೬೫೭

ಮಹಾಬೆಳಗಿನಲ್ಲಿ ಭವಿಸಿದಳವ್ವೆ.
ಮಹಾಬೆಳಗಿನಲ್ಲಿ ಪ್ರಬಲವಾಗಿ
ಮಹಾಬೆಳಗಿನ ಬೆಳಗ ಭಕ್ತರಲ್ಲಿಯೆ ತೋರಿ
ಮಹಾಬೆಳಗಿನ ಬೆಳಗು ಕಪಿಲಸಿದ್ಧಮಲ್ಲಿಕಾರ್ಜುನ. ॥ ೬೫೭ ॥

೬೫೮

ಮಹಾವಿಂಧ್ಯಪರ್ವತದಲ್ಲಿ ಜ್ಯೋತಿರ್ಮಯವೆಂಬ
ಪ್ರಜ್ವಲ ಸ್ಫಟಿಕ ಘಟದಲ್ಲಿ
ಒಪ್ಪಿ ತೋರುವ ಜ್ಯೋತಿರ್ಮಯ ಲಿಂಗವೇ ನೀನು, ಸೂಕ್ಷ್ಮನೇ ನೀನು.
ಉರುತರ ಸಕಲ ಬ್ರಹ್ಮಾಂಡಂಗಳೆಲ್ಲ ನಿನ್ನ
ರೋಮಕೂಪದ ಕೊನೆಯ ಮೊನೆಯ ಮೇಲೆ.
ಸಕಲ ವ್ಯಾಪ್ತಿಯುಡಗಿಪ್ಪಂಥ ಬ್ರಹ್ಮಾಂಡಂಗಳನ್ನು ಧರಿಸಿಪ್ಪ ನಿನ್ನ
ಅನಂತ ವೇದಂಗಳೆಲ್ಲವು ನಿನ್ನೊಳಗೆ.
ನೀನು ಸರ್ವವ್ಯಾಪ್ತಿಗೆ ಒಳಗಾದುದಿಲ್ಲ.
ನಿನ್ನ ಮೀರಿದ ಆಧಿಕ್ಯ ಒಂದೂ ಇಲ್ಲ.
ಘನತರಲಿಂಗವೆ ಗುರುಕರುಣದಿಂದ
ಎನ್ನ ಕರಸ್ಥಲಕ್ಕೆ ಬಂದು ಸೂಕ್ಷ್ಮವಾದೆಯಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೫೮ ॥

೬೫೯

ಮಹಿಮೆಯುವತಿಶಯ ನಿಮಿತ್ತ ನಿಮ್ಮ ಇಷ್ಟಧಾರಣಾರ್ಹವಲ್ಲದೆ,
ಅನುಭವ ತೊಡಕಿನ ಖಂಡನೆಯಿಂದಿಲ್ಲ ; ಆದರಾಗಬಹುದು.

ಲಿಂಗವಂತನು ಪುರಾತನ ಮೆಚ್ಚುಗೆಯಲ್ಲದೆ ಪರಬ್ರಹ್ಮದ ಮೆಚ್ಚಲ್ಲ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೫೯ ॥

೬೬೦

ಮಾಡದುದ ಮಾಡಲು ದೈವಬಲವೆಂಬುದೀ ಲೋಕ.
ಎಲೆ ಕಪಿಲಸಿದ್ಧಮಲ್ಲಯ್ಯಾ.
ಏಲೇಶಂಗೆ ಪ್ರಾಣವ ಕೊಟ್ಟುದಾವ ಬಲ ಹೇಳಾ,
ಸೆರಗೊಡ್ಡಿ ಬೇಡುವೆ. ॥ ೬೬೦ ॥

೬೬೧

ಮಾಡಿದ ಕಾರ್ಯದಿಂದ ಜ್ಞಾನ ಸಾಧನೆಯಾಗಬೇಕು.
ಮಾಡಿದ ಕಾರ್ಯದಿಂದ ಸತ್ಪುರುಷರ ಹರ್ಷ ನಿರ್ಭರವಾಗಬೇಕು.
ಮಾಡಿದ ಕಾರ್ಯದಿಂದ ಪ್ರಮಥರು ಆಹುದಹುದೆನಬೇಕು.
ಅದು ಕಾರಣ, ಮಾಡಿಸಿ ಜ್ಞಾನಪ್ರಾಪ್ತಿಯಾಗಲಿಲ್ಲ ;
ಮಾಡಿಸಿ ಪ್ರಮಥರ ಮನೋಲ್ಲಾದವಾಗಲಿಲ್ಲ ;
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಸಾಕ್ಷಾತ್ಕಾರವಾಗಲಿಲ್ಲ ;
ಕೇಳಾ ಕೇದಾರಯ್ಯಾ. ॥ ೬೬೧ ॥

೬೬೨

ಮಾಡಿದೆನೆಂಬ ಪಾಪದ ಶುದ್ಧಿ ಸೂಕ್ಷ್ಮದಲ್ಲಿ ಹೇಳಿಹೆನಯ್ಯಾ :
ವ್ಯಾಸನು ಮನದ ಶಾಂತಿಗಾಗಿ ರೂಢಿಯಲ್ಲಿ ಮೈದೊಳೆದನೆಂಬ ಗಾದೆಯಂತೆ
ಮಾಡಿದ ಪಾಪವ ತೀರಿಸಲಿಲ್ಲ.
ಇನ್ನು ಮುಂದೆ ಮಾಡೆನೆಂಬುದಕ್ಕೆ ಗಂಗೆಯ ಸ್ನಾನ ಕೇಳಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೬೨ ॥

೬೬೩

ಮಾಡಿ ಮಾಡಿ ನಿತ್ಯಲಿಂಗಾರ್ಚನೆಯ,
ಮಾಡಿ ಮಾಡಿ ನಿತ್ಯ ಜಂಗಮಾರ್ಚನೆಯ,
ಮಾಡಿ ಮಾಡಿ ವಿಸ್ತಾರವೆಂದು ಮಾಡಿ ಕೂಡಿದವರೆಲ್ಲ ನಿತ್ಯರಾದರು.
ಮಾಡದೆ ಕೂಡದೆ ಯೋಗವೆಂದು, ಆತ್ಮಬೋಧೆಯೆಂದು,
ಯೋಗಿಗಳ ಅನುಮತವೆಂದು,

ಅಧ್ಯಾತ್ಮವ ನುಡಿದು ಶಿವಪೂಜೆಗೆ ದೂರವಾಗಬೇಡ.
ಅಲ್ಲದೆ, ಕೆಲವರೊಳಗೆ ಆಡಿ ಕಪಿಲಸಿದ್ಧಮಲ್ಲಿಕಾರ್ಜುನನ
ಚಿತ್ತಕ್ಕೆ ದೂರವಾಗದೆ
ಶಿವಾರ್ಚನೆಯ ಮಾಡಿದಡೆ ದಿವ್ಯಯೋಗಿಯಪ್ಪೆ. ॥ ೬೬೩ ॥

೬೬೪

ಮಾಡಿ ಮಾಡಿ ಹೋದವರಿಗೆ ಪದವಿಯಾದಡೆ,
ಅದು ಅನ್ಯಾಯವಾಯಿತು ದೇವರಲ್ಲಿ.
ಮಾಡಿ ಮಾಡದೆ ಹೋದವರಿಗೆ ಪದವಿಯಾದಡೆ,
ಅದು ನ್ಯಾಯವೆ ದೇವರಲ್ಲಿ.
ಮಾಡಿ ಶುದ್ಧನಾದೆನೆಂಬುದು ಮನದ ಭ್ರಮೆ,
ಮಾಡದೆ ಶುದ್ಧನಾದೆನೆಂಬುದೂ ಮನದ ಭ್ರಮೆಯದು.
ಗಂಗೆಯ ಮುಳುಗಿದವರೆಲ್ಲಾ ಶುದ್ಧ ; ಇದು ಸತ್ಯ, ಇದು ಅಸತ್ಯ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೬೪ ॥

೬೬೫

ಮಾಡುವ ಮಹಿಮೆಗೆ ಇಂದ್ರಜಾಲವೆಂದಡೆ,
ಇಲ್ಲಿ ಅಪೂರ್ವದ ಬೋಧೆಯ ಲಕ್ಷಣ ತೋರ್ಪುದು.
ಮಹತ್ವದಿಂದ ಶ್ರದ್ಧೆ, ಶ್ರದ್ಧೆಯಿಂದ ಮುಕ್ತಿ ಎಂಬುದು ಸತ್ಯಸತ್ಯ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೬೫ ॥

೬೬೬

ಮಾಸಿಮಾಸಿದಂತೆ ತೊಳೆದಡೆ ಶುದ್ಧಮಾಡುವ ಗುಣ ಉದಕವಯ್ಯಾ ;
ಶ್ವಾಸಶ್ವಾಸಕ್ಕೆ ಶಾಂತಿಯ ಕೊಡುವ ಗುಣ ಉದಕವಯ್ಯಾ ;
ಮಾಡಿದ ಪಾಪವ ಪರಿಹರಿಸುವದೆಂಬುದು ಶಶವಿಷಾಣ,ನಿಶ್ಚಯ ನೋಡಯ್ಯಾ.
ಅದು ಕಾರಣ, ಇದು ಗಂಗೆಯಹುದು ಶುದ್ಧಶಾಂತಿಗೆ ;
ಗಂಗೆಯಲ್ಲ ಕರ್ಮಶುದ್ಧಕ್ಕೆ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೬೬ ॥

೬೬೭

ಮಾಹೇಶ್ವರನಾದಾತ ಮರಣಕ್ಕೊಳಗಾಗ,
ಕರಣೇಂದ್ರಿಯಂಗಳಿಗೆ ಎಡೆಗುಡ.

ಕಾಲ ಕಲ್ಪಿತನಲ್ಲ, ಕರ್ಮಕ್ಕೆ ವಿರಹಿತ.
ಆತನ ತನು ಸಾಕ್ಷಾತ್ ಶಿವನ ತನು.
ಆತ ನಿತ್ಯ ಕೇವಲ ಮುಕ್ತ,
ಕಪಿಲಸಿದ್ಧಮಲ್ಲಿಕಾರ್ಜುನನ ಕೂಡಿದ ಮಾಹೇಶ್ವರನು. ॥ ೬೬೭ ॥

೬೬೮

ಮುಂದಲೆವಿಡಿದು ಮೋಹಿಸುವ ಗಂಡನ ಕಾಣದೆ
ಬಾಯ್ಬಿಡುತ್ತಿದೇನೆ ಗುರುವೆ.
ಈ ಮಂದಮತಿಯು ಮುಂಡವ ಕೊಂಡೊಯ್ದು
ಸಂದೇಹವಿಲ್ಲದೆ ಎನ್ನ ಗಂಡನ ಎನಗೆ ತೋರಿದಡೆ,
ನೀನೆನ್ನ ತಂದೆ ಎಂಬೆನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೬೮ ॥

೬೬೯

ಮುಕ್ತಿಯ ಕೂಟಕ್ಕೆ ಮ ಊಲಿಗ ನೀನೆ ಬಸವಾ.
ಭಕ್ತಿಯ ತನುಸಂಬಂಧಿ ನೀನೆ ಬಸವಾ.
ಎನಿತೆನಿತು ಜರಿದಡೂ 'ಬಸವಾ' ಎಂಬುದ ಮಾಣುವೆನೆ ಅಯ್ಯಾ ?
ಎನಿತೆನಿತು ಕಡಿದಡೂ 'ಬಸವಾ' ಎಂಬುದ ಮಾಣುವೆನೆ ಅಯ್ಯಾ ?
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೬೬೯ ॥

೬೭೦

ಮುಕ್ತಿಯ ಲಾಂಛನ ಮುಕ್ತಿಯ ರೂಪು ಕಾಣಾ ಬಸವ.
ಭಕ್ತಿಯ ಲಾಂಛನ ಭಕ್ತಿಯ ರೂಪು ಕಾಣಾ ಬಸವ.
ನಮ್ಮ ಕಪಿಲಸಿದ್ಧಮಲ್ಲಿನಾಥಯ್ಯನ ರೂಪು ಕಾಣಾ ಬಸವ. ॥ ೬೭೦ ॥

೬೭೧

ಮುಖವನರಿಯದೆಂತರ್ಪಿಸುವೆನಯ್ಯಾ ? ಅದು ಭವ ಹರಿಯದು.
ಅವಯವದ ಪರಿಯಾಣದಲ್ಲಿ ಅನಿಮಿಷವೆಂಬ ಓಗರನಿಕ್ಕಿ,
ತನುತ್ರಯದಿಂ ಮೇಲಣ ಆನಂದ ಕೋಣೆಯಲ್ಲಿ,
ಅನಿಮಿಷಲಿಂಗಾರ್ಚನೆಯ ಮಾಡಬಲ್ಲಡೆ

ಆತನನುಪಮ ಲಿಂಗಾರ್ಚಕನೆಂಬೆ ;
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ, ನೀನೆಂಬೆ. ॥ ೬೭೧ ॥

೬೭೨

ಮುಗ್ಧೆಯ ಸಂಯೋಗದಿಂದ ಮುಕ್ತಿವಡೆದೆನೆಂದು,
ಅರ್ಧೋದಯಗಿರಿಯಲ್ಲಿ ಆನಂದದಿಂದ
ಮುಗ್ಧೆಯ ಮೂಲಕೆ ಹೊದ್ದುವ ತತ್ವವನು
ನಾವು ಮಧ್ಯದಲ್ಲಿ ಕಂಡೆ ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೭೨ ॥

೬೭೩

ಮುಟ್ಟದಂತೆ ಇರಿಸು ; ಮರಳಿ ಹುಟ್ಟದಂತೆ ಮಾಡು.
ಹುಟ್ಟಿ ಹುಟ್ಟಿ ಹೊಂದುತಿರ್ಪ ಕಷ್ಟವ ಬಿಡಿಸಯ್ಯಾ ತಂದೆ.
ನಿಮ್ಮ ನಂಬಿದೆನಯ್ಯಾ ನಾನು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೭೩ ॥

೬೭೪

ಮುತ್ತಿನ ವರ್ಣ ಶಂಖಾದಡೇನೊ ?
ಸಕ್ಕರೆಯ ವರ್ಣ ಉಪ್ಪಾದಡೇನೊ ? ರುಚಿ ಬೇರೆ !
ನಿಲದ ವರ್ಣ ಮೋಲಾದಡೇನೊ ?
ಅಂತರ ಮಹದಂತರ ಪಟ್ಟಂತರದ ಪರಿ ಬೇರೆ.
ನಿಲವರ್ಣ ಎಲ್ಲಾ ಎಲ್ಲಾ ವರ್ಣವು ನಿಮ್ಮೊಳಗೆಯು
ಆದಿಗುರು ಕಪಿಲಸಿದ್ಧಮಲ್ಲಿಕಾರ್ಜುನದೇವಾ, ನೀನೇ ಬಲ್ಲೆ. ॥ ೬೭೪ ॥

೬೭೫

ಮುನ್ನಲಿ ಕಂಡ ವಸ್ತು ಮುನ್ನವೆ ಅಡಗಿತ್ತು.
ಮನ್ನಣೆಯ ಶೂಲಕ್ಕೆ ಮುನ್ನವೆ ಹೋದರು.
ಚೆನ್ನಬಸವನೆಂಬ ಪರಿಪೂರ್ಣಜ್ಞಾನಿ ಪ್ರಭಾಸಂಪೂಜ್ಯನಾದ.
ಕನ್ನೆಯರ ಕೂಟವಳಿಯಿತ್ತು ಚೆನ್ನಬಸವಣ್ಣನಿಂದ
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೬೭೫ ॥

೬೭೬

ಮುನ್ನ ಸಿರಂಗಳ ಕೊಯಿದಿಕ್ಕಿ
ನಿಮ್ಮ ಒಲವ ಕಾಣದೆ ಬೆರಗಾದುದು
ಬೆನ್ನಹುರಿ ನವಸಿರಂಗಳೆಲ್ಲವ ಕೊಯ್ದು ತಂತಿಯ ಮಾಡಿ ಹಾಡಿದನಯ್ಯಾ.
ಗೀತದಿಂದಲಿ ಒಲಿದು ಕೃತಾರ್ಥನ ಮಾಡಿದೆಯಯ್ಯಾ,
ಎನ್ನ ಕಪಿಲಸಿದ್ಧಮಲ್ಲಿನಾಥ ದೇವರದೇವ. ॥ ೬೭೬ ॥

೬೭೭

ಮುನ್ನಾದಿಯಲ್ಲದ ಉನ್ನತ ಜ್ಞಾನವನು
ಇನ್ನು ಭೇದಿಸುವರಾರು ಹೇಳಾ ತಂದೆ.
ಎನ್ನ ಗುರುವೆ ನಿಮ್ಮ ಸೊಮ್ಮನರಿಯದಾತಂಗೆ
ಅರಿಯಲಾಯ್ತು ಕಪಿಲಸಿದ್ಧಮಲ್ಲಿಕಾರ್ಜುನದೇವಾ. ॥ ೬೭೭ ॥

೬೭೮

ಮುನ್ನಾದಿಯಲ್ಲದ ಸನ್ನುತದ ಶಿವಲಿಂಗ
ಇನ್ನು ವಾದಿಸಿದ ವಾದಂಗಳಿಂದ
ಎನ್ನ ಮನ ಕರವನರುಹದಲ್ಲಿ ತನ್ನ ಪದ ಬೆಳಗಿಸುವ
ಉನ್ನತೋನ್ನತ ಗುರು ಚೆನ್ನಬಸವಣ್ಣನಯ್ಯಾ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೭೮ ॥

೬೭೯

ಮುನ್ನಿನ ಭವದವರನರಸಿ ಹರಿವುದೆ ಹಾ ! ಅಯ್ಯಾ !
ಸುಡು ! ನಿನ್ನ ಭಾಷೆ ಹೋಗಲಿ.
ಕೊಟ್ಟ ಕರ್ತುವ ಬಿಟ್ಟು ಹರಿವುದೆ
ಜಗವೈದ್ಯನಾಥ ಜಗವೈದ್ಯನಾಥ ಕಪಿಲಸಿದ್ಧಮಲ್ಲಿನಾಥನ. ॥ ೬೭೯ ॥

೬೮೦

ಮೂರ್ತಿಯ ಮೂಲಕ್ಕೆ ಬಸವನ ಭಕ್ತಿಯೆ ಕಾರಣ.
ಜ್ಞಾನದ ಸಂಬಂಧಕ್ಕೆ ಬಸವ ನೀ
ಕಪಿಲಸಿದ್ಧಮಲ್ಲಿನಾಥಯ್ಯ. ॥ ೬೮೦ ॥

೬೮೧

ಮೂರರಿಂ ಮುನ್ನವೆ ತೋರಿಪ್ಪ ಸದ್ಭಕ್ತಿ
ಮೀರಿಪ್ಪ ಕ್ರಿಯೆಯುದಕೆ ಶಾಖೆ ಮೂರು.
ಫಲವು ಹಲವಾಗಿ ಅಲ್ಲಿಪ್ಪ ಫಲವಾರು
ಸಲ್ಲದು ದುಷ್ಕರ್ಮಿಗಳ ಯೋಗಕ್ಕದು.
ಸ್ವಾತಂತ್ರ ಸೀಮೆಯನು ತೋರಿಪ್ಪ ತತ್ವದಾ
ಸೀಮೆ ತಾನು ಅನಾಹತನು ಸ್ವಾತಂತ್ರ ನಿಸ್ಸೀಮ
ಸ್ವಾತಂತ್ರಸದ್ಭಕ್ತಿಗೊಲಿವಾತನು. ॥ ೬೮೧ ॥

೬೮೨

ಮೂರು ಬಲೆಯನು ಇಕ್ಕಿ ಜಾರಿ ಕೆಡಹುವ ಮಾಯೆ
ಆರೂಢರೆಂಬವರನೇಡಿಸುವುದು.
ಕರುಣಾಕರನು ಕಪಿಲಸಿದ್ಧಮಲ್ಲೇಶ್ವರನ
ಶರಣರಿಗೆ ಅಂಜಿ ನಿಂದಿತು ಮಾಯೆ. ॥ ೬೮೨ ॥

೬೮೩

ಮೂರು ಮಠ ಮೂವತ್ತು ಆರಾಗಿ ತೋರುತಿದೆ
ಮೀರಿಪ್ಪ ಬೊಮ್ಮ ತಾ ಹಮ್ಮಡರಿತು.
ಮಠವು ತಾನೊಂಬತ್ತು ಕುಟಿಲವು ಹಲವಾಗಿ
ನಿಟಿಲನೇತ್ರನ ರೂಪು ಅಜಲೋಕದಾ
ಸಾದಾಖ್ಯ ದೇಹವಾರಾರು ಹೊಗಲಿಲ್ಲಲ್ಲಿ
ಮೂವರಿಗೆ ತಾನು ಶಕ್ಯವಲ್ಲ,
ನಾದ ಬಿಂದು ಕಳಾತೀತ ಕಪಿಲಸಿದ್ಧಮಲ್ಲಿಕಾರ್ಜುನನ
ಆಧಿಕ್ಯವನರಿವ ಯೋಗಿ ಯಾರು ? ॥ ೬೮೩ ॥

೬೮೪

ಮೂರೂರ ಮಧ್ಯದಲ್ಲಿ ಆರು ವರ್ಣದ ಪದ್ಮ
ಬೇರೆ ಬೇರವಕೆ ಅಕ್ಷರಗಳಾರು.
ಏರಿ ಬಂದಪೆವೆಂಬ ಕರ್ಮಯೋಗಿಗಳೆಲ್ಲ ಗಾರಾಗಿ ಹೋದರು.
ಮೀರಿದ ಶಿವಯೋಗ ಗಾರಾದವರಿಗೆ ಸೂರೆಯೆ,
ಕಪಿಲಸಿದ್ಧಮಲ್ಲಿಕಾರ್ಜುನಾ ? ॥ ೬೮೪ ॥

೬೮೫

ಮೃದು ರುಚಿ ರೂಪು ಕೂಡಿ ಸಕ್ಕರೆಯಾಯಿತ್ತು.
ಗುರು ಲಿಂಗ ಜಂಗಮ ಕೂಡಿ ವಸ್ತುವಾಯಿತ್ತು.
ಮೃದುವಿನಂತೆ ಗುರು, ರುಚಿಯಂತೆ ಲಿಂಗ, ರೂಪಿನಂತೆ ಜಂಗಮ, ಕೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೬೮೫ ॥

೬೮೬

ಮೇಲುಗೆಟ್ಟು ಸೀಮೆ, ತೆರಹುಗೆಟ್ಟು ಬ್ರಹ್ಮ;
ಅಯ್ದಾರು ಕಣೆಯದಿಂ ಮೇಲೆ ದುರ್ಗ.
ಕಾಲಾಳು ನಾಯಕರು ಮೇಲೆ ರಥ ಪಾಯಕರು
ಆರ್ಕೈದು ಓರಂತೆ ದುರ್ಗದಲ್ಲಿ.
ಧಾರುಣಿಯ ಕಳ್ಳರಿಗೆ ನಾನಂಜಿ ದುರ್ಗದೊಳು
ಓರಂತೆ ಅಡಗಿರ್ದ ಕಪಿಲಸಿದ್ಧಮಲ್ಲಿಕಾರ್ಜುನ. ॥ ೬೮೬ ॥

೬೮೭

ಮೊದಲಲ್ಲಿಯು ಪುಣ್ಯಪಾಪವದು
ಇದರಲ್ಲಿಯು ಜೀವಕ್ಕೆ ಸುಖದುಃಖ ನೋಡಾ ಎಂದೆನಲಾರೆ.
"ಸಂಗಾತ್ಸಂಜಾಯತೇ ಜ್ಞಾನಂ ಜ್ಞಾನತ್ಸಂಜಾಯತೇ [ಶಿವ ಃ]
ಶಿವಾತ್ಸಂಜಾಯತೇ ಮುಕ್ತಿರ್ಮುಕ್ತಿರನ್ಯತ್ರ ನಾಸ್ತಿ ವೈ" ಎಂದ ಬಳಿಕ,
ಸಂಗದಿಂ ಸುಖದುಃಖವಲ್ಲದೆ, ಪೂರ್ವಾರ್ಜಿತ ಪುಣ್ಯಪಾಪವೆಂಬವ
ತಿಳಿಯಬಾರದು ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೮೭ ॥

೬೮೮

ಮೋಹಿಸುವಲ್ಲಿ ಮೋಹಿಸದೆ ಇಪ್ಪಾತ
ಕಾಮಿಸುವಲ್ಲಿ ಕಾಮಿಸದೆ ಇಪ್ಪಾತ
ಆತನಿಪ್ಪೆಡೆಯಲ್ಲಿ ಇರದೆ ಇಪ್ಪಾತ
ಆತನು ವಾಙ್ಮನಕ್ಕಗೋಚರನೆಂಬೆ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನೀ ಸಾಕ್ಷಿಯಾಗಿ ನೀನೆಂಬೆ. ॥ ೬೮೮ ॥

೬೮೯

ಯಜಮಾನಂ ಸಾಜದಿ ಜೋಯಿಸಕಾರ ತಾನೆಯಾಗಿ ಲಗುನವೆ ?
ತಿಟ್ಟವಿಟ್ಟಂತೆ ಕುಂದದಿಕ್ಕಿ ಆಕಾಶ
ಆಕಾಶಲಿಂಗವಾಗುತ್ತಿಕ್ಕಿಲನ ಸಿಂಹಾಸನಗೊಂಡು
ನಡುವೆ ನಿಂದಾ ಪಶುರೂಪುಗೊಂಡು ಸಲಕ್ಷಣವಿಡಿದು
ಎಲ್ಲ ಲಿಂಗಮಯವಾಗಲು ಓಡಿ ನಡೆವೆ
ಕಪಿಲಸಿದ್ಧಮಲ್ಲಿನಾಥಾನಾದ ! ॥ ೬೮೯ ॥

೬೯೦

'ಯಥಾ ಬೀಜ ತಥಾಂಕುರ' ತಪ್ಪದು ನೋಡಾ !
ನಿನ್ನ ಮಕ್ಕಳು ಆರು ಬೇಡಿತನೀವರು.
ನಿನ್ನ ಮಕ್ಕಳು ನಿನ್ನಂತೆ ದಾನಶೀಲರು
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೬೯೦ ॥

೬೯೧

ಯಮನಿಯಮಾಸನಧ್ಯಾನಾರೂಢ ಪ್ರಾಣಾಯಾಮ ಪ್ರತ್ಯಾಹಾರವೆಂಬ
ಪಂಚಸಮಾಧಿಯಿಂ ಸಿಕ್ಕಿ
ಅಜಲೋಕವ ಸುದ್ದಿಯನರಿವವರು ಎತ್ತಾನೊಬ್ಬರು.
ಸುಲಭವೆ ಎಲ್ಲರಿಗೆ ಶಿವಲಿಂಗಭಕ್ತಿ ?
ಸುಲಭವೆ ಎಲ್ಲರಿಗೆ ಗುರುಚರಭಕ್ತಿ ?
ಸುಲಭವೆ ಎಲ್ಲರಿಗೆ ಜೀವ ಜಂತುವಿನ ಮೇಲೆ ದಯವುಳ್ಳದು ?
ಶಿವಲಿಂಗಾರ್ಚನೆಯ ಮಾಡಿ ಗುರುಚರಭಕ್ತಿ ಅಳವಟ್ಟ ಬಳಿಕ
ಸರ್ವವು ತಾನಾಗಿರಬೇಕು.
ಸದಾಚಾರ ಶಿವಾಚಾರ ನಿಹಿತಾಚಾರ ದಯಾಚಾರವುಳ್ಳವರಿಗೆ
ಸರ್ವಯೋಗವಪ್ಪುದು ; ಅವ್ಯಯಂಗೆ ಯೋಗ್ಯರಪ್ಪರು
ನಿಮ್ಮ ಕೂಡಿ ದ್ವಯವಿಲ್ಲದೆ ಏಕವಪ್ಪರಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೯೧ ॥

೬೯೨

ಯಾವನ ಗತಿಯುವನ ಮತಿಯಾನಪ್ಪೆ
ಆವ ನಿಂದಲ್ಲಿ ನಿಲುವೆ, ಆವ ಬಿಟ್ಟಡೆ ಬಿಡುವೆ,
ಆವ ಹಿಡಿಯಿತ್ತ ಹಿಡಿವೆ, ಬೆನ್ನ ಬಳಿಯು ಸಲುವೆ.
ಪ್ರಾಣವ ಮೇಲಿಕ್ಕಿ ನೆರವೆ ಕಪಿಲಸಿದ್ಧಮಲ್ಲಿನಾಥಯ್ಯನ. ॥ ೬೯೨ ॥

೬೯೩

ಯುಗ ಜುಗ ಮಡಿವಂದು
ಧಗಿಲು ಭುಗಿಲೆಂದು ಮುಸುಕಿದ ಮಹಾಜ್ವಾಲೆ ಇದೇನೊ !
ಇಂದೆನ್ನ ಕಣ್ಗೆ ಗೋಚರವಾಯಿತ್ತಲೆ ಅಯ್ಯಾ !
ನೀವೆಂದರಿಯೆನಯ್ಯಾ.
ನಾನೆನ್ನ ಕಾಯುದ ಕಳವಳದಲ್ಲಿದ್ದೆನಲ್ಲದೆ
ನೀವೆಂಬ ಬಗೆದೋರದೆ ಕೆಟ್ಟೆನೆಲೆ ಅಯ್ಯಾ.
ಆಳ್ದನೊಡನೆ ಆಳು ಮುನಿದಡೆ, ಆರು ಕೆಡವರು ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೯೩ ॥

೬೯೪

ಯೋಗದ ನೆಲೆಯುನರಿದೆನೆಂಬಾತ
ಲಿಂಗಾರ್ಚನೆಯು ಮಾಡಯ್ಯ.
ಮನತ್ರಯ ಮದತ್ರಯ ಮಲತ್ರಯಂಗಳ ಕಳೆದು
ತನುತ್ರಯಂಗಳನೇಕೀಭವಿಸಿ
ಲಿಂಗತ್ರಯುದಲ್ಲಿ ಶಬ್ದಮುಗ್ಧನಾಗಿ
ಲಿಂಗಾರ್ಚನೆಯು ಮಾಡಯ್ಯಾ.
ಅದು ನಿಸ್ತಾರ ಸಮಸ್ತ ಯೋಗಿಗಳ ಮೀರಿದದು
ನಿಮ್ಮ ಕೂಡಿ ಬೆರಸುವ ಶಿವಯೋಗವಿಂತುಟಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ, ॥ ೬೯೪ ॥

೬೯೫

ಯೋಗಭೂಷಣನೆ,
ನಿಮ್ಮ ನೆರೆಯುಲು ಬೇಕು ಬೇಕೆಂಬ ಸದ್ಭಕ್ತರ

ಮನದ ಕೊನೆಯಲ್ಲಿ ತಿಳುಹುವೆ ಅಕ್ಷರವ.
ಬಸವ ಬಸವ ಬಸವ ಎಂಬ ಮಧುರಾಕ್ಷರತ್ರಯದೊಳಗೆ
ತಾನೆ ತ್ರೈಲಿಂಗ ಒಪ್ಪಿಕ್ಕು ಘನಗುರುವೆ ಬಸವಣ್ಣಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೬೯೫ ॥

೬೯೬

ಯೋಗವನರಿದೆನೆಂಬೆ, ಯೋಗವನರಿದೆನೆಂಬೆ ;
ಯೋಗದ ನೆಲೆಯನಾರು ಬಲ್ಲರು ?
ಯೋಗದ ನೆಲೆಯ ಹೇಳಿಹೆ ಕೇಳಾ–
ತಾತ್ಪರ್ಯಕರ್ಣಿಕೆಯ ಮಸ್ತಕದಲ್ಲಿದ್ದ ಕುಂಭದೊಳಗೆ ತೋರುತ್ತಿದೆ ;
ಹಲವು ಬಿಂಬ ಹೋಗುತ್ತಿದೆ, ಹಲವು ರೂಪ ಒಪ್ಪುತ್ತಿದೆ ;
ಏಕ ಏಕವಾಗಿ ಆನಂದಸ್ಥಾನದಲ್ಲಿ ಅನಿಮಿಷವಾಗುತ್ತಿದೆ ;
ಪೂರ್ವಾಪರ ಮಧ್ಯ ಶುದ್ಧ ಪಂಚಮವೆಂಬ ಸ್ಥಾನಂಗಳಲ್ಲಿ ಪ್ರವೇಶಿಸುತ್ತಿದೆ
ತಾನು ತಾನೆಯಾಗಿ.
ಅರಿಯಾ ಭೇದಂಗಳ–
ಬಿಂದು ಶ್ವೇತ ಪೂರ್ವಶುದ್ಧ ಆನಂದ ಧವಳ ಅನಿಮಿಷ ಸಂಗಮ –
ಶುದ್ಧ ಸಿದ್ಧ ಪ್ರಸಿದ್ಧ ತತ್ವವೆಂಬ ಪರಮಸೀಮೆ ಮುಖಂಗಳಾಗಿ,
ಆಜಲೋಕದಲ್ಲಿ ಅದ್ವಯ, ನೆನಹಿನ ಕೊನೆಯ ಮೊನೆಯಲ್ಲಿ ಒಪ್ಪಿ ತೋರುವ
ಧವಳತೆಯ ಬೆಳಗಿನ ರಂಜನ ಪ್ರವಾಹ ಮಿಗಿಲಾಗಿ,
'ತ್ವಂ' ಪದವಾಯಿತ್ತು, ಮೀರಿ 'ತ್ವಮಸಿ' ಯಾಯಿತ್ತು
ಕಪಿಲಸಿದ್ಧಮಲ್ಲಿಕಾರ್ಜುನನೆಂಬ ನಾಮವ ನುಂಗಿ ಲೀಯವಾಯಿತ್ತು.
॥ ೬೯೬ ॥

೬೯೭

ಯೋಗಿಗೆ ಕೋಪವೆ ಮಾಯೆ ;
ರೋಗಿಗೆ ಅಪಥ್ಯವೆ ಮಾಯೆ ;
ಜ್ಞಾನಿಗೆ ಮಿಥ್ಯವೆ ಮಾಯೆ ;
ಅರಿದೆನೆಂಬವಂಗೆ ನಾನು ನೀನೆಂಬುದೆ ಮಾಯೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೯೭ ॥

೭೯೮

ಯೋಗಿಯ ಶರೀರ ವೃಥಾಯ ಹೋಗಲಾಗದಯ್ಯಾ.
ಪುಣ್ಯವ ಪುಣ್ಯವ ಮಾಡುವುದು ಲೋಕಕ್ಕೆ.
ಆದಿಯ ಹಾದಿಯ ಹತ್ತುವುದಯ್ಯಾ.
ಆ ಲೋಕಕ್ಕೆ ಸೋಪಾನವ ಕೊಡುವ
ಎನ್ನ ಕಪಿಲಸಿದ್ಧಮಲ್ಲಿನಾಥಯ್ಯನು. ॥ ೭೯೮ ॥

೭೯೯

"ಯೋ ದೇಹಿರೂಪಃ ಪರಮಸ್ಸುಖೋಪಿ
ಯೋ ಭೂಪಭೂಪಃ ಪರಮಾತ್ಮಲಿಂಗಂ !
ಯೋ ಲೋಕನಾಥೋ ಮಮ ಲೋಕದಾಯೀ
ಯೋ ದೇಹಿದೇಹೋ ಮಮ ದೇಹಶೇಷಃ ॥
ಎಂದೆನಿಸಿದ ಬಸವಾ.
ಎಲ್ಲ ಲೋಕತ್ರಯಪ್ರತಿಪಾದಿತ ಶಬ್ದದಲ್ಲಿ ಘನಗಂಭೀರವಾದ ಬಸವಾ.
ಬಕಾರಸಂಬಂಧ ಬಹುಧಾಮರೂಪ ಬಸವಾ, ನೀನೆಲ್ಲಡಗಿದೆಯೊ ಬಸವಾ ?
ಕಾಲಕಲ್ಪಿತನಷ್ಟವಾಗಿ ಕಾಲಕಲ್ಪಿತಂಗಳನರಿದೆಯೊ ಬಸವಾ,
ಅರಿದ ಮೂರ್ತಿಯ ನಿಮ್ಮಲ್ಲಿ ಕುರುಹಿಟ್ಟುಕೊಂಡಿರೆ ಬಸವಾ.
ಇಷ್ಟ ಬ್ರಹ್ಮಾಂಡವ ಘಟ್ಟಿಗೊಳಿಸಿದಿರಿ ಬಸವಾ,
ಲಿಂಗದೃಷ್ಟಿಯ ರೂಪ ನಷ್ಟವ ಮಾಡಿದಿರಿ ತಂದೆ ಗುರುಬಸವಾ,
ಗುಣವೆಲ್ಲಡಗಿದವೊ ಬಸವಗುರುವೆ, ಮನವೆಲ್ಲಡಗಿತ್ತೊ ಮಹಾಬಸವಾ ?
ಕಾಯಗುಣ ಮನಸುಮನಂಗಳು ನಿಮ್ಮಲ್ಲಡಗಿದವೆ ಬಸವ ತಂದೆ ?
ಎಲೆ ಬಸವಲಿಂಗವೆ, ಎನ್ನ ಕಪಿಲಸಿದ್ಧಮಲ್ಲಿನಾಥಯ್ಯಾ,
ಬಸವಾ ಬಸವಾ ಬಸವಾ ! ॥ ೭೯೯ ॥

೮೦೦

ರಾಯ ಬಿನ್ನಾಣಿಯ ಮಣ್ಣ ಗೋವಿಂದನ
ಒಂದೆ ಗವಿಯ ಸಂಗತು
ಒಂದೆ ಬೆಡಗಿನ ಕೊಳದಲಿಕ್ಕಿದನಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯ !

ಕೊಳವನೊಡಹೊಯ್ದರೆ
ಸಂಗತ ಲಿಂಗತವಾಯಿತ್ತಯ್ಯಾ.

೭೦೨

ರುಚಿಯನತಿ ರುಚಿಸಿದಲ್ಲಿ ವಿಷವಾಯಿತ್ತು ;
ರುಚಿಯು ನಿಜಶಕ್ತಿಯಂತಿರಲು ಅಮೃತವಾಯಿತ್ತು.
ಇದು ಕಾರಣ, ಗುರುಭಕ್ತರಿಗೆ ಗುರುಕರುಣವೆ ಸಾಕು ;
ಅನ್ಯರ ಅನುಭವ, ಅನ್ಯರ ಸಮರಸ
ಕಪಿಲಸಿದ್ಧಮಲ್ಲಿಕಾರ್ಜುನನ ಶರಣನಿಗನಿಷ್ಟ ಕೇಳಾ, ಮಡಿವಾಳಯ್ಯಾ.
॥ ೭೦೨ ॥

೭೦೩

ರುದ್ರಂಗೆ ಪಾರ್ವತಿಯು, ವಿಷ್ಣುವಿಂಗೆ ಲಕ್ಷ್ಮಿಯು, ಬ್ರಹ್ಮಂಗೆ ಸರಸ್ವತಿಯು
ಮತ್ತೆ ತೃಣದಶನದ ಫಲದ ಆಹಾರದರ
ಸುತ್ತಿ ಮುತ್ತಿತ್ತು ನೋಡಾ ಮಾಯೆ ;
ಸಪ್ತಧಾತುವ ಮೀರಿ ಪಂಚಭೂತವ ಜರಿದ
ಶರಣರಿಗೋಡಿತ್ತು ಮಾಯೆ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೦೩ ॥

೭೦೪

ರೂಢಿಯರಿಯಲ್ಕೆ ಗಾಡಿಗನೆಂಬುದ
ನಾ ಬಲ್ಲೆ, ಎನ್ನವರು ಬಲ್ಲರು.
ನಿನ್ನನೇನ ಬೇಡಿಹರೆಲೆ ಅಯ್ಯಾ.
ನೀ ಕೂರ್ತು ಕೊಡುವ ಸ್ವರ್ಗವನೊಲ್ಲರು
ನಿನ್ನಲುಳ್ಳ ಫಲಪದಾದಿಗಳನೆನ್ನವರೊಲ್ಲರು.
ಬೇಡಿ ಅರ್ಥಿಸುವುದಾದಡೆ ಹುಸಿ ;
ಕೊಡು ಕೊಡದೆ ಮಾಣು.
ಬೇಡುವ ಹೀನ ನಿನಗಲ್ಲದೆ ಎನ್ನವರಿಗುಂಟೆ ?
ಕಪಿಲಸಿದ್ಧಮಲ್ಲಿಕಾರ್ಜುನ. ॥ ೭೦೪ ॥

೭೦೫

ರೂಪಿಲ್ಲದವಳಾಗಿ ಮೃತ್ಯುವಿಪ್ಪ ಠಾವನರಿಯಬಾರದು.
ಹಿತವೆಯಂತಿಪ್ಪಳು, ಒತ್ತಿ ಕೆಡಹುವಳು ದೊಪ್ಪನೆ ಭೂಮಿಗೆ.
ಇವಳನಪ್ಪುವ ಅಗಲುವ ಪರಿ ನೋಡಯ್ಯಾ, ಈ ಲೋಕದೊಳಗೆ
ಎನ್ನ ಕಪಿಲಸಿದ್ಧಮಲ್ಲಿಕಾರ್ಜುನ ದೇವರ ದೇವಾ. ॥ ೭೦೫ ॥

೭೦೬

ರೂಹಿಲ್ಲದ ನೆಲದಲ್ಲಿ ಸಸಿಯುನೇ ಬೆಳೆವುದಯ್ಯಾ ?
ಭಯವಿಲ್ಲದವನಲ್ಲಿ ಭಕ್ತಿಯುನೇ ಬೆಳೆವುದಯ್ಯಾ ?
ಭಯ ಕೆಟ್ಟಡೆ ಭಕ್ತಿ ಬಿಡುವುದು, ಮಹದೇವನೊಲ್ಲ
ಕಪಿಲಸಿದ್ಧಮಲ್ಲಿನಾಥನಾ ಹೋ ! ಅಯ್ಯಾ ! ॥ ೭೦೬ ॥

೭೦೭

ಲಿಂಗದಲ್ಲಿ ಸಂಪನ್ನನಾಗಿ ಗುರುವಾದ ಬಸವಣ್ಣ.
ಗುರುವಿನಲ್ಲಿ ಸಂಪನ್ನನಾಗಿ ಜಂಗಮವಾದ ಬಸವಣ್ಣ.
ಜಂಗಮದಲ್ಲಿ ಸಂಪನ್ನನಾಗಿ ತ್ರೈವಿದ್ಯಕ್ಕೆ ವಿದ್ಯಾರೂಪವಾದ ಬಸವಣ್ಣ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯನಲ್ಲಿ ಬಸವಣ್ಣ ಸಾಕ್ಷಾತ್ ಸಂಪನ್ನನಾದ.
॥ ೭೦೭ ॥

೭೦೮

ಲಿಂಗ ಲಿಂಗವೆಂಬ ಸಂದೇಹ ಉಳ್ಳನ್ನಕ್ಕ
ಸಂದಳಿಯದೆಂಬರ್ಕೆ ನಿನ್ನವರೆನ್ನ.
ಮನ್ನಣೆಯ ಕರಸ್ಥಲಕ್ಕೆ ಇನ್ನು ನೀ ಬಂದಡೆ
ಉನ್ನತೋನ್ನತನಪ್ಪೆ ಸಂದಿಲ್ಲದೆ
ನಾ ನಿಮ್ಮ ಸೊಮ್ಮಿನೊಳಗಾನೀಗ ಲೀಯ್ಯವಪ್ಪೆ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೦೮ ॥

೭೦೯

ಲಿಂಗವ ಪೂಜಿಸಿ ಫಲವೇನಯ್ಯಾ,
ಅಂಗನೆಯುರೊಲುಮೆಯಾಗದನ್ನಕ್ಕ ?
ಜಂಗಮವ ಪೂಜಿಸಿ ಫಲವೇನಯ್ಯಾ,
ಮೋಕ್ಷಾಂಗನೆ ಮೈಗೂಡದನ್ನಕ್ಕ ?
ಅಂಗಜ ಬಂದು ಫಲವೇನಯ್ಯಾ,
ನಾ ಮನವೊಲಿದು ರತಿಗೊಲಿಯದನ್ನಕ್ಕ ?
ಶರಣಸತಿ ಲಿಂಗಪತಿ ಎಂಬ ವೀರತ್ವ ಕೆಟ್ಟಿತೆನ್ನಲೆ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೦೯ ॥

೭೧೦

ಲಿಂಗವಾದಡೆ ಚೆನ್ನಬಸವಣ್ಣನಂತಾಗಬೇಕಯ್ಯಾ ;
ವೀರನಾದಡೆ ಮಡಿವಾಳಯ್ಯನಂತಾಗಬೇಕಯ್ಯ ;
ನಿಗ್ರಹಿಯಾದಡೆ ಹೊಡೆಹುಲ್ಲ ಬಂಕಯ್ಯನಂತಾಗಬೇಕಯ್ಯ ;
ಧೀರನಾದಡೆ ಘಟ್ಟಿವಾಳಯ್ಯನಂತಾಗಬೇಕಯ್ಯ ;
ಲಿಂಗದಲ್ಲಿ ನಿರ್ವಯಲಾದಡೆ ನೀಲಲೋಚನೆಯಮ್ಮನಂತಾಗಬೇಕಯ್ಯ.
ಈ ಐವರ ಕಾರುಣ್ಯಪ್ರಸಾದವ ಕೊಂಡು ಬದುಕಿದೆನಯ್ಯ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೭೧೦ ॥

೭೧೧

ಲಿಂಗವಿಚಾರ, ಜಂಗಮವಿಚಾರ, ಪಾದೋದಕವಿಚಾರ
ಬಹು ಸೂಕ್ಷ್ಮ ಕೇಳಯ್ಯಾ.
ಮೊದಲನೆಯ ಪಾದೋದಕ ಗುರುಸಂಬಂಧ ;
ಎರಡನೆಯ ಪಾದೋದಕ ಲಿಂಗಸಂಬಂಧ ;
ಮೂರನೆಯ ಪಾದೋದಕ ಜಂಗಮಸಂಬಂಧ.
ಈ ತ್ರಿವಿಧೋದಕ ಭಕ್ತನಲ್ಲಿ ಸಂಬಂಧ.
ಈ ತ್ರಿವಿಧೋದಕ ಗುರು–ಲಿಂಗ–ಜಂಗಮದಲ್ಲಿ ಸಂಬಂಧ.
ಅದು ಕಾರಣ, ಭಕ್ತ–ಮಹೇಶ–ಪಾದೋದಕ, ಪ್ರಸಾದದಲ್ಲಿ
ಭೇದವ ಮಾಡಿ ನಿಂದಡೆ,
ಅಘೋರನರಕದಲ್ಲಿಕ್ಕುವ ಕಪಿಲಸಿದ್ಧಮಲ್ಲಿಕಾರ್ಜುನ. ॥ ೭೧೧ ॥

೭೧೨

ಲಿಂಗಾಂಗ ಒಂದಾದ ಬಳಿಕ ಭಕ್ತನ ನೋಡಲಿಲ್ಲ.
ಲಿಂಗಾಂಗ ಒಂದಾದ ಬಳಿಕ ಜಂಗಮವ ನೋಡಲಿಲ್ಲ.
ಲಿಂಗಾಂಗ ಒಂದಾದ ಬಳಿಕ ಏನೆಂದರಿಯಲಿಲ್ಲವು ನೋಡಯ್ಯಾ,
ಎಮ್ಮಯ್ಯ ಕಪಿಲಸಿದ್ಧಮಲ್ಲಯ್ಯ ಎಲ್ಲರಲ್ಲಿಯೂ ! ॥ ೭೧೨ ॥

೭೧೩

ಲೋಕದ ಗಂಡರ ಮಹಾತ್ಮೆಯ ಹೆಂಡರರಿವರೆ ? ಹಾ ಹಾ ! ಅಯ್ಯಾ !
ಶರೀರದೊಳಗೆ ಸಂದು ನಿಮ್ಮನಂತುಗಾಣಲಾರದಾದನು
ಬೇಟಗೊಂಡು ನಿಮ್ಮನೆ ಬೇಡುವೆನಯ್ಯ.
ಅಯ್ಯಾ ಎನ್ನನೆನಿಸು ಭವ ಬರಿಸಿದಡೆ
ನೀನೆ ಗಂಡ ನಾನೆ ಹೆಂಡತಿ,
ಕಪಿಲಸಿದ್ಧಮಲ್ಲೇಶ್ವರ, ದೇವರ ದೇವಯ್ಯ. ॥ ೭೧೩ ॥

೭೧೪

ಲೋಕದ ಲೋಕಿಗಳು ಏಕಯ್ಯ ನುಡಿವರು
ಲೋಕನಾಥನಿಪ್ಪ ಠಾವನರಿಯರು.
ಕಲ್ಲೊಳಗೆ ಹೇಮ ಕಾಷ್ಠದೊಳಗಗ್ನಿ,
ತಿಲದೊಳು ತೈಲ, ಜಲದೊಳು ಮುತ್ತು,
ಹಾಲೊಳು ತುಪ್ಪ, ಸ್ಥಲದೊಳಗೆ ರತ್ನವಿಪ್ಪ ಪರಿಯಲ್ಲಿ
ನೀವಿಪ್ಪ ಭೇದವನರರೆತ್ತ ಬಲ್ಲರೈ,
ಕಪಿಲಸಿದ್ಧಮಲ್ಲಿಕಾರ್ಜುನ. ॥ ೭೧೪ ॥

೭೧೫

ಲೋಕ ಹದಿನಾಲ್ಕರೊಳು ಹೋಗಿ ಅಡಗಿಹೆನೆಂದ-
ಡಾ ಪರಿಯು ತಾಮಸವು ತನ್ಮಯವೆ ?
ಅನೇಕ ಪರಿಯಲ್ಲಿ ಕೊಂದು ಕೂಗಿತ್ತು ಈ ಮಾಯೆ
ಕಾಯಯ್ಯಾ ಕಪಿಲಸಿದ್ಧಮಲ್ಲೇಶ್ವರಯ್ಯಾ. ॥ ೭೧೫ ॥

೭೧೬

ವಂಚನೆಯ ಮಾಡಿ[ದೆ] ನಾನಯ್ಯ ನಿನಗಾನು.
ನೀ ಬರಹೇಳಿದ ಹಾಂಗೆ ಬಂದೆ.
ನೀ ಇರಹೇಳಿದ ಹಾಂಗೆ ಇದ್ದೆ.
ನೀ ಮಾಡಹೇಳಿದ ಹಾಂಗೆ ಮಾಡಿದೆ-
ನೀ ಗುರುವಾಗಿ ಬಂದು ಪರಮಸೀಮೆ ಇದೆಂದು ತೋರಿದೆ.
ನಾನು ಅಲ್ಲಿಯೇ ಇದ್ದೆನು.
ಇನ್ನು ನೀನೊಯ್ಯುದಲ್ಲಿಗೆ ಬಂದೆನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೧೬ ॥

೭೧೭

ವರ್ಣವಿಲ್ಲದ ಲಿಂಗಕ್ಕೆ ರೂಪು ಪ್ರತಿಷ್ಠೆಯ ಮಾಡುವ ಪರಿ ಇನ್ನೆಂತೊ ?
ಪ್ರಳಯವಿಲ್ಲದ ಲಿಂಗಕ್ಕೆ ಪ್ರಾಣಪ್ರತಿಷ್ಠೆಯ ಮಾಡುವ ಪರಿ ಇನ್ನೆಂತೊ ?
ನೆನೆಯಬಾರದ ಲಿಂಗಕ್ಕೆ ಅನುಗ್ರಹವ ಮಾಡುವ ಪರಿ ಇನ್ನೆಂತೊ ?
ನುಡಿಯಬಾರದ ಲಿಂಗಕ್ಕೆ ಜಪಪೂಜೆಯದೆಂತೊ ?
ಇಲ್ಲದ ಲಿಂಗವ ಧರಿಸುವ ಪರಿ ಇನ್ನೆಂತೊ ?
ಮಹಾಮಹಿಮ,[ಕಪಿಲಸಿದ್ಧ] ಮಲ್ಲಿಕಾರ್ಜುನ,
ಇದರಂತುವ ನೀವೆ ಬಲ್ಲಿರಿ. ॥ ೭೧೭ ॥

೭೧೮

ಮರ್ಮವನರಿತೆನ್ನ ನಿಃಕರ್ಮಿಯ ಮಾಡಯ್ಯಾ ಗುರುವೆ.
ಈ ಕರ್ಮಕ್ಕಾನಾರೆನು ತಂದೆ.
ಅಯ್ಯಾ, ಎನ್ನ ನಿಃಕರ್ಮಿಯ ಮಾಡಯ್ಯಾ ಗುರುವೆ.
ಅನತ ಘನಗುರುವೆ ಕಪಿಲಸಿದ್ಧಮಲ್ಲಿನಾಥಾ,
ಎನ್ನ ನಿನ್ನವರಂತೆ ಮಾಡಾ ! ನಿಮ್ಮ ಧರ್ಮ. ॥ ೭೧೮ ॥

೭೧೯

ಮಾದ ಬುದ್ಧಿಯ ಬಲ, ಮಾದ ಅಭ್ಯಾಸದ ಬಲ ;
ಮಹತ್ವ ಸುಕೃತದ ಫಲ, ಮಹತ್ವ ಸಿದ್ಧಿಯ ಬಲ ;

ಅರಿವು ಜ್ಞಾನದ ಬಲ, ಅರಿವು ಸಜ್ಜನಸಹವಾಸದ ಬಲ.
ಅರಿವು ಬಾಹ್ಯದಲ್ಲಿ ಇಷ್ಟಲಿಂಗ,
ಅರಿವು ಅಂತರಂಗದಲ್ಲಿ ಪ್ರಾಣಲಿಂಗ,
ಅರಿವು ಭಾವದಲ್ಲಿ ಆತ್ಮಲಿಂಗ.
ಇದು ಕಾರಣ,
ವಾದಿಸಿದಲ್ಲಿ ಹುರುಳಿಲ್ಲ, ಮಹತ್ವ ಮಾಡುವಲ್ಲಿ ಹುರುಳಿಲ್ಲ.
ಲಿಂಗಜ್ಞಾನವೇ ಹುರುಳು, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೮೯ ॥

೭೯೦

ವಾದಿಸಿ ವಾದಿಸಿ ಗುರುಕ್ರಿಯೆಯ ಹಿಡಿದಡೆಯೂ ವಾದ ಮಾಣದು ;
ಬಿಟ್ಟಡೆಯೂ ವಾದ, ಹಿಡಿದಡೆಯೂ ವಾದ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಕೂಟ
ಒಮ್ಮೆ ಕಾಲಕೂಟ, ಒಮ್ಮೆ ಅಮೃತದ ನೋಟ, ಕೇಳಾ ಕಿನ್ನರಯ್ಯಾ.
॥ ೭೯೦ ॥

೭೯೧

ವಾಯುದ ದೇಹವ ಮನೆಯ ಮಾಡಿ ಮಾಯದಲ್ಲಿಪ್ಪೆ ಕಂಡಾ.
ನೇತ್ರದ ಬಾಗಿಲ ತೆರೆದು ನೋಡುತ್ತಿಪ್ಪೆ ಕಂಡಾ.
ನಿನ್ನ ಇರವೊಂದು ವಿಪರೀತ
ಮಠವೊಂಗಘಟಿತದೊಳಗೆ ಎನ್ನ ಮರೆದಿಪ್ಪೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೯೧ ॥

೭೯೨

ವಾಯುವ ನುಂಗಿದ ಬಣ್ಣ, ಬಣ್ಣವ ನುಂಗಿದ ಛಾಯೆ,
ಅಂಜನ ಪ್ರವೇಶ ಮಧ್ಯದಲ್ಲಿ ಲೀಯವಾದೆನಯ್ಯಾ ನಿನ್ನೊಡನೆ ;
ಲೀಯವಾದೆನಯ್ಯಾ ಸಂಗಸಂಯೋಗ ಸ್ಥಾನದಲ್ಲಿ ನಿಃಸಹಿತ.
ಯೋಗಿಯಾದೆನಯ್ಯಾ ಶುದ್ಧ ಸಿದ್ಧ ಪ್ರಸಿದ್ಧದಲ್ಲಿ ಪ್ರವೇಶಿಸಲೊಡನೆ
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ, ಸೀಮೆಯ ಮೀರಿ ಸಂಬಂಧಿಯಾದೆನು.
॥ ೭೯೨ ॥

೭೨೩

ವಾಯುವೆನ್ನುವನತಿ ಮದದಿಂದ
ಕಾಯಶೂನ್ಯವ ಮಾಡುವೆನೆನುತಿಹೆವಯ್ಯ.
ವಾಯದ ಕಾಯವು ಕೆಡದ ಮುನ್ನ
ನೀವು ನಿಮ್ಮವ ನೆನೆಯಲೀಯವು
ಅಯ್ಯೋ ಮಹಾದೇವ, ಮನವೆ ನೀವಾಗಿ ಕೈಕೊಟ್ಟು ಕಾಯಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೨೩ ॥

೭೨೪

ವಾರಾಸಿಯಿಂದತ್ತಲಾರು ಬಲ್ಲರು ದೇವಾ ?
ಈರೇಳನತಿಗಳೆದ ನಿತ್ಯ ನಿತ್ಯ ಕಾರುಣ್ಯಭಾವದಲಿ
ಆ ಮರುಳುಗೊಂಡಡೆ ಆರು ಏವಿಧಿಯಾದಡೇನಯ್ಯ ?
ಕಾರುಣ್ಯಕರ ಸ್ವಾಮಿ ಓರಂತೆಯಾದ ಬಳಿಕಾನಂದನಯ್ಯ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೨೪ ॥

೭೨೫

ವಿಷಮ ವಿಷಯ ಗಾಳಿಯಲ್ಲಿ ದೆಸೆಗೆಟ್ಟೆನಯ್ಯಾ ತಂದೆ.
ಆಮಿಷ ರೋಷಂಗಳೆನ್ನುವ ಕಾಡಿಹವು.
ಶಾಶ್ವತ ನಿತ್ಯ ಸತ್ಯ ನೀನೆ ನಿಜಪದವನೀಯಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೨೫ ॥

೭೨೬

ವೀರಧೀರರುಗಳೆಲ್ಲಾ ಕೈಲಾಸಪುರಕ್ಕೆ ಧಾಳಿಯ ದಂಡು ಕಾಣಿರೆ.
ಸುತ್ತಿ ಮುತ್ತಿ ಪರಬ್ರಹ್ಮವೆಂಬ ಕೋಂಟೆಯ ಕೊಳ್ಳಿರೆ.
ಸಮತೆ ಸ್ಮರಣೆ ಸಮಾಧಾನವೆಂಬ ಕೈದುವ ಕೊಳ್ಳಿರೆ.
ಅತಿರಥ ಮಹಾರಥರೆಲ್ಲರೂ ಆಯತವಾಗಿರೆ,
ನಮ್ಮ ಕಪಿಲಸಿದ್ಧಮಲ್ಲಿನಾಥನೆಂಬ ಶಿವಲಿಂಗವನೊಡಗೂಡಿಕೊಳ್ಳಿರೆ.
॥ ೭೨೬ ॥

೭೨೭

ವೃಕ್ಷ–ಬೀಜದಂತೆ ಇಪ್ಪೆ ನೀನು ಅಯ್ಯಾ,
ಅಯ್ಯಾ, ನಿರಾಕಾರದೊಳಗೆ ಮೂರ್ತಿ, ಮೂರ್ತಿಯೊಳಗೆ ನಿರಾಕಾರ ನೀನು.
ಅಯ್ಯಾ, ಮೂರ್ತಿ ಮೂರ್ತಿಗಳನೆ ತೋರಿ ಆಡಿ ಬಯಲಲಿಪ್ಪೆಯ್ಯೈ,
ಎನ್ನ ಕಪಿಲಸಿದ್ಧಮಲ್ಲೇಶ್ವರದೇವಾ. ॥ ೭೨೭ ॥

೭೨೮

ವೇದಂಗಳು ದೈವವಾದಡೆ ಕುಕ್ಕುರ ಕುದುರೆಗಳಾಗಲೇಕೋ ?
ಶಾಸ್ತ್ರಂಗಳು ದೈವವಾದಡೆ ಹೊರಜು ಕಣ್ಣಗಳಾಗಲೇಕೋ ?
ಆಗಮಂಗಳು ದೈವವಾದಡೆ ಕೀಲುಗುಣಿಕೆಗಳಾಗಲೇಕೋ ?
ಪುರಾಣಂಗಳು ದೈವವಾದಡೆ ಅಚ್ಚು ಹೊರಜೆಯಾಗಲೇಕೋ ?
ಚಂದ್ರಸೂರ್ಯರು ದೈವವಾದಡೆ ಗಾಲಿಗಳಾಗಲೇಕೋ ?
ಇವ ಹಿಡಿದಾಡಿ ಭಜಿಸಿ ಪೂಜೆಮಾಡಿದವರು ದೈವವಾದಡೆ,
ಪುಣ್ಯ–ಪಾಪಕ್ಕೀಡಾಗಲೇಕೋ ?
ಇದು ಕಾರಣ, ವೇದಂಗಳು ದೈವವಲ್ಲ, ಶಾಸ್ತ್ರಂಗಳು ದೈವವಲ್ಲ,
ಆಗಮಂಗಳು ದೈವವಲ್ಲ, ಪುರಾಣಂಗಳು ದೈವವಲ್ಲ,
ಚಂದ್ರಸೂರ್ಯರು ದೈವವಲ್ಲ, ಆತ್ಮನು ದೈವವಲ್ಲ,
ಕಪಿಲಸಿದ್ಧಮಲ್ಲಿಕಾರ್ಜುನಾ, ನೀನೊಬ್ಬನೇ ದೈವ. ॥ ೭೨೮ ॥

೭೨೯

ವೇದ ನಾಲ್ಕರ ಮೇಲೆ ಆದ ಪಂಚಮವಾಕ್ಯ .
ಆದ ಷಷ್ಠಮ ಬ್ರಹ್ಮವನು ಜಪಿಸುವ
ಆಮೋದವನು ಮೀರಿ ಹೋಯಿತ್ತೈ ಕೈವಲ್ಯದಾದಿಪದ ತಾನೆ ನಿತ್ಯ.
ನಿತ್ಯ ಅನಾದಿ ಸಂಸಿದ್ಧ ಯೋಗಮೂರ್ತಿ ಗುರುಸ್ವಾಮಿ
ಮೂದೇವರಿಗೆ ದೀಕ್ಷೆಮಾಡಲೆಂದು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೨೯ ॥

೭೩೦

ವೇದ ಹದಿನಾರುಸಾವಿರಂಗಳು ನಿನ್ನನರಸಿಯೊದರಿ
ಕಾಣದೆ ಹೋದವು.
ನಿನ್ನಾಧಿಕ್ಯವ ಬಲ್ಲವರಾರಯ್ಯಾ ನಿನ್ನವರಲ್ಲದೆ ?

ಉರುತರ ಪರಮಜ್ಞಾನಿ ಘನತರದ ಸಂಯೋಗಿ
ನಿನ್ನ ಪ್ರಮಾಣವನರಿಯಲ್ಕೆ ಆರ ವಶವು ಹೇಳಾ.
ಸೀಮೆಯ ಮೀರಿದ ಸಂಬಂಧಿ, ಲೆಕ್ಕವ ಮೀರಿದ ಅಪ್ರಮಾಣ,
ಗುರುವಿನ ಕರುಣದಿಂದ ಎನ್ನ ಕರಸ್ಥಲಕ್ಕೆ ಬಂದು ಚುಳುಕಾದೆ,
ಕಪಿಲಸಿದ್ಧಮಲ್ಲಿಕಾರ್ಜುನಲಿಂಗವೆ. ॥ ೭೩೦ ॥

೭೩೧

ವ್ಯಾಘ್ರದಿಂ ದಿವರಾತ್ರಿಗಳಲ್ಲಿಯು ಕಾಣಬಹಾಂಗೆ
ಭೇರುಂಡನಾ ಭೂಮಿ ಆಕಾಶಂಗಳೆರಡರಲ್ಲಿಯೂ ಚರಿಸುವ ಹಾಂಗೆ
ಶಿವಯೋಗಿಯಾ ಪ್ರಪಂಚ ಪರಮಾರ್ಥಂಗಳೆರಡರಲ್ಲಿಯೂ ಕಂಡು
ಆಚರಿಸುವನೆಂಬುದು ತೋರಲ್ಪಡುತ್ತಿಹುದು.
ಶಿವಾಚಾರ ಸಂಪನ್ನರಾಗಿ ಶಿವಯೋಗದ ಹೊಲಬನರಿದವರು
ಲೌಕಿಕದತ್ತಲೂ ಚರಿಸುವರು, ಪರಮಾರ್ಥದತ್ತಲೂ ಚರಿಸುವರು,
ಕಪಿಲಸಿದ್ಧಮಲ್ಲಿನಾಥನೆಂಬ ಮಹಾಬಯಲು ಕೂಡಿರ್ಪರು. ॥ ೭೩೧ ॥

೭೩೨

ಶರಣನಾದಡೆ ಸತಿಯಗೂಡಾಟವೇಕಯ್ಯಾ ?
ಇಂದ್ರಿಯಂಗಳು ಹರಿಯಲೇಕೆ ? ತಾನೆ ಸತಿ ಲಿಂಗವೆ ಪತಿಯಾದ ಬಳಿಕ.
ಸರ್ವ ಸಂಯೋಗಕ್ಕೆ ಲಿಂಗವೆ ಪತಿ, ತಾನೆ ಸತಿಯಾದಾತ
ಅನ್ಯ ಸತಿಯರಿಗೆರಗ ; ಕರಣಂಗಳ ಹರಿಯಲೀಯ ; ಕಾರ್ಪಣ್ಯಕ್ಕೊದಗ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಒಡಗೂಡಿದ ಶರಣ. ॥ ೭೩೨ ॥

೭೩೩

ಶರಣಾರ್ಥಿ ಶರಣಾರ್ಥಿ ಬಸವ ಬಸವಾ ಗುರುವೆ,
ಗುರುವೆ ಬಸವ ಬಸವ ಬಸವಾ.
ಕಪಿಲಸಿದ್ಧಮಲ್ಲಿನಾಥಯ್ಯಾ,
ನನ್ನಂಗ ನಿನ್ನಂಗ ಬಸವಣ್ಣಂಗರ್ಪಿತವಯ್ಯಾ. ॥ ೭೩೩ ॥

೭೩೪

ಶಿವತತ್ವ ಐದು ಅವಾವೆಂದಡೆ :
ಶಿವ, ಶಕ್ತಿ, ಸಾದಾಖ್ಯ, ಈಶ್ವರ, ಶುದ್ಧವಿದ್ಯೆ-ಇಂತು ಶಿವತತ್ವ ಐದು.

ಇನ್ನು ವಿದ್ಯಾತತ್ತ್ವವೆಂತೆಂದಡೆ :
ಕಲೆ, ರಾಗ, ನಿಯತಿ, ವಿದ್ಯೆ, ಪುರುಷ, ಪ್ರಕೃತಿ–ಇಂತು ವಿದ್ಯಾತತ್ತ್ವ ಹಲು.
ಇನ್ನು ಕರಣಂಗಳೆಂತೆಂದಡೆ :
ಚಿತ್ತ, ಬುದ್ಧಿ, ಅಹಂಕಾರ, ಮನ–ಇವು ಕರಣತತ್ತ್ವ ನಾಲ್ಕು.
ಇನ್ನು ಇಂದ್ರಿಯಂಗಳೆಂತೆಂದಡೆ :
ಶ್ರೋತ್ರ,ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ-ಇಂತು ಬುದ್ಧೀಂದ್ರಿಯಂಗಳು ಐದು·
ಇನ್ನು ಕರ್ಮೇಂದ್ರಿಯಂಗಳೆಂತೆಂದಡೆ :
ವಾಕ್ಕು,ಪಾದ, ಪಾಣಿ, ಗುಹ್ಯ ಪಾಯು-ಇಂತು ಕರ್ಮೇಂದ್ರಿಯಂಗಳು ಐದು.
ಇನ್ನು ತನ್ಮಾತ್ರಂಗಳೆಂತೆಂದಡೆ :
ಶಬ್ದ, ಸ್ಪರ್ಶ, ರೂಪು, ರಸ, ಗಂಧ–ಇಂತು ಜ್ಞಾನೇಂದ್ರಿಯ ವಿಷಯ ಐದು.
ಇನ್ನು ಕರ್ಮೇಂದ್ರಿಯ [ವಿಷಯ]ವೆಂತೆಂದಡೆ :
ವಚನ, ಗಮನ, ಆದಾನ, ಆನಂದ, ವಿಸರ್ಜನ
ಇಂತು ಕರ್ಮೇಂದ್ರಿಯ ವಿಷಯ ಐದು.
–ಇನ್ನು ವಾಕ್ಕುಗಳಾವುವೆಂದಡೆ :
ಸೂಕ್ಷ್ಮೆ, ಪಶ್ಯಂತಿ, ಮಧ್ಯಮೆ, ವೈಖರಿ–ಇಂತು ವಾಕ್ಕು ನಾಲ್ಕು.
ಸಾತ್ವಿಕ, ರಾಜಸ, ತಾಮಸ–ಇಂತು ಗುಣ ಮೂರು.
ರಾಜಸಹಂಕಾರ, ವೈಖರಿಯಹಂಕಾರ, ಭೂತಾದಿಯಹಂಕಾರ
–ಇಂತು ಅಹಂಕಾರ ಮೂರು.
ಪೃಥ್ವಿ, ಅಪ್ಪು, ಅಗ್ನಿ, ವಾಯು, ಆಕಾಶ–ಇಂತು ಭೂತಂಗಳು ಐದು.
ಭೂತಕಾರ್ಯ ಇಪ್ಪತ್ತೈದು–ಅವಾವೆಂದಡೆ :
ಅಸ್ಥಿ, ಮಾಂಸ, ತ್ವಕ್, ನಾಡಿ, ರೋಮ–ಈ ಐದು ಪೃಥ್ವೀಪಂಚಕ.
ಲಾಲಾ, ಮೂತ್ರ, ಸ್ವೇದ, ಶುಕ್ಲ, ಶೋಣಿತ–ಈ ಐದು ಅಪ್ಪುವಿನ ಪಂಚಕ.
ಕ್ಷುಧೆ, ತೃಷೆ, ನಿದ್ರೆ, ಆಲಸ್ಯ, ಸ್ತ್ರೀಸಂಗ-ಈ ಐದು ಅಗ್ನಿಪಂಚಕ.
ಪರಿವ. ಪಾರುವ, ಸುಳಿವ, ನಿಲುವ, ಅಗಲುವ–ಈ ಐದು ವಾಯುಪಂ ಚಕ
ರಾಗ, ದ್ವೇಷ, ಭಯ, ಲಜ್ಜೆ, ಮೋಹ–ಈ ಐದು ಆಕಾಶಪಂಚಕ.
–ಇಂತೀ ಇಪ್ಪತ್ತೈದು ಭೂತಕಾರ್ಯ ಪಂಚೀಕೃತಗಳು.
ಇನ್ನು ದಶವಾಯುಗಳು :
ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕರ,
ದೇವದತ್ತ, ಧನಂಜಯ–ಈ ಹತ್ತು ವಾಯುಗಳು,
ಇನ್ನು ದಶನಾಡಿಗಳು :
ಇಡಾ, ಪಿಂಗಳಾ, ಸುಷುಮ್ನಾ, ಗಾಂಧಾರಿ, ಹಸ್ತಿ, ಜಿಹ್ವೆ, ಪುಷ್ಕರ,
ಪಯಸ್ವಿನಿ, ಅಲಂಬು, ಲಕುಹ, ಶಂಕಿನಿ–ಇಂತೀ ಹತ್ತು ನಾಡಿಗಳು.

ಇಂತು ತತ್ವ ತೊಂಬತ್ತಾರು ಕೂಡಿಕೊಂಡು
ಆತ್ಮನು ಭ್ರೂಮಧ್ಯದಲ್ಲಿರ್ದು ಅವಸ್ಥೆಬಡುವುದನು ಹೇಳಿಹೆನು.
ಅದೆಂತೆಂದಡೆ ಅವಸ್ಥೆಯ ಕ್ರಮ :
ಪ್ರೇರಕಾವಸ್ಥೆ ಒಂದು, ಅಧೋವಸ್ಥೆ ಐದು, ಊರ್ಧ್ವಾವಸ್ಥೆ ಐದು,
ಮಧ್ಯಾವಸ್ಥೆ ಐದು, ಕೇವಲಾವಸ್ಥೆ ಒಂದು, ಸಕಲಾವಸ್ಥೆ ಒಂದು,
ಶುದ್ಧಾವಸ್ಥೆ ಒಂದು, ನಿರ್ಮಲಾವಸ್ಥೆ ಐದು. ಅಂತೂ ಅವಸ್ಥೆ ಇಪ್ಪತ್ತನಾಲ್ಕು,
ಅವರಲ್ಲಿ ಪ್ರೇರಕಾವಸ್ಥೆಯೆಂತೆಂದಡೆ :
ತತ್ತ್ವಸಮೂಹಂಗಳನು ಕೂಡಿಕೊಂಡು ಇರ್ದಲ್ಲಿ ಆ ಪುರುಷನು
ಪಂಚೇಂದ್ರಿಯಂಗಳಲ್ಲಿ ವಿಷಯಂಗಳನು ಅತಿ ಚಮತ್ಕಾರದಲ್ಲಿ
ಅರಿವವೇಳೆ ಪ್ರೇರಕಾವಸ್ಥೆಯೆಂದು.
ಅದಕ್ಕೆ ಪ್ರೇರಿಸುವ ತತ್ತ್ವಂಗಳಾವುವೆಂದಡೆ–
ಶಿವತತ್ತ್ವ ಐದು, ವಿದ್ಯಾತತ್ತ್ವ ಏಳು, ಕರಣಂಗಳು ನಾಲ್ಕು,
ಭೂತಂಗಳಲ್ಲಿ ಒಂದು, ಇಂದ್ರಿಯಂಗಳಲ್ಲಿ ಒಂದು
–ಇಂತೀ ಹದಿನೆಂಟು ತತ್ತ್ವಂಗಳಲ್ಲಿ ವಿಷಯಂಗಳನರಿವನು.
ಅದು ಹೇಗೆಂದಡೆ –ಶಿವತತ್ತ್ವ ಐದು, ವಿದ್ಯಾತತ್ತ್ವ ಏಳು,
ಕರಣಂಗಳು ನಾಲ್ಕು-ಇಂತು ಹದಿನಾರು ತತ್ತ್ವ.
ಆಕಾಶಭೂತವೂ ಶ್ರೋತ್ರೇಂದ್ರಿಯವೂ ಕೂಡಿ ಹದಿನೆಂಟು ತತ್ತ್ವದಲ್ಲಿ
ಶಬ್ದವನರಿವ ;
ವಾಯುಭೂತವೂ ತ್ವಗೇಂದ್ರಿಯವೂ ಕೂಡಿ ಹದಿನೆಂಟು ತತ್ತ್ವದಲ್ಲಿ
ಸೋಂಕನರಿವ ;
ತೇಜಭೂತವೂ ನಯನೇಂದ್ರಿಯವೂ ಕೂಡಿ ಹದಿನೆಂಟು ತತ್ತ್ವದಲ್ಲಿ
ರೂಪವನರಿವ ;
ಅಪ್ಪುಭೂತವೂ ಜಿಹ್ವೇಂದ್ರಿಯವೂ ಕೂಡಿ ಹದಿನೆಂಟು ತತ್ತ್ವದಲ್ಲಿ
ರಸವನರಿವ ;
ಪೃಥ್ವಿ ಭೂತವೂ ಘ್ರಾಣೇಂದ್ರಿಯವೂ ಕೂಡಿ ಹದಿನೆಂಟು ತತ್ತ್ವದಲ್ಲಿ
ಗಂಧವನರಿವ.
ಇಂತೀ ವಿಷಯಂಗಳನರಿವುದು. ಇದು ಪ್ರೇರಕಾವಸ್ಥೆಯೆಂದೆನಿಸುವದು
ಇನ್ನು ಅಧೋವಸ್ಥೆ ಐದಕ್ಕೆ ವಿವರ :
ಪ್ರಥಮದಲ್ಲಿ ಜಾಗ್ರಾವಸ್ಥೆ. ಅದಕ್ಕೆ ಪ್ರೇರಿಸುವ ತತ್ತ್ವಂಗಳು
ಬಿಟ್ಟಿಹವಾವುವೆಂದಡೆ–
ಶಿವತತ್ತ್ವ ಐದು, ಮಾಯಾತತ್ತ್ವ ಒಂದು, ವಿದ್ಯಾತತ್ತ್ವ ಆರು,
ಭೂತಂಗಳು ಐದು ಇಂತು ಹದಿನೇಳು ಬಿಟ್ಟಿಹುದು.

ಇನ್ನು ಜಾಗ್ರಾವಸ್ಥೆಯಲ್ಲಿಹ ತತ್ತ್ವಗಳೆಷ್ಟೆಂದಡೆ :
ಕರಣ ನಾಲ್ಕು, ಬುದ್ಧೀಂದ್ರಿಯ ಐದು, ಕರ್ಮೇಂದ್ರಿಯ ಐದು,
ವಿಷಯ ಹತ್ತು, ವಾಯು ಪತ್ತು.
ಇಂತು ಮೂವತ್ತನಾಲ್ಕು ತತ್ತ್ವಂಗಳಲ್ಲಿ ಆ ತನು ಕೇಳದೆ ಕೇಳುವ,
ಮಾತಾಡದ ಹಾಂಗೆ ಆಲಸ್ಯದಲ್ಲಿ ಮಾತನಾಡುತ್ತಿಪನು,
ಇಂತು ಜಾಗ್ರಾವಸ್ಥೆ.
ಇನ್ನು ಸ್ವಪ್ನಾವಸ್ಥೆ. ಅದಕ್ಕೆ ಹತ್ತು ತತ್ತ್ವಂಗಳು ಬಿಟ್ಟಿಹವು.
ಅವಾವುವೆಂದಡೆ-ಬುದ್ಧೀಂದ್ರಿಯ ಐದು, ಕರ್ಮೇಂದ್ರಿಯ ಐದು.
ಲಲಾಟದಲ್ಲಿ ನಿಲುವು ಕಂಠಸ್ಥಾನದಲ್ಲಿ ಇಪ್ಪತ್ತೈದು ತತ್ತ್ವಂಗಳು
ಕೂಡಿಕೊಂಡಿಹುದು.
ಅದೆಂತೆಂದಡೆ–ಮಾಯೆ ಒಂದು, ವಾಯು ಹತ್ತು,
ವಿಷಯ ಹತ್ತು, ಕರಣ ನಾಲ್ಕು
ಇಂತು ಇಪ್ಪತ್ತೈದು ತತ್ತ್ವಂಗಳ ಕೂಡಿಕೊಂಡು ಸ್ವಪ್ನಂಗಳ ಕಾಣುತಿಪನು.
ಇದು ಸ್ವಪ್ನಾವಸ್ಥೆ.
ಇನ್ನು ಸುಷುಪ್ತಾವಸ್ಥೆಗೆ ಬಹಲ್ಲಿ
ಕಂಠಸ್ಥಾನದಲ್ಲಿ ನಿಂದ ತತ್ತ್ವಂಗಳಾವಾವವೆಂದಡೆ-
ಮಾಯೆ ಒಂದು, ವಾಯು ಒಂಬತ್ತು, ವಿಷಯ ಪತ್ತು, ಕರಣ ಮೂರು–
ಇಂತು ಇಪ್ಪತ್ತಮೂರು ತತ್ತ್ವ.
ಇನ್ನು ಹೃದಯಸ್ಥಾನದಲ್ಲಿ ಕೂಡಿಹ ತತ್ತ್ವ ಅವಾವೆಂವಡೆ-
ಪ್ರಾಣವಾಯು ಒಂದು, ಪ್ರಕೃತಿ ಒಂದು, ಚಿತ್ತ ಒಂದು
-ಇಂತು ಸುಷುಪ್ತಾವಸ್ಥೆಯಲ್ಲಿ ತತ್ತ್ವ.
ಇನ್ನು ತೂರ್ಯಾವಸ್ಥೆಗೆ ಬಹಾಗ ಹೃದಯದಲ್ಲಿ ನಿಂದ ತತ್ತ್ವ ಚಿತ್ತ ಒಂದು.
ನಾಭಿಸ್ಥಾನದಲ್ಲಿ ತೂರ್ಯಾವಸ್ಥೆಯಲ್ಲಿಹ ತತ್ತ್ವ ಪ್ರಾಣವಾಯು ಒಂದು,
ಪ್ರಕೃತಿ ಒಂದು.
ಅತೀತಾವಸ್ಥೆಗೆ ಪೋಹಾಗ ನಾಭಿಸ್ಥಾನದಲ್ಲಿ ತೂರ್ಯಾವಸ್ಥೆಯಲ್ಲಿ
ಪ್ರಾಣವಾಯುವುಳಿದು ಅತೀತಾವಸ್ಥೆಯಲ್ಲಿ ಪ್ರಕೃತಿಗೂಡಿ
ಮೂಲಾಧಾರದಲ್ಲಿ ಆಣವಮಲಯುಕ್ತವಾಗಿ
ಏನೆಂದರಿಯದೆ ಇಹುದು, ಇಂತಿದು ಅಧೋವಸ್ಥೆ.
ಇನ್ನು ಊರ್ಧ್ವಾವಸ್ಥೆ. ಅತೀತದಲ್ಲಿ ಪ್ರಕೃತಿಕಾರ್ಯಂಗಳೆಲ್ಲವನೂ ಬಿಟ್ಟು,
ತತ್ತ್ವಂಗಳೊಂದೂ ಇಲ್ಲದೆ,
ಆಣವಮಲಸ್ವರೂಪನಾಗಿ ಮೂಲಾಧಾರದಲ್ಲಿ ಬಿದ್ದಿರ್ದ ಆತ್ಮನಿಗೆ
ಪರಮೇಶ್ವರನ ಕರುಣದಿಂದ ಕ್ರಿಯಾಶಕ್ತಿ, ಶಕ್ತಿತತ್ತ್ವಮಂ ಪ್ರೇರಿಸುವುದು.

ಆ ಶಕ್ತಿ ಕಲೆ, ಕಾಲ, ನಿಯತಿಗಳಂ ಪ್ರೇರಿಸುವುದು.
ಆ ವೇಳೆಯಲ್ಲಿ ಸೂಕ್ಷ್ಮೆಯೆಂಬ ವಾಕ್ಕು ಕೂಡುವುದು.
ಇಂತು ಅತೀತದಲ್ಲಿ ಆರುಹಿಸುವ ತತ್ತ್ವಂಗಳು :
ಶಕ್ತಿತತ್ತ್ವ, ಕಲೆ, ಕಾಲ, ನಿಯತಿ, ಸೂಕ್ಷ್ಮೆ ಇಂತು ತತ್ತ್ವಂಗಳು ಐದು.
ಇನ್ನು ತೂರ್ಯಾವಸ್ಥೆಗೆ ಬಹಾಗ
ಹಿಂದೆ ಹೇಳಿದ ತತ್ತ್ವ ಐದು, ಪಶ್ಯಂತಿಯೆಂಬ ವಾಕ್ಕು, ಪ್ರಾಣವಾಯು ಕೂಡಿ
ತತ್ತ್ವ ಏಳು ತೂರ್ಯಾವಸ್ಥೆಯಲ್ಲಿ ಪ್ರೇರಿಸುವುದು.
ಇನ್ನು ಸುಷುಪ್ತಾವಸ್ಥೆಯಲ್ಲಿ ಪ್ರೇರಿಸುವ ತತ್ತ್ವಂಗಳು :
ಹಿಂದೆ ಹೇಳಿದ ತತ್ತ್ವ ಏಳು ಕೂಡಿ,
ಹೃದಯಸ್ಥಾನದಲ್ಲಿ ಮಧ್ಯಮೆ, ಚಿತ್ತ–ಎರಡು ಕೂಡುತ್ತಿಹವು.
ಆ ವೇಳೆಯಲ್ಲಿ ಜ್ಞಾನಶಕ್ತಿ ಶುದ್ಧವಿದ್ಯಾತತ್ತ್ವಮಂ ಪ್ರೇರಿಸುವುದು.
ಆ ಶುದ್ಧವಿದ್ಯಾತತ್ತ್ವ ಆತ್ಮಂಗೆ ಅರಿವನೆಬ್ಬಿಸುವುದು.
ಇಚ್ಛಾಶಕ್ತಿ ಈಶ್ವರತತ್ತ್ವಮಂ ಪ್ರೇರಿಸುವುದು ;
ಈಶ್ವರತತ್ತ್ವ ರಾಗತತ್ತ್ವಮಂ ಪ್ರೇರಿಸುವುದು ;
ರಾಗತತ್ತ್ವ ಆತ್ಮಂಗೆ ಇಚ್ಛೆಯನೆಬ್ಬಿಸುವುದು.
ಆದಿಶಕ್ತಿ ಸಾದಾಖ್ಯತತ್ತ್ವಮಂ ಪ್ರೇರಿಸುವುದು ;
ಸಾದಾಖ್ಯತತ್ತ್ವ ಪ್ರಕೃತಿತತ್ತ್ವಮಂ ಪ್ರೇರಿಸುವುದು ;
ಪರಾಶಕ್ತಿ ಶಿವತತ್ತ್ವಮಂ ಪ್ರೇರಿಸುವುದು ;
ಶಿವತತ್ತ್ವ ಗುಣತತ್ತ್ವಮಂ ಪ್ರೇರಿಸುವುದು.
ಇಂದು ಹದಿನೆಂಟು ತತ್ತ್ವ ಆವಾವವೆಂದಡೆ :
ಪಂಚಶಕ್ತಿ ಹೊರಗಾಗಿ ಶಿವತತ್ತ್ವ ಐದು, ವಿದ್ಯಾತತ್ತ್ವ ಐದು,
ಪ್ರಾಣವಾಯು ಒಂದು, ಪ್ರಕೃತಿ ಒಂದು,
ಗುಣ ಮೂರು, ಚಿತ್ತ ಒಂದು, ಪುರುಷ ಒಂದು.
ಇಂತು ತತ್ತ್ವ ಹದಿನೇಳು ಸುಷುಪ್ತಾವಸ್ಥೆಯಲ್ಲಿ ಆರುಹಿಸುವುವು.
ಇನ್ನು ಸ್ವಪ್ನಾವಸ್ಥೆಯ ಕಂಠದಲ್ಲಿಹ ತತ್ತ್ವ :
ಜ್ಞಾನೇಂದ್ರಿಯ ವಿಷಯ ಹತ್ತು, ಕರ್ಮೇಂದ್ರಿಯ ವಿಷಯ ಹತ್ತು,
ಪ್ರಾಣವಾಯು ಉಳಿಯೆ, ವಾಯುಚಿತ್ತ ಉಳಿಯೆ,
ತ್ರಿಕರಣ ಅಹಂಕಾರ ಮೂರು, ವೈಖರಿಯ ವಾಕ್ಕು ಒಂದು
-ಇಂತು ಇಪ್ಪತ್ತನಾಲ್ಕು ತತ್ತ್ವ.
ಸುಷುಪ್ತಾವಸ್ಥೆಯಲ್ಲಿ ಹಿಂದೆ ಹೇಳಿದ ತತ್ತ್ವ ಹದಿನೇಳು ಕೂಡಿ
ತತ್ತ್ವ ನಲವತ್ತೊಂದು ಸ್ವಪ್ನಾವಸ್ಥೆಯಲ್ಲಿ ಕೂಡಿಹವು.
ಆಗ ತನ್ನೊಳಗೆ ಆರುಹಿಸುವ ಪ್ರಕಾರವೆಂತೆಂದಡೆ–

ಚಿತ್ತ, ಬುದ್ಧಿ, ಅಹಂಕಾರ, ಮನ, ಹೃದಯ ಈ ಐದು.
ಚಿತ್ತವನು ಅಕಾರ ಪ್ರೇರಿಸುವುದು.
ಆ ಅಕಾರವನು ಬ್ರಹ್ಮ ಪ್ರೇರಿಸುವನು ,
ಬುದ್ಧಿಯನು ಉಕಾರ ಪ್ರೇರಿಸುವುದು ;
ಉಕಾರವನು ವಿಷ್ಣು ಪ್ರೇರಿಸುವನು ,
ಅಹಂಕಾರವನು ಮಕಾರ ಪ್ರೇರಿಸುವುದು ;
ಮಕಾರವನು ರುದ್ರ ಪ್ರೇರಿಸುವನು ,
ಮನವನು ಬಿಂದು ಪ್ರೇರಿಸುವುದು ;
ಬಿಂದುವನು ಈಶ್ವರ ಪ್ರೇರಿಸುವನು ,
ಹೃದಯುವನು ನಾದ ಪ್ರೇರಿಸುವುದು ;
ನಾದವನು ಸದಾಶಿವ ಪ್ರೇರಿಸುವನು.
ಈ ಹದಿನೈದು ತನ್ನೊಳಗೆ ಸೂಕ್ಷ್ಮಶರೀರದಲ್ಲಿಹುದು.
............ಗೀ (?) ಅಷ್ಟತನುವಿನಿಂದ ಸ್ವರ್ಗನರಕವನರಿವನು.
ಮುಂದೆ ಜಾಗ್ರಾವಸ್ಥೆಯಲ್ಲಿ ಅರುಹಿಸುವ ತತ್ತ್ವ ಆವಾವವೆಂದಡೆ-
ಭೂತ ಐದು, ಉಭಯೇಂದ್ರಿಯ ಹತ್ತು, ಭೂತಕಾರ್ಯ ಇಪ್ಪತ್ತೈದು,
ನಾಡಿ ಹತ್ತು, ಅಂತು ತತ್ತ್ವ ಐವತ್ತು.
ಹಿಂದೆ ಸ್ವಪ್ನಾವಸ್ಥೆಯಲ್ಲಿ ಹೇಳಿದ ತತ್ತ್ವ ನಲವತ್ತೊಂದು.
ಅಂತು ಕೂಡಿ ತತ್ತ್ವ ತೊಂಬತ್ತೊಂದು. ಇಂತಿದು ಊರ್ಧ್ವಾವಸ್ಥೆ.
ಇನ್ನು ಸಕಲಾವಸ್ಥೆಯೆಂತೆಂದಡೆ–
ತೊಂಬತ್ತೊಂದು ತತ್ತ್ವ ಅವರಲ್ಲಿ ಪ್ರೇರಕತತ್ವವೊಂದು ಪ್ರೇರಿಸುವಲ್ಲಿ
ಸಕಲಾವಸ್ಥೆ.
ಅದು ಶಿವನನೂ ತನ್ನನೂ ಪಾಶಪಂಚಕವನು ಅರಿಯದೆ
ಎಲ್ಲ ವಿಷಯಂಗಳನು ಅರಿವುತ್ತಿಹುದು.
ಇನ್ನು ಮಧ್ಯಮಾವಸ್ಥೆಯೆಂತೆಂದಡೆ–
ಹಿಂದೆ ಕಂಡವನ ಈಗಲೆಂದು ಅರಿಯದಿಹುದೀಗ ಜಾಗ್ರ ಅತೀತ.
ಹಿಂದೆ ಕಂಡವನ ಅರಿದ ಹಾಂಗಿಹುದೀಗ ಜಾಗ್ರ ತುರೀಯ.
ಹಿಂದೆ ಕಂಡವನ ಮೆಲ್ಲನೆಚ್ಚತ್ತು ಅರಿವುದು ಜಾಗ್ರದ ಸುಷುಪ್ತಿ.
ಹಿಂದೆ ಕಂಡವನ ಕಂಡಾಗಲೆ ಅರಿವುದು ಜಾಗ್ರದ ಸ್ವಪ್ನ.
ಹಿಂದೆ ಕಂಡವನ ಹೆಸರು, ಇದ್ದ ಸ್ಥಲ, ಅವನ ಕಾಯಕ ಮುಂತಾಗಿ
ಚೆನ್ನಾಗಿ ಅರಿವುದು ಜಾಗ್ರದ ಜಾಗ್ರ.
ಅದೆಂತೆಂವಡೆ, ಜಾಗ್ರದಲ್ಲಿ ಪುರುಷತತ್ತ್ವದಲ್ಲಿ

ಎಲ್ಲ ತತ್ತ್ವಗಳು ಕೂಡಿದ ಕಾರಣದಿಂದ
ತಾನೇನ ನೆನದಿದ್ದುದನು ಮರೆವುದು ಜಾಗ್ರ ಅತೀತ.
ಆ ಪುರುಷತತ್ತ್ವದಲ್ಲಿ ಪ್ರಾಣವಾಯು ಕೂಡಲು ನೆನೆದುದನು ಹೇಳಿಹೆನೆಂದಡೆ
ತೋರುವ ಹಾಂಗೆ ಇಹುದು ತೋರದಿಹುದು ಜಾಗ್ರದ ತುರೀಯ.
ಆ ಪುರುಷತತ್ತ್ವದಲ್ಲಿ ಪ್ರಾಣವಾಯು ಚಿತ್ತವು ಕೂಡಲು
ನೆನೆದುದನು ಮೆಲ್ಲನೆಚ್ಚತ್ತು ಅರಿದು ಹೇಳುವುದು ಜಾಗ್ರದ ಸುಷುಪ್ತಿ,
ಆ ಪುರುಷತತ್ತ್ವದಲ್ಲಿ ಕರಣ ನಾಲ್ಕು, ಇಂದ್ರಿಯ ಹತ್ತು,
ವಾಯು ಹತ್ತು, ವಿಷಯ ಹತ್ತು
ಅಂತೂ ತತ್ತ್ವ ಮೂವತ್ತನಾಲ್ಕು ಕೂಡಲಾಗಿ,
ತಾ ನೆನೆದುದನು ಇದ್ದುದನು ಚೆನ್ನಾಗಿ ಅರಿದು ವಿವರದಿಂದ ಹೇಳುವುದು
ಇದು ಜಾಗ್ರದ ಜಾಗ್ರ. ಇಂತಿದು ಮಾಧ್ಯಮಾವಸ್ಥೆ.
ಇನ್ನು ಕೇವಲಾವಸ್ಥೆಯೆಂತೆಂದಡೆ–
ಶುದ್ಧತತ್ತ್ವ ವಿದ್ಯಾತತ್ತ್ವವನೆಲ್ಲವ ಬಿಟ್ಟು
ಆಣವಮಲದಲ್ಲಿ ಆಣವಸ್ವರೂಪಾಗಿ
ಕಣ್ಗತ್ತಲೆಯಲ್ಲಿ ಏನೂ ಕಾಣದ ಕಣ್ಣಿನ ಹಾಂಗೆ ಇದ್ದುದೀಗ ಕೇವಲಾವಸ್ಥೆ.
ಇನ್ನು ಶುದ್ಧಾವಸ್ಥೆಯೆಂತೆಂದಡೆ–
ಕರ್ಮಸಮಾನದಲ್ಲಿ ಶಕ್ತಿಪಾತವಾಗಿ, ತ್ರಿಪದಾರ್ಥಜ್ಞಾನವಾಗಿ,
ದಿಟವೆಂಬಂತೆ ತೋರುತ್ತಿಪ ದೇಹಾದಿಪ್ರಪಂಚುವನು ಸಟೆಯೆಂದು
ಕಸವ ಕಳೆವ ಹಾಂಗೆ ಕಳೆದು,
ತತ್ತ್ವಂಗಳೊಳಗೆ ಇದ್ದು ತತ್ತ್ವಂಗಳಿಗೆ ಅನ್ಯವಾಗಿ,
ಆ ತತ್ತ್ವಂಗಳನು ಅರಿದ ಸಕಲಾವಸ್ಥೆಯೆಂಬ ಕೇವಲಾವಸ್ಥೆಯೆಂಬ
ಈ ಎರಡು ಅವಸ್ಥೆಗಳೂ
ತನ್ನನು ಶಿವನನು ಅರಿವುದಕ್ಕೆ ಪ್ರಯೋಜನವಲ್ಲವೆಂದು
ಎರಡವಸ್ಥೆಯನೂ ಬಿಟ್ಟು ಸಕಲವನೂ ಹೊದ್ದದೆ ಕೇವಲವನೂ ಹೊದ್ದದೆ
ತ್ರಾಸಿನ ಮುಳ್ಳು ನಿಂದ ಹಾಂಗೆ ನಿಂದುದು ಶುದ್ಧಾವಸ್ಥೆ.
ಇದು ಶಿವನ ಶರಣಂಗಲ್ಲದೆ ಇಲ್ಲ.
ಇನ್ನು ನಿರ್ಮಲಾವಸ್ಥೆ ಎಂತೆಂದಡೆ–
ಶಿವಜ್ಞಾನದಲ್ಲಿ ಬೋಧವನಳಿದು ಜ್ಞೇಯದೊಳು ಕೂಡಿಹ
ಜೀವನ್ಮುಕ್ತರಿಗೆ ಪಂಚಾವಸ್ಥೆಗಳು.
ಆ ಅವಸ್ಥೆಗಳಲ್ಲಿ ತತ್ತ್ವಗಳಾವಾವೆಂದಡೆ
ಶಿವತತ್ತ್ವ, ಶಕ್ತಿತತ್ತ್ವ, ಸಾದಾಖ್ಯತತ್ತ್ವ, ಈಶ್ವರತತ್ತ್ವ,

ಶುದ್ಧ ವಿದ್ಯಾತತ್ತ್ವ ಈ ಐದು ಮೊದಲಾಗಿ
ಪರೆ, ಆದಿ, ಇಚ್ಛೆ, ಜ್ಞಾನ, ಕ್ರಿಯೆಯೆಂಬ ಶಕ್ತಿ ಪಂಚಕಗಳು
ಉಸುರಾಗಿ ಜಾಗ್ರಾವಸ್ಥೆಯಲ್ಲಿ ಅರಿವುತ್ತಿಹನು.
ಕ್ರಿಯಾಶಕ್ತಿ ಶಕ್ತಿತತ್ತ್ವಮಂ ಬಿಟ್ಟು ಉಳಿದ ಶಕ್ತಿ ನಾಲ್ಕು
ಒಡಲುಸುರಾಗಿ ಅರಿಯೆ ಸ್ವಪ್ನಾವಸ್ಥೆ.
ಜ್ಞಾನಶಕ್ತಿ ಶುದ್ಧವಿದ್ಯಾತತ್ತ್ವಮಂ ಬಿಟ್ಟು ಕಳೆದು
ಉಳಿದ ಶಕ್ತಿ ಮೂರರಲ್ಲಿ ಅರಿಯೆ ಸುಷುಪ್ತಾವಸ್ಥೆ.
ಇಚ್ಛಾಶಕ್ತಿ ಈಶ್ವರತತ್ತ್ವಮಂ ಬಿಟ್ಟು ಕಳೆದು
ಉಳಿದ ಶಕ್ತಿ ಎರಡರಲ್ಲಿ ಅರಿವುದು ತೂರ್ಯಾವಸ್ಥೆ.
ಆದಿಶಕ್ತಿ ಸಾದಾಖ್ಯತತ್ತ್ವವೂ ಬಿಟ್ಟು ಕಳೆದು
ಉಳಿದ ಪರಾಶಕ್ತಿ ಒಂದು ಶಿವತತ್ತ್ವ ಒಂದರಲ್ಲಿ ಅರಿಯೆ
ನಿರ್ಮಲದ ಅತೀತಾವಸ್ಥೆ.
ಇನ್ನು ಈ ಶಕ್ತಿ ಶಿವತತ್ತ್ವಂಗಳೆ ಒಡಲುಸುರಾಗಿ ಇದ್ದಲ್ಲಿ
ಶಿವನಲ್ಲದೆ ಮತ್ತೊಂದು ಏನೂ ತೋರದು.
ಅಂಥ ಜೀವನ್ಮುಕ್ತರು ನಿರ್ಮಲಜಾಗ್ರದಲ್ಲಿ ಎಂತು ಅರಿವುತ್ತಿಪ್ಪರೆಂದಡೆ
ಆ ಪರಮಾವಸ್ಥೆಯನೂ ಅನುಭವದಲ್ಲಿ ಅರಿವುದು,
ಮಲಪಂಚಕಂಗಳನು ಅರುಹಿಸುವ ಸದಮಲ ಶಿವಜ್ಞಾನ
ಪರೆ ಮೊದಲಾದ ಪೂರ್ಣ ಬೋಧದಲ್ಲಿ ಕೂಡಿ ತಾನು ಇಲ್ಲದಿರುವಂದು
ಏನೂ ತೋರದ ಪೂರ್ಣ ಬೋಧವಾಗಿ ನಿಂದುದು ನಿರ್ಮಲಜಾಗ್ರ.
ಇನ್ನು ಪರಾಶಕ್ತಿಯನೂ ಶಿವತತ್ತ್ವವನೂ ಮೀರಿ, ಪರದಲಿ ಬೆರೆದು,
ಅದ್ವೈತವೂ ಅಲ್ಲದೆ, ದ್ವೈತವೂ ಅಲ್ಲದೆ, ದ್ವೈತಾದ್ವೈತವೂ ಅಲ್ಲದೆ
ಇನತೇಜದಲ್ಲಿ ಕಣ್ಣು ತೇಜ ಕೂಡಿದ ಹಾಂಗೆ
ಆಣವದ ಅಣುವಿನ ಹಾಂಗೆ ತಾನು ಇಲ್ಲದೆ ಇಹನು. ಇದು ಶಿವಾದ್ವೈತ.
ಇಂತಲ್ಲದೆ ಆತ್ಮ ಆತ್ಮ ಕೆಟ್ಟಡೆ, ಆತ್ಮವರ್ಗ ಮುಕ್ತಿಸುಖವಿಲ್ಲ,
ಅಳಿವ ಠಾವಿನಲ್ಲಿ ಹುಟ್ಟುವುದಾಗಿ.
ಶಿವ ತಾನೆ ಆತ್ಮನಾಗಿ ಹುಟ್ಟುವನಹುದು :
ಶಿವನಲ್ಲಿ ಹುಟ್ಟಿ ಮಲ ಉಳ್ಳದಹುದಿಲ್ಲ.
ಶಿವ ತಾನೆ ಹುಟ್ಟಿಸಿ ನರಕ–ಸ್ವರ್ಗದ ಮಾನವನಹನು,
ಪಕ್ಷಪಾತಿಯಹನು, ನಿಃಕರುಣಿಯಹನು, ವಿಕಾರಿಯಹನು.
ಶಿವನಲ್ಲಿ ಕೂಡದೆ ಬೇರಾಗಿ ಇಹನೆಂದಡೆ,
ಮುಕ್ತಿಯೆಂಬ ಮಾತು ಇಲ್ಲವಹುದು,

ಪಂಚಕೃತ್ಯವ ಮಾಡಲು ಕಾರಣವಿಲ್ಲ ಒಂದಾಗೆ!
ಎರಡಾಗದೆ ಭೇದಾಭೇದವಾಗಿಹನೆಂದಡೆ
ಶಿವಭಕ್ತಿಯನೂ ಶಿವಕ್ರಿಯೆಗಳನೂ ಮಾಡಿ
ಶಿವನ ಕೂಡಿಹನೆಂದೆನ್ನಬೇಡ !
ಮುನ್ನವೆ ಒಂದಾಗಿ ಇದ್ದನಾಗಿ,
ಈ ಭೇದವ ತಿಳಿಯಬಲ್ಲಡೆ ಆತನೆ ಶರಣ ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೩೪ ॥

೭೩೫

ಶಿವನ ಕೀರ್ತಿ ಬಸವಣ್ಣನ ಧರ್ಮವಯ್ಯಾ,
ಶಿವನ ಸ್ತೋತ್ರ ಬಸವಣ್ಣನ ಧರ್ಮವಯ್ಯಾ,
ಶಿವನ ಮಂತ್ರೋಚ್ಚಾರಣೆ ಬಸವಣ್ಣನ ಧರ್ಮವಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೭೩೫ ॥

೭೩೬

ಶಿವನೆ, ನಿಮ್ಮನಲ್ಲದೆ ಮತ್ತೊಂದ ನಾನರಿಯೆನಯ್ಯಾ.
ಶಿವನೆ, ನಿಮ್ಮ ಸೇವೆಯನಲ್ಲದೆ,
ಮತ್ತೊಂದಕ್ಕೆ ಮನ ಹಾರೈಸದಂತೆ ಮಾಡಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೭೩೬ ॥

೭೩೭

ಶಿವನೇ ಶಿವನೇ ಎಂದು ಒರಲುವೆನಯ್ಯಾ.
ಭವನೇ ಭವನೇ ಎಂದು ಬಾಯ ಬಿಡುವೆನಯ್ಯಾ.
ಎನ್ನ ಬಾಯಿಗೆ ನಿಮ್ಮ ಪ್ರಸಾದವನಿಕ್ಕೆ,
ಎನ್ನ ತನು ನಿಮಗಾಯಿತ್ತು, ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೭೩೭ ॥

೭೩೮

ಲಿಂಗಾರ್ಚನೆಯ ಮಾಡುವ ; ಗುರುಪಾದವ ಪೂಜಿಪ
ಜಂಗಮಕ್ಕೆ ಶರಣೆಂಬ ; ಪ್ರಸಾದವ ಕೊಂಬ

ಅನ್ಯಸತಿಯು ನೋಡ ; ಪರನಿಂದೆಯು ಮಾಡ
ಭಕ್ತರ ಕೊಂಡಾಡುವ ; ಸತ್ಯದಿ ನಡೆವ
ಸದ್ಭಕ್ತರ ನೆನೆವುದೆ ಮಂತ್ರವಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. || ೭೩೮ ||

೭೩೯

ಶುದ್ಧಕಾನನದೊಳಗೆ ಶುದ್ಧವಾಯುವು ಬೀಸಿ
ಪ್ರಸಿದ್ಧ ಕಮಲದಲ್ಲಿ ಬಹು ಛಾಯದ
ಹಲವು ಪರಿಯಲ್ಲಿ ಎಸೆವ ತೆರಹಿಲ್ಲದಿಹ ಗಮನ
ಕುರುಹಿಂಗೆ ಬಾರದಿಹ ಶೂನ್ಯಾಂಗನ
ಸ್ವಾನುಭಾವದ ಮನೆಯು ನಾನೊಡನೆ ಓಲಾಡಿ
ನೀನು ನಾನಾದೆ ಕಪಿಲಸಿದ್ಧಮಲ್ಲೇಶ್ವರಾ. || ೭೩೯ ||

೭೪೦

ಶುದ್ಧ ದೀಕ್ಷೆಯೊಳಾನು ಸಿದ್ಧನಾದೆನು ಬಸವ ತಂದ.
ಸಿದ್ಧ ದೀಕ್ಷೆಯೊಳಾನು ಸ್ವಯವಾದೆನೈ.
ಶುದ್ಧಸಿದ್ಧವು ಕೂಡಿ ಪ್ರಸಿದ್ಧ ದೀಕ್ಷೆಯೊಳು
ಪೊದ್ದಿ ನಡೆವೆನು ಬಸವಣ್ಣ, ನಿನ್ನವರ ಹೊಲಬಿಗನಾಗಿ.
ಮತ್ತೆ ಪ್ರಸಾದವನು ಐದಾರನೇ ಗ್ರಹಿಸಿ,
ಮತ್ತೆ ಪಾದೋದಕವನೀರೈದ ಧರಿಸಿಯಾನು
ಹುಟ್ಟುಗೆಟ್ಟೆನು ಬಸವಣ್ಣಾ ನಿಮ್ಮ ಕರುಣದಿಂದ.
ಆನಂದಗುರು ಕಪಿಲಸಿದ್ಧಮಲ್ಲೇಶ್ವರನ
ಕಾರಣದ ಶರಣರಿಗೆ ಶಿಶುವಾದೆನು. || ೭೪೦ ||

೭೪೧

ಶುದ್ಧ ಪದ್ಮಾಸನದೊಳು ಕುಳ್ಳಿರ್ದು
ಅಧೋರ್ಧ್ವದಯುವನೆತ್ತುತ್ತೈದಾನೆ
ಪೊದ್ದಿರ್ದ ಪ್ರಪಂಚುಗಳನೆಲ್ಲವ ಸುಟ್ಟು
ಅಧೋರ್ಧ್ವದಯುವನೆತ್ತುತ್ತೈದಾನೆ

ಅರ್ಥೋದಯಾಗ್ನಿ ಶುಚಿ ತನ್ನ ಪ್ರವೇಶಿಸಲು
ಮುಗ್ಧತ್ವ ಹೋಯಿತ್ತು ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನ. ॥ ೭೪೧ ॥

೭೪೨

ಶುದ್ಧಲಿಂಗವನು ಪ್ರಸಿದ್ಧ ಕರದಲಿ ಇಟ್ಟು
ಶುದ್ಧ ಸಿದ್ಧ ಪ್ರಸಿದ್ಧ ಪಾವನಾಂಗವ ಮಾಡಿ
ಹೊದ್ದಿದ ಪ್ರಪಂಚುವ ಕಳೆದು ನಿತ್ಯನೆನಿಸಿ
ಸದ್ಯೋನ್ಮುಕ್ತನ ಮಾಡಿ ಕೈವಲ್ಯಪದವಿದೆಂದು
ಆನಂದವ ಕರದಲ್ಲಿಟ್ಟು ಅರುಪಿದನಿದ ವಿಸ್ತಾರವೆಂದು
ಎನ್ನ ಜನ್ಮ ಕರ್ಮ ನಿವರ್ತನೆಯು ಮಾಡಿದ
ಗುರು ಚೆನ್ನಬಸವಣ್ಣನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೪೨ ॥

೭೪೩

ಶುದ್ಧವೆ ತದ್ರೂಪವಾಗಿ ಬಾರನೆ ಅಂದು
ಅನಾಹತನೆಂಬ ಗಣೇಶ್ವರನು ಬಂದೆನ್ನ ಜರಿಯುನೆ ?
ಜರಿದರೆ ನೀನು ಕೊಟ್ಟ ತಲೆಯು ಹುಣ್ಣ
ಕಣ್ಣಿಂದು ತೆರೆದು ಲಜ್ಜೆಗೆಡನೆ ಅನಾ ಗಣೇಶ್ವರನ ಕೈಯಲ್ಲಿ ?
ಶುದ್ಧಕಾತನೊಡೆಯು, ಸಿದ್ಧಕಾತನೊಡೆಯು, ಪ್ರಸಿದ್ಧಕಾತನೊಡೆಯು !
ಒಪ್ಪಿಪ್ಪಾರು ಆತನ ಸೀಮೆ.
ಮೂವತ್ತಾರರ ಮೇಲಿಂದಾತನ ಸಂಯೋಗ.
ಇಂತಪ್ಪಾತನ ನೀನೆನ್ನಲರಿಯುದೆ ನೊಂದೆ ಕೆಲವು ದಿನ.
ಆ ನೋವ ಮಾಣಿಸಿದಾತನೂ ಆತನೆ,
ಎನ್ನ ಭವವ ತಪ್ಪಿಸಿದಾತನೂ ಆತನೆ,
ಆತನಿಂದ ಉರುತರ ಕೈವಲ್ಯಕ್ಕೆ ಕಾರಣಿಕನಾದೆ !
ಆತನ ಪ್ರಸಾದದಿಂದ ನಿನ್ನವರ ಪಾದೋದಕ ಪ್ರಸಾದಕ್ಕೆ ಯೋಗ್ಯನಾದೆ
ಫಲ ಪದಕ್ಕೆ ದೂರವಾದೆ
ಕಪಿಲಸಿದ್ಧಮಲ್ಲಿಕಾರ್ಜುನಾ, ಬಸವಣ್ಣನಿಂದ ! ॥ ೭೪೩ ॥

೭೪೪

ಶುದ್ಧ ಸಂಯೋಗದಲ್ಲಿ ನಿನ್ನ[ನೆ] ನೆರೆವೆ ;
ಸಿದ್ಧ ಸಂಯೋಗದಲ್ಲಿ ನಿನ್ನನೆ ಸಂಯೋಗಿಸುವೆ ;
ಪ್ರಸಿದ್ಧ ಸಂಯೋಗದಲ್ಲಿ ನಿನ್ನನೆ ಕೂಡುವೆ ;
ತಾತ್ಪರ್ಯದಿಂದ ನಿನ್ನ ನೆರೆವೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೪೪ ॥

೭೪೫

ಶುದ್ಧಾತ್ಮನನು ಮಾಡಿ ಪರಿಭವವ ತಪ್ಪಿಸಿದ
ಹೊದ್ದಲೀಯ್ಯದೆನ್ನತ್ತ ಸುಖದುಃಖವ
ಸದ್ಯೋನ್ಮುಕ್ತಿಯನ್ನಿತ್ತು ನಿನ್ನ ಪವದೋರಿಸಿದ
ಆತ್ಮಧಿಕ ನಿರ್ಮಳ ಶ್ರೀಗುರು ಚೆನ್ನಬಸವಣ್ಣನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೪೫ ॥

೭೪೬

ಶ್ರೀಗುರು ಕರುಣಿಸಲೊಡನೆ ಬಿಟ್ಟಿತ್ತು ಮಾಯೆ.
ಶ್ರೀಗುರು ಕರುಣಿಸಲೊಡನೆ ಬಿಟ್ಟಿತ್ತು ಮರವೆ.
ಶ್ರೀಗುರು ಕರುಣಿಸಲೊಡನೆ ಬಿಟ್ಟಿತ್ತು ಪ್ರಪಂಚು.
ಶ್ರೀಗುರು ಕರುಣಿಸಲೊಡನೆ ಬಿಟ್ಟಿತ್ತು ಎನ್ನ ಸುತ್ತಿರ್ದ ಮಾಯಾಪಾಶ.
ಅದೆಂತೆಂದಡೆ :
"ಗು ಶಬ್ದಸ್ತ್ವಂಧಕಾರಃ ಸ್ಯಾತ್ ರು ಶಬ್ದಸ್ತು ನಿರೋಧಕಂ ।
ಅಂಧಕಾರ ನಿರೋಧತ್ವಾತ್ ಗುರುರಿತ್ಯಭಿಧೀಯತೇ ॥"
ಎಂದುದಾಗಿ, ಇದನರಿದು,
ಕಣ್ಣಿಂಗೆ ಸತ್ವ ರಜ ತಮವೆಂಬ ತಿಮಿರ ಕವಿದು ಅಜ್ಞಾನವಶನಾದಲ್ಲಿ
ಸದ್ಗುರುವನುಪಧಾವಿಸಿ ಕಣ್ಗೆ ಔಷಧಿಯ ಬೇಡಲೊಡನೆ
''ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ ॥
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರುವೇ ನಮಃ ॥''
ಎಂದುದಾಗಿ, ಶಿವಜ್ಞಾನವೆಂಬ ಅಂಜನವನೆಚ್ಚಿ,
ಎನ್ನ ಕಣ್ಣ ಮುಸುಂಕಿದ ಅಜ್ಞಾನ ಕಾಳಿಕೆಯ ಬೇರ್ಪಡಿಸಿ
ತನ್ನ ಶ್ರೀಪಾದವನರುಹಿಸಿಕೊಂಡನಯ್ಯಾ,
ಕಪಿಲಸಿದ್ಧಮಲ್ಲಿನಾಥಾ. ॥ ೭೪೬ ॥

೭೪೭

ಶ್ರೀಗುರುವೆ ಬಸವಯ್ಯ, ಶ್ರೀಚರವೆ ಬಸವಯ್ಯ,
ಶ್ರೀಮಹಾ ಇಷ್ಟಲಿಂಗ ಬಸವಣ್ಣನು.
ಆರೈದು ಎನ್ನುವನು ಓರಂತೆ ಸಲಹಿದಾ
ಕಾರುಣ್ಯಸುರತರುವೆ ಬಸವಲಿಂಗ
ಭಾವಿಸಿ ಎನ್ನುವನು ಅಜಾತನ ಮಾಡಿದಾತ ಬಸವಣ್ಣ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೭೪೭ ॥

೭೪೮

ಶ್ರೀವಿಭೂತಿ ರುದ್ರಾಕ್ಷಿಯನು
ಧಾತಪ್ಪ ಬಸವಾಕ್ಷರತ್ರಯವನಾರಯ್ಯ
ಅರಿದು ಉಚ್ಚರಿಸುವರು
ಅವರಂಘ್ರಿಯಂಬುಜದಾಮೋದಭ್ರಮರ ಆನಯ್ಯ.
ಅವರು ಆ ನಾದಬ್ರಹ್ಮವು ತಾವಾಗಿಪ್ಪರಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೪೮ ॥

೭೪೯

ಷಡಾಧಾರವಲ್ಲಿ ಅಡಿಗದ್ದಿಹೋದವರ ಕಂಡೆ.
ತತ್ತ್ವಂಗಳ ಗೊತ್ತ ಹೇಳಿ ಮುಟ್ಟದೆ ಹೋದವರ ಕಂಡೆ.
ಮಾತಿನ ಮಾಲೆಯನಾಡಿ ವಸ್ತುವನರಿಯದೆ
ಭ್ರಾಂತರಾಗಿ ಕೆಟ್ಟವರ ಕಂಡೆ.
ಅಷ್ಟಾಂಗಯೋಗವ ಮಾಡಿಹೆನೆಂದು
ಘಟಕೆಟ್ಟು ನಷ್ಟವಾದವರ ಕಂಡೆ.
ಇಂತಿವನರಿದು ಕರ್ಮಯೋಗವ ಮಾಡದೆ
ಮರ್ಮಜ್ಞನಾಗಿ ಸರ್ವಗುಣಸಂಪನ್ನನಾಗಿ ನಿಜವನರಿದಾತಂಗೆ
ತನಗೇನು ಅನ್ಯಭಿನ್ನವಿಲ್ಲ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೪೯ ॥

೭೫೦

ಷಡುಸ್ಥಳ ಸಮನಿಸದಯ್ಯಾ ಎಲ್ಲರಿಗೆ.
ಷಡುವ್ರತ ಸಮನಿಸದಯ್ಯಾ ಎಲ್ಲರಿಗೆ.

ಅರಿದರಿದು ಗುರುಭಕ್ತಿ, ಅರಿದರಿದು ಲಿಂಗಭಕ್ತಿ, ಅರಿದರಿದು ಜಂಗಮಭಕ್ತಿ.
ಅರಿದಯ್ಯಾ, ಸುಲಭವೆ ಎಲ್ಲರಿಗೆ ?
ಅವ್ವೆಯ ಕರುಣ ಅಳವಟ್ಟವರಿಗಲ್ಲದೆ
ಗುರು–ಚರ–ಇಷ್ಟತ್ರಯ ಅಳವಡದು.
ವ್ರತವಾರರಲ್ಲಿ ನಿಪುಣತೆಯಯ್ಯಾ.
ನಿನ್ನ ಕೃಪೆ ಎತ್ತಾನೊಬ್ಬರಿಗಲ್ಲವೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೫೦ ॥

೭೫೧

ಸಂಗವ ಮಾಡುವೆ ನಿನ್ನವರಲ್ಲಿ
ಸ್ನೇಹವ ಮಾಡುವೆ ನಿನ್ನವರಲ್ಲಿ
ನಿನ್ನವರಲ್ಲದ ಅನ್ಯಕ್ಕೊಡಂಬಡದೆನ್ನ ಮನಸು.
ನಿನ್ನವರಲ್ಲದೆ ಅನ್ಯರ ಸಂಗವ ಮಾಡಿದರೆ
ನರಕ ತಪ್ಪದೈ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೫೧ ॥

೭೫೨

ಸಂಗಸುಖದಲ್ಲಿ ಸಂಗಿಯೂ ಅಲ್ಲದಿಪ್ಪೆ ;
ನಿಸ್ಸಂಗ ಸುಖದಲ್ಲಿ ಸುಖವೆಂದೆಂಬೆ.
ಮತ್ತೆ ಸಂಗಕ್ಕೆ ಕಾರಣವಪ್ಪೆ ;
ಕಪಿಲಸಿದ್ಧಮಲ್ಲಿಕಾರ್ಜುನಾ, ನಿನ್ನ ಅಂಗ ಅನಂಗ. ॥ ೭೫೨ ॥

೭೫೩

ಸಂತಪಿಸು ಸಂತವಿಸಲಾರೆ ನನ್ನ ಮನವ.
ಮುನ್ನಿನವರು ಮಾಡಿ ಕೂಡಿದ ಪರಿಯ ನೆನೆದು ನಾನು
ಬೇಯುದ ಬೇಗೆಯ[ಲಿ] ಬೆಂದೆನಯ್ಯಾ,
ಇಂತಲ್ಲದೆ, ಮರ ಕಿಚ್ಚು ಹತ್ತಿದಂತಾದೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೫೩ ॥

೭೫೪

ಸಂದು ಸವೆಯಿತ್ತು, ಹಂಗು ಹರಿಯಿತ್ತು.
ಆಜ್ಞಾದೀಕ್ಷೆ ಪ್ರಬಲವಾಯಿತ್ತು.

ಸ್ವಾನುಭಾವದೀಕ್ಷೆ ಸಂಬಂಧಿಸಿತ್ತು.
ಬೋಧಾದೀಕ್ಷೆ ಭೇದಿಸಿತ್ತು.
ಅಯ್ಯಾ, ನಿಮ್ಮ ಸಾಧಿಸಿತ್ತು ಒಳಗುಮಾಡಿತ್ತು.
ಅರಿದೂ ಇನ್ನೊಂದೂ ಇಲ್ಲ,
ಕಪಿಲಸಿದ್ಧಮಲ್ಲಿಕಾರ್ಜುನಾ. ‖ ೭೫೪ ‖

೭೫೫

ಸಂಭ್ರಮದ ಶರಧಿಯೊಳಿಂಬಿನಲಿ ಪರಿತಪ್ಪಾಗ
ಗಂಭೀರ ಉಳ್ಳುದನೊಂದನು ಕಾಣೆ
ಎನ್ನ ಬಿಡು ತನ್ನ ಬಿಡೆಂಬುದು ತನುಗುಣ ಸಂಬಂಧ.
ಎನ್ನ ಬಿಡು ತನ್ನ ಬಿಡೆಂಬುದು ಕಾಯವಿಕಾರ.
ದೆಸೆದೆಸೆವರಿದು ಪಸರಿಸುವ ಮನವನು
ನಿಮ್ಮ ವಶಕ್ಕೆ ತಂದಿರಿಸಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ‖ ೭೫೫ ‖

೭೫೬

ಸಂಸಾರ ತೆಪ್ಪದೊಳಗೆ ಆನೀಗ
ಅದ್ದಿ ಅಳಲುತ್ತ ಬಳಲುತ್ತಿಪ್ಪೆನಯ್ಯಾ,
ಬೇಗ ಬಾರಾ ಬಾರಾ ಅಯ್ಯಾ
ವಜ್ರಲೇಪದಲಿ ಬದ್ದಿದೇನೆ
ಬೇಗ ಬಂದೆತ್ತಯ್ಯಾ, ಹೆತ್ತಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ‖ ೭೫೬ ‖

೭೫೭

ಸಂಸಾರವನು ಹೊಸೆದುಬಿಟ್ಟೆ ತಂದೆ
ವಶಮಾಡಿ ಕೊಟ್ಟೆಯಯ್ಯಾ ತ್ರಯಿಲಿಂಗ ಮೂಲಮತವ.
ಜಗದೀಶನನು[ಅ]ವಗಹಿಸಿ ಕೊಟ್ಟ ಗುರು ಚೆನ್ನಬಸವಣ್ಣನಯ್ಯಾ.
ಭವದೂರನಪ್ಪೆ ನಾನಿಹಪರವೆಲ್ಲರಲ್ಲಿ,
ಕಪಿಲಸಿದ್ಧಮಲ್ಲಿಕಾರ್ಜುನಾ. ‖ ೭೫೭ ‖

೭೫೮

ಸಂಸಾರವೆಂಬ ವಿಪರೀತ ರೂಪು ಕಾಡಿತಯ್ಯಾ
ಎನ್ನ ಭವ ಭವದಲ್ಲಿ ಕಾರ್ಪಣ್ಯದಂದ.
ನೆನೆಯಲರಿಯದೆ ಕಾಮುಕನಾಗಿ ಕರ್ಮಕ್ಕೊಳಗಾದೆನಯ್ಯಾ.
ಗುರುಕರುಣವಿಡಿದು ಇವ ಕಳಿದುಳಿವೆನು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೫೮ ॥

೭೫೯

ಸಂಸಾರದ ವ್ಯಾಧಿಗೆ ಗುರು ಹೇಳಿದ ಔಷಧಂಗಳ ಮನದಲ್ಲಿಕ್ಕಿ,
ಮೂದಲಿಸಿ ಹೋಗಲೀಯದೆ ವಿಚಾರಿಸಿ ನೋಡುತಿದ್ದೆನು.
ಸಂಸಾರಂಗಳು ಮುಟ್ಟಲಮ್ಮದೆ ಪೆರಹಿಂಗಿ ತೇರ್ಗಟ್ಟಿದಂತೆ ನಿಂದು,
ಕಪಿಲಸಿದ್ಧಮಲ್ಲೇಶ್ವರದೇವರ ಶ್ರೀಪಾದಕ್ಕೆ ಬಟ್ಟೆಗೊಟ್ಟು
ಭಯಂಗೊಂಡು ನಿಂದು ಪೋಗಯ್ಯಾ ಪೋಗಯ್ಯಾ ಎನುತ್ತಂ ಬರವೆ ?
॥ ೭೫೯ ॥

೭೬೦

ಸಂಸಾರ ಭ್ರಮೆಯಿಂದಾಯಿತ್ತು ಅಜ್ಞಾನ,
ಅಜ್ಞಾನದಿಂದಾಯಿತ್ತು ಅಹಂಮಮತೆ,
ಅಹಂಮಮತೆಯಿಂದಾಯಿತ್ತು ಅತಿಪಾತಕ,
ಅತಿಪಾತಕದಿಂದಾಯಿತ್ತು ಭವಬಂಧನ.
ಈ ಭವಬಂಧನದ ಲಹರಿವಿಡಿದು,
ಹರಿಸುರಬ್ರಹ್ಮಾದಿಗಳು ಜ್ಞಾನರತ್ನವ ನೀಗಿ,
ಪ್ರಳಯಕ್ಕೊಳಗಾದರು, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೬೦ ॥

೭೬೧

ಸಂಸಾರವೆಂಬ ಘೋರ ಕಾಂತಾರದೊಳಗೆನ್ನನಾಸುರದಿ ಬಿಡದಿರಾ ಬೊಪ್ಪ.
ಎನ್ನ ಬೆಂಬಳಿಯೊಳಿರ್ದು ಸಾಕಾ ಬೊಪ್ಪ.
ಎನ್ನ ಹೊರೆಯುಳಿರ್ದು ಸಾಕಾ ಬೊಪ್ಪ.
ಈ ಪ್ರಿಯ ನಾಯಿ ತೋಡಿ ತಿನ್ನುತ್ತಿದೆ,

ಕಾಮನೆಂಬ ವೈರಿಗೊಪ್ಪಿಸದಿರೆನ್ನ ಜೊಪ್ಪ.
ಅವ್ವೆಯ ಮನೋನಾಥಾ, ನಿರಂಜನ ನಿರ್ಮಾಯ ನಿರವಯ,
ನಿಶ್ಶೂನ್ಯ ನಿರಾಲಂಬ ನಿರಾಭಾರಿ ನಿರ್ವ್ಯಸನಿ.
ಮುಕ್ತಿಸಾಮ್ರಾಜ್ಯಕ್ಕೊಡೆಯ ನೀನೆಯಯ್ಯಾ.
ನಿನ್ನನಗಲದಂತೆ ನಿನ್ನ ಶ್ರೀಪಾದದೊಳಿಂಬಿಡಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೭೬೧ ॥

೭೬೨

ಸಂಸಾರವೆಂಬ ರಾಹುವಿನ ಅಣಲೊಳಗೆ ಇದ್ದೆನಯ್ಯಾ ;
ಆವಾಗ ನುಂಗಿಹಿತೆಂದರಿಯೆ, ಆವಾಗ ಉಗುಳಿಹಿತೆಂದರಿಯೆನಯ್ಯಾ.
ಅದರ ಬಾಯಿಂದೆನ್ನ ತೆಗೆದು ಕಾಯಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೬೨ ॥

೭೬೩

ಸಂಸಾರವೆಂಬ ವಿಂಧ್ಯದೊಳಗೆ ಕಾಮನೆಂಬ ಕಳ್ಳನ ಕಂಡು
ಬೆಚ್ಚಿ ಬೆದರುತ್ತಿದ್ದೇನಯ್ಯಾ.
ಆ ಕಾಮನ ಕರೆದು ಎನ್ನ ನಿನ್ನವನೆಂದು ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೬೩ ॥

೭೬೪

ಸಕಲ ನಿಷ್ಕಲದೊಳಗೆ ಮುಖಲಿಂಗ ಮೂರರಲಿ
ಕುರುಹುಗೆಟ್ಟಿಪ್ಪುದದು ಸಕಲದಲ್ಲಿ.
ಅಖಿಳಲೋಕಾರಾಧ್ಯ ಗುರುಕರುಣದಿಂದಲಾ
ತ್ರ್ಯಲಿಂಗವೊಂದಾದೆ ಕಪಿಲಸಿದ್ಧಮಲ್ಲಿಕಾರ್ಜುನನೆಂಬ
ಗುರುವಿನಾನಂದದಿಂ. ॥ ೭೬೪ ॥

೭೬೫

ಸಕಲ ನಿಃಕಲವ ಪೂಜಿಸಿಹೆನೆಂದೆಂಬೆ,
ಸಕಲವಾವುದು ನಿಃಕಲವಾವುದು ಹೇಳಾ.
ಸ್ವಾತಂತ್ರವ ಮೀರಿಪ್ಪುದೀಗ ಸಕಲ ;
ಪರಬ್ರಹ್ಮದ ಸೊಮ್ಮಾಗಿಪ್ಪುದೀಗ ಶಿವಯೋಗ !

ಈ ಪೂಜಾದ್ವಯವನರಿತ ಬಳಿಕ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಕೂಡುವೆ ಸಂದಿಲ್ಲದೆ. ॥ ೭೬೫ ॥

೭೬೬

ಸಕಲಾಗಮಸಾರ ನುಡಿಯಲ್ಲಿ
ನಿಸ್ಸಾರ ಶಂಕೆ ಸಂಭವ ಎನ್ನ ದುರಾತ್ಮನಲ್ಲಿ ;
ಅದೇನೆಂದಡೆ, ಪಾಪದ ಬಲೆಯಿಂದಾಗಲಿ ಮತ್ತಾವ ನಿಮಿತ್ತದಿಂದಾಗಲಿ,
ಘ್ರಾಣವಿಲ್ಲದರ ಲಕ್ಷ್ಯವೆಂತು ಕಪಿಲಸಿದ್ಧಮಲ್ಲಿಕಾರ್ಜುನ ತಂದೆ ? ॥ ೭೬೬ ॥

೭೬೭

ಸಕ್ಕರೆಯ ಬಿಟ್ಟು ರುಚಿಯ ತೆಗೆಯಬಹುದೆ ?
ಬೆಣ್ಣೆಯ ಬಿಟ್ಟು ಘೃತವ ತೆಗೆಯಬಹುದೆ ?
ಭೂಮಿಯ ಬಿಟ್ಟು ಜಗವ ಮಾಡಬಹುದೆ ?
ಜಂಗಮವಿರಹಿತ ಲಿಂಗವಿಲ್ಲ, ಲಿಂಗವಿರಹಿತ ಜಂಗಮವಿಲ್ಲ ಕೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೬೭ ॥

೭೬೮

ಸಕ್ಕರೆಯ ಆಕಾರ, ರುಚಿಯು ನಿರಾಕಾರ ;
ಲಿಂಗವಾಕಾರ, ಜಂಗಮ ನಿರಾಕಾರ ;
ಬೆಣ್ಣೆ ಆಕಾರ, ಘೃತ ನಿರಾಕಾರ.
ಆಕಾರ ಬಿಟ್ಟು ನಿರಾಕಾರವಿಲ್ಲ, ನಿರಾಕಾರ ಬಿಟ್ಟು ಆಕಾರವಿಲ್ಲ.
ಲಿಂಗ ಜಂಗಮವೆಂಬುಭಯ ಶಬ್ದ ಒಂದೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೬೮ ॥

೭೬೯

ಸಜ್ಜನ ನಾನು ಎನ್ನ ಗಂಡನೆ ನೀನು
ಮತ್ತನ್ಯಕ್ಕೆಳಸಲಾಪೆನೆ ಅಯ್ಯಾ.
ಕಾಮ ಕ್ರೋಧ ಲೋಭ ಮೋಹವು
ಎನ್ನ ಆಮಿಷ ತಾಮಸ ವಿಕಾರಂಗಳು ಅನಂತವಾಗಿ
ಎನ್ನ ತಮ್ಮ ಪ್ರಭೆಯನೆಯ್ದದ ಮುನ್ನ

ನಿನ್ನ ನಿಜರೂಪನೀಯಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೭೯ ॥

೭೭೦

ಸನಕ ಸಾನಂದ ಮುನಿಜನಂಗಳು ಅರಿಯರಯ್ಯಾ ನಿಮ್ಮಂತುವನು.
ಒಂದರಲ್ಲಿ ಹಲವಾಗಿ, ಹಲವರಲ್ಲಿ ಒಂದಾಗಿ,
ಸಾಕಾರ ನಿರಾಕಾರವಾಗಿಪ್ಪಲ್ಲಿ ಏಕವಾಗಿಪ್ಪೆ
ಕಪಿಲಸಿದ್ಧಮಲ್ಲಿನಾಥ ನೀನೆಯಾಗಿ. ॥ ೭೭೦ ॥

೭೭೧

ಸಮತೆಯೆ ಭಕ್ತಿ, ಸತ್ಯವೆ ಲಿಂಗ
ಅಸತ್ಯವೆ ಅನ್ಯದೈವ, [ರೋಷವಿಲ್ಲದಿ]ಹುದೆ ಪೂಜೆ
ಆಸೆಯಿಲ್ಲದಿಹುದೆ ಪ್ರಸಾದ.
ಇಷ್ಟಲಿಂಗದಲ್ಲಿ ನಿರತನಾಗಿದ್ದಡೆ
ಕಪಿಲಸಿದ್ಧಮಲ್ಲೇಶ್ವರ ದೇವರದೇವ ! ॥ ೭೭೧ ॥

೭೭೨

ಸಮನಿಸದಯ್ಯಾ ಭವಿಸಂಗ ಭಕ್ತಂಗೆ.
ಸಮನಿಸದಯ್ಯಾ ಲಿಂಗಪ್ರಾಣಿಗೆ ಅನರ್ಪಿತ.
ಸಮನಿಸದಯ್ಯಾ ಪ್ರಾಣಲಿಂಗಸಂಬಂಧಿಗೆ ಬಹುಲಿಂಗಪ್ರಸಾದ.
ಇಂತೀ ಮೂರಕ್ಕಳುಕದಿದ್ದನಾದಡೆ, ನಾಯಕನರಕದಲ್ಲಿಕ್ಕುವ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೭೨ ॥

೭೭೩

ಸಮನಿಸುವ ಸುಖಕಿನ್ನು ಸಮನಿಸುವುದಾವುದಯ್ಯಾ ?
ಕರಣ ಕಾನನದೊಳಗೆ ಹೊಲಬುದಪ್ಪಿವೆನಯ್ಯಾ.
ದೆಸೆಗೆಟ್ಟವ ನಾನಯ್ಯಾ : ಎನ್ನ ನಿಮ್ಮಂತೆ ಮಾಡಯ್ಯಾ.
ಮೂರರಿಂದ ಮುಕ್ತಿಯಾದ ಆರೂಢದ ಬೇಟವನೀಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೭೭೩ ॥

೭೭೪

ಸಮಯ ಸಮಯೋಚಿತ ಭಾವ ಭಾವನಷ್ಟವಾಗಿ
ಕಾಲಕರ್ಮವಿಲ್ಲದೆ ಹೋಯಿತ್ತು ;
ತತ್ವಜ್ಞಾನ ಪ್ರಕಾಶಿಕೆಯಡಗಿತ್ತು ;
ಆಧಾರಾಧೇಯವಡಗಿತ್ತಯ್ಯಾ ;
ನಿರಾಧಾರ ಸಮಯವಾಯಿತ್ತಯ್ಯಾ.
ಬಸವ ಬಸವಾ ಬಸವಾ ಎಂಬ ಅನುಭಾವ ಬಯಲಾಯಿತ್ತಯ್ಯಾ.
ಎಸಳೆಂಟರ ಹಸನಳಿಯಿತ್ತಯ್ಯಾ ಬಸವಾ ನಿಮ್ಮಲ್ಲಿ.
ನಿಜಯೋಗಸಮಾಧಿಯಾಯಿತ್ತಯ್ಯಾ ಬಸವಾ ನಿಮ್ಮಲ್ಲಿ,
ಕಪಿಲಸಿದ್ಧಮಲ್ಲಿನಾಥಯ್ಯಾ, ಬದುಕಿದೆನು ನಾನಿಂದು. ॥ ೭೭೪ ॥

೭೭೫

ಸಮಾಧಿಯ ಸಮ ತನ್ನ ಸಮಾಧಿಯ ಮಾಡಲೆಂದು,
ವೀರವಿಕ್ರಮಚೋಳನ ದೇಹ ಬಯಲಿಗೆ ಬಾಯಿದೆರದು ಬರಲಿಲ್ಲವೆ ?
ಸಮಾಧಿಯ ಮುಂದೆ ತನ್ನ ಸಮಾಧಿಯ ಮಾಡಲೆಂದು,
ರಾಜೇಂದ್ರಚೋಳನ ದೇಹ ಎದ್ದು ನಮಿಸಿ ಸಮಾಧಿಯ ಹೊಗಲಿಲ್ಲವೆ ?
ಇದರ ಕೀಲ ಪ್ರಮಥರು ಅರಿಯರೆ ?
ಇದರಂದವ ಗೌರಿ ನಾಗಾಯಿ ಅರಿಯಳೆ ?
ಇದರ ಕೀಲ ಕಪಿಲಸಿದ್ಧಮಲ್ಲಿಕಾರ್ಜುನನ ಶರಣನ ರಾಣಿ
ನೀಲಾಂಬಿಕೆಯರಿಯಳೆ ಸೊಡ್ಡಯ್ಯಾ ? ॥ ೭೭೫ ॥

೭೭೬

ಸರ್ಬರಾದಿ ಅಂತ್ಯದಲ್ಲಿ ಒಬ್ಬನೆ ಇದ್ದೆಯಯ್ಯಾ,
ಸರ್ವಗತ ನೀನೆ ಕಂಡಯ್ಯಾ.
ಒಂದೊಂದು ಪರಿಯಲ್ಲಿ ಆಡುವ ಆನಂದಗುಣವ ನೋಡಯ್ಯಾ.
ಶೂನ್ಯಶೂನ್ಯ ! ಕಾಯದ ಕರಸ್ಥಲಕ್ಕೆ ದೇವನಾದ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೭೬ ॥

೭೭೭

ಸರ್ಪನ ಮೇಲೆ ಪೃಥ್ವಿ ರಚಿಸಿದೆಂದು,
ಸಮುದ್ರಂಗಳೇಳು ಹಾಸದಂದು,

ಅಷ್ಟದಿಗುದಂತಿಗಳು ಹುಟ್ಟದಂದು,
ಶಂಖು ಶಲಾಕೆಯಿಲ್ಲದಂದು,
ಗಂಗೆ ಗೌರೀವಲ್ಲಭರಿಲ್ಲದಂದು,
ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಈ ಐವರೂ ಹುಟ್ಟದಂದು,
ಈ ಐವರ ತಾಯಿತಂದೆ ಇಲ್ಲದಂದು
ನಿಜಗುರು ಕಪಿಲಸಿದ್ಧಮಲ್ಲೇಶ್ವರಾ, ನಿಮ್ಮ ಹೆಸರೇನಯ್ಯಾ ? || ೭೭೭ ||

೭೭೮

ಸರ್ವವನೂ ಕಂಡು ಕಂಠಣಿಸದೆ ಓಸರಿಸದೆ
ಒಳಕೊಂಡಿಪ್ಪುದದಕೆ ಎಂತಿರಬೇಡಾ ಹಿರಿಯರ ಮನ ?
ಮನವಿಚ್ಛಂದವಾಗದದೊಂದೆಯುಂದದಲ್ಲಿಪ್ಪಂತಪ್ಪ
ನಿಮ್ಮದೊಂದು ಸಮತಾಗುಣ ಎನ್ನನೆಂದು ಬಂದು ಹೊದ್ದಿಪ್ಪುದು ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. || ೭೭೮ ||

೭೭೯

ಸರ್ವಾತ್ಮ ನೀನೆನ್ನ ಸರ್ವನನು ಮಾಡಿದೆ
ಉರ್ವಿಯೊಳಗಣ ಶುದ್ಧಿಯ ಮರೆಸಿದಿರಿ ನಿಮ್ಮ
ನಿರ್ವಾಣಪದವಿತ್ತ ಗುರು ಬಸವಣ್ಣನೈ
ಕಪಿಲಸಿದ್ಧಮಲ್ಲಿಕಾರ್ಜುನಾ. || ೭೭೯ ||

೭೮೦

ಸಾಗರದ ಮಧ್ಯದಲಿ ಸಾಧಿಸುವ ಬಹಿರಂಗ
ಆಗಮಂಗಳಿಗದು ಹೊರಗು ತಾನು.
ಯೋಗಕ್ಕೆ ಮೂಲವದು, ಯೋಗಕ್ಕೆ ಸಿದ್ಧವದು,
ಯೋಗಕ್ಕೆ ಅತ್ಯಂತ ಪರಮಸೀಮೆ.
ಸಾದಾಖ್ಯ ತತ್ವದಲಿ ಸಂದು ಸವದರಿಗಿಲ್ಲ,
ಆದ್ಯಕ್ಷರದ್ವಯದ ಪರಿಯಿಂತುಟು.
ಮಹಾದೇವರೊಡೆಯ ಕಪಿಲಸಿದ್ಧಮಲ್ಲಿಕಾರ್ಜುನನ
ಛೇದಿಸುವ ಯೋಗಿಯನು ಕಂಡು ನಗುವೆ. || ೭೮೦ ||

೭೮೧

ಸಾಗರ ಸತ್ಯವ್ವೆ, ಹಲಬರ ಮುಖಪ್ರಭಾಳೆ, ನೀ ಬಾರವ್ವಾ.
ಕಂಗಳ ಕೋಮಳೆ ಕಿವಿಗಳ ಸಂಬಂಧಿಯೆ, ನೀ ಬಾರವ್ವಾ.
ಆತನ ಕಂಗಳ, ಕಿವಿಗಳ ಪರಿಯಾಣಕ್ಕೆ
ಚೊಕ್ಕ ಸರದೋಗರನೆತ್ತುವೆ, ನೀ ಬಾರವ್ವಾ,
ಎನ್ನ ಕಪಿಲಸಿದ್ಧಮಲ್ಲಿಕಾರ್ಜುನಯ್ಯಂಗೆ. ॥ ೭೮೧ ॥

೭೮೨

ಸಾರಗ್ರಾಹಿಗಳಿಬ್ಬರು ಕೇಳಿರಯ್ಯಾ.
ಕೊಡನೆಂಬನ ಬಳಿಬಳಿಯಲ್ಲಿ
ಕೊಟ್ಟಾರ ಬರುತ್ತಿಪ್ಪುದೇಕೆಯಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ,
ಕಟ್ಟಿತ ಕಳೆಯಲಾರದೆ
ಇಟ್ಟುದನೋಸರಿಸಲಾರದೆ ಬಪ್ಪರಯ್ಯಾ. ॥ ೭೮೨ ॥

೭೮೩

ಸಾರಥಿಯ ಮುಳ್ಳು ಕೊನೆಯಲ್ಲಿ ಸಾಗರವಡಗುವುದೆಂತಯ್ಯ ?
ಬಾವಿಗೆ ಸೊಲ್ಲಗೆಯೊಳಗೆ ಲೋಕವಡಗುವುದೆಂತಯ್ಯ ?
ಈ ಪರಿಗಳ ಈ ಪರಿಗಳ ಭಕ್ತರ ಹೃದಯದಲ್ಲಿಪ್ಪ
ಕಪಿಲಸಿದ್ಧಮಲ್ಲಿನಾಥಯ್ಯ. ॥ ೭೮೩ ॥

೭೮೪

ಸಾಲೋಕ್ಯದಲ್ಲಿಪ್ಪರು ಕೋಟ್ಯನುಕೋಟಿ ;
ಸಾಮೀಪ್ಯದಲ್ಲಿಪ್ಪರು ಕೋಟ್ಯನುಕೋಟಿ ;
ಸಾರೂಪ್ಯದಲ್ಲಿಪ್ಪರು ಕೋಟ್ಯನುಕೋಟಿ ;
ಸಾಯುಜ್ಯದಲ್ಲಿಪ್ಪರು ಕೋಟ್ಯನುಕೋಟಿ ;
ನಂದಿವಾಹನರನೇಕ, ಗೌರೀರಮಣರನೇಕ ;
ಸಿಂಧುಜೂಟರನೇಕ, ಚಂದ್ರಮೌಳಿಗಳನೇಕ.
ಇಂತಪ್ಪ ಗಣಂಗಳ ರೋಮದಲ್ಲಿ ಅನೇಕ ಬ್ರಹ್ಮಾಂಡಗಳು.
ಇಂತಪ್ಪ ಗಣಂಗಳು–

ವೀರಭದ್ರದೇವರ ಜೆಡೆಮುಡಿಕೇಶಂಗಳಲ್ಲಿ ಅನಂತಗಣಂಗಳುದಯ ವಿಸ್ತಾರವು.
ಇದೇನು, ನಿಮ್ಮರವಿಗೆ ದುರ್ಲಭ ಮಹತ್ವವೆಂಬೆನೆ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೮೪ ॥

೭೮೫

ಸಿಂಬಿಗೆ ರಂಭೆತನವುಂಟೆ ?
ಸಂಭ್ರಮವಳಿದುದಕ್ಕೆ ನವರಸದಂಗದ ಕಳೆಯುಂಟೆ ?
ಡಿಂಗರಿಗಂಗೆ ಸಮವೆಂಬ ಸಂಭ್ರಮವುಂಟೆ ?
ಪರುಷದ ದೆಸೆಯಿಂದ ಪಾಷಾಣದ ಕುಲ ಹರಿವಂತೆ ನೀ ಬಂದೆಯಲ್ಲಾ
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಕಪಿಲಸಿದ್ಧಮಲ್ಲಿಕಾರ್ಜುನಲಿಂಗದಲ್ಲಿ
ಪ್ರಭುದೇವರ ಕಾರುಣ್ಯದಿಂದ ಬದುಕಿದೆ. ॥ ೭೮೫ ॥

೭೮೬

ಸಿದ್ಧ ಪದ್ಮಾಸನದಲ್ಲಿ ಕುಳ್ಳಿರ್ದು
ಅಧೋದಯವನೆತ್ತುತ್ತೈದಾನೆ.
ಹೊದ್ದಿದ ಪ್ರಪಂಚುಗಳೆಲ್ಲವ ಸುಟ್ಟು
ಅಧೋದಯವನೆತ್ತುತ್ತೈದಾನೆ.
ಅಧೋದಯುದಗ್ನಿ ಶುದ್ಧ ತನ್ನ ಪ್ರವೇಶಿಸಿದಡೆ,
ಮುಗ್ಧತ್ವ ಹೋಯಿತ್ತು ಕಾಣಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೮೬ ॥

೭೮೭

ಸಿರಿಯಾಯಿತ್ತೆಂದು ಉತ್ಸಾಹದಿಂದುಬ್ಬದೆ
ಕೆಟ್ಟಿತ್ತೆಂದು ಮನನೊಂದು ಖಿನ್ನವಾಗದಂತೆ
ಇರಬೇಡಾ, ಹಿರಿಯರ ಮನ ?
ಮನ ವಿಚ್ಛಂದವಾಗದೊಂದೆಯುಂದದಲ್ಲಿಪ್ಪಂತಪ್ಪ
ನಿಮ್ಮದೊಂದು ಸಮತಾಗುಣ ಎನ್ನನೆಂದು ಹೊದ್ದಿಪ್ಪುದು ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೮೭ ॥

೭೮೮

ಸೀಮೆಗೆಟ್ಟು ಬ್ರಹ್ಮದಾನತದ ಸಂಬಂಧ,
ಆದಿ ಅಕ್ಷರವೈದ ಮುಖವ ಮಾಡಿ,

ಭಾವ ಮನ ಕರಣದ ಹೊರಗಿಟ್ಟು ಸರ್ವಾಂಗವನು
ವೇಧಿಸಿದಾತ ಗುರು ಕಪಿಲಸಿದ್ಧಮಲ್ಲಿಕಾರ್ಜುನ. ॥ ೭೮೮ ॥

೭೮೯

ಸುಖವ ಹಡೆದೆನೆಂದು ಹಡೆದಡೆ,
ನಿಬ್ಬೆರಗದಿಂದ ಕೈಕೊಂಬುದೀ ದುಃಖವ.
ದುಃಖಕ್ಕೆ ಎಡೆಯಿಲ್ಲ ;
ಸಂಸಾರದೊಳಗಣ ಸುಖವಿಂತುಟು.
ಮತ್ತಂ ಕಡುದುಃಖವಪ್ಪುದು.
ಈ ದುಃಖವನೆಂದಿಂಗೆ ನೀಗಿ, ಎಂದು ನಿಮ್ಮೊಡಗೂಡಿ,
ಬೇರಾಗದೆಂದಿಪ್ಪೆನೊ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೮೯ ॥

೭೯೦

ಸುಖಮುಖವಾಗಿ ಸುಖಾಸೀನವಾಗಿ
ಆಧಾರಜ್ವಾಲೆಯನೆತ್ತಿ, ಕುಂಡಲಿಯ ಭುಜಗನ ಹೊಡೆದೆಬ್ಬಿಸಿ
ದಂಡನಾಳದ ತುದಿಯ ಮುಂದಣ ಮುಂಬಾಗಿಲ ಕಳೆದು ನೋಡಲು
ತ್ರಿಕೂಟಗಿರಿಯಾಗ್ರದಲ್ಲಿ ಮೇಲೆ ಸಿಂಹಾಸನವಿಕ್ಕಿ
ನಿಸ್ಸೀಮ ಕುಳ್ಳಿರ್ದನಯ್ಯಾ ನಮ್ಮ ನಿಜಗುರು ಸ್ವತಂತ್ರ
ಕಪಿಲಸಿದ್ಧಮಲ್ಲಿಕಾರ್ಜುನ ದೇವರದೇವನು. ॥ ೭೯೦ ॥

೭೯೧

ಸುಗಂಧ ಎಣ್ಣೆ ನೀರಡಿಕೆಗೆ ಕುಡಿಯಬಹುದೆ ?
ಬಂಗಾರದ ಸಲಾಕೆ ಎದೆಯಲ್ಲಿ ಒತ್ತಬಹುದೆ ?
ವಜ್ರದ ತುಂಡು ತಿನ್ನಬಹುದೆ ?
ಗುರುಭಕ್ತಿಯಲ್ಲಿ ಕಪಿಲಸಿದ್ಧಮಲ್ಲಿಕಾರ್ಜುನ ಶರಣನ
ನುಡಿಯ ಕೇಳಿ ಸುಮ್ಮನಿರಬಹುದೆ ? ॥ ೭೯೧ ॥

೭೯೨

ಸುಗತಿಯೆಂಬ ಪಟ್ಟಣದಲ್ಲಿ ನಿತ್ಯವೆಂಬ ತಾಳತ್ರಯದೊಳಗೆ
ಆರರ ಗೀತವ ತಪ್ಪದೆ ಹಾಡುತ್ತಲಿ,

ಮೂವತ್ತಾರು ರೂಪುಗಳೆಂಬವನೆ ಮೀರಿ,
ಈ ಮೂವತ್ತಾರರಲ್ಲಿ ಜವನಿಕೆಯುಡುಗೆ
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನೀ ಕೊಡುವುದಕ್ಕೆ ಏನೂ ಇಲ್ಲದಿರೆ ನಿನ್ನನೆ ಒಚ್ಚತಗೊಟ್ಟಡೆ
ನಾ ಕರ ಬೆರಗಾದೆನು. ॥ ೭೯೨ ॥

೭೯೩

ಸುಗುಣಮಣಿಮಾಲೆಗಳಗಣಿತ ಮಹಿಮನ ಹೊಂದಲಶಕ್ಯವಲ್ಲ.
ಕುಗುಣಗಳಂತರಂಗ ಶಿವನಲ್ಲಿ ಬೆರೆಯಲುದಯವಾದಡೆ,
ಅಲ್ಲಿ ಉಪಾಯವೆಂತು ಕಪಿಲಸಿದ್ಧಮಲ್ಲಿಕಾರ್ಜುನಾ ? ॥ ೭೯೩ ॥

೭೯೪

ಸುಜನ ಸಂಗತಿಯೊಳಗೆ ಅವ್ಯಯನು ತಾನೀಗ
ಭಜಿಸಿ ಅರಸುವವರಿಗೆ ತಾನು ಸಿಕ್ಕ
ತನುವನ್ನು ಬೇಡದೆ ಅನ್ಯವನು ರಕ್ಷಿಸಿದೆ
ಉನ್ನತವು ಸದ್ಭಕ್ತಿ ಸೊಮ್ಮುದಾತ
ಕರ್ಮವನು ಮೀರಿದನು ಕೇಳ
ಅತಿಶಯದ ಭಕ್ತಿಯಿಲ್ಲಿ ದಿಟಘಟಿತ ಸಂಪನ್ನ
ನಿತ್ಯ ಭಕ್ತಿ ಸನ್ನಿಹಿತ ನಿಟಿಲಾಕ್ಷನು
ಕುಟಿಲಗಳೆದಾನೀಗ ಕಂಡು ಸುಖಿಯೈ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೯೪ ॥

೭೯೫

ಸುರಭಿಮಧ್ಯದಲಿಪ್ಪ ವಿರಳಕೂಪವ ನೋಡೆ
ಅರಿದಯ್ಯ ಅರಿದಯ್ಯ ಭಕ್ತಿಪಥವು.
ಕರುಣಾಕರನೆ ಕಪಿಲಸಿದ್ಧಮಲ್ಲೇಶ್ವರಾ,
ತೆರಹಿಲ್ಲದಭವನೆ ಕುರುಹುಗೆಡಿಸಾ. ॥ ೭೯೫ ॥

೭೯೬

ಸುರುಚಿರ ಸ್ಥಾನದಲ್ಲಿ ಮೂರು ಗುಂಡನಿಟ್ಟು ಸುಡುತ್ತೈದಾರೆ
ಕಾಯ ಕರಣೇಂದ್ರಿಯ ಗುಣಂಗಳ ಹುಳ್ಳಿಯ ಮಾಡಿ.

ಕಾಯ ಕರಣೇಂದ್ರಿಯಗಳ ಹುಳ್ಳಿ ಸವೆದು ಅಜಲೋಕವ ತಾಗಿ,
ಅಲ್ಲಿರ್ದ ಶ್ವೇತಜಲ ಪ್ರವಾಹವಾಗೆ, ಆದನುಂಡು,
ನಿತ್ಯಮಹೋತ್ಸಾಹನಾದೆ ಕಾಣಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೯೬ ॥

೭೯೭

ಸೂಕ್ಷ್ಮಕರದಲ್ಲಿ ಶುದ್ಧಸಿಂಹಾಸನವನಿಕ್ಕಿ ಆಕಾರವನರ್ಚಿಸಿ,
ಆನಂದವನೆಯ್ದಿಪ್ಪವರ ತೋರಯ್ಯಾ, ಎನಗೆ ;
ಅಯ್ಯಾ ನಿಮ್ಮ ಧರ್ಮ.
ಅವರ ಐಕ್ಯತ್ರಯದಲ್ಲಿ ಅನಿಮಿಷರೆಂಬೆ ;
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ, ನಿಮ್ಮಾಣೆ, ನೀವೆ ಎಂಬೆ. ॥ ೭೯೭ ॥

೭೯೮

ಸೂಕ್ಷ್ಮಕರದಲ್ಲಿ ಶುದ್ಧಸಿಂಹಾಸನವನಿಕ್ಕಿ
ಆಕಾರವನರ್ಚಿಸಿ
ಆನಂದವನೆಯ್ದಿಪ್ಪವರನೆನಗೆ ತೋರ !
ನೆನಹೆ ಮನೆಯಾಗಿ, ಆ ಮನೆಯೆ ಮತಿಯಾಗಿ,
ಆ ಮತಿಯೆ ಮಹಾಬೆಳಗಿನ ಕೂಟವಾಗಿ ಇಪ್ಪವರ ಎನಗೆ ತೋರಾ,
ಅನಂಗವಿದಾರಣ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೯೮ ॥

೭೯೯

ಸೂಕ್ಷ್ಮನೈ ನೀನು.
ಲೋಕವೀರೇಳರ ಧಾರಣೆ ರೋಮಾಂತ್ಯದಲ್ಲಿ
ಬಹಳವಪ್ಪನ ಅಯ್ಯ ನಿಮ್ಮ
ಸೂಕ್ಷ್ಮಮಂ ಮಾಡಿ ಇತ್ತ ಗುರು ಚೆನ್ನಬಸವಣ್ಣನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೯೯ ॥

೮೦೦

ಸೂತಕ ಪಾತಕ ವಿರಹಿತವಾದಡೆ,
ಆತನ ತನು ಸಾಕ್ಷಾತ್ ಶಿವನ ತನು ;
ಆತ ನಿತ್ಯ ಕೇವಲ ಮುಕ್ತ ನೋಡಾ,

ಕಪಿಲಸಿದ್ಧಮಲ್ಲಿಕಾರ್ಜುನಾ,
ಶಿವಲಿಂಗವಿಡಿದ ಮಾಹೇಶ್ವರನು. ॥ ೮೦೦ ॥

೮೦೧

ಸೇವ್ಯನಾಗಿ ಸ್ವಯವಾದೆ, ಸಂಗಿಯಾಗಿ ನಿಸ್ಸಂಗಿಯಾದೆ.
ಆನಂದನಾಗಿ ಅನಾಮಯನಾದೆ.
ಸರ್ವದೊಳಗಾಡಿ ಸಾದಾಖ್ಯತತ್ವವ ಮೀರಿದೆ.
ಕಪಿಲಸಿದ್ಧಮಲ್ಲಿಕಾರ್ಜುನಲಿಂಗಾ,
ನಿಜಸ್ವರೂಪವನರುಹಿ ಎನಗೆ ಚುಳುಕಾದೆ. ॥ ೮೦೧ ॥

೮೦೨

ಸೊಲ್ಲಡಗಿ ಆಲಲ್ಲಿ (?) ಹದುಳಿಗನಾಗಿದ್ದೆನೆಲೆಯಯ್ಯ.
ಎಲ್ಲಾ ಠಾವಿನಲ್ಲಿ ನೀನಿಪ್ಪನೆಂದು ತೊಳಲಿ ಬಳಲಿ ಬಂದೆ.
ಸಲ್ಲಲಿತ ಗುರುವೆ,
ಎನಗೆ ಸೊಲ್ಲನರುಪಿ ಬ್ರಹ್ಮವಿಪ್ಪ ನೆಲೆಯ ತೋರಿದ ಗುರುವೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೦೨ ॥

೮೦೩

ಸೋಂಕಿನ ಸುಖ ಮೊದಲಾದವನೆಲ್ಲವನು ಚರಲಿಂಗಕ್ಕರ್ಪಿಸುವೆ.
ಆ ಅರ್ಪಿತಮುಖದಲ್ಲಿ ಇಷ್ಟಲಿಂಗವನರಿಯದೆ ಚರಲಿಂಗಕ್ಕರ್ಪಿಸುವೆ.
ಆ ಚರಲಿಂಗಕ್ಕರ್ಪಿಸಿ ಮಿಕ್ಕ ಶೇಷವನು ಇಷ್ಟಲಿಂಗಕ್ಕೆ ಓಗರವಾಗಿ ನೀಡಿ,
ಪ್ರಸಾದವಾಗಿ ಕೈಕೊಂಬೆ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೦೩ ॥

೮೦೪

ಸ್ಥಲ ಹದಿನಾಲ್ಕಕ್ಕೆ ಜಲಂಗಳೇಳಾಗಿ
ಪರಿವೇಷ್ಟಿಸಿಕೊಂಡಿಪ್ಪುದು.
ಆ ಸ್ಥಲ ಜಲಾದಿಗಳಿಪ್ಪವು ಒಂದು ವಟವೃಕ್ಷದ ಪತ್ರದಲ್ಲಿ.
ಇಂಥ ವಟವೃಕ್ಷಂಗಳು ಹದಿನಾಲ್ಕನು
ಅವಗ್ರಹಿಸಿಕೊಂಡಿ[ಪ್ಪ] ನಿಸ್ಸಯ ಸೀಮೆ
ಸರ್ವಾಂಗವನವಗ್ರಹಿಸಿಕೊಂಡಿಪ್ಪುದು

ಎಮ್ಮ ಶರಣರ ಕರಸ್ಥಲ
ವಾವುದ ಘನವೆಂಬೆವಾವುವ ಕಿರಿದೆಂಬೆನೆಲೆಯಯ್ಯ,
ಕಪಿಲಸಿದ್ಧಮಲ್ಲಿಕಾರ್ಜುನ. ॥ ೮೦೪ ॥

೮೦೫

ಸ್ತ್ರೀಯರ ಮೂವರ ಮುಂದುಗೆಡಿಸಿತ್ತು ಮೋಹ.
ಅರಿಯರವ್ವಾ, ತಾವೊಂದು ದೇಹವುಂಟೆಂದೆಂಬುದ.
ಅರಿಯರವ್ವಾ, ತಾವೊಂದು ರೂಪುಂಟೆಂದೆಂಬುದ.
ತ್ರಿಗುಣಾತ್ಮಕವೇಕರೂಪಾಗಿ, ರೂಪು ಅರೂಪಾದಡೆ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ನೆರೆವ ನೆನಹಿನಲ್ಲಿ ಲೀಯವಾದರು.
॥ ೮೦೫ ॥

೮೦೬

ಸ್ಥೂಲ ಸೂಕ್ಷ್ಮ ಕಾರಣನೆಂದೆಂಬರಲ್ಲಾ ನಿನ್ನನು.
ಆದರ ಒಂದು ಮುಂದನರಿಯರು : ಬಂದ ಹಾಂಗೆ ನುಡಿವರು.
ಸ್ಥೂಲಕ್ಕೆ ನೆಲೆ ಯಾವುದು, ಹೇಳಿಹೆ ಕೇಳಿರಾ ಮನುಜರಿರಾ.
ಸ್ಥೂಲವದು ಅನೇಕ ಬ್ರಹ್ಮಾಂಡಂಗಳ ಮೀರಿಪ್ಪುದು ;
ಅದು ಸ್ಥೂಲವೆ ? ಅಲ್ಲ. ಹಾಂಗಿರಲಿ.
ಶ್ರೀಗುರುಸ್ವಾಮಿ ವಿಸ್ತಾರ ವಿಸ್ತಾರ ವಿಸ್ತಾರವೆಂದು
ಕೊಟ್ಟ ಲಿಂಗವೀಗ ಸ್ಥೂಲ.
ಆ ಲಿಂಗವು ಸಕಲ ವ್ಯಾಪ್ತಿಯ ತನ್ನೊಳಗೆ ಇಂಬಿಟ್ಟುಕೊಂಡ ಕಾರಣ
ಸೂಕ್ಷ್ಮವಾದ.
ಶಿಷ್ಯಕಾರಣ ಪರಶಿವಮೂರ್ತಿಯಾದ ಕಾರಣ ಕಾರಣವಾದ.
ಎಲೆ ಗುರುವೆ, ಲಿಂಗವೆ, ಜಂಗಮವೆ,
ನೀವು ಒಂದಾದ ಭೇದವ ಲೋಕದ ಜಡರೆತ್ತ ಬಲ್ಲರು ?
ಬಸವಣ್ಣ ಬಲ್ಲ. ಆ ಬಸವಣ್ಣ ಅವ್ವೆಯ ಮನೋನಾಥ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಬಸವಣ್ಣನ ಪ್ರಸಾದವ ಕೊಂಡು ಭವಂ ನಾಸ್ತಿಯಾಗಿ ಬದುಕಿದೆನು.
॥ ೮೦೬ ॥

೮೦೭

ಸ್ಥೂಲ ಸೂಕ್ಷ್ಮ ಕಾರಣವೆಂಬ ತನುಗಳ ಭೇದಂಗಳ
ಭೇದಿಸುವ ಪರಿಯನರಿದೆನಯ್ಯಾ ನಿಮ್ಮಲ್ಲಿ.
ನೀ ಕಾರಣತನುವಾಗಿಪ್ಪಲ್ಲಿ ಅರಿದೆ.
ಮಹಾಕಾರಣವ ಅರಿದು ಅನಾಮಯನಾದೆ.
ಸ್ಥೂಲದಲಿ ಶುದ್ಧನಾದೆ, ಸೂಕ್ಷ್ಮದಲಿ ಸಿದ್ಧನಾದೆ, ಕಾರಣದಲಿ ಪ್ರಸಿದ್ಧನಾದೆ.
ನಿಮ್ಮ ಕರುಣಕಾನನದಲಿ ಕಂಗೆಟ್ಟೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೦೭ ॥

೮೦೮

ಸ್ಫಟಿಕದ ಘಟದಲ್ಲಿ ಭೇದಿಸುವ ಮಹಾಪ್ರಭೆಯು ಸಾರೋನ್ನತಿ ಹೇಗೆಂದಡೆ :
ಇತ್ತೆರನಾಗಿ ಇಬ್ಬರಲ್ಲಿ ಭವಿಸಿ
ಇಹಪರವೆಂಬ ಇದ್ದೆಸೆಗಿದ್ದೆಸೆಯಾಗಿ ಇಪ್ಪೆ ಎಲೆಯಯ್ಯಾ.
ನಿನ್ನ ಪರಿಯನು ಅರಿಯಬಹುದೆ ? ಮಲಭಾಂಡದೇಹಿಗಳಿಗೆ.
ಸಂಗಸುಖವಲ್ಲಿ ಸಂಗಿಸುವ ಕ್ರೀಯನರಿಯದೆ ರುಚಿಸುವ
ಅಜ್ಞಾನ ಜಡರುಗಳಿಗೆ ಎಂತಪ್ಪುದಯ್ಯಾ.
ಅಜ್ಞಾನಜಡರಿಗೆ ನಿಜಶಕ್ತಿ ನಿಜಜಂಗಮ ನಿಜಪ್ರಸಾದ ?
ಮಹಾನುಭಾವರಿಗಲ್ಲದೆ ನಿಮ್ಮ ಸಂಗ ಸಮನಿಸದು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೦೮ ॥

೮೦೯

ಸ್ವಾಮಿ ಸ್ವಾಮಿ ಅಂಗ ಲಿಂಗ ಸಮರಸವ
ಅರಿದರಿದು ಅರಿಯದಂತಿರ್ಪೆ ನಾನು ;
ಕರುಣಿಸಯ್ಯಾ, ಅಯ್ಯಾ ದಮ್ಮಯ್ಯಾ.
ನೀ ಲಿಂಗಾಂಗ ಸಮರಸದ ವಿಚಾರನಿಮಿತ್ತೆನ್ನ ತಂದುದ ಬಲ್ಲೆ.
ಲಿಂಗಾಂಗ ಸಮರಸ ನಿಮಿತ್ತ ತ್ರಿಕರಣಶುದ್ಧವಾಗಿ ನಾ ಬಂದುದ ಬಲ್ಲೆ.
ಎನ್ನ ಬೋಧಿಸಿ ಭವಕ್ಕೆ ಬಾರದನ ಮಾಡಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೦೯ ॥

೮೧೦

ಸ್ವಾಮಿ ಸ್ವಾಮಿ, ಗುರುಕರಜಾತ ಗುರುಕರಜಾತನಪ್ಪುದೆಂದು
ನುಡಿವರಯ್ಯಾ,
ಅನಾದಿ ಹರ ಪುರಾತನ ಗಣಂಗಳು.
ಗುರುವೆಂದಡೇನು, ಕರವೆಂದಡೇನು, ಜಾತವೆಂದಡೇನು ?
ಇದನರುಹಿ ಪಾವನ ಮಾಡಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೧೦ ॥

೮೧೧

ಹಡಗನೇರಿದವರ ಮುಂದೆ ಕಳುಹಿ
ಮರಳಿ ಹೋದೆಹೆನೆಂದರೆ ಹಡಗುಂಟೆ ?
ಮಚ್ಚಿದಲ್ಲಿ ಮಹೋತ್ಸವವನೆಯ್ದು ಮನವೆ
ಬಳಿಕ ಅರಸಿದರುಂಟೆ ?
ಅಯ್ಯನ ಸಂಗ ಅನಾದಿ ಸಂಸಿದ್ಧ ಯೋಗಮೂರ್ತಿ
ಗುರು ಸಿಕ್ಕಿದಲ್ಲಿ ಕೂಡು ಮನವೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೧೧ ॥

೮೧೨

ಹಡದೆನೆಂಬ ಸುಖದಿಂ ಹಡದಡೆ
ಮತ್ತಂತು ನಿಬ್ಬೆಗದಿಂದ ಕೈಕೊಂಬುದೀ ದುಃಖವು ;
ದುಃಖಕ್ಕೆ ಎಡೆಯಿಲ್ಲ ಸಂಸಾರದೊಳಗಣ ಸುಖವಿಂತುಟು ;
ಮತ್ತಂ ಕಡುದುಃಖವನೆಂದಿಗೆ ನೀಗಿ
ಎಂದು ನಿಮ್ಮನೊಡಗೂಡಿ ಬೇರಾಗದೆಂದಿಪ್ಪೆನೋ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೧೨ ॥

೮೧೩

ಹಡೆದ ಹೆಣ್ಣಿಗಾಗಲಿ, ಹಡೆವ ಗಂಡಿಗಾಗಲಿ,
ಗುರುಪಾದೋದಕಸ್ನಾನವೆ ಶುದ್ಧ ಕಾಣಾ.

ವನದ ಭೋಜನವಾಗಲಿ, ಮನೆಯ ಭೋಜನವಾಗಲಿ,
ಗುರುಪಾದೋದಕ ಪ್ರೋಕ್ಷಣೆಯೆ ಶುದ್ಧ ಕಾಣಾ.
ಮದುವೆಯ ಸಂಭ್ರಮವಾಗಲಿ, ಮರಣದ ದುಃಖವಾಗಲಿ,
ಗುರುಪಾದೋದಕವೆ ಸಂಜೀವನ ಕಾಣಾ.
ಆಗುವ ದೀಕ್ಷೆಯೆ ಆಗಲಿ, ಭೋಗಿಪ ಶಿಕ್ಷೆಯೆ ಆಗಲಿ,
ಗುರುಪಾದೋದಕವರ್ತನವೆ ಅಮರಗಣ ನಡಾವಳಿ ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೧೩ ॥

೮೧೪

ಹರನೆಂಬ ನಲ್ಲನಾಗದನ್ನಕ್ಕ ಆರಿಗಾದಡೂ ಪ್ರಿಯವಲ್ಲ.
ಹರನೆಂಬ ನಲ್ಲನಾದ ಬಳಿಕ ಆರಿಗಾದಡೂ ಪ್ರಿಯವಯ್ಯ.
ಹರ ನಿರಾಮಯ ಕಪಿಲಸಿದ್ಧಮಲ್ಲಿನಾಥ! ಹಾ! ಅಯ್ಯಾ ! ॥ ೮೧೪ ॥

೮೧೫

'ಹರ ಬಸವಾಯ ನಮಃ' ಎಂದು ಪಾಪದೂರನಾದೆ.
'ಗುರು ಬಸವಾಯ ನಮಃ' ಎಂದು ಭವದೂರನಾದೆ.
'ಲಿಂಗ ಬಸವಾಯ ನಮಃ ಎಂದು ಲಿಂಗಾಂಕಿತನಾದೆ.
'ಜಂಗಮ ಬಸವಾಯ ನಮಃ' ಎಂದು
ನಿಮ್ಮ ಪಾದಕಮಲದಲ್ಲಿ ಭ್ರಮರನಾದೆ.
ಏಳಾ ಸಂಗನ ಬಸವ ಗುರು ಕಪಿಲಸಿದ್ಧಮಲ್ಲಿಕಾರ್ಜುನಸ್ವಾಮಿಯೆ.
॥ ೮೧೫ ॥

೮೧೬

ಹರಬೀಜ ನಾನಾದಡೆ ಹದನವರಿಯದಿರ್ಪನೆ ಗುರುವೆ ?
ಪರಮ ಭೃತ್ಯ ನಾನಾದಡೆ ಪ್ರಾಣದಿಂದಿರ್ಪನೆ ಗುರುವೆ ?
ನರಬೀಜ ನಾನಾದ, ಗುರುದ್ರೋಹಿ ನಾನಾದೆ,
ಇನ್ನೆಂತು ಶ್ರೀಗುರು ಕಪಿಲಸಿದ್ಧಮಲ್ಲಿಕಾರ್ಜುನಾ ? ॥ ೮೧೬ ॥

೮೧೭

ಹರಿದು ಹತ್ತುವೆನವನ,
ಹತ್ತಿ ಮನವ ಮುಟ್ಟಿ ಹಿಡಿವೆನವನ.

ಮಹಾಪ್ರಚಂಡ ಮನದಿಂದ
ಕಪಿಲಸಿದ್ಧಮಲ್ಲಿಕಾರ್ಜುನನ ಹಿಡಿವೆನು. ॥ ೮೧೭ ॥

೮೧೮

ಹರಿ ಬ್ರಹ್ಮ ಧರೆ ಆಕಾಶವಿಲ್ಲದ ಭಸ್ಮಕ್ಕೆ ಸ್ಥಲವದು ಆದಿ ನೋಡಯ್ಯಾ.
ಭಸ್ಮವನೆ ಮಸುಳಿಸಿ, ಲೋಕಂಗಳನೆ ಹಡೆದು,
ಸಕಲ ಜೀವರನಿಂತು ಮಾಡಿದರೊಳರೆ ?
ನಿನ್ನಿಚ್ಛೆ ನಿನಗೆ : ಸ್ವಯಂಭು ನೀನೆಯಾಗಿರ್ದೆಯಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೮೧೮ ॥

೮೧೯

ಹರಿಬ್ರಹ್ಮರಿಬ್ಬರೂ ಸ್ತ್ರೀಯರಯ್ಯಾ.
ತಮ್ಮನೊಲಿದರೆ ಹಂಗಿಹರು, ಹೆಂಪೆ ಹೇಳಯ್ಯಾ.
ಎನ್ನ ಹರಿಬತನಕ್ಕೆ ಹಾನಿ ಹೊದ್ದಿತೆಂದು
ನಿಮ್ಮನಗಲಲಾರೆ, ಕಪಿಲಸಿದ್ಧಮಲ್ಲೇಶ್ವರಾ, ದೇವರ ದೇವಯ್ಯ. ॥ ೮೧೯ ॥

೮೨೦

ಹರಿಬ್ರಹ್ಮರು ಕಾವುದೊಂದು ಧರೆಯ ಹಿರಿಯ ಕೊಠಾರವಯ್ಯಾ.
ಬಾರದವರೆಲ್ಲರ ಬಂಧನಕ್ಕೆ ತಂದು
ಇಕ್ಕ ಬೀಯುವನಿಕ್ಕುವರಯ್ಯಾ.
ಈ ಬೆಬ್ಬನೆ ಬೆರೆವ ಹಿರಿಯರೆಲ್ಲರ ಒಳಗು ಮಾಡಿದೆ,
ಎನ್ನ ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೮೨೦ ॥

೮೨೧

ಹರಿಯಾಣದೊಳಗಣ ಓಗರವ
ಹರಿಯುವರು ಹರಿಹರಿದುಂಡರಯ್ಯಾ.
ಪರ ವಧು ಬಂದು ಬೆರಸಲು ಆ ಹರಿ ಪರಹರಿಯಾದ.
ಉಣಬಂದ ಹರಿಯ ಶಿರವ ಮೆಟ್ಟಿ ನಿಂದಳು ನಿಮ್ಮ ಹೆಣ್ಣು.
ಇದ ಕಂಡು ನಾ ಬೆರಗಾದೆನಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ, ॥ ೮೨೧ ॥

೮೨೨

ಹರಿ ಹತ್ತು ಭವ ಬಂದ ; ಸಿರಿಯಾಗಿ ತೊಳಲಿತ್ತೈ
ಉರಗ ಖೇಚರರನ್ನು ಒರಸಿತಯ್ಯಾ !
ಕರುಣಾಕರನು ಕಪಿಲಸಿದ್ಧಮಲ್ಲೇಶ್ವರನ
ಶರಣರಿಗೆ ಅಂಜಿ ಓಡಿಹುದು ಮಾಯೆ. ॥ ೮೨೨ ॥

೮೨೩

ಹಲವು ಕಾಲದ ಹುಣ್ಣಿಂಗೆ ಒರಿದು ಘಾವತಿಗೊಂಡೆ ನಾನು.
ತಲೆಯು ಭಾಗದಲು ಹುಣ್ಣುವ ಕಳದಂತೆ
ಎಲ್ಲವ ಸಂಗಿಸುವನ್ನ ತಾರ, ವಿಚಿತ್ರಮೂಲ
ಕಪಿಲಸಿದ್ಧಮಲ್ಲಿಕಾರ್ಜುನದೇವ ! ॥ ೮೨೩ ॥

೮೨೪

ಹಾಡs, ಎಂದಡೆ ಇದೆಂತುಟಾದಡಾಗಲಿ
ನೀ ಕೇಳುವಂತೆ ಹಾಡಿದೆನು ಕಂಡಯ್ಯಾ.
ಎಲೆ ಅಯ್ಯಾ, ಅಯ್ಯಾ, ಹಾ !
ನಿಮ್ಮ ಹಾಡುವ ಹಾಡ ಚಿತ್ತೈಸುವುದಯ್ಯಾ.
ನಿಮ್ಮ ಧ್ಯಾನಗಳನವಧರಿಸು, ಕೇಳು ಕೇಳಯ್ಯಾ,
ಎನ್ನ ಕಪಿಲಸಿದ್ಧಮಲ್ಲೇಶ್ವರ ದೇವರ ದೇವಯ್ಯ. ॥ ೮೨೪ ॥

೮೨೫

ಹಾಡಿದರಿವರನು ಬೇಡಿದರಿವರನು.
ಕೇಡಿಲ್ಲದಭವನ ನೆನೆಯಾ ಮನವೆ.
ಕಣ್ಣಿಗೆ ತಿಮಿರ ಕವಿದು ಕವಿದು
ಕರ್ಮದ ಬಲೆಗಳ ಸಿಲುಕದ ಮುನ್ನ
ಸಕಲ ಜೀವಂಗಳಿಗೆ ಪ್ರಾಣನಿಸ್ತಾರಕ
ಕಪಿಲಸಿದ್ಧಮಲ್ಲಿನಾಥಾ, ನೀ ಕೊಟ್ಟುದನರಿಯಾ. ॥ ೮೨೫ ॥

೮೨೬

ಹಾಡುವೆ, ಹೊಗಳುವೆ, ಬೇಡುವೆ ಸೆರಗೊಡ್ಡಿ ಆನು. ಕಾಡುವೆ–
ನಿಮ್ಮವರ ಸಂಗವನೆ ಕರುಣಿಸಯ್ಯಾ ;
ಅಯ್ಯಾ, ನಿಮ್ಮ ಬೇಡುವ ಪದವಿಂತುಟಯ್ಯಾ ;
ಕರುಣಾಕರ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಕೃಪೆಮಾಡಾ ಧರ್ಮಿ ! ॥ ೮೨೬ ॥

೮೨೭

ಹಾರವನಿಕ್ಕಿದ ಮಣಿಯು ಕಂಠಮಾಲೆ
ಮೂವತ್ತುಮೂರುಕೋಟಿ.
ವೆಜ್ಜದಲ್ಲಿ ಉರಿ ಹತ್ತಿತ್ತು ಪ್ರಸಾದಿಯು,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೮೨೭ ॥

೮೨೮

ಹಿಂದೆ ಪರೀಕ್ಷಿಸಿ ತಿಳಿದು ನೋಡುವಡೆ,
ಪರಿಯಾಯ ಪರಿಯಾಯದಿಂದ ಬಂದಂಗವ ನೀ ಬಲ್ಲೆ ಬಸವಣ್ಣಾ.
ನಾ ನೊಂದ ನೋವನು ನೀ ಬಲ್ಲೆ ಬಸವಣ್ಣಾ.
ನಾನಂದು ಕಾಲನ ಕಮ್ಮಟಕ್ಕೆ ಗುರಿಯಾಗಿ ಇಪ್ಪಂದು
ನೀನು ಶೂನ್ಯರುದ್ರನು ಬಸವಣ್ಣಾ.
ನಾನಂದು ಹಲವು ಪರಿಯ ಬಹುರೂಪನಾಡುವಲ್ಲಿ
ನೀನು ವಿಚಿತ್ರವಿನೋದನೆಂಬ ಗಣೇಶ್ವರನು ಬಸವಣ್ಣಾ,
ಎನ್ನಾದ್ಯಂತವ ನೀ ಬಲ್ಲೆ.
ಬಲ್ಲ ಕಾರಣ ಎನ್ನ ಪಾಲಿಸಿದೆ ಬಸವಣ್ಣಾ.
ನೀ ಪಾಲಿಸಿದ ಗುಣದಿಂದ ಪಾವನನಾದೆನು ಬಸವಣ್ಣಾ ;
ಶುದ್ಧ ಸಿದ್ಧ ಪ್ರಸಿದ್ಧವನರಿದೆ ಬಸವಣ್ಣಾ.
ಎಲೆ ಗುರುವೆ ಬಸವಣ್ಣಾ,
ನೀ ಪಾಲಿಸಿದ ಗುಣದಿಂದ ಜೀವನ್ಮುಕ್ತನಾದೆ ;
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಕೂಡಿ,
ನಿನ್ನವರಿಗೆಯೂ ನಿನಗೆಯೂ ಯೋಗ್ಯನಾದೆ ಬಸವಣ್ಣಾ. ॥ ೮೨೮ ॥

೮೨೯

ಹಿಂದೆ ಬಂದುದನರಿಯದುದಿಲ್ಲಾಗಿ
ಮುಂದೆ ಬಹುದಕ್ಕೆ ಚಿಂತಿಸಲೇಕೆ ?
ಇಂದಿಂಗೆಂಬುದು ಲಿಂಗದೊಲವು ಶಿವಭಕ್ತಂಗೆ ;
ನಾಳಿಂಗೆಂಬುದು ಬದ್ಧಭವಿತನ.
ಎನ್ನಾದಿಗುರು ಕಪಿಲಸಿದ್ಧಮಲ್ಲಿಕಾರ್ಜುನದೇವಾ,
ನೀವಂದಂದಿಗೆ ಕೊಟ್ಟ ಪಡಿ ತಪ್ಪದಯ್ಯಾ
ಮತ್ತಾರನೂ ಬಳಿವಿಡಿಯಲಿಲ್ಲವಯ್ಯಾ, ಎನ್ನ ತಂದೆ. ॥ ೮೨೯ ॥

೮೩೦

ಹಿಡಿತಂದು ಮಣ್ಣ ಮಾಳಿಗೆಯೊಳಗೆ ಇರಿಸಿದಡೆ
ಹೋಲುವುದರಿದು ಕಂಡಾ !
ಆ ಭಾವದಿಂದ ಭರಿತನಾಗಿ ಜೀವಿಸುತ್ತಿಪ್ಪಡೆ
ನಿಜಭಾವದಿಂದ ಭರಿತನಾಗಿ ಜೀವಿಸುವಡೆ
ಕಪಿಲಸಿದ್ಧಮಲ್ಲಿನಾಥ ಹೋತು ಕೂಡುವರು ! ॥ ೮೩೦ ॥

೮೩೧

ಹಿರಣ್ಯದಿಚ್ಛೆಯಲಿ ಹೆಚ್ಚಿ ನುಡಿವರು ನಿನ್ನಂಗವಪ್ಪರೆ ಅಯ್ಯಾ ?
ಅಪ್ಪರಪ್ಪರು ಹೊನ್ನು–ಹೆಣ್ಣು–ಮಣ್ಣು ತ್ರಿವಿಧವ ಬಿಟ್ಟವರು.
ಅಪ್ಪರಪ್ಪರು ಸತ್ಪಾತ್ರ–ಅಪಾತ್ರವೆಂದರಿದವರು.
ಅಪ್ಪರಪ್ಪರು ಸದಾಚಾರ, ನಿಹಿತಾಚಾರ, ಗುರುಚರಭಕ್ತಿ,
ಸ್ವಾನುಭಾವದೀಕ್ಷೆ ಸಮನಿಸಿದವರು.
ನಿನ್ನಂಗ ಎಲ್ಲರಂತಲ್ಲ ಪೊಸ ಪರಿ ಎಲೆ ಅಯ್ಯಾ.
ಮಸ್ತಕದಲ್ಲಿ ಪೂಜೆಯ ಮಾಡಿ
ಅದ ನಿರ್ಮಾಲ್ಯವೆಂದು ತ್ಯಜಿಸಿ,
ಮರಳಿ ಪಡೆದು ನಿನಗೆ ಪಾತ್ರವಾದವರು.
ಅಪ್ಪುದಕ್ಕನುಮಾನವೆ ? ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೩೧ ॥

೮೩೨

ಹುಟ್ಟು ಮೆಟ್ಟೆಂಬುದು ನಿಮಗಿಲ್ಲವಯ್ಯಾ ;
ನಿಮ್ಮಿಂದ ನೀವೆ ಸ್ವಯಂಭುವಯ್ಯಾ.

ಇಂತಾದಿರಯ್ಯಾ, ಪರುಷದಿಂದ ನೀವಿಂತಾದಿರಯ್ಯಾ.
ನಿಮ್ಮ ಮಹಾತ್ಮೆಯ ನೀವೆ ಬಲ್ಲಿರಯ್ಯಾ,
ನಿಜಗುರು ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೩೨ ॥

೮೩೩

ಹೂವರಳಿಯ ಹಾಸಿನ ಮೇಲಿಪ್ಪನು.
ಗಳಗಳನೆ ಹೋಹನು, ಆತುರವೇರಿ ನಿಂದನು ಆತ.
ಅತ್ತಲೂ ಹೋಗಲರಿಯದೆ ಇತ್ತಲೂ ಬರಲರಿಯದೆ
ಅಲ್ಲಿಯೆ ನಿಂದಾತನ ಬರವ ಹಾರುತ್ತಿರ್ದೆನವ್ವಾ !
ಅದೆಂತೆಂದಡೆ :
ಎನ್ನ ಮನಕ್ಕೆ ಬಂದು, ಎನ್ನ ಕರಸ್ಥಲದಲ್ಲಿ ಮೂರ್ತಿಗೊಂಡು
ಕೂಡಿದನೆನ್ನ ಕಪಿಲಸಿದ್ಧಮಲ್ಲಿನಾಥಯ್ಯನವ್ವಾ. ॥ ೮೩೩ ॥

೮೩೪

ಹೃದಯಕಮಲದ ಅಷ್ಟದಳದ
ದ್ವಾತ್ರಿಂಶತ್‌ಕುಸುಮ ಮಧ್ಯದಲ್ಲಿಪ್ಪನಾ ಸೂರ್ಯ.
ಆ ಸೂರ್ಯನ ಮಧ್ಯದಲ್ಲಿಪ್ಪನಾ ಚಂದ್ರ.
ಆ ಚಂದ್ರನ ಮಧ್ಯದಲ್ಲಿಪ್ಪನಾ ಅಗ್ನಿ.
ಆ ಅಗ್ನಿಯ ಮಧ್ಯದಲ್ಲಿಪ್ಪುದಾ ಕಾಂತಿ.
ಆ ಕಾಂತಿಯ ಮಧ್ಯದಲ್ಲಿಪ್ಪುದಾ ಸುಜ್ಞಾನ.
ಆ ಸುಜ್ಞಾನದ ಮಧ್ಯದಲ್ಲಿಪ್ಪುದಾ ಚಿದಾತ್ಮ.
ಆ ಚಿದಾತ್ಮನ ಮಧ್ಯದಲ್ಲಿಪ್ಪನಾ ಚಿತ್ಪ್ರಕಾಶರೂಪನಪ್ಪ ಪರಶಿವನು.
ಇಂತಪ್ಪ ಪರಶಿವನ–
ಎನ್ನ ಸುಜ್ಞಾನಕಾಯದ ಮಸ್ತಕದ ಮೇಲೆ ಹಸ್ತವನಿರಿಸಿ,
ಮನ ಭಾವ ಕರಣೇಂದ್ರಿಯಂಗಳಿಂ ಸ್ವರೂಪೀಕರಿಸಿ, ದೃಷ್ಟಿಗೆ ತೋರಿ,
ಕೈಯಲ್ಲಿ ಲಿಂಗವ ಕೊಟ್ಟ ಚೆನ್ನಬಸವಣ್ಣನ ಶ್ರೀಪಾದಕ್ಕೆ
ನಮೋ ನಮೋ ಎಂದು ಬದುಕಿದೆನಯ್ಯಾ ಪ್ರಭುವೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೩೪ ॥

೮೩೫

ಹೊಸಲಿಲ್ಲದ ಗೋಡೆ, ಲೇಸಿಲ್ಲದವನ ಮಾಟ,
ಕಂಗಳ ಸೂತಕ ಹರಿಯದವನ ಅಂಗದ ಕೂಟ,
ಅದೆಂತಿಗೆ ನಿಜವಪ್ಪುದು

ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಕಪಿಲಸಿದ್ಧಮಲ್ಲಿಕಾರ್ಜುನಲಿಂಗದಲ್ಲಿ
ಪ್ರಭುವೆ ನೀನೆ ಬಲ್ಲೆ. ॥ ೮೩೫ ॥

೮೩೬

ಹೃದಯಕಮಲದ ದ್ವಾದಶ ಕುಸುಮದಳದ
ಮಧ್ಯದಲ್ಲಿಪ್ಪನಾ ಸೂರ್ಯನು.
ಆ ಸೂರ್ಯನ ಮಧ್ಯದಲ್ಲಿಪ್ಪನಾ ಚಂದ್ರನು.
ಆ ಚಂದ್ರನ ಮಧ್ಯದಲ್ಲಿಪ್ಪನಾ ಅಗ್ನಿ.
ಆ ಅಗ್ನಿಯ ಮಧ್ಯದಲ್ಲಿಪ್ಪ ಸುಜ್ಞಾನಪೀಠದಲ್ಲಿ ಒಪ್ಪುತಿಪ್ಪ
ನಮ್ಮ ಚಿತ್ಪ್ರಕಾಶ ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ತೋರಿದ
ಎನ್ನ ಪರಮಸದ್ಗುರು ಚೆನ್ನಬಸವಣ್ಣನ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದೆನು. ॥ ೮೩೬ ॥

೮೩೭

ಹೆಣ್ಣನೊಲ್ಲೆನು ಎಂಪಡೆನಗೆ ಹೆಣ್ಣಾಯಿತ್ತು,
ಮಣ್ಣಿನೆಯ ದಾಸಕ್ಕೆ ಗುರಿಯಾದೆನು.
ಎನ್ನನಿತ್ತೆನು ಎನ್ನನೊಲ್ಲೆನು ಎಂದೆಂಬವನ
ಇನ್ನು ಭವಕೆ ತಂದನೆಂದೆನುತಿದೆ ಮಾಯೆ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೩೭ ॥

೮೩೮

ಹೆಣ್ಣ ಹಿಡಿದು ಹೆಣ್ಣ ಭೋಗಿಸಬಾರದು ;
ಮಣ್ಣ ಹಿಡಿದು ಮಣ್ಣ ಭೋಗಿಸಬಾರದು ;
ಹೊನ್ನ ಹಿಡಿದು ಹೊನ್ನ ಭೋಗಿಸಬಾರದು.
ಈ ಅಣಕದ ಭೇದವನಾರೂ ಅರಿಯರು ;
ಅದೆಂತು ಭಕ್ತಿಸ್ಥಲವಳವಡುವುದು ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೩೮ ॥

೮೩೯

ಹೆಸರಿತವಾರದ ಘನತರ ಲಿಂಗವ ಹೆಸರಿಟ್ಟು,
ವಾಙ್ಮನಕ್ಕಗೋಚರವಪ್ಪ ಲಿಂಗವ ವಾಕ್ಯಕ್ಕೆ ತಂದು,

'ಆತ್ಯತಿಷ್ಠದ್ದಶಾಂಗುಲಂ' ಎಂಬ ಲಿಂಗವ ಚಿತ್ತಕ್ಕೆ ತಂದು,
ಸುತ್ತಿರ್ದ ಮಾಯಾಪ್ರಪಂಚವ ಬಿಡಿಸಿದ ಬಸವಣ್ಣ ;
ಚಿತ್ತಶುದ್ಧನ ಮಾಡಿದ ಬಸವಣ್ಣ.
ಮಲತ್ರಯಂಗಳ ಹರಿದು, ಶುದ್ಧ ತಾತ್ಪರ್ಯವರುಪಿ,
ಮುಕ್ತನ ಮಾಡಿದ ಗುರು ಬಸವಣ್ಣ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯನೆನ್ನ ಕಾರಣ ಧರೆಗೆ ಬಂದ. ॥ ೮೪೯ ॥

೮೫೦

ಹೆಸರಿಡಬಾರದ ಸುಖದ ಸಾಯುಜ್ಯದಲ್ಲಿ
ಅರ್ಪಿತಾವಧಾನ ಮುಖಂಗಳ ಭೇದಂಗಳ ಭೇದಿಸುವೆ.
ಇಡಾ ಪಿಂಗಳಾ ಸುಷುಮ್ನಾನಾಳಂಗಳ ಭೇದಂಗಳ ಭೇದಿಸುವೆ,
'ಏಕ ಏವ ರುದ್ರೋ ನ ದ್ವಿತೀಯಃ' ಎಂಬ ಭೇದವ ಭೇದಿಸುವೆ,
ನಿತ್ಯಪ್ರಸಾದದಲ್ಲಿ ನಿಪುಣನಪ್ಪೆ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಕೂಡುವೆ. ॥ ೮೫೦ ॥

೮೫೧

ಹೆಸರಿಡಲಿಕಳವಲ್ಲ, ಹೆಸರುಗೆಟ್ಟಾ ಸೀಮೆ
ಪಸರಿಸುತಿಕ್ಕು ಮತ್ತಾನಂದದಾ
ಹೆಸರಿಡುವ ಸೀಮೆಯನು ಗುರುವಾಗಿ ಪಸರಿಸಲು
ವಸುಧೆ ಕಂಡಿತು ಒಂದು ಲಿಂಗರೂಪ.
ಆನಂದರೂಪ ಕಪಿಲಸಿದ್ಧಮಲ್ಲಿಕಾರ್ಜುನ
ಸೀಮೆಯೊಳಗಡಗಿಪ್ಪುದು ಅನಂತ ಬ್ರಹ್ಮಾಂಡವು. ॥ ೮೫೧ ॥

೮೫೨

ಹೇಳಯ್ಯಾ, ಹೇಳಯ್ಯಾ, ಆ ಕಾಲದಲಿ ಮಾಡುವಿಂ
ಲಗುನವೆಂತಹುದಯ್ಯ ?
ಕೇಳಯ್ಯಾ, ಆ ಕಾಲವೆ ಸುಕಾಲವಾಗಿ
ಲಗುನವಿಂತಹುದು.
ಭಕ್ತರು ಕಪಿಲಸಿದ್ಧಮಲ್ಲಿನಾಥನ
ಮನಮನದ ಚಿತ್ತದಲ್ಲಿ ಮುಂದಿಟ್ಟು ನಡೆವರಾಗಿ
ಅಂತಹುದಯ್ಯಾ, ಅಂತಹುದಯ್ಯಾ. ॥ ೮೫೨ ॥

೮೪೩

ಹೊಗಳಿತೆಗೆ ಎನ್ನ ದೇಹ ಉರಸದಯ್ಯಾ.
ಹೊಗಳಿತೆಯು ಹೊಗಳುವಾಗ ನೆಲನ ಬಗಿದು ಹೋಗುವಂತಹುದಯ್ಯಾ.
ಅದು ನನ್ನ ದೇಹದ ಗುಣವಯ್ಯಾ.
ದೂಷಣೆ ಪಥ್ಯವಾದಲ್ಲದೆ ಈ ಸರನ ಕಾಣಬಾರದು
ಕಪಿಲಸಿದ್ಧಮಲ್ಲಿಕಾರ್ಜುನಾ, ದೇವರ ದೇವ ! ॥ ೮೪೩ ॥

೮೪೪

ಹೊದ್ದಿಯೂ ಹೊದ್ದದಂತಿಪ್ಪವನ ಹೊದ್ದಿ
ಸಂಯೋಗವ ಮಾಡುವ ಪರಿಯೆಂತಯ್ಯಾ ?
ಇಬ್ಬಟ್ಟೆಯಾಗಿಪ್ಪ ನೀಲಕಂಧರ !
ಮಸ್ತಕದಲ್ಲಿ ಲೀಲೆಯಿಂದಿಪ್ಪವನ ಸಂಯೋಗವ ಮಾಡುವ ಪರಿಯೆಂತಯ್ಯಾ?
ಎಲೆ ಗುರುವೆ, ನೀನು ಸರ್ವಾಂಗವ ಪ್ರವೇಶಿಸುವಲ್ಲಿ,
ಎನ್ನೊಡನೆ ಪ್ರವೇಶಿಸಿದ ಕಾರಣ,
ಆನು ಸಂಯೋಗವ ಮಾಡಿದೆನೆಲೆ ಎಂದಡೆ,
ಮಿಕ್ಕಿನವರಿಗೆ ಸಮನಿಸುವುದೆ ಅಯ್ಯಾ, ಜಡವರಿಗೆ,
ಅನಂಗವಿದಾರಣ ಕಪಿಲಸಿದ್ಧಮಲ್ಲಿಕಾರ್ಜುನಲಿಂಗ
ನಿನ್ನ ಕರುಣವುಳ್ಳವರಿಗಲ್ಲದೆ ? ॥ ೮೪೪ ॥

೮೪೫

ಹೊರಗಾಡಿ ಬಂದನೆಂದು ನುಡಿಸಲೊಲ್ಲದೆ ಸುಮ್ಮನೆ ಇದ್ದೆನು.
ಎನ್ನ ಮನ ನೊಂದು ತಾನಿದ್ದಡೆ ನಿಮ್ಮತ್ತ ಮುಂತಾದೆನು.
ಬಿಕ್ಕುತ್ತ ಬೆಟ್ಟದರುತ್ತ ಕಾಲಮೇಲೆ ಬಿದ್ದತ್ತಡೆ
ಕಂಗುಳದಕ ಮಜ್ಜನಕ್ಕೆರದಂತಾಯಿತ್ತು.
ಅಂತಿದ್ದಡೆ ಕಂಡು ನೆಗಹಿದನು ನಮ್ಮ ಕಪಿಲಸಿದ್ಧಮಲ್ಲಿನಾಥನು. ॥ ೮೪೫ ॥

೮೪೬

ಹೊರಮನ ಹೊರತಾಗಿದ್ದವಳಾನಯ್ಯ.
ಸುತ್ತಿಮುತ್ತಿ ಆತನ ಸೆರಗಿನ ಬಳಿಗಳ ಹಿಡಿದು ಹಿರಿದು
ಕಂಗಳ ಕಣ್ಣಲಿ ಗೆಲಿದೆನವ್ವ, ಅವ್ವಾ !

ಇಂತಹ ಮಾಯೆಯ ಬೆಡಗ ಬಲ್ಲ
ಕಪಿಲಸಿದ್ಧಮಲ್ಲಿನಾಥನವ್ವ, ಅವ್ವಾ ! ॥ ೮೪೬ ॥

೮೪೭

ಹೊಲಮೇರೆಯಿಂ ಮೀರೆ ಹೊಲಬುದಪ್ಪಿದ ನಾದ ಕಳೆಗಳ
ಮೀರಿರ್ದ ತುರ್ಯಂಗಳ, ಗುರುವಿನ ಕರುಣದ ಅನಿಮಿಷದ ಮನೆಯಲ್ಲಿ
ಹೊಲಬುದಪ್ಪಿದ ಕಂಡೆ ಮಧ್ಯಮವನು.
ಆನಂದಸ್ಥಾನದಲಿ ಆಂದೋಳವಾಗಿಪ್ಪ ಮೂರರಕಳೆಗಳ ಭೇದಂಗಳ
ಮೀರಲೀಯದ ಬ್ರಹ್ಮ, ತೋರಲೀಯದ ಸತ್ವ
ನೀನಾದೆನ್ನೆ ಕಪಿಲಸಿದ್ಧಮಲ್ಲೇಶ್ವರಾ. ॥ ೮೪೭ ॥

೮೪೮

ಹೋ ಹೋ !
ಇದೇನು ಮುಕ್ತಿಯ ತೊಡಕು !
ಇದೇನು ನುಡಿವ ನುಡಿಗೆ ಆತಂಕವು !
ಇದೇನು ಜ್ಞಾನಜ್ಯೋತಿಗೆ ಮಾಯಾಪವನ ಪಟುತರವು !
ಇದೇನು, ಕಪಿಲಸಿದ್ಧಮಲ್ಲಿಕಾರ್ಜುನ ಮಾಡಿ ತಂದಿಟ್ಟ
ಭೋಗದ ಉಗುಮಿಗೆಯು ! ॥ ೮೪೮ ॥

ಕಾಂಡ: ಎರಡು

ಷಟ್‌ಸ್ಥಲ ವಚನಗಳು

೮೪೯

ಹೃದಯಕಮಲದಲ್ಲಿ ವಾಸವಾಗಿರುವಾತನೊಬ್ಬನು.
ಮನದ ಕೊನೆಯಲ್ಲಿ ಇರುವಾತನೊಬ್ಬನು.
ಚಿದಾಕಾಶದಲ್ಲಿರುವಾತನೊಬ್ಬನು.
ಇವರೆಲ್ಲರಲ್ಲಿ ಇರುವಾತನೊಬ್ಬನು,
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನು. ॥ ೧ ॥

೮೫೦

ಸಿದ್ಧಸಿದ್ಧರುಗಳೆಲ್ಲ ರಸವಾದವ ಕಲಿತು ಬಂಧನಕ್ಕೆ ಗುರಿಯಾದರು.
ಅಮೃತವ ಸೇವಿಸಿದ ಸುರರೆಲ್ಲ ಪ್ರಳಯಕ್ಕೆ ಗುರಿಯಾದರು.
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ಅರಿದವರೆಲ್ಲ
ಬಯಲಿಗೆ ಬಯಲಾದರು. ॥ ೨ ॥

೮೫೧

ಕಲ್ಪವೃಕ್ಷ ಮರನೆನ್ನಬಹುದೆ ?
ಕಾಮಧೇನು ಪಶುವೆನ್ನಬಹುದೆ ?
ಪರುಷದ ಕಣಿ ಪಾಷಾಣವೆನ್ನಬಹುದೆ ?
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ನುಂಗಿದವರೆಲ್ಲ
ಮಾನವರೆನ್ನಬಹುದೆ ?
॥ ೩ ॥

೮೫೨

ಕೆಲವರು ಲಿಂಗವ ಪೂಜಿಸಿ ಪಡೆದರು ಗತಿಯ ;
ಕೆಲವರು ಲಿಂಗವ ಪೂಜಿಸಿ ಪಡೆದರು ಮತಿಯ ;
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ಪೂಜಿಸಿ,
ಪಡೆಯಲಿಲ್ಲ ಅವನ ಜ್ಯೋತಿಯ ? ॥ ೪ ॥

೮೫೩

ಲಿಂಗವ ಪೂಜಿಸಿದವರು ಹಲವರುಂಟು,
ಅಂಗವ ಪೂಜಿಸಿದವರು ಒಬ್ಬರೂ ಇಲ್ಲ ;

ಕಾಮವ ತೊರೆದವರು ಪಲವರುಂಟು,
ನಿಃಕಾಮುವನಳಿದವರು ಒಬ್ಬರೂ ಇಲ್ಲ,
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ. ॥೫॥

೮೫೪

ಪರುಷ ಸೋಂಕಿದ ಬಳಿಕ ಕಾರ್ಬೊನ್ನದ ಕೇಡು ನೋಡಿರಯ್ಯಾ.
ಜ್ಯೋತಿ ಸೋಂಕಿದ ಬಳಿಕ ತಮಂಧದ ಕೇಡು ನೋಡಿರಯ್ಯಾ.
ಅಮೃತ ಸೋಂಕಿದ ಬಳಿಕ ರೋಗದ ಕೇಡು ನೋಡಿರಯ್ಯಾ.
ನಮ್ಮ ಕಪಿಲಸಿದ್ಧಮಲ್ಲನ ಸೋಂಕಿದ ಬಳಿಕ ಭವದ ಕೇಡು ನೋಡಿರಯ್ಯಾ.
॥೬॥

೮೫೫

ಕ್ರೀವಿಡಿದು ಆಚರಿಸಬೇಕಲ್ಲದೆ ಅಕ್ರೀಯೊಡನಾಚರಿಸಲಾಗದು.
ಜ್ಞಾನವಿಡಿದು ನೋಡಬೇಕಲ್ಲದೆ, ದೃಷ್ಟಿವಿಡಿದು ನೋಡಬಾರದು.
ಲಿಂಗವಿಡಿದು ಪೂಜಿಸುವುದಲ್ಲದೆ, ಅಂಗವಿಡಿದು ಪೂಜಿಸಲಾಗದು,
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ. ॥೭॥

೮೫೬

ಜ್ಞಾನವಿಡಿದಾಚರಿಸಿದರಲ್ಲದೆ, ಕ್ರೀವಿಡಿದಾಚರಿಸಲಿಲ್ಲವು.
ಕ್ರೀವಿಡಿದಾಚರಿಸಿದರಲ್ಲದೆ, ಜ್ಞಾನವಿಡಿದಾಚರಿಸಲಿಲ್ಲವು.
ರೂಪುವಿಡಿದು ನಿರೀಕ್ಷಿಸುವರಲ್ಲದೆ, ಅರೂಪವಿಡಿದು ನಿರೀಕ್ಷಿಸರು.
ಜ್ಞಾನಕ್ರಿಯೆವಿಡಿದಾಚರಿಸಿದರು ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ,
ಚೆನ್ನಬಸವಣ್ಣನವರು. ॥೮॥

೮೫೭

ಸಮದೃಷ್ಟಿಯಾಗದವನ ಭಕ್ತನೆಂತೆಂಬೆ ?
ವಿಷಯಂಗಳಳಿಯದವನ ಮಹೇಶನೆಂತೆಂಬೆ ?
ಶಿವಕರುಣವಿಡಿಯದವನ್ನಕ್ಕ ಪ್ರಸಾದಿ ಎಂತೆಂಬೆ ?
ಅಂಗೇಂದ್ರಿಯಂಗಳಳಿಯದವನ ಪ್ರಾಣಲಿಂಗಿ ಎಂತೆಂಬೆ ?

ಸಂಕಲ್ಪ ಪರಿಯುದನ್ನಕ್ಕ ಶರಣನೆಂತೆಂಬೆ ?
ನಮ್ಮ ಕಪಿಲಸಿದ್ಧಮಲ್ಲೇಶನ ಕೂಟವನರಿಯದವನ ಐಕ್ಯನೆಂತೆಂಬೆ ? ॥ ೯ ॥

೮೫೮

ಭಕ್ತನಾದ ಬಳಿಕ ಜಂಗಮ ಗುಣವನರಸಲೇಕೊ ?
ಮಹೇಶನಾದ ಬಳಿಕ ವಿಷಯಕ್ಕೆಳಸುವುದದೇಕೊ ?
ಪ್ರಸಾದಿಯಾದ ಬಳಿಕ ಕಂಡುದಕ್ಕೆ ಕೈದುಡುಕುವುದೇಕೊ ?
ಪ್ರಾಣಲಿಂಗಿಯಾದ ಬಳಿಕ ಪ್ರಪಂಚದ ಹಂಗದೇಕೊ ?
ಶರಣನಾದ ಬಳಿಕ ಮೋಕ್ಷದ ಹಂಗೇಕೊ ?
ಐಕ್ಯನಾದ ಬಳಿಕ ಕಪಿಲಸಿದ್ಧಮಲ್ಲಯ್ಯನ ನಾಮಸ್ಮರಣೆಯದೇಕೊ ?
॥ ೧೦ ॥

೮೫೯

ಭಕ್ತನಾದ ಬಳಿಕ ಜಂಗಮ ಮೆಚ್ಚಬೇಕು ;
ಜಂಗಮವಾದ ಬಳಿಕ ಭಕ್ತ ಮೆಚ್ಚಬೇಕು.
ಭಕ್ತನ ಕಾಯವೆ ಜಂಗಮದ ಕಾಯ ;
ಜಂಗಮದ ಕಾಯವೆ ಭಕ್ತನ ಕಾಯ.
ಕಪಿಲಸಿದ್ಧಮಲ್ಲೇಶಯ್ಯನಲ್ಲಿ ಇದೆ ಉಪಾಯ. ॥ ೧೧ ॥

೮೬೦

ಭಕ್ತನಾದ ಬಳಿಕ ಭಕ್ತಿಸ್ಥಲವಳವಡುವುದೆ ದುರ್ಲಭ.
ಮಹೇಶನಾದ ಬಳಿಕ ಮಹೇಶಸ್ಥಲವಳವಡುವುದೆ ದುರ್ಲಭ.
ಭಕ್ತಸ್ಥಲ ಬಸವಣ್ಣಂಗಾಯಿತ್ತು ; ಮಹೇಶಸ್ಥಲ ಚೆನ್ನಬಸವಣ್ಣಂಗಾಯಿತ್ತು.
ಮೀರಿದ ಸ್ಥಲ ನಮ್ಮ ಪ್ರಭುವಿಂಗಾಯಿತ್ತು.
ಕಪಿಲಸಿದ್ಧಮಲ್ಲಯ್ಯ, ಎನಗಿನಿತೊಂದೊರೆವ ಪರಿ ? ॥ ೧೨ ॥

೮೬೧

ಶಾಸ್ತ್ರವ ಹೇಳುವರೊಂಬತು ಕೋಟಿ.
ವೇದ ವೇದಾಂತವ ಹೇಳುವವರೊಂದು ಕೋಟಿ.

ನ್ಯಾಯಾನ್ಯಾಯವ ಹೇಳುವವರೊಂದುಕೋಟಿ.
ಕಪಿಲಸಿದ್ಧಮಲ್ಲಿಕಾರ್ಜುನನ ಮಾಯಾಕೀಲವ
ಹೇಳುವವರೊಬ್ಬರೂ ಇಲ್ಲ ಎಲ್ಲಾದರೂ. ॥ ೧೩ ॥

೮೬೨

ಶಾಸ್ತ್ರದ ರಂಜನೆ ಲೋಕಕ್ಕಲ್ಲದೆ
ಲೋಕವಿರಹಿತಂಗೆಲ್ಲಿಹುದೊ ?
ವೇದ ವೇದಾಂತದ ರಂಜನೆ ಮುಮುಕ್ಷುಗಳಿಗಲ್ಲದೆ
ಮೋಕ್ಷವಿರಹಿತಂಗೆಲ್ಲಿಯದೊ ?
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ಮಾಯಾಕೀಲವ ತಿಳಿವಡೆ,
ತಿಳಿವವರಿಗಲ್ಲದೆ ನಿಶ್ಶೂನ್ಯರಿಗೆಲ್ಲಿಹುದೊ ? ॥ ೧೪ ॥

೮೬೩

ವೇಷವ ಧರಿಸಿ ಫಲವೇನಯ್ಯಾ,
ವೇಷದಂತಾಚರಣೆ ಇಲ್ಲದನ್ನಕ್ಕ ?
ವೇದಾಂತವನೋದಿ ಫಲವೇನಯ್ಯಾ,
ಬ್ರಹ್ಮ ತಾವಾಗದನ್ನಕ್ಕ ?
ನಾನು ಕೆರೆಯ ತೋಡಿ ಫಲವೇನಯ್ಯಾ,
ಪುಣ್ಯತೀರ್ಥಂಗಳು ಬರದನ್ನಕ್ಕ ?
ಕಪಿಲಸಿದ್ಧಮಲ್ಲಿನಾಥಾ. ॥ ೧೫ ॥

೮೬೪

ಶೇಷನ ಫಣೆಯಲ್ಲಾಡುವುದು ಲೇಸು ಕಂಡಯ್ಯಾ.
ಮೃತ್ಯುವಿನ ಬಾಯೊಳಗಿರುವುದು ಬಹು ಲೇಸು ಕಂಡಯ್ಯಾ.
ನಮ್ಮ ಕಪಿಲಸಿದ್ಧಮಲ್ಲಿನಾಥನ ನಡೆದ ದಾರಿಯಲ್ಲಿ
ನಡೆವುದು ಲೇಸು ಕಂಡಯ್ಯಾ. ॥ ೧೬ ॥

೮೬೫

ಊರಿಗೊಂದು ಹಳ್ಳವಾದಡೆ,
ನೀರು ಕುಡಿವವರಿಗೂ ಒಂದೆ ಹಳ್ಳವೆ ? ಇಲ್ಲಿಲ್ಲ.

ಅರಿವವರಿಗೆ ಒಬ್ಬ ದೇವರಾದಡೆ,
ಆ ಲೋಕದವರಿಗೂ ಒಬ್ಬನೆ ? ಇಲ್ಲಿಲ್ಲ.
ನಮ್ಮ ಕಪಿಲಸಿದ್ಧಮಲ್ಲೇಶನಲ್ಲದೆ ಬೇರೆ ದೈವವಿಲ್ಲ. ॥ ೧೭ ॥

೮೬೬

ಅಮೃತವೆಂದರಿದಾತನೇನವುರನಾಗಲಿಲ್ಲ.
'ಬ್ರಹ್ಮಾಹಮಸ್ಮೀತಿ' ಎಂದಡಾತನೇನು ಮುಕ್ತನಾಗಲಿಲ್ಲ,
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಗುಣತ್ರಯಮಳಿಯದನ್ನಕ್ಕ. ॥ ೧೮ ॥

೮೬೭

ಆಗುವುದನು ತಪ್ಪಿಸೆಹೆನೆಂದಡೆ ತಪ್ಪಲರಿಯದು.
ಆಗು ಭೋಗಂಗಳ ತಪ್ಪಿಸುವಡೆ ಸಚ್ಚಿದಾನಂದ ಶಿವಯೋಗಿಗಲ್ಲದ
ನರರಿಗೆಲ್ಲಿಯದೊ, ಕಪಿಲಸಿದ್ಧಮಲ್ಲಯ್ಯಾ ! ॥ ೧೯ ॥

೮೬೮

ಮಾಡದುದ ಮಾಡಲು ದೈವಬಲವೆಂಬುದೀ ಲೋಕ.
ಎಲೆ ಕಪಿಲಸಿದ್ಧಮಲ್ಲಯ್ಯಾ,
ಏಲೇಶಂಗೆ ಪ್ರಾಣವ ಕೊಟ್ಟುದಾವ ಬಲ ಹೇಳಾ,
ಸೆರಗೊಡ್ಡಿ ಬೇಡುವೆ. ॥ ೨೦ ॥

೮೬೯

ಸಂಚಿತಾದಿ ಕರ್ಮತ್ರಯಂಗಳು
ಜೀವನಿಗಲ್ಲದೆ ಶಿವಸ್ವರೂಪನಿಗೆಲ್ಲಿಹವೊ ?
ಆಡುವ ಗೊಂಬೆಯನು ಆಡಿಸುವಾತಂಗಲ್ಲದೆ,
ಆಡುವ ಗೊಂಬೆಗೆಲ್ಲಿಹದೊ ಸ್ವತಂತ್ರತೆ ?
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಇದರಿರವು ಸ್ವತಂತ್ರನಿಗಲ್ಲದೆ ಅಸ್ವತಂತ್ರನಿಗೆಲ್ಲಿಹದೊ ? ॥ ೨೧ ॥

೮೭೦

ಲಿಂಗವ ಪೂಜಿಸುವರ ಕಂಡಡೆ,
ಎನ್ನ ಮನ ಉಬ್ಬಿತ್ತು ನೋಡಯ್ಯಾ.

ಜಂಗಮವ ಪೂಜಿಸುವರ ಕಂಡಡೆ,
ಹೋದ ಪ್ರಾಣ ಬಂದಂತಾಯಿತ್ತಯ್ಯಾ.
ತನ್ನ ತಾನರಿವರ ಕಂಡಡೆ,
ಕಪಿಲಸಿದ್ಧಮಲ್ಲಯ್ಯನೀತನೆಂದು ನಂಬಿತ್ತು ನೋಡಯ್ಯಾ, ಎನ್ನ ಮನ.
॥ ೨೨ ॥

೮೭೧

ಲಿಂಗವಾದ ಬಳಿಕ ಪಂಚಸೂತ್ರ ಸಹವಾಗಿರಬೇಕು.
ಜಂಗಮವಾದ ಬಳಿಕ ಸದ್ಗುಣಸಹಿತವಾಗಿರಬೇಕು.
ತನ್ನ ತಾನರಿತವನಾದ ಬಳಿಕ ಮರೀಚಿಜಲದಂತಿರಬೇಕು,
ನಮ್ಮ ಕಪಿಲಸಿದ್ಧಮಲ್ಲೇಶನಲ್ಲಿ. ॥ ೨೩ ॥

೮೭೨

ಲಿಂಗವ ಪೂಜಿಸುವವರನಂತರುಂಟು.
ಜಂಗಮವ ಪೂಜಿಸುವವರನಂತರುಂಟು.
ತನ್ನ ತಾನರಿದು, ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ
ಕೂಡುವವರೊಬ್ಬರೂ ಇಲ್ಲ. ॥ ೨೪ ॥

೮೭೩

ತಿಳಿಯದೆ ಪೂಜಿಸಿದಡಾಗುವುದೇನೊ ಅಯ್ಯಾ !
ತಿಳಿದು ತಿಳಿದು ಮಾಡಬೇಕು ಲಿಂಗಪೂಜೆಯು ;
ತಿಳಿದು ತಿಳಿದು ಮಾಡಬೇಕು ಜಂಗಮಾರ್ಚನೆಯು.
ತಿಳಿದು ಮಾಡಬೇಕು ; ತಿಳಿಯದೆ ಮಾಡಲು
ನಿನ್ನ ಸಿದ್ಧಿಗೆ ಸಿದ್ಧರಾದರಲ್ಲದೆ,
ನಿನ್ನಂಗ ದೊರೆಕೊಂಬ ಪರಿಯು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೫ ॥

೮೭೪

ಸಕಲ ನಿಃಕಲದಲ್ಲಿ, ಬ್ರಹ್ಮಾಂಡತತ್ತ್ವದಲ್ಲಿ,
ಕರ್ಮದ ಸೊಮ್ಮಿನ ಸೀಮೆಯನತಿಗಳೆದು
ಆದ ಲಿಂಗವೆಂದು ತೋರಬಲ್ಲಾತ ಗುರು.

ತನುಗುಣ ಸಂಬಂಧವ ತಾನೆಂದು ತೋರಲೀಯದೆ,
ನಿಶ್ಚಯವ ಮಾಡಿ ತಾತ್ಪರ್ಯಕಳೆಯನಿರಿಸಿ,
ಸಕಲದಲ್ಲಿ ನಿಃಕಲದಲ್ಲಿ, ರೂಪಿನಲ್ಲಿ ಅರೂಪಿನಲ್ಲಿ,
ಭಾವದಲ್ಲಿ ನಿರ್ಭಾವದಲ್ಲಿ ಆವೆ ಅವಾಗಿ ತೋರಬಲ್ಲಾತ ಗುರು.
ಈ ಪರಿಯಲ್ಲಿ ತೋರಿ ಎನ್ನ ಭವವ ತಪ್ಪಿಸಿದ
ಕಪಿಲಸಿದ್ಧಮಲ್ಲಿಕಾರ್ಜುನಯ್ಯನೆಂಬ ಪರಮಗುರು. ॥ ೨೬ ॥

೮೭೫

ಶ್ರೀಗುರುವೆ ದಿವ್ಯಮಹಾಮುನಿಯೆ,
ಶ್ರೀಗುರುವೆ ಲೋಕವೀರೇಳ ಪೆತ್ತ
ಆನಂದಮಯ ಚಿನ್ಮಯ ಮಹಾಗುರುವೆ, ದೇವಾ,
ಶಿಷ್ಯಕಾರಣ ನೀವು ಪರಶಿವಮೂರ್ತಿಯಾದಿರಯ್ಯಾ,
ನಿತ್ಯಪ್ರಸಾದದಲ್ಲಿ ಮುಕ್ತನನು ಮಾಡಿದ ನಿತ್ಯ ಜ್ಯೋತಿರ್ಮಯ ಗುರುವೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೭ ॥

೮೭೬

ಗುರುವೆ, ಇಹಪರ ಗುರುವೆ, ಗುರುವೆ ಕರುಣಾಕರನೆ,
ಗುರುವೆ, ಶುದ್ಧಾತ್ಮನೆ ನಿರ್ಮಳಾಂಗ,
ಗುರುವೆ, ನಿನ್ನಂತೆ ಎನ್ನುವನು ಮಾಡಿದ ಪರಮ
ಗುರುವೆ, ನೀನು ಕಪಿಲಸಿದ್ಧಮಲ್ಲಿನಾಥ. ॥ ೨೮ ॥

೮೭೭

ಅನುಪಮನೆ, ನಿನ್ನ ಹವಣಿಸಲಿಕ್ಕರಿದಯ್ಯಾ
ಘನತರವೆನಿಸುವ ಸಾಯುಜ್ಯಪದವ ಮೀರಿದ,
ಶಬ್ದ ಹಲವ ಮೀರಿದ ಬ್ರಹ್ಮ.
ಗುರುಕರುಣದಿಂದ ಕಂಡೆ ಪರಮಪದವ.
ಗುರುವೇ, ಮದ್ಗುರುವೇ, ಸದ್ಗುರುವೇ, ತ್ರಿಜಗದ್ಗುರುವೇ,
ಗುರುವೇ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೯ ॥

೮೭೮

ಮಲತ್ರಯಂಗಳಲ್ಲಿ ಕುಗಿಯಲೀಯದೆ,
ಮನಸಿಜನ ಬಾಣಕ್ಕೆ ಗುರಿಯಾಗಲೀಯದೆ,

ಎನ್ನ ತನ್ನಂತೆ ಮಾಡಿದನಯ್ಯಾ ಶ್ರೀಗುರು.
ಪದ ನಾಲ್ಕ ಮೀರಿ ಭವಕ್ಕೆ ಹೇತುವಾಗಲೀಯದೆ,
ಕರುಣಿಸಿ ಮುಕ್ತನ ಮಾಡಿದೆಯಯ್ಯಾ,
ಶ್ರೀಗುರುವೆ, ಪರಮಗುರುವೆ.
ಪರಿಭವಕ್ಕೆ ಬರಲೀಯದಂತೆ,
ಎನ್ನ ನಿಮ್ಮವರೊಳಗೊಬ್ಬನೆಂದೆನಿಸಿದೆಯಲ್ಲಾ,
ಗುರುವೆ, ಪರಮಗುರುವೆ.
ಕಾಲನ ಕಮ್ಮಟಕ್ಕೆ ಗುರಿಯಹ ಎನ್ನನು ತೆಗೆದು,
ಗುರು ಲಿಂಗ ಜಂಗಮ ತ್ರೈಲಿಂಗಕ್ಕೆ ಕಾರಣಿಕನ ಮಾಡಿದೆ.
ಇನ್ನು ಭವಕ್ಕೆ ಬಾರೆನು ; ನಿನ್ನವರಾದಂತೆ ಅಪ್ಪೆನು.
ಕಪಿಲಸಿದ್ಧಮಲ್ಲಿಕಾರ್ಜುನಾ,
ಎನ್ನ ಮೀರಿದ ಪರ ಒಂದೂ ಇಲ್ಲ. ॥ ೩೦ ॥

೮೭೯

ಅಯ್ಯಾ, ನಿಮ್ಮ ಕೈ ಬಿರ್ಚಲೊಡನೆ
ಬ್ರಹ್ಮಾಂಡಂಗಳು ತಳತಳಿಸುತ್ತವೆ.
ಬ್ರಹ್ಮ ಮರೆದನು, ವಿಷ್ಣು ತಾನೊರಗಿದನು,
ವೇದಂಗಳು ದೆಸೆದೆಸೆಗೆ ಬಾಯ್ಬಿಡಲು,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿಮ್ಮ ಕೈಯ ಶಬ್ದದ ಹವಣೆಂತುಟು. ॥ ೩೧ ॥

೮೮೦

ನಾಗೇಂದ್ರನ ವಿಷವನು, ಬ್ರಹ್ಮನ ಕಪಾಲವನು
ಮತ್ತೊಬ್ಬರಿಗೆ ಹಿಡಿಯ ತೀರುವುದೆ, ಎಲೆ ಅಯ್ಯಾ ?
ಎತ್ತಿದಡೆ ಮೇಲೇಳುಲೋಕವನುರುಹುವುದು ;
ಇಳುಹಿದಡೆ ಕೆಳಗೇಳುಲೋಕವನುರುಹುವುದು ;
ಇವನೆತ್ತದೆ ಇಳುಹದೆ ಕೊಂಡಾಡುವ ದೇವ
ನಮ್ಮ ಕಪಿಲಸಿದ್ಧಮಲ್ಲಿನಾಥಯ್ಯನೆ ! ॥ ೩೨ ॥

೮೮೧

ಲಿಂಗೋದಕದಿಂದ ಅಂಗರಕ್ಷಂಗಳ ಮಾಡುವೆ.
ಪ್ರಸಾದೋದಕದಿಂದ ಪ್ರಾಣದ ನೆಲೆಯನರಿವೆ.

....
ಇಂತೀ ತ್ರಿವಿಧೋದಕದಿಂದ ಶುದ್ಧನಹೆ, ಸಿದ್ಧನಹೆ, ಪ್ರಸಿದ್ಧನಹೆ
ಕಪಿಲಸಿದ್ಧಮಲ್ಲಿಕಾರ್ಜುನನಾಥನಹೆ. ॥ ೩೩ ॥

೮೮೨

ಅಂಗಲಿಂಗಸಂಬಂಧಿಯಾದ ಬಳಿಕ,
ಗುರುವಿನನುಮತದಿಂದ ಸ್ವಾನುಭಾವಲಿಂಗಸಂಬಂಧಿಯಾದ ಬಳಿಕ,
ಪ್ರಾಣನಿರ್ಪ ನೆಲೆಯುನರಿ.
ಆ ಲಿಂಗಮಜ್ಜನೋದಕದಿಂದ ನಿನ್ನ ಕಾಯುಶುದ್ಧಿ ;
ಆ ಲಿಂಗನಿರೀಕ್ಷಣೋದಕದಿಂದ ನಿನ್ನ ಅವಯುವಶುದ್ಧಿ ;
ಆ ಲಿಂಗಪ್ರಸಾದೋದಕ ನಿನ್ನ ಪರಮುಪದವು.
ಇಂತು ಪಾದೋದಕತ್ರಯುದಲ್ಲಿ, ಸುಖಿಯಾಗಿ,
ಕಪಿಲಸಿದ್ಧಮಲ್ಲಿಕಾರ್ಜುನನ ಕೂಡಿ ನಿತ್ಯನಾಗು ಸಂದೇಹವಿಲ್ಲದೆ. ॥ ೩೪ ॥

೮೮೩

ಕಲ್ಪಿತೋದಕ ಒಂದು, ಅರ್ಪಣೋದಕ ಮೂರು,
ಮತ್ತೆ ಅಂಗೋದಕವು ತ್ರಯುವಾಗಿಯುು,
ಮಿಕ್ಕು ಪ್ರಸಾದೋದಕ ಅವು ಮೂರು.
ಸತ್ವರಜತಮುಮತಿಗಳೆದವರಿಗಲ್ಲದೆ,
ಹತ್ತು ಪಾದೋದಕವನರಿಯುಲರಿದು ತಾನು
ಚಿತ್ತಶುದ್ಧನಾಗಿ ಗುರುಕರುಣದಿಂದವೆ
ಜತ್ತು ಪಾದೋದಕವ ಗ್ರಹಿಸುವ ಭಕ್ತರಿಗೆ
ಮತ್ತೆ ಸಂದಿಲ್ಲದಿಹೆ ಅವರು ನೀನು.
ಮುುತ್ತು ನೀರನು ಕೂಡಿದಾನಂದ ಭೇದದೊಲು
ತತ್ತ್ವಮುಸಿಯುಪ್ಪನ್ನೆ ಶ್ರೀಗುರು ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೫ ॥

೮೮೪

ಮುುಖದಿಂದ ಹುಟ್ಟಿಪ್ಪ ಮೂರರ್ಪಿತೋದಕದ ಒಳಗೆ,
ಹುಟ್ಟಿತ್ತು ಶುದ್ಧ ಪ್ರಸಾದೋದಕ.
ಸದಮುಲ ಜ್ಞಾನದಂಘ್ರಿಯಲ್ಲಿ ಹುಟ್ಟಿತ್ತೊಂದುದಕ.

ಆವನು ಒಯ್ದೆರೆದಲ್ಲಿ ಉದ್ಭವಿಸಿತ್ತು ತಾ
ಕರಣೇಂದ್ರಿಯವನತಿಗಳೆದು ಪತ್ತನೆಯ ಪಾದೋದಕ
ಕ್ರಮವಿಂತುಟಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೬ ॥

೮೮೫

ಲಿಂಗಾಂಗಿಗಳಿಗೆ ಪಾದೋದಕವಲ್ಲದೆ,
ಅಂಗಭವಿಗೆ ಪಾದೋದಕವೆಲ್ಲಿಹದೊ ?
ಶರಣರಿಗೆ ಶಿವಾನುಭಾವಗೋಷ್ಠಿಯಲ್ಲದೆ ?
ಶರ ತಾಗಿದವನಿಗೆ ಶಿವಾನುಭಾವಗೊಷ್ಠಿ ಎಲ್ಲಿಹದೊ ?
ಲಿಂಗವಿರಹಿತರಿಗೆ ಪಾದೋದಕ ಸಲ್ಲದು, ಸಲ್ಲದು !
ಕೊಟ್ಟವಂಗೆ ಮುಕ್ತಿ ಮೊದಲೆ ಇಲ್ಲವು, ಇಲ್ಲವು. ॥ ೩೭ ॥

೮೮೬

ಆದಿ ಆಧಾರವಿಲ್ಲದಂದಿನ, ಸಾದಾಖ್ಯದೇಹವಿಲ್ಲದಂದಿನ,
ಸೀಮೆ ಸಂಬಂಧಗಳಿಲ್ಲದಂದಿನ
ಅನಾದಿಸಂಸಿದ್ಧನ ಆಗುಮಾಡಿ ಪೆಸರಿಟ್ಟು
ಕರಸ್ಥಳಕ್ಕೆ ತಂದುಕೊಟ್ಟ ಗುರು ಚೆನ್ನಬಸವಣ್ಣನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೩೮ ॥

೮೮೭

ಮಡಿವಾಳಯ್ಯ ತನ್ನ ದೇಹವ ಕೊಟ್ಟು,
ಗಣಾಚಾರದ ಶಕ್ತಿಪ್ರಸಾದವ ಪಡೆದ.
ಘಟ್ಟಿವಾಳಯ್ಯ ತನ್ನ ಮಾಯೆಯ ಕೊಟ್ಟು,
ಮೂಲಪ್ರಸಾದವ ಪಡೆದ.
ಮರುಳಸಿದ್ಧಯ್ಯ ತನ್ನ ಮನವ ಕೊಟ್ಟು,
ಗಣಪ್ರಸಾದವ ಪಡೆದ.
ನಾನು ಕರಣಾದಿಗಳ ಕೊಟ್ಟು,
ಚೆನ್ನಬಸವಣ್ಣನ ಪ್ರಸಾದವ ಪಡೆದು,
ಭವವಿರಹಿತನಾದೆ ನೋಡಾ, ಕಪಿಲಸಿದ್ಧಮಲ್ಲಿನಾಥಾ. ॥ ೩೯ ॥

೮೮೮

ಪ್ರಸಾದ ಕಾಯನಾದ ಬಳಿಕ ರಸರಸಾಯನೌಷಧಿಯ ಹಂಗೇಕೊ ?
ಮನದಿಚ್ಛೆ ಪೂರ್ಣವಾದ ಬಳಿಕ ಮಂತ್ರದ ಲಕ್ಷ್ಯದ ಹಂಗೇಕೊ ?

ನೀನಿಲ್ಲಿಗೆ ಬಂದ ಬಳಿಕ ಪರ್ವತದ ಹಂಗೇಕಯ್ಯಾ ಎನಗೆ,
ಕಪಿಲಸಿದ್ಧಮಲ್ಲಿನಾಥಾ ? ‖ ೪೦ ‖

೮೮೯

ದೇವನಿಂತವನೆಂದು ನಂಬಲಾಗದಯ್ಯಾ :
ಬಾ ಎಂದು ಹೇಳಿ ಬಯಲಾದ ದೇವನೊಳ್ಳಿದನೆ ?
ದೇವನಿಂತವನೆಂದು ನಂಬಲಾಗದಯ್ಯಾ :
ತನ್ನ ಕಾರ್ಯಕ್ಕೆ ಹೆಣಗಾಡಿಸಿದವ ಒಳ್ಳಿದನೆ ?
ಕಪಿಲಸಿದ್ಧಮಲ್ಲಯ್ಯಾ, ನಿನ್ನ ಲೀಲೆ ತಿಳಿಯದಾರಿಂಗೂ. ‖ ೪೧ ‖

೮೯೦

ಮಾಡಿ ಮಾಡಿ ಹೋದರು ಕೆಲಬರು,
ನೋಡಿ ನೋಡಿ ಹೋದರು ಹಲಬರು.
ನೀಡಿ ನೀಡಿ ಹೋದರು ಕೆಲಬರು,
ನೀಡದೆ ನೋಡದೆ ಮಾಡದೆ ಹೋದವರಾರನೂ ಕಾಣೆ,
ನಿಮ್ಮ ಹೃದಯದೊಳು [ಕಪಿಲಸಿದ್ಧ] ಮಲ್ಲಯ್ಯಾ. ‖ ೪೨ ‖

೮೯೧

ಮಾಡಿದರು ಮಾಡಿದರು ತಮ್ಮ ಹಿತಕ್ಕಲ್ಲದೆ,
ಮತ್ತಾರ ಹಿತಕ್ಕಲ್ಲ ನೋಡಯ್ಯಾ.
ನೋಡಿದರು ನೋಡಿದರು ತಮ್ಮ ಹಿತಕ್ಕಲ್ಲದೆ,
ಮತ್ತಾರ ಹಿತಕ್ಕಲ್ಲ ನೋಡಯ್ಯಾ.
ತನ್ನ ಬಿಟ್ಟನ್ಯಹಿತವ ನೋಡಿದಡೆ,
ಕೂಡಿಕೊಂಬ ನಮ್ಮ ಕಪಿಲಸಿದ್ಧಮಲ್ಲಯ್ಯನವರ. ‖ ೪೩ ‖

೮೯೨

ಲಿಂಗವಾದ ಬಳಿಕ ಪೂಜಿಸಲಿಲ್ಲ ;
ಜಂಗಮವಾದ ಬಳಿಕ ನೋಡಲಿಲ್ಲ ;
ಪ್ರಸಾದಿಯಾದ ಬಳಿಕ ರುಚಿಸಲಿಲ್ಲ.

ಇಂತೀ ತ್ರಿವಿಧ ಒಂದಾದ ಬಳಿಕ,
ಕಪಿಲಸಿದ್ಧಮಲ್ಲಯ್ಯಾ, ಬೇರೊಂದು ತಿಳಿಯಲಿಲ್ಲ. ॥ ೪೪ ॥

೮೯೩

ಪೂಜಿಸಹೋದಡೆ ಪೂಜಾಪದಾರ್ಥವಿಲ್ಲದಂತಾಯಿತ್ತಯ್ಯಾ,
ನಮ್ಮ ಚೆನ್ನಬಸವೇಶ್ವರ ಗುರುವಿನ ಬೋಧೆಯಿಂದ.
ಮಾಡಿಸಹೋದಡೆ ಮಾಡುವ ರೂಪು ಇಲ್ಲದಂತಾಯಿತ್ತಯ್ಯಾ,
ಅಲ್ಲಮನ ವಚನದಿಂದ.
ಇದರಿರವ ತಿಳಿಯಬೇಕೆಂದು ಹೋದಡೆ ಆನು ಕಾಣೆ,
ಕಪಿಲಸಿದ್ಧಮಲ್ಲಯ್ಯಾ. ॥ ೪೫ ॥

೮೯೪

ಭಾವಲಿಂಗದಿಂದ ಇಷ್ಟಲಿಂಗವ ಧ್ಯಾನಿಸಹೋದಡೆ,
ಇಷ್ಟಲಿಂಗವೆ ಭಾವಲಿಂಗವಾಯಿತ್ತು.
ಭಾವಲಿಂಗದಿಂದ ತ್ರಿವಿಧವನರಿದೆಹೆನೆಂದಡೆ,
ಭಾವಲಿಂಗವನೆ ಮಹಾಲಿಂಗವಾಗಿ ಆಳವಡಿಸಿದನು,
ಎನ್ನ ಗುರು ಚೆನ್ನಬಸವಣ್ಣನು ಕಾಣಾ, ಕಪಿಲಸಿದ್ಧಮಲ್ಲೇಶಾ. ॥ ೪೬ ॥

೮೯೫

ಅವ್ವಾ, ನೀ ನೀರೆರೆದಡೆ ನೆನೆಯನು,
ಎರೆಯದಿರ್ದಡೆ ಒಣಗನು, ನೋಡವ್ವಾ.
ಎರೆದು ಎರೆಯದಿರ್ದಡೆ ಕೂಡಿಕೊಂಡು ಮರೆವೆನವ್ವಾ,
ಕಪಿಲಸಿದ್ಧಮಲ್ಲಯ್ಯನವ್ವಾ. ॥ ೪೭ ॥

೮೯೬

ಅವ್ವಾ ಅವ್ವಾ, ನಾನೇನೆಂಬೆನೀ ವಿಚಿತ್ರವನು !
ನೀರನೆರೆಯದೆ ಆದುದು ನೋಡವ್ವಾ ವೃಕ್ಷ ;
ಗಾಳಿಯಿಲ್ಲದೆ ಚಲಿಸುತ್ತಿಹುದು ; ಋತುವಿದಾಗದೆ ಫಲವಾಗುವುದು.
ಅದ ನೋಡಿ ನಮ್ಮ ಚೆನ್ನಬಸವಣ್ಣ ಮೊಳಕೆಯ ಚಿವುಟಿ ಒಗೆವ ನೋಡವ್ವಾ.
ಅದೆ ಕಪಿಲಸಿದ್ಧಮಲ್ಲೇಶನ ರೂಪು ನೋಡವ್ವಾ. ॥ ೪೮ ॥

೫೯೭

ಶಬ್ದ ನೋಡುವಡೆ ನಪುಂಸಕ ;
ಅದರ ಕಾರ್ಯ ನೋಡುವಡೆ,
ಹರಿಹರ ಬ್ರಹ್ಮಾದಿಗಳನ್ನೆಲ್ಲ ಮುರಿದಿಕ್ಕಿತ್ತು.
ಅದರಂತೆ ಹೋದಡೆ ತನ್ನನ್ನು ಬಿಡದು.
ತಾ ತಿಳಿದು ಹೋದಡೆ ತನ್ನ ಕಡೆ ಬರದು ನೋಡಾ,
ಕಪಿಲಸಿದ್ಧಮಲ್ಲಯ್ಯಾ. ॥ ೫೯ ॥

೫೯೮

ಮನಸ್ ಶಬ್ದ ನಪುಂಸಕ ಎಂಬ ನ್ಯಾಯಜ್ಞನ ಮಾತು
ಪುಸಿಯಲ್ಲ ನೋಡಯ್ಯಾ.
ಶಬ್ದ ನಪುಂಸಕವಾಗಿ ಕಾರ್ಯ ಪುಲ್ಲಿಂಗವಾದಡೆ,
ಆ ಶಬ್ದ ಪಾಣಿನಿಗೆ ತಿಳಿಯದೆ ಹೋಯಿತ್ತೇನಯ್ಯಾ ?
ಕಪಿಲಸಿದ್ಧಮಲ್ಲಯ್ಯಾ. ॥ ೬೦ ॥

೫೯೯

ವೇದ ವೇದಾಂತವನೋದಿದಡೇನು ಮನಸ್ಸೂತಕವಳಿಯದನ್ನಕ್ಕ ?
ಸಿದ್ಧ ಸಿದ್ಧಾಂತವ ಶ್ರಮಬಟ್ಟಡೇನು ಸಾಧಿಸಿ ಕೀರ್ತಿಯ ಪಡೆಯದನ್ನಕ ?
ಇವೆಲ್ಲ ಹೊರಗಣ ಮಾತು.
ಮಾತೊಂದೆ ನಮ್ಮ ಕಪಿಲಸಿದ್ಧಮಲ್ಲೇಶನಲ್ಲಿ
ಸದಾಚಾರ ಸನ್ಮಾರ್ಗವಯ್ಯಾ. ॥ ೬೧ ॥

೬೦೦

ವೇದ ವೇದಾಂತವನೋದಿದವರೆಲ್ಲ ನಿರಂಜನರಾದಡೆ,
ಜನರಾರೊ ಈ ಲೋಕದಲ್ಲಿ ?
ಸಿದ್ಧಾಂತವ ಸಾಧಿಸಿದವರೆಲ್ಲ ದೇವರಾದಡೆ,
ಸುರರಾರೋ ಸ್ವರ್ಗದಲ್ಲಿ ?
ವೇದಾಂತವಳವಟ್ಟಿತ್ತು ಪ್ರಥಮರಿಗೆ,
ಸಿದ್ಧಾಂತವಳವಟ್ಟಿತ್ತು ಒಬ್ಬೊಬ್ಬರಿಗೆ.
ಈ ಎರಡರ ಕೀಲವಳವಟ್ಟಿತ್ತು ಎನ್ನ ಗುರು ಚೆನ್ನಬಸವಣ್ಣಂಗೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೨

೯೦೧

ತಿಳಿನೀರೆಂಬೆ ತಿಳಿನೀರೆಂಬೆ,
ತಿಳಿ ನೀ ಎಂದು ಒಂದು ದಿನ ಅಂದಿಲ್ಲಲೆ ಮಾನವಾ.
ಕ್ಷಣಕ್ಕೆ ಕ್ಷಣಕ್ಕೆ ತಿಳಿ ನೀ ಎಂದಡೆ,
ತಳುಹದೆ ತನ್ನ ನಿಜವ ಕೊಡನೆ ಕಪಿಲಸಿದ್ಧಮಲ್ಲೇಂದ್ರ ? ॥ ೫೩ ॥

೯೦೨

ಅಂಗಕ್ಕೆ ಭೋಗವ ಕೊಟ್ಟವರ ನೋಡಿದೆನಲ್ಲದೆ,
ಲಿಂಗಕ್ಕೆ ಕೊಟ್ಟವರ ನೋಡಲಿಲ್ಲ.
ಲಿಂಗಕ್ಕೆ ಷೋಡಶೋಪಚಾರಂಗಳ ಕೊಟ್ಟವರ ನೋಡಿದೆನಲ್ಲದೆ,
ಮನವ ಕೊಟ್ಟವರ ನೋಡಲಿಲ್ಲ.
ಮನವ ಕೊಟ್ಟವರ ನೋಡಿದೆನಲ್ಲದೆ,
ಮನ ಲಿಂಗವಾದವರ ನೋಡಲಿಲ್ಲ,
ಕಪಿಲಸಿದ್ಧಮಲ್ಲಯ್ಯಾ. ॥ ೫೪ ॥

೯೦೩

ಉಂಡು ಉಂಡು ಹೋಗುವವರ ನೋಡಿ ನೋಡಿ
ನಾಚಿತ್ತಯ್ಯಾ ಎನ್ನ ಮನ.
ಎಡಹಿ ಎಡಹಿ ಹೋಗುವವರ ನೋಡಿ ನೋಡಿ ನಾಚಿತ್ತಯ್ಯಾ ಎನ್ನ ಮನ.
ಉಣದೆ ಎಡಹದ ಹೋದಡೆ ಅವರೆ ಬಸವಾದಿ ಪ್ರಮಥರೆಂಬೆ ;
ಅವರೆ ನೀವೆಂದು ಭಾವಿಸುವೆನಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ !
॥ ೫೫ ॥

೯೦೪

ಜಲವ ಚರದೆ, ಪಾವಕವ ಹೊತ್ತಿಸದೆ,
ಪಾಕವ ಮಾಡಿ ಉಣಬಲ್ಲಡೆ ಐಕ್ಯನೆಂಬೆ, ಆರೂಢನೆಂಬೆ,
ಆರುಸ್ಥಲದ ಮೀರಿದ ಮಹಾಯೋಗಿ ಎಂಬೆ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೬ ॥

೯೦೫

ನೀರ ಮೇಲೆ ನಡೆವವರನಂತರುಂಟು ;
ಖೇಚರರಾಗಿ ನಡೆವವರನಂತರುಂಟು.

ಕಪಿಲಸಿದ್ಧಮಲ್ಲಿಕಾರ್ಜುನಾ,
ಕಾಲಿಲ್ಲದೆ ನಡೆವವರೊರ್ವರಿಲ್ಲ. ॥ ೫೭ ॥

೬೦೬

ಮಣಿಗಳಿಗೆ ಎಚ್ಚ ಹಿಡಿಯುವರಲ್ಲದೆ,
ಮನಕ್ಕೆ ಎಚ್ಚ ಹಿಡಿಯುವರಾರೂ ಇಲ್ಲ.
ವ್ಯಾಧಿಗೆ ಔಷಧವ ಕೊಡುವರಲ್ಲದೆ,
ಮರಣಕ್ಕೆ ಔಷಧವ ಕೊಡುವವರಾರೂ ಇಲ್ಲ.
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ಗರ್ಭದೊಳು
ಪ್ರಮಥ ಚಿಂತಾಮಣಿ ಚೆನ್ನಬಸವಣ್ಣನಲ್ಲದೆ ಮತ್ತಾರೂ ಇಲ್ಲ. ॥ ೫೮ ॥

೬೦೭

ವೇಷದಲ್ಲಿ ಭಕ್ತನಾದಡೇನು, ವೇಷದಲ್ಲಿ ಮಹೇಶನಾದಡೇನು,
ಗುಣವಿಲ್ಲದನ್ನಕರ ?
ಕ್ಷೀರಕ್ಕೂ ತಕ್ರಕ್ಕೂ ಭೇದವೇನುಂಟು ?
ರುಚಿಯಿಂದಲ್ಲದೆ ರೂಪದಿಂದವೆ ? ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೯ ॥

೬೦೮

ದುಷ್ಕರ್ಮಂಗಳ ಮಾಡುವರನಂತರುಂಟು,
ಸತ್ಕರ್ಮಂಗಳ ಮಾಡುವರೊಬ್ಬರೂ ಇಲ್ಲ ನೋಡಯ್ಯಾ.
ದುಷ್ಕರ್ಮವೆಂದಡೆ ವಿಷಯವಾಸನೆ,
ಸತ್ಕರ್ಮವೆಂದಡೆ ಕಪಿಲಸಿದ್ಧಮಲ್ಲಿಕಾರ್ಜುನನ ಕೂಡುವ ವಾಸನೆ. ॥ ೬೦ ॥

೬೦೯

ಅರುವತ್ತೆಂಟು ಸಾವಿರ ವಚನಂಗಳ ಹಾಡಿ ಹಾಡಿ
ಸೋತಿತ್ತೆನ್ನ ಮನ ನೋಡಯ್ಯಾ.
ಹಾಡುವುದೊಂದೆ ವಚನ, ನೋಡುವುದೊಂದೆ ವಚನ :
ವಿಷಯ ಬಿಟ್ಟು ನಿರ್ವಿಷಯನಾಗುವುದೊಂದೆ ವಚನ,
ಕಪಿಲಸಿದ್ಧಮಲ್ಲೇಶನಲ್ಲಿ. ॥ ೬೧ ॥

೯೧೦

ನಿರ್ವಿಷಯನಾಗಬೇಕೆಂದು ಹೇಳುವರಲ್ಲದೆ,
ಆದವರನೊಬ್ಬರನೂ ಕಾಣೆ ನೋಡಯ್ಯಾ.
ಆಗುವುದೆ, ಆಗುವುದೆ ಮಾಯಾಂಶಿಕಂಗೆ ?
ಆಗುವುದು ನಿಸ್ಸಂಶಿಕಂಗಲ್ಲದೆ ಇನ್ನಾರಿಗಯ್ಯಾ,
ಕಪಿಲಸಿದ್ಧಮಲ್ಲಿನಾಥಾ. ॥ ೬೨ ॥

೯೧೧

ಶ್ರುತಿ ಸ್ಮೃತಿಪುರಾಣಾಗಮೋಪನಿಷದ್ವಾಕ್ಯಂಗಳನರಿವರಲ್ಲದೆ,
ಶ್ರುತ್ಯತೀತಮೂರ್ತಿಯನರಿದವರು ಒಬ್ಬರೂ ಇಲ್ಲ ನೋಡಯ್ಯಾ.
‘ಸರ್ವಂ ಖಲ್ವಿದಂ ಬ್ರಹ್ಮ’ ಎಂದರಿದು ಮತ್ತೇನನರಿಯದೆ ಹೋದೆನಯ್ಯಾ,
ನಿಮ್ಮ ಮಹಾಬಯಲಲ್ಲದೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೩ ॥

೯೧೨

ಲಿಂಗಪೂಜೆಯ ಮಾಡಿ ಲಿಂಗದ ಕರುಣವ ಹಡೆಯಿರೆಂದು ಹೇಳುವರಲ್ಲದೆ,
ನೀನಾ ಲಿಂಗವಾಗೆಂದು ಹೇಳುವರಿಲ್ಲ ನೋಡಯ್ಯಾ.
ಲಿಂಗ ನೀನೆಂದು ಹೇಳುವರಲ್ಲದೆ,
ಲಿಂಗದ ಲೀಲೆಯ ಹೇಳುವರಿಲ್ಲ ನೋಡಯ್ಯಾ.
ಲಿಂಗದ ಲೀಲೆಯ ಹೇಳುವರಲ್ಲದೆ,
ಲಿಂಗ ತಾನಾದವರಿಲ್ಲ ನೋಡಯ್ಯಾ.
ಲಿಂಗ ತಾವಾದವರು ಇಹರಲ್ಲದೆ,
ಲಿಂಗ ಶಬ್ದಮುಗ್ಧವಾದವರು ಒಬ್ಬರೂ ಇಲ್ಲ,
ಕಪಿಲಸಿದ್ಧಮಲ್ಲಯ್ಯಾ. ॥ ೬೪ ॥

೯೧೩

ಸಿಂಹ ಮದಕರಿಯ ಮೇಲೆ ಹಾರುವುದಲ್ಲದೆ,
ಮದಮಹಿಷಿಯ ಮೇಲೆ ಹಾರುವುದೆ ಅಯ್ಯಾ ?
ಪಕ್ಷಿ ಆಕಾಶದಲ್ಲಿ ಹಾರುವುದಲ್ಲದೆ,
ಪಂಜರದಲ್ಲಿ ಹಾರದು ನೋಡಯ್ಯಾ.
ನಮ್ಮ ಕಪಿಲಸಿದ್ಧಮಲ್ಲೇಶನನರಿವವರು
ಜ್ಞಾನದ ಮೇಲೆ ಹಾರುವರಲ್ಲದೆ ಅಜ್ಞಾನದಲ್ಲಿ ಹಾರರು. ॥ ೬೫ ॥

೯೧೪

ನಿತ್ಯವೆಂದಡೆ, ಲಿಂಗ, ಅನಿತ್ಯವೆಂದಡೆ ಅಂಗ.
ನಿತ್ಯವೆಂದಡೆ ಜ್ಞಾನ, ಅನಿತ್ಯವೆಂದಡೆ ಅಜ್ಞಾನ.
ನಿತ್ಯ ಕಾರ್ಯವು ಸತ್ಕರ್ಮ, ಅನಿತ್ಯ ಕಾರ್ಯಗಳೆ ವಿಷಯಂಗಳು.
ವಿಷಯಂಗಳೆ ನಿತ್ಯಂಗಳಾಗಲು,
ಜ್ಞಾನಿಯೆಂದು, ಐಕ್ಯನೆಂದು, ಪ್ರಮಥನೆಂದು, ವೀರಶೈವನೆಂದು,
ಕಪಿಲಸಿದ್ಧಮಲ್ಲಿಕಾರ್ಜುನನೆಂದು ಬೇರೆ ಉಂಟೇನೊ,
ಹಾವಿನಹಾಳ ಕಲ್ಲಯ್ಯಾ ? ॥ ೬೬ ॥

೯೧೫

ಎಲೆ ದೇವಾ, ನೀನೊಬ್ಬನೆ ಹಲವು ರೂಪಾಗಿ ಬಂದೆಯಯ್ಯಾ ;
ಭಕ್ತಿಯಲ್ಲಿ ಬಸವಣ್ಣನಾಗಿ ಬಂದಿರಿ ;
ಮನದ ಮೈಲಿಗೆಯ ತೊಳೆಯುವಲ್ಲಿ ಮಡಿವಾಳನಾಗಿ ಬಂದಿರಿ ;
ಎನ್ನ ಭಕ್ತಿಗೆ ಸೊನ್ನಲಿಗೆಯಲ್ಲಿ ಕಪಿಲಸಿದ್ಧಮಲ್ಲನಾಗಿ ಬಂದಿರಿ. ॥ ೬೭ ॥

೯೧೬

ಭಕ್ತನಾದಡೆ ಬಸವಣ್ಣನಂತಾಗಬೇಕು.
ಜಂಗಮವಾದಡೆ ಪ್ರಭುವಿನಂತಾಗಬೇಕು.
ಭೋಗಿಯಾದಡೆ ನಮ್ಮ ಗುರು ಚೆನ್ನಬಸವಣ್ಣನಂತಾಗಬೇಕು.
ಯೋಗಿಯಾದಡೆ ನನ್ನಂತಾಗಬೇಕು ನೋಡಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೮ ॥

೯೧೭

ಧರೆ ಇಲ್ಲದೆ ಬೆಳೆಯಬಹುದೆ ಧಾನ್ಯವ ?
ಮಳೆ ಇಲ್ಲದೆ ನೋಡಬಹುದೆ ಬೆಳೆಗಳ ?
ಒಂದು ವಸ್ತುವಿಗಾದಡೂ ದ್ವಂದ್ವವೆ ಬೇಕು.
ನಮ್ಮ ಕಪಿಲಸಿದ್ಧಮಲ್ಲನ ನೋಡುವಡೆ
ಲಿಂಗಪೂಜೆ ಜಂಗಮದಾಸೋಹವೆ ಬೇಕು. ॥ ೬೯ ॥

೯೧೮

ಲಿಂಗಾಂಗ ಒಂದಾದುದಕ್ಕೆ ಇದೆ ಕುರುಹು ನೋಡಾ :
ಅಂಗಗುಣಂಗಳ ಬಿಟ್ಟು ಲಿಂಗಗುಣಂಗಳಾದಡೆ,
ಅದೆ ಲಿಂಗಾಂಗಸಾಮರಸ್ಯ.
ಲಿಂಗಗುಣಂಗಳ ಬಿಟ್ಟು ಅಂಗಗುಣಂಗಳಾದಡೆ,
ಅದೆ ಯಮಲೋಕಸಾದೃಶ್ಯ.
ಇದು ಪುಸಿಯಲ್ಲ, ಪುಸಿಯಲ್ಲ !
ಪುಸಿಯಾದಡೆ ನೀನೇಕೆ ಒಲಿಯಲಿಲ್ಲೆಮ್ಮಣ್ಣ ಬೊಮ್ಮಯ್ಯಂಗೆ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ ? ॥ ೭೦ ॥

೯೧೯

ಅವರವರ ಸದಾಚರಣೆ ಅವರವರಿಗೆ ;
ಅವರವರ ದುರಾಚರಣೆ ಅವರವರಿಗೆ.
ಅವರವರ ಸದಾಚರಣೆ ನಮಗೇನು ಮೋಕ್ಷವ ಕೊಟ್ಟಿತ್ತೊ ?
ಅವರವರ ದುರಾಚರಣೆ ನಮಗೇನು ಭವದಲ್ಲಿ ತಳ್ಳಿಬಿಟ್ಟಿತ್ತೊ ?
ನಮ್ಮ ಲಕ್ಷ್ಯ ಲಾಂಛನದಲ್ಲಿ, ನಿಮ್ಮ ಲಕ್ಷ್ಯ ನಮ್ಮಲ್ಲಿ ;
ಇದು ಸಟೆಯೆಂದು ನುಡಿಯಬೇಡ, ದೇವಾ.
ಮಗನಿಗಾದ ನೋವು ತಂದೆ-ತಾಯಿಗಳಿಗಾಗದೆ ಅನ್ಯರಿಗೆಲ್ಲಿಹುದೊ ?
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ, ನಮ್ಮ ನೋವೆ ನಿಮ್ಮ ನೋವು. ॥ ೭೧ ॥

೯೨೦

ಭಕ್ತನಾದ ಬಳಿಕ, ಅವರಿವರೆನ್ನದೆ ಮಾಡುವುದಯ್ಯಾ ಪ್ರಸಂಗವ.
ಭಕ್ತನಾದ ಬಳಿಕ, ಅವರಿವರೆನ್ನದೆ ಶರಣೆಂದು ಮನ್ನಿಸುವುದಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೨ ॥

೯೨೧

ಭಕ್ತಿಯ ಬೆಳಸಿ ಪೇಳಿದೆನಲ್ಲದೆ,
ಭಕ್ತಿಯ ಮಾಡಿ ಬೆಳೆಯಲಿಲ್ಲ ನಾನು.
ಭಕ್ತಿಯ ಶಕ್ತಿ ಬಸವಣ್ಣಂಗಾಯಿತ್ತು ;
ಜ್ಞಾನದ ಶಕ್ತಿ ಚೆನ್ನಬಸವಣ್ಣಂಗಾಯಿತ್ತು.

ಯೋಗದ ಸಿದ್ಧಿ ಸಿದ್ಧರಾಮಂಗಾಯಿತ್ತು,
ನಿಮ್ಮರಮನೆಯಲ್ಲಿ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೩ ॥

೬೨೨

ಭಕ್ತ ಭಕ್ತನ ಕಂಡಲ್ಲಿ ಕೈಮುಗಿವುದೆ ಭಕ್ತಸ್ಥಲ.
ಜಂಗಮ ಜಂಗಮವ ಕಂಡಲ್ಲಿ ಶರಣೆಂಬುದೆ ಜಂಗಮಸ್ಥಲ.
ಭಕ್ತ ಜಂಗಮ ಎಂದು ಬೇರುಂಟೆ ?
ರಸದಂತೆ ಭಕ್ತ . ರುಚಿಯಂತೆ ಜಂಗಮ ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೪ ॥

೬೨೩

ಭಕ್ತನು ಭಕ್ತಿಯಿಂದರ್ಪಣ ಮಾಡಿಸುವಡೆ,
ಭಕ್ತಂಗೆ ಭಕ್ತಸ್ಥಲ.
ಜಂಗಮನು ಆ ಭಕ್ತನ ಭಕ್ತಿಯ ವಹಿಸಿ ಪಾದೋದಕ ಕೊಡುವುದೆ
ಆ ಜಂಗಮಕ್ಕೆ ಭಕ್ತಸ್ಥಲ.
ಭಕ್ತಂಗಾಗಲಿ, ಜಂಗಮಕ್ಕಾಗಲಿ ಭಕ್ತಿಯೆ ಬೇಕು.
ಭಕ್ತಿಯಿಲ್ಲದೆ ಮೆರೆವವರು ಭಕ್ತರಲ್ಲಾ ಜಂಗಮರಲ್ಲಾ ನೋಡಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೫ ॥

೬೨೪

ಭಕ್ತಂಗೆ ಜಂಗಮಂಗೆ
ರೂಪದಿಂದ ಭೇದವೊ, ಆಚರಣೆಯಿಂದ ಭೇದವೊ ? ಅಲ್ಲಲ್ಲ.
ಭಕ್ತನಾದರೊ, ಮೂರಕ್ಕೆ ಒಳಗು ;
ಜಂಗಮವಾದರೊ, ಮೂರಕ್ಕೆ ಹೊರಗು.
ಒಳಗಾದವರಿಗೆ ಹೊರಗಾದವರ ಪಾದೋದಕವಲ್ಲದೆ
ಒಳಗಾದವರ ಪಾದೋದಕ ಸಲ್ಲದು.
ತೆಗೆದುಕೊಂಡವರಿಗೆ ನರಕ ತಪ್ಪದು ;
ಕೊಟ್ಟವಂಗೆಯೂ ಭವ ಹಿಂಗದು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೬ ॥

೯೨೫

ಎಲೆ ಅಯ್ಯಾ,
ಅವರ ಗುಣಕ್ಕೆ ಮುನಿವೆನಲ್ಲದೆ ಅವರ ರೂಪಿಂಗೆ ಮುನಿವೆನೆ ? ಇಲ್ಲಿಲ್ಲ.
ಅವನು ಅನಾಚಾರದಲ್ಲಿ ಆಚರಿಸಿದಡೆ,
ತಂದೆ ಸದಾಚಾರಕ್ಕೆ ತರಬೇಕೆಂದು [ಮುನಿವನಲ್ಲದೆ]
ಆತನ ಮೇಲೆ ಮುನಿವನೆ ? ಇಲ್ಲಿಲ್ಲ.
ನಾನು ಅಂತಾಗಬೇಕೆಂದು ಮುನಿವೆನಲ್ಲದೆ ಜಂಗಮಕ್ಕೆ ಮುನಿವೆನೆ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೭ ॥

೯೨೬

ಎಲೆ ಅಯ್ಯಾ ಅಯ್ಯಾ,
ಎನ್ನ ಶಿರ ನಿಮ್ಮ ಚರಣವ ಮುಟ್ಟಿದ ಬಳಿಕ
ಎನ್ನಲ್ಲಿ ಗುಣದೋಷವನರಸುವರೆ ?
'ಭೃತ್ಯಾಪರಾಧಃ ಸ್ವಾಮಿನೋ ದಂಡಹಃ' !
ಕಪಿಲಸಿದ್ಧಮಲ್ಲಿಕಾರ್ಜುನದೇವಾ,
ತ್ರಾಹಿ ತ್ರಾಹಿ, ಕಾಯಯ್ಯಾ. ॥ ೭೮ ॥

೯೨೭

ನಿಮ್ಮ ನಿಜದಂತುವನಾರು ಬಲ್ಲರಯ್ಯಾ ?
ಚತುರ್ದಶ ಭುವನಂಗಳೆಲ್ಲವು
ನಿಮ್ಮ ಕರಸ್ಥಳದೊಳಗಡಗಿಪ್ಪವಯ್ಯಾ.
ನಿಮಗೆಣೆಯಪ್ಪ ದೇವರುಂಟೆ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೯ ॥

೯೨೮

ಅನಂತಕೋಟಿ ದೇವರೆಲ್ಲರೂ ತಂಡತಂಡದಲ್ಲಿ ದಂಡ ಪ್ರಣಾಮಂಗೈಯಲು
ಅವರ ಮಕುಟ ಸಂಘಟ್ಟ ರಜ ಉದುರಲಿಕ್ಕೆ
ಅಲ್ಲಿ ರಜತಗಿರಿಗಳಾದವು,
ಕಪಿಲಸಿದ್ಧಮಲ್ಲಿಕಾರ್ಜುನ ದೇವರದೇವಾ, ನಿಮ್ಮ ಮುಂದೆ. ॥ ೮೦ ॥

೯೨೯

ಹರಿಯೆಂಬಾತ ನಿಮ್ಮ ಚರಣವನರಿಯ ;
ಬ್ರಹ್ಮನೆಂಬಾತ ನಿಮ್ಮ ಮಕುಟವನರಿಯ ;
ಯತಿ ವ್ರತಿ ಋಷಿಗಳೆಂಬವರು ನಿಮ್ಮ ಒಳಗನರಿಯರು ;
ಸಮಸ್ತ ದೇವರ್ಕಳು ನಿಮ್ಮ ರೋಮದ ಪ್ರಮಾಣವನರಿಯರು ;
ಶತಕೋಟಿ ಸೂರ್ಯರು ನಿಮ್ಮ ಬೆಳಗ ಕಾಣಲರಿಯರು.
ಕಪಿಲಸಿದ್ಧಮಲ್ಲಿಕಾರ್ಜುನಾ,
ನಾ ನಿಮ್ಮನರಿಯಬಲ್ಲವನೇ ಅಯ್ಯಾ ? ॥ ೮೧ ॥

೯೩೦

ನೆನಸುವೆ ಮರಸುವೆ ನೀನೆನ್ನ ತಂದೆ,
ಎನ್ನ ಗುಣದೋಷ ನಿಮ್ಮದು.
ಕೇಳಯ್ಯಾ ಎನ್ನ ಬಿನ್ನಪವ :
ನಿಮ್ಮ ನೆನೆವವ ನಾನಲ್ಲ ಕಂಡಯ್ಯಾ ;
ನಿಮ್ಮಿಂದ ನಿಮ್ಮ ನೆನೆವೆನು, ಕೃಪೆಮಾಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೨ ॥

೯೩೧

ಕೈಗಳ ಬಿಚ್ಚಿ ಬಿಸಾಟಡೆ ಬಿಡೆನು !
ಮೈಗಳ ಕಡಿದು ಹರಹಿದಡೆ ಬಿಡೆನು, ಬಿಡೆ ನಿಮ್ಮ ಚರಣವ.
ತನುವಳಿದಡೆ ಜ್ಞಾನತನುವಿಂದ ಕೂಡುವೆ
ಕಪಿಲಸಿದ್ಧಮಲ್ಲಿಕಾರ್ಜುನಾ ನಿಮ್ಮ. ॥ ೮೩ ॥

೯೩೨

ಸ್ತೋತ್ರವೆಂಬುದು ನೀನು ಮಾಡಲಾದವು ಕಂಡಯ್ಯಾ.
ಮೂರ್ತಿಯೆಂಬುದು ನೀನು ನೆನೆದಡಾದುದು ಕಂಡಯ್ಯಾ.
ಆ ಮೂರ್ತಿಯೆಂಬುದು ನಿನ್ನ ಸ್ವಭಾವವು ಕಂಡಯ್ಯಾ.
ಎನ್ನ ಹೃತ್ಕಮಲದೊಳಗೆ ಹುಟ್ಟುವ ಸ್ಮರಣೆ ನಿನ್ನ ಗತಿ ನೋಡಯ್ಯಾ.
ಕಪಿಲಸಿದ್ಧಮಲ್ಲಿನಾಥಯ್ಯಾ,
ಬಾಣ ಮಯೂರ ಹಲಾಯುಧರಿಗೆಂತೊಲಿದೆ ಹೇಳಯ್ಯಾ. ॥ ೮೪

೯೩೩

ವೇದಪ್ರಿಯನಲ್ಲಯ್ಯಾ ನೀನು ;
ಶಾಸ್ತ್ರಪ್ರಿಯನಲ್ಲಯ್ಯಾ ನೀನು ;
ನಾದಪ್ರಿಯನಲ್ಲಯ್ಯಾ ನೀನು ;
ಸ್ತೋತ್ರಪ್ರಿಯನಲ್ಲಯ್ಯಾ ನೀನು ;
ಯುಕ್ತಿಪ್ರಿಯನಲ್ಲಯ್ಯಾ ನೀನು ;
ಮುಕ್ತಿಪ್ರಿಯನಲ್ಲಯ್ಯಾ ನೀನು ;
ಭಕ್ತಿಪ್ರಿಯನೆಂದು ನಂಬಿದೆ, ಮರೆವೊಕ್ಕೆ
ಕಾಯಯ್ಯಾ ನೀನು, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೮೫ ॥

೯೩೪

ವೇದಪ್ರಿಯನಾದಡೆ ಛೇದಿಸುವೆಯಾ ಬ್ರಹ್ಮನ ಮಸ್ತಕವ ?
ಶಾಸ್ತ್ರಪ್ರಿಯನಾದಡೆ ಒಳಗುಮಾಡುವೆಯಾ ಶಬ್ದಕ್ಕೆ ?
ಮುಕ್ತಿಪ್ರಿಯನಾದಡೆ ಭವಕ್ಕೆ ತರುವೆಯಾ ಎನ್ನ ?
ಭಕ್ತಿಪ್ರಿಯನಾದಲ್ಲಿ ಒಯ್ಯಲಿಲ್ಲವೆ ಬೇಡನ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೬ ॥

೯೩೫

ಎನ್ನ ಕೋಪವೆಂಬುದು ನಿಮ್ಮ ಕಣ್ಣು ನೋಡಯ್ಯಾ ;
ನಾನೇತರೊಳಗೇನು ಹೇಳಯ್ಯಾ !
ನಿಮ್ಮ ಜ್ಞಾನದ ತೇಜದ ಮುಂದೆ ಎನ್ನರಿವು ಏತರದು ಹೇಳಯ್ಯಾ !
ಎನ್ನ ದಿಟದ ಭಕ್ತಿ ನಿಮ್ಮ ರೂಪು ಕಂಡಯ್ಯಾ ;
ಎನ್ನ ಸಟೆಯು ಭಕ್ತಿ ನಿಮ್ಮ ರೂಪು ಕಂಡಯ್ಯಾ,
ಎನಗೆ ಬೇರೆ ಸ್ವತಂತ್ರತೆಯುಂಟೆ, ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೭ ॥

೯೩೬

ಓರಿದು ಆಗ್ರಹದಿಂದೆ ನೀನೆನ್ನ ಮೇಲಿಕ್ಕಿ
ಒಲ್ಲೆ ಸಾರೆಂದು ಹೋಹೆ ಕಾಣಯ್ಯಾ,
ಕೈಯ ಹಿಡಿವಡೆ ಅಂತು ಮುರುಚುವೆ ;

ಎನ್ನ ಉರವಲಪ್ಪಿ ಹಿಡಿದಡೆಂತು ಮುರುಚುವೆ ?
ನೀನಿಂತು ಹೋಹ ಪರಿಗಳ ನಿಲಿಸುವೆನು ಕೇಳು ಗಡಾ !
ಸೂಕ್ಷ್ಮತನುವಿನಲ್ಲಿ ಹಿಡಿದಡೆ ಎಂತು ಮುರುಚುವೆ ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. || ೮೮ ||

೯೩೭

ಎನ್ನನಾಗಳೆ ಬಂದಿವಿಡಿದೆ ಗಡಾ ನೀನು.
ನಿಮ್ಮ ಹಿಡಿವಡೆ ಹಿಡಿವರು, ತನುವಿರೆ ತನು ಬೇರಾದವರು.
ನಿಮ್ಮ ಹಿಡಿವಡೆ ಹಿಡಿವರು, ಮನವಿರೆ ಮನ ಬೇರಾದವರು.
ನಿಮ್ಮ ಹಿಡಿವಡೆ ಹಿಡಿವರು, ಕೈಯಿರೆ ಕೈ ಬೇರಾದವರು.
ಈಸುಳ್ಳವರು ಮೊದಲಾಗಿ ನಿಮ್ಮ ಹಿಡಿಯಲಾರರು.
ಕಪಿಲಸಿದ್ಧಮಲ್ಲಿಕಾರ್ಜುನಾ,
ನಿಮ್ಮ ಹಿಡಿದು ತಡೆಯಲಾನೇತರವನಲ್ಲ.
ಕರುಣದಿಂದ ಬಾರಾ, ಎನ್ನ ದೇವರ ದೇವಾ. || ೮೯ ||

೯೩೮

ತೆರಹಿಲ್ಲದ ಘನವು ಕುರುಹಿಂಗೆ ಬಂದ ಕಾರಣವೇನು ಹೇಳಾ,
ಎಲೆ ಅಯ್ಯಾ, ಭಕ್ತಿಕಾರಣ.
ಇಚ್ಛೆಗೆ ಬಂದ ಬಳಿಕ ಉಪಚಾರಕ್ಕೆ ತೆರಹುಂಟೆ ?
ಕಪಿಲಸಿದ್ಧಮಲ್ಲಿನಾಥಾ, ಬಿಜಯಮಾಡಾ, ಕರುಣಗಳರಸಾ. || ೯೦ ||

೯೩೯

ಅಯ್ಯಾ, ಕಾಯ ಲಿಂಗವೊ, ಕಾಯದಲ್ಲಿ ಸಾರಿಪ್ಪ ಲಿಂಗ ಲಿಂಗವೊ ?
ಪ್ರಾಣ ಲಿಂಗವೊ, ಪ್ರಾಣದಲ್ಲಿ ಸಾರಿಪ್ಪ ಲಿಂಗ ಲಿಂಗವೊ ?
ಜ್ಞಾನ ಲಿಂಗವೊ, ಜ್ಞಾನದ ಮೊನೆಯಲ್ಲಿ ಬೆಳಗುವ ಲಿಂಗ ಲಿಂಗವೊ ?
ಲಿಂಗ ಪ್ರಾಣ, ಪ್ರಾಣ ಲಿಂಗವೆಂತೆಂದರಿಯೆನು.
ನಿಮ್ಮ ಕಾಯದ ಕರಸ್ಥಲವ ಸಾರಿದ ಲಿಂಗ
ಪ್ರಾಣದೊಳಗೆ ವೇದ್ಯವಾಹ ಪರಿಯನುಪದೇಶಿಸಿ ಕೃಪೆಮಾಡಾ ಪ್ರಭುವೆ,
ಕಪಿಲಸಿದ್ಧಮಲ್ಲಿಕಾರ್ಜುನಾ. || ೯೧ ||

೯೪೦

ಬೆಳಗು ಬೆಳಗು ಹಳಚುವಲ್ಲಿ ಕತ್ತಲೆ ಉಳಿಯಬಲ್ಲುದೆ ಅಯ್ಯಾ ?
ಶರಣರು ಮಹಾನುಭಾವ ಗೋಷ್ಠಿಯ ಮಾಡುವಲ್ಲಿ,

ಸಂಗದೊಳಿರ್ದವರ ಅಜ್ಞಾನವಳಿದು ನಿಜವನೈದುವರಯ್ಯಾ.
ನಿಮ್ಮ ಮಹಾನುಭಾವದ ಸೋಂಕಿನ ಸೆರಗಿನೊಳಗಿರ್ದು
ನಾನು ಪರಮಸುಖಿಯಾಗಿ ಮಡಿವಾಳನ ಪಾದದಲ್ಲಿ
ಮನ ಮಗ್ನವಾದೆನು ಕಾಣಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೯೨ ॥

೯೪೧

ತನು ಉಂಟೆಂಬ ಭಾವ ಮನದಲ್ಲಿಲ್ಲವಯ್ಯಾ ;
ಮನ ಉಂಟೆಂಬ ಭಾವ ಅರುಹಿನಲ್ಲಿಲ್ಲವಯ್ಯಾ ;
ಅರುಹು ಉಂಟೆಂಬ ಭಾವ ನುಡಿಯೊಳಗಿಲ್ಲವಯ್ಯಾ.
ಇಂತೀ ತನು ಮನ ಜ್ಞಾನವೆಂಬ ತ್ರಿವಿಧವು ಏಕಾರ್ಥವಾದ ಬಳಿಕ,
ಆವ ತನುವಿನ ಮೇಲೆ ಸ್ವಾಯತವ ಮಾಡುವೆ ?
ಎನ್ನ ಕಾಯವೆ ಬಸವಣ್ಣನು, ಎನ್ನ ಪ್ರಾಣಲಿಂಗವೆ ಪ್ರಭುದೇವರು.
ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ
ಒಳಗು ಹೊರಗೆಂಬುದಿಲ್ಲ ಕಾಣಾ, ಚೆನ್ನಬಸವಣ್ಣಾ. ॥ ೯೩ ॥

೯೪೨

ತನುವಿದ್ದು ತನುವಿಲ್ಲ, ಮನವಿದ್ದು ಮನವಿಲ್ಲ,
ಭಾವವಿದ್ದು ಭಾವವೆಂಬ ಬುದ್ಧಿಯಿಲ್ಲ.
ನೀನೆಂಬುದುಂಟಾಗಿ ಭೃತ್ಯಾಚಾರವಿಲ್ಲ,
ನಾನೆಂಬುದುಂಟಾಗಿ ಅಹಂಕಾರವಿಲ್ಲ.
ಕಪಿಲಸಿದ್ಧಮಲ್ಲಿನಾಥಯ್ಯನಲ್ಲಿ ಲಿಂಗಸಂಗ ನಿರ್ಲೇಪವೆಂಬುದ
ಇದಿರಿಂಗೆ ನುಡಿದು ಹೇಳಬಾರದು ಕಾಣಾ, ಚೆನ್ನಬಸವಣ್ಣಾ. ॥ ೯೪ ॥

೯೪೩

ಪುಣ್ಯಪಾಪಂಗಳನರಿಯದ ಮುನ್ನ
ಅನೇಕ ಭವಂಗಳಲ್ಲಿ ಬಂದು
ನಿಮ್ಮ ನಿಲುವನರಿಯದೆ ಕೆಟ್ಟೆನಯ್ಯಾ.
ಇನ್ನು ನಿಮ್ಮ ಶರಣುವೊಕ್ಕೆನಾಗಿ,
ನಾ ನಿಮ್ಮನೆಂದೂ ಅಗಲದಂತೆ ಮಾಡಾ ಅಯ್ಯಾ,
ನಿಮ್ಮ ಧರ್ಮ ನಿಮ್ಮ ಧರ್ಮ !

ನಿಮ್ಮಲ್ಲಿ ಒಂದ ಬೇಡುವೆ :
ಎನ್ನ ಕರ್ಮಬಂಧನ ಬಿಡುವಂತೆ ಮಾಡಾ,
ಅಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೯೫ ॥

೯೪೪

ಎಂದಿಪ್ಪೆನಯ್ಯಾ, ನಿಮ್ಮ ಗಣಂಗಳ ಸಮೂಹದಲ್ಲಿ,
ಎಂದಿಪ್ಪೆನಯ್ಯಾ, ನಿಮ್ಮವರ ನಡುವೆ,
ಎಂದಿಪ್ಪೆನಯ್ಯಾ, ಕೀಳಿಲ ಕಾಯ್ದು,
ಎಂದಿಪ್ಪೆನಯ್ಯಾ, ಕಿಂಕರನಾಗಿ,
ಎಂದಿಪ್ಪೆನಯ್ಯಾ, ನಿಮ್ಮ ನಾಮ ಡಿಂಗರಿಗನಾಗಿ,
ಎಂದಿಪ್ಪೆನಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೯೬ ॥

೯೪೫

ಎಂದಿಪ್ಪೆನಯ್ಯಾ, ಶುದ್ಧಸಿದ್ಧ ಪ್ರಸಿದ್ಧ ಪ್ರವೇಶಿಯಾಗಿ !
ಎಂದಿಪ್ಪೆನಯ್ಯಾ, ಭಕ್ತಿ ಜ್ಞಾನ ವೈರಾಗ್ಯ ಸಂಪನ್ನನಾಗಿ ;
ಎಂದಿಪ್ಪೆನಯ್ಯಾ, ತತ್ವಾತತ್ವ ತೂರ್ಯಾತೂರ್ಯ ನೀನೆಯಾಗಿ ;
ಎಂದಿಪ್ಪೆನಯ್ಯಾ, ದೀಕ್ಷಾತ್ರಯದಲ್ಲಿ ಸಂಪನ್ನನಾಗಿ ;
ಎಂದಿಪ್ಪೆನಯ್ಯಾ, ಲಿಂಗತ್ರಯದಲ್ಲಿ ಪ್ರಸಾದಸಂಪನ್ನನಾಗಿ ;
ಎಂದಿಪ್ಪೆನಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿಮ್ಮವರ ನಡುವೆ ಓರಂತೆ. ॥ ೯೭ ॥

೯೪೬

ಒಡೆಯರುಳ್ಳ ತೊತ್ತಾನು ; ತಾಯುಳ್ಳ ಶಿಶುವಾನು ;
ಸ್ವತಂತ್ರವೇಕಯ್ಯಾ, ನಿಮ್ಮವರ ನಡುವೆ ಎನಗೆ ?
ನಿಮ್ಮವರು ಎನ್ನನೊಲ್ಲದಿದ್ದ ದುಃಖವನು ಮರೆವೆ ನಾನು ;
ನಿಮ್ಮವರಾಜ್ಞೆಯ ಮೀರಿದೆನಾಯಿತ್ತಾದಡೆ ನಿಮ್ಮಾಣೆಯಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೯೮ ॥

೯೪೭

ಆವಾಗಲು ನಿಮ್ಮವರುಗಳು ನೀನೆಂಬ ಮನವ,
ಅತಿ ಉನ್ನತೋನ್ನತವ ಕೊಡು ಕಂಡಾ,

ಎಲೆ ಅಯ್ಯಾ, ನಿಮ್ಮ ಧರ್ಮವಯ್ಯಾ.
ನಿನ್ನ ಲಾಂಛನವ ಕಂಡು ತಾತ್ಪರ್ಯವೆಂದು ನಂಬುವ
ಮನಸಿಂಗೆ ಮಂಗಳವನೀಯಯ್ಯಾ.
ನಿನ್ನವರ ಸಹ ಲೋಕದಲ್ಲಿ ಅವರ ಕೀಳಿಲ ಕಾಯ್ದಿಪ್ಪ ಸುಕೃತವನು
ತಪ್ಪದೆ ಕೊಡು, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ, ನಿಮ್ಮ ಧರ್ಮ. ॥ ೯೯ ॥

೯೪೮

ಹಿಂದೆ ಬಯಸಿದೆ ಕಾಳುತನದಲ್ಲಿ,
ಎನ್ನ ಮಂದಮತಿಯ ನೋಡದಿರಯ್ಯಾ !
ಕೆರೆ ಬಾವಿ ಹೂದೋಟ ಚೌಕ ಛತ್ರಂಗಳ ಮಾಡಿ,
ಜೀವಂಗಳ ಮೇಲೆ ಕೃಪೆಯುಂಟೆಂದು ಎನ್ನ ದಾನಿಯೆಂಬರು.
ಆನು ದಾನಿಯಲ್ಲವಯ್ಯಾ, ನೀ ಹೇಳಿದಂತೆ ನಾ ಮಾಡಿದೆನು.
ನೀ ಬರಹೇಳಿದಲ್ಲಿ ಬಂದೆನು ; ನೀ ಇರಿಸಿದಂತೆ ಇದ್ದೆನು.
ನಿನ್ನ ಇಚ್ಛಾಮಾತ್ರವ ಮೀರಿದೆನಾಯಿತ್ತಾದಡೆ
ಫಲ ಪದ ಜನನವ ಬಯಸಿದೆನಾದಡೆ ನಿಮ್ಮಾಣೆ !
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಭವಕ್ಕೆ ಬರಿಸದಿರಯ್ಯಾ ನಿಮ್ಮ ಧರ್ಮ ! ॥ ೧೦೦ ॥

೯೪೯

ಮಾಡಿಸಯ್ಯಾ, ಎನಗೆ ನಿಮ್ಮವರ ಸಂಗವ.
ಮಾಡಿಸಯ್ಯಾ, ಎನಗೆ ನಿಮ್ಮವರಾನಂದವ.
ಆಗಿಸಯ್ಯಾ, ನಿಮ್ಮವರಂತೆ.
ನೋಡಿಸಯ್ಯಾ, ನಿಮ್ಮವರ ಕೂಡೆ ಸಂಗವ ಮಾಡಿಸಯ್ಯಾ.
ಎನಗೆ ಬಚ್ಚಬರಿಯ ಭಕ್ತಿಯ ಕೊಡಿಸಯ್ಯಾ.
ಎನಗೆ ಪಾದೋದಕ ಪ್ರಸಾದವನೊಚ್ಚತವ ಸಲಿಸಯ್ಯಾ.
ನಿಮ್ಮವರ ಕೂಡೆ ಸಿಕ್ಕಿ ಇರಿಸಯ್ಯಾ.
ನಿಮ್ಮವರ ಪಾದದ ಕೆಳಗೆ ನಿತ್ಯವಾಗಿ ಬಿರಿಸಯ್ಯಾ. ಎನ್ನ ಭವಭವದಲ್ಲಿ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನೀನಿಂತು ಕೆಡಿಸಯ್ಯಾ, ಎನ್ನ ಭವಭವನ ಮುಟ್ಟು. ॥ ೧೦೧ ॥

೯೫೦

ನುಡಿಯಬಹುದೆ ಅದ್ವೈತವನೊಂದುಕೋಟಿ ವೇಳೆ,
ಒಮ್ಮೆ ನಡೆಯಬಹುದೆ ನಿರ್ಧಾರವಾಗಿ ಸದ್ಭಕ್ತಿ ಸದಾಚಾರವ ?
ನುಡಿದಂತೆ ನಡೆವ, ನಡೆದಂತೆ ನುಡಿವ
ಸದ್ಭಕ್ತಿ ಸದಾಚಾರಯುಕ್ತ ಮಹಾತ್ಮರ
ಪಾದವ ಹಿಡಿದು ಬದುಕಿಸಯ್ಯಾ, ಪ್ರಭುವೆ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೧೦೨ ॥

೯೫೧

ಇನಮಂಡಲದೊಳಗೆ ಕಿರಣವಡಗಿಪ್ಪಂತೆ,
ಫಲವಹ ಬೀಜದಲ್ಲಿ ವೃಕ್ಷವಡಗಿಪ್ಪಂತೆ,
ಇಂದುಕಾಂತ ರವಿಕಾಂತದಲ್ಲಿ ಜಲಬಿಂದು ಅಗ್ನಿ ಇಪ್ಪಂತೆ,
ನಂದ ಕ್ಷೀರದಲ್ಲಿ ಹೊಂದಿದ ದಧಿ ತಕ್ರ ನವನೀತ ಘೃತವಿಪ್ಪಂತೆ
ಅಂಗದ ಮೇಲೆ ಲಿಂಗ ಸಾಹಿತ್ಯವಾಗಿ,
ತನ್ನೊಳಗೆ ಆ ಲಿಂಗವ ಕಂಡು, ಲಿಂಗದೊಳಗೆ ತನ್ನ ಕಂಡು,
ತನ್ನೊಳಗೆ ಸಮಸ್ತ ವಿಸ್ತಾರವನೆಲ್ಲವ ಕಂಡು,
ಜಂಗಮಮುಖ ಲಿಂಗವೆಂಬ ಭೇದವನು,
ಲಿಂಗಕ್ಕೆ ಜಂಗಮವೆ ಪ್ರಾಣವಾಗಿಪ್ಪ ಭೇದವನು,
ಅಂಗದೊಳಗೆ ಲಿಂಗವೆ ಆಚಾರವಾಗಿ ಅಳವಟ್ಟ ವಿವರವನು,
ಲಿಂಗಾಂಗಸ್ಥಲಸಂಬಂಧ ಸ್ಥಳಕುಳಂಗಳ ವಿವರವಾಗಿ ಇದ್ದಿತೆಂಬುದನು,
ಕಂಗಳ ನೋಟಕ್ಕೆ ಗುರಿಯಾದ ಲಿಂಗವೆ ಅಂಗವನೊಳಕೊಂಬ ಭೇದವನು,
ಸಂಗನ ಬಸವಣ್ಣ ಚೆನ್ನಬಸವಣ್ಣನಿಂದೆ ಕೃಪೆಮಾಡಿಸಿ
ಎನ್ನನುಳುಹು, ಪ್ರಭುವೆ, ಕಪಿಲಸಿದ್ಧಮಲ್ಲಿಕಾರ್ಜುನದೇವಯ್ಯಾ. ॥ ೧೦೩ ॥

೯೫೨

ಬಡವ ಸಿಧಾನವ ಕಂಡಂತೆ,
ಹಾರುವ ಮಾಳವ ಕಂಡಂತೆ,
ಶಿಶು ತನ್ನ ತಾಯ ಕಂಡಂತೆ,
ವೀರ ತಾನು ಪರಸೇನೆಯ ಕಂಡಂತೆ,
[ಆನು] ಚೆನ್ನಬಸವಣ್ಣನ ಪಾದವ ನೋಡಿ ಹರುಷಿತನಾದೆ.
ಮಾಡಿ ಮಾಡಿಸಾ ಉಪದೇಶವ, ನೋಡಿ ನೋಡಿಸಾ ಮಹಿಮೆಯ.

ಇದರದ್ಭುತವೇಕೆಂದಡೆ, ಕೊಡಿಸಾ ಎನ್ನ ಕೈಯಲ್ಲಿ ಇಷ್ಟಲಿಂಗವ,
ಪರಮಪ್ರಭುವೆ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೦೪ ॥

೯೫೩

ಅಂಗಕ್ಕೆ ಲಿಂಗೋಪದೇಶ, ಮನಕ್ಕೆ ಮಂತ್ರೋಪದೇಶವೆ
ಘನವೆಂದು ನಂಬಿದೆನಯ್ಯಾ, ನಂಬಿದೆನಯ್ಯಾ.
ಈ ಎರಡರ ಬೋಧೋದ್ಧಾರಕೆ ಚೆನ್ನಬಸವಣ್ಣನೆ
ಘನಗುರು, ಘನಲಿಂಗ, ಘನಜಂಗಮವೆಂದು ನಂಬಿದೆನಯ್ಯಾ.
ಇದನಲ್ಲೆಂದಡೆನ್ನಗುಣವೆನ್ನನೆ ಸುಡಲೀಯದೆ, ಅಲ್ಲಯ್ಯಾ,
ಕಪಿಲಸಿದ್ಧಮಲ್ಲಯ್ಯಾ ? ॥ ೧೦೫ ॥

೯೫೪

ಎಲ್ಲ ಪ್ರಮಥರು ಲಿಂಗವ ಧರಿಸುತ್ತಿರಲು
ನಾನೇನು ಒಲ್ಲೆನೆಂಬುವುದು ಕರ್ಮದ ಬಲಿಯೊ, ಮಾಯದ ಬಲೆಯೊ ?
ಎಲೆ ಕಪಿಲಸಿದ್ಧಮಲ್ಲಿನಾಥಯ್ಯಾ, ನಾ ಧರಿಸಿಕೊಂಬುವೆ ಲಿಂಗವ.
ನೀ ಕರಸಿಕೊಂಬುವನಾಗು ಮತ್ತೊರ್ವನ ನಿನ್ನ ಪೂಜೆಗೆ ;
ನಾ ನಿನ್ನವನಲ್ಲೆಲೆ ದೇವಾ. ॥ ೧೦೬ ॥

೯೫೫

ವ್ಯಾಧಿ ಹೋಗುವ ಪರ್ಯಂತರ ರಸರಸಾಯನದ ಹಂ[ಗ]ಯ್ಯಾ.
ಕ್ಷುತ್ಪಿಪಾಸೆಯುಡಗುವ ಪರ್ಯಂತರ ಅನ್ನೋದಕದ ಹಂ[ಗ]ಯ್ಯಾ.
ನಾ ಲಿಂಗಸಂಬಂಧಿಯಾಗುವ ಪರ್ಯಂತರ ನಿಮ್ಮ ಹಂಗಿನವನಯ್ಯಾ,
ಎಲೆ ಕಪಿಲಸಿದ್ಧಮಲ್ಲಿನಾಥಾ. ॥ ೧೦೭ ॥

೯೫೬

ಹಾರುವೆ ಹಾರುವೆನಯ್ಯಾ ಮೂರರ ಮನೆಯ.
ನೋಡುವೆ ನೋಡುವೆನಯ್ಯಾ ಆರರ ಮನೆಯ.
ಕೂಡುವೆ ಕೂಡುವೆನಯ್ಯಾ ಈರಾರರ ಮನೆಯ.
ಆಡುವೆ ಆಡುವೆನಯ್ಯಾ,
ಕಪಿಲಸಿದ್ಧಮಲ್ಲಯ್ಯಾ, ಮತ್ತೂ ಮೂರರಲ್ಲ. ॥ ೧೦೮ ॥

೯೫೭

ನದಿಯು ನೀರು ಹೋದುವಯ್ಯಾ ಸಮುದ್ರಕ್ಕೆ ;
ಸಮುದ್ರದ ನೀರು ಬಾರವಯ್ಯಾ ನದಿಗೆ
ನಾನು ಹೋದೆನಯ್ಯಾ ಲಿಂಗದ ಕಡೆಗೆ ;
ಲಿಂಗ ಬಾರದು ನೋಡಯ್ಯಾ ನನ್ನ ಕಡೆಗೆ.
ಮಗ ಮುನಿದಡೆ ತಂದೆ ಮುನಿಯುನು ;
ನಾ ಮುನಿದಡೆ ನೀ ಮುನಿಯೆ ನೋಡಯ್ಯಾ,
ಕಪಿಲಸಿದ್ಧ ಮಲ್ಲಿನಾಥಾ. ॥ ೧೦೯ ॥

೯೫೮

ಸ್ಥೂಲದೇಹ ತೊಳೆದಡೇನು, ಸೂಕ್ಷ್ಮದೇಹ ಶುದ್ಧವಾದಡೇನು.
ಕಾರಣಾತೀತನಾಗದನ್ನಕ್ಕ ?
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ, ನಾ ಯೋಗಿಯಾದಡೇನು
ಮನವೊಲಿದು ಚೆನ್ನಬಸವಣ್ಣ ಲಿಂಗವ ಕೊಡದನ್ನಕ್ಕ ? ॥ ೧೧೦ ॥

೯೫೯

ಏನೆಂಬೆ ಏನೆಂಬೆ ಕೊಟ್ಟ ದೇವರಂದವ !
ಮನದಲ್ಲಿ ಘನಲಿಂಗವಾಯಿತ್ತು, ಧ್ಯಾನದಲ್ಲಿ ಭಾವಲಿಂಗವಾಯಿತ್ತು,
ನೇತ್ರದಲ್ಲಿ ಶಿವಲಿಂಗವಾಯಿತ್ತು, ಹೃದಯದಲ್ಲಿ ಮಹಾಲಿಂಗವಾಯಿತ್ತು,
ಎನ್ನ ಕರಸ್ಥಲದಲ್ಲಿ ಇಷ್ಟಲಿಂಗವಾಗಿ ಆಳವಟ್ಟಿತ್ತು.
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ,
ಎಲ್ಲ ಕಡೆಯಲ್ಲಿ ಪರಾತ್ಪರ ವಸ್ತುವಾಗಿ, ಚೆನ್ನಬಸವಣ್ಣನಾಗಿ,
ನಾನು ಮರೆದೆನಯ್ಯಾ ಎನ್ನ ನಾಮವ, ನೋಡಯ್ಯಾ ಪ್ರಭುವೆ. ॥ ೧೧೧ ॥

೯೬೦

ಇನ್ನಾಡುವೆ, ಇನ್ನಾಡುವೆ ಮನಬಂದ ಪರಿಯಲ್ಲಿ
ಅದಕ್ಕೆ ನೀವು ಸಂದೇಹಗೊಳ್ಳದಿರಿ, ಪ್ರಮಥರಿರಾ.
ಸಂದೇಹವುಳ್ಳಡೆ ಜಂಗಮವಲ್ಲ.
ಸಂದೇಹವೆ ಲಿಂಗವಾದ ಬಳಿಕ
ಇನ್ನೆಲ್ಲಿಹುದಯ್ಯಾ, ಇನ್ನೆಲ್ಲಿಹುದಯ್ಯಾ ಸಂಕಲ್ಪ ವಿಕಲ್ಪವು,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೧೨ ॥

೯೬೧

ಎರಡಳಿದು ಒಂದಳವಟ್ಟುದೆ ಭಕ್ತಿಸ್ಥಲ ;
ಮೂರಳಿದು ಎರಡಳವಟ್ಟುದೆ ಜಂಗಮಸ್ಥಲ ;
ಈ ಎರಡಳಿದು ನಿಂದುದೆ ಪ್ರಾಣಲಿಂಗಿಸ್ಥಲ ನೋಡಯ್ಯಾ.
ಗುರುವೆ, ಸುರತರುವೆ, ಎನ್ನ ಕಾಮಧೇನುವೆ,
ಕೈಲಾಸದ ಮಹಾಲಿಂಗಮೂರ್ತಿಯೆ, ಈ ಲೋಕದ ಜ್ಞಾನಮೂರ್ತಿಯೆ,
ಕಪಿಲಸಿದ್ಧಮಲ್ಲೇಶನೆ, ಚೆನ್ನಬಸವಣ್ಣನೆ. ॥ ೧೧೩ ॥

೯೬೨

ಮೂರಳಿದು ಮೂರಳವಟ್ಟುದೆ ಭಕ್ತಸ್ಥಲ.
ಮೂರಳಿದು ಮೂರಳವಟ್ಟುದೆ ಜಂಗಮಸ್ಥಲ.
ಅಳಿದು ಎಂದಡೆ,
ಇದ್ದ ಮನ ಲಿಂಗಕ್ಕೆ ಕೊಟ್ಟಾಗಳೆ [ಹೆಣ್ಣ]ಳಿದುದು ;
ಇದ್ದ ಧನ ಜಂಗಮಕ್ಕೆ ಕೊಟ್ಟಾಗಳೆ ಹೊನ್ನಳಿದುದು ;
ಇದ್ದ ತನು ಗುರುವಿಂಗೆ ಕೊಟ್ಟಾಗಳೆ [ಮಣ್ಣ]ಳಿದುದು.
ಅವರವರಾಚರಣೆಯ ನೋಡಿ ಕೊಡುವುದಲ್ಲದೆ,
ಬೇಡಿದ ಪರಿಯಲ್ಲಿ ಕೊಡುವುದೇನೋ ಅಯ್ಯಾ ?
ಸಿಂಧುಬಲ್ಲಾಳ ತನ್ನ ವಧುವ ಕೊಟ್ಟನೆಂದು ಹೇಳಿದಲ್ಲಿ,
ತನ್ನ ಹೆಂಡತಿಯನೇನಾದಡೂ ಕೊಟ್ಟನೆ ? ಇಲ್ಲಿಲ್ಲ.
ಹೆಣ್ಣು ಎಂದಡೆ ತಾನು,
ಶರಣಸತಿ ಲಿಂಗಪತಿ ಎಂಬ ಭಾವದಿಂದ
ಲಿಂಗಕ್ಕೆ ಮನ ಕೊಟ್ಟು ವಧುವಾದನಲ್ಲದೆ
ತನ್ನಂಗನೆಯ ಕೊಡಲಿಲ್ಲವು.
[ಹೊನ್ನು] ಎಂದಡೆ ಜಂಗಮಕ್ಕೆ ಧನವ ಕೊಟ್ಟು
ನಿಧಿ ನಿಧಾನ ಒಲ್ಲದಾದನಲ್ಲದೆ, ತನ್ನಂಗನೆಯ ಕೊಡಲಿಲ್ಲವು.
[ಮಣ್ಣು] ಎಂದಡೆ ತನ್ನ ತನುವ ಗುರುವಿಂಗೆ ಕೊಟ್ಟು
ಸ್ವಯಂಭುವಾದನಲ್ಲದೆ ತನ್ನಂಗನೆಯ ಕೊಡಲಿಲ್ಲವು.
ಹೆಣ್ಣು ಸಲ್ಲದು ಜಂಗಮಕ್ಕೆ ;
ಹೊನ್ನು ಸಲ್ಲದು ಲಿಂಗಕ್ಕೆ ;
ಮಣ್ಣು ಸಲ್ಲದು ಗುರುವಿಂಗೆ.
ಇದರ ಭೇದವನಂತವುಂಟು : ತಿಳಿವಡೆ ಬಹು ದುರ್ಲಭ ;

ತಿಳಿದು ನೋಡಿದಡೆ ಭಕ್ತಿಗೆ ಬಹು ಸುಲಭ.
ತಿಳಿದು ಮಾಡಿ ಮೋಕ್ಷವ ಹಡೆದರಲ್ಲದೆ,
ತಿಳಿಯದೆ ಮಾಡಲವರೇನು ಮೇರುವಿನೊಳಗಿರುವ ಭಂಗಾರವನಾಗಲಿ,
ಸಮುದ್ರದೊಳಗಿರುವ ನಿಧಿನಿಧಾನಂಗಳನಾಗಲಿ ತಂದಿಹರೇನೋ ?
ಕಪಿಲಸಿದ್ಧಮಲ್ಲಿಕಾರ್ಜುನಾ, ಇದರಿರವ ಹೇಳಿಕೊಡಯ್ಯಾ,
ಎನ್ನ ಪ್ರಾಣಗುರು ಚೆನ್ನಬಸವಣ್ಣನಿಂದ. ॥ ೧೧೪ ॥

೯೬೩

ಮಾದಾರನಲ್ಲಿ ಉಂಡ ಶಿವನು ; ನೀವೇಕೆ ಉಣ್ಣಸರಿ ಎಂದು ಕೇಳಿದಡೆ,
ಕೊಡುವೆನುತ್ತರವ, ಕೇಳಿರೆಲೆ ಮನುಜರಿರಾ.
ಮಾದಾರನಲ್ಲುಂಡ ಶಿವನು ಮೇದಾರನಲ್ಲಿಗೆ ಬಂದಲ್ಲಿ,
ರೂಪಳಿದು ರೂಪಾಗಿ ಬಾ ಎಂದನಲ್ಲದೆ, ಸಮರಸ ಮಾಡಲಿಲ್ಲವು.
ಮೇದಾರನಲ್ಲುಂಡು ಮಾದಾರನ ಮನೆಗೆ ಬಂದಡೆ,
ರೂಪಳಿದು ರೂಪಾಗಿ ಬಾ ಎಂದನಂದು ಚೆನ್ನನು.
ಶಬ್ದಸೂತಕ ಶರಣರಿಗಲ್ಲದೆ ಸೂತಕರಿಗೆಲ್ಲಿಹದೋ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೧೫ ॥

೯೬೪

ಶಿವನು ಚೆನ್ನನ ಮನೆಯಲ್ಲಿ ಅಂಬಲಿಯನುಂಡನೆಂದಡೆ,
ನಮ್ಮ ಗಣಂಗಳು ನಗುವರಯ್ಯಾ ;
ಕೈಬಡೆದು ಕೈಬಡೆದು ನಗುವರಯ್ಯಾ.
ಶಿವನಾಚರಣೆ ಶಿವನಿಗಿರಲಿ, ನಮಗೇಕೆಂದರು.
ಶಿವನು ಉತ್ಪತ್ತಿ ಸ್ಥಿತಿ ಲಯಂಗಳಿಗೆ ಕರ್ತನು ;
ನಾವು ಉತ್ಪತ್ತಿ ಸ್ಥಿತಿ ಲಯಂಗಳನಳಿಯಬೇಕೆಂದು ಬಂದೆವಲ್ಲದೆ,
ಅವರಲ್ಲಿ ವಾಕ್ಸಾಮರಸ್ಯವಲ್ಲದೆ, ಕಾಯಸಾಮರಸ್ಯವಿಲ್ಲವು
ಶಬ್ದವಿರಹಿತನಾಗಬೇಕೆಂಬವರಿಗೆ ಶಬ್ದಸೂತಕವೇಕಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ ? ॥ ೧೧೬ ॥

೯೬೫

ಅಧ್ಯಾತ್ಮ ಅಧ್ಯಾತ್ಮವೆಂದೆಂಬರಿ, ಅಧ್ಯಾತ್ಮವಾರಿಗೆ ?
ಶ್ರೀಗುರು ಬಹಳವಪ್ಪ ಶಿವಲಿಂಗವ ಸೂಕ್ಷ್ಮವ ಮಾಡಿ,

ಕರಸ್ಥಲದಲ್ಲಿ ಕೊಟ್ಟ ಬಳಿಕ ಬೇರೆ ಯೋಗವುಂಟೆ ?
ತನ್ನ ಹಸ್ತವ ಮಸ್ತಕದಲ್ಲಿಟ್ಟು ವಾಯುಪ್ರಾಣಿಯಾಗಿರ್ದುದ ಕೊಂದು
ಲಿಂಗಪ್ರಾಣಿಯ ಮಾಡಿದ ಬಳಿಕ, ಅಕ್ಷರವೈದರಲ್ಲಿ ಮುಕ್ತನ ಮಾಡಿದ ಬಳಿಕ,
ಮರಳಿ ಯೋಗವುಂಟೆ ಶಿವಯೋಗವಲ್ಲದೆ ?
ಲಿಂಗಾರ್ಚನೆಯ ಮಾಡಿ ಜಂಗಮಪ್ರಸಾದವ ಕೊಂಡ ಬಳಿಕ,
ಬರಿಯ ಯೋಗಕ್ಕೆ ಒಡಂಬಡುವುದೆ ಅರಿವು ?
ಇಂತಪ್ಪ ವಸತಿಗಳೆದು ಶುದ್ಧ ಶಿವಯೋಗಿಯ ಮಾಡಿದಾತ ಚೆನ್ನಬಸವಣ್ಣ.
ಮಹಾಲೋಕದಲ್ಲಿಪ್ಪ ಆದ್ಯಕ್ಷರದ್ವಯುವ ಭೇದಿಸಿತಂದು ಕರಸ್ಥಲದಲ್ಲಿರಿಸಿ,
ಇದು ಉರುತರ ಪದವೆಂದು ತೋರಿಕೊಟ್ಟು,
ಎನ್ನ ತನ್ನಂತೆ ಮಾಡಿದ ಗುರು ಚೆನ್ನಬಸವಣ್ಣ.
ಆನು ಚೆನ್ನಬಸವಣ್ಣನ ಕರುಣದಿಂದ ಅಭ್ಯಾಸಯೋಗವಸತಿಗಳೆದು,
ಶಿವಯೋಗದಲ್ಲಿ ನಿತ್ಯನಾಗಿ,
ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ ಎಂಬ
ಷಡುಸ್ಥಲಕ್ಕೆ ಅಧಿಕಾರಿಯಾದೆನು, ನಿನ್ನವರ ಸಲುಗೆಗೆ ಸಂದೆನು.
ಚೆನ್ನಬಸವಣ್ಣನ ಕೃಪೆ ಎನ್ನನಿಂತು ಮಾಡಿತ್ತು ಕಾಣಾ,
ಶ್ರೀಗುರುವೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೧೭ ॥

೯೬೬

ಹೆಸರಿಡಬಾರದ ಲಿಂಗವ ಹೆಸರಿಟ್ಟು ಎನ್ನ ಕರಸ್ಥಲಕ್ಕೆ ತಂದು
ಕರತಳಾಮಳಕದಂತೆ ಮಾಡಿ ಎನ್ನ ಕರಸ್ಥಲಕ್ಕೆ ಕ್ರಿಯಾಲಿಂಗವ ಕೊಟ್ಟ.
ಶ್ರೀಗುರು ಚೆನ್ನಬಸವಣ್ಣ ಹೆಸರಿಟ್ಟ ಲಿಂಗದ ಹೆಸರ ಹೇಳುವೆ ಕೇಳಯ್ಯಾ.
ಕಂಜಕರ್ಣಿಕೆಯ ಷಣೆಯಲ್ಲಿ ವಿಹತ್ತವಸವೆಂದು ಬರೆದ
ಐದಕ್ಷರವೆ ಆತನ ಪ್ರಣವನಾಮ.
ಅವ್ವೆಯ ಕರದೊಳಿಪ್ಪ ಆರಕ್ಷರ ಆತನ ದ್ವಿತೀಯ ನಾಮ.
ಅವ್ವೆಯ ಆನಂದ ಮಸ್ತಕದೊಳಿಪ್ಪ ಅಕ್ಷರವೆ ಆತನ ಆಚಾರ್ಯನಾಮ.
ಇಂತೀ ನಾಮತ್ರಯಂಗಳನರಿದು
ಧ್ಯಾನಾರೂಢನಾಗಿ ಮಾಡುವರು ಎತ್ತಾನಿಕೊಬ್ಬರು.
ಈ ಬಸವಣ್ಣ ಮೊದಲಾದ ಪುರಾತರು
ಆ ಅವ್ವೆಯ ಅನುಮತದಿಂದ ಲಿಂಗಾರ್ಚನೆಯ ಮಾಡಿ
ನಿತ್ಯ ನಿಜನಿವಾಸಿಗಳಾದರು.
ಆ ಶರಣರ ಅನುಮತನರಿವಿನ ಉಪದೇಶವ ಕೇಳಿ,

ಎನಗಿನ್ನಾವುದು ಹದನವಯ್ಯಾ ಎಂಬ ಚಿಂತೆಯ ಬಿಟ್ಟು
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಕೈಯಲ್ಲಿ ಹಿಡಿದೆನು. ॥ ೧೧೮ ॥

೯೬೭

ಆದಿ ಆಧಾರವಿಲ್ಲದಂದಿನ
ಸಾದಾಖ್ಯ ದೇಹವಿಲ್ಲದಂದಿನ
ಅನಾದಿ ಸಂಸಿದ್ಧನ ಆಗುಮಾಡಿ ಹೆಸರಿಟ್ಟು,
ಕರಸ್ಥಲಕ್ಕೆ ತಂದುಕೊಟ್ಟ ಗುರು ಚೆನ್ನಬಸವಣ್ಣನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೧೧೯ ॥

೯೬೮

ಇಹಲೋಕ ಪರಲೋಕವೆಂಬ ಸಂವಳಿಯಿತ್ತಯ್ಯಾ.
ಗುರುವಿನ ಹಸ್ತದಲ್ಲಿ ಸತ್ತು, ಪಂಚಾಕ್ಷರಿಯಿಂದೆತ್ತಿದ ಕಾರಣದಲ್ಲಿ ;
ನಿತ್ಯವೂ ಲಿಂಗಾರ್ಚನೆಯ ಮಾಡುವ ಕಾರಣದಲ್ಲಿ ;
ನಿತ್ಯವೂ ವಿಭೂತಿ ರುದ್ರಾಕ್ಷಿಯ ಧಾರಣ ಮಾಡುವ ಕಾರಣದಲ್ಲಿ ;
ಇಹಲೋಕವೆಂದೇನು, ಪರಲೋಕವೆಂದೇನು,
ಹಂಗು ಹರಿದು ಒಂದಾದ ಬಳಿಕ ?
ಮಲಮದಂಗಳು ಹರಿದು ನಾನು ನೀನಾದ ಬಳಿಕ ?
ಎಲೆ ಅಯ್ಯಾ, ಭಕ್ತರ ಸರ್ವಾಂಗ ಲಿಂಗತನು ;
ಭಕ್ತರಿಪ್ಪ ಲೋಕವೆ ರುದ್ರಲೋಕ.
ಗುರುವೆ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿನ್ನ ಹಸ್ತವ ಮಸ್ತಕದಲ್ಲಿಟ್ಟಡಾಯಿತ್ತು ! ॥ ೧೨೦ ॥

೯೬೯

ಶುದ್ಧವನರಿದೆ ಚೆನ್ನಬಸವಣ್ಣಾ ನಿಮ್ಮಿಂದೆ ;
ಸಿದ್ಧವನರಿದೆ ಚೆನ್ನಬಸವಣ್ಣಾ ನಿಮ್ಮಿಂದೆ ;
ಪ್ರಸಿದ್ಧವನರಿದೆ ಚೆನ್ನಬಸವಣ್ಣಾ ನಿಮ್ಮಿಂದೆ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಚೆನ್ನಬಸವಣ್ಣ ಗುರುವಾಗಿ ಬಂದು
ಎನ್ನ ಜನ್ಮಕರ್ಮವ ನಿವೃತ್ತಿ ಮಾಡಿದನಯ್ಯಾ. ॥ ೧೨೧ ॥

೯೭೦

ರೂಪಿಂಗೆ ರೂಪು, ಜ್ಞಾನಕ್ಕೆ ಸುಜ್ಞಾನ, ಪ್ರಾಣಕ್ಕೆ ಪ್ರಸಾದ
ಲಿಂಗತ್ರಯುವ ವೇಧೆಯಿಂದವೆ ತಂದು
ಅವರವರ ಕರದಲ್ಲಿ ದೀಕ್ಷೆಯ ಮಾಡಿದನು ಚೆನ್ನಬಸವಣ್ಣ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೨೨ ॥

೯೭೧

'ಎಂದೋ ಎನಗೆ ಶಿವಪದ ಎಂದೋ' ಎಂದು ಚಿಂತಿಸುವಂಗೆ
ಮುಂದೆ ತೋರುತ್ತಿದೆ ಪರಮಪ್ರಸಾದದ ಬೀಡು.
ಆ ಬೀಡ ಕಂಡು, ಶಿವಗಣಂಗಳ ನೆರವ ಮಾಡಿಕೊಂಡು,
ಪರಮಗುರು ಚೆನ್ನಬಸವಣ್ಣನ ಶ್ರೀಪಾದಾರವಿಂದವನರಿದು,
ಅವರ ಕೃಪಾವಲೋಕನದಿಂದ ನಿಮ್ಮ ಶ್ರೀಪಾದವನರಿದೆ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೧೨೩ ॥

೯೭೨

ಇನ್ನು ಜನನವು ಇಲ್ಲ
ಮುನ್ನವೆ ಸಂದಳಿದೆ ಕಳುಹಿದಂತೆ
ಉನ್ನತೋನ್ನತನಾದ ಚೆನ್ನಬಸವಣ್ಣನ ಕರುಣದಿಂದೆ
ನಿನ್ನ ರೂಪಾದೆ ಇನ್ನೆನಗೆ ಅರಿವುಂಟೆ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೨೪ ॥

೯೭೩

ಕರಂಗಳೆ ಮನೆಯಾಗಿ, ಕರಂಗಳೆ ಕರಂಗಳಾಗಿ,
ಅರ್ಪಿಸುವ ಭೇದವನಾರು ಬಲ್ಲರಯ್ಯಾ, ಚೆನ್ನಬಸವಣ್ಣನಲ್ಲದೆ ?
ತನು ಪ್ರಾಣ ಇಷ್ಟಲಿಂಗ ಸಂಬಂಧಿಯಾಗಿ,
ಇಂದ್ರಿಯಂಗಳೈದು ಮುಖಂಗಳಾಗಿ,
ಅರ್ಪಿಸುವ ಭೇದವನಾರು ಬಲ್ಲರಯ್ಯಾ ಚೆನ್ನಬಸವಣ್ಣನಲ್ಲದೆ ?
ಆನಂದಸ್ಥಾನದಲ್ಲಿ ಅನಿಮಿಷಾಕ್ಷರದ ಸಂಯೋಗ ಅರ್ಪಣದ ಭೇದವ
ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಚೆನ್ನಬಸವಣ್ಣ ಬಲ್ಲ ;
ಮಿಕ್ಕಿನವರಿಗೆ ಸಾಮರ್ಥ್ಯವಂಟೆನೆಂಟೆ ! ॥ ೧೨೫ ॥

೯೭೪

ಭಕ್ತಿವಿಡಿದು ಭಕ್ತನಾದ ಪ್ರಸಾದಿ.
ಮೋಕ್ಷವಿಡಿದು, ಧೈರ್ಯವಿಡಿದು
ಆ ಭಕ್ತಂಗೆ ಮಾಹೇಶ್ವರನಾದ ಪ್ರಸಾದಿ ;
ಕಾರಣವಿಡಿದು ಅವಧಾನ ತಪ್ಪದ
ಆ ಭಕ್ತಂಗೆ ಪ್ರಸಾದಿಯಾದ ಪ್ರಸಾದಿ ;
ಕರ್ಮರಹಿತನಾಗಿ ಕಾಲಕಲ್ಪಿತವಿಲ್ಲದ
ಆ ಭಕ್ತಂಗೆ ಪ್ರಾಣಲಿಂಗಿಯಾದ ಪ್ರಸಾದಿ.
ಪತಿಭಕ್ತಿವಿಡಿದು ಧರ್ಮಾರ್ಥಕಾಮಮೋಕ್ಷಂಗಳಾಸೆಯ ನಿವೃತ್ತಿಯಂ ಮಾಡಿದ
ಆ ಭಕ್ತಂಗೆ ಶರಣನಾದ ಪ್ರಸಾದಿ ;
ಈ ಉಭಯ ಸಮರಸವೇಕವೆಂದು ತಿಳಿದು,
ಉಭಯಭಾವ ಉರಿಕರ್ಪೂರ ಸಂಯೋಗವಾದ
ಆ ಭಕ್ತಂಗೆ ಐಕ್ಯನಾದ ಪ್ರಸಾದಿ.
ನಮ್ಮ ಕಪಿಲಸಿದ್ಧಮಲ್ಲಿನಾಥನಲ್ಲಿ,
ಸರ್ವಕ್ಕೆ ಚೈತನ್ಯವಾದ ನಮ್ಮ ಚೆನ್ನಬಸವಣ್ಣನೆಂಬ ಅಚ್ಚಪ್ರಸಾದಿ. ॥ ೧೨೬ ॥

೯೭೫

ಮೂರುಲಿಂಗಕ್ಕೆ ಮೂಲಮಂತ್ರವಾದಾತ ಗುರು.
ಮೂರು ವಿದ್ಯೆಗೆ ವಿದ್ಯಾರೂಪವಾದಾತ ಗುರು.
ಹೊದ್ದಿದ ಪ್ರಪಂಚನತಿಗಳೆದು ರೂಪಿಯ ರೂಪಾದಾತ ಗುರು.
ಲೋಕತ್ರಯಕ್ಕೆ ಕಪಿಲಸಿದ್ಧಮಲ್ಲಿಕಾರ್ಜುನನೆ ಗುರು. ॥ ೧೨೭ ॥

೯೭೬

ಐದು ಬ್ರಹ್ಮದಲ್ಲಿ ಅಯ್ಯಾ, ನೀನು ಅತಿಶಯ ಜ್ಯೋತಿರ್ಮಯನು.
ಆನಂದಸ್ಥಾನದಲ್ಲಿ ಅಯ್ಯಾ, ನೀನು ಅತಿಶಯ ನಿತ್ಯಮಯನು.
ಬಾಹ್ಯಾಭ್ಯಂತರದಲ್ಲಿ ಪರಿಪೂರ್ಣನು.
ನಿನಾ ಧಿಕ್ಯವನರಿಯಲ್ಕೆ ನಿಗಮಕ್ಕಭೇದ್ಯನು.
ಗುರುವಿನ ಕರುಣದಿಂದ ಎನ್ನ ಕರಸ್ಥಲಕ್ಕೆ ಬಂದು ಚುಳುಕಾದೆ ಶಿವನೇ,
ಮಹಾಲಿಂಗ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೨೮ ॥

೯೭೭

ಭೇದಿಸಬಾರದೆ ಇಪ್ಪ ಅಭೇದ್ಯ ಶಿವನೆ.
ನಿನ್ನ ಭೇದಿಸಿ ತಂದುಕೊಟ್ಟನೆನ್ನಯ ಶ್ರೀಗುರು.
ಇನ್ನು ನಾ ನಿನ್ನ ಬಿಡುವೆನೆ ? ಬಿಡೆ ಬಿಡೆ.
ಮೆಚ್ಚಿದೆ ಪಾದೋದಕವ, ನಚ್ಚಿದೆ ಪ್ರಸಾದವ.
ಗುರುವೆ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೨೯ ॥

೯೭೮

ಸೀಮೆ ಸಂಬಂಧಗಳ ಮೀರಿಪ್ಪ ಮಂತ್ರಕ್ಕೆ
ರಾಜಮಂತ್ರವು ತಾನು ಪಂಚಾಕ್ಷರಿ.
ಪಂಚಾಕ್ಷರಿಯ ಗುಣದ, ಬಸವಾಕ್ಷರತ್ರಯದ,
ಧ್ಯಾನಮೌನದ ಗುಣದ ಸತ್ವವಿಡಿದು,
ಆನಂದ ತ್ರೈಲಿಂಗ ಮೂಲಮಂತ್ರಕ್ಕೀಗ
ಬಸವಾಕ್ಷರತ್ರಯವು ಮಾತೆಯಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೩೦ ॥

೯೭೯

ವೆಸೆದಿಗ್ವಲಯದಲ್ಲಿ ಪಸರಿ ಪರ್ಬಿತ್ತು ನಿನ್ನ ನಾಮ.
ವಸುಧೆಯೆಲ್ಲವು ಹೆಣ್ಣು, ನೀನು ಗಂಡು.
ಬಸವಾಕ್ಷರತ್ರಯದಿಂದುದ್ಭವಿಸಿ ಸಕಲ ಬ್ರಹ್ಮಾಂಡಂಗಳಾದವಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೩೧ ॥

೯೮೦

ಮುನ್ನ ಮುನ್ನ-ಶಶಿರವಿಗಳಿಲ್ಲದ ಮುನ್ನ,
ಬ್ರಹ್ಮ-ವಿಷ್ಣ್ವಾದಿಗಳುದ್ಭವಿಸದ ಮುನ್ನ ಮುನ್ನ,
ಮೂರ್ತಿಗಳೆಂಟು ಒಂದಾಗದ ಮುನ್ನ,
ತನುಮಧ್ಯವಳಯದಲ್ಲಿ
ಸಕಲ ಬ್ರಹ್ಮಾಂಡ ಜಲಮಯವಾಗಿಪ್ಪಲ್ಲಿ,
ಭಕ್ತಿಕಾರಣ ಬಸವನವಗ್ರಹಿಸಿಪ್ಪಲ್ಲಿ,

ಅದೆತ್ತಲಿದ್ದೆ ? ಅದ ನೀನೆ ಬಲ್ಲೆಯಯ್ಯಾ !
ಕಪಿಲಸಿದ್ಧಮಲ್ಲಿಕಾರ್ಜುನಯ್ಯ ಕುರುಹುಗೆಟ್ಟ ನಿಶ್ಚಿಂತನು. ॥ ೧೩೨ ॥

೯೮೧

ಇಂದ್ರಾದಿ ದೇವತಾ ಸಂಕುಳಕ್ಕೆ
ಅಂತಪ್ಪ ಪದವನಿತ್ತಾತ ಬಸವಣ್ಣನಯ್ಯಾ.
ಬ್ರಹ್ಮ–ವಿಷ್ಣು ಮೊದಲಾದ ದೇವತಾವೊತ್ತಕ್ಕೆ
ಅಂತಪ್ಪ ಪದವನಿತ್ತಾತ ಬಸವಣ್ಣನಯ್ಯಾ.
ಶಿವಲಿಂಗಭಕ್ತರಿಗೆ ಚರಲಿಂಗಧಾರಣೆಯು
ಪರಿಯಾಯದಿಂದಲೊರೆದಾತ ಗುರು.
ಇಹಲೋಕ ಪರಲೋಕದನುಮಿಷದ ಸುದ್ದಿಯನರುಹಿದಾತ
ಗುರು ಬಸವಣ್ಣನಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೧೩೩ ॥

೯೮೨

ಪ್ರಸಾದವೈದಾರ ಪಾದೋದಕವೆರಡೈದ
ಆದಿಯಕ್ಷರದಲ್ಲಿ ದೀಕ್ಷಾತ್ರಯ.
ನಾವದಿಂದವೆ ತೂಗಿ ಬಿಂದು ಸಮನಿಸದೀಗ
ಆಧಾರಸ್ಥಾನಕ್ಕೆ ಅತ್ಯತಿಷ್ಠತ್.
ಮೂಲಸ್ಥಾನದಲ್ಲಿದ್ದ ಮುಸ್ನೂರು ಕಮಲಕ್ಕೆ
ಆದಿಭ್ರಮರನು ಬಸವ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೩೪ ॥

೯೮೩

ಅಣ್ಣನ ನೋಡಿರೆ,
ಲೋಕಕ್ಕೆ ಜಗದಕಣ್ಣ ಮದವ ಕಳೆದನು.
ಮುಕ್ಕಣ್ಣ ನಿಪ್ಪಡೆಯು ತೋರಿದನು.
ಅಣ್ಣ ಬಸವಣ್ಣ ವಾಙ್ಮನಕ್ಕಗೋಚರನು.
ಮುಕ್ಕಣ್ಣನವತಾರಂಗಳನು ನಾಟಕವೆಂದರಿದು ಮೆರೆದನು.
ಸತ್ಯಶುದ್ಧ ನಿರ್ಮಳ ಕೈವಲ್ಯ ವಾಙ್ಮನಕ್ಕಗೋಚರ ಬಸವಣ್ಣನು.
ಅಣ್ಣಾ,
ನಿಮ್ಮಿಂದ ಶುದ್ಧವ ಕಂಡೆ, ಸಿದ್ಧವ ಕಂಡೆ, ಪ್ರಸಿದ್ಧವ ಕಂಡೆನು.
ಆರರಲ್ಲಿ ಆಂದೋಳವಾದೆನು, ಆರು ವ್ರತದಲ್ಲಿ ನಿಪುಣನಾದೆನು,

ನೀನೊಂದು ಮೂರಾಗಿ, ಮೂರೊಂದಾರಾಗಿ ತೋರಿದ
ಗುಣವಿಂತುಟಯ್ಯಾ, ಬಸವಣ್ಣ.
ಇನ್ನೆನಗೆ ಆಧಿಕ್ಯವಪ್ಪುದೊಂದಿಲ್ಲ.
ನಾನಿನ್ನ ಉರವಣಿಸಿ ಹರಿವೆ ; ಹರಿದು ಭರದಿಂದ ಗೆಲುವೆ ;
ತತ್ತ್ವ ಮೂವತ್ತಾರರ ಮೇಲೆ ಒಪ್ಪಿಪ್ಪ ತತ್ವಮಸಿಯನ್ನೆದುವೆ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ,
ಬಸವಣ್ಣನ ಪ್ರಸಾದದಿಂದ ಅರಿದಪ್ಪುದೊಂದಿಲ್ಲ. ॥ ೧೩೫ ॥

೯೮೪

ಲೋಕ ಲೌಕಿಕಂಗಳೆಲ್ಲಾ ನೀವು ಕೇಳಿರೆ.
ಏಕೈಕ ರುದ್ರನ ಅವತಾರವನರಿದೆವೆಂಬಿರಿ.
ನೋಡಿ ನಚ್ಚಿರೆ ಶಿವನ.
ಶಿವನು ಬಸವಣ್ಣನಾದ ನೋಡಿರೆ ;
ಬಸವಣ್ಣ ಗುರುವಾದ, ಬಸವಣ್ಣ ಲಿಂಗವಾದ, ಬಸವಣ್ಣ ಜಂಗಮವಾದ ;
ಬಸವಣ್ಣ ಪರಿಣಾಮ ಪ್ರಸನ್ನ ಪರವಾದ ;
ಬಸವಣ್ಣ ಮೂಲತ್ರಯವಾದ ;
ಬಸವಣ್ಣ ಭಕ್ತಿ ಎರಡು ತ್ರಯವಾದ ;
ಬಸವಣ್ಣ ಆರಾರರಿಂ ಮೇಲೆ ತೋರಿದ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಬಸವಣ್ಣನ ಪ್ರಸಾದವ ಕೊಂಡು ಭವಂ ನಾಸ್ತಿಯಾಗಿ ಬದುಕಿದೆನು.
॥ ೧೩೬ ॥

೯೮೫

ಸೀಮೆಯ ಮೀರಿದ ಸಂಬಂಧನೆ,
ಸಂಬಂಧದಲ್ಲಿ ಸಮನಿಸವ ಸಂಯೋಗನೆ,
ಎನ್ನ ಸಲಹುವ ಗುರು–ಲಿಂಗ–ಜಂಗಮ–ಪಾದೋದಕ–ಪ್ರಸಾದಕ್ಕೆ
ಅರ್ಹನ ಮಾಡಿದೆ.
ಗುರುವೆ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನೀ ಬಸವನಾಗಿ ಬಂದು ನಿನ್ನವರಿಗೆ ಯೋಗ್ಯನ ಮಾಡಿ,
ಭವವ ತಪ್ಪಿಸಿದೆ. ॥ ೧೩೭ ॥

೯೮೬

ಗುರುವಾಗಿ ಬಂದೆನಗೆ ದೀಕ್ಷೆಯ ಮಾಡಿದಿರಿ ;
ಲಿಂಗವಾಗಿ ಬಂದೆನ್ನ ಮನದ ಮಲಿನವ ಕಳೆದಿರಿ ;
ಜಂಗಮವಾಗಿ ಬಂದೆನ್ನ ಪ್ರಪಂಚಕತನವ ಕಳೆದು
ಪರಮ ಸೀಮೆಯ ಮಾಡಿದಿರಿ.
ಇಂತಿವೆಲ್ಲವೂ ಬಸವಣ್ಣನಾಗಿ ಎನಗೆ
ಪ್ರಸಾದವ ನೀಡಿ ಸಲಹಿದ, ಕಪಿಲಸಿದ್ಧಮಲ್ಲಿಕಾರ್ಜುನ.
ಇನ್ನೆನಗತಿಶಯವೇನೂ ಇಲ್ಲ. ॥ ೧೩೮ ॥

೯೮೭

ಅರ್ಪಿತ ಅವಧಾನ ಮುಖಂಗಳು ಎಲ್ಲರಿಗೆ ಸುಲಭವೆ,
ಅನಾದಿ ಸಂಸಿದ್ಧವಾಗಿ ಬಂದ ಬಸವಣ್ಣಂಗಲ್ಲದೆ ?
ತ್ರೈಲಿಂಗಮೂಲಕ್ಕೆ ಮಂತ್ರಾದಿರೂಪ ಬಸವಣ್ಣ.
ತ್ರೈಲಿಂಗಪ್ರಸಾದಕ್ಕೆ ಅರ್ಹ ಬಸವಣ್ಣ.
ಮೂರುಲಿಂಗ ಒಂದಾದ ಮೂರ್ತಿ ಬಸವಣ್ಣ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನೀ ಸಾಕ್ಷಿಯಾಗಿ ಬಸವಣ್ಣನ ನೆನೆವವರು ನೀನಹರು. ॥ ೧೩೯ ॥

೯೮೮

ಪ್ರಥಮನಾಮಕ್ಕೀಗ ಬಸವಾಕ್ಷರವೆ ಬೀಜ.
ಗುರುನಾಮ ಮೂಲಕ್ಕೆ ಅಕ್ಷರಾಂಕ.
ಬಸವಣ್ಣ ಬಸವಣ್ಣ ಬಸವಣ್ಣ ಎಂದೀಗ
ದೆಸೆಗೆಟ್ಟೆನ್ನೆ ಗುರುವೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೪೦ ॥

೯೮೯

ಆದಿಯಾಧಾರಕ್ಕೆ ಮೂಲ ತಾ ಬಸವಣ್ಣ.
ಹೋದೆನ್ನೆ ಭಕ್ತಿಯೊಳಗೆ ಹೊಲಬುದಪ್ಪಿ.
ಊರನರಿಯದ ಗ್ರಾಮ, ಹೊಲಬುದಪ್ಪಿದ ಸೀಮೆ ;
ಆತನಾಸತಿಂದಾನು ನೀನಾದೆನ್ನೆ.
ಬಸವಣ್ಣ ಬಸವಣ್ಣ ಬಸವಣ್ಣ ಎಂಬ ನಾಮಾಕ್ಷರದೊಳಗೆ
ದೆಸೆಗೆಟ್ಟೆನ್ನೆ ಗುರುವೆ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೪೧ ॥

೯೯೦

ಶುದ್ಧ ಸಿದ್ಧ ಪ್ರಸಿದ್ಧದ ನೆಲೆಯನರಿದೆಹೆನೆಂದು
ತೊಳಲಿ ಬಂದೆ ಗಿರಿಗಹ್ವರದೊಳಗೆ.
ಕಂಡೆ ಕಾಣೆನೆಂಬ ಸಂಶಯವಾಯಿತ್ತು.
ಅದೇನು ಕಾರಣ ?
ನಿನ್ನವರ ಗಣಸಮೂಹಕ್ಕೆ ತಾತ್ಪರ್ಯವ ಒಲ್ಲರಾಗಿ.
ನೀನು ಸದ್ಭಕ್ತದೇಹಿಕನಾಗಿ ಸದ್ಭಕ್ತರಲ್ಲಿ ಒಚ್ಚತವೋಗಿ ಇಪ್ಪೆಯಾಗಿ,
ಇಪ್ಪಾ ಗಿರಿಗಹ್ವರದಲ್ಲಿ ಗುರುವಿನ ಕರುಣದಿಂದ ಕಂಡೆ ನೀನಿಪ್ಪ ನೆಲೆಯ.
ಶುದ್ಧವ ಗುರುವಿನಲ್ಲಿ, ಸಿದ್ಧವ ಲಿಂಗದಲ್ಲಿ, ಪ್ರಸಿದ್ಧವ ಜಂಗಮದಲ್ಲಿ
ಕಂಡೆ, ಅರಿದೆ, ನಚ್ಚಿದೆ, ಮಚ್ಚಿದೆ.
ಎನ್ನ ಸರ್ವ ಸ್ವಾಯತವನೊಚ್ಚತಗೊಟ್ಟೆ,
ನಿನ್ನ ಗಣಸಮೂಹಕ್ಕೆ ಪ್ರಾಪ್ತನಾದೆ,
ನಿನ್ನ ಭಕ್ತರ ಸಲುಗೆಗೆ ಸಂದೆ,
ಕಪಿಲಸಿದ್ಧಮಲ್ಲಿಕಾರ್ಜುನ ತಂದೆ. ॥ ೧೪೨ ॥

೯೯೧

'ಸೋಹಂ' ನೀನೆ ಎಲೆ ಅಯ್ಯಾ ;
'ಕೋಹಂ' ತತ್ವತೂರ್ಯಾರ್ಥವೂ ನೀನೆ ಅಯ್ಯಾ.
'ನಾಹಂ ನಾಹಂ' ನೀನೆ ಅಯ್ಯಾ.
ಆನೆಂಬುದೊಂದು ಭ್ರಾಂತುಂಟೆ ?
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಗುರುವಿನ ಕೈಯಲು ಆನು ಸತ್ತು ಹುಟ್ಟಿದ ಬಳಿಕ
ಆನು ನೀನೆಂಬ ಸಂದನಳಿದೆ. ॥ ೧೪೩ ॥

೯೯೨

ಅಂಗೈಯ ನೋಟದೊಳು ಕಂಗಳು ನಟ್ಟು,
ಕಂಗಳ ತೇಜ ಲಿಂಗದಲ್ಲರತು,
ಲಿಂಗದ ಪ್ರಭೆಯೊಳಗೆ ಅಂಗವೆಲ್ಲ ಲೀಯವಾಗಿ,
ಸಂಗನಿಸ್ಸಂಗವೆಂಬ ಹಂದುಗ ಹಾವು,
ಹಿಂದು ಮುಂದೆಂಬ ಭಾವವಳಿದು ನಿಂದ,

ನಿಜದ ನಿರಾಳದಲ್ಲಿ ಪ್ರಾಣ ಸಮರತಿಯಾಗಿಪ್ಪ
ಕಪಿಲಸಿದ್ಧಮಲ್ಲಿನಾಥನಲ್ಲಿ,
ಪ್ರಭುದೇವರ ಶ್ರೀಪಾದಕ್ಕೆ 'ನಮೋ ನಮೋ' ಎಂದು
ಬದುಕಿದೆ ಕಾಣಾ, ಚೆನ್ನಬಸವಣ್ಣಾ. ॥ ೧೪೪ ॥

೯೯೩

ವಾಣಿ ನಾಲ್ಕರ ಮೇಲೆ ಮಾಣದೆ ನುಡಿವ
ನಿರ್ವಾಣಿಯ ಸಂಭಾಷಣೆಯ ಮಾಡಬಲ್ಲಡೆ ನಿರ್ವಾಣ.
ವರ್ಣವೇಳರೊಳಗೆ ಪರಿಪೂರ್ಣವಾಗಿಪ್ಪ
ಮಹಾವರ್ಣವ ತನ್ಮಯವ ಮಾಡಬಲ್ಲಡೆ ನಿರ್ವಾಣ.
ಸ್ಥಾನ ಹತ್ತರಲ್ಲಿ ಆನಂದ ಸಿಂಹಾಸನದ
ನಾನಾ ಬೆಳಗಿನ ಬೀಜದ ತಿರುಳನನುಭವಿಸಬಲ್ಲಡೆ ಲಿಂಗಾನುಭಾವಿ.
ಪ್ರಣವ ಹತ್ತರಲ್ಲಿ ಧ್ಯಾನಚತುಷ್ಟಯ ಕೂಡಿದಲ್ಲಿಯು
ಕೀಲಬಲ್ಲಡೆ ಲಿಂಗೈಕ್ಯ.
ಇದು ಕಾರಣ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣ ಚೆನ್ನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು
॥ ೧೪೫ ॥

೯೯೪

ಭಕ್ತರೂಪು ಬಸವಣ್ಣ, ಕ್ಷಮಾರೂಪು ಬಸವಣ್ಣ ;
ಗುರುಸ್ವರೂಪು ಚೆನ್ನಬಸವಣ್ಣ, ಪ್ರಸಾದಸ್ವರೂಪು ಚೆನ್ನಬಸವಣ್ಣ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯ ಪ್ರಭುವಾಗಿ ಬಂದು,
ಬಸವಣ್ಣ ಚೆನ್ನಬಸವಣ್ಣನ ಒಕ್ಕುದಕೊಂಡು ಜಂಗಮಹಾದನಯ್ಯಾ.
॥ ೧೪೬ ॥

೯೯೫

ನೀವು ಮಹಿಮರು ; ನಿಮ್ಮ ಮಹಿಮೆ ತಿಳಿಯದು ನೋಡಯ್ಯಾ.
ನಿಮ್ಮ ಸತ್ವವೆ ಬಸವಣ್ಣನು, ನಿಮ್ಮ ಜ್ಞಾನವೆ ಚೆನ್ನಬಸವಣ್ಣನು,
ನಿಮ್ಮ ರಾಣಿಮರೆ ಅಕ್ಕ ನಾಗಮ್ಮನು, ನಿಮ್ಮ ಮಹತ್ವವೆ ಪ್ರಭುದೇವರು
ನೋಡಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೪೭ ॥

೯೯೬

ವರ್ಮವನರಿತು ನಿಮ್ಮ ಕಾಬವರು ಸುಲಭವೆ ಲೋಕದಲ್ಲಿ ?
ಲಿಂಗಭಕ್ತಿ ಜಂಗಮಭಕ್ತಿ ಗುರುಭಕ್ತಿ ಸುಲಭವೆ ?
ಲಿಂಗಭಕ್ತ ಪ್ರಭುದೇವ, ಜಂಗಮಭಕ್ತ ಬಸವಣ್ಣ.
ಗುರು ಮೊದಲಾದ ಪ್ರಸಾದವ ಸರ್ವಕ್ಕೆ ಅನುಭಾವಿ ಚೆನ್ನಬಸವಣ್ಣ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಇಂತಿವರ ಪಾದಕ್ಕೆ ನಮೋ ನಮೋ ಎಂಬೆ. ॥ ೧೪೮ ॥

೯೯೭

ಎಲೆ ಎಲೆ ಲಿಂಗವೆ, ನಾನಂದೆ ಬರಲಿಲ್ಲ ಕಲ್ಯಾಣಕ್ಕೆ.
ಎಲೆ ಎಲೆ ಲಿಂಗವೆ, ನಾನಂದೆ ಬರಲಿಲ್ಲ ಮಾರ್ಗಕ್ಕೆ.
ಎಲೆ ಎಲೆ ಲಿಂಗವೆ, ನಾನಂದೆ ಚೆನ್ನಬಸವಣ್ಣನಾಗಲಿಲ್ಲ,
ಲಿಂಗವೆ ಲಿಂಗವೆ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೪೯ ॥

೯೯೮

ಗುರುವಿನ ಕೃಪೆಯಿಂದ ಸಾಧಾರಣ ತನುವ ಮರೆದೆ ;
ಗುರುವಿನ ಕೃಪೆಯಿಂದ ಮಲತ್ರಯದ ಪಂಕವ ತೊಳೆದೆ ;
ಗುರುವಿನ ಕೃಪೆಯಿಂದ ದೀಕ್ಷಾತ್ರಯದಿಂದ ಅನುಭಾವಿಯಾದೆ ;
ಗುರುವಿನ ಕೃಪೆಯಿಂದ ಶುದ್ಧ ಸಿದ್ಧ ಪ್ರಸಿದ್ಧ ಪ್ರಮಾಣವನರಿದೆ ;
ಎನಗಾಧಿಕ್ಯವಪ್ಪ ವಸ್ತು ಬೇರೊಂದಿಲ್ಲ.
ಅದೇನುಕಾರಣ ? ಅದ ನಾನಾದೆನಾಗಿ.
ಗುರುವೆ ಎನ್ನ ತನುವಿಂಗೆ ಲಿಂಗದೀಕ್ಷೆಯ ಮಾಡಿ,
ಎನ್ನ ಜ್ಞಾನಕ್ಕೆ ಸ್ವಾನುಭಾವ ದೀಕ್ಷೆಯ ಮಾಡಿ,
ಎನ್ನ ತನು-ಮನ-ಧನದಲ್ಲಿ ವಂಚನೆಯಿಲ್ಲದೆ ಮಾಡಲೆಂದು
ಜಂಗಮದೀಕ್ಷೆಯ ಮಾಡಿ,
ಎನ್ನ ಸರ್ವಾಂಗವು ನಿನ್ನ ವಿಶ್ರಾಮಸ್ಥಾನ, ಶುದ್ಧಮಂಟಪವಾದ ಕಾರಣ,
ಲೋಕವ್ಯಾಪ್ತಿಯನರಿಯದೆ ಲೋಕ ಎನ್ನೊಳಗಾಯಿತ್ತು,
ಆ ಲೋಕಕ್ಕೆ ಹೊರಗಾದೆನಾಗಿ.
ಅದೇನು ಕಾರಣ ?
ಜನನ-ಮರಣ-ಪ್ರಳಯಕ್ಕೆ ಹೊರಗಾದೆನಾಗಿ.

ಗುರುವೆ ಸದ್ಗುರುವೆ, ಎನ್ನ ಭವವ ಬೇರ ಹರಿದ ಗುರುವೆ,
ಭವಪಾಶ ವಿಮೋಚನ, ಅವ್ಯಯ, ಮನದ ಸರ್ವಾಂಗ ಲೋಲುಪ್ತ,
ಭಕ್ತಿ ಮುಕ್ತಿ ಫಲಪ್ರದಾಯಕ ಗುರುವೆ, ಬಸವಣ್ಣ,
ಕಪಿಲಸಿದ್ಧಮಲ್ಲಿಕಾರ್ಜುನಾ,
ಚೆನ್ನಬಸವಣ್ಣನಾಗಿ ಪ್ರಭು ಮೊದಲಾಗಿ
ಅಸಂಖ್ಯಾತರೆಲ್ಲರನು ತೋರಿದೆ ಗುರುವೆ. ॥ ೧೫೦ ॥

೯೯೯

ಆಯಿತ್ತಾಯಿತ್ತು ಫಲವಿಲ್ಲದ ವೃಕ್ಷ ;
ಆಯಿತ್ತಾಯಿತ್ತು ಪದವಿಲ್ಲದ ಫಲ ;
ಆಯಿತ್ತಾಯಿತು ಸೀಮೆಯ ಮೀರಿದ ಸಂಬಂಧ ;
ಆಯಿತ್ತಾಯಿತ್ತು ಅನ್ವಯದಲ್ಲಿ ಆಂದೋಳ ;
ಆಯಿತ್ತಾಯಿತ್ತು ನಿತ್ಯದಲ್ಲಿ ಭಕ್ತಿ ;
ಆಯಿತ್ತಾಯಿತ್ತು ಭಕ್ತಿಯಲ್ಲಿ ವೈರಾಗ್ಯ ;
ಆಯಿತ್ತಾಯಿತ್ತು ವೈರಾಗ್ಯದಲ್ಲಿ ಅನುಗುಣ ;
ಆಯಿತ್ತಾಯಿತ್ತು ಸ್ವಾನುಭಾವ, ಸ್ವಾನುಭಾವದಲ್ಲಿ ಸಕಲ ಭಕ್ತಿ,
ಸಕಲ ಭಕ್ತಿಯಿಂಪ ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಸಂಯೋಗ ಬಸವಣ್ಣಂಗೆ.
॥ ೧೫೧ ॥

೧೦೦೦

ಅಯ್ಯಾ, ನಿಮ್ಮ ಶರಣ ಬಸವಣ್ಣನಿಂದ ಲಿಂಗವ **ಕಂಡು**
ಒಳಗೆ ಬೈಚಿಟ್ಟುಕೊಂಡೆನಯ್ಯಾ.
ಅಯ್ಯಾ ನಿಮ್ಮ ಶರಣ ಬಸವಣ್ಣನಿಂದ
ಲಿಂಗವ ಹಾಸಿ ಹೊದೆದುಕೊಂಡೆನಯ್ಯಾ.
ಅಯ್ಯಾ, ನಿಮ್ಮ ಶರಣ ಬಸವಣ್ಣನಿಂದ ನಿರವಯವಾದೆನು.
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣ ಬಸವಣ್ಣಂಗೆ ನಮೋ ನಮೋ ಎನುತಿರ್ದೆನು. ॥ ೧೫೨ ॥

೧೦೦೧

ಎಲೆ ಅಯ್ಯಾ, ನಿಮ್ಮ ನಚ್ಚಿನ ಮಚ್ಚಿನ ಶರಣರ ಸಂಗದಲ್ಲಿರಿಸಿ,
ಎನ್ನನಾಗು ಮಾಡಿದಿರಿ.

ಆಹಾ! ನಿಮ್ಮ ಕರುಣವನೇನೆಂದುಪಮಿಸುವೆನು !
ಎರಡು ಪುರವ ಮೆಟ್ಟಿ ಮೇಲು ಪುರವ ನೋಡುತಿರ್ದೆನು.
ಮೇಲು ಪುರವ ಭೇದಿಸಲೊಡನೆ ನೀನು ನಾನಾದೆನಯ್ಯಾ.
ಕಪಿಲಸಿದ್ಧಮಲ್ಲಿನಾಥಾ,
ನಿಮ್ಮ ಶರಣ ಪ್ರಭುದೇವರ ಕರುಣದಿಂದಲಾನು ಬದುಕಿದೆನು. ॥ ೧೫೩ ॥

೧೦೦೨

ಅಯ್ಯಾ, ಮೂರು ಪುರದ ಮೇಲುಪ್ಪರಿಗೆಯ ಕೆಲಸವನೇನೆಂಬೆನಯ್ಯಾ !
ಮುತ್ತಿನ ಕಳಸದ ಮೇಲೊಂದು
ಅರಳಿದ ಪುಷ್ಪದ ಪರಿಮಳಗೆ ಅಗ್ನಿಯ ಕಂಡೆನಾಗಿ,
ಕಪಿಲಸಿದ್ಧಮಲ್ಲಿನಾಥಾ,
ನಿಮ್ಮ ಶರಣ ಚೆನ್ನಬಸವಣ್ಣ ತೋರಿದ ಹಾದಿ ಸುಪಥವಾಯಿತ್ತಾಗಿ,
ನಾನು ಚೆನ್ನಬಸವಣ್ಣಂಗೆ ನಮೋ ನಮೋ ಎನುತಿರ್ದೆನು. ॥ ೧೫೪ ॥

೧೦೦೩

ಆಜ್ಞಾಸಿದ್ಧನಸರ್ಜಿಸುವಲ್ಲಿ ಆರಯ್ಯಾ ಬಲ್ಲವರು, ಚೆನ್ನಬಸವಣ್ಣನಲ್ಲದೆ ?
ಮೂರ್ತಿಯೆಂಬುದು ಆಗದ ಮುನ್ನ ಮುಖಲಿಂಗವಾಗಿರ್ದ
ಸುದ್ದಿಯನಾರಯ್ಯ ಬಲ್ಲವರು, ಚೆನ್ನಬಸವಣ್ಣನಲ್ಲದೆ ?
ಸದಮಲಜ್ಞಾನದಲ್ಲಿ ಒಪ್ಪಿಪ್ಪ ಅಕ್ಷರದ್ವಯದ ಭೇದಾದಿ ಭೇದವ ಭೇದಿಸಿ
ಲೋಕಕ್ಕೆ ಭಕ್ತಿಯ ಸಾಧಿಸಿಕೊಟ್ಟು
ಲೋಕಕ್ಕೆ ಉರುತರ ಗುರುವಾದ ಕಾರಣ ಚೆನ್ನಬಸವಣ್ಣನೈ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೫೫ ॥

೧೦೦೪

ಎಲೆ ಅಯ್ಯಾ ಗಾರುಡವ ಬಲ್ಲನಯ್ಯಾ,
ಮತ್ತೆ ಗಾರುಡಿಗನಲ್ಲ ನೋಡಯ್ಯಾ.
ಎನ್ನ ಮನದ ಮೇಲಿಪ್ಪ ಶಂಕೆಯೆಂಬ ವಿಷವ
ಗಾರುಡಿಸಿ ಮಾಣಿಸಿ ನಿಶ್ಶಂಕನ ಮಾಡಿದ
ಕಪಿಲಸಿದ್ಧಮಲ್ಲಿನಾಥನಲ್ಲಿ ಮಡಿವಾಳ ಮಾಚಿತಂದೆಯ ಪಾದಕ್ಕೆ
ನಮೋ ನಮೋ ಎನುತಿರ್ದೆನು. ॥ ೧೫೬ ॥

೧೦೦೫

ಮೂರು ಕಟ್ಟಿಗೆಯ ಮೂರರಲ್ಲಿರಿಸಿದನು.
ನಿರಾಳ ನಿಷ್ಪತ್ತಿಯಾದ ಲಿಂಗದಲ್ಲಿ
ಆರೂಢ ಅಂಗುಲದೊಳರುವೆರಳನಿರಿಸಿದನು
ಧೀರ ಪೋಳಿಗೆ ಪಾರ ಶರಣು ಶರಣು.
ಆರೂಢ ದಶಗಳ ಭೇದವನರಿದಂತೆ
ತೋರಿದ ಶರಣೆಂದೆನ್ನೆ, ಕಪಿಲಸಿದ್ಧಮಲ್ಲಿನಾಥಾ. ॥ ೧೫೭ ॥

೧೦೦೬

ಆದಿಮಧ್ಯಾಂತವ ಭೇದಿಸಿದ ಮಹಿಮನು, ನಾದಕ್ಕತೀತನು.
ಪರಬ್ರಹ್ಮದ ಭೇದಾದಿ ಭೇದದ ಪರತತ್ತ್ವಮೂಲವೆಯಾದ
ಆದಿಗುರು ಘಟ್ಟಿವಾಳ,
ಕಪಿಲಸಿದ್ಧಮಲ್ಲಿನಾಥಾ. ॥ ೧೫೮ ॥

೧೦೦೭

ಆಹುದಹುದು ಮತ್ತೇನು ?
ಮರಹಿಂಗೆ ಹಿರಿದು ಕಿರಿದುಂಟಲ್ಲದ,
ಅರುಹಿಂಗೆ ಹಿರಿದು ಕಿರಿದುಂಟೆ ? ಹೇಳಯ್ಯಾ.
ಸಾವಂಗೆ ಭಯವುಂಟಲ್ಲದೆ ಅಜಾತಂಗೆ ಭಯವುಂಟೆ ? ಹೇಳಯ್ಯಾ.
ಕಪಿಲಸಿದ್ಧಮಲ್ಲಿನಾಥನಲ್ಲಿ,
ಮಹಾದೇವಿಯಕ್ಕನ ನಿಲುವಿಂಗೆ ಶರಣೆಂದು ಶುದ್ಧನಾದೆ ಕಾಣಾ,
ಚೆನ್ನಬಸವಣ್ಣಾ. ॥ ೧೫೯ ॥

೧೦೦೮

ಎಲೆ ಎಲೆ ಅಯ್ಯಾ, ನೀವು ಹೇಳಿರಯ್ಯಾ,
ಎನಗೆ ಗತಿಯೇನು ? ಮತಿಯೇನು ?
ನಿಮ್ಮಲ್ಲಿ ಸಮರಸವೆಂತು ಹೇಳಯ್ಯಾ.
ಮೂರನೆಯ ಕರುಮಾಡದ ಮೇಲುವಾಗಿಲ ಮನೆಯೊಳಗಿಪ್ಪೆನೊ ನಾನು.
ಚೌಕಮಧ್ಯದ ಎಂಟೆಸಳ ಮೊನೆಯ ಮೋಹರದ

ನಡುವಣ ಕೋಣೆಯೊಳಗಿಪ್ಪೆನೊ ನಾನು.
ಕಾಮನ ಕಟ್ಟುವ ಪಂಜರವ ಬಿಟ್ಟು ನಿಲುವೆನೊ, ಬಿಡದೆ ನಿಲುವೆನೊ ?
ಹೇಳು ಹೇಳಾ ನಿರ್ಣಯುವ, ಎಲೆ ಕಪಿಲಸಿದ್ಧಮಲ್ಲಿನಾಥಯ್ಯಾ. || ೧೬೦ ||

೧೦೦೯

ತಾಯೆ, ಪರಮ ಸುಖಾಚಾರದ ಮೂರ್ತಿಯನಡಗಿಸಿ ನೀನೆಯಾದೆಯವ್ವಾ.
ತಾಯೆ, ಮಹಾಜ್ಞಾನಕಲ್ಪಿತದಲ್ಲಿ ನೀನೆಯಡಗಿದೆಯವ್ವಾ.
ತಾಯೆ, ನೀಲಮ್ಮನೆಂಬ ಸುಖನಾಸಮೂರ್ತಿ,
ಕಪಿಲಸಿದ್ಧಮಲ್ಲಿನಾಥಯ್ಯ,
ನಮ್ಮ ತಾಯೆ ನೀಲಮ್ಮನಾದಳು. || ೧೬೧ ||

೧೦೧೦

ಎಲೆ ಅಯ್ಯಾ, ನಿಮ್ಮವರ ನೋವೆ ಎನ್ನ ನೋವು ನೋಡಾ.
ಕಂಡು ಕಂಡು ಸೈರಿಸಲಾರೆ ನೋಡಯ್ಯಾ.
ನಿಮ್ಮವರೊಡನೊರಸೊರಗಾಗಿಪ್ಪವರ ಕಂಡಡೆ
ನಾನವರಿಗೆ ಮುನಿವೆ ನೋಡಾ,
ಕಪಿಲಸಿದ್ಧಮಲ್ಲಿನಾಥಾ, ನೀನವರಲ್ಲಿಪ್ಪೆಯಾಗಿ. || ೧೬೨ ||

೧೦೧೧

ಎಕ್ಕೆಯಿಂಡುಗಳೆಂಬವರು, ಮುಕ್ಕಣ್ಣಾ, ನಿಮ್ಮ ಗಣಂಗಳು.
ಬತ್ತಿದ ಕೆರೆ ಬಾಯಬಿಟ್ಟಂತೆ ಮೊರೆಯಿಟ್ಟು ಬರಲು,
ಹೊತ್ತಿದ ಅಂಗಾಲ ಕಿಚ್ಚು ನೆತ್ತಿಯ ಮುಟ್ಟಿದಡೆ,
ಚಕ್ಕನೆ ಕಪಿಲಸಿದ್ಧಮಲ್ಲಿನಾಥ ನೊಸಲಕಣ್ಣ ತೆಗೆದನು. || ೧೬೩ ||

೧೦೧೨

ಬ್ರಹ್ಮನಾದಡಾಗಲಿ, ವಿಷ್ಣುವಾದಡಾಗಲಿ,
ಇಂದ್ರನಾದಡಾಗಲಿ, ಚಂದ್ರನಾದಡಾಗಲಿ.
ಎಮ್ಮ ಶಿವಶರಣರ ನೋವು ಎನ್ನ ನೋವು ನೋಡಾ.
'ಅವರನೊರಸುವೆನುರುಹುವೆ' ಯೆಂದು
ಕಪಿಲಸಿದ್ಧಮಲ್ಲಿಕಾರ್ಜುನ ತನ್ನ ನೊಸಲ ಕಣ್ಣಿಂಗೆ ಬೆಸನನಿತ್ತಡೆ,
ನಿಲಬಲ್ಲ ಗರುವರನಾರನೂ ಕಾಣೆ. || ೧೬೪ ||

೧೦೧೩

ಅಯ್ಯಾ, ನಿಮ್ಮ ಮೂರ್ತಿಯ ನೋಡಿಹೆನೆಂದಡೆ ದೃಷ್ಟಿಯಾನವು.
ನಿಮ್ಮ ತೇಜವನಾರೂ ನೋಡಲಮ್ಮರಯ್ಯಾ.
ನಿಮ್ಮ ತೇಜವನೊಬ್ಬರಿಗೆಯೂ ಉಪಮಿಸಬಾರದು.
ನೀವು ಮುನಿದು ನೊಸಲ ಕಣ್ಣ ತೆಗೆವಡೆ,
ಆದಕ್ಕೆ ಇದಿರಪ್ಪರಿನ್ನಾರು ಹೇಳಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ,
ನಿಮ್ಮ ತೇಜವ ಮೂರುಲೋಕವ ನುಂಗಿದಡೆ
ನೋಡಿ ಕಣ್ಣ ಮುಚ್ಚುತ್ತಿರ್ದೆನು. ॥ ೧೬೫ ॥

೧೦೧೪

ಮಹೇಶ್ವರ ಸ್ಥಲ

ನೀ ಮುನಿವಡೆ ಮುನಿ : ನಾನೆನ್ನುವೆನಯ್ಯಾ ಮೀರಿದ ವಚನವ.
ನೀ ಮಾಡಲಾದವು : ನಾನೇನು ಹೇಳಿದೆನೆ ಅಯ್ಯಾ ? ಇಲ್ಲಿಲ್ಲವು !
ಬಹು ದುರ್ಲಭ, ಬಹು ದುರ್ಲಭ ನಿನ್ನ ಸ್ಥಳವಳವಡುವುದು,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೬೬ ॥

೧೦೧೫

ಹೆಣ್ಣಳಿದ ಬಳಿಕ ಮಣ್ಣಿನ ಹಂಗೇಕಯ್ಯಾ ?
ಮಣ್ಣಳಿದ ಬಳಿಕ ಹೊನ್ನಿನ ಹಂಗೇಕಯ್ಯಾ ?
ಮುಕ್ಕಣ್ಣನಾದ ಬಳಿಕ ಮೂರರ ಹಂಗೇನಯ್ಯಾ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೬೭ ॥

೧೦೧೬

ಅಳವಟ್ಟಿತ್ತಳವಟ್ಟಿತ್ತಯ್ಯಾ, ನಿಮಗಲ್ಲದಾರಿಂಗೆ [ಜ್ಞಾನ] ?
ಅಳವಟ್ಟಿತ್ತಳವಟ್ಟಿತ್ತಯ್ಯಾ, ನಿಮಗಲ್ಲದಾರಿಂಗೆ [ವೈರಾಗ್ಯ] ?
ಅಳವಟ್ಟ ಬಳಿಕ ಕಳವಳಗೊಂಡಳು [ಮಾಯೆ],
ಕಪಿಲಸಿದ್ಧಮಲ್ಲಿನಾಥಾ. ॥ ೧೬೮ ॥

೧೦೧೭

ಹೇಳುವಡೆ ಬಹು ಸುಲಭ,
ಆಳುವಡೆ ಅದು ಬಹು ದುರ್ಘಟ ನೋಡಯ್ಯಾ.
ಆಳಿದ ಹಂಗೇಕಯ್ಯಾ ಗುರುವೆ,
ಕಪಿಲಸಿದ್ಧಮಲ್ಲಿಕಾರ್ಜುನ ತಂದೆ ? ॥ ೧೬೯ ॥

೧೦೧೮

ಜಂಗಮವಾಗಿ ಫಲವೇನಯ್ಯಾ, ಜಗದ ಹಂಗುದೊರೆಯದನ್ನಕ್ಕ ?
ಯೋಗಿಯಾದಲ್ಲಿ ಫಲವೇನಯ್ಯಾ, ನಿನ್ನಂಗ ಬರದನ್ನಕ್ಕ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೭೦ ॥

೧೦೧೯

ನೀರಿಲ್ಲದಲ್ಲಿ ಜಳಕವ ಮಾಡಿ,
ತರುವಿಲ್ಲದಲ್ಲಿ, ಪುಷ್ಪವನೆತ್ತಿ,
ಕರವಿಲ್ಲದೆ ಪೂಜಿಸಬಲ್ಲಡೆ ಜಂಗಮವೆಂಬೆ ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನದೇವಾ,
ಆನು ತ್ರಿಕರಣಶುದ್ಧನಾಗಿ. ॥ ೧೭೧ ॥

೧೦೨೦

ನೀರ ಕುಡಿದು ಅಗ್ನಿಯ ನುಂಗಿದವರ ಜಂಗಮವೆಂಬೆ.
ಊರ ನೋಡಿ ಸೇರದವರ ಜಂಗಮವೆಂದೆಂಬೆ.
ಹೆಣ್ಣ ಭೋಗಿಸಿ ಮುಕ್ಕಣ್ಣನ ಪಡೆದಾತನ ಜಂಗಮವೆಂಬೆನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೭೨ ॥

೧೦೨೧

ಜಂಗಮವಾದುದಕ್ಕೆ ಇದೆ ಚಿಹ್ನೆ ನೋಡಾ :
ಅಂಗವಿಡಿದು ಲಿಂಗವ ಪೂಜಿಸುವ ;
ಲಿಂಗವಿಡಿದು ಅಂಗವ ಪೂಜಿಸ ನೋಡಾ.
ಶತದಳ ಸಹಸ್ರಸೂರ್ಯವರ್ಣದ ಪದ್ಮದೊಳಿಪ್ಪ

ಮಹಾಲಿಂಗವನರುಹಿ, ಪ್ರಾಣಲಿಂಗಿಯ ಕೂಟವನರಿಪಾತನೆ
ಜಂಗಮ ಕಾಣಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೭೩ ॥

೧೦೨೨

ಒಂದು ಕೈಯಾದುದು ಗಂಡು.
ಅಂದು ಲಗ್ನವಾಗಬೇಕೆಂದು ಬಂದನಯ್ಯಾ ಲಿಂಗವು.
ಆ ಲಿಂಗ ರಮಣನಾಗಬೇಕೆಂದು ಹೋದಡೆ
ನೆರೆದು ಸುಮ್ಮನಾದ ನೋಡಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನ. ॥ ೧೭೪ ॥

೧೦೨೩

ನೋಡವ್ವಾ ನೋಡವ್ವಾ ಇದರಂದವ :
ತಾ ಬಂದಡೆನ್ನ ಕರ ಒಂದು ತಾಯಾಯಿತ್ತು.
ಮತ್ತೊಂದು ಕರ ತಂದೆಯಾಯಿತ್ತು.
ಅವರವರು ಕೂಡಿದಲ್ಲಿ ಶಬ್ದವಿಲ್ಲದ ಕೂಸು ಹುಟ್ಟಿತ್ತು.
ಆ ಕೂಸು ಎನ್ನಟ್ಟಿಬಿಟ್ಟಿತ್ತು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೭೫ ॥

೧೦೨೪

ಬರುವ ಮುಂದೆ ಪುರುಷನಿದ್ದೆ ; ಬಂದ ಬಳಿಕ ಸ್ತ್ರೀಯಾದೆ ;
ಇನ್ನು ಮೇಲೆ ನಪುಂಸಕನಾದೆ.
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ಕೂಡಬೇಕೆಂದಲ್ಲಿ
ಪುರುಷನಾದೆ ನೋಡವ್ವಾ, ಎನ್ನ ಹೆತ್ತ ತಾಯೆ ! ॥ ೧೭೬ ॥

೧೦೨೫

ಮೊಮ್ಮಗನಾಗಿ ಮೊಮ್ಮಗಳಾಗಿ ಮೊಮ್ಮಗನಾಗಿ ನಿಂದೆ
ನೋಡವ್ವಾ, ಮಗನ ಕರುಣದಿಂದೆ.
ಮಗನಾಗಿ ಮಗನಾದೆ ನೋಡವ್ವಾ, ಮಗನ ಕರುಣದಿಂದೆ.
ಮಗನು ಹೋಗಿ ಮಹಾಲಿಂಗನಾದ ನೋಡವ್ವಾ ನಿನಗೆ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೭೭ ॥

೧೦೨೬

ಲಿಂಗ ಘನವೆಂಬೆನೆ ? ಗುರುವಿಡಿದು ಕಂಡೆ.
ಗುರು ಘನವೆಂಬೆನೆ ? ಸಾಕಾರವಿಡಿದು ಕಂಡೆ.
ಸಾಕಾರ ಘನವೆಂಬೆನೆ ? ನಿರಾಕಾರವಿಡಿದು ಕಂಡೆ.
ನಿರಾಕಾರ ಘನವೆಂಬೆನೆ ? ಜಂಗಮುಪಿಡಿದು ಕಂಡೆನಯ್ಯಾ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೭೮ ॥

೧೦೨೭

ಹೆತ್ತ ತಾಯಿ ನೀನೆ ಅವ್ವಾ ;
ನನ್ನ ಹತ್ತಿರ ಬಂದಾಕೆ ನೀನೆ ಅವ್ವಾ ;
ಲಿಂಗದ ಪೊತ್ತವಾದಾಕೆ ನೀನೆ ಅವ್ವಾ ;
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ರಾಣಿ ನೀನೆ ಅವ್ವಾ.
ಇದರನುಭಾವವ ತಿಳಿದಾತನೆ ಜಂಗಮು ;
ಇದರನುಭಾವವ ಕೇಳಿದಾತನೆ ಭಕ್ತ ನೋಡವ್ವಾ ;
ಆತ ಪ್ರಾಣಲಿಂಗಿಯವ್ವಾ. ॥ ೧೭೯ ॥

೧೦೨೮

ನೀರನೆರೆಯದೆ ಒಂದು ಮರನಾಯಿತ್ತು ನೋಡವ್ವಾ ;
ಆ ಮರಕ್ಕೆ ಊರ್ಧ್ವಶಾಖೆ ಅಧಃಶಾಖೆ ಎಂಬ ಟೊಂಗೆಗಳಾದವು ನೋಡವ್ವಾ ;
ಮತ್ತನಂತ ಪರ್ಣಂಗಳಾದವು.
ಊರ್ಧ್ವಶಾಖೆಯ ನೋಡಹೋದಡೆ, ಅಧಃಶಾಖೆ ಕಾಣಬಾರದು ;
ಅಧಃಶಾಖೆಯ ನೋಡಹೋದಡೆ, ಊರ್ಧ್ವಶಾಖೆ ಕಾಣಬಾರದು.
ಅದು ವಿಚಾರಿಸಿ ನೋಡಿದಡೆ ಒಂದೆಯಾಗಿಹುದು.
ಇದರ ಕುರುಹ ನೋಡಿ ನಿಬ್ಬೆರಗಾದೆ ನೋಡವ್ವಾ,
ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ. ॥ ೧೮೦ ॥

೧೦೨೯

ಲಿಂಗವ ಪೂಜಿಸಹೋದಡೆ ಲಿಂಗರೂಪಾದೆನು.
ಜಂಗಮುವ ಪೂಜಿಸಹೋದಡೆ ಪ್ರಭುವಾದೆನು.
ಗುರುವ ಪೂಜಿಸಹೋದಡೆ ಚೆನ್ನಬಸವಣ್ಣನಾದೆನು.

ಎನಗಾಜ್ಞೆಯಾವಡೆ ಬರಿಯ ಸಿದ್ಧರಾಮನಾಗಿ ನಿಂದೆನು ನೋಡಾ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಶರಣರ ಸಮೂಹದಲ್ಲಿ.
॥ ೧೮೧ ॥

೧೦೩೦

ಎನ್ನ ಒಳಗನೊತ್ತಿ ನೋಡುವಿರಿ ; ಎನ್ನಲೇನುಂಟಯ್ಯಾ ?
ನುಡಿಯಿಲ್ಲದಭವ ನೀನು, ನುಡಿಗಲಿತೆನೆಂದಡೆ
ನಿಮ್ಮನೊಡಂಬಡಿಸಲಾನು ಸಮರ್ಥನೆ ?
ಅನಂತ ವೇದಂಗಳೆಲ್ಲವು ನಿಮ್ಮ ಮುಂದೆ
ಉಸುರಿಕ್ಕಲಮ್ಮದೆ ಮೂಗರಾಗಿದ್ದವು.
ನಿಮಗಾನಿದಿರುತ್ತರವ ಕೊಟ್ಟು ಕೆಟ್ಟ ಕೇಡಿಂಗೆ ಏನೆಂಬೆನೆಲೆ ಅಯ್ಯಾ ?
ಕಪಿಲಸಿದ್ಧಮಲ್ಲಿಕಾರ್ಜುನಾ,
ನಾನುಭಯಭ್ರಷ್ಟನೆಂಬುದ ನೀವೆ ಬಲ್ಲಿರಿ. ॥ ೧೮೨ ॥

೧೦೩೧

ಅಯ್ಯಾ, ನಿಮ್ಮ ಕಂಡ ಕಾಣಿಕೆಯಲ್ಲಿ ನಂಬಿ ನಚ್ಚಿ,
ಶರಣುಹೊಗಲರಿಯದೆ ಕೆಮ್ಮನೆ ಕೆಟ್ಟೆ ;
ಅಹಂಕಾರವ ಹೊತ್ತುಕೊಂಡು ಕೆಟ್ಟೆ ನೋಡಯ್ಯಾ.
ಕೆಡಿಸಿ, ಮರುಗಿ, ಮರಸಿಹೆನೆಂಬ ಮರುಳು ನಾನಯ್ಯಾ.
ಕಪಿಲಸಿದ್ಧಮಲ್ಲಿನಾಥಯ್ಯಾ,
ಹಾಲಲದ್ದು, ನೀರಲದ್ದು ; ನೀನ್ನೇ ಗತಿ ಮತಿ ! ॥ ೧೮೩ ॥

೧೦೩೨

ಎನ್ನ ಭರಭಾರ ನಿಮ್ಮದಯ್ಯಾ,
ಎನ್ನ ಹಾನಿವೃದ್ಧಿ ನಿಮ್ಮದಯ್ಯಾ,
ಎನ್ನ ಕರಕರ ಕಾಡದಿರು ತಂದೆ !
ನಿನ್ನ ಕಾಟ ಎನ್ನ ಪ್ರಾಣದೋಟ !
ಕಪಿಲಸಿದ್ಧಮಲ್ಲಿನಾಥಾ,
ಕೊಲ್ಲು, ಕಾಯಿ : ನಿಮ್ಮ ಧರ್ಮದವ ನಾನು. ॥ ೧೮೪ ॥

೧೦೩೩

ಎನ್ನ ತನು ಕರಗಿ, ಎನ್ನ ಮನ ಕರಗಿ ಕೊರಗಿದ ದುಃಖವಿದಾರದಯ್ಯಾ ?
'ಅಯ್ಯಾ ಅಯ್ಯಾ' ಎಂದು ಅಳುವ ಅಕ್ಕೆ ಇದಾರದಯ್ಯಾ ?
ಮರಹೆಂಬ ಕೂರಸಿಗೆ ಗುರಿಮಾಡಿದವರಾರಯ್ಯಾ ?
ಹಾ ! ಹಾ ! ಎಂಬ ಧ್ವನಿಯ ಕೇಳಲಾರದೆ,
ಕಂಡು ಕರುಣದಿಂದ ಶಿರವ ಹಿಡಿದೆತ್ತಿ,
ಎನ್ನ ಕಣ್ಣ ನೀರ ತೊಡೆದನು ಕಪಿಲಸಿದ್ಧಮಲ್ಲಿನಾಥಯ್ಯನು. ॥ ೧೮೫ ॥

೧೦೩೪

ಯೋಗದ ಹೊಲಬ ನಾನೆತ್ತ ಬಲ್ಲೆನಯ್ಯಾ ?
ಯೋಗ ಶಿವಶಕ್ತಿ ಸಂಪುಟವಾಗಿಪ್ಪುದಲ್ಲದೆ,
ಶಿವಶಕ್ತಿವಿಯೋಗವಪ್ಪ ಯೋಗವಿಲ್ಲವಯ್ಯಾ.
ಹೃದಯಕಮಲದಲ್ಲಿ ಇಪ್ಪಾತ ನೀನೆಯಲ್ಲದೆ,
ಎನಗೆ ಬೇರೆ ಸ್ವತಂತ್ರವಿಲ್ಲ ಕೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೮೬ ॥

೧೦೩೫

ಉತ್ಪತ್ತಿ ಸ್ಥಿತಿ ಲಯವಿಲ್ಲದಭವ ನೀನು ಕಂಡಯ್ಯಾ.
ಎನಗೆ ಬೇರೆ ಸ್ವತಂತ್ರವಿಲ್ಲ ಕೇಳಾ.
ನಿನ್ನಿಚ್ಛಾಮಾತ್ರದಲ್ಲಿ ನಾನಿಪ್ಪೆನು.
ಹಿರಿಯ ನೀನೇ ದೇವಾ, ಕಪಿಲಸಿದ್ಧಮಲ್ಲಿಕಾರ್ಜುನಾ,
ನಾನೇತರೊಳಗಪ್ಪೆನು ಹೇಳಾ, ಪ್ರಭುವೆ ! ॥ ೧೮೭ ॥

೧೦೩೬

ಅಪ್ಪುವನಲ್ಲದುಮನಸೊಪ್ಪವ ಮಾಡುವಿರಯ್ಯಾ.
ನಿಷ್ಫಲವು ಚೆಲುವು ಕಂಡಯ್ಯಾ.
ನೀವೆಂತು ನೋಡಿದಡಂತಿಪ್ಪವಲ್ಲದೆ,
ಅಪ್ಪದಲ್ಲವೆಂಬವರಿಲ್ಲ ಕಾಣಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೮೮ ॥

೧೦೩೭

ಮಾತುಳ್ಳನ್ನಕ್ಕ ದೇಹ ಹಿಂಗದು ;
ನೆನಹುಳ್ಳನ್ನಕ್ಕ ಪ್ರಾಣ ಸೂತಕ ಬಿಡದು ;
ಕಾಯದ ಜೀವದ ಹೊಲಿಗೆಯು ಸಂದ ಬಿಚ್ಚಲರಿಯದು ;
ಆನು ನಿರ್ದೇಹಿ ಎಂದಡೆ ನಗರೆ ನಿಮ್ಮ ಪ್ರಮಥರು ?
ಎನ್ನ ಅಂತರಂಗದಲುಳ್ಳ ಅವಗುಣವ ಹಿಂಗಿಸಿ,
ನಿಮ್ಮಂತೆ ಮಾಡಿದಡಾನುಳಿವೆನಲ್ಲದೆ
ಬೇರೆ ಗತಿಯ ಕಾಣೆ ನೋಡಾ,
ಅಯ್ಯಾ, ಕಪಿಲಸಿದ್ಧಮಲ್ಲಿನಾಥಾ. ॥ ೧೮೯ ॥

೧೦೩೮

ಎಮ್ಮ ನಲ್ಲನೊಲಿದು ಒಲಿಸಿ ಕಾಡುತ್ತಿರೆ,
'ಬಾರಾ ಬಾರಾ' ಎಂದೆನ್ನ ಕರಣ ಹರಣವ ತೋರಿದಡೆ
ತಾನೆ ಒಲಿದು ಬಂದೆನ್ನ ತಲೆಯ ಪಿಡಿದು ನೆಗಹಿ,
ಎನ್ನ ಮನೆಗೆ ಬಂದ ಕಪಿಲಸಿದ್ಧಮಲ್ಲಿನಾಥನ
ಒಲುಮೆಯ ಘನವೇನೆಂದುಪಮಿಸುವೆನು. ॥ ೧೯೦ ॥

೧೦೩೯

ಅಂಗವಳಿದು ನಿಂದವನೆಂದು ನಾನರಿಯೆ ;
ಘನಲಿಂಗದಲ್ಲಿ ಸಲೆಸಂದವನೆಂದು ನಾನರಿಯೆ ;
ಆವ ವೇಷದಲ್ಲಿ ಬಂದು ನಿಂದ ಠಾವನರಿಯೆ ;
ಕ್ರೋಧವೆಂಬ ಸಂಸಾರದ ಸಾಗರದಲ್ಲಿ ಸಾಧನೆಯ ಮಾಡಲಾಗಿ
ಪ್ರಭುದೇವರ ಸುಳುಹು ಅಘಟಿತವಾಯಿತ್ತು
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೯೧ ॥

೧೦೪೦

ಅಯ್ಯಾ ಅಯ್ಯಾ, ನೀವು ಬಾರದಿರ್ದಡೆ ಅಂತು ಹಂಬಲಿಸುತ್ತಿದ್ದೆ.
ನೀನೆನ್ನ ಹಂಬಲ ಕೇಳಿ ಕರುಣದಿಂದ ಭೋರನೆ ಬಂದಡೆ,
ಆನು ತಳವೆಳಗಾಗಿ ಅವಗುಣವೆಂಬ ರಜವ ಕಳೆದು
ಕಂಬಳಿಯ ಪೀಠವನೊಲ್ಲದೆ ಹೃದಯಪೀಠವನಿಕ್ಕಿ

ಮೇಲುಪ್ಪರಿಗೆಯೊರತೆಯು ಅಗ್ಗಣಿಯು ತಂದು ಪಾದಾರ್ಚನೆಯು ಮಾಡಿ,
ಎರಡೆಸಳ ಕಮಲವನೆರಡು ಪಾದಕ್ಕೆ ಪೂಜಿಸಿ,
ಕಂಗಳ ತಿರುಳ ತೆಗೆದು ಆರತಿಯನೆತ್ತಿ,
ಉಸುರ ಸುಂಗಿನ ಪರಿಮಳದ ಧೂಪವ ಬೀಸಿ,
ನೆತ್ತಿಯ ಪರಿಯಾಣದೊಳಿಟ್ಟು ಬೋನವ ಗಡಣಿಸಿದಡೆ,
ಸಮುದಾನ ಸವೆಯದೆ ಆರೋಗಣೆಯ ಮಾಡಿ,
ಉಂಡ ಬಾಯ ತೊಳೆದಡೆ ಸಂದೇಹವಾದುದೆಂದು
ಮೇಲು ಸೆರಗಿನೊಳು ತೊಡೆದುಕೊಂಡು ಬಾಯ ಮುಚ್ಚಳ ತೆಗೆಯದೆ,
ತ್ರಿಕರಣವೆಂಬ ತಾಂಬೂಲವನವಧರಿಸಿದ,
ಭಾವದ ಕನ್ನಡವ ಹರಿದುಹಾಯ್ಕಿದ,
ಆತನ ಪಾದಕ್ಕೆ ನಾನು ಶರಣೆಂದು ಪಾದೋದಕವ ಕೊಂಡೆ.
ಆತನ ಪ್ರಸಾದಕ್ಕೆನ್ನ ಸೆರಗ ಹಾಸಿ ಆರೋಗಿಸಿ ಸುಖಿಯಾದೆನು.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣ ಪ್ರಭುದೇವರ ಕರುಣವೆನಗೆ
ಸಾಧ್ಯವಾದ ಪರಿಯನೇನೆಂದುಪಮಿಸುವೆ ! ॥ ౧೯೨ ॥

౧౦೪౧

ಆದಿಯಿಂದ ನಿಮ್ಮಿಂದಲಾನಾದೆನಯ್ಯಾ.
ಅನಾದಿಯಲ್ಲಿ ನಿಮ್ಮಲ್ಲಿ ತದ್ಗತನಾಗಿರ್ದೆನಯ್ಯಾ.
ನಿಮ್ಮ ಹಸ್ತ ಮುಟ್ಟಿದಲ್ಲಿ,
ನಿಮ್ಮನೆನ್ನ ಮನದೊಳಗಿಟ್ಟುಕೊಂಡಿರ್ದೆನಯ್ಯಾ.
ಕಾಯವೆಂಬ ಕಪಟವನೊಡ್ಡಿ ನಿಮ್ಮ ಮರಸಿಕೊಂಡಿರ್ದಡೆ,
ನಿಮ್ಮ ಬೆಂಬಳಿಯ ಸಂದು ನಿಮ್ಮ ಕಂಡೆನಯ್ಯಾ.
ಕಪಿಲಸಿದ್ಧಮಲ್ಲಿನಾಥಯ್ಯಾ,
ಎನ್ನಂತರಂಗವ ಶುದ್ಧವ ಮಾಡಿ ತಿಳುಹಾ, ನಿಮ್ಮ ಧರ್ಮ. ॥ ౧೯೩ ॥

౧౦೪೨

ಕಂಡ ಕನಸು ದಿಟವಾಗಿ ಕಂಡೆನೆಂಬೆ
ಕಂಡೆನೆಂಬುದು ಬೆನ್ನ ಬಿಡದು ನೋಡಾ.
ಕಂಡುದ ಕಾಣೆನೆಂಬುದ ಎರಡನೂ ಅರಿಯದೆ
ತವಕ ತಲ್ಲಣಕ್ಕೆ ಎಡೆಯಾದೆನು.

ತವಕದ ಕೂಟ ನಿಮ್ಮಲ್ಲಿ ತದುಗತವಾದೆನು
ಕಪಿಲಸಿದ್ಧ ಮಲ್ಲಿನಾಥಯ್ಯಾ,
ನಿಮ್ಮ ಕರುಣವೆನಗೆ ಸಾಧ್ಯವಾಯಿತ್ತು. ॥ ೧೯೪ ॥

೧೦೪೩

ಕೂಡುವ ತವಕವೆ ನಿಮ್ಮಲ್ಲಿ
ನೀ ಕೋಪನಾಗಿದ್ದಲ್ಲಿ ಕೋಪೆ ನೋಡಯ್ಯಾ.
ನೀನೊಲ್ಲದಿದ್ದರೆ ಒಲ್ಲೆನಯ್ಯಾ.
ಎನ್ನರಿವು ಮರವೆ ಇಬ್ಬರಿಗೂ ಸಮ ನೋಡಯ್ಯಾ.
ಎನ್ನ ಬಯಕೆಯೊಳಗಣ ಬಯಕೆಯ
ನಿಧಾನವು ನೀನೆಂದು ಕಂಡ ಬಳಿಕ
ಬಯಸುವಾತ ನೀನೆ ಕಾಣಾ,
ಕಪಿಲಸಿದ್ಧ ಮಲ್ಲಿನಾಥಯ್ಯಾ. ॥ ೧೯೫ ॥

೧೦೪೪

ಅಣುವಿನೊಳಗೆ ಅಣುವಾಗಿಪ್ಪಿರಿ, ಎಲೆ ದೇವಾ, ನೀವು ;
ಮನದೊಳ ಘನವಾಗಿಪ್ಪಿರಿ ಎಲೆ ದೇವಾ.
ಜಗದೊಳಗೆಲ್ಲಿಯೂ ನೀವಿಲ್ಲದೆಡೆಯುಂಟೆ ?
ಎಂಬತ್ತುನಾಲ್ಕುಲಕ್ಷ ಶಿವಾಲಯಂಗಳ ಮಾಡಿ
ನೀವು ಒಮ್ಮನದೊಳಗಿಪ್ಪುದ ಕಂಡು ನಾನು ಮಾಡಿದೆನಲ್ಲದೆ,
ಕಪಿಲಸಿದ್ಧ ಮಲ್ಲಯ್ಯಾ,
ಎನಗೆ ಬೇರೆ ಸ್ವತಂತ್ರವಿಲ್ಲವೆಂದರಿವೆನು. ॥ ೧೯೬ ॥

೧೦೪೫

ಸಕಲಲಿಂಗವ ಪಿಡಿದು ಆಗಲದೆ ನಡೆ ಎಂದಿರಾಗಿ ನಡೆವುತ್ತಿರ್ದೆನು.
ಲಿಂಗಪ್ರತಿಷ್ಠೆಯ ಮಾಡೆಂದು ಎನಗೆ ನಿರೂಪಿಸುತ್ತಿರ್ದ ಕಾರಣ,
ಮಾಡುತ್ತಿರ್ದೆನಲ್ಲದೆ ಎನಗೆ ಬೇರೆ ಸ್ವತಂತ್ರವುಂಟೆ ?
ಹಿಂದೆ ನೀವು ಕೊಟ್ಟ ನಿರೂಪ ಹುಸಿಯಾದಡೆ
ಇನ್ನು ಮುಂದೆ ಸ್ವಯುವಪ್ಪಂತೆ ನಡೆಸಾ, ಕಪಿಲಸಿದ್ಧ ಮಲ್ಲಿನಾಥಯ್ಯಾ.
॥ ೧೯೭ ॥

೧೦೪೬

ಕೃಷಿಯು ಮಾಡಿ ಉಣ್ಣದೆ ಹಸಿವು ಹರಿವ ಪರಿ ಇನ್ನೆಂತೊ ?
ಕರ್ಮಯೋಗವ ಮಾಡದೆ ನಿರ್ಮಲ ಸುಚಿತ್ತವನರಿವ ಪರಿ ಇನ್ನೆಂತೊ ?
ಬೇಯದ ಅಶನವನುಂಬ ತಾವಾವುದು
ಕಪಿಲಸಿದ್ಧಮಲ್ಲಿಕಾರ್ಜುನಲಿಂಗಕ್ಕೆ ? ॥ ೧೯೮ ॥

೧೦೪೭

ಕೈಯಲ್ಲಿ ಹಿಡಿದು ಕಾಬುದು ಕರ್ಮಪೂಜೆಯಲ್ಲವೆ ?
ಮನದಲ್ಲಿ ನೆನೆದು ಮಾಡುವುದೆಲ್ಲವು ಕಾಯದ ಕರ್ಮವಲ್ಲವೆ ?
ಭಾವಶುದ್ಧವನರಿವ ಪರಿ ಇನ್ನಾವುದು ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೧೯೯ ॥

೧೦೪೮

ಬಣ್ಣವಿಲ್ಲದೆ ಚಿನ್ನ ನಾಮಕ್ಕರ್ಹನಾದ ಪರಿ ಇನ್ನೆಂತಯ್ಯಾ.
ಹೂವೊಣಗಿ ವಾಸನೆ ಮುಡಿದ ಠಾವಿನಲ್ಲಿ
ವಾಸನೆ ನಿಂದುದಿಲ್ಲವೆ ? ಅಯ್ಯಾ.
ಕ್ರೀಶುದ್ಧವಾದಲ್ಲಿ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವು
ಭಾವಶುದ್ಧವಾಗಿರ್ಪನು. ॥ ೨೦೦ ॥

೧೦೪೯

ನುಡಿದೆಹೆನೆಂಬ ಉಲುಹಿನ ಗಲಭೆಯು ತೋಟಿ ಬಿಡದು.
ಉತ್ತಮ ಮಧ್ಯಮ ಕನಿಷ್ಠವೆಂಬುವ
ತಿರುಗಿ ಕಂಡೆಹೆನೆಂಬ ಕಾಲಿನ ಎಡೆಯಾಟ ಬಿಡದು.
ಎನಗೆ ಗರ್ವ ಮೊದಲಾದಲ್ಲಿ ನಿಮಗೆ ಗರ್ವ ವೆಗ್ಗಳವಾಯಿತ್ತು.
ಈ ಉಭಯ ತೋಟಿಯು ನಾನಿನ್ನಾರಿಗೆ ಹೇಳುವೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೦೧ ॥

೧೦೫೦

ಕಾಯು ಸೊನೆಯುರತಲ್ಲದೆ ಹಣ್ಣಿನ ರಸ ಚಿಹ್ನದೋರದು.
ಕಾಯ ಕರ್ಮವ ಮಾಡಿ, ಜೀವ ಜ್ಞಾನವನರಿದು,

ತ್ರಿವಿಧಭಾವ ಶುದ್ಧಿಯಾದಲ್ಲದೆ ಮೇಲೆ ಕಾಣಲಲ್ಲ,
ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗವ. ॥ ೨೦೨ ॥

೧೦೫೧

ಆನೇನು ಮಾಡುವದೆಲ್ಲವನು
ನೀನೆ ಅಲ್ಲವೆಂದರೆ, ಅದು ಮಾಣಲಿ, ನಮ್ಮಾಣತಿ.
ಕಾಣಬಾರದ ಘನವ ಕಾಯುದಲ್ಲಿ ಧರಿಸಿ,
ಹೇಳಬಾರದ ನಿಜವ ಮನದಲ್ಲಿ ನೆಲೆಗೊಳಿಸಿ
ತೋರಬಾರದ ಕುರುಹ ಎನ್ನ ಅರಿವಿನಲ್ಲಿರಿಸಿ
ಇನ್ನು ನಿಮ್ಮ ಕಾಂಬಂತೆ ಮಾಡಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೨೦೩ ॥

೧೦೫೨

ಬೆರಸಿ ಬೆಚ್ಚಾತನ ಕಂಡೆನೆಂಬೆನಯ್ಯಾ ;
ಆತನ ಬಟ್ಟೆಯು ಕಾಣೆ ನೋಡಯ್ಯಾ.
ಶರೀರವಿಡಿದಿಪ್ಪ ಶತಕೋಟಿ ಜೀವಂಗಳ ಭೇದವನರಿಯೆನು ;
ನಿಮ್ಮ ನಾನೆತ್ತ ಬಲ್ಲೆನಯ್ಯಾ ?
ನೀವು ಮಾಡಿದ ಬೆಂಬಳಿಯುಲ್ಲಿ ಹೊರೆಗಾಣಲಾಪೆನಲ್ಲದೆ
ನಾ ಬೇರೆ ಕಾಂಬುದು ಹುಸಿ !
ನೀ ತೋರಯ್ಯಾ ಎನಗೆ, ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೨೦೪ ॥

೧೦೫೩

ಉಪಮೆ ಅನುಪಮೆ ಎಂಬುದು ನಿಮ್ಮಾಧೀನ ಕಂಡಯ್ಯಾ.
ಹೇಳಿ ಕೇಳಿಹೆನೆಂಬುದು ನೀವು ಕಂಡಯ್ಯಾ.
ಎನ್ನಂತರಂಗಕ್ಕೆ ಬಹಿರಂಗಕ್ಕೆ ನೀವೆ ಕರ್ತರಾದ ಕಾರಣ,
ನಿಮ್ಮ ನಿಜವ ಹೇಳದಿರ್ದಡೆ ಎಂತುಳಿವೆನಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೨೦೫ ॥

೧೦೫೪

ಕಾಯುವಿಡಿದಿಹನ್ನಕ್ಕರ ಕಾಮವೆ ಮೂಲ ;
ಜೀವವಿಡಿದಿಹನ್ನಕ್ಕರ ಕ್ರೋಧವೆ ಮೂಲ ;

ವ್ಯಾಪ್ತಿಯುಳ್ಳನ್ನಕ್ಕರ ಸಕಲ ವಿಷಯಕ್ಕೆ ಆಸೆಯೆ ಮೂಲ.
ಎನ್ನ ಆಸೆ ಘಾಸಿಮಾಡುತ್ತಿದೆ,
ಶಿವಯೋಗದ ಲೇಸಿನ ಠಾವ ತೋರು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೦೬ ॥

೧೦೫೫

ನೀರ ಕ್ಷೀರದ ಸಂದುಗಳ ಹಂಸೆ ಬಿಚ್ಚಬಲ್ಲುದು, ನೋಡಯ್ಯಾ.
ದೇಹದ ಜೀವದ ಸಂದ ನೀವು ಬಿಚ್ಚಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ ?
ನೀವಿಕ್ಕಿದ ತೊಡಕ ಬಿಡಿಸಬಾರದು ;
ನೀವು ಬಿಡಿಸಿದ ತೊಡಕನೆಕ್ಕಬಾರದು.
ಕಪಿಲಸಿದ್ಧಮಲ್ಲಿನಾಥಯ್ಯಾ,
ಎನ್ನ ಕಾಯುವ ಜೀವದ ಹೂಲಿಗೆಯ ಬಿಡಿಸಾ, ನಿಮ್ಮ ಧರ್ಮ. ॥ ೨೦೭ ॥

೧೦೫೬

ಅಯ್ಯಾ, ಮನದ ರಜದ ಮಣ್ಣ ಕಳೆದು
ದಯಾ ಶಾಂತಿಯುದಕವ ತೆಗೆವೆನಯ್ಯಾ,
ಜಳಕವ ಮಾಡಿ, ಯೋಗಕಂಪನಿಕ್ಕಿ ಹೊದೆವೆನಯ್ಯಾ,
ಆದನೊಂದೆಡೆಗೆ ತಂದು ಬಟ್ಟಗಾಣದಲ್ಲಿಕ್ಕಿ ಹಿಳಿವೆನಯ್ಯಾ.
ಹಿಳಿದ ರಸದ ಕಂಪ ಕೊಡುವ ಒಡೆಯ ನೀನೆ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೨೦೮ ॥

೧೦೫೭

ಮನವೆಂಬ ಸಂಕಲ್ಪವನರಿಯೆನು– ಸಂಕಲ್ಪ ಸಿದ್ಧಿಯಾಯಿತ್ತಾಗಿ.
ಸಂಕಲ್ಪವೆಂಬ ಸಂಬಂಧವನರಿಯೆನು–ನಿಮ್ಮ ವಿಚಾರವೆಡೆಗೊಂಡಿತ್ತಾಗಿ.
ನಿಮ್ಮ ವಿಚಾರವೆ ಅಂತರಂಗದೊಳಗೆ ತುಂಬಿತ್ತಾಗಿ,
ಎನ್ನ ಮನದ ಮುಂದೆಲ್ಲಾ ನೀನೆಯಾಗಿರ್ದೆಯಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೨೦೯ ॥

೧೦೫೮

ವಿವೇಕವೆಂಬುದು ಬೇರಿಲ್ಲ ಕಂಡಯ್ಯಾ, ವಿವೇಕ.
ನವನಾಳದ ಸುಳುಹ ತೊಡೆದು ಸುನಾಳವ ಶುದ್ಧವ ಮಾಡುವೆ.
ಅಷ್ಟದಳ ಕಮಲವನು ಊರ್ಧ್ವಮುಖವಾಗಿ ನಿಜಪದದಲ್ಲಿ ನಿಲ್ಲಿಸುವೆ.
ಐವತ್ತೆರಡಕ್ಷರವ ತಿಳಿದು ನೋಡಿ ಏಕಾಕ್ಷರದಲ್ಲಿ ನಿಲ್ಲಿಸುವೆ.
ಕಪಿಲಸಿದ್ಧಮಲ್ಲಿಕಾರ್ಜುನಾ, ಎನ್ನ ವಿಚಾರದ ಹವಣ ನೀನೆ ಬಲ್ಲೆ.
॥ ೨೧೦ ॥

೧೦೫೯

ಅಂತರಂಗದಲ್ಲಿ ನಿಮ್ಮ ನೋಡುವನಲ್ಲ,
ಕೇಳು ಕಂಡಾ, ಎಲೆ ಅಯ್ಯಾ.
ಬಹಿರಂಗದಲ್ಲಿ ಬಳಸುವನಲ್ಲ,
ಕೇಳು ಕಂಡಾ, ಎಲೆ ಅಯ್ಯಾ.
ಸುಷುಮ್ನದ ಬಟ್ಟೆಯ ತುದಿಯನಡರಿ,
ಸಾವಿರ ದಳದ ಮಂಟಪದಲ್ಲಿ ನಿಮ್ಮ ನೆಲೆಗಂಡಿಪ್ಪೆ ನೋಡಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೨೧೧ ॥

೧೦೬೦

ನಾ ನಿಮ್ಮ ರೂಪ ವಿಚಾರಿಸುವನಲ್ಲ ಕೇಳಾ ;
ನಿಮ್ಮ ಧ್ಯಾನದಲ್ಲಿ ಇಪ್ಪಾತನಲ್ಲ ಕೇಳಾ.
ಅತ್ಯತಿಷ್ಠದ್ದಶಾಂಗುಲದಲ್ಲಿ ನಿಮ್ಮ ನಿಲಿಸಿ,
ನಾನೊಂದೆಡೆಯಲ್ಲಿ ಇಪ್ಪಾತನಲ್ಲ ನೋಡಾ.
ಓಂಕಾರವೆಂಬ ಪೀಠಿಕೆ ನಾನಾಗಿ
ನಿಶ್ಶಬ್ದವೆಂಬ ಲಿಂಗವ ನೆಲೆಗೊಳಿಸಿ
ಬೆರಸಿ ಬೇರಿಲ್ಲದೆ ಇಪ್ಪೆ ನೋಡಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ, ನೀವು ಪ್ರಣವರೂಪಾಗಿ. ॥ ೨೧೨ ॥

೧೦೬೧

ನಾದ ಬಿಂದುವೆಂಬಲ್ಲಿ ಅಂಗ ಲಿಂಗ ಸಂಬಂಧವೆಂಬೆಸಯ್ಯಾ,
ನಾದ ಪ್ರಾಣ, ಬಿಂದು ಕಾಯುವಾದ ಕಾರಣ.

ನಾದ ಸ್ವರವಲ್ಲ, ಬಿಂದು ಕಾಯವಲ್ಲ ;
ಉಭಯ ಸೂತಕರಹಿತ ಕಂಡಯ್ಯಾ.
ನಾದ ಬಿಂದುವಿನ ಒಡ್ಡ ತೋರಿ ಮನ ಮಗ್ನವಾದ ನಿಲವ
ಕಪಿಲಸಿದ್ಧಮಲ್ಲಿಕಾರ್ಜುನಾ, ನೀನೆ ಬಲ್ಲೆ. ॥ ೨೧೩ ॥

೧೦೬೨

ಎನ್ನ ಮನದಲ್ಲಿ ಮತ್ತೊಂದಕ್ಕೆಂಬಿಲ್ಲ ಕಂಡಯ್ಯಾ.
ನಿಮ್ಮ ನೆನೆವೆ ನಾನು, ನೀನು ಎನ್ನ ನೆನೆವೆ ಕಂಡಯ್ಯಾ.
ನಿನಗೆಯೂ ಎನಗೆಯೂ ಒಮ್ಮನ ನೋಡಯ್ಯಾ.
ನೀ ಮನಮುಕ್ತನಾದ ಕಾರಣ,
ನಿನ್ನೊಡನೆ ಎನ್ನ ಮನಮುಕ್ತನ ಮಾಡಯ್ಯಾ,
ಕಪಿಲಸಿದ್ಧಮಲ್ಲಿನಾಥಾ. ॥ ೨೧೪ ॥

೧೦೬೩

ಮನಮಗ್ನಯೋಗವೆಂದಡೇನು ಕೊರತೆ ?
ಹೇಳಾ, ಎಲೆ ಅಯ್ಯಾ.
ಮನವಿಲ್ಲದ ಬಚ್ಚಬರಿಯ ಬೊಮ್ಮವೆಂದಡೇನು ?
ಹೇಳಾ, ಎಲೆ ಅಯ್ಯಾ.
ನುಡಿದ ಮಾತಿನಲ್ಲಿ ವಿವರ ತೋರುತ್ತಿದೆ ಎಂದಡೆ
ತಾತ್ಪರ್ಯವಂತಪ್ಪುದೆ, ಕಪಿಲಸಿದ್ಧಮಲ್ಲಿಕಾರ್ಜುನಾ ? ॥ ೨೧೫ ॥

೧೦೬೪

ಅಂಗದಂತೆ ಲಿಂಗ, ಲಿಂಗದಂತೆ ಅಂಗವಾದ ಬಳಿಕ
ಅಂಗದಂತೆ ಲಿಂಗೈಕ್ಯ ಲಿಂಗದಂತೆ ಅಂಗೈಕ್ಯ.
ಮನವೆ ಲಿಂಗ, ಲಿಂಗವೆ ಮನವಾದ ಬಳಿಕ,
ಮಾತು ಮಾತುಗಳೆಲ್ಲ ಹೊಳ್ಳಾದ ಕಾರಣ
ಮಾತೇ ಲಿಂಗೈಕ್ಯ ; ಲಿಂಗೈಕ್ಯವೆ ಸ್ವರ !
ಶಬ್ದಸಂದಣಿಗಿನ್ನು ತೆರಹುಂಟೆ ?
ಕಪಿಲಸಿದ್ಧಮಲ್ಲಿನಾಥಯ್ಯಾ,
ಇನ್ನು ನಿಮ್ಮ ದೇವರೆಂದು ಅರಸಲುಂಟೋ ಇಲ್ಲವೋ
ಎಂಬುದನು ತಿಳುಪಿಕೊಡಾ ಅಯ್ಯಾ. ॥ ೨೧೬ ॥

೧೦೬೫

ಅಯ್ಯಾ, ನಿಮ್ಮ ದೇವರೆಂದು ಭಾವಿಸಲರಿಯೆನು, ಕೇಳು ಕಂಡಾ.
ಎನ್ನ ಮನವ ನುಂಗಿದೆ ಎಂದು,
ನಿಮಗಾನು ಬಿನ್ನಹವ ಮಾಡಿದ ಕಾರಣ,
ಎನ್ನ ಒಳಹೊರಗೆಲ್ಲಾ ನೀನೆ ಕಂಡಯ್ಯಾ.
ನಿಮ್ಮೊಳಗೆ ಅಡಗಿದ ನುಡಿಯನೊಳಕೊಂಡ ಅರಿವ
ಅರಿದರಿದು ಮರೆದ ಪರಿ ಎಂತಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ‖ ೨೧೭ ‖

೧೦೬೬

ಅಯ್ಯಾ, ಕಬ್ಬುನ ನೀರನೊಳಕೊಂಬಂತೆ,
ಶಬುದ ನಿರಾಳವನೊಳಕೊಂಬಂತೆ,
ಮರೀಚಿಯು ಬಯಲೊಳಕೊಂಬಂತೆ,
ಎನ್ನನೆಂದೊಳಕೊಂಬೆ, ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ‖ ೨೧೮ ‖

೧೦೬೭

ಕೆರೆ ತೊರೆ ದೇಗುಲಂಗಳ ಕಡೆಯಿಂದ ನಿಮ್ಮ ಕಂಡೆ,
ಎಡಹುವ ಕಲ್ಲ ತೆಗೆವ ಮರೆಯಲ್ಲಿ ನಿಧಾನವ ಕಂಡಂತೆ.
ಎನ್ನ ಮರವೆಯು ತಮದ ಅದ್ರಿಗೆ ದಿನಮಣಿ ಜನಿಸಿದಂತೆ.
ಕಪಿಲಸಿದ್ಧಮಲ್ಲಿಕಾರ್ಜುನಲಿಂಗವೆಂಬ ಭ್ರಾಂತು ಸ್ವಯವಾಯಿತ್ತು,
ಪ್ರಭುದೇವರ ಕಾರುಣ್ಯದಿಂದ. ‖ ೨೧೯ ‖

೧೦೬೮

ಅಯ್ಯಾ, ನಿಮ್ಮ ಸರವುಂಡ ಸಬುದವೆನ್ನ ಮನಕ್ಕೆ ವೇದ್ಯವಾಯಿತ್ತು.
ನಿಮ್ಮ ನಿಜವುಂಡ ನಿಲವು ಎನ್ನ ಮತಿಗೆ ವೇದ್ಯವಾಯಿತ್ತು.
ನಿಮ್ಮ ಕರುಣಪ್ರಸಾದವೆನ್ನ ಸರ್ವಾಂಗವೇದ್ಯವಾಯಿತ್ತು.
ನಿಮ್ಮ ಕಾಯುವಿಡಿದಿಪ್ಪ ಕರಸ್ಥಲದ ಕಾರಣವ ಹೇಳಾ,
ಕಪಿಲಸಿದ್ಧಮಲ್ಲಿನಾಥಾ. ‖ ೨೨೦ ‖

೧೦೬೯

ಕಾಯವೆ ಪೀಠಿಕೆ ಪ್ರಾಣವೆ ಲಿಂಗವಾಗಿರಲು,
ಬೇರೆ ಮತ್ತೆ ಕುರುಹೇಕಯ್ಯಾ ?
ಕುರುಹುವಿಡಿದು ಕೂಡುವ ನಿರವಯವುಂಟೆ ? ಜಗದೊಳಗೆ.
ನಷ್ಟವ ಕೈಯಲ್ಲಿ ಹಿಡಿದು ದೃಷ್ಟವ ಕಂಡೆಹೆನೆಂದಡೆ,
ಕಪಿಲಸಿದ್ಧಮಲ್ಲಿನಾಥಯ್ಯನು ಸಾಧ್ಯವಹ ಪರಿಯ ಹೇಳಾ ಪ್ರಭುವೆ.
॥ ೨೨೧ ॥

೧೦೭೦

ಅಯ್ಯಾ, ನಿಮ್ಮ ಕರಸ್ಥಲದ ಘನವನುಪಮಿಸಬಲ್ಲವರಿಲ್ಲವಯ್ಯಾ.
ನಿಮ್ಮ ಮಹಿಮೆಯನರಿವಡೆ ನಾನೇತರೊಳಗೇನಯ್ಯಾ !
ಇಷ್ಟಲಿಂಗವ ಮುಟ್ಟಿದ ಶರಣನೊಳಗೆ ಹುಟ್ಟಿದ
ಕರಸ್ಥಲವೆಷ್ಟೆಂಬುದ ತಿಳುಹಿ ಎನ್ನನುಳುಹಿಕೊಳ್ಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೨೨ ॥

೧೦೭೧

ಅಯ್ಯಾ, ನಿಮ್ಮ ಕರಸ್ಥಲದ ಘನ ನಿಮ್ಮಲ್ಲಿರಲಿ.
ಕರಸ್ಥಲವನೊಲ್ಲೆ, ಪರಸ್ಥಲವನೊಲ್ಲೆ, ಆವುದನೊಲ್ಲೆ ನೋಡಯ್ಯಾ.
ಕಪಿಲಸಿದ್ಧಮಲ್ಲಿನಾಥಯ್ಯಾ,
ನೀ ಒಲಿದು, ಸಂಗನ ಬಸವಣ್ಣನ ಶ್ರೀಪಾದವ
ತೋರಿಹೆನೆಂಬ ಮಾತಿಂಗೆ ಮಾರುಹೋದೆನು
ಇನ್ನು ತೋರಿ ಎನ್ನನುಳುಹಿಕೊಳ್ಳಾ, ಎನ್ನ ದೇವರ ದೇವಾ. ॥ ೨೨೩ ॥

೧೦೭೨

ಯತ್ರ ಯತ್ರ ಮಾಹೇಶ್ವರಾಸ್ತಿಷ್ಠಂತಿ ಗ್ರಾಮ
ತತ್ರ ತತ್ರ ಶಿವಲೋಕ ನೋಡಾ, ಎಲೆ ಅಯ್ಯಾ.
ಸತ್ಯ ! ವಚನ ತಪ್ಪುವುದೆ ಅಯ್ಯಾ !
ಕಪಿಲಸಿದ್ಧಮಲ್ಲಿನಾಥಾ,
ನಿಮ್ಮ ಶರಣರು ಮೆಟ್ಟಿ ನಿಂದ ಧರೆ ಪಾವನವೆಂಬುದು
ಇಂದೆನಗೆ ಅರಿಯ ಬಂದಿತ್ತಯ್ಯಾ. ॥ ೨೨೪ ॥

೧೦೭೩

ಜಲದಲ್ಲಿ ಉದಯಿಸಿ ಮತ್ತೆ ಜಲವು ತಾನಲ್ಲ ;
ಜಲವೆಂದಿಪ್ಪುದೀ ಲೋಕವೆಲ್ಲಾ.
ಪರಮಗುರು ಬಸವಣ್ಣ ಜಗವ ಪಾಲಿಸ ಬರಲು
ಎನ್ನ ಪರಿಭವವ ದಂದುಗ ಹರಿಯಿತ್ತಯ್ಯಾ.
ಆ ಸುದ್ದಿಯನರಿಯದೆ ಅನೇಕ ಜಡರುಗಳೆಲ್ಲ
ಬೇಕಾದ ಪರಿಯಲ್ಲಿ ನುಡಿವುತ್ತಿಹರು.
ಸತ್ತಪ್ರಾಣಿಯನೆತ್ತಿ ಒಪ್ಪಿಪ್ಪ ನಿಶ್ಚಯವು
ಮರ್ತ್ಯದವರಿಗುಂಟೆ ಶಿವಗಲ್ಲದೆ ?
ಶಿವಗುರು ಬಸವಣ್ಣ, ಬಸವಗುರು ಶಿವನಾಗಿ,
ದೆಸೆಗೆಟ್ಟ ದೇವತಾಪಶುಗಳಿಗೆ ಪಶುಪತಿಯಾದನು.
ಬಸವಣ್ಣನ ನೆನಹು ಸುಖಸಮುದ್ರವಯ್ಯಾ !
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಬಸವಣ್ಣನ ತೋರಿದಿರಾಗಿ ಬದುಕಿದೆನಯ್ಯಾ ಪ್ರಭುವೆ. ॥ ೨೨೫ ॥

೧೦೭೪

ನಿಶ್ಚಲ ಶರಣರ ಮನೆಯಂಗಳದಲ್ಲಿ
ಅಷ್ಟಾಷಷ್ಟಿ ತೀರ್ಥಂಗಳು ನೆಲಸಿಪ್ಪವಯ್ಯಾ.
ನೀನು ಇನಿಸುವೆರಸಿ ಒಲಿದಲ್ಲಿ ನೆಲಸಿಪ್ಪವಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. ॥ ೨೨೬ ॥

೧೦೭೫

ಬಸವಣ್ಣನ ಮನೆಯ ಸ್ವಾನಂದ ನೋಡಿದಡೆ,
ಎನ್ನ ಮನ ಬೇಸರವಾಗದೆ
ಶಿವದಾಸನೆಂದು ಜೀವನ್ಮುಕ್ತನೆಂದು ಹೊಗಳುವೆನಯ್ಯಾ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನ ಪ್ರಭುವೆ. ॥ ೨೨೭ ॥

೧೦೭೬

ಅಯ್ಯಾ, ನಿಮ್ಮ ಶರಣರಲ್ಲದವರ ಮನೆ ಕೆಮ್ಮನೆ ಕಂಡಯ್ಯಾ.
ನಿಮ್ಮ ಶರಣರ ಮನೆ ನೆರವನೆ ನೋಡಾ ಎನಗೆ.

ಸಿರಿಯಾಳ ಮನೆಗಟ್ಟ ಬೇರೂರಿಗೆ ಒಕ್ಕಲು ಹೋದ.
ದಾಸಿಮಯ್ಯ ಮನೆಗಟ್ಟಿ ವ್ಯವಹಾರನಾಡಿ ಹೋದ.
ಸಿಂಧುಬಲ್ಲಾಳ ಮನೆಗಟ್ಟಿ ಕೈಕೂಲಿಕಾರನಾಗಿ ಹೋದ.
ಗಂಗೆವಾಳುಕರು ಮನೆಗಟ್ಟಿ ಲಿಂಗದ ಹೊಲಬನರಿಯದೆ ಹೋದರು.
ಇವರೆಲ್ಲರು ಮನೆಯ ಮಾಡಿ ಮಹದ್ವಸ್ತುವನರಿಯದೆ,
ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯವೆಂಬ ಪದವಿಗೊಳಗಾದರು.
ನಿಮ್ಮ ಸಂಗನಬಸವಣ್ಣ ಬಂದು ಕಲ್ಯಾಣದಲ್ಲಿ ಮನೆಯಕಟ್ಟಿದಡೆ,
ಮರ್ತ್ಯಲೋಕವೆಲ್ಲವು ಭಕ್ತಿಸಾಮ್ರಾಜ್ಯವಾಯಿತ್ತು.
ಆ ಮನೆಗೆ ತಲೆವಾಗಿ ಹೊಕ್ಕವರೆಲ್ಲರು ನಿಜಲಿಂಗ ಫಲವ ಪಡೆದರು.
ಆ ಗೃಹವ ನೋಡಬೇಕೆಂದು ನಾನು ಹಲವು ಕಾಲ ತಪಸಿದ್ದೆನು.
ಕಪಿಲಸಿದ್ಧಮಲ್ಲಿನಾಥಾ,
ನಿಮ್ಮ ಶರಣ ಸಂಗನಬಸವಣ್ಣನ ಮಹಾಮನೆಗೆ
ನಮೋ ನಮೋ ಎಂದು ಬದುಕಿದೆನು. ॥ ೨೨೮ ॥

೧೦೭೭

ಮನೆಯ ನೋಡಿ ಮನ ಹೊಗುವಂತಾಗಬೇಕು.
ಜನ ನೋಡಿವಡೆ ಕೀರ್ತಿವಂತರಾಗಬೇಕು.
ನಮ್ಮ ಸಂಗನ ಮನೆ ಹೊಕ್ಕಡೆ,
ಮನವಳಿದು ಮನೋರಥ ಬಸವಣ್ಣನಂತಾಗಬೇಕು, ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೨೯ ॥

೧೦೭೮

ಮನೆ ನೋಡಿ ಮರೆದೆನಯ್ಯಾ ಮಹತ್ವಗಳ ;
ಮನೆ ನೋಡಿ ಮರೆದೆನಯ್ಯಾ ಎನ್ನ ಮನೆಯ ;
ಮನ ನೋಡಿ ಮರೆದೆನಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ,
ನಡೆಸಿದ ಹೋಮನೇಮ ಕೆರೆದೋಟ ಕೆಲಸಂಗಳ. ॥ ೨೩೦ ॥

೧೦೭೯

ನಿಮ್ಮ ಶಕ್ತಿ ಆತನಲ್ಲಿಪ್ಪುದು ಕಂಡಯ್ಯಾ,
ಆತನ ಪ್ರಾಣ ನಿಮ್ಮಲ್ಲಿಪ್ಪುದು.
ನಿಮ್ಮ ತಮ್ಮ ಭೇದವನಾರು ಬಲ್ಲರು ಹೇಳಯ್ಯಾ.

ಕಪಿಲಸಿದ್ಧಮಲ್ಲಿನಾಥಯ್ಯಾ,
ನಿಮ್ಮ ಶರಣ ಬಸವಣ್ಣನ ಅನುವ ನೀವೆ ಬಲ್ಲಿರಿ. ॥ ೨೩೧ ॥

೧೦೮೦

ಕೇಳು ಕೇಳಾ, ಎಲೆ ಅಯ್ಯಾ,
ಆದಿ ಅನಾದಿ ಇಲ್ಲದಂದು ಬಸವಣ್ಣನೆ ಭಕ್ತ ;
ನಾದ ಬಿಂದು ಕಳೆಗಳಿಲ್ಲದಂದು ನೀನೆ ಜಂಗಮ.
ಶಿವ–ಶಕ್ತಿಗಳುದಯವಾಗದ ಮುನ್ನ ಬಸವಣ್ಣನೆ ಭಕ್ತ.
ಸುರಾಳ–ನಿರಾಳವೆಂಬ ಶಬ್ದ ಹುಟ್ಟದ ಮುನ್ನ ನೀನೆ ಜಂಗಮ.
ಈ ಉಭಯ ಭಾವದಲ್ಲಿ ಭೇದವುಂಟೆ ಕಪಿಲಸಿದ್ಧಮಲ್ಲಿಕಾರ್ಜುನಾ ?
ಬಸವಣ್ಣನಾರೆಂಬುದ ನಿಮ್ಮಲ್ಲಿ ನೀವೆ ತಿಳಿದು ನೋಡಿ
ಕೃಪೆಮಾಡಾ ಪ್ರಭುವೆ. ॥ ೨೩೨ ॥

೧೦೮೧

ಆದಿಯ ಮೂರ್ತಿಯಲ್ಲ, ಅನಾದಿಯ ಬಚ್ಚಬರಿಯ ಶೂನ್ಯವಲ್ಲ,
ಅಂಗವಿದ್ದು ಅಂಗವಿಲ್ಲದ ಸಂಗ ಘನಪದದಲ್ಲಿ ವೇದ್ಯವಾದ
ಮರುಳಶಂಕರದೇವರ ನಿಲವ ಪ್ರಭು ಬಸವಣ್ಣನಿಂದ
ಕಂಡು ಬದುಕಿದೆನು ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೩೩ ॥

೧೦೮೨

ಜ್ಞಾನವೆಂದು ವಿವಾದಿಸುವ ಅಣ್ಣಗಳಿರಾ, ಕೇಳಿರಯ್ಯಾ :
ಜ್ಞಾನವೆಂದಡೆ ಮಹತ್ವಗಳ ಮಾಡಿ ಮೆರೆದುದು ಜ್ಞಾನವೆ ? ಅಲ್ಲಲ್ಲ.
ಜ್ಞಾನವೆಂದಡೆ ಸ್ವರ್ಗದ ವಾರ್ತೆಯ ಕೇಳಿ
ಕೀರ್ತಿಯ ಹಬ್ಬಿಸುದು ಜ್ಞಾನವೆ ? ಅಲ್ಲಲ್ಲ.
ಜ್ಞಾನವೆಂದಡೆ ತತ್ಕಾಲಕ್ಕಾಗುವ ಸುಖದುಃಖಗಳ
ಹೇಳಿದುದು ಜ್ಞಾನವೆ ? ಅಲ್ಲಲ್ಲ.
ಇವೆಲ್ಲಾ ಸಾಧನೆಯ ಮಾತು.
ಅಘೋರಮುಖದಿಂದ ಹುಟ್ಟಿದ ಮಂತ್ರಂಗಳೆಲ್ಲಾ,
ಜಪಿಸಿದಲ್ಲಿ ಮಹತ್ವಗಳಾದವು.
ಸೂಕ್ಷ್ಮತಂತ್ರವ ಗಣಿಸಿದಲ್ಲಿ ಸ್ವರ್ಗದ ವಾರ್ತೆಯ ಹೇಳಿದನು.

ಪ್ರಸಂಗಚಿಂತಾಮಣಿಯ ನೋಡಿ ಸುಖದುಃಖಂಗಳ ಹೇಳಿದನು.
ಇವೆಲ್ಲಾ ಪರಸಾಧನೆಯಯ್ಯಾ.
ನಿನ್ನರಿವು ಕೈಕರಣವಾಗಿರೆ ದೇಹವಳಿದಡೇನು, ದೇಹ ಧರಿಸಿ ಬಂದಡೇನು ?
ಎಲೆ ಅಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೩೪ ॥

೧೦೮೩

ವಾಕ್ಸಿದ್ಧಿಯುಳ್ಳವರು ಕೋಟಾನುಕೋಟಿ ;
ಮನೋರಥಸಿದ್ಧಿಯುಳ್ಳವರು ಕೋಟಾನುಕೋಟಿ ;
ಭಾವಸಿದ್ಧಿಯುಳ್ಳವರು ಕೋಟಾನುಕೋಟಿ.
ನಿಮ್ಮ ಸಿದ್ಧಿಯುಳ್ಳವರು ಇಲ್ಲ ಕಂಡಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೩೫ ॥

೧೦೮೪

ವಾಕ್ಸಿದ್ಧಿಯಿಂದ ದೋಷವುಂಟು, ವಾಕ್ಸಿದ್ಧಿಯಿಂದ ಪುಣ್ಯವುಂಟು.
ದೋಷದಿಂದ ಭವಕ್ಕೆ ಬೀಜ, ಪುಣ್ಯದಿಂದ ಪದಕ್ಕೆ ಬೀಜ.
ಇವೆಲ್ಲ ಪ್ರಳಯದಲ್ಲಿ, ನಿತ್ಯನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೩೬ ॥

೧೦೮೫

ಚರಿತ್ರಗಳನೋದುವುದೇ ವಾಕ್ಸಿದ್ಧಿ.
ಭವವಳಿದು ಭಾಷಣೆಯ ಮಾಡುವುದೇ ವಾಕ್ಸಿದ್ಧಿ.
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ
ಪಾದೋದಕ ಪ್ರಸಾದವ ಸ್ವೀಕರಿಸುವುದದೆ ವಾಕ್ಸಿದ್ಧಿ,
ಕಂಡಯ್ಯಾ, ಅಣ್ಣ ಮಡಿವಾಳ ಮಾಚಯ್ಯಾ. ॥ ೨೩೭ ॥

೧೦೮೬

ಆತನ ಸುಖದುಃಖವೀತಗೇನು ?
ಈತನ ಸುಖದುಃಖವಾತಗೇನು ?
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ ;
ನಿಮ್ಮ ನಿಮ್ಮ ಅರಿವ ಸಂತೈಸಿಕೊಳ್ಳಿ.

ರಂಭೆ ಎಂದಡೆ ನಿನ್ನಂಗನೆಯಾಗಲಿಲ್ಲವು :
ಒಂದಿನ ಸ್ವಪ್ನದಲ್ಲಾದಡೂ ರತಿಸಲಿಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೩೮ ॥

೧೦೮೭

ಕಲ್ಪವೃಕ್ಷಕ್ಕೆ ಸಮಮಾಡಿ ಹೇಳಿದೆನಯ್ಯಾ,
ಕರಸ್ಥಲದ ಮಹಾಲಿಂಗಮೂರ್ತಿಗೆ.
ಅಲ್ಲಲ್ಲ, ಕಲ್ಪಿಸಿ ಬೇಡಿದಡೆ ಕೊಡುವುದದು ಸುರಾಮೃತವ ;
ಮೃತ[ವ] ಬೇಡಿದಡೆ ಕೊಡುವುದಯ್ಯಾ ಭವದ ಗೋಳಾಟ ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೩೯ ॥

೧೦೮೮

ನುಡಿದ ನಡೆ ಸಮನಿಸಿತ್ತಯ್ಯಾ ಸಂಗನ ಬಸವಣ್ಣಂಗೆ.
ನುಡಿವ ನಡೆ ಸಮನಿಸಿತ್ತಯ್ಯಾ ಪ್ರಭುವಿಂಗೆ.
ನಡೆಸಿದ ನಡೆ ಸಮನಿಸದಯ್ಯಾ ನಿಮ್ಮಾತಂಗಲ್ಲದೆ ಆತಂಗೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೪೦ ॥

೧೦೮೯

ಬ್ರಹ್ಮನ ಪೂಜಿಸಿ ಸೃಷ್ಟಿಗೊಳಗಾಗುವುದ ಬಲ್ಲೆ.
ರುದ್ರನ ಪೂಜಿಸಿ ಲಯಕ್ಕೊಳಗಾಗುವುದ ಬಲ್ಲೆ.
ನಿಮ್ಮಿಷ್ಟಲಿಂಗಮೂರ್ತಿಯು ಪೂಜಿಸಿ ಲಿಂಗವಾಗಿ
ಸರ್ವವಳಿವುದ ಬಲ್ಲೆ ನೋಡಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೪೧ ॥

೧೦೯೦

ನಾಲ್ಕು ಯುಗಂಗಳು ಸಹಸ್ರ ವೇಳೆ ತಿರುಗಿದಡೆ , ಬ್ರಹ್ಮಂಗೊಂದು ದಿನ
ಬ್ರಹ್ಮನಂಥ ಸಹಸ್ರ ವೇಳೆ ತಿರುಗಿದಡೆ, ವಿಷ್ಣುವಿಗೊಂದು ಗಳಿಗೆ.
ವಿಷ್ಣು ತಾನು ಹನ್ನೆರಡು ಲಕ್ಷ[ವೇಳೆ] ತಿರುಗಿದಡೆ,
ಮಹೇಶ್ವರಂಗೊಂದು ನಿಮಿಷ.
ಅಂತಪ್ಪ ಮಹೇಶ್ವರನನೇಕ ಕೋಟಿ [illegible]

ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ಪೂಜೆ ಸಮಾಪ್ತಿ,
ನೋಡಯ್ಯಾ ಬಾಚರಸರೆ. ॥ ೨೪೨ ॥

೧೮೯೧

ಹಸಿವು ತೃಷೆಯಳಿದಡೇನು, ಭಕ್ತನಪ್ಪನೆ ? ಅಲ್ಲಲ್ಲ.
ಅಷ್ಟಮಹಾಸಿದ್ಧಿಯುಳ್ಳಡೇನು, ಭಕ್ತನಪ್ಪನೆ ? ಅಲ್ಲಲ್ಲ.
ತನು ಬಯಲಾಗಿ ಚತುರ್ವಿಧ ಪದಸ್ಥನಾಗಿ
ಕೈಲಾಸದಲ್ಲಿದ್ದಡೇನು, ಭಕ್ತನಪ್ಪನೆ ? ಅಲ್ಲಲ್ಲ.
ಗಿಡಗಳ ತಿಂದ ಬಳಿಕ ಹಸಿವು ತೃಷೆ ತೋರದು.
ಯೋಗಪಂಗವಾದ ಬಳಿಕ ಸ್ವೇಚ್ಛಾಚಾರ ಬಿಡದು.
ಅಘೋರತಪವ ಮಾಡಿದ ಬಳಿಕ ಮಹಾಸಿದ್ಧಿಗಳು ಬಿಡವು.
ಒಂದೊಂದರಿಂದೊಂದೊಂದು ಸಿದ್ಧಿ.
ಅಂಗ ಮೂರರಲ್ಲಿ ಲಿಂಗ ಸಂಬಂಧವಾಗಿ,
ಲಿಂಗ ಮೂರರಲ್ಲಿ ವಸ್ತುತ್ರಯುವ ಪೂಜಿಸಿ,
ತತ್ಪ್ರಸಾದಗ್ರಾಹಕ ಭಕ್ತನಲ್ಲದೆ, ಬಾಲಬ್ರಹ್ಮಿಗೆ ಭಕ್ತನೆನಬಹುದೇನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ ? ॥ ೨೪೩ ॥

೧೮೯೨

ತನು ಕೊಡುವಡೆ ಗುರುವಿನದು ;
ಮನ ಕೊಡುವಡೆ ಲಿಂಗದದು ;
ಧನ ಕೊಡುವಡೆ ಜಂಗಮದದು.
ಅವರ ಪದಾರ್ಥವನವರಿಗೆ ಕೊಟ್ಟು ಭಕ್ತನಾದೆನೆಂಬವರ
ಒರಿಯತನದ ಕೇಡ ನೋಡಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೪೪ ॥

೧೮೯೩

ತನು ಕೊಟ್ಟ ಬಳಿಕ ದೇಹವೆಲ್ಲಿಹದೊ ?
ಧನ ಕೊಟ್ಟ ಬಳಿಕ ಭೋಗಂಗಳೆಲ್ಲಿಹವೊ ?
ಇವೆಲ್ಲ ಬರಿಯ ಭ್ರಮೆ !
ಕೊಟ್ಟೆವೆಂಬವರ ಮುಖವ ನೋಡಲಾಗದು.

ಕೊಟ್ಟು ಭಕ್ತನಾದೆನೆಂಬ ನುಡಿ ಸಮನಿಸದಯ್ಯಾ, ಗುರುವೆ,
ನಿಮ್ಮ ಶರಣರ ಬುದ್ಧಿಗೆ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೪೫ ॥

೧೧೯೪

ಜಲದಲ್ಲಿ ನೊರೆ ತೆರೆ ಬುದ್ಬುದವಿದ್ದಂತೆ,
ಕನಕದಲ್ಲಿ ಅಲಂಕಾರವಿದ್ದಂತೆ,
ಬೀಜದಲ್ಲಿ ಎಲೆ ಶಾಖೆ ಬೀಜವಿದ್ದಂತೆ
ಒಂದೆ ವಸ್ತುವಿನಲ್ಲಿ ಗುಣತ್ರಯವಾದವು ;
ಗುಣತ್ರಯದಿಂದ ಮಲತ್ರಯಂಗಳಾದವು ;
ಮಲತ್ರಯಂಗಳಿಂದ ಲೋಕರಚನೆ ಹೆಚ್ಚಿತ್ತು ;
ಲೋಕರಚನೆ ಹೆಚ್ಚಲಲ್ಲಿ ಪಾಪಪುಣ್ಯಂಗಳಾದವು ;
ಪಾಪಪುಣ್ಯಂಗಳಿಂದ ಸ್ವರ್ಗನರಕಂಗಳಾದವು ;
ಸ್ವರ್ಗನರಕಂಗಳಿಂದ ಭೇದವಾಗಿಯಾಗಿ ಕೆಟ್ಟ ಕೇಡ ನೋಡಿ
ತನ್ನ ಮಾಯೆಯ ಸೆಳೆದನು.
ಮಾಯೆಯ ಸೆಳೆದಲ್ಲಿ, ಸರ್ವವು ಲಯವಾಗಿ ನೀನೊಬ್ಬನೆ ಉಳಿದೆ.
ಉಳಿದೆ ಎಂಬುದು ಶಾಸ್ತ್ರಪ್ರಸಿದ್ಧ–
ಸಮುದ್ರದ ನೀರು ಮೇಘವಾಗಿ, ಮೇಘದ ನೀರು ಹಳ್ಳಕೊಳ್ಳವಾಗಿ,
ಮತ್ತೆ ಸಮುದ್ರವಾದಂತೆ
ಅದರಂತೆ ಒಂದೆ ಸ್ಥಲದಲ್ಲಿ ನಿಂತು ನೋಡಲೊಲ್ಲದೆ,
ಅನೇಕ ಸ್ಥಾನಗಳ ಧರಿಸಿ ಹೋಗುವುದದು ಉಚಿತವಲ್ಲ, ಎಲೆ ಜೀವವೆ
ಎಂದು ಬೋಧಿಸಿದ ಸದ್ಗುರು ಚೆನ್ನಬಸವಣ್ಣನ ಪಾದಕ್ಕೆ
ನಮೋ ನಮೋ ಎಂದು ಬದುಕಿದೆನಯ್ಯಾ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೪೬ ॥

೧೧೯೫

ನಿನ್ನ ದೇಹ ನೋಡುವಡೆ ಪಂಚಭೌತಿಕ,
ನೀ ನೋಡುವಡೆ ಜೀವಾಂಶಿಕ ;
ನಿನ್ನ ಧನ ನೋಡುವಡೆ ಕುಬೇರನದು,
ನಿನ್ನ ಮನ ನೋಡುವಡೆ ವಾಯುವ ಕೂಡಿದ್ದು ;
ವಿಚಾರಿಸಿ ನೋಡಿದಡೆ ಬ್ರಹ್ಮನದು.
ನಾ ಮಾಡುವೆನೆಂದಡೆ ಅದು ಆದಿಶಕ್ತಿ ಚೈತನ್ಯ ;

ನಾ ತಿಳಿದಿಹೆನೆಂದಡೆ ಅದು ಜ್ಞಾನದ ಬಲ.
ಆ ಜ್ಞಾನವು ನಾ ಎಂದಡೆ ಇದಿರಿಟ್ಟು ತೋರುತ್ತದೆ.
ತೋರುವ ಆನಂದಮೂರ್ತಿ ನಾ ಎಂದಡೆ
ಅದು ಸಾಕ್ಷಿಯಾಗಿ ನಿಂದಿತ್ತು.
ಸಾಕ್ಷಿ ಎಂಬುದದು ತಿಳಿದು ತಿಳಿಯದೆಂಬುದಕ್ಕೆ,
ಬಯಲಾದ ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನ ತಂದೆಯು. ॥ ೨೪೭ ॥

೧೦೯೬

ತಿಳಿದು ತಿಳಿದು ಸಾಕ್ಷಿಯಾದಡೆ, ತಾ ಉಳಿಯಲಿಲ್ಲ ನೋಡಯ್ಯಾ.
ಉಳಿಯಲಿಲ್ಲ ಉಳಿಯಲಿಲ್ಲವೆಂದಡೆ, ಈ ಶಬ್ದವೆಲ್ಲಿಹದಯ್ಯಾ?
ವಿಚಾರದಿಂದ ಒಳಗಾಗುವುದು, ಅವಿವೇಕದಿಂದ ದೂರಾಗುವುದು.
ಸರ್ವ ಜಗದ್ರೂಪು ನಿಮ್ಮದೆಂದು ನಂಬಿ,
ಸಕಲಲೋಕಾಲೋಕಕ್ಕೆ ಕೈಮುಗಿದೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೪೮ ॥

೧೦೯೭

ಉಪದೇಶವ ಮಾಡಿದಲ್ಲಿ ಗುರುವೆನಿಸಿದನು.
ಕಾಮಿತ ಫಲಂಗಳ ಕೊಟ್ಟಲ್ಲಿ ಲಿಂಗಮೂರ್ತಿ ಎನಿಸಿದನು.
ನಿತ್ಯನಿರ್ವಾಣದ ಸಕೀಲವ ತೋರಿದಲ್ಲಿ ಜಂಗಮವೆನಿಸಿದನಯ್ಯಾ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೪೯ ॥

೧೦೯೮

ಲಿಂಗ ನೋಡುವಡೆ ಮೈಗೊಟ್ಟುದಯ್ಯಾ ಷೋಡಶೋಪಚಾರಂಗಳಿಗೆ.
ಜಂಗಮ ನೋಡುವಡೆ, ಮೈಗೊಟ್ಟನಯ್ಯಾ ನಿರಾಕಾರಕ್ಕೆ.
ಗುರು ನೋಡುವಡೆ, ಭವದ ಬೇರು ಅಳಿಯಬೇಕೆಂದು
ಸಾಕಾರವಾಗಿ ನಿಂದ ನೋಡಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ.
॥ ೨೫೦ ॥

೧೦೯೯

ಗುರುವಿನಿಂದ ಲಿಂಗವ ಕಂಡೆನಲ್ಲದೆ
ಲಿಂಗದಿಂದ ಲಿಂಗವ ಕಾಣಲಿಲ್ಲಯ್ಯಾ.

ಲಿಂಗದಿಂದ ಫಲಪದಂಗಳ ಕಂಡೆನಲ್ಲದೆ
ಫಲಪದಂಗಳಿಂದ ಫಲಪದಂಗಳ ಕಾಣಲಿಲ್ಲಯ್ಯಾ.
ಜಂಗಮದಿಂದ ಮೋಕ್ಷವ ಕಂಡೆನಲ್ಲದೆ
ಮೋಕ್ಷದಿಂದ ಮೋಕ್ಷವ ಕಾಣಲಿಲ್ಲಯ್ಯಾ, ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೫೧ ॥

೧೧೦೦

ಕೆರೆಯ ನೀರು, ಮರದ ಪುಷ್ಪ ಧರಿಸಿದಡೇನು ಅಯ್ಯಾ,
ಆಗುವುದೆ ಆಗುವುದೆ ಲಿಂಗಾರ್ಚನೆ ?
ನೀರೆರೆಯಲಿಕ್ಕಾತನೇನು ಬಿಸಿಲಿನಿಂದ ಬಳಲಿದನೆ ?
ಪುಷ್ಪದಿಂದ ಧರಿಸಲಿಕ್ಕಾತನೇನು ವಿಟರಾಜನೆ ?
ನಿನ್ನ ಮನವೆಂಬ ನೀರಿಂದ, ಜ್ಞಾನವೆಂಬ ಪುಷ್ಪದಿಂದ ಪೂಜಿಸಬಲ್ಲಡೆ
ಭಕ್ತನೆಂಬೆ, ಮಹೇಶ್ವರನೆಂಬೆ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ.
॥ ೨೫೨ ॥

೧೧೦೧

ದೇಹ ಕಂದಿದಡೇನು ? ದೇಹ ಇಂದುವಿನಂತಾದಡೇನು ?
ದೇಹ ಬಾತು ಬಿದ್ದಡೇನು ?
ದೇಹ ಇದ್ದ ಯೋಗ್ಯತೆಗೆ ಮೈಗೊಟ್ಟಡೇನಯ್ಯಾ ?
ಅಂತರಂಗ ಶುದ್ಧವಾದ ಬಳಿಕ ಹೇಗಿದ್ದಡೇನಯ್ಯಾ ?
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೫೩ ॥

೧೧೦೨

ದೇಹವ ನಿರ್ದೇಹಿಗೊಪ್ಪಿಸಿದಲ್ಲಿ ದೇಹ ನಿರ್ದೇಹವಾಗಿತ್ತು.
ಮನವ ಲಿಂಗಕ್ಕರ್ಪಿಸಿದಲ್ಲಿ ಮನ ಲೀಗವಾಗಿ ಮನ ಲೀಯವಾಯಿತ್ತು.
ಭಾವವ ತೃಪ್ತಿಗರ್ಪಿಸಿ ಭಾವ ಬಯಲಾಯಿತ್ತಯ್ಯಾ.
ದೇಹ ಮನ ಭಾವವಳಿದಲ್ಲಿ ಕಾರಣಕಾಯ ಅಕಾಯವಾಯಿತ್ತು.
ಎನ್ನ ದೇಹದ ಸುಖವ ಲಿಂಗ ಭೋಗಿಸುವುದಾಗಿ,
ಶರಣಸತಿ ಲಿಂಗಪತಿ ಎಂಬ ಭಾವ ಅಳವಟ್ಟಿತ್ತಯ್ಯಾ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೫೪ ॥

೧೧೦೩

ಗಂಧವೃಕ್ಷವ ಕಡಿದಲ್ಲಿ
ನೊಂದೆನೆಂದು ಗಂಧವ ಬಿಟ್ಟಿತ್ತೆ ಅಯ್ಯಾ ?
ಚಂದ ಸುವರ್ಣವ ತಂದು ಕಾಸಿ ಬಡಿದಡೆ ?
ನೊಂದೆನೆಂದು ಕಳಂಕ ಹಿಡಿಯಿತ್ತೆ ಅಯ್ಯಾ ?
ಸಂದು ಸಂದು ಕಡಿದ ಕಬ್ಬು ಯಂತ್ರದಲ್ಲಿಟ್ಟು ತಿರುಹಿ ಕಾಸಿದಡೆ,
ನೊಂದೆನೆಂದು ಸಿಹಿಯಾಗುವುದ ಬಿಟ್ಟಿತ್ತೆ ಅಯ್ಯಾ ?
ತಂದು ತಂದು ಭವಕಟ್ಟಿಬಿಟ್ಟಡೆ,
ನಿಮ್ಮರಿವು ಬಿಟ್ಟೆನೆ ಅಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೫೫ ॥

೧೧೦೪

ಸ್ಥೂಲವಾದಡೇನು ಸೂಕ್ಷ್ಮವಿಲ್ಲದನ್ನಕ್ಕರ ?
ಕಳೆಯುಳ್ಳವನಾದಡೇನು ಕುಲವಿಲ್ಲದನ್ನಕ್ಕರ ?
ಜಲವಾದಡೇನು ಸ್ಥಲಯೋಗ್ಯವಿಲ್ಲದನ್ನಕ್ಕರ ?
ಆ ಕಲಿ ಮಹಿಮನಾದಡೇನು, ಕಲಾಮೂರ್ತಿ ಇಷ್ಟಲಿಂಗವಿಲ್ಲದನ್ನಕ್ಕರ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೫೬ ॥

೧೧೦೫

ಎಂದಿಪ್ಪೆನಯ್ಯಾ ಲಿಂಗಪೂಜೆಯ ಮಾಡುತ್ತ ?
ಎಂದಿಪ್ಪೆನಯ್ಯಾ ಜಂಗಮವನರ್ಚಿಸುತ್ತ ?
ಎಂದಿಪ್ಪೆನಯ್ಯಾ ಪ್ರಮಥಸಹ ಭೋಜನ ಪಂಙ್ತಿಯಲ್ಲಿ ?
ಎಂದಿಪ್ಪೆನಯ್ಯಾ, ನಮ್ಮ ಚೆನ್ನಬಸವಣ್ಣನ ಪಾದೋದಕ
ಪ್ರಸಾದವ ಸೇವಿಸುತ್ತ
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೫೭ ॥

೧೧೦೬

ನಂಬಿದೆನಯ್ಯಾ ಲಿಂಗವ ನೋಡಿ ;
ನಂಬಿದೆನಯ್ಯಾ ಲಿಂಗದೊಡಗೂಡಿ.
ನಂಬಿದೆನಯ್ಯಾ ನಾನೆ ಚೆನ್ನಬಸವಣ್ಣನೆಂದು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೫೮ ॥

೧೧೦೭

ಇನ್ನು ಹೊಗಳುವೆನಯ್ಯಾ, ಲಿಂಗದ ಕುಲಾವಳಿಯನ್ನೆತ್ತಿ ;
ಇನ್ನು ಹೊಗಳುವೆನಯ್ಯಾ, ಜಂಗಮದ ಜ್ಞಾನವ ಕಂಡು ;
ಇನ್ನು ಹೊಗಳುವೆನಯ್ಯಾ,
ಚೆನ್ನಬಸವಣ್ಣನೆಂಬ ಪರಾತ್ಪರ ಗುರುಮೂರ್ತಿಯ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ, ॥ ೨೫೯ ॥

೧೧೦೮

ಮಾಡಬೇಕು ಮಾಡಬೇಕು ಮನವೊಲಿದು ಲಿಂಗಪೂಜೆಯ.
ನೋಡಬೇಕು ನೋಡಬೇಕು ಮನವೊಲಿದು ಲಿಂಗ ಸಂಭ್ರಮವ.
ಹಾಡಬೇಕು ಹಾಡಬೇಕು ಮನವೊಲಿದು ಲಿಂಗಸ್ತೋತ್ರವ.
ಕೂಡಬೇಕು ಕೂಡಬೇಕು ಕಪಿಲಸಿದ್ಧಮಲ್ಲಿಕಾರ್ಜುನಾ,
ಎನ್ನ ಗುರು ಚೆನ್ನಬಸವಣ್ಣ ಕೊಟ್ಟ ಇಷ್ಟಲಿಂಗದಡಿಯಲ್ಲಿ. ॥ ೨೬೦ ॥

೧೧೦೯

ಮಾಡುವೆನಯ್ಯಾ ಪೂಜೆಗೆಂದು ದ್ರವ್ಯನಾಶವನು.
ನೋಡುವೆನಯ್ಯಾ ಲಿಂಗಸಂಭ್ರಮಕೆಂದು ಪೂದೋಟಗಳ.
ಹಾಡುವೆನಯ್ಯಾ ನಾಟ್ಯರಚನೆಗೆಂದು ಗಾನವ.
ಕೂಡುವೆನಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನನ ಇಷ್ಟಲಿಂಗದಲ್ಲಿ. ॥ ೨೬೧ ॥

೧೧೧೦

ಮದ್ದು ತಿಂದ ಮನುಜನಂತೆ ವ್ಯರ್ಥಹೋಗದಿರಾ, ಮನವೆ,
ವರ್ಷದಲಾವಡೂ ಒಂದು ದಿವಸ ಶಿವರಾತ್ರಿಯ ಮಾಡು ಮನವೆ.
ಕಪಿಲಸಿದ್ಧಮಲ್ಲೇಶನೆಂಬ ಇಷ್ಟಲಿಂಗಕ್ಕೆ. ॥ ೨೬೨ ॥

೧೧೧೧

ಲೋಕದಲ್ಲಿ ಸಾರ್ವಭೌಮರು ತಮ್ಮ ರಾಣಿಯರಿಗೆ ಮೈಗೊಟ್ಟರಲ್ಲದೆ
ಮೂಲೋಕದರಸ ಎನ್ನ ಕಪಿಲಸಿದ್ಧಮಲ್ಲೇಶನೆಂಬ
ಇಷ್ಟಲಿಂಗಕ್ಕೆ ಮೈಗೊಡದೆ ಭವಕ್ಕೀಡಾದರು,
ಮನವೆ, ತಿಳಿ ನೀನು ಕಂಡಾ. ॥ ೨೬೩ ॥

೧೧೧೨

ನೋಡಯ್ಯಾ, ನೋಡಯ್ಯಾ, ಲಿಂಗದ ಮಹಿಮೆಯ ;
ತಾನು ಸೋಂಕಿ ಎನ್ನ ಕಳೆದ, ಎನ್ನ ಸೋಂಕಿ ತಾನೆ ಉಳಿದ.
ನೋಡಯ್ಯಾ, ನೋಡಯ್ಯಾ, ಲಿಂಗದ ಮಹಿಮೆಯ :
ತಾನೆಂಬುದನುಳುಹದೆ ನಿಶ್ಶೂನ್ಯನಾಗಿ ನಿಂದ ನೋಡಯ್ಯಾ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೬೪ ॥

೧೧೧೩

ಲೋಕದಲ್ಲಿಹ ವಿಟರೆಲ್ಲ ವಾರಾಂಗನೆಯ ನೋಡಿದರಲ್ಲದೆ,
ನಮ್ಮ ವಾರಾಂಗನನೊಬ್ಬರೂ ನೋಡಲಿಲ್ಲಯ್ಯಾ.
ಲೋಕದಲ್ಲಿಹ ಕುಶಲರೆಲ್ಲ ಜಂಗಮದೊಂದಿಗೆ ನುಡಿದರಲ್ಲದೆ,
ಎಮ್ಮ ಲಿಂಗನನೊಂದಿಗೊಬ್ಬರು ನುಡಿದವರಿಲ್ಲ ಕಂಡಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ, ನಾನೊಬ್ಬನೆ ಪ್ರಮಥರ ಮುಂದೆ. ॥ ೨೬೫ ॥

೧೧೧೪

'ಲಿಂಗಾರ್ಚನಾತ್ಪರಂ ಪೂಜ್ಯಂ' ಎಂಬ ಶ್ರುತಿಶಾಖೆ
ಇಂದನುಭವಕ್ಕೆ ಬಂದಿತ್ತಯ್ಯಾ.
"ಲಿಂಗಾಂಗಿ ಪರಮ ಶುಚಿಃ' ಎಂಬ ಸಾಮವೇದ ಶಾಖೆ ಸಮನಿಸಿತ್ತಯ್ಯಾ.
ಮುನ್ನ ಮಾಡಿದ್ದೇ ಮಾಡಿದೆ,
ಹೋಮವನಿನ್ನು ಮಾಡಿದಡೆ ತಲೆದಂಡ,
ಕಪಿಲಸಿದ್ಧಮಲ್ಲಿಕಾರ್ಜುನಾ ! ॥ ೨೬೬ ॥

೧೧೧೫

ಲಿಂಗ ಬಂದು ಲಿಂಗಗಳನಳಿಯಿತ್ತಯ್ಯ ಲಿಂಗವೆ.
ಲಿಂಗ ಬಂದು ಲಿಂಗಗಳನೀಡಾಡಿತ್ತಯ್ಯ ಲಿಂಗವೆ.
ಲಿಂಗ ಬಂದು ಲಿಂಗ ಉಳಿಯಿತ್ತಯ್ಯ.
ಲಿಂಗವೆ ಗುರು ಲಿಂಗವೆ ಜಂಗಮ ಲಿಂಗವೆ ನಾನು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೬೭ ॥

೧೧೧೬

ದರ್ಪಣದಲ್ಲಿ ಮುಖವ ನೋಡುವರಲ್ಲದೆ,
ದರ್ಪಹರನಲ್ಲಿ ಮುಖವ ನೋಡುವರೊಬ್ಬರೂ ಇಲ್ಲ, ನೋಡಯ್ಯಾ.

ನ್ಯಾಯದಲ್ಲಿ ದ್ರವ್ಯವ ಕೊಡುವರಲ್ಲದೆ,
ನ್ಯಾಯಾತೀತನ ಪೂಜೆಗೆ ಒಬ್ಬನೂ ಭಂಡಾರವೀಡಾಡಲಿಲ್ಲ ;
ಕಪಿಲಸಿದ್ಧಮಲ್ಲಿಕಾರ್ಜುನಗಳ್ಳರು ! ॥ ೨೬೮ ॥

೧೧೧೭

ಪುಣ್ಯಪಾಪವೆಂಬುದದಾರಿಗರಿಕೆಯುಂಟಯ್ಯಾ ?
ಪುಣ್ಯವಂತಿರಲಿ, ಪಾಪವಂತಿರಲಿ ;
ಪೂಜಿಸಿ ಪಡೆವುದದು ಪುಸಿಯಲ್ಲ,
ಇದು ಕಾಕುಭಾಷೆ ಎಂದಲ್ಲಿ,
ಪೂಜಿಸಿದವಂಗೆ ಸಂಪದಾದಿಶಕ್ತಿಮುಕ್ತಿ ಬರುವುದೇನಿಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೬೯ ॥

೧೧೧೮

ಆಗುವುದಾದಡೆ ನಿಮ್ಮ ಪೂಜೆಯುದೇಕೊ, ಲಿಂಗ ಲಿಂಗಯ್ಯಾ ?
'ಯಥಾ ಭಾವಸ್ತಥಾ ದೇವಃ' ಎಂಬ ಭಾವವಿದ್ದೆಡೆಯಲ್ಲಿ,
ಆದಂತಾಗಲಿ, ಹೋದಂತೆ ಹೋಗಲಿ,
ನಿಮ್ಮ ಪೂಜಿಸಿದವಂಗೆ ಸಂಪದಾದಿ ಮಹದೈಶ್ವರ್ಯ ತಪ್ಪದು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೭೦ ॥

೧೧೧೯

ಅಂಗಕ್ಕೆ ಕೊಡುವ ಭೋಗಂಗಳ ಲಿಂಗಕ್ಕೆ ಕೊಟ್ಟು ನೋಡಿರಯ್ಯಾ.
ಅಂಗಕ್ಕೆ ಕೊಟ್ಟ ಭೋಗಂಗಳು ಲಿಂಗಂಗಳಾದವು.
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ,
ಎನ್ನ ಭೋಗಂಗಳು ಲಿಂಗಭೋಗಂಗಳು. ॥ ೨೭೧ ॥

೧೧೨೦

ಅಂಗವೆಂದಡೆ ಅಜ್ಞಾನ, ಲಿಂಗವೆಂದಡೆ ಸುಜ್ಞಾನ.
ಲಿಂಗವಿಡಿದು ಆಚರಿಸುವುದಲ್ಲದೆ ಅಂಗವಿಡಿದು ಆಚರಿಸಬಾರದು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೭೨ ॥

೧೧೨೧

ಲಿಂಗದಲ್ಲಿ ಬೆರೆದಲ್ಲಿ ಬಳಿಕ ಅಂಗದಲ್ಲಿ ಬೆರೆಯಲುಂಟೆ ದೇವಾ ? ಅಲ್ಲಲ್ಲ.
ಅಂಗದಲ್ಲಿ ಬೆರೆದ ಬಳಿಕ ಲಿಂಗ[ದಲ್ಲಿ] ಬೆರೆಯಲುಂಟೆ ದೇವಾ,
ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಪೂಜಿಸಿದ ಫಲ ಪಕ್ವವಾಗದನ್ನಕ್ಕ ?
॥ ೨೭೩ ॥

೧೧೨೨

ಭೂಮಿ ಒಂದೆಂದಡೆ ಬೆಳೆವ ವೃಕ್ಷ ಹಲವು ತೆರನುಂಟು.
ಉದಕ ಒಂದೆಂದಡೆ ಸವಿಸಾರದ ಸಂಪದ ಬೇರುಂಟು.
ನಿನ್ನೊಳಗು ನಾನಾದಡೆ ತಾಮಸದ ರಾಗವಿರಾಗವಾಗದು.
ಕಪಿಲಸಿದ್ಧಮಲ್ಲಿಕಾರ್ಜುನಲಿಂಗವೆಂಬ ಪುರುಷರತಿ ಕೂಟಸ್ಥವಿಲ್ಲ. ॥ ೨೭೪ ॥

೧೧೨೩

ಎಲೆ ದೇವಾ, ಒಂದು ಹೋಗಿ ಎರಡಾದುದು,
ಎರಡು ಹೋಗಿ ಮೂರಾದುದು,
ಮೂವತ್ತಾರಾಗಿ ಮೂರರಲ್ಲಿ ಆಡಿದುದು ;
ಆಡಿ ಆಡಿ ಅದೆ ಲಿಂಗವಾಯಿತ್ತು.
ನಮ್ಮ ಗುರು ಚೆನ್ನಬಸವಣ್ಣನೊಂದು ಕೊಟ್ಟಲ್ಲಿ ಎಲ್ಲಾ ಒಂದೆ ಆಯಿತ್ತು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೭೫ ॥

೧೧೨೪

ಅಂಗ [ಲಿಂಗ] ಒಂದಾದ ಬಳಿಕ [ಅಂ]ಗೇಂದ್ರಿಯಂಗಳಾಚರಿಸಲಾಗದು.
ಅಂಗೇಂದ್ರಿಯಂಗಳು ಹೋಗಿ ಲಿಂಗೇಂದ್ರಿಯಂಗಳಾಗಿ ಆಚರಿಸುವುದು.
'ಘೃತೋ ಭೂತ್ವಾ ಕಥಂ ಕ್ಷೀರಂ ಭವತ್ಯೇವಂ ವರಾನನೇ'
ಎಂಬಾಗಮೋಕ್ತಿ ಪುಸಿಯಾಯಿತ್ತೆ ?
ಆಗಿ ಆಚರಿಸಿದಡೆ ಭವ ಹಿಂಗದು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೭೬ ॥

೧೧೨೫

ವೀರನಾದಡೆ ವೈರಿಗಳ ಕಾಟ ಬಹಳವಯ್ಯಾ.
ದಾನಶೂರನಾದಡೆ ಯಾಚಕರ ಗೋಳು ಬಹಳವಯ್ಯಾ.

ಅತಿರೂಪನಾದಡೆ ಅಂಗನೆಯರ ಕಾಟ ವಿಶೇಷವಯ್ಯಾ.
ಮೂರರಲ್ಲಿ ನಿಂತಡೆ ಮಲತ್ರಯಂಗಳ ಘೋರ ಹೆಚ್ಚಾಯಿತಯ್ಯಾ.
ಅಂಗದಲ್ಲಿ ಲಿಂಗಸಂಬಂಧವಾಗಬಾರದು ;
ಆದ ಬಳಿಕ ವೀರನಾಗಿ ವಿಷಯಂಗಳನಳಿವುದು.
ಬಹುಘೋರವು ಬಹುಘೋರವು ನೋಡಯ್ಯಾ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೬೭ ॥

೧೧೨೬

ಮರ್ಮವನರಿತ ನಿಮ್ಮವರು ಸುಲಭವೆ ಅಯ್ಯಾ, ಲೋಕದಲ್ಲಿ ?
ಲಿಂಗಭಕ್ತಿ ಜಂಗಮಭಕ್ತಿ ಗುರುಭಕ್ತಿ ಸುಲಭವೆ ? ಅಯ್ಯಾ.
ಲಿಂಗ ಭಕ್ತ ಪ್ರಭುದೇವರು ; ಜಂಗಮಭಕ್ತ ಬಸವಣ್ಣ ;
ಗುರು ಮೊದಲಾದ ಪ್ರಸಾದ ಸರ್ವಕ್ಕೆ ಅನುಭಾವಿ ಚೆನ್ನಬಸವಣ್ಣ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿಮ್ಮವರ ಶ್ರೀಪಾದಕ್ಕೆ ನಮೋ ನಮೋ ಎಂಬೆನು. ॥ ೨೬೮ ॥

೧೧೨೭

ಇಂತೀ ಭಕ್ತಸ್ಥಲದ ವರ್ಮವನು ಲೋಕಕ್ಕೆ
ನಿಶ್ಚಿಂತವ ಮಾಡಿ ತೋರಿದ,
ತನ್ನ ಪದದುನ್ನತವ ಏಕೈಕಸದ್ಭಾವರಿಗಿತ್ತ,
ಎನ್ನ ಗುರು ಚೆನ್ನಬಸವಣ್ಣನು.
ಬಸವಣ್ಣ ಚೆನ್ನಬಸವಣ್ಣನೆಂಬ ಮಹಾಸಮುದ್ರದೊಳಗೆ
ಹರುಷಿತನಾದೆನಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೨೬೯ ॥

೧೧೨೮

ಮೂರಕ್ಕೆ ಮೂರಾಗಿ ಮೂರು ತನ್ನಯ ಸೀಮೆ,
ಮೂರೊಂದಾದನ್ನೆ ಬಸವಣ್ಣನು.
ಆರು ಮನೆಯಲ್ಲಿದ್ದು ಆರಾರರಿಂ ಮೇಲೆ
ಮೀರಿಪ್ಪ ಭಕ್ತಿಯಲಿ ತೋರಿಪ್ಪುದೀಗ ತನ್ನ ರೂಪು.
ರೂಪಾರೂಪು ಚೆನ್ನಬಸವಣ್ಣನಿಂದ ಆನು ನೀನಾದೆನ್ನೆ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೭೦ ॥

೧೧೨೯

ಗುರುಲಿಂಗ ಬಸವಣ್ಣ, ಚರಲಿಂಗ ಬಸವಣ್ಣ,
ಕರುಣಾಕರನು ಚೆನ್ನಬಸವಣ್ಣನು.
ಶರಣಸ್ಥಲದ ಕಲ್ಪ ಸುರಭೂಜ ಫಲವಿತ್ತ
ಕರುಣಾಕರನು ಚೆನ್ನಬಸವಣ್ಣನು.
ಆ ಬಸವಣ್ಣನ ಕೃಪೆಯಿಂದ ಆದಿ ಅಕ್ಷರವರಿದು
ಸಾಧಿಸಿದೆ ನಿಮ್ಮುವನು ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೨೮೧ ॥

೧೧೩೦

ಯೋಗಭೂಷಣ, ನಿಮ್ಮ ಆದಿ ಅಕ್ಷರಭೇದ
ಆದಿಯಾಧಾರಂಗಳಿಲ್ಲದಂದು,
ಆನಂದಸ್ಥಾನದಲ್ಲಿಪ್ಪ ಗುರು ಬಸವಣ್ಣ,
ತಾನೆನ್ನ ಕರುಣದಿಂ ನಿತ್ಯನೆನಿಸಿ ;
ಯೋಗಸಿದ್ಧಾಂಗದಲ್ಲಾದ ಪಂಚಬ್ರಹ್ಮದಿಂ
ದಾಗಾದೆನ್ನೆ ಚೆನ್ನಬಸವ ತಂದೆ ;
ಯೋಗಮೂರುತಿಯೆ ನೀನೆನ್ನ ಗುರುವಾಗಿ ಶಿವಯೋಗಿಯಾನಾದೆನಯ್ಯಾ.
ನಿನ್ನವರ ಹೊರೆಗೈದೆ ಯೋಗಿಗುರು ಪ್ರಭುರಾಯ
ನಾ ನಿಮ್ಮ ಕರುಣದಲ್ಲಿ.
ಶಿವಯೋಗಮುದ್ರೆಯನೆ ನೆನೆದು ಸುಖಿಯಾದೆನ್ನೆ
ಆಗಮಕ್ಕೊಳಗಾದ ಆಗಮಕೆ ಹೊರಗಾದ
ಆನಂದಸ್ಥಾನದಲಿ ಸ್ವಯುವಾದೆನ್ನೆ ದೇವ
ಯೋಗಜ್ಞಾನ ಕಪಿಲಸಿದ್ಧಮಲ್ಲಿನಾಥನ ಕರುಣ ನಿಮಗಾಯಿತ್ತು,
ಶ್ರೀಗುರು ಚೆನ್ನಬಸವಣ್ಣ ತಂದೆ. ॥ ೨೮೨ ॥

೧೧೩೧

ಸ್ಫಟಿಕದ ಘಟದೊಳಗೀಗ ಸಿಟಿಲಾಕ್ಷನನುಮಾಟ
ಸ್ಫಟಿಕದಲಿ ದೀಪ್ತಿಸಿತ್ತಯ್ಯ ದೆಸೆಯು.
ದೆಸೆಗಾಗಿಯೂ ಶಿಶುವಿನ ಮಸ್ತಕದಲ್ಲಿ
ಒಸರುತ್ತಿದ್ದುದು ಭಕ್ತಿ ದೆಸೆದೆಸೆಯಲಿ.
ಬಸವ ಚೆನ್ನಬಸವ ಪ್ರಭು ಶರಣೆಂದು
ಇದ್ದೆಸೆಗೆಟ್ಟೆ ನಾನೀಗ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೮೩ ॥

೧೧೩೨

ಕುಂಬಾರರೆಲ್ಲರು ಗುಂಡಯ್ಯನಾಗಬಲ್ಲರೆ ?
ಮಡಿವಾಳರೆಲ್ಲರು ಮಾಚಯ್ಯನಾಗಬಲ್ಲರೆ ?
ಜೇಡರೆಲ್ಲರು ದಾಸಿಮಯ್ಯನಾಗಬಲ್ಲರೆ ?
ಎನ್ನ ಗುರು ಕಪಿಲಸಿದ್ಧಮಲ್ಲೇಶ್ವರಯ್ಯಾ,
ಪ್ರಾಣಿಗಳ ಕೊಂದು ಪರಿಹರಿಸಬಲ್ಲಡೆ
ತೆಲುಗ ಜೊಮ್ಮಯ್ಯನಾಗಬಲ್ಲರೆ ? ॥ ೨೮೪ ॥

೧೧೩೩

ಶುದ್ಧಗುರು ಬಸವಣ್ಣ, ಸಿದ್ಧಗುರು ಚೆನ್ನಬಸವಣ್ಣ,
ಪ್ರಸಿದ್ಧಗುರು ಪ್ರಭುರಾಯನು.
ತನುತ್ರಯ ಮಲತ್ರಯ ಆರನತಿಗಳೆದು,
ಲಿಂಗತ್ರಯ ಪ್ರಸಾದ ಮೂರನು ಪರಿಭವಿಸಿ ವಶಮಾಡಿ
ಎನ್ನ ರಕ್ಷಿಸಿದ ಬಸವ, ಚೆನ್ನಬಸವ, ಪ್ರಭು ಶರಣೆಂದು
ಬದುಕಿದೆನಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೨೮೫ ॥

೧೧೩೪

ಆದಿಯಾಧಾರವಲ್ಲಿ ಆದಿಯಿಲ್ಲದ ಮುನ್ನ,
ಅನಾದಿ ಸಂಸಿದ್ಧನಯ್ಯಾ ಬಸವಣ್ಣನು.
ಲೋಕವೀರೇಳರ ಆಕಾರವಿಲ್ಲದಲ್ಲಿ,
ಏಕೈಕರೂಪನಯ್ಯಾ ಚೆನ್ನಬಸವಣ್ಣನು.
ಸಾಕಾರದಿಂದತ್ತ ನಿರ್ಮಾಯ ಬಂದನು,
ಲೋಕಪಾವನಮೂರ್ತಿ ಪ್ರಭುರಾಯನು.
ಇಂತೆನ್ನ ಭವದ ಬೇರ ಹರಿದು ಹದುಳ ಮಾಡಿ
ಶರಣರೊಳಗಿರಿಸಿದ ಗುರು ಇಂತು ಮೂವರಯ್ಯಾ, ॥ ೨೮೬ ॥
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ.

೧೧೩೫

ಇರುವರಯ್ಯಾ, ಒಂದು ಲಕ್ಷ ಶೀಲಸಂಪನ್ನರು.
ಇರುವರಯ್ಯಾ, ಒಂದು ಲಕ್ಷ ವ್ರತಸಂಪನ್ನರು.

ಇರುವರಯ್ಯಾ, ಒಂದು ಲಕ್ಷ ಅರ್ಥಸಂಪನ್ನರು,
ಪ್ರಾಣಾಭಿಮಾನ ವೈರಾಗ್ಯದಿಂದ ಕೊಟ್ಟವರು.
ಇವರೆಲ್ಲರು ಫಲಸಮರ್ಥರಲ್ಲದೆ ಲಿಂಗಸಮರ್ಥರು ಒಬ್ಬರೂ ಇಲ್ಲ,
ನೋಡಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನ ತಂದೆ. ॥ ೨೮೭ ॥

೧೧೩೬

ಸಿದ್ಧಾಂತಿಯು ಜ್ಞಾನ ಸಾಧನೆಯಲ್ಲಿ ಹೋಯಿತ್ತು.
ವೇದಾಂತಿಯು ಜ್ಞಾನ ವಾದದಲ್ಲಿ ಹೋಯಿತ್ತು.
ಕ್ರಿಯಾವಂತನ ಜ್ಞಾನ ನುಡಿಯಲ್ಲಿ ಹೋಯಿತ್ತು.
ವ್ಯವಹಾರಿಕನ ಜ್ಞಾನ ದ್ರವ್ಯಾರ್ಜನೆಯಲ್ಲಿ ಹೋಯಿತ್ತು.
ಇವೆಲ್ಲ ಭವಕ್ಕೆ ಕಾರಣವಲ್ಲದೆ,
ಭವರಹಿತ ಜ್ಞಾನವು ಸಾಧ್ಯವಾಗುವುದದು ದುರ್ಲಭವಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೮೮ ॥

೧೧೩೭

ಅರಿವೆನೆಂದಡೆ 'ಸತ್ಯಂ ಜ್ಞಾನಮನಂತಂ ಬ್ರಹ್ಮ'
ಎಂಬ ಶ್ರುತಿ ಸಾರುತ್ತಿದೆ.
ಮರೆವೆನೆಂದಡೆ 'ಸಾಕ್ಷಾತ್ ಸಚ್ಚಿದಾನಂದಂ ಬ್ರಹ್ಮ'
ಎಂಬ ಕೈವಲ್ಯೋಪನಿಷತ್ ಘೋಷಿಸುತ್ತಿದೆ.
ಅರಿವು ವಸ್ತುಸ್ವರೂಪ, ಮರವು ಮಾಯಾಸ್ವರೂಪವೆಂದಡೆ
ಆನು ನಿರ್ವಯಲ ಸ್ವರೂಪನಾದೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೮೯ ॥

೧೧೩೮

ಒಂದೆ ವಸ್ತು ಭೇದವಾಗಿ ಕಾಡಿತ್ತಯ್ಯಾ :
ಎನ್ನ ದೇಹ ವಸ್ತುವೆಂದಡೆ, ಹಲವು ರೂಪಾಗಿ ತೋರಿತ್ತು,
ಕಾರಣ ವಸ್ತುವೆಂದಡೆ, ಸ್ಥೂಲಸೂಕ್ಷ್ಮ ತಿಳಿಯದೆ ಹೋಯಿತ್ತು,
ಕಾರಣಾತೀತವೆಂದಡೆ, ಸಾಕ್ಷಿಯಾಗಿ ಕ್ರಿಯಂಗಳ ಮಾಡಿಸಿತ್ತು.
ಸಾಕ್ಷಿಯಾಗಿ ನಿಂದರಿವೆ ವಸ್ತುವೆಂದಡೆ, ಚೇತನವಾಗಿ ನಿಂದಿತ್ತು.
ಇದರಿರವ ಬಲ್ಲಾತನೆ ಭಕ್ತ, ನೋಡಿ ಬಯಲಾದಾತನೆ ಜಂಗಮ,
ಬಯಲಾಗಿ ರೂಪಕ್ಕೆ ಬಂದಾತನೆ ಪ್ರಾಣಲಿಂಗಿ ನೋಡಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೯೦ ॥

೧೧೪೯

ತನು ಕೊಟ್ಟು ಭಕ್ತನಾದೆಹೆನೆಂದಡೆ,
ತನು ಮಲಭಾಂಡವಯ್ಯಾ.
ಮನ ಕೊಟ್ಟು ಭಕ್ತನಾದೆಹೆನೆಂದಡೆ,
ಮನ ವಾಯುಮಿತ್ರನಯ್ಯಾ.
ಧನ ಕೊಟ್ಟು ಭಕ್ತನಾದೆಹೆನೆಂದಡೆ,
ಎನ್ನ ಬಂಧುಗಳ ಭಾವ ಅದರಲ್ಲಯ್ಯಾ.
ಇವೆಲ್ಲ ಅಶುದ್ಧ ಪದಾರ್ಥಂಗಳ ಕೊಟ್ಟು ಭಕ್ತನಾಗುವೆನೆ ? ಆಗಲರಿಯೆನು.
ಮಾಡಿ ಮಾಡಿ ಭಕ್ತನಾಗಿಹೆನೆಂಬವರಿಗೆ ಕೊಟ್ಟು ಭಕ್ತನಾಗುವೆನೆಂದಡೆ,
ನೀವೇನಾಗಿ ನಿಂದಲ್ಲಿ ಕೊಡಲಿಕ್ಕಂಬಿಲ್ಲಾ, ತೆಗೆದುಕೊಂಬುವಡೆ ಹಸ್ತವಿಲ್ಲಾ,
ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನ ತಂದೆ. ॥ ೨೯೧ ॥

೧೧೫೦

ಭೂಷಣವುಳ್ಳ ಜಂಗಮವ ಭೂಪಾಲ ಪೂಜಿಸುವ ;
ವೇಷವುಳ್ಳ ಜಂಗಮವ ವೇಶಿ ಪೂಜಿಸುವಳು ;
ವೇಷಧಾರಿ ಜಂಗಮವ ಲೋಕವೆಲ್ಲ ಪೂಜಿಸುವುದು ;
ಜ್ಞಾನವುಳ್ಳ ಜಂಗಮವನಾರು ಪೂಜಿಸರು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೯೨ ॥

೧೧೫೧

ಗುಣವ ನೋಡದೆ ಹೊಗಳುವ ಜಂಗಮವು ಬ್ರಹ್ಮನ ಸಂತತಿ.
ಕಾಡಿ ಬೇಡುವ ಜಂಗಮವು ನಾರಾಯಣನ ಸಂತತಿ.
ವ್ಯಾಪಾರಿಕ ಜಂಗಮವು ಈಶ್ವರನ ಸಂತತಿ.
ಹೊಗಳದೆ, ಕಾಡದೆ, ಬೇಡದೆ, ಬಲಾತ್ಕರಿಸದಿಂದುಣ್ಣದೆ, ವ್ಯವಹರಿಸದೆ,
ಭಿಕ್ಷಮುಖದಿಂದುಂಬ ಜಂಗಮವ ನೋಡಿ,
ಎನ್ನ ಮನ ನೀವೆಂದು ನಂಬಿತ್ತಯ್ಯಾ, ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ.
॥ ೨೯೩ ॥

೧೧೫೨

ವೇಷಧಾರಿ ಜಂಗಮರನಂತರುಂಟು ;
ವೇಷವಳಿದವರನೊಬ್ಬರನು ಕಾಣೆ.

ಬಿಂದುನಿಗ್ರಹದ ಜಂಗಮರನಂತರುಂಟು ;
ಬಿಂದುರಹಿತ ಜಂಗಮರನೊಬ್ಬರನು ಕಾಣೆ.
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ,
ಜಂಗಮವೆನ್ನಬೇಕು, ಪ್ರಭುವೇ ಜಂಗಮವೆನ್ನಬೇಕು.
ವೇಷಧಾರಿಯೆಂದು ಇನ್ನುಳಿದವರೊಪ್ಪಚ್ಚಿ ಆಳವಡೆಂದಡೆ,
ಆಳವಡದು ನೋಡಾ ನಿನ್ನ ಮುಂದೆ. ॥ ೨೯೪ ॥

೧೧೪೩

ಸುವರ್ಣಕ್ಕೆ ಅಲಂಕಾರಕ್ಕೆ ಭೇದವುಂಟೆ ಅಯ್ಯಾ ?
ಜ್ಯೋತಿಗೆ ಪ್ರಕಾಶಕ್ಕೆ ಭೇದವುಂಟೆ ಅಯ್ಯಾ ?
ನೂಲಿಂಗೆ ಪಟಕ್ಕೆ ಭೇದವುಂಟೆ ಅಯ್ಯಾ ?
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ,
ಚೆನ್ನಬಸವಣ್ಣಂಗೆ ನನಗೆ ಭೇದವುಂಟೆ ಅಯ್ಯಾ ?
ಇಲ್ಲ ನೋಡಾ ಪ್ರಭುವೆ. ॥ ೨೯೫ ॥

೧೧೪೪

ಜನನ ಮರಣ ದೇಹಧರ್ಮವಲ್ಲದೆ ಜಂಗಮಕ್ಕೆಲ್ಲಿಹದೋ !
ಕ್ಷುಧಾ–ತೃಷೆ ಪ್ರಾಣಧರ್ಮವಲ್ಲದೆ ಜಂಗಮಕ್ಕೆಲ್ಲಿಹದೊ !
ಸುಖ–ದುಃಖ ಮನೋಧರ್ಮವಲ್ಲದೆ ಜಂಗಮಕ್ಕೆಲ್ಲಿಹದೊ !
ಜ್ಞಾನಾಜ್ಞಾನಂಗಳು ಮುಮುಕ್ಷುವಿಂಗಲ್ಲದೆ,
ನಿಮ್ಮಲ್ಲಿ ಸಮರಸವಾದ ಸಚ್ಚಿದಾನಂದ ಶಿವಯೋಗಿ ಜಂಗಮಕ್ಕೆಲ್ಲಿಹದೊ.
ಕಪಿಲಸಿದ್ಧಮಲ್ಲಿಕಾರ್ಜುನಾ ! ॥ ೨೯೬ ॥

೧೧೪೫

ಜಂಗಮವ ಪೂಜಿಸುವಡೆ ಜಗದ್ಭರಿತ ನೋಡಾ.
ನೋಡುವಡೆ ಏಕದೇಹಿ ನೋಡಯ್ಯಾ.
ಲಿಂಗವ ಪೂಜಿಸುವಡೆ,
'ಲಿಂಗಮಧ್ಯೇ ಜಗತ್ಸರ್ವಂ' ಎಂದು ಶ್ರುತಿ ಸಾರುತ್ತಿದೆ.
ಗುರುವ ಪೂಜಿಸುವಡೆ,
'ಗಿರಿತ್ಯಜ್ಞಾನಂ ಗುರುಃ' ಎಂದು [ಶಬ್ದೋತ್ಪತ್ತಿ] ಉಂಟು.
ಇವೆಲ್ಲ ನನಗೆ ಅಸಾಧ್ಯ ನೋಡಾ :

ನಿನ್ನ ಪೂಜಿಸೆ ನಿನ್ನ ಕೈಕೊಂಬ ಪರಿಯು ಹೇಳಾ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೯೭ ॥

೧೧೪೬

ಉದಕದಿಂದ ಅಭಿಷೇಕಂಗೈವಡೆ,
ಒದವಿದವು ನೋಡಾ ನಿನ್ನುತ್ತಮಾಂಗದಲ್ಲಿ ಅರುವತ್ತೆಂಟುಕೋಟಿ ನದಿಗಳು.
ಪುಷ್ಪವ ಧರಿಸುವಡೆ,
ಚಂದ್ರಕಲಾ ಪ್ರಕಾಶವುಂಟು ನೋಡಾ ಜಟಾಗ್ರದಲ್ಲಿ.
ನೀರಾಜನವೆತ್ತುವಡೆ, ಸೂರ್ಯಚಂದ್ರಾಗ್ನಿನೇತ್ರ ನೋಡಾ.
ಸ್ತೋತ್ರವ ಮಾಡುವಡೆ,
ವೇದಂಗಳು ಹೊಗಳಿ ಹೊಗಳಿ ಮೂಗುವಟ್ಟವು ನೋಡಾ.
ನಿನ್ನ ಮುಂಭಾಗದಲ್ಲಿ ನಾಟ್ಯವನಾಡುವಡೆ,
ಅದುರಿದವು ನೋಡಾ ಅಜಾಂಡಂಗಳು ನಿನ್ನ ಪಾದಸ್ಪರ್ಶನದಿಂದ.
ಚಾಮರವ ಬೀಸುವಡೆ,
ನೋಡಾ ಹನ್ನೊಂದು ಕೋಟಿ ರುದ್ರಕನ್ನಿಕೆಯರ ಕೈತಾಳಧ್ವನಿಯು.
ಚಂದನವ ಧರಿಸುವಡೆ,
ನೋಡಾ ಮಲಯಾಚಲನಿವಾಸಿ.
ವಸ್ತ್ರವ ಧರಿಸುವಡೆ,
ನೋಡಾ ವ್ಯಾಘ್ರಾಸುರ ಗಜಾಸುರ ಚರ್ಮವಾಸಿ.
ಭಸ್ಮವ ಧರಿಸುವಡೆ,
ನೋಡಾ ಕಾಮನಸುಟ್ಟ ಭಸ್ಮ ಅಂಗದಲ್ಲಿ.
ಅಕ್ಷತೆಯ ಧರಿಸುವಡೆ,
ನೋಡಾ ಅಜಾಂಡಂಗಳ ದಾಟಿದ ಮಸ್ತಕ.
ಅಂತಪ್ಪ ವಿಗ್ರಹವ ಪೂಜಿಸುವಡೆನ್ನಳವೆ ?
ಶರಣನ ಮುಖದಿಂದ ಬಂದ ಪದಾರ್ಥವ ಕೈಕೊಂಡು
ಪೂಜಾ ಪ್ರೀತನಾಗಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೯೮ ॥

೧೧೪೭

ನೀ ಒಲಿವ ಮುಖ ತಿಳಿಯದು ನೋಡಯ್ಯಾ ಆರಿಂಗೆ–
ಬ್ರಾಹ್ಮಣನ ಮೃಷ್ಟಾನ್ನವ ಬಿಟ್ಟು, ಬೇಡನ ಮಾಂಸಕ್ಕೊಲಿದೆ ದೇವಾ ;
ಸೌಂದರಚೋಳನ ನೈವೇದ್ಯವನೊಲ್ಲದೆ,
ಚೋಳಿಯಕ್ಕನ ಉಚ್ಛಿಷ್ಟಕ್ಕೆ ಮೈಗೊಟ್ಟೆ ದೇವಾ ;

ಚೋಳನ ಭೋಜನವನೊಲ್ಲದೆ,
ಚೆನ್ನಯ್ಯನಕೂಡ ಜಾತಿಗೆಟ್ಟು ವ್ಯೆಗೊಟ್ಟು ಒಲಿದೆ ದೇವಾ ;
ಒಲಿಸಿಹೆನೆಂದಡೆ ಅಸಾಧ್ಯ !
ಒಲಿಯನೆಂದಡೆ, ಒಂದರಗಳಿಗೆ ಶ್ವೇತಗೆ ಪದವ ಕೊಟ್ಟೆ ದೇವಾ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನದೇವಾ. ॥ ೨೯೯ ॥

೧೧೪೮

ಒಲಿದು ಮೋಕ್ಷವ ಕೊಡಲಿ, ಕೊಡದೆ ಭವಕ್ಕೆ ಬೀಜವ ಮಾಡಲಿ,
ಬಿಡೆ, ಬಿಡೆನಯ್ಯಾ ನಿಮ್ಮ ಪೂಜೆಯ ; ಬಿಡೆ, ಬಿಡೆನಯ್ಯಾ
ನಿಮ್ಮ ದಾಸೋಹವ.
ಆದರ ಮಾನಾಪಮಾನವು ನಿಮ್ಮದು ನೋಡಯ್ಯಾ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನನೆಂಬ ಪರಮಪವಿತ್ರ ಇಷ್ಟಲಿಂಗವೆ.
॥ ೩೦೦ ॥

೧೧೪೯

ಮಾಡದೆ ಮೋಕ್ಷವ ಹಡೆದು ಹೋದರೆಂಬ
ವಾರ್ತೆಯ ಕೇಳಿಹಿರೇನಯ್ಯಾ ? ಇಲ್ಲ ಇಲ್ಲವು.
ಮಾಡಿದಡೆ ತಪ್ಪದು ; ಮಾಡಲೊಲ್ಲದೆ ಹೋದಡೆ
ಬರುವುದು ದೂರಾಗದು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೦೧ ॥

೧೧೫೦

ವಾಯುಪುತ್ರನಾಗುವುದು ಲೇಸೆ ? ಮನವೆ, ಬೇಡ ಬೇಡ !
ಹೋದ ಹೋದಲ್ಲಿ ವಸ್ತುರೂಪಾಗುವುದು ಲೇಸೆ ? ಮನವೆ, ಅಲ್ಲಲ್ಲ !
ವಾಯು ಬಿಟ್ಟು ವಾಯು ವೈರಿಯಾದಡೆ,
ಮನವೆ, ನಿನ್ನ ಸಾಹಸ, ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ. ॥ ೩೦೨ ॥

೧೧೫೧

'ಸರ್ವಂ ಶಿವಮಯಂ ಜಗತ್' ಎಂಬದ ತಿಳಿಯದೆ
ನುಡಿದವರ ನುಡಿಯಂತೆ ನಡೆಯದಿರಾ ಮನವೆ.

'ಸರ್ವಂ ಶಿವಮಯಂ ಜಗತ್' ಎಂದು ತಿಳಿದು ತಿಳಿದು ಸುಖಿಯಾಗಾ ಮನವೆ.
ಪಿಂಡ ಬ್ರಹ್ಮಾಂಡಕ್ಕೆ
'ತಿಲ ಷೋಡಶಭಾಗೇನ ಭೇದೋ ನಾಸ್ತಿ ವರಾನನೇ'
ಎಂಬುದು ಪುಸಿಯಲ್ಲ ನೋಡಾ ಮನವೆ.
ಈಶ್ವರನ ಪಂಚಮುಖದಿಂದ ಪಂಚತತ್ವಂಗಳುದಯಿಸಿದವು.
ಆ ತತ್ವಂಗಳೊಂದೊಂದು ಕೂಡಿ ತನ್ನ ಚೈತನ್ಯ ಬೆರಸಿದಲ್ಲಿ,
ಪಿಂಡ ಬ್ರಹ್ಮಾಂಡವೆನಿನಿತ್ತು ನೋಡಾ ಮನವೆ,
ತನ್ನ ತಾನರಿದು ನೋಡಿದಡೆ,
'ಸರ್ವ ಶಿವಕಪಿಲಸಿದ್ಧಮಲ್ಲಿಕಾರ್ಜುನಮಯಂ ಜಗತ್'
ಎಂದರಿದು ಬಂದಿತ್ತು ನೋಡಾ ಮನವೆ. ॥ ೩೦೩ ॥

೧೧೫೨

ಮನದಲ್ಲಿ ಸಂಕಲ್ಪ–ವಿಕಲ್ಪಂಗಳು ನೋಡಯ್ಯಾ.
ಮನಸಿನ ಕಾರ್ಯವೆ ಪುಣ್ಯ–ಪಾಪ ನೋಡಯ್ಯಾ.
'ಮನಃಕಾರ್ಯಂ ಜಗದ್ಭೇದಂ' ಎಂಬುದು ಹುಸಿಯಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೩೦೪ ॥

೧೧೫೩

ಮನದಲ್ಲಿ ಭೇದವಲ್ಲದೆ ವಸ್ತುವಿನಲ್ಲಿ ಭೇದವಿಲ್ಲವಯ್ಯಾ,
ಕ್ರಿಯಾಕ್ರಿಯೆಯಲ್ಲಿ ಭೇದವಲ್ಲದೆ ಜ್ಞಾನದಲ್ಲಿ ಭೇದವಿಲ್ಲವಯ್ಯಾ ;
ರೂಪಾರೂಪದಲ್ಲಿ ಭೇದವಲ್ಲದೆ ಚೈತನ್ಯದಲ್ಲಿ ಭೇದವಿಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೦೫ ॥

೧೧೫೪

ದೇಹ ನಾನೆಂದು ನಂಬಿದೆ, ಎಲೆ ಮನವೆ.
ದೇಹದಲ್ಲಿಹ ಗುಣಂಗಳು ನಿನ್ನಲ್ಲಿ ಕಂಡಯ್ಯಾ ಮನವೆ.
ಪೃಥ್ವಿಯ ಗುಣ ಶಾಂತಿ, ಉದಕದ ಗುಣ ಸ್ವಾದ,
ಅಗ್ನಿಯ ಗುಣ ಸರ್ವಭಕ್ಷಣ, ವಾಯುವಿನ ಗುಣ ನಿರ್ಮಲತ್ವ,
ಆಕಾಶದ ಗುಣ ನಿರ್ವಯಲು.

ಈ ಪಂಚತತ್ವದ ಗುಣ ನಿನ್ನಲ್ಲಿರಲು,
ನೀನೆ ಪಂಚಮುಖ ನೋಡಾ ಮನವೆ, ಕಪಿಲಸಿದ್ಧಮಲ್ಲಿಕಾರ್ಜುನಾ.
॥ ೩೦೬ ॥

೧೧೫೫

ಲಿಂಗವೇ ಅಂಗವಾಗಿಹೆನೆಂಬವನ ಭಾವ ಇದರಲ್ಲೇ ನಿಶ್ಚಯ
ನೋಡಾ, ಮನವೆ.
ಸ್ತುತಿ ನಿಂದೆಗಳಲ್ಲಿ ಹರ್ಷರೋಷಗಳಿಲ್ಲದಿರಬೇಕು.
ನೀಚಾನೀಚ ಗುಣವ ನೋಡದೆ ನಮ್ಮ ಛಾಷಾವಂತನಾಗಬೇಕು.
ಸರ್ವ ಜೀವಿಗಳ ತನ್ನಂತೆ ತಿಳಿದು ನೋಡಬೇಕು.
ಸಂಶಯಾಸಂಶಯವಳಿದು ನಿಶ್ಚಿಂತನಾಗಬೇಕು.
ಆಕಾಶದ ಬೆಳಗಿನ ಬೆಳಗ ನೋಡಿ ಬೆಳಗುಮಯನಾಗಬೇಕು ನೋಡಾ.
ಎಲೆ ಮನವೆ, ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ. ॥ ೩೦೭ ॥

೧೧೫೬

ಲಿಂಗ ಘನವೆಂಬೆನೆ ? ಕಲ್ಲಿನ ಮಗ ;
ಪಾದೋದಕ ಘನವೆಂಬೆನೆ ? ಇಂದ್ರನ ಮಗ ;
ಪ್ರಸಾದ ಘನವೆಂಬೆನೆ ? ಶೂದ್ರನ ಮಗ ;
ವಿಭೂತಿಯು ಘನವೆಂಬೆನೆ ? ಗೋವಿನ ಮಗಳು.
ಇವೆಲ್ಲ ಒಂದೊಂದರಿಂದ ಜನನವಾಯಿತ್ತು ;
ನೀವಾರಿಂದ ಜನನವಾದಿರಿ ನಿರೂಪಿಸಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೦೮ ॥

೧೧೫೭

ಕಲ್ಲು ಘನವೆಂಬಡೆ, ಲಿಂಗದ ಪೂಜ್ಯತ್ವ ಕಲ್ಲಿಗೆ ಬಂದಿತೇನಯ್ಯಾ ?
ನೀರು ಘನವೆಂಬಡೆ, ಪಾದೋದಕಕ್ಕೆ ಸರಿಬಂದಿತೇನಯ್ಯಾ ?
ಶೂದ್ರ ಘನವೆಂಬಡೆ, ಅಷ್ಟೈಶ್ವರ್ಯ ಕೊಟ್ಟಿತೇನಯ್ಯಾ ?
ಘನಕ್ಕೆ ಘನವು ನಿಮ್ಮಷ್ಟಾವರಣಂಗಳು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೦೯ ॥

೧೧೫೮

ಕಟಿದ ಕಲ್ಲು ಲಿಂಗವೆಂದೆನಿಸಿತು ; ಕಟೆಯದ ಕಲ್ಲು ಕಲ್ಲೆನಿಸಿತ್ತು.
ಪೂಜಿಸಿದ ಮಾನವ ಭಕ್ತನೆನಿಸಿದನು; ಪೂಜಿಸದ ಮಾನವ ಮಾನವನೆನಿಸಿದನು.
ಕಲ್ಲಾದಡೇನು ? ಪೂಜೆಗೆ ಫಲವಾಯಿತ್ತು ;
ಮಾನವನಾದಡೇನು ? ಭಕ್ತಿಗೆ ಕಾರಣಿಕನಾದನು.
ಕಲ್ಲು ಲಿಂಗವಲ್ಲ, ಲಿಂಗ ಕಲ್ಲಲ್ಲ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ.
॥ ೩೧೦ ॥

೧೧೫೯

ಅನುಭವವಾಗಲೆಂದು ಬಂದು ಘನವಾಗಿ ಒಂದು ಕಿರಿದಾಗಿ ಹೇಳಿದೆನಲ್ಲದೆ,
ಲಿಂಗವ ಕಿರಿದಾಗಿ ಹೇಳಿದೆನೆ ಅಯ್ಯಾ ?
ನೀರಲ್ಲಿದ್ದ ತೆರೆಗಳೆಲ್ಲ ನೀರಲ್ಲವೆ
'ಲಿಂಗ ಮಧ್ಯೇ ಜಗತ್ಸರ್ವಂ' ಎಂದ ಬಳಿಕ ?
ಪಾಷಾಣಂಗಳೆಲ್ಲ ಲಿಂಗಂಗಳು, ಲಿಂಗಂಗಳೆಲ್ಲ ಪಾಷಾಣಂಗಳು.
'ಶ್ರೀಶೈಲೇ ವಸತಿ ಶಿಲಾ ಶಿವಮಯೀ ಸತ್ಯಂ ಶಿವೇ'
ಎಂಬ ಶಿವವಾಕ್ಯವದು ಪುಸಿಯೇನಯ್ಯಾ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೧೧ ॥

೧೧೬೦

ಭಾವ ಬಲಿದಲ್ಲಿ ಲಿಂಗವೆನಿಸಿತ್ತು :
ಭಾವ ವಿಭಾವವಾದಲ್ಲಿ ಪಾಷಾಣವೆನಿಸಿತ್ತು :
ಭಾವ ನಿರ್ಭಾವವಾದಲ್ಲಿ ಏನೆಂದೆನಿಸದು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೧೨ ॥

೧೧೬೧

ಲಿಂಗ ಜಂಗಮ ಒಂದಾದ ಬಳಿಕ ಲಿಂಗಾರ್ಚನೆ ಸಲ್ಲದು ಜಂಗಮಕ್ಕೆ.
ಲಿಂಗಾರ್ಚನೆ ಬೇಕು ಭಕ್ತಂಗೆ.
ಲಿಂಗಾರ್ಚನ ವಿರಹಿತ ಭಕ್ತನ ಮುಖ ನೋಡಲಾಗದು, ನುಡಿಸಲಾಗದು,
ಅವನ ಹೊರೆಯಲ್ಲಿರಲಾಗದಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೧೩ ॥

೧೧೬೨

ಭಕ್ತಂಗೆ ಭಕ್ತಿಯೆ ಲಿಂಗಾರ್ಚನೆ ;
ಮಹೇಶಂಗೆ ಜ್ಞಾನ ವೈರಾಗ್ಯವೆ ಲಿಂಗಾರ್ಚನೆ.
ಪ್ರಸಾದಿಗೆ ಸಮದೃಷ್ಟಿಯೆ ಲಿಂಗಾರ್ಚನೆ ;
ಪ್ರಾಣಲಿಂಗಿಗೆ 'ಪಂಚಪ್ರಾಣಾಃ' ಎಂಬುದೆ ಲಿಂಗಾರ್ಚನೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೧೪ ॥

೧೧೬೩

ನಿಂದಿಸಿದಲ್ಲಿ ಕುಂದುವನಲ್ಲ ಜಂಗಮನು.
ವಂದಿಸಿದಲ್ಲಿ ಆನಂದಮಯನಲ್ಲ ಜಂಗಮನು.
ಬಂದುಪಚಾರದಲ್ಲಿ ಸಂದುಗೊಳ್ಳುವನಲ್ಲ ಜಂಗಮನು.
ಬಂದಲ್ಲಿ ನೀಡದಿರೆ ಕ್ರೋಧಿಯಲ್ಲ ಜಂಗಮನು.
ಇಂದುಧರ ಕಪಿಲಸಿದ್ಧಮಲ್ಲನೆಂಬ ಇಂತಪ್ಪ ಜಂಗಮನು. ॥ ೩೧೫ ॥

೧೧೬೪

'ಸೋಹಂ' ಎಂಬುದದು ಅಂತರಂಗದ ಮದ ನೋಡಯ್ಯಾ.
'ಶಿವೋಹಂ' ಎಂಬುದದು ಬಹಿರಂಗದ ಮದ ನೋಡಯ್ಯಾ.
ಈ ದ್ವಂದ್ವವನಳಿದು 'ದಾಸೋಹಂ' ಎಂದೆನಿಸಯ್ಯಾ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೧೬ ॥

೧೧೬೫

ಪತ್ರಿಯ ನೇಮದವರು ಒಂದು ಕೋಟಿ.
ಲಿಂಗಾರ್ಚನೆಯ ನೇಮದವರು ಒಂದು ಕೋಟಿ.
ಜಂಗಮ ತೃಪ್ತಿಯವರು ಒಂದು ಕೋಟಿ.
ತನ್ನ ತಾ ತಿಳಿಯುವ ನೇಮದವರು ಒಬ್ಬರೂ ಇಲ್ಲವಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ ॥ ೩೧೭ ॥

೧೧೬೬

ಪತ್ರಿಯ ನೇಮದವರು ನೋಡಯ್ಯಾ ಪಶು ಆಡುಗಳು.
ಲಿಂಗಾರ್ಚನೆಯ ನೇಮದವರು ನೋಡಯ್ಯಾ ಚತುರ್ವರ್ಣದವರು.

ಜಂಗಮ ಸಂತೃಪ್ತಿಯ ನೇಮದವರು ನೋಡಯ್ಯಾ ಭಕ್ತರು.
ತನ್ನ ತಾ ತಿಳಿದ ನೇಮದವರು ನೋಡಯ್ಯಾ ವೀರಶೈವಾಗ್ರಗಣ್ಯರು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೧೮ ॥

೧೧೬೭

ಪತ್ರೆಯ ತಿಂದಾಡು ಮುಕ್ತವಾದುದೆಂಬುದ ಬಲ್ಲಡೆ ಹೇಳಿರಯ್ಯಾ.
ಲಿಂಗವ ಪೂಜಿಸಿದ ವರ್ಣಿಕ ಲಿಂಗವಾದನೆಂಬುದ ಬಲ್ಲಡೆ ಹೇಳಿರಯ್ಯಾ.
ಜಂಗಮವ ಸಂತೃಪ್ತಿಬಡಿಸಿದ ಭಕ್ತ ಭವವಿರಹಿತನಾದುದ ಬಲ್ಲಡೆ ಹೇಳಿರಯ್ಯಾ.
ಇವೆಲ್ಲ ಚತುರ್ವಿಧ ಪದಕ್ಕೆ ಒಳಗು !
ತನ್ನ ತಾ ತಿಳಿದ ವೀರಶೈವ ಭವಕ್ಕೆ ಬಂದನೆಂಬ
ದ್ವಿರುಕ್ತಿಯನು ಬಲ್ಲಡೆ ಹೇಳಿರಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನ ಸಾಕ್ಷಿಯಾಗಿ. ॥ ೩೧೯ ॥

೧೧೬೮

ತಪವ ಮಾಡಿ ಸ್ವರ್ಗವ ಪಡೆದೆಹೆನೆಂಬವನ ಮುಖವ ನೋಡಲಾಗದು.
ಮಾದಿಗ ಡೋಹರ ಶ್ವಪಚ ನೀಚಗುಣವುಳ್ಳವರು
ಹೋಹುದೆಲ್ಲ ಸ್ವರ್ಗವೇನಯ್ಯಾ ?
ಲಿಂಗದ ಕುರುಹ ತಿಳಿದು, ಅಂಗಗುಣಂಗಳನತಿಗಳೆದು
ಲಿಂಗವಾದುದೆ ಸ್ವರ್ಗ ನೋಡಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೨೦ ॥

೧೧೬೯

ಕೈಲಾಸ ಕೈಲಾಸವೆಂದು ಬಡಿದಾಡುವ ಅಣ್ಣಗಳಿರಾ, ಕೇಳಿರಯ್ಯಾ.
ಕೈಲಾಸವೆಂಬುದೊಂದು ಭೂಮಿಯೊಳಿರುವ ಹಾಳುಬೆಟ್ಟ.
ಅಲ್ಲಿರುವ ಮುನಿಗಳೆಲ್ಲ ಜೀವಗಳ್ಳರು.
ಅಲ್ಲಿರ್ದ ಚಂದ್ರಶೇಖರನು ಬಹು ಎಡ್ಡ.
ಇದರಾಡಂಬರವೇಕಯ್ಯಾ ?
ಎಮ್ಮ ಪುರಾತರಿಗೆ ಸದಾಚಾರದಿಂದ ವರ್ತಿಸಿ,
ಲಿಂಗಾಂಗ ಸಾಮರಸ್ಯವ ತಿಳಿದು,
ನಿಮ್ಮ ಪಾದಪದ್ಮದೊಳು ಬಯಲಾದ ಪದವೆ ಕೈಲಾಸವಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೨೧ ॥

೧೧೭೦

ವಿಧಿ ನಿಷೇದಂಗಳಿಲ್ಲದನಾದಿ ನೀ ನೋಡಯ್ಯಾ.
ಜಪ_ತಪವಿಲ್ಲದ ಮಹಾಮುನಿ ನೋಡಯ್ಯಾ.
ಇಹ–ಪರ ಸುಖ–ದುಃಖಾತೀತನಯ್ಯಾ ನಿಮ್ಮ ಶರಣ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೨೨ ॥

೧೧೭೧

ಹದಿನಾಲ್ಕು ರತ್ನವೆಂಬುದ ಸುರಾಸುರರೆಲ್ಲರು ಬಲ್ಲರು
ಮೂರಾರು ರತ್ನವನಾರು ಅರಿಯರಯ್ಯಾ ;
ಮೂರಾರು ರತ್ನವೆಂಬುದ ಬಲ್ಲರು ದಿವ್ಯಮುನಿಗಳು.
ಮೂರೆರಡು ರತ್ನವನರಿಯರು ತ್ರಿಲೋಕದವರು ;
ಮೂರೆರಡು ರತ್ನವ ಬಲ್ಲರು ಮಹಾಪ್ರಮಥರು.
ಒಂದು ರತ್ನವನಾರು ಅರಿಯರು ;
ಒಂದು ರತ್ನವ ಬಲ್ಲವ ನಿಮ್ಮ ಶರಣ ಮಹಾಲಿಂಗಮೂರ್ತಿ
ಚೆನ್ನಬಸವಣ್ಣ ನೋಡಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೨೩ ॥

೧೧೭೨

ರತ್ನಪರೀಕ್ಷೆಯ ಮಾಡುವ ಅಣ್ಣಗಳೆಲ್ಲ ದಿಮ್ಮಿದರಯ್ಯ.
ಬಲ್ಲಿದ ಬೆಲೆ ಎಂದೆಡೆ ಹುಲುಕಡ್ಡಿಯೊಳ್ಳೈತೆ ;
ಬೆಲೆ ಇಲ್ಲದುದೆಂದಡೆ ಬಲ್ಲವರ ಮುಂದುಗೆಡಿಸುತ್ತೈತೆ.
ಇದರ ಬೆಲೆಯು ಬಲ್ಲ ನಮ್ಮ ಬಸವಣ್ಣನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೩೨೪ ॥

೧೧೭೩

ಗುದ್ದಾ[ಡಿ] ರತ್ನವ ಕದ್ದು ಒಯ್ಯಬಲ್ಲಡೆ ಭಕ್ತನೆಂಬೆ.
ಮುದ್ದುಳ್ಳನ್ನವ ಮೆದ್ದಬಲ್ಲಡೆ ಮಹೇಶನೆಂಬೆ.
ಜಿದ್ದಿನ ಭಕ್ತಿಯು ಗೆದ್ದು ಒಯ್ದಡೆ,
ಕಪಿಲಸಿದ್ಧಮಲ್ಲನ ಮನೆಯ ಮುದ್ದುಕುಮಾರನೆಂಬೆ ನೋಡಾ,
ಮಡಿವಾಳ ಮಾಚಣ್ಣನೆ. ॥ ೩೨೫ ॥

೧೧೭೪

ಅಯ್ಯಗಳು ಬಂದಿಹರೆಂದು 'ಅಯ್ಯಾ ಅಯ್ಯಾ' ಎಂದು
ಬೆಂಬತ್ತುವನಲ್ಲ ನಾನು.
ಅಯ್ಯಗಳೆಂದಡೆ ಅಯ್ಯತನವೇರಿತ್ತೆ ದೇವಾ ?
ಗೋವಿನ ಹಾಲು ಎಂದಡೆ, ಓಂಪಲಿಲ್ಲ, ರುಚಿಸಲಿಲ್ಲ.
ತನ್ನ ಹಸ್ತ ಮುಟ್ಟಿದಲ್ಲಿ ರುಚಿಸಿತ್ತಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೨೬ ॥

೧೧೭೫

ಅಯ್ಯಗಳ ಅನುಭವಕ್ಕಲ್ಲದೆ ನಿನ್ನ ಪಾಪಕ್ಕವರು ಅಯ್ಯಗಳೆ ?
ಅಯ್ಯಗಳನುಭಾವ ನಿನ್ನ ಮನೋಭಾವ ಏಕವಾದಡೆ,
ಅಯ್ಯತನವೇರಿತ್ತಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೨೭ ॥

೧೧೭೬

ಬಂದಲ್ಲುಪಚರಿಸುವುದಲ್ಲದೆ,
ನಿಂದ ನಿಂದಲ್ಲುಪಚರಿಸುವುದು ಭಕ್ತಿಯ ಕೊಂಕು ನೋಡಯ್ಯಾ.
ಉಪಚಾರಕ್ಕೆ ಬಂದಾತ ಜಂಗಮನಲ್ಲ ನೋಡಯ್ಯಾ ;
ಉಪಚರಿಸಿದವ ಭಕ್ತನಲ್ಲ.
ಅನುಭವಕ್ಕೆ ಬಂದಿಹನಯ್ಯಾ ಜಂಗಮನು,
ಅನುಭವಕ್ಕೆ ಮಾಡುವನಯ್ಯಾ ಉಪಚಾರವ ಭಕ್ತನು,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೨೮ ॥

೧೧೭೭

ಬಂದ ಮಹೇಶ ಬಂದಂತೆ ಪೋಪನಲ್ಲ ನೋಡಯ್ಯಾ.
ಬಂದ ಬರವು ಭವಕ್ಕೆ ಆಗರ,
ನಿಂದ ಬರವು ಜ್ಞಾನಕ್ಕೆ ಆಗರ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೨೯ ॥

೧೧೭೮

ಕುಂಡಲಿ ಬಂದು ಕೀಡಿಯನು ಕುಂಡಲಿಯ ಮಾಡಿತ್ತಯ್ಯಾ.
ಅಗ್ನಿ ಬಂದು ಕಾಷ್ಠವ ಅಗ್ನಿಯ ಮಾಡಿತ್ತಯ್ಯಾ.

ಮಹೇಶ ಬಂದು ಭಕ್ತನ ಮಹೇಶನ ಮಾಡಿ ಗಮಿಸಿದನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೩೦ ॥

೧೧೭೯

ಅಗ್ನಿಯು ಮುಟ್ಟಿದ ಕಾಷ್ಠ ಇದ್ದಲಿಯಾಯಿತ್ತು ;
ಇದ್ದಲಿಯದು ಕಾಷ್ಠವಾಗದು.
ಭಕ್ತ ತಾನು ವಿರಕ್ತನಾದನು ; ವಿರಕ್ತ ತಾನು ಭಕ್ತನಾಗನು.
ಇದರಿರವ ಗುರು ಚೆನ್ನಬಸವಣ್ಣ ತೋರಿದನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೩೧ ॥

೧೧೮೦

ಕಾಷ್ಠದಿಂದ ಮುಟ್ಟಿದ ನೀರ ತಾ ಮುಟ್ಟನೆಂಬಂತೆ,
ಬಿಸಿಲಿನಿಂದ ಬಳಲಿ, ಕಾಯ ತಾನಲ್ಲೆಂಬಂತೆ,
ಮನಮುಟ್ಟಿದ ವಿಷಯ ತಾ ಮುಟ್ಟನೆಂಬ ವೇದಾಂತಿಯ
ಹಲ್ಲುದೋರೆ ಮೂಗ ಕೊಯ್ವನಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನನವರ.
॥ ೩೩೨ ॥

೧೧೮೧

ಬಿಸಿಲಿಂದ ಬಳಲಿ ಕಾಯ ತಾನಲ್ಲೆಂಬಂತೆ.
ಕಾಷ್ಠ ಕಲಕಿಸಿತೆಂಬಲ್ಲಿ ಕಾಷ್ಠಕ್ಕೆ ಛೀಯೋ, ನಿನಗೆ ಛೀಯೋ ?
ದೇಹ ಬಳಲಿತ್ತೆಂಬಲ್ಲಿ ನಿನಗೆ ಉಪಚಾರವೊ, ದೇಹಕ್ಕುಪಚಾರವೊ ?
ಮನ ಮುಟ್ಟಿತೆಂಬಲ್ಲಿ ನಿನಗೆ ಭವವೊ ಹೇಳಾ, ಮನವೆ
ಕಪಿಲಸಿದ್ಧಮಲ್ಲೇಂದ್ರನ ಸಾನ್ನಿಧ್ಯದಲ್ಲಿ. ॥ ೩೩೩ ॥

೧೧೮೨

ಸಾಕ್ಷಿಯೆಂಬುದೆಲ್ಲ ವೃತ್ತಿಯಲ್ಲಲ್ಲದೆ,
ನಿವೃತ್ತಿಯಲ್ಲಿಹುದೇನಯ್ಯಾ ?
ರುಚಿಯೆಂಬುವದು ಪದಾರ್ಥದಲ್ಲಲ್ಲದೆ,
ನಿಪ್ಪದಾರ್ಥದಲ್ಲಿಹುದೆ ಅಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೩೪ ॥

೧೧೮೩

ಕರ್ಮಸಾಕ್ಷಿ ತಾನಾದಲ್ಲಿ,
ಅಸ್ತಮಾನೋದಯಕ್ಕೆ ಒಳಗಾದನಯ್ಯಾ ಸೂರ್ಯನು.
ಕರ್ಮಸಾಕ್ಷಿ ತಾನಾಗಿ ಆಚರಿಸಿದಲ್ಲಿ,
ಜನನ ಮರಣಕ್ಕೆ ಒಳಗಾದೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೩೫ ॥

೧೧೮೪

ಸಾಕ್ಷಿ ತಾನೆಂದಡೆ ಶಮನ ಕಾರ್ಯಕ್ಕೆ ಶುಭದವಾಯಿತ್ತಯ್ಯಾ.
ಸಾಕ್ಷಿ ತಾನಲ್ಲೆಂದಡೆ ಯಮನ ಕಾರ್ಯ ಬೀಳಾಯಿತ್ತಯ್ಯಾ.
ಸಾಕ್ಷಿಯೆಂಬುದು ವೃತ್ತಿಯಲ್ಲಿ ! ಒಲ್ಲರೀ ಮಹಿಮರು !
ನಿವೃತ್ತಿಯಲ್ಲದೆಂತಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನಾ ? ॥ ೩೩೬ ॥

೧೧೮೫

ವೃತ್ತಿ ನಿವೃತ್ತಿ ಎಂಬುದು ಕಲ್ಪನಾರಚನೆ.
ವೃತ್ತಿಯಲ್ಲಿಯು ಸಾಕ್ಷಿ ವೃತ್ತಿಗೆ ಅಟ್ಟಿತ್ತು.
ನಿವೃತ್ತಿಯಲ್ಲಿಯು ಸಾಕ್ಷಿ ನಿವೃತ್ತಿಯಾಗದೆ ವೃತ್ತಿಗೈತಂದಿತ್ತಯ್ಯಾ
ಕರ್ಮಸಾಕ್ಷಿ ಎಂಬ ವೇದಾಂತಿಯ ಪಳವಾಕ್ಯ ಸಮನಿಸದು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೩೭ ॥

೧೧೮೬

ಸಾಕ್ಷಿ ತಾನಾಗುವಡೆ ಕರಣಾದಿಗಳ ಮಿತ್ರತ್ವವೇನಯ್ಯಾ ?
ಆವರ ಮಿತ್ರತ್ವವೆಂಬುದು ಜನ್ಮತರುಲವಿತ್ರವೆ ?
ಆಗಬಾರದು, ಆಗಬಾರದು, ಆಗಬಾರದು !
ಸಾಕ್ಷಿಯು ಆಗಬೇಕು ಮಾಡೆನೆಂಬುವುದಕ್ಕೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೩೮ ॥

೧೧೮೭

ಸತ್ಯಕ್ಕೆ ಸಾಕ್ಷಿಯಲ್ಲದೆ ಮಿಥ್ಯಕ್ಕೆ ಸಾಕ್ಷಿಯೆ ಅಯ್ಯಾ ?
'ಸತ್ಪಾತ್ರೇಷ್ವಪಿ ಯಃ ಸಾಕ್ಷೀ ಸ ನರೋಽಹಂ ಸದಾಶಿವೇ'

ಎಂಬ ನಿನ್ನ ವಾಕ್ಯ ಹುಸಿಯಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೩೯ ॥

೧೧೮೮

ಮನದಲ್ಲಿದ್ದು ಕಾಯದಲ್ಲಿಲ್ಲದವ ಶತಜನ್ಮಕ್ಕೆ ಮೋಕ್ಷ.
ಕಾಯದಲ್ಲಿದ್ದು ಮನದಲ್ಲಿಲ್ಲದವ ಮೂರುಜನ್ಮಕ್ಕೆ ಮೋಕ್ಷ.
ಕಾಮಮನೋಯುಗದಲ್ಲಿಲ್ಲದವನ ಮೋಕ್ಷರೂಪ ನೋಡಯ್ಯಾ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೪೦ ॥

೧೧೮೯

ಕಾಯ ಮುನ್ನವೊ, ಕಾಯದಲ್ಲಿಪ್ಪ ಮನ ಮುನ್ನವೊ ?
ಮನ ಮುನ್ನವೊ, ಮನದಲ್ಲಿಪ್ಪ ಚೈತನ್ಯ ಮುನ್ನವೊ ?
ಚೈತನ್ಯ ಮುನ್ನವೊ, ಚೈತನ್ಯಾತ್ಮಕ ಮಾಯೆ ಮುನ್ನವೊ ?
ಅವು ಮುನ್ನವಲ್ಲ, ಮುನ್ನವಲ್ಲ ;
ನಿನ್ನ ನಿರಾಳ ನಿಜದ ನಿರ್ವಯಲಿನ ಶೂನ್ಯಾಶೂನ್ಯವೆ ಮುನ್ನ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೪೧ ॥

೧೧೯೦

ತಾ ಮುನ್ನವೊ, ತನ್ನ ಮನ ಮುನ್ನವೊ ?
ತನ್ನ ಕಾಯ ಮುನ್ನವೊ, ತಾ ಮುನ್ನವೊ, ಅಯ್ಯಾ ?
ತಾ ಮುನ್ನೆಂಬಲ್ಲಿ ತಿಳಿಯದೆ ಹೋಯಿತ್ತು.
ಮನ ಮುನ್ನೆಂಬಲ್ಲಿ ಕಾಯಕ್ಕೊಳಗಾಯಿತ್ತು.
ಕಾಯ ಮುನ್ನೆಂಬಲ್ಲಿ ಜಡಮಯ ಪ್ರಳಯಕ್ಕೊಳಗಾಯಿತ್ತು.
ತಾ ಮುನ್ನಲ್ಲ, ತನ್ನ ಮನ ಮುನ್ನಲ್ಲ, [ತನ್ನ ಕಾಯ ಮುನ್ನಲ್ಲ] ;
ತಿಳಿದಾಗಲೆ ಮುನ್ನ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೪೨ ॥

೧೧೯೧

ಕಾಯ ಧರಿಸಿದವ ನವನೀತ ರೋಮದಂತಿರಬೇಕು,
ಮುಕುರದ ಪ್ರತಿಬಿಂಬದಂತಿರಬೇಕು,
ಬೆಟ್ಟದಲ್ಲಿಯ ಕಾಡಕಿಚ್ಚಿನಂತಿರಬೇಕು,

ಆಷಾಢದಲ್ಲಿಯು ಚಂಡಮಾರುತನಂತಿರಬೇಕು.
ಸರ್ವರಲ್ಲಿ ಸರ್ವರಂತಾಗಿರಬೇಕು ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೪೩ ॥

೧೧೯೨

ಜಲದಲ್ಲಿಯು ಚಂದ್ರನ ಚಲನೆ ಜಲದಲ್ಲಲ್ಲದೆ, ನಿಜಚಂದ್ರನಲ್ಲಿಲ್ಲವಯ್ಯಾ.
ಘಟದಲ್ಲಿಯು ಪ್ರತಿಬಿಂಬಗಳು ಘಟದಲ್ಲಲ್ಲದೆ ಬಿಂಬದಲ್ಲಿಲ್ಲ ನೋಡಯ್ಯಾ.
ಜಲದಲ್ಲಿಯು ಚಂದ್ರನ ಚಲನೆ ಘಟದಲ್ಲಿಯು ಪ್ರತಿಬಿಂಬ ನಿಜವಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೪೪ ॥

೧೧೯೩

ಜಲದಲ್ಲಿ ಚಂದ್ರನಿಲ್ಲ. ಜಲವೆಲ್ಲ ಮಾಯಾತ್ಮಕ.
ವಸ್ತುವಲ್ಲ ; ವಸ್ತ್ವಾತ್ಮಕ ಮಾಯೆಯುಲ್ಲ.
ಉಪಾಧಿಯಿಂದ ತೋರ್ಪುದೆಲ್ಲ ನಿಜವೆ ಅಯ್ಯಾ ?
ಸ್ಥಾಣು ಚೋರ ನ್ಯಾಯದಂತೆ, ಶುಕ್ತಿ ರಜತ ನ್ಯಾಯದಂತೆ,
ರಜ್ಜು ಸರ್ಪ ನ್ಯಾಯದಂತೆ, ಅಧ್ಯಾರೋಪವಾದ ಅವಿದ್ಯೆಯಲ್ಲಿ ಲೇಸುಂಟೆ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೪೫ ॥

೧೧೯೪

ವಸ್ತು ಒಂದರಲ್ಲಿ ಕಲ್ಪಿತದ್ವಯವಾದುವು ನೋಡಾ.
ಹಗ್ಗವಲ್ಲ ಸರ್ಪವೆಂಬುದೆ ಅಧ್ಯಾರೋಪ ;
ಸರ್ಪವಲ್ಲ ಹಗ್ಗವೆಂಬುದೆ ಅಪವಾದ.
ವಸ್ತುವಲ್ಲ ಮಾಯೆಯೆಂಬುದೆ ಅವಿದ್ಯೆ ;
ಮಾಯೆಯಲ್ಲ ವಸ್ತುವೆಂಬುದೆ ವಿದ್ಯೆಯಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ, ॥ ೩೪೬ ॥

೧೧೯೫

ಜಡ, ಅಸತ್ಯ, ಸುಖ ದುಃಖ, ಅನಿತ್ಯ, ಖಂಡಿತ
ಎಂಬೈದು ಲಕ್ಷಣ ಮಾಯಾತ್ಮಕವಯ್ಯಾ.
ಮೂಢಮಯ ಕಲ್ಲು ಮೊದಲಾದವೆ ಜಡದೃಶ್ಯ ನೋಡಯ್ಯಾ.
ಮೃಗದಲ್ಲಿಲ್ಲದ ಶಶವಿಷಾಣಾಧಿಕವೆ ಅಸತ್ಯವಯ್ಯಾ.

ರಜೋಗುಣಿಯು [ಸಹ್ಯಾ]ಸಹ್ಯ ವೃತ್ತಿಯು [ಸುಖ] ದುಃಖ ಕಂಡಯ್ಯಾ.
ತೋರಿ ಕೆಡುವ ದೇಹಾಧಿಕವೆ ಅನಿತ್ಯ ಕಂಡಯ್ಯಾ.
ಕಾಲಪರಿಚ್ಛೇದಾಧಿಕವೆ ಖಂಡಿತ ನೋಡಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೪೭ ॥

೧೧೯೬

ತೋರಿ ಕೆಡುವ ದೇಹ ನಾನೆಂದು ನಂಬದಿರಾ ಮನವೆ.
ತೋರುವ ಅರಿವು ನಾನೆಂದು ನಂಬು ಕಂಡೆಯಾ ಮನವೆ.
ತೋರಿ ಕೆಡುವುದು ಮಾಯಾತ್ಮಕವು ಮನವೆ.
ತೋರಿ ತೋರುವುದದು ನಿರುಪಾಧಿಕ, ನಿಜಾನಂದ,
ಕಪಿಲಸಿದ್ಧಮಲ್ಲಿಕಾರ್ಜುನ, ಕಂಡೆಯಾ ಮನವೆ. ॥ ೩೪೮ ॥

೧೧೯೭

ಕಾಯ ನಾನೆಂದಡೆ ಕರ್ಮಕಾಂಡಿ.
ಸಕಲ ಕ್ರಿಯೆ ಈಶಾರ್ಪಣವೆಂದಡೆ ಭಕ್ತಿಕಾಂಡಿ.
ಸಕಲ ಕರ್ಮ ಸಾಕ್ಷಿಯೆಂದಡೆ ಜ್ಞಾನಕಾಂಡಿ.
ಕಾಂಡತ್ರಯವಿಲ್ಲದ ಅಖಂಡನ ತೋರಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೪೯ ॥

೧೧೯೮

ಕರ್ಮಿಯು ಕರ್ಮ ನಿಷ್ಕರ್ಮವಲ್ಲೆಂದು ನಂಬಬಾರದಯ್ಯಾ.
ಮುಮುಕ್ಷುವಿನ ಮೋಕ್ಷ ಮೂರರಲ್ಲೆಂದು ನಂಬಬಾರದಯ್ಯಾ.
ಅಭ್ಯಾಸಿಯ ಮೋಕ್ಷ ಜನ್ಮದ್ವಯದಲ್ಲೆಂದು ನಂಬಬಾರದಯ್ಯಾ.
ಅನುಭಾವಿಯ ಮೋಕ್ಷ ಜನ್ಮ ಒಂದರಲ್ಲೆಂದು ನಂಬಬಹುದೆ ಅಯ್ಯಾ ?
ಆರೂಢನ ಜನ್ಮ ಕಪಿಲಸಿದ್ಧಮಲ್ಲಿಕಾರ್ಜುನನ ಜನ್ಮವೆಂದು ನಂಬಲೆಬೇಕು,
ಹಾವಿನಹಾಳ ಕಲ್ಲಯ್ಯಾ. ॥ ೩೫೦ ॥

೧೧೯೯

"ಮೂರ್ಖತ್ವೇನ ಸ್ವಕೀಯಾನಿ ಕರ್ಮಾಣಿ ಚ ದಿನೇ ದಿನೇ ॥
ಯಃ ಕರೋತಿ ಸ ಮೂಢಸ್ತು ಶತಜನ್ಮವಿಮೋಚಕಃ ॥"
ಎಂಬವನು ಕರ್ಮಿಯಯ್ಯಾ.

"ಜಗತ್ಸತ್ಯಂ ಮತ್ವಾ ಜಗತಿ ನಿರತಃ ಕರ್ಮಕುಶಲಃ ।
ತೃತೀಯೇನ ಪ್ರಾಪ್ತಿಃ ಪರಮ ಸುಪದಂ ಶಾಂಕರಿ ಶಿವೇ ॥"
ಎಂಬವನು ಮುಮುಕ್ಷು ಕಂಡಯ್ಯಾ.
"ಪ್ರಪಂಚಂ ಸ್ವಪ್ನವನ್ಮತ್ವಾ ಧ್ಯಾನಕರ್ಮಪರಾಯಣಃ ।
ದ್ವಿಜನ್ಮತಾಂ ಸ ಮೋಕ್ಷಂ ಚ ಪ್ರಯಾತಿ ಗಿರಿನಂದನೇ ॥"
ಎಂಬವನು ಅಭ್ಯಾಸಿ ಕಂಡಯ್ಯಾ.
"ವ್ಯವಹಾರಾನ್ಸಮಸ್ತಾಂಶ್ಚ ಉಪೇಕ್ಷ್ಯ ಪರಮೇಶ್ವರಿ ।
ವಿವೇಕತತ್ಪರೊ ಭೂತ್ವಾ ಏಕ ಜನ್ಮವಿಮೋಚಕಃ ॥"
ಎಂಬವನು ಅನುಭಾವಿ ನೋಡಯ್ಯಾ.
"ಅದೃಷ್ಟ್ವಾ ವಿಶ್ವವಿಕೃತಿಂ ಸ್ವಾತ್ಮಜ್ಞಾನೇನ ಯೋ ನರಃ ।
ಭಾತಿ ತಸ್ಯ ಮಹಾದೇವಿ ವಿದೇಹಂ ವಪುರೀರಿತಂ ॥"
ಎಂಬವನು ಆರೂಢ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೫೧ ॥

೧೨೦೦

ಒಂದು ಮಣಿಪರೀಕ್ಷೆಗೆ ಮೂವತ್ತಾರು ಮಣಿ ನೋಡಿದೆಯಯ್ಯಾ.
ಮೂವತ್ತಾರು ಮಣಿ ಕೂಡಿ ಒಂದು ಮಣಿ ಪರೀಕ್ಷಿಸಿದಡೆ,
ಮೂವತ್ತಾರು ಮಣಿ ಇಲ್ಲ ನೋಡಯ್ಯಾ.
ಪರೀಕ್ಷೆಯಾಗದಿರೆ, ಆ ಮಣಿಗಳು ಮಣಿಮಣಿಗೆ ಸೇರ್ಪಡೆಯಾದವಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೫೨ ॥

೧೨೦೧

ಭಕ್ತನಾಗಿ ಭಕ್ತಿಯ ಮಾಡುವುದದು ಲೇಸಯ್ಯಾ ;
ಶಕ್ತಿಯಿಲ್ಲದಿರೆ ತಮ್ಮ ಪಾದಕೃಪೆ ಇಷ್ಟವೆಂಬುದದು ಬಹು ಲೇಸಯ್ಯಾ.
ಮಹೇಶನ ಮಲತ್ರಯವಳಿವುದು ದುರ್ಲಭ ಕಂಡಯ್ಯಾ,
ಚರಿಸಿ ಚರಿಸಿ ಜಗವನ್ನುದ್ಧರಿಸುವುದು ಬಹು ದುರ್ಲಭ ಕಂಡಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೫೩ ॥

೧೨೦೨

ಜಗವಾಧರಿಸಿದ ಕಣ್ಣು ತನ್ನ ತಗುಳ್ದ ಕಾಯುವ ಕಾಣದು.
ಶಿವ ಅರಿವು ತನ್ನ ತಗುಳ್ದ ಭವದ ಮೊನೆಯ ಕಾಣದು.

ವಿವೇಕಪರನಾದಡೆ ಕಾಣದುದು ಕಾಂಬುದು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೫೪ ॥

೧೨೦೩

ಕುಲಮದ ಪೊತ್ತಲ್ಲಿ ಚಂಡಾಲಗಿತ್ತಿಯಾಗಿ ಕೆಡಿಸಿತ್ತು ಮಾಯೆ,
ಮಯೂರನೃಪಗೆ.
ಛಲಮದ ಪೊತ್ತಲ್ಲಿ ಮಾಂಸ ಭೋಗಿಸಿತ್ತು ಮಾಯೆ, ವೀರ ವಿಕ್ರಮಗೆ.
ಧನಮದ ಪೊತ್ತಲ್ಲಿ ದರಿದ್ರವಾಗಿ ಕಾಡಿತ್ತು ಮಾಯೆ, ಹರಿಶ್ಚಂದ್ರಂಗೆ.
ರೂಪಮದ ಪೊತ್ತಲ್ಲಿ ಕುರೂಪನ ಮಾಡಿತ್ತು ಮಾಯೆ, ನಳಂಗೆ.
ಯೌವನಮದ ಪೊತ್ತಲ್ಲಿ ಓಡಿಂಬಿಯಾಗಿ ಕಾಡಿತ್ತು ಮಾಯೆ, ಭೀಮಂಗೆ.
ವಿದ್ಯಾಮದ ಪೊತ್ತಲ್ಲಿ ಅಜ್ಞಾನವಾಗಿ ಕಾಡಿತ್ತು ಮಾಯೆ,
ಅಂದು ಪರ್ವತದಲ್ಲಿ ಕವಿ ವಾದಿಶೇಖರಂಗೆ.
ರಾಜಮದ ಪೊತ್ತಲ್ಲಿ ರಾಕ್ಷಸನ ಮಾಡಿತ್ತು ಮಾಯೆ,
ಮುಮ್ಮಡಿ ಸಿಂಗನೃಪಂಗೆ.
ತಪೋಮದ ಪೊತ್ತಲ್ಲಿ ಹಲವು ಆಗಿ ಕಾಡಿತ್ತು ಮಾಯೆ, ವಿಶ್ವಾಮಿತ್ರಂಗೆ.
ಇಂತೀ ಅಷ್ಟಮದವಳಿದು ಅಷ್ಟಾವರಣ ಧರಿಸಿಪ್ಪ ಮಹಾಗಣಂಗಳು
ಲಯವಿಲ್ಲದ ರಾಜಯೋಗವ ಪಡೆದಿಹರಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ.
॥ ೩೫೫ ॥

೧೨೦೪

ಸತ್ಕುಲ ದುಷ್ಕುಲವೆಂಬುದದು ಜಗತ್ಪ್ರಸಿದ್ಧವಯ್ಯಾ.
ಕುಲ ಸತ್ಕುಲ ನಡೆ ವಿಪರೀತವಾದಡೆ ದುಷ್ಕುಲ ನೋಡಯ್ಯಾ.
ಮಧು ಮಕ್ಷಿಕ ಎಂಜಲು ಕುಲ ರುಚಿಯಾದ[ಲ್ಲಿಯೆ],
ಚಂದ್ರಧರ ಕಪಿಲಸಿದ್ಧಮಲ್ಲಿಕಾರ್ಜುನನ
ತನ್ನ ಪೂಜೆಗೆಂದು ನೇಮಿಸಿದ ಬೊಮ್ಮಣ್ಣ. ॥ ೩೫೬ ॥

೧೨೦೫

ಕುಲವೆಂದು ಹೋರಾಡುವ ಅಣ್ಣಗಳಿರಾ, ಕೇಳಿರೊ :
ಕುಲವೇ ಡೋಹರನ ? ಕುಲವೇ ಮಾದಾರನ ? ಕುಲವೇ ದೂರ್ವಾಸನ ?
ಕುಲವೇ ವ್ಯಾಸನ ? ಕುಲವೇ ವಾಲ್ಮೀಕನ ? ಕುಲವೇ ಕೌಂಡಿಲ್ಯನ ?
ಕುಲವ ನೋಳ್ಪಡೆ ಹುರುಳಿಲ್ಲ ;

ಅವರ ನಡೆಯ ನೋಳ್ಪಡೆ ನಡೆಯುವರು ತ್ರಿಲೋಕದಲ್ಲಿಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೫೭ ॥

೧೨೦೬

ವಾಲ್ಮೀಕನ ಶೇಷಪ್ರಸಾದವೆಲ್ಲ ಸಂಸ್ಕೃತಮಯವಾಯಿತ್ತು ಮರ್ತ್ಯಕ್ಕೆ.
ದೂರ್ವಾಸನ ಉಪದೇಶವೆಲ್ಲ ಚಂಡಾಲರ ಮುನಿಗಳ ಮಾಡಿತ್ತು ಸ್ವರ್ಗಕ್ಕೆ.
ಕುಲವೆಂದಡೆ ಮಲತ್ರಯವು ಬಿಡವು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೫೮ ॥

೧೨೦೭

ಕುಲಾಕುಲ ಅನುಭವಕ್ಕಲ್ಲದೆ ಸಮರಸಕ್ಕೇನೋ ಅಯ್ಯಾ ?
ವಾದವಿವಾದವೆಂಬುದು ಶಾಸ್ತ್ರದಲ್ಲಲ್ಲದೆ ಸಭೆಯಲ್ಲೇನೋ ಅಯ್ಯಾ ?
ಹಾಸ್ಯಾಹಾಸ್ಯ ನುಡಿಗಡಣದಲ್ಲಲ್ಲದೆ
ನುಡಿಯುವ ಕಾಯದಲ್ಲೇನೋ ಅಯ್ಯಾ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೫೯ ॥

೧೨೦೮

ಕಟಿದ ಕಲ್ಲ ಲಿಂಗವ ಮಾಡಿಕೊಟ್ಟಾತ ಗುರುವೆಂಬರು ;
ಆ ಲಿಂಗವ ಧರಿಸಿದಾತ ಶಿಷ್ಯನೆಂಬರು.
ಕೊಟ್ಟ ಗುರು ದೇಶಪಾಲಾದ ; ಕೊಟ್ಟ ಕಲ್ಲು ಲಿಂಗವೊ ?
ಕಲ್ಲಿನ ಕಲ್ಲು ಕಲ್ಲೆಂಬಡೆ, ಲಿಂಗವ ಮಾಡಿ ಕೊಟ್ಟ ;
ಲಿಂಗವೆಂದಡೆ ಪೂಜಾವಿರಹಿತವಾಯಿತ್ತು.
ಪೂಜೆಯಿಲ್ಲದ ಲಿಂಗ ಪಾಷಾಣ.
ಹೋದ ಗುರುವಿನ ಲಿಂಗ ಪಾಷಾಣಭೇದಿ ;
ಭೇದಿಸಿದಡೆ ಹುರುಳಿಲ್ಲ.
ನದಿಯ ದಾಟುವಲ್ಲಿ ಚೈತ್ರವ ಹಿಡಿದು,
ದಾಂಟಿದಂತ್ಯದಲಿ ಬಿಟ್ಟುಹೋದರು.
ಬಿಟ್ಟ ನಾವೆ ಮತ್ತೊಬ್ಬರಿಗೆ ಲೇಸು,
ಈ ಲಿಂಗ ಬರದು ಆರಿಗೆ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೬೦ ॥

೧೨೦೯

ಅಂಗ ಲಿಂಗ ಒಂದೆಂದ ಬಳಿಕ ಅಂಗ ಕೆಟ್ಟು ಲಿಂಗ ಉಳಿಯಿತ್ತು, ನೋಡಾ.
ಅಂಗ ನಿರ್ವಯಲಾದಲ್ಲಿ ಲಿಂಗ ಭವಿಯಾದುದು ನೋಡಾ.
ಅಂಗ ಲಿಂಗ ನಿರ್ವಯಲಲ್ಲಡಗಿಸಬಲ್ಲಡೆ, ಭಕ್ತನೆಂಬೆ ಮಹೇಶನೆಂಬೆ,
ಕಪಿಲಸಿದ್ಧಮಲ್ಲಿಕಾರ್ಜುನನವನೆ ಎಂಬೆ ನೋಡಾ, ಅಮುಗಿದೇವಾ. ॥ ೩೬೧ ॥

೧೨೧೦

ಲಿಂಗ ಹೋಯಿತ್ತೆಂದು ಅಂಗವ ಬಿಡುವವನ ನೋಡಿ,
ಎನ್ನಂಗ ನಡುಗಿತ್ತಯ್ಯಾ.
ಲಿಂಗ ಹೋದಡೆ ನಿನ್ನ ಪ್ರಾಣಂಗಳುಳಿವವೆ ?
ಲಿಂಗಪ್ರಾಣಿ ಪ್ರಾಣಲಿಂಗಿ ಎಂಬುದದು ಹುಸಿಯೆ,
ಅಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ ? ॥ ೩೬೨ ॥

೧೨೧೧

ಸೂತ್ರವ ಬಿಟ್ಟಿತೆಂದು ಸಂದೇಹಗೊಳ್ಳದಿರಾ, ಮನುಜರಿರಾ.
ಸೂತ್ರವಿದ್ದಲ್ಲಿ ನಿಮ್ಮಂಗಕ್ಕೆ ಸೂತ್ರವಾದನಯ್ಯಾ ಲಿಂಗಮೂರ್ತಿ.
ಸೂತ್ರ ತಪ್ಪಿತ್ತೆಂಬಲ್ಲಿ ಸೂತ್ರ ತಪ್ಪಿಲ್ಲ,
ನಿಮ್ಮ ಮನಸ್ಸೂತ್ರವೆ ಭಿನ್ನವಾಯಿತ್ತಯ್ಯಾ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೬೩ ॥

೧೨೧೨

ಗುರುವಿಂಗೆ ಗುರುವಿಲ್ಲ, ಲಿಂಗಕ್ಕೆ ಲಿಂಗವಿಲ್ಲ ;
ಜಂಗಮಕ್ಕೆ ಜಂಗಮವಿಲ್ಲ, ನನಗೆ ನಾನಿಲ್ಲ.
ಕಣ್ದೆರೆದು ನೋಡುವಡೆ ಆರಿಗೆ ಆರೂ ಇಲ್ಲ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೬೪ ॥

೧೨೧೩

ತನುವಿಗೊಳಗಾದಾತ ಗುರುವೆ ?
ಮನಕ್ಕೊಳಗಾದಾತ ಲಿಂಗವೆ ?
ಘನಕ್ಕೊಳಗಾದಾತ ಜಂಗಮವೆ ?

ತನು-ಮನ-ಧನ ತನ್ನ ಮನಕ್ಕಲ್ಲದೆ ಗುರು-ಲಿಂಗ-ಜಂಗಮದಲ್ಲುಂಟೆ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೬೫ ॥

೧೨೧೪

ಹಣ್ಣ ಹಿಡಿದ ಬಾಲಕಂಗೆ ಬೆಲ್ಲವ ಕೊಟ್ಟೇನು ಹಣ್ಣ ತಾ ಎಂಬಂತೆ,
ಮಣ್ಣು ಮೂರನು ಹಿಡಿದ ಭಕ್ತಂಗೆ
ಮುಕ್ಕಣ್ಣನ ಪದವಿ ಕೊಟ್ಟೇವೆಂಬ ತೆರನಂತೆ,
ಗುರು-ಲಿಂಗ-ಜಂಗಮರು ಬೇಡುವರಲ್ಲದೆ,
ತಮ್ಮಿಚ್ಛೆಗೆ ಕೈಯಾನುವರೆ ಕಪಿಲಸಿದ್ಧಮಲ್ಲಿಕಾರ್ಜುನಾ ? ॥ ೩೬೬ ॥

೧೨೧೫

ಬಾಲಕನ ಹಣ್ಣು ಬಾಲಕಂಗಲ್ಲದೆ ಪಿತಂಗೇನೋ ಅಯ್ಯಾ ?
ಭಕ್ತನ ಸೊಮ್ಮು ಭಕ್ತಂಗಲ್ಲದೆ,
ನಿರವಯ ನಿರಾಳ ಗುರು-ಲಿಂಗ-ಜಂಗಮಕ್ಕೇನೋ ಅಯ್ಯಾ ?
ತನು-ಮನ-ಧನದೊಳಗಾ[ದೆನೆಂ]ಬವನ
ಬೆನ್ನ ಬಾರನೆತ್ತದೆ ಬಿಡುವನೆ, ಕಪಿಲಸಿದ್ಧಮಲ್ಲಿಕಾರ್ಜುನಾ ? ॥ ೩೬೭ ॥

೧೨೧೬

ಲಗ್ನಕ್ಕೆ ವಿಘ್ನ ಬಾರದೆಂದು ಜ್ಯೋತಿಷ್ಯ ಕೇಳುವ ಅಣ್ಣಗಳಿರಾ,
ಕೇಳಿರಯ್ಯಾ :
ಅಂದೇಕೆ ವೀರಭದ್ರನ ಸೆರಗು ಸುಟ್ಟಿತ್ತು ?
ಅಂದೇಕೆ ಮಹಾದೇವಿಯರ ಬಲಭುಜ ಹಾರಿತ್ತು ?
ಇಂದೇಕೆ ಎನ್ನ ವಾಮನೇತ್ರ ಚರಿಸಿತ್ತು ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೬೮ ॥

೧೨೧೭

ಶುಭಕ್ಕೆ ವಿಘ್ನವಲ್ಲದೆ ಅಶುಭಕ್ಕೆ ವಿಘ್ನವೆ ಅಯ್ಯಾ ?
ಅಭಿಮಾನಿಗೆ ಅಂಜಿಕೆಯಲ್ಲದೆ ಅಪಮಾನಿಗೆ ಅಂಜಿಕೆಯೆ ಅಯ್ಯಾ ?
ಶುಭಾಶುಭ ಶಿವಾರ್ಪಣವೆಂದು ನಂಬು ಮನವೆ,
ಕಪಿಲಸಿದ್ಧಮಲ್ಲೇಂದ್ರನಾಲಯದಲ್ಲಿ. ॥ ೩೬೯ ॥

೧೨೧೮

ಜ್ಯೋತಿಷ್ಯವದು ಜ್ಯೋತಿಯಂತಯ್ಯಾ :
ಕೂಡುವ ಕಾಲಕ್ಕೆ ಪ್ರಕಾಶಮಯವು : ಕೂಡದ ಕಾಲಕ್ಕೆ ದಗ್ಧಮಯವು.

ಇವರಂತುವನರಿವವ ಪರರುಚಿಯಲ್ಲದೆ,
ಮತ್ತೊರ್ವನ ಕಾಣೆ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೬೦ ॥

೧೨೧೯

ನೋಡುವುದದು, ನೋಡಲೇಬೇಕು ;
ಮಾಡುವುದದು, ಮಾಡಲೇಬೇಕು,
ನೋಡಿ ಮಾಡಿ ಮನದಲ್ಲಿ ಲೀಢವಾಗಿರಬಾರದು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೬೧ ॥

೧೨೨೦

ಭಕ್ತಂಗೆ ಲಿಂಗಪೂಜೆ ಜಂಗಮದಾಸೋಹ ವಿಘ್ನವಯ್ಯಾ.
ಮಹೇಶಂಗೆ ವಿಷಯಂಗಳಳಿವುದೆ ವಿಘ್ನವಯ್ಯಾ.
ಪ್ರಸಾದಿಗೆ ನಿರ್ಮಲ ಮನಸ್ಸಾಗುವುದೆ ವಿಘ್ನವಯ್ಯಾ.
ನಿರ್ವಿಘ್ನರಾದವರನೊರ್ವರನು ಕಾಣೆ-
ನಿರ್ಮಯಲ ನಿಜಾನಂದದರುಹಿನ ಕುರುಹ ಬಿಟ್ಟು,
ಕಪಿಲಸಿದ್ಧಮಲ್ಲಿಕಾರ್ಜುನಾ ಮಹಾದೇವನಲ್ಲಿ. ॥ ೩೬೨ ॥

೧೨೨೧

ಶಾಸ್ತ್ರವೆಂಬುದು ಮನ್ಮಥಶಸ್ತ್ರವಯ್ಯಾ.
ವೇದಾಂತವೆಂಬುದು ಮೂಲ ಮನೋವ್ಯಾಧಿಯಯ್ಯಾ.
ಪುರಾಣವೆಂಬುದು ಮೃತವಾದವರ ಗಿರಾಣವಯ್ಯಾ.
ತರ್ಕವೆಂಬುದು ಮರ್ಕಟಾಟವಯ್ಯಾ.
ಆಗಮವೆಂಬುದು ಯೋಗದ ಘೋರವಯ್ಯಾ.
ಇತಿಹಾಸವೆಂಬುದು ರಾಜರ ಕಥಾಭಾಗವಯ್ಯಾ.
ಸ್ಮೃತಿಯೆಂಬುದು ಪಾಪಪುಣ್ಯವಿಚಾರವಯ್ಯಾ.
ಆದ್ಯರ ವಚನವೆಂಬುದು ಬಹುವೇದ್ಯವಯ್ಯಾ,
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ತಿಳಿಯಲಿಕ್ಕೆ. ॥ ೩೬೩ ॥

೧೨೨೨

ಕಟ್ಟಿದ ಲಿಂಗವ ಬಿಟ್ಟು, ನಟ್ಟಿದ ಲಿಂಗವನಟ್ಟಿ,
ಮೊಟ್ಟೆ ಮೊಟ್ಟೆ ತಾವರೆ ಮೊದಲಾದ ಪುಷ್ಪವ ಧರಿಸುವಾತನಿರವು

ಚಾಂಡಾಲನ ಇರವು ನೋಡಾ ;
ಆತನ ಸಂಗ ಮಾದಿಗರ ಸಂಗ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೭೪ ॥

೧೨೨೩

ಧರಿಸಿದ ಲಿಂಗವ ವರಿಸಬಲ್ಲಡೆ ಗಿರಿಜೆಯ ಅರಸನೆಂಬೆ.
ಸ್ಥಾವರವ ಪೂಜಿಸಿದವನ ಉಮಾವರನೆಂಬವನ ಗಾವಿಲನೆಂಬೆನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೭೫ ॥

೧೨೨೪

ಸಂತೆಯೊಳಿದ್ದ ಕಲ್ಲುಗಳೆಲ್ಲಾ ಲಿಂಗವೇನೊ ಅಯ್ಯಾ?
ಪರ್ವತ ವಾರಣಾಸಿ ಬದರಿಕಾ ಕ್ಷೇತ್ರಂಗಳಲ್ಲಿದ್ದ
ಕಲ್ಲುಗಳೆಲ್ಲಾ ಲಿಂಗವೇನೊ ಅಯ್ಯಾ ?
ಅಂತಕಾಂತಕ ಶ್ರೀಗುರುಮೂರ್ತಿ ತನ್ನರುಪಿನ ರೂಪವಿಂತೆಂದು
ತೋರಿದ ನಿಜ ಕಲ್ಲೇ ನಿಜಲಿಂಗ ನೋಡಾ,ಕಪಿಲಸಿದ್ಧಮಲ್ಲಿಕಾರ್ಜುನಾ.॥೩೭೬॥

೧೨೨೫

ದುಡ್ಡಿನ ಲಿಂಗವು ಮೋಕ್ಷವ ಕೊಡಬಲ್ಲಡೆ,
ಅಡ್ಡಬೀಳುವುದೇಕಯ್ಯಾ ಗುರುವಿಗೆ ?
ಜಡ್ಡಳಿದ ಭಕ್ತಂಗೆ ಭಕ್ತಿಯು ಜಡ್ಡು ಏಕಯ್ಯಾ ಗುರುವೆ,
ಮಡ್ಡು ಡಿಂಡಿಮನಾದಪ್ರಿಯ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೭೭ ॥

೧೨೨೬

ಲಿಂಗವ ಧರಿಸಿ ಭವಿಯಂಗನೆಯ ನೆರೆಯಬಲ್ಲಡೆ
ಷಟ್‌ಸ್ಥಲದವರೆಂಬೆನೆ ?
ಲಿಂಗವ ಧರಿಸಿ ಅಂಗಜನ ಸ್ನೇಹವ ಕಟ್ಟಬಲ್ಲಡೆ,
ಜಂಗಮಮರ್ದಕ ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗವೆಂದು ಕಾಂಬೆ. ॥ ೩೭೮ ॥

೧೨೨೭

ಮಾಡಿ ಮಾಡದವ ಭಕ್ತನೆ ಅಯ್ಯಾ.
ಮುಟ್ಟಿ ಮುಟ್ಟದವ ಮಹೇಶನೆ ಅಯ್ಯಾ.

ಗೆಲವು ಸೋಲು ಒಂದು ವೇಳೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೭೯ ॥

೧೨೨೮

ಗೆದ್ದವ ಗರಡಿಕಾರನಲ್ಲದೆ ಬಿದ್ದು ಎದ್ದವ ಗರಡಿಕಾರನೆ ಅಯ್ಯಾ ?
ಎದ್ದವ ಜಂಗಮವಲ್ಲದೆ ಬಿದ್ದು ಎದ್ದವ ಜಂಗಮವೆ ಅಯ್ಯಾ ?
ಬೀಳಲಾಗದು ಜಂಗಮ ; ಬೀಳಲಾಗದು ಜಗದ ಹಿರಿಯರು,
ಅಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೮೦ ॥

೧೨೨೯

ಭಕ್ತರಿಪ್ಪರು ಮೂಲೋಕದಲ್ಲಿ ;
ಮಹೇಶರಿಲ್ಲ ಲೋಕಲೋಕದಲ್ಲಿ.
ಮಹೇಶರಿಪ್ಪರು ಎಮ್ಮ ಪ್ರಮಥರಲ್ಲಿ ;
ಮಹಾಶಾಂತರಿಲ್ಲ ನೋಡಾ, ಕಲಿಕಿಲ್ಮಿಷದಲ್ಲಿ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೮೧ ॥

೧೨೩೦

ಬೇಡಿ ಉಂಡವ ಬೇಡದುದ ಬೇಡನೆ ಅಯ್ಯಾ ?
ಬೇಡಲಾರದವ ಬೇಡದುದ ಬೇಡನಯ್ಯಾ,
ಕಾಡಿದ ಜಂಗಮ ಈಡಾಡಿದನಯ್ಯಾ ಭಕ್ತನ.
ಬೇಡದ ಜಂಗಮ ಭಕ್ತನ ಕೂಡಿಕೊಂಡ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೮೨ ॥

೧೨೩೧

ಬೇಡಲಾಗದು ಜಂಗಮ, ಬೇಡಿಸಲಾಗದು ಭಕ್ತ.
ಬೇಡಿದವ ನೋಡದಿರೆ, ಬೇಡ ಬೇಡ ಭಕ್ತಿಯ ಆಡಂಬರವ,
ಮೃಡಮೂರ್ತಿ ಕಪಿಲಸಿದ್ಧಮಲ್ಲಿಕಾರ್ಜುನ. ॥ ೩೮೩ ॥

೧೨೩೨

ಐಕ್ಯಾತೀತ ಸ್ಥಲ

ಲಿಂಗವ ಪೂಜಿಸಿ ಅಂಗವ ನಿರ್ವಯಲ ಮಾಡೆಹೆನೆಂಬವನ
ಮುಖವ ನೋಡಲಾಗದು.

ಕುರುಹಿಟ್ಟು ಪೂಜಿಸುವ ಲಿಂಗ ತಾಸುಳಿವುದು ಭೂಮಿಯಲ್ಲಿ.
ಲಿಂಗವ ಧರಿಸಿದ ದೇಹ ನಿರ್ವಯಲಹುದು.
ಲಿಂಗಪೂಜೆಯಲ್ಲಿ ಹುರುಳಿಲ್ಲ, ಹುರುಳಿಲ್ಲ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೮೪ ॥

೧೨೩೩

ಮುನ್ನ ಮಾಡಿದ ದೇಹ ನಿರ್ವಯಲಾದಡೆ,
ಧರಿಸುವುದೇಕೋ ಕಲ್ಲುಲಿಂಗವ, ಎಲೆ ಅಯ್ಯಾ ?
ಅಂಗಗುಣ ಲಿಂಗಕ್ಕಾಯಿತ್ತು : ಲಿಂಗಗುಣ ಅಂಗಕ್ಕಾಯಿತ್ತು.
ಇವೆಲ್ಲ ಭಾವಸಂಕಲ್ಪವಿಕಲ್ಪವು.
ಅಂಗ ಲಿಂಗವೆಂಬುದು ಪಳಮಾತು.
'ಲಿಂಗಮಧ್ಯೇ ಜಗತ್ಸರ್ವಂ' ಎಂಬುದ ಅಖಂಡಲಿಂಗ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೮೫ ॥

೧೨೩೪

ಗಟ್ಟಿ ಹಿಡಿದು ಗೊತ್ತ ಮುಟ್ಟಬಾರದಯ್ಯಾ.
ನೀರಲ್ಲಿಯ ಕ್ರೀಡೆ ಕುಂಬಳಕಾಯಿಗಲ್ಲದೆ ದೊಡ್ಡ ಬಂಡೆಗುಂಟೇನಯ್ಯಾ ?
ಚರಿಸುವ ಜೀವಿಗೆ ನಿರ್ವಯಲ ಪರವಸ್ತು ಲಿಂಗವಲ್ಲದೆ,
ಪಾಷಾಣಮಯ ಲಿಂಗವೆ ಅಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ ? ॥ ೩೮೬ ॥

೧೨೩೫

ಕಲ್ಲು ಹಿಡಿದು ಅಲ್ಲಮನ ನೋಡುವೆವೆಂಬವರ ಖುಲ್ಲ ಮನುಜರೆಂಬೆ.
ಕಲ್ಲು ಹಿಡಿದವರೆಲ್ಲ ಅಲ್ಲಮನಾಗಲು ಭವಬೀಜ ಇನ್ನೆಲ್ಲಿಯದಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೮೭ ॥

೧೨೩೬

ಗುಣ ನೋಡುವಡೆ ಕೀಳು ಗುಣವಯ್ಯಾ ಧೇನುವಿನಲ್ಲಿ.
ನಿಂದಿಸುವ, ಬಂದ ಭಕ್ತರ ಹಾದು ಹೋಗುವ ಕುಂದುವಡೆಯದೆ,
ಮಲತ್ರಯ ಪೊಂದದ ಸಚ್ಚಿದಾನಂದ ಗುಣವುಂಟಯ್ಯಾ
ಮಹೇಶನಲ್ಲಿ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೮೮ ॥

೧೨೩೭

ಗುಣ ನೋಡಿ ಬಿಟ್ಟವ ಕ್ಷೀರಘೃತವ ಕಾಣದೆ ಹೋದನಯ್ಯಾ.
ಗುಣ ನೋಡಿ ಹಳಿದವ ಅರುಹಿನ ಕುರುಹ ಅರಿಯದೆ ಹೋದನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೮೯ ॥

೧೨೩೮

ಕೀಳಾಗಿ ಪೋದಂತೆ ಆಳ್ದಂಗೆ ಅಮೃತ ಕೊಟ್ಟಿತ್ತಯ್ಯಾ [ಆವು].
ಆಳಾಗಿ ನಡೆದಂತೆ ಮೋಕ್ಷವ ಕೊಟ್ಟನಯ್ಯಾ, ಮಹೇಶನು.
ಕೀಳಾಳು ಬಹು ಲೇಸು ಕಂಡಯ್ಯಾ, ಲೋಕದ ಪ್ರಾಣಗಳಿಗೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೯೦ ॥

೧೨೩೯

'ತತ್ಪೂಜಾಲ್ಲಭತೇ ಮುಕ್ತಿಸ್ತತ್ಪೂಜಾಲ್ಲಭತೇ ಧನಂ'
ಎಂಬಾಗಮ ಪುಸಿಯಲ್ಲ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೯೧ ॥

೧೨೪೦

ಭಕ್ತಿಯ ಮಾಡುವುದು ಮಲತ್ರಯದೊಳಗಲ್ಲ ಮಹೇಶನು.
ಮುಕ್ತಿಯ ಪಡೆವಡೆ ಜಡಜೀವಿಯಲ್ಲ ನೋಡಾ ಭಕ್ತನು.
ಭಕ್ತನಿಗೆ ಭಕ್ತಿಮುಕ್ತಿ ಎಂಬ ಯುಕ್ತಿ ಸೊಗಸದಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೯೨ ॥

೧೨೪೧

ಚರ್ಮವ ಧರಿಸಿಪ್ಪನೆಂಬರು, ಅದು ಪುಸಿಯೇನಯ್ಯಾ ?
ಪಂಚ ದೇಹಾಂತರ್ಯಾಮಿಯೆಂಬುದು ಶ್ರುತಿಸಿದ್ಧ.
'ಕೃತ್ತಿವಾಸನೇ ನಮಃ ಜಗದಂತರ್ಯಾಮಿನೇ ನಮಃ'
ಬ್ರಹ್ಮಕಪಾಲವ ಧರಿಸಿ ತೃಪ್ತಿಯಪ್ಪನೆಂಬರು,
ಅದು ಪುಸಿಯೇನಯ್ಯಾ ? ಸರ್ವಮುಖದಲ್ಲಿ ಭೋಜಿಸುವುದಾಗಿ.
"ಮಹಾದೇವೀ ಚರಣಂ ಚ ಮುಖೇನಾಸ್ವಾದನಂ ಚಿರಂ ।
ಕರೋಮಿ ಪ್ರಮುದಾ ಲೇಹ್ಯಂ ಚೋಷ್ಯಂ ಭಿಕ್ಷಾದಿಕಂ ಮಹತ್ ॥"
ಎಂಬುದು ಆಗಮಸಿದ್ಧ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೯೩ ॥

೧೨೪೨

ಒಂದಿಲ್ಲವಡೆ ಪರ್ವತ ಸಂಧಿಯದೇಕಯ್ಯಾ ಯತಿಗೆ ?
ಅಂದಾಶ್ರಯಿಸಿದ ಮಯೂರ ಚಂದವಾಯಿತ್ತೇನಯ್ಯಾ ?
ಇವೆಲ್ಲ ಬರಿಯ ಭ್ರಮೆ !
ಸಂದಳಿದು ಇಂದುಧರ ತಾನಾಗಬಲ್ಲಡೆ,
ಗಿರಿ ಗ್ರಾಮ ವನವಾಸದ ಗೊಂದಿ ಏಕಯ್ಯಾ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೯೪ ॥

೧೨೪೩

ಊರಲ್ಲಿರುವ ವಸ್ತು ಅದೆ ನೋಡಯ್ಯಾ.
ವನದಲ್ಲಿರುವ ವಸ್ತು ಅದೆ ನೋಡಯ್ಯಾ.
ಚರಿಸಿ ಚರಿಸಿ ಜಗವನುದ್ಧರಿಸುವ ವಸ್ತು ಅದೆ ನೋಡಯ್ಯಾ.
ಮೂಲೋಕದರೆಯ ಕಪಿಲಸಿದ್ಧಮಲ್ಲಿಕಾರ್ಜುನನೆಂಬ
ಪರವಸ್ತು ಅದೆ ನೋಡಯ್ಯಾ. ॥ ೩೯೫ ॥

೧೨೪೪

ಒಂದಾದವಂಗೆ ಬಂದ ಸುಖದುಃಖಂಗಳ ಭಂಗವೇನಯ್ಯಾ ?
ಒಂದಾದವಂಗೆ ಇಂದುಧರನೊಲವೇನಯ್ಯಾ ?
ಒಂದಾದವಂಗೆ ಕನಕಲೋಷ್ಠವೆಂಬುದೇನಯ್ಯಾ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೯೬ ॥

೧೨೪೫

ಅಂದಿನ ಪರಿ ಇಂದಿನ ಪರಿ ಬೇರೆ ಕಂಡೆಯಾ, ಮನವೆ.
ಅಂದಿನ ವಿಷ ಇಂದಮೃತವಾಯಿತ್ತು ಕಂಡೆಯಾ, ಮನವೆ.
ಅಂದಿನ ದೇವಾಂಗನೆ ಇಂದು ನಿಮಗೆ ಚಿಚ್ಛಕ್ತಿಯಾಯಿತ್ತು
ಕಂಡೆಯಾ, ಮನವೆ.
ಅಂದಿನವ ನೀನಿಂದು ಕಪಿಲಸಿದ್ಧಮಲ್ಲಿಕಾರ್ಜುನನೆಂದು
ನಂಬು ಕಂಡೆಯಾ, ಮನವೆ. ॥ ೩೯೭ ॥

೧೨೪೬

ಅಂದಿನವರು ನಡೆದ ದಾರಿ ಇಂದಿನವರು ನಡೆಯರು.
ಇಂದಿನವರು ನಡೆದ ದಾರಿ ಅಂದಿನವರು ಕಾಣರು.

ಅಂದಿಂದೆಂಬ ದ್ವಂದ್ವ ಭೇದವನೆಂದೆಂದು ಕಾಣೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೩೯೮ ॥

೧೨೪೭

ಅಲ್ಲದಯ್ಯಗಳು ಇಲ್ಲದಾಟಕ್ಕೆ ಮೈಗೊಟ್ಟು ಕೇಡ ನೋಡಾ.
ಇಲ್ಲದಯ್ಯಗಳು ಅಲ್ಲದಾಟಕ್ಕೆ ಮೈಗೊಡರು ನೋಡಾ.
ಇಂದೆಲ್ಲ ಅಲ್ಲಮನ ಬಲ್ಲ ಬೋಧೆಯಿಂದ ಸಲ್ಲೀಲೆಯಾಯಿತ್ತು.
ವಲ್ಲಭೆ ಶಿವ ಕಪಿಲಸಿದ್ಧಮಲ್ಲಿಕಾರ್ಜುನದೇವಾ. ॥ ೩೯೯ ॥

೧೨೪೮

ವಿಟ ಬಂದಾನೆಂದು ನಟನೆಗಾರ್ತಿ ತಾ ವಿಟಸಂಪನ್ನೆಯಾದಳವ್ವಾ.
ವಿಟ ಬಾರದಿದ್ದಡೆ, ತಾ ಸಿಡಿಮಿಡಿ[ಗೊಂಡ]ಬ್ಬರ ನೋಡವ್ವಾ,
ಇದರ ತೋಟಿಯು ಕಳೆಯಬಂದಡೆ ನಿನ್ನ ತೋಟಿ ಕೆಟ್ಟಿತ್ತಲಗವ್ವಾ,
ಕಪಿಲಸಿದ್ಧಮಲ್ಲಿಕಾರ್ಜುನನೆಂಬ ಜಾರನಲ್ಲಿ. ॥ ೪೦೦ ॥

೧೨೪೯

ಜಾರನೆಂಬುವ ನಾಮ ಮಾರಹರಂಗೆ ಸಲುವಳಿಯಯ್ಯಾ !
ಜಾರನು ಜಾರನು ಕಪಿಲಸಿದ್ಧಮಲ್ಲಿಕಾರ್ಜುನನ
ಶರಣರ ಮನದ ಮನೆಯ ಕೊನೆಯಲ್ಲಿ. ॥ ೪೦೧ ॥

೧೨೫೦

ಜಾರನು ಜಾರನು ಭವದಲ್ಲಿ ನೋಡಾ ಮನವೆ.
ಜಾರನು ಜಾರನು ಸತ್ಯದಲ್ಲಿ, ನೋಡಾ ಮನವೆ.
ಜಾರನು ಜಾರನು ನಿನ್ನಲ್ಲಿ, ನೋಡಾ ಮನವೆ.
ಜಾರನು ಜಾರನು, ಕಪಿಲಸಿದ್ಧಮಲ್ಲಿಕಾರ್ಜುನ ಪಾದಯುಗವ,
ನೋಡಾ ಮನವೆ. ॥ ೪೦೨ ॥

೧೨೫೧

ಜಾರನಾದಡೆ ಗೋಪಾಲಮೂರ್ತಿಯಂತಿರಬೇಕು ;
ಜಾರನಾದಡೆ ಹಾದರದ ಬೊಮ್ಮಯ್ಯನಂತಿರಬೇಕು ;

ಜಾರನಾದಡೆ ಕಪಿಲಸಿದ್ಧಮಲ್ಲಿಕಾರ್ಜುನ ಯೋಗಿಯಂತಿರಬೇಕು,
ನೋಡಿರೊ, ಕಿರಿಯರಿರಾ ! ॥ ೪೦೩ ॥

೧೨೫೨

ಜಾರನಲ್ಲವೆ ಭವಭವದಲ್ಲಿ ಸೌಂದರನಂಬಿ ?
ಜಾರೆಯಲ್ಲವೆ ಭವಭವದಲ್ಲಿ ಸೂಳೆ ಪದ್ಮಲದೇವಿ ?
ಜಾರನಾಗಿ, ಜಾರೆಯಾಗಿ ಜಾರಿದರಂದು ಜನನ ಬವಣೆಯಲ್ಲಿ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೦೪ ॥

೧೨೫೩

ಕಲ್ಮುಡಿಗನ ಕೈಯಲ್ಲಿ ಕಲ್ಲುಳಿ ಕೊಟ್ಟಡೆ,
ಕೊಟ್ಟಂತಲ್ಲದೆ ಕಲ್ಲು ರೂಪಾಗಿ ಬಾರದಯ್ಯಾ.
ಆದ್ಯರ ವಚನ ಅವಿದ್ಯಾವಂತನ ಜಿಹ್ವೆಯಲ್ಲಿದ್ದಡೆ,
ಇದ್ದಂತಲ್ಲದೆ ವಿದ್ಯಾಮಯಕೀರ್ತಿಯಾಗನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೦೫ ॥

೧೨೫೪

ಕುಳಿಗಾಳಿಯೊಳು ಕುಳಿತಂತಲ್ಲದೆ
ಉದರದ ಕುಳಿ ತಂಪಾಗುವುದೆ ಅಯ್ಯಾ ?
ಕುಳಿರ್ವಶವಿದ್ಯೆಯು ನೋಡಿದಂತಲ್ಲದೆ,
ಭವದ ಕುಳಿ ತಪ್ಪುವದೆ ಅಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೦೬ ॥

೧೨೫೫

ಕೃಸರಪದಾರ್ಥ ಕೃಷೀವಲರುಂಡರೆಂದಡೆ ಆಶ್ಚರ್ಯವೇನಯ್ಯಾ ?
ನೃಪನುಂಡನೆಂದಡೆ ಆಶ್ಚರ್ಯ.
ಚರ್ಯಾತೀತ ಉಂಡನೆಂದಡೆ ಬಹು ಆಶ್ಚರ್ಯ,
ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೦೭ ॥

೧೨೫೬

ಭೂಪಾಲನೇರುವ ಕುದುರೆಯು ಗೋಪಾಲನೇರಬಹುದೆ ಅಯ್ಯಾ ?
ಗೋಪಾಲನೇರುವ ಕುದುರೆಯು ಭೂಪಾಲನೇರಬಹುದೆ ಅಯ್ಯಾ ?
ಗೋಪಾಲಂಗೆ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೦೮ ॥

೧೨೫೭

ಭೂಪಾಲನ ಕುದುರೆಯು ಗೋಪಾಲನೇರಿದಡೆ,
ಮನ್ನಣೆಯಲ್ಲದೆ ಅಮನ್ನಣೆಯೇನಯ್ಯಾ ?
ಗೋಪಾಲನ ಕುದುರೆಯು ಭೂಪಾಲನೇರಿದಡೆ
ಅಮನ್ನಣೆಯಲ್ಲದೆ ಮನ್ನಣೆಯೇನಯ್ಯಾ ?
ಭೂಪನ ವೇಷ ಗೋಪಂಗಾದುದು,
ಗೋಪನ ವೇಷ ಭೂಪಂಗಾದುದು ಪಾಪದ ಕೇಡು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೦೯ ॥

೧೨೫೮

ಗೋಪಾಲನ ಭಕ್ತಿ ಗೋಪಾಲಂಗಲ್ಲದೆ, ಗೋಪಾಳಿಗೆಲ್ಲಿಹುದಯ್ಯಾ ?
ಗೊಪಾಲನ ಡೊಂಕು ಭೂಪಂಗಲ್ಲದೆ, ಗೋಪಾಳಿಗೆಲ್ಲಿಹುದಯ್ಯಾ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೧೦ ॥

೧೨೫೯

ಭೂಪಾಲನ ಡೊಂಕು ಗೋಪಾಲಂಗಲ್ಲದೆ ಗೋಪಾಳಿಗೆಲ್ಲಿಹುದಯ್ಯಾ ?
ಗೋಕುಲದ ಡೊಂಕು ಗೋಪಾಲಂಗಲ್ಲದೆ ಗೋಪಾಳಿಗೆಲ್ಲಿಹುದಯ್ಯಾ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೧೧ ॥

೧೨೬೦

ಆದ್ಯರ ನುಡಿ ಆದ್ಯರಿಗಲ್ಲದೆ, ವೇದ್ಯರಿಗೆ ಸಾಧ್ಯವಾಗದೆಂಬ ನುಡಿ ಹೊಲ್ಲ.
ಈತ ಆದ್ಯನೊ, ಮಧ್ಯದಲ್ಲಿಂದ ಬಂದಾತನೊ ಅಯ್ಯಾ ?
ತಿಳಿದು ನೋಡುವಡೆ ಸ್ವಯಂವೇದ್ಯ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೧೨ ॥

೧೨೬೧

ವಾಗ್ರಚನೆಯೆಂಬುದು ಕರ್ಣಾಟವಯ್ಯಾ.
ಆದ್ಯರಾಜ್ಞೆ ಎಂಬುದು ಈಶ್ವರಗೆ ಜ್ಯೋತಿಯಯ್ಯಾ.
ಆಗಿದಗಿದು ನೋಡುವುದದು ಶುಕ ತೆಂಗು ತಿಂದಂತೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೧೩ ॥

೧೨೬೨

ಆದಿ ಉತ್ಪತ್ಯ ಅಹಂಕಾರದಿಂದ,
ಅಹಂಕಾರದ ಕೇಡು ಅರುಹಿನಿಂದ ;
ಅರುಹಿನ ಕೇಡು ತಾ ಬಯಲಾದಿಂದ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೧೪ ॥

೧೨೬೩

ದೇಹದ ಗುಣ ಇರುವಂದಿಗೆ ತಪ್ಪದು ನೋಡಾ ಎಂಬಲ್ಲಿ
ಕ್ಷುಧೆ ತೃಷೆಗಳಿಗಲ್ಲದೆ ದುರ್ಗುಣಕ್ಕುಂಟೇನೋ ಅಯ್ಯಾ ?
ಕ್ಷುಧೆ ತೃಷೆ ಇಲ್ಲದಿರೆ ದೇಹ ಬೀಹವಾಗುವುದು.
ದುರ್ಗುಣವಿಲ್ಲದಡೆ ಬೀಹವಾಗದು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೧೫ ॥

೧೨೬೪

ಮರದೆಲೆಯ ತಂದು,
ಕುರುಹಿಡಬಾರದ ಪರಮ ಅರುಹ ಪೂಜಿಸಿದ
ಮರುಳರ ನೋಡಿ ಬೆರಗಾದೆನಯ್ಯಾ.
ಕುರುಹ ಪೂಜೆ ಅರುಹು ಆದಾಗಲೆ ಮರಹಿನ ಕೇಡು.
ಮರವೆಯ ಮುಂದಿಟ್ಟಡೆ ಸಿರಿಗರ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೧೬ ॥

೧೨೬೫

ಅಂಗೈಯೊಳಗಣ ಲಿಂಗಮೂರ್ತಿಯ ಕಂಗಳಲ್ಲಿಂಗಗೊಟ್ಟಡೆ,
ತ್ರಿಂಗಳ ಸೂಡನಾದೆ ನೋಡಾ ಅಯ್ಯಾ.

ಮಂಗಳಮೂರ್ತಿ ಗಂಗಾಜೂಟಾಂಗಮಯ ಕಪಿಲಸಿದ್ಧಮಲ್ಲಿಕಾರ್ಜುನಲಿಂಗ
ಬೇರೆಂದರಿಯಲಿಲ್ಲ ನೋಡಾ, ನಿಜದ ನಿರ್ಣಯಲಲ್ಲಯ್ಯನೆ. ॥ ೪೧೭ ॥

೧೨೬೬

ಭೂಪ ಗೋಪನ ನೆನದಡೆ ಗೋಪನಾಗಬಲ್ಲನೆ ?
ಅಂದಿನ ಗಣಂಗಳ ಕಂಡು, ಇಂದಿನ ಜೀವಿಗಳು ನೆನೆನೆನೆದು
ಧನ್ಯರಾದೆವೆಂಬ ಪರಿಯ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೧೮ ॥

೧೨೬೭

ನೆನೆದಡಾಗದು ಸಾಧಿಸದನ್ನಕ್ಕ ;
ಸಾಧಿಸಿದಡಾಗದು ತಿಳಿಯದನ್ನಕ್ಕ ;
ತಿಳಿಯದಡಾಗದು ಎಳೆ ಭಾಲಚಂದ್ರಧರ
ಕಪಿಲಸಿದ್ಧಮಲ್ಲಿಕಾರ್ಜುನನ ಅಮಳ ಕೈವಲ್ಯಪದವು. ॥ ೪೧೯ ॥

೧೨೬೮

ಹುಟ್ಟಿ ಹುಟ್ಟಿ ಹೋಗುವದದು ಬಹುಕಷ್ಟವಯ್ಯಾ ;
ಕೆಟ್ಟು ಕೆಟ್ಟು ಹೋಗುವದದು ಬೆಟ್ಟದ ಸಾಮರ್ಥ್ಯವಯ್ಯಾ.
ಹುಟ್ಟಿ ಹೋದವರು ಕೋಟಾನುಕೋಟಿ,
ಕೆಟ್ಟು ಹೋದವರು ಒಬ್ಬರೂ ಇಲ್ಲ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೨೦ ॥

೧೨೬೯

ಹುಟ್ಟಿದ ಕಲ್ಲು ಲಿಂಗವಾಯಿತ್ತು ;
ಹುಟ್ಟಿದ ಕಲ್ಲು ದೇವಾಲಯವಾಯಿತ್ತು ;
ಹುಟ್ಟಿದ ಪಶು ಹೊಲಕ್ಕೆ ಬಂದಿತ್ತು ;
ಹುಟ್ಟಿದ ಮರ ಕಟ್ಟಳೆಯಾದವು.
ಹುಟ್ಟಿ ಕೀರ್ತಿಯ ಮೆಟ್ಟದವ ಇಟ್ಟ ಇಟ್ಟ ಹುಳಿಯನ್ನದಂತೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೨೧ ॥

೧೨೭೦

ಕಸವಿದ್ದು ಕೃಷೀವಲನಿಲ್ಲದೆ,
ಅಸಮಾಕ್ಷವಲನಿಲ್ಲದೆ ಅಸಮಾಕ್ಷಗುಣವಿರೆ,

ಈ ಕಸ ಗುಣದ ಕೇಡು ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೨೨ ॥

೧೨೭೧

ಕೋಡಗಂಗೆ ನಾಲ್ಕರ ಚೇಳು ಕಡಿಯಿತ್ತು ನೋಡಾ.
ಚೋಳೊಂದರ ಮೂಲಿಕೆ ಹಾಳು ಮಾಡಿತ್ತು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೨೩ ॥

೧೨೭೨

ಒಂದು ಮುಳ್ಳು ಮೂರು ಲೋಕದ ಜನರಿಗೆ ನಟ್ಟಿತ್ತು.
ಆ ನಟ್ಟ ಮುಳ್ಳು ಮುರಿಯಬೇಕೆಂದಾರರಿಯರು.
ಆ ಮುಳ್ಳು ಮುರಿದವ ಮೂಲೋಕದರಸು
ಕಪಿಲಸಿದ್ಧಮಲ್ಲಿಕಾರ್ಜುನ ನೋಡಾ,
ಹಾವಿನಹಾಳ ಕಲ್ಲಿನಾಥಾ. ॥ ೪೨೪ ॥

೧೨೭೩

ಮುಳ್ಳು ಮೂರರ ಮೇಲೆ ಕಳ್ಳ ಮೂರುತಿ ತಿರುಗುತ್ತಿಪ ನೋಡಾ.
ಒಳ್ಳೆ ಗುಣಗಳ್ಳರಿಗೆ ತನ್ನ ತಳ್ಳಿ ತೋರಿಸುವ ನೋಡಾ.
ಜಳ್ಳು ಜೀವಗಳ್ಳರಿಗೆ ಸಾಧ್ಯವದು ಎಳ್ಳಿನಿತಿಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೨೫ ॥

೧೨೭೪

ನಿತ್ಯ ನಿತ್ಯ ಕೋಣವ ತಿನ್ನಬಲ್ಲಡೆ,
ಸದಾಚಾರಿ ಜಂಗಮವೆಂಬೆ.
ನಿತ್ಯ ನಿತ್ಯ ಕೋಡಗನ ಒಡಿದು ಆಡುಗಳ ತಿನಬಲ್ಲಡೆ
ಪ್ರಾಣಲಿಂಗಿ ಎಂಬೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೨೬ ॥

೧೨೭೫

ಬಂದ ದಾರಿ ಬಿಟ್ಟವನೆ ಜೀವನ್ಮುಕ್ತ ;
ಬಂದ ದಾರಿ ಮೆಟ್ಟದವನೆ ಜೀವನ್ಮುಕ್ತ.

ಬಂದ ದಾರಿಯನರಿಯದವನೆ ಸಕಲ ಸಾಮ್ರಾಜ್ಯಪದಸ್ಥ ;
ಕಪಿಲಸಿದ್ಧಮಲ್ಲಿಕಾರ್ಜುನನವನು. ॥ ೪೨೭ ॥

೧೨೭೬

ವಚನಾನುಭವ ವಾಗ್ರಚನೆಯಲ್ಲ ಮನವೆ,
ವಚನಾನುಭವ ವಾಗ್ರಚನೆಯಲ್ಲ.
'ವಚನಾನುಭವೋ ವಚೋ ನ' ಎಂಬುದು ಶ್ರುತಿಸಿದ್ಧ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೨೮ ॥

೧೨೭೭

ಪ್ರಸಾದ ಪ್ರಸಾದವೆಂದು ಆಡಂಬರಿಸುವ
ಅಣ್ಣಗಳ ಪಥ ನೋಡಿ ಕೈಬಡಿದು ನಕ್ಕಂತಾಯಿತಯ್ಯಾ.
ಪ್ರಸಾದವಿಲ್ಲದಿರೆ ಲೋಕರಂಜನೆಯೊ ಪ್ರಸಾದವೊ ?
'ಬಹುವರ್ತಂತೇ ಪ್ರಾಣಿನೋ ಬಹುಶಃ ಶಿವೇ'
ಎಂಬ ವೀರತಂತ್ರ ಪುಸಿಯೇನಯ್ಯಾ ?
ಪ್ರಸಾದ ಪ್ರಸಾದವೆಂದು ಮುಖದೋರದೆ ಮೂಗ ಮುಚ್ಚಿ
ನುಂಗುವರ ಕಂಡು ಹೊಟ್ಟೆ ಜೋಲಾಡುವಂತೆ ನಕ್ಕ ಕರುಣಾಕರ
ಕಪಿಲಸಿದ್ಧಮಲ್ಲಿಕಾರ್ಜುನದೇವನು. ॥ ೪೨೯ ॥

೧೨೭೮

ಅಟ್ಟುಂಬುವುದದು ಜೀವಕ್ಕೆ ಪ್ರಸಾದವಲ್ಲದೆ
ನಿರ್ಜೀವಕ್ಕೇನೊ ಅಯ್ಯಾ ?
ಜೀವಭಾವವಳಿದು, ಜನನಭಾವವಡಗಿ,
ಜಗದಂತರ್ಯಾಮಿಯೆಂಬುದು ಮಹಾಪ್ರಸಾದ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೩೦ ॥

೧೨೭೯

ಅಟ್ಟುಂಬುದು ಪ್ರಸಾದವಾದಡೆ,
ಇದ್ದ ಪ್ರಾಣಿಗಳೆಲ್ಲ ಮೋಕ್ಷವಂತರಾಗಬಾರದೇನೊ ಅಯ್ಯಾ ?

ಅಟ್ಟುಂಬುವದು ಭೂತ !
ಅಡದೆ ಉಣದೆ ನಿಜವಡಗಿದ ರೂಪ ಅರಿಯಬಲ್ಲಡೆ,
ಅದು ಮಹಾಪ್ರಸಾದ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೩೧ ॥

೧೨೮೦

ಗುರು ಮುಟ್ಟಿ ಬಂದ ಶುದ್ಧಪ್ರಸಾದಿಯಾದಡೆ,
ವಾತ ಪಿತ್ತ ಶ್ಲೇಷ್ಮವಳಿದಿರಬೇಕು.
ಲಿಂಗ ಮುಟ್ಟಿ ಬಂದ ಸಿದ್ಧಪ್ರಸಾದಿಯಾದಡೆ,
ಆದಿವ್ಯಾಧಿಗಳಿಲ್ಲದಿರಬೇಕು.
[ಜಂಗಮ ಮುಟ್ಟಿ ಬಂದ ಪ್ರಸಿದ್ಧ ಪ್ರಸಾದಿಯಾದಡೆ,
ಅಜ್ಞಾನರೋಗವಿಲ್ಲದಿರಬೇಕು.]
ಮೂರರ ಅರುಹು ಗಟ್ಟಿಗೊಳ್ಳುವ ಮಹಾಪ್ರಸಾದಿಯಾದಡೆ,
ಮರಣವಿಲ್ಲದಿರಬೇಕು.
ಪ್ರಸಾದ ಪ್ರಸಾದವೆಂದು ತ್ರಿವಿಧ ಪ್ರಸಾದವ ಸೇವಿಸಿ,
ಸರ್ವರಂತೆ ಮಲತ್ರಯಕ್ಕೊಳಗಾಗುವರ ಪ್ರಸಾದಿಗಳೆಂದು ನಂಬದಿರಾ,
ಕಪಿಲಸಿದ್ಧಮಲ್ಲಿಕಾರ್ಜುನ ಸಾಕ್ಷಿಯಾಗಿ, ಕಬ್ಬಿಲರಿರಾ. ॥ ೪೩೨ ॥

೧೨೮೧

ಕರಣಾದಿಗಳೆಲ್ಲ ಪರಶಿವನೆಂದ ಬಳಿಕ,
ಆ ಕರಣಾದಿಗಳ 'ಭೋಜನ ಕೊಳ್ಳು' ಎನಬಾರದೆಂದು,
'ಪರಶಿವಪ್ರಸಾದ' ಎಂಬ ನಾಮವಿಟ್ಟನಯ್ಯಾ ಶ್ರೀಗುರು.
ಆ ಕಾರಣ ಬಂದ ಪ್ರಸಾದವೆಲ್ಲ ಶಿವಪ್ರಸಾದವೆಂದು ಭುಂಜಿಸಬೇಕಲ್ಲದೆ,
ಕಟು ಆಮ್ಲ ತಿಕ್ತವೆಂದು ಭೋಗಿಸಿದಡೆ,
ಭವ ತಪ್ಪದು ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೩೩ ॥

೧೨೮೨

ಮಜ್ಜಿಗೆ ಹುಳಿ ಎಂದಡೆ ಅದು ಗೊಜ್ಜಿನ ಹಾದಿ ನೋಡಾ, ಮನವೆ.
ಸಜ್ಜಿಕ ಸ್ವಾದುವೆಂದಡೆ, ಕಜ್ಜಿಯ ತಿಂಡಿಯಂತೆ ಕಾಣಾ, ಮನವೆ.
ಸ್ವಾದ ಹುಳಿ ಶಿವಸ್ವರೂಪವೆಂದೆಡೆ ಮಹಾಪ್ರಸಾದವಾಯಿತ್ತು,
ಎನ್ನ ಗುರು ಚೆನ್ನಬಸವಣ್ಣಂಗೆ ಕಾಣಾ ಮನವೆ, ಕಪಿಲಸಿದ್ಧಮಲ್ಲಿಕಾರ್ಜುನಾ.
॥ ೪೩೪ ॥

೧೨೮೩

ಜ್ಞಾನಪದು ದುರ್ಲಭವಲ್ಲ,
ಅದರ ಭಾವ ದುರ್ಲಭವಯ್ಯಾ.
ಭಾವವದು ದುರ್ಲಭವಲ್ಲ,
ಅದರ ಏಕತ್ವವದು ದುರ್ಲಭ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೩೫ ॥

೧೨೮೪

ನೆಲೆಗೊಳ್ಳದು ಎಂದು ಬಿಡಬಾರದಯ್ಯಾ.
ನೆಲೆಯುದು ನೆಲೆಯುದು ಎಂದು ಅನುಭವಿಸಬೇಕಯ್ಯಾ.
ನೆಲೆಯಿಲ್ಲದದು ನೆಲೆಯಲ್ಲಿಹುದಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೩೬ ॥

೧೨೮೫

ಕಲ್ಲು ನೀರಲ್ಲಿದ್ದಂತಲ್ಲದೆ,
ನೀರ ನುಂಗಿ ನೀರಾಗಬಹುದೆ ಅಯ್ಯಾ ?
ಅಗ್ನಿ ನೀರಲ್ಲಿದ್ದಂತಲ್ಲದೆ,
ನೀರ ನುಂಗಿ ನೀರಾಗಬಹುದೆ, ಅಯ್ಯಾ ?
ಪ್ರಸಾದಿ ಭವದಲ್ಲಿದ್ದಂತಲ್ಲದೆ,
ಭವ ನುಂಗಿ ಭವಿಯಾಗಬಹನೆ, ಅಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ ? ॥ ೪೩೭ ॥

೧೨೮೬

'ವಿಕಾರಿಣ್ಯಾಂ ತಸ್ಯಾಂ' ಎಂಬ ಶ್ರುತಿ ಪ್ರಸಿದ್ಧವು.
ವಿಕಾರ ಪ್ರಕೃತಿಯಲ್ಲಲ್ಲದೆ ಪುರುಷನಲ್ಲಿಲ್ಲವಯ್ಯಾ.
ಪುರುಷನಿಲ್ಲದಿರೆ ಪ್ರಕೃತಿಯು ಕರ್ಮ ನಡೆಯದಯ್ಯಾ.
ಸೂರ್ಯಕಿರಣದಿಂದಾದ ಜಲದಲ್ಲಿ ಸೂರ್ಯಬಿಂಬವಿರೆ,
ನಿಜ ಸೂರ್ಯನ ರೂಪು ಕೆಡದಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ.
॥ ೪೩೮ ॥

೧೨೮೭

ಒಂದೆ ವಸ್ತು ಅವಸ್ಥಾತ್ರಯ ಕಿಂಚಿಜ್ಞತ್ವ ಹೊಂದಿ ಜೀವನೆನಿಸಿತ್ತಯ್ಯಾ,
ಆ ಜೀವ ಕರ್ತೃತ್ವಭೋಕ್ತೃತ್ವಕ್ಕೆ ಒಳಗಾಗಿ 'ದೇಹ ನಾನು' ಎಂದಿತ್ತಯ್ಯಾ.
'ದೇಹ ನಾನು' ಎಂಬುವ ವಾಸನೆಯೊಳಗಾಗಿ, ಕಾಲತ್ರಯಕ್ಕೊಳಗಾಗಿ,
ಅಸ್ವತಂತ್ರನಾಗಿ ನೆಲಸಿತ್ತು ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೩೯ ॥

೧೨೮೮

ದೇಹ ನಾನಲ್ಲ, ಜೀವ ನಾನಲ್ಲವೆಂಬುದದು ಶಿವನೆನಿಸಿತ್ತು.
ಶಿವ-ಜೀವಂಗೆ ಭೇದವೆಂಬುದು ಇಲ್ಲ ಕಾಣಾ.
ಉದಕವಿದ್ದೆಡೆಯಲ್ಲಿ, ಗಗನಪರಿಪೂರ್ಣದಲ್ಲಿ,
ರವಿ ತಾರೆ ಮೇಘವಾದಂತೆ—
ಪರಿಪೂರ್ಣ ವಸ್ತುವೆ ಚಿದಾಕಾಶದಲ್ಲಿ ಶಿವ ಜೀವ ಮಾಯಾ
ಪ್ರಕೃತಿ ಎನಿಸಿತ್ತಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೪೦ ॥

೧೨೮೯

ಗಣಿತ ಒಂದಕ್ಕೆ ಪೂಜೆ ಒಂದೆರಡು ಮೂರಾದಲ್ಲಿ
ಹತ್ತು ಶತ ಸಹಸ್ರವೆನಿಸಿತ್ತಯ್ಯಾ.
ಪರಾತ್ಪರವಸ್ತು ಉಪಾಧಿವಶದಿಂದ
ಈಶತ್ವ ಜೀವತ್ವ ಪ್ರಕೃತಿ ಮೊದಲಾದ ಇಂದ್ರಜಾಲವಾಯಿತ್ತು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೪೧ ॥

೧೨೯೦

ಎಲ್ಲ ಪುರಾಣಕ್ಕೆ ಹೆಸರುಂಟು, ನಮ್ಮ ಪುರಾಣಕ್ಕೆ ಹೆಸರಿಲ್ಲ ನೋಡಯ್ಯಾ.
ಲಿಂಗದ ಮಹತ್ವವ ಹೇಳಿದಲ್ಲಿ ಲಿಂಗಪುರಾಣವೆನಿಸಿತ್ತು.
ಷಣ್ಮುಖನ ಮಾಹಾತ್ಮ್ಯವ ಹೇಳಿದಲ್ಲಿ ಸ್ಕಂದಪುರಾಣವೆನಿಸಿತ್ತು.
ವೀರಭದ್ರನ ಮಾಹಾತ್ಮ್ಯವ ಹೇಳಿದಲ್ಲಿ ದಕ್ಷಖಂಡವೆನಿಸಿತ್ತು.
ಶಿವನ ಮಹಿಮೆ, ಕಾಶೀಮಹಿಮೆಯ ಹೇಳಿದಲ್ಲಿ
ಶಿವಪುರಾಣ ಕಾಶೀಖಂಡವೆನಿಸಿತ್ತು.
ಪಾರ್ವತಿಯ ಮಾಹಾತ್ಮ್ಯವ ಹೇಳಿದಲ್ಲಿ ಕಾಳೀಪುರಾಣವೆನಿಸಿತ್ತು.

ನಮ್ಮ ಪುರಾಣ ಹೆಸರಿಡಬೇಕೆಂದಡೆ,
ನಿಶ್ಶಬ್ದ ನಿರವಯಲ ಪುರಾಣ ತಾನೆಯಾಯಿತ್ತು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೪೨ ॥

೧೨೯೧

ಪುರಾಣವ ಹೇಳಿದವರೆಲ್ಲ ಪುರಾಣಿಕರು ನೋಡಾ.
ಭವಭವದ ಶಾಸ್ತ್ರವ ಹೇಳಿದವರೆಲ್ಲ ಶಾಸ್ತ್ರಿಗಳು ನೋಡಾ.
ವೇದಾಂತವ ಹೇಳಿದವರೆಲ್ಲ ವೇದಾಂತಿಗಳು ನೋಡಾ ಭವಭವದಲ್ಲಿ.
ಆದ್ಯರ ವಚನವ ಹೇಳಿದವರೆಲ್ಲ ಪುರಾತರು ನೋಡಾ ಭವಭವದಲ್ಲಿ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೪೩ ॥

೧೨೯೨

ಅಲ್ಲಯ್ಯಗಳ ವಚನ ಎರಡೆಂಬತ್ತುಕೋಟಿ.
ಅಪ್ಪಯ್ಯಗಳ ವಚನ ನಾಲ್ಕು ಲಕ್ಷದ ಮೂವತ್ತಾರು ಸಾಸಿರ.
ಎಮ್ಮಯ್ಯಗಳ ವಚನ ವಚನಕ್ಕೊಂದು.
ನೀಲಮ್ಮನ ವಚನ ಲಕ್ಷದ ಹನ್ನೊಂದು ಸಾಸಿರ.
ಗಂಗಾಂಬಿಕೆಯ ವಚನ ಲಕ್ಷದ ಎಂಟು ಸಾಸಿರ.
ಎಮ್ಮಕ್ಕ ನಾಗಾಯಿಯ ವಚನ ಮೂರುಲಕ್ಷದ ತೊಂಬತ್ತಾರು ಸಾಸಿರ.
ಮಡಿವಾಳಣ್ಣನ ವಚನ ಮೂರು ಕೋಟಿಮುನ್ನೂರು.
ಹಡಪದಯ್ಯಗಳ ವಚನ ಹನ್ನೊಂದು ಸಾಸಿರ.
ಮರುಳಸಿದ್ಧನ ವಚನ ಅರುವತ್ತೆಂಟು ಸಾಸಿರ.
ಇಂತಪ್ಪ ವಚನದ ರಚನೆಯ ಬಿಟ್ಟು,
ಹುಡಿಮಣ್ಣ ಹೊಯ್ಯದೆ ಮಾಬನೆ,
ಕುತ್ಸಿತ ಕಾವ್ಯಾಲಂಕಾರ ನೋಡುವರ ನೋಡಿ,
ಮಹಾದೇವ ಕಪಿಲಸಿದ್ಧಮಲ್ಲಿಕಾರ್ಜುನ. ॥ ೪೪೪ ॥

೧೨೯೩

ಎಮ್ಮ ವಚನದೊಂದು ಪಾರಾಯಣಕ್ಕೆ
ವ್ಯಾಸನದೊಂದು ಪುರಾಣ ಸಮ ಬಾರದಯ್ಯಾ.
ಎಮ್ಮ ವಚನದ ನೂರೆಂಟರಧ್ಯಯನಕ್ಕೆ
ಶತರುದ್ರೀ[ಯ ಯಾಗ] ಸಮ ಬಾರದಯ್ಯಾ.
ಎಮ್ಮ ವಚನದ ಸಾಸಿರ ಪಾರಾಯಣಕ್ಕೆ

ಗಾಯತ್ರೀ ಲಕ್ಷ ಜಪ ಸಮ ಬಾರದಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೫೫ ॥

೧೪೬೪

ನಮ್ಮ ನಡಾವಳಿಗೆ ನಮ್ಮ ಪುರಾತರ ನುಡಿಯೆ ಇಷ್ಟವಯ್ಯಾ.
ಸ್ಮೃತಿಗಳು ಸಮುದ್ರದ ಪಾಲಾಗಲಿ ;
ಶ್ರುತಿಗಳು ವೈಕುಂಠವ ಸೇರಲಿ ;
ಪುರಾಣಗಳು ಅಗ್ನಿಯ ಸೇರಲಿ ;
ಆಗಮಗಳು ವಾಯುವ ಹೊಂದಲಿ.
ಎಮ್ಮ ನುಡಿ, ಕಪಿಲಸಿದ್ಧಮಲ್ಲಿಕಾರ್ಜುನನ ಮಹಾಲಿಂಗದ
ಹೃದಯದೊಳು ಗ್ರಂಥಿಯಾಗಿರಲಿ. ॥ ೪೫೬ ॥

೧೪೬೫

ವಚಿಸಿ ಅನುಭವಿಯಾಗದವ ಪಿಶಾಚಿಯಯ್ಯಾ ;
ವಚಿಸಿ ಅನುಭವಿಯಾದವ ಪಂಡಿತನಯ್ಯಾ.
ವಿದ್ಯೆಯೆಂಬುದು ಅಭ್ಯಾಸಿಕನ ಕೈವಶ.
ಅವಿದ್ಯೆಯೆಂಬುದು ಸರ್ವರಲ್ಲಿ ವಶ.
ವಿದ್ಯಾವಿದ್ಯೆಯನರಿತು ಜಗದ್ವೇದ್ಯನಾಗಬಲ್ಲಡೆ,
ಮಹಾಪಂಡಿತ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೫೭ ॥

೧೪೬೬

ಓದಿದ ಫಲ ಶಿವಲೆಂಕ ಮಂಚಣ್ಣಂಗಾಯಿತ್ತು.
ಓದಿದ ಫಲ ಹಲಾಯುಧಂಗಾಯಿತ್ತು.
ಓದಿದ ಫಲ ಮಲಯರಾಜಂಗಾಯಿತ್ತು.
ಓದಿದ ಫಲ ಜನ್ಮವಳಿದವಂಗಾಯಿತ್ತು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೫೮ ॥

೧೪೬೭

ಓದಿದ ಫಲ ಕೂಚಭಟ್ಟನಂತಾಗಬಾರದು.
ಓದಿದ ಫಲ ಪರಾಶರನಂತಾಗಬಾರದು.
ಓದಿದ ಫಲ ಮಯೂರನಂತಾಗಬಾರದು.

ಓದಿದ ಫಲ ನಮ್ಮ ಹಾವಿನಹಾಳ ಕಲ್ಲಯ್ಯನ
ಮನೆಯ ಶ್ವಾನನಂತಾಗಬೇಕು ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೫೯ ॥

೧೨೯೮

ಓದುವುದದು ಸದ್ಗುಣಕ್ಕಲ್ಲದೆ ಕಪಿಯುಸೂಡುವುದಕ್ಕೇನೋ, ಅಯ್ಯಾ ?
ಮಾಡುವ ಭಕ್ತಿ ಮೋಕ್ಷಕ್ಕಲ್ಲದೆ ಡಂಭಾಚಾರಕ್ಕೇನೋ, ಅಯ್ಯಾ ?
ಆಡುವ ವೇಷ ದ್ರವ್ಯಕ್ಕಲ್ಲದೆ ಜನರಾಡಂಬರಕ್ಕೇನೋ, ಅಯ್ಯಾ ?
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೬೦ ॥

೧೨೯೯

ಲೋಕ ತನ್ನೊಳಗಾದ ಬಳಿಕ, ಲೋಕದ ಸೊಮ್ಮು ತನಗೇಕಯ್ಯಾ ?
ಪರುಷ ತಾನಾದ ಬಳಿಕ, ಸುವರ್ಣದ ಸೊಮ್ಮು ತನಗೇಕಯ್ಯಾ ?
ಧೇನು ತಾನಾದ ಬಳಿಕ ಅನ್ಯಗೋವಿನ ಸೊಮ್ಮು ತನಗೇಕಯ್ಯಾ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೬೧ ॥

೧೩೦೦

ದರಿದ್ರ ಧನಾಢ್ಯಂಗಂಜುವನಲ್ಲದೆ ದರಿದ್ರಂಗಂಜುವನೆ ?
ದೊರೆ ಮಹಾದೊರೆಗಂಜುವನಲ್ಲದೆ ದೊರೆತನಕ್ಕಂಜುವನೆ ?
ಪರಶಿವಯೋಗಿ ಅಂತರ್ಯಾಮಿಗಂಜುವನಲ್ಲದೆ,
ಲೋಕದ ಗುಂಗಿಗಳಿಗಂಜುವನೆ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೬೨ ॥

೧೩೦೧

ಭಾವಕ್ಕಂತರ್ಯಾಮಿಯಲ್ಲದೆ,
ನಡೆವ ಆಚಾರಕ್ಕೆ ಅಂತರ್ಯಾಮಿಯೇನಯ್ಯಾ ?
ಭಾವಕಿ ಹಾವಭಾವಕ್ಕನುಕೂಲೆಯಲ್ಲದೆ,
ನಿರ್ಭಾವಂಗನುಕೂಲೆಯೇನಯ್ಯಾ ?
ಭಾವ ಭಕ್ತಿಯಲ್ಲಲ್ಲದೆ ವೀರಭಕ್ತಿಯಲ್ಲೇನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ ? ॥ ೪೬೩ ॥

೧೩೦೨

ಆಕಾಶ ಪಾಷಾಣ ಮಾಡಬಲ್ಲಾದಡೆ ಯೋಗಿ.
ಪಾಷಾಣ ಆಕಾಶ ಮಾಡಬಲ್ಲಾದಡೆ ಯೋಗಿ.
ಆಕಾಶದಲ್ಲಿಯ ಬಯಲು ಪಾಷಾಣದಲ್ಲಿಪ್ಪುದು
ಏಕೀಯವಾಗಬಲ್ಲಾದಡೆ ಶಿವಯೋಗಿ ;
ಕಪಿಲಸಿದ್ಧಮಲ್ಲಿಕಾರ್ಜುನ ಆತನೆ ನೋಡಾ. ॥ ೪೬೪ ॥

೧೩೦೩

ನೀರಿಲ್ಲದ ಭೂಮಿಯಲ್ಲಿ ಮೂರು ಪೇರು ನವಣೆಯ ಬೆಳೆದುದ ಕಂಡೆ.
ಆ ನವಣೆ ಅಳೆದುಕೊಡುವಡೆ ಇಮ್ಮಡಿ ಮುಮ್ಮಡಿಯಾದುದ ಕಂಡೆ.
ಕೊಂಡವಂಗೆ ಜನ್ಮಜನ್ಮದಲ್ಲಿ ಭೋಗಿಸುವುದಕ್ಕೆ ಕಣಜಗಳಾದುದ ಕಂಡೆ.
ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೬೫ ॥

೧೩೦೪

ಸೊಲ್ಲಗೆ ಒಂದು ಕಂಡುಗ ನವಣೆ ನುಂಗಿತ್ತಯ್ಯಾ.
ಆ ನವಣೆಯ ಹೊಯ್ದುಳಿಯಬೇಕೆಂದಡೆ ಸ್ಥಲ ಸಾಲದಯ್ಯಾ–
ಹಲಬರು ಛಲವಿಡಿದುವಿಡಿದು ಹೊಲಬುಗೇಡಿಯಾದವರು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೬೬ ॥

೧೩೦೫

ಒಂದಾಕಳು ಒಂಬತ್ತೂರ ಸೋದು ಸವಿಯುಹೋದಡೆ,
ಕೈವಲ್ಯ ಸೂರೆಯೆಲ್ಲಿಪ್ಪುದಯ್ಯಾ ?
ಒಂಬತ್ತು ಆಕಳು ಒಬ್ಬ ಸೋದ ಸವಿಗಾರಂಗೆ ಬೇಹುದೇನಯ್ಯಾ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ ? ॥ ೪೬೭ ॥

೧೩೦೬

ಆರುಹು ತಲೆದೋರಿದಲ್ಲಿ ವಿಷ ಬೆಲ್ಲವು ಇಕ್ಷುರಸವಾಯಿತ್ತು.
ಅರುಹು ತಲೆದೋರಿದಲ್ಲಿ ಅಂಬರ ಅವಯವಕ್ಕೆ ಹೊಂದಿತ್ತಯ್ಯಾ.
ಅರುಹು ತಲೆದೋರಿದಲ್ಲಿ ಕಪಿಲಸಿದ್ಧಮಲ್ಲಿಕಾರ್ಜುನನ ಕುರುಹು
ನಾನೆಂದು ತಿಳಿಯಬಂದಿತ್ತಯ್ಯಾ ಯೋಗಿನಾಥಾ. ॥ ೪೬೮ ॥

೧೩೦೭

ಯೋಗಿನಾಥನ ಒಲುಮೆ ಯೋಗಿಯಾದವಂಗಲ್ಲದೆ,
ಭೋಗಿಯಾದಾತಂಗೆಲ್ಲಿಹುದಯ್ಯಾ ?
ಪಂಚಮಸ್ವರದಾಯತ ಕೋಗಿಲೆಗಲ್ಲದೆ ಕಾಗೆಗೆಲ್ಲಿಹುದೊ ?
ಕಪಿಲಸಿದ್ಧಮಲ್ಲಿಕಾರ್ಜುನ ಯೋಗಿನಾಥಾ. ॥ ೪೬೯ ॥

೧೩೦೮

ಪ್ರಪಂಚದಲ್ಲಿ ಭೂಭಾರಿಯಲ್ಲದೆ
ಪಾರಮಾರ್ಥದಲ್ಲಿ ಭೂಭಾರಿಯೇನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ ? ॥ ೪೭೦ ॥

೧೩೦೯

ವಿದ್ಯೆಯನರಿಯದವ ಗುದ್ದಾಟಕ್ಕೊಳಗಾದ.
ಅವಿದ್ಯೆಯನರಿಯುದವ ಪ್ರಪಂಚವ ಒಪ್ಪುಬಿಟ್ಟ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೭೧ ॥

೧೩೧೦

ವಿದ್ಯೆ ಎಂದಡೆ ಭಾರತ–ರಾಮಾಯಣವಲ್ಲ.
ಭಾರತವೆಂದಡೆ ಭರತದೇಶದಲ್ಲಿ ಜನಿಸಿ,
ಕಾಮಿನಿಯರ ಸೋಗುಹಾಕಿ, ಆ ದೇಶಕ್ಕಧಿಯಾದ ಕಥೆಯೆ ಭಾರತವಯ್ಯಾ.
ರಾಮಾಯಣವೆಂದಡೆ, ಆದಿನಾರಾಯಣನು ಪೃಥ್ವಿಯೊಳು ಹುಟ್ಟಿ,
ರಾಮನೆಂಬಭಿಧಾನವ ಧರಿಸಿ, ಸರ್ವರಂತೆ ಪ್ರಪಂಚವ ಮಾಡಿ,
ರಾಕ್ಷಸರ ಗರ್ವವನಳಿದುದೆ ರಾಮಾಯಣ.
ಮಾಡಿ ಉದ್ಧಟವಾದಲ್ಲಿ ಕಾಲಾಂತರದಲಾದರೂ ಕುರುಹಿನೊಳಗಾದವಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೭೨ ॥

೧೩೧೧

ಆವು ಬಯಲಾದಂದಿಗೆ ಎಮ್ಮ ಪುರಾಣ ಸಾಗವೇನಯ್ಯಾ ?
ಎಮ್ಮ ಪುರಾಣವಾದಂದಿಗೆ ಜನರು ನಾಮವ ಹೊತ್ತು ನಡೆಯರೇನಯ್ಯಾ ?

ಎಮ್ಮ ಪುರಾಣ ಶಿವಪುರಾಣ ಎಮಗೆ ಗುರುಲಿಂಗ ಜಂಗಮತ್ರಯ ಒಂದೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೭೩ ॥

೧೩೧೨

ಕೆರೆಯ ಆಗಳುವ ಅಣ್ಣಂಗಳೆಲ್ಲ
ಮೂಲೋಕದೆರೆಯನ ಪಾದದಲ್ಲಿ ಬಿದ್ದು ಹೊರಳಾಡುತ್ತಾರೆ ನೋಡಾ.
ದೊರೆಯ ಮಾರಾರಿಯನರಿದು ತ್ರಿಪುರಾರಿ ತಾವಾಗರು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನ ಯೋಗಿನಾಥಾ. ॥ ೪೭೪ ॥

೧೩೧೩

ಹಬ್ಬಗಳೆಲ್ಲ ಉಬ್ಬುಬ್ಬಿ ಲಿಂಗದ ಹಬ್ಬಕ್ಕೆ ಬಂದಬ್ಬರವ ನೋಡಾ !
ಲಿಂಗದ ಹಬ್ಬ ನಿಮ್ಮ ಬಾಯಿಗೆ ಒಬ್ಬಿಯಲ್ಲದೆ
ನಿಮ್ಮ ಜನನಕ್ಕೆ ಹಬ್ಬವೇನೊ, ಕಬ್ಬಿಲ ಮಬ್ಬುಳ್ಳ ಕೊಬ್ಬಿಗರಿರಾ,
ಕಪಿಲಸಿದ್ಧಮಲ್ಲಿಕಾರ್ಜುನನೊಬ್ಬನರಿಯದಿರ್ದಡೆ ? ॥ ೪೭೫ ॥

೧೩೧೪

ಜ್ಞಾನಾಭ್ಯಾಸದಲ್ಲಿ ವಟಮೂಲಿಕೆಯ ಬೀಜದಂತಿರಬಲ್ಲಡೆ ಭಕ್ತನಯ್ಯಾ.
ಆ ಜ್ಞಾನದಲ್ಲಿ ಅಗ್ನಿಯಂತಿರಬಲ್ಲಡೆ ಭಕ್ತನಯ್ಯಾ.
ಭಕ್ತನು ಭಕ್ತನು ಎಂದು ಬೆಳೆದ ಧಾನ್ಯಂಗಳನಟ್ಟು
ಬೆಟ್ಟಬಿಲ್ಲಯ್ಯನ ರೂಪಕ್ಕೆ ಒಟ್ಟಿ ಭಕ್ತನಾದೆನೆಂಬವನ ಯುಕ್ತಿ
ಲೊಳಲೊಟ್ಟೆಯಂತೆ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೭೬ ॥

೧೩೧೫

ಅಟ್ಟು ನೀಡುವ ಭಕ್ತನ ಬಟ್ಟೆಯ [ಇ]ಚ್ಛೆಗೆ ಬಂದಾತನಲ್ಲ
ನೋಡಾ ಮಹೇಶನು.
ನೆಟ್ಟನೆ ನೀ ಪರವಸ್ತುವೆಂಬ ಜ್ಞಾನವಟ್ಟುವುದಕ್ಕೆ ಬಂದಾತ
ಮಹೇಶನು ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೭೭ ॥

೧೩೧೬

ಮಹೇಶನಾದೆನೆಂಬ ಬಿಂಕವು ಮನದರುಹಿನಲ್ಲಿ ಅಡಗಿರಬೇಕು.
ಭಕ್ತನಾದೆನೆಂಬ ಬಿಂಕವು ಸ್ಮರಣೆಯ ರೂಹಿನಲ್ಲಿ ಮನೆಮಾಡಿಕೊಂಡಿರಬೇಕು.
ಮಹೇಶನಾದವ ಒಬ್ಬನು ತೋರಲಿಲ್ಲ ;
ಭಕ್ತನಾದವನ ಅಂದಂದಿಗೆ ನೋಡಲಿಲ್ಲ ಕಂಡೆಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೭೮ ॥

೧೩೧೭

ಬಹಿರಂಗದಲ್ಲಿ ಬಿಟ್ಟ ಮಹೇಶರು ಬ್ರಹ್ಮನ ವಂಶದವರು.
ಅಂತರಂಗದಲ್ಲಿ ಬಿಟ್ಟ ಮಹೇಶರು ವಿಷ್ಣುವಿನ ವಂಶದವರು.
ಎರಡರಲ್ಲಿ ಬಿಟ್ಟ ಮಹೇಶರು
ಕಪಿಲಸಿದ್ಧಮಲ್ಲಿಕಾರ್ಜುನ–ಮಹಾದೇವಿಯ ಸಂಗದಿಂದ
ಹುಟ್ಟಿದವರು ಕಾಣಾ, ಯೋಗಿನಾಥಾ. ॥ ೪೭೯ ॥

೧೩೧೮

ಬಿಟ್ಟು ಮಹೇಶನಾದೆನೆಂಬುದು ಅರುಹಿನ ಕೇಡು.
ಹಿಡಿದು ಭಕ್ತನಾದೆನೆಂಬುದು ನಿಜದ ಕೇಡು.
ಬಿಡುವುದು ಹಿಡಿವುದು ಮನಃಕಲ್ಪಿತವಲ್ಲದೆ,
ಕಲ್ಪನಾರಹಿತ ಭಕ್ತ–ಮಹೇಶರಲ್ಲಿಪ್ಪುದೇನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೮೦ ॥

೧೩೧೯

ಹಲವರಿಪ್ಪರು ನೋಡಾ ಮೂಲೋಕದಲ್ಲಿ ಲಿಂಗಭಕ್ತರು.
ಕೆಲವರಿಪ್ಪರು ನೋಡಾ ಮೂಲೋಕದಲ್ಲಿ ಸ್ಥಾವರಭಕ್ತರು.
ಸಲುಗೆಯುಳ್ಳವರಿಪ್ಪರು ನೋಡಾ ಅನೇಕ ಕೋಟಿ ಭಕ್ತರು.
ಒಬ್ಬರೂ ಇಲ್ಲ ನೋಡಾ ಅಜಾಂಡಕಾಂಡದಲ್ಲಿ ಜಂಗಮಭಕ್ತರು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೮೧ ॥

೧೩೨೦

ಇಂದ್ರಿಯನಿಗ್ರಹ ಮಾಡಿದಡೇನಯ್ಯಾ, ಚಂದ್ರಧಾರಿಯಾಗಬಲ್ಲನೆ ?
ಇಂದ್ರಿಯ ಕಟ್ಟಿದ ಕುದುರೆ ಇಂದ್ರನ ಉಚ್ಚೈಶ್ರವವಹುಗೆ ಅಯ್ಯಾ ?
ಇಂದ್ರಿಯಂಗಳೆಂಬುದು ಮಾಯಾಜಾಲವು ತಾನೆ.
'ನ ಸತೀ' ಎಂಬ ಶ್ರುತಿಯದು ಪ್ರಸಿದ್ಧ.
ಲಿಂಗವೆಂಬುದ ತಿಳಿಯಬಲ್ಲಾತನೆ ಜಗದ್ವಂದ್ಯ ಜಂಗಮವೆಂಬೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೮೨ ॥

೧೩೨೧

ಕುಲಸೂತಕವಿಲ್ಲದ ಜಂಗಮ ಕೋಟ್ಯನುಕೋಟಿ.
ಮಲಮುಟ್ಟದ ಜಂಗಮ ಕೋಟ್ಯನುಕೋಟಿ.
ಶೀಲಸತ್ಯಸದಾಚಾರಿ ಜಂಗಮ ಕೋಟ್ಯನುಕೋಟಿ.
ಹಲವು ಹೊಳೆಯಬಾರದ ಜಂಗಮ ಸುಳುಹಿನ ಕಳೆದೋರಿಸ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನ ಮಹಾಮಹಿಮನು. ॥ ೪೮೩ ॥

೧೩೨೨

ಆಡಂಬರದಂಸ್ಯಗಳ ಕಂಡಡೆ
ಆಡಬೇಡ ಅವರ ಪಾದೋದಕ ಪ್ರಸಾದ ಸ್ವೀಕಾರದಲ್ಲಿ.
ಆಡು ಆಡುವರ ಕುಲ ಛಲ ಶೀಲ ಜ್ಞಾನವಿಡಿದಾಡಿ,
ಆಡದೆ ಆಡಿದಡೆ ಆಡಿಸುವ ಭವದ ಕುಳಿಯಲ್ಲಿ ಕಡುಜಾಣ
ಕಪಿಲಸಿದ್ಧಮಲ್ಲಿಕಾರ್ಜುನ ಯೋಗಿನಾಥ. ॥ ೪೮೪ ॥

೧೩೨೩

ಅಂಗೈಯೊಳಗಣ ಅಂಗಜಾರಿಗೆ,
ಅಂಗಜನ ಸ್ನೇಹಿತರ ಪಾದಾಂಬುವನೆರೆವನ ಅಂಗ ಚಾಂಡಾಲನಂಗ.
ಆತನ ಗೃಹ ಶ್ವಪಚನ ಮನೆ, ಆತನ ಸಂಗ ಮದ್ಯಪಾನ ಸಂಗ.
ಆತನ ವಾಕ್ಯ ನಿಶಿತಾಸ್ತ್ರ, ಆತನ ಹೊದ್ದರುವೆ ಸತ್ತ ನಾಯ ಕೊಳೆದೊಗಲು,
ಆತನ ಗುರು ನರ, ಆತನ ಲಿಂಗ ಶಿಲೆ,
ಆತನ ಅಧಿದೈವ ಪಿಶಾಚಿ, ಆತನ ವಿದ್ಯೆ ರಾಕ್ಷಸವಿದ್ಯೆ !
ಇದು ತಪ್ಪದು, ಇದು ತಪ್ಪದು ! ಇದು ತಪ್ಪೆನ್ನದು !

ಇದು ಪುಸಿಯಾದಡೆ, ಮೂಗ ಕೊಯ್ ಬಾರಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೮೫ ॥

೧೩೨೪

ಮುಳುಗುವಾತ ಮುಳುಗುವವನನೆತ್ತಬಲ್ಲನೆ ?
ತಾ ಮಾಯೆಯೊಳಗಾಗಿ,
ಮಾಯಿಕರ ತನ್ನ ಪಾದಾಂಬುವಿಂ ಪರಿಪರಿಪೆನೆಂಬವ ತೆಗೆದುಕೊಂಬವ
ಇವರಿರ್ವರೂ ಮುಳುಗಿ ಯಮಪಾಶಕ್ಕೊಳಗಾದರು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೮೬ ॥

೧೩೨೫

"ಪಾಕಾರಂ ಪಾವನಂ ಜ್ಞಾನಂ ದೋಕಾರಂ ದೋಷನಾಶನಂ
ದಕಾರಂ ತು ದಯಾಕಾರಂ ಕಕಾರಂ ಕರ್ಮನಾಶನಂ ॥"
ಎಂಬುದು ಪುಸಿಯೇನಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೮೭ ॥

೧೩೨೬

ಅಂತಹರಂಘ್ರಿಸಲಿಲ ಇಂತಹರಿಗೆ ನೋಡಾ.
ಅಂತರಿತಿಂತು ಕಾಂತಿಸಿದಡೆ,
ಕಂತುಹರ ಕಪಿಲಸಿದ್ಧಮಲ್ಲಿಕಾರ್ಜುನ
ಅಂತಕರಿಗಾಜ್ಞೆಯು ಮಾಡನೆ, ಕಲ್ಲಯ್ಯಾ. ॥ ೪೮೮ ॥

೧೩೨೭

ಸರ್ವರೂ ದ್ರವ್ಯವಂತರು : ಅವರು ಅವರಲ್ಲಿ ಆಸೆಯೆ ಅಯ್ಯಾ ?
ಮಾಯಾವಿರಹಿತ, ಮಾಯಾಕೋಲಾಹಲ
ಪಾದಪವಿತ್ರುದಕವೆ ಪಾದೋದಕ, ಮೋಕ್ಷದಾಯಕ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೮೯ ॥

೧೩೨೮

ಭಕ್ತರು ಭಕ್ತಿವಿಡಿದು ಆಚರಿಸಲಿ : ಆವು ಒಲ್ಲೆವಯ್ಯಾ.
ಆತನ ಭಕ್ತಿ ನೈಷ್ಠೆ ; ಆತ ನಡೆದುದು ಜಗತ್ಪಾವನ ;

ಆತ ನಡೆಸಿದುದು ಜಗಜ್ಜನನ ನೋಡಾ.
ಇದು ಪುಸಿಯಾದಡೆ ಹಲ್ಲುದೋರಿ ಮೂಗ ಕೊಯ್ಯಿ,
ಕಪಿಲಸಿದ್ಧಮಲ್ಲಯ್ಯಾ. ॥ ೪೯೦ ॥

೧೩೨೯

ಬಂಜೆಯ ಪಶು ತಿಂದಂತಂತಲ್ಲದೆ,
ತಿಂದು ದಂದುಗ ಮಾಡದು ನೋಡಾ.
ಮನೆಯ ಮಂದಿಯು ಅಂದವರಿಯುದಯ್ಯಗಳು ಉಂಡಂತಲ್ಲದೆ,
ಉಂಡು ಪರಮುರ ಮಾಡಿ ಪರೋಪಕಾರ ತೀರ್ಚರು
ನೋಡಾ ಜಗದ ಜೀವಿಗಳನು, ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೯೧ ॥

೧೩೩೦

ಆ ಪಶುವೆತ್ತೆಂದಡೆ ಪಶುವಲ್ಲ ನೋಡಾ ;
ಪಶುಪತಿ ಸಲೆ ಅಯ್ಯಾ.
ಆ ಅಯ್ಯ ಹೇಳಿಹನೆಂದಡೆ ಅಯ್ಯ ಅಲ್ಲ ನೋಡಾ ;
ಜಗದಯ್ಯ ಕಪಿಲಸಿದ್ಧಮಲ್ಲಿಕಾರ್ಜುನಯ್ಯನಹುದು. ॥ ೪೯೨ ॥

೧೩೩೧

ಆವನಾದಡೇನು, ಮೂರಳಿದವನೆ ಮೂರು ಕೋಣೆಯ ದಾಟುವನಯ್ಯಾ.
ಆಸೆ ಇಹುದೊ ಇಲ್ಲವೊ ಎಂದು ಮನಸೆಳೆವುದಕ್ಕೆ
ಗುರು ಚೆನ್ನಬಸವಣ್ಣನಾದನಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನನು.
॥ ೪೯೩ ॥

೧೩೩೨

"ಗ್ರಹಸ್ನಾನಂ ಕನಿಷ್ಠಂ ಚ ಕೂಪಸ್ನಾನಂ ತು ಮಧ್ಯಮಂ ॥
ಉತ್ತಮಂ ತು ನದೀಸ್ನಾನಂ ಸತ್ಯಂ ಪರ್ವತನಂದನೇ ॥" ಎಂಬುದಂತಿರಲಿ.
ಎಮ್ಮ ಮನಸಿನ ಕಲ್ಮಷಗಳಿದುದೆ ಮಹಾಸ್ನಾನ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೯೪ ॥

೧೩೩೩

ಮನವೆಂಬುದು ಬೇರಿಲ್ಲ : ಮಹಾದೇವನ ಮಹಾ ಅರುಹು ನೋಡಾ.
ಸಂಕಲ್ಪ ವಿಕಲ್ಪಂಗಳ ಧರಿಸಿದಲ್ಲಿ ಮನವೆನಿಸಿತ್ತು ;

ಅದು ಅಳಿದಲ್ಲಿ ಮಹಾಜ್ಞಾನವೆನಿಸಿತ್ತು ;
ಅಳಿವ ಭಾವ ತಲೆದೋರಿದಲ್ಲಿ ಕಪಿಲಸಿದ್ಧಮಲ್ಲಿಕಾರ್ಜುನನೆನಿಸಿತ್ತು. ॥ ೪೯೫ ॥

೧೩೩೪

ಮನ ಬುದ್ಧಿ ಚಿತ್ತ ಅಹಂಕಾರ ಜ್ಞಾನವೆಂಬ
ಪಂಚಕರಣಂಗಳಿರವ ಹೇಳಿಹೆ ಕೇಳಿರಯ್ಯಾ.
ಮನವೆಂಬುದು ಸಂಕಲ್ಪ ವಿಕಲ್ಪಕ್ಕೊಳಗಾಯಿತ್ತು.
ಇಲ್ಲದುದ ಕಲ್ಪಿಸುವುದೆ ಸಂಕಲ್ಪ.
ಇದ್ದುದನರಿಯದುದೆ ವಿಕಲ್ಪ.
ಕಲ್ಪಿಸಿ ರಚಿಸುವುದೆ ಬುದ್ಧಿಯಯ್ಯಾ.
ಕಲ್ಪಿಸಿ ಮಾಡುವುದದು ಚಿತ್ತವಯ್ಯಾ.
ಮಾಡಿದುದಕ್ಕೆ ನಾನೆಂಬುದು ಅಹಂಕಾರವಯ್ಯಾ.
ಮಾಡುವ ನೀಡುವ ಭಾವ ಶಿವಕೃತ್ಯವೆಂದಡೆ ಜ್ಞಾನವೈರಾಗ್ಯವಯ್ಯಾ.
ಅರಿಯದ ಅರಿವು ಮಹಾಜ್ಞಾನ, ಮೋಕ್ಷದ ಇರವು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೯೬ ॥

೧೩೩೫

ಒಂದನೆಯ ಬೀಜ ಬಿತ್ತಿ ಬೆಳೆಯದಲೆ ಬೆಳೆಯಿತ್ತು.
[ಎರಡನೆಯ ಬೀಜ ಸೃಷ್ಟ್ಯುನ್ಮುಖವಾಯಿತ್ತು.]
ಮೂರನೆಯ ಬೀಜ ಅಲ್ಲಲ್ಲಿ ಜನಿಸಿತ್ತು.
ನಾಲ್ಕನೆಯ ಬೀಜ ಮರ್ತ್ಯದಲ್ಲಿ ಜನಿಸಿ ಅಂಕುರಿಸಿತ್ತು.
ಐದನೆಯ ಬೀಜ ಇದ್ದು ಇದ್ದು ಅಂಕುರಿಸದು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೯೭ ॥

೧೩೩೬

ಮೂರನೆಯ ಬೀಜ ಐದನೆಯ ಬೀಜ ಒಂದೆ ನೋಡಯ್ಯಾ.
ಅದೇನು ಕಾರಣ ತಂದೆಯೆಂದಡೆ
ಅರಿಯದೆ ಬೆರೆಯದು ಉಭಯಕರ್ಮದಲ್ಲಿ ಇದರನುಭವ.
ಅರಿದು ಬೆರೆಯದವ ಬರಿಯ ಅರುಹಿನ ಕುರುಹು,
ಕಪಿಲಸಿದ್ಧಮಲ್ಲಿಕಾರ್ಜುನನೆಂದು ಕಾಂಬೆ. ॥ ೪೯೮ ॥

೧೩೩೭

ಬೀಜವೊಂದರಲ್ಲಿ ಐದು ಬೀಜಂಗಳ ಕಂಡೆ.
ಐದನೆಯ ಬೀಜದಿಂದಾರಯ್ಯಲು ಬೀಜವೊಂದೆ ಕಂಡೆ.
ಮತ್ತೈದನೆಯ ಬೀಜದಿಂದಾರಯ್ಯಲು ಐದು ಬೀಜವ ಕಂಡೆ.
ಇದರಂದವನರುಹಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೪೯೯ ॥

೧೩೩೮

ನಾನಾ ವ್ರತನೇಮಂಗಳಾದವು ;
ಸತ್ಯ ಶುದ್ಧಕಾಯಕ ನೇಮಂಗಳಾದವು ;
ಖಂಡಿತ ಕಾಯಕ ಅಖಂಡಿತ ಕಾಯಕದವರ ಕಂಡೆವು ;
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನದೇವರಲ್ಲಿ
ಅಂದಿಂಗೆ ನೂರು ತುಂಬಲು ಒಮ್ಮೆ ಪುರಾತರ ಕಂಡೆವು. ॥ ೫೦೦ ॥

೧೩೩೯

ಹೇಮಾಭಿಧಾನವದು ಮಂದರಾದ್ರಿಯಯ್ಯಾ.
ಸಿದ್ಧರವರು ಪರಿಚಾರಕರಯ್ಯಾ.
ನಿಮ್ಮ ರಾಣಿವಾಸದ ಜನನವಯ್ಯಾ ಈತ ಲೋಕದಲ್ಲಿ.
ಅಂದಿಗಯ್ಯಾ ಸಮಾಧಿಯ ಬಿಡುಗಡೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೦೧ ॥

೧೩೪೦

ಬಸವ ಬಾರನು ಬಯಲಳಿದು ಬಯಲಿಗೆ.
ಚೆನ್ನಬಸವ ಬಾರನು ಬಯಲಳಿದು ಬಯಲಿಗೆ.
ನಾ ಬಾರದೆ ಅಯ್ಯಾ, ನಾನೆ ಜಂಗಮು, ನನ್ನ ಗುರುವೆ ಭಕ್ತ,
ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೦೨ ॥

೧೩೪೧

ಕಾಮಿಯು ಕಾಮಿನಿಯು ಸೋಂಡಿದಳೆಂಬಂತೆ,
ಉಪಾಧಿಯು ನಿರುಪಾಧಿಕಲಿಂಗದ ಕೃಪೆಯಾಯಿತ್ತೆಂಬಂತೆ ನುಡಿವರಯ್ಯಾ.
ಕಾಮಿನಿಯ ದೃಷ್ಟಿ ಕಾಮಿಯಲ್ಲಿರಲು ಕಾಮಿಯೆ ಅಯ್ಯಾ ?

ಲಿಂಗದ ದೃಷ್ಟಿ ಅಂಗಗುಣದವನಲ್ಲಿರಲು ಆತ ಲಿಂಗಗುಣಿಯೆ ? ಹೇಳಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೦೩ ॥

೧೩೪೨

ಮನ ಮುಂದಿಟ್ಟು ಮಹಾದೇವಾ ಒಲಿದನೆಂಬುದು ಪುಸಿಯಯ್ಯಾ.
ಮನವಿಲ್ಲದಿರೆ ಮಹಿಮನ ಒಲುಮೆ ನೋಡಯ್ಯಾ.
ಮನದಲ್ಲಿಹ ಮಹಾದೇವನ ಮುಂದಿಟ್ಟು ತೋರುವ ಉಭಯಭ್ರಷ್ಟರ
ಮೆಚ್ಚುವನೆ, ಮಹಾದೇವ ಕಪಿಲಸಿದ್ಧಮಲ್ಲಿಕಾರ್ಜುನ ? ॥ ೫೦೪ ॥

೧೩೪೩

ಮನವಿದ್ದಲ್ಲಿ ಮಹಾದೇವನಿಪ್ಪ.
ಮನವಿದ್ದಲ್ಲಿ ಮಹಾದೇವನಿಲ್ಲವೋ ಅಯ್ಯಾ ?
ಯಾತ್ರಾರ್ಥವಾಗಿ ಬಂದವರು
ಬಯಲಲ್ಲಿ ಬಯಲ ಬಿಟ್ಟು ಬಯಲಾರಿಸುವಂತೆ–
ಮನೋವ್ಯಾಪಾರಕ್ಕದರಂತೆ ಇಪ್ಪ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನ. ॥ ೫೦೫ ॥

೧೩೪೪

ಘಟವ ಮಾಡಿದವ ಘಟದಲ್ಲಿರದಂತೆ,
ಭೂಷಣವ ಮಾಡಿದವ ಭೂಷಣದಲ್ಲಿರದಂತೆ,
ಕೃಷಿಯ ಮಾಡಿದವ ಕೃಷಿಯಲ್ಲಿರದಂತೆ,
ತೈಲವ ತೆಗೆದವ ತೈಲದಲ್ಲಿರದಂತೆ,
ಮನೆಯ ಕಟ್ಟಿದವ ಮನೆಯಲ್ಲಿರದಂತೆ,
ಪಿಂಡವ ಮಾಡಿದವ ಪಿಂಡದೊಳಿರದಂತೆ,
ಬ್ರಹ್ಮಾಂಡವ ರಚಿಸಿದವ ಬ್ರಹ್ಮಾಂಡದೊಳಿರದಂತೆ,
ಅರಿಯದ ಮನುಜರ ಅರುಹಿನಿ ಮನೆಯೊಳಿಪ್ಪ ನೋಡಾ,
ಕಪಿಲಸಿದ್ಧಮಲ್ಲೇಂದ್ರನೆಲೆ ಮಲ್ಲಶೆಟ್ಟಿ. ॥ ೫೦೬ ॥

೧೩೪೫

ಜಲ್ಲದಲ್ಲಿಪ್ಪ ಜಲವ ನೋಡಾ ;
ಮನೆಯಲ್ಲಿಪ್ಪ ಮನೆಯ ನೋಡಾ ;

ಅಹಂಕಾರದಲ್ಲಿಪ್ಪ ಅಹಂಕಾರವ ನೋಡಾ.
ಇವೆಲ್ಲ ಬಯಲಲ್ಲಿ ನಿಂದಡೆ ತೋರ್ಪವು.
ಬಯಲಲ್ಲಿ ನಿಂದು ಬಯಲ ಬಯಲ ಮಹಾಬೆಳಗಿನ ಬೆಳಗ
ನೋಡಬಲ್ಲಡೆ ಶರಣ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೦೭ ॥

೧೩೪೬

'ರೂಪಾದನುಭವಃ' ಎಂಬುದು ಸಟೆಯೇನಯ್ಯಾ ?
'ಸಗುಣಂ ನಿರ್ಗುಣಾತ್ತಂ ನ' ಎಂಬುದು ಸಟೆಯು ?
ಕಪಿಲಸಿದ್ಧಮಲ್ಲಿಕಾರ್ಜುನಲಿಂಗವೆ. ॥ ೫೦೮ ॥

೧೩೪೭

ಅನುಭವತ್ರಯ ಒಂದಾದುದು ಅನುಭವವಯ್ಯಾ.
ಒಂದಕ್ಕೆ ಮೂರೆಂಬುದು ಶ್ರುತಿಸಿದ್ಧ.
'ತ್ರಯೋ ಗುಣಾಸ್ತ್ರೀಣಿ ವಪೂಂಷಿ'
ಕಪಿಲಸಿದ್ಧಮಲ್ಲಿಕಾರ್ಜುನನ ಮಹಾಕೀಲಿನಲ್ಲಿ. ॥ ೫೦೯ ॥

೧೩೪೮

ಸೂಕ್ಷ್ಮವದು ಮೊದಲಲ್ಲೆ ನಿರ್ಮಯಲವಯ್ಯಾ.
ಸ್ಥೂಲವದು ಅಂದಂದಿಂಗೆ ನಿರ್ಮಲ ನೋಡಯ್ಯಾ.
ಅರವೇಷ ತಿರುಗುವ ಊರ ತೊಳೆಯಲೆ ಬೇಕು.
ಅಂತರಂಗ ಬಹಿರಂಗದಲ್ಲಿ ನಿರ್ಮಲ ಸದಾಚರಣೆಯೆ ಬೇಕು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೧೦ ॥

೧೩೪೯

ನಿರ್ಮಲ ಕರ್ಮವದು ಸದ್ಗತಿಗೆ ಸಾಧನ ನೋಡಾ.
ನಿರ್ಮಲ ಕರ್ಮವದು ಜ್ಞಾನಕ್ಕೆ ವರ್ಧನ ನೋಡಾ.
ನಿರ್ಮಲ ಕರ್ಮವದು ಕಪಿಲಸಿದ್ಧಮಲ್ಲಿಕಾರ್ಜುನನ
ಕೂಡುವ ಕೂಟ ನೋಡಾ. ॥ ೫೧೧ ॥

೧೩೫೦

'ಸರ್ವಂ ಶಿವಮಯಂ ಜಗತ್' ಎಂಬ ವಾಕ್ಯವನರಿಯದೆ
ಹೋಗದಿರಾ, ಮನವೆ.
'ಪಂಚತತ್ವರೂಪಾಯ' ಎಂಬ ಶ್ರುತಿವಾಕ್ಯವ ಮರೆದೆಯಲ್ಲಾ, ಮನವೆ.
'ಲಿಂಗಮಧ್ಯೇ ಜಗತ್ಸರ್ವಂ' ಎಂಬ ಮಹಾವಾಕ್ಯವ ಮರೆದೆಯಲ್ಲಾ, ಮನವೆ.
ರಜ್ಜು ಸರ್ಪ ನ್ಯಾಯ–ರಜ್ಜುವ ಸರ್ಪವೆಂದು ನಂಬಿ,
ಕಪಿಲಸಿದ್ಧಮಲ್ಲಿಕಾರ್ಜುನಂಗೆ ಬೇರೆಯಾದೆಯಲ್ಲಾ, ಮನವೆ. ॥ ೫೧೨ ॥

೧೩೫೧

ನಿರ್ಮಲ ಕರ್ಮವದು ನವರಂಧ್ರಪ್ರಕ್ಷಾಲನಂ.
ನಿರ್ಮಲ ಕರ್ಮವದು ವಸ್ತ್ರನಿರ್ಮಲತ್ವಂ.
ನಿರ್ಮಲ ಕರ್ಮವದು ಕಪಿಲಸಿದ್ಧಮಲ್ಲಿಕಾರ್ಜುನನ ಮನದಿಷ್ಟಂ. ॥ ೫೧೩ ॥

೧೩೫೨

ಎಲ್ಲರಿಗೆರಡು ಕಣ್ಣೆಂಬುದ ಲೋಕವೆಲ್ಲ ಬಲ್ಲದು.
ಎನಗೆ ಮೂರು ಕಣ್ಣೆಂಬುದ ಲೋಕವೆಲ್ಲ ಬಲ್ಲದು.
ಎರಡು ಕಣ್ಣನವನಲ್ಲ, ಮೂರು ಕಣ್ಣನವನಲ್ಲ,
ಒಂದೆ ಕಣ್ಣು ನೋಡಾ, ಅಲ್ಲಮ ಕಪಿಲಸಿದ್ಧಮಲ್ಲಿಕಾರ್ಜುನ. ॥ ೫೧೪ ॥

೧೩೫೩

ಕಣ್ಣೊಂದರಲ್ಲಿ ಮುಕ್ಕಣ್ಣನ ಬಣ್ಣವಡಗಿಹುದು.
ಆ ಬಣ್ಣದಲ್ಲಿ ಚಿದ್ಬಣ್ಣ ಚಿತ್ರಗಳಾದವು.
ಆ ಚಿತ್ರಗಳಿರವ ಚನ್ನಬಸವಣ್ಣನೆ ಬಲ್ಲನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೧೫ ॥

೧೩೫೪

ಗುರುಮುಖದಿಂದಾಗಲಿ, ಶಾಸ್ತ್ರಮುಖದಿಂದಾಗಲಿ,
ಮತ್ತಾವ ಮುಖದಿಂದಾಗಲಿ ತಿಳಿದನುಭಾವಿಯೆ ಸಂಸ್ಕಾರಿ ನೋಡಾ.
ಆತನೆ ಪರಮವೀರಶೈವ ನೋಡಾ.
ಆತನೆ ಕಪಿಲಸಿದ್ಧಮಲ್ಲಿಕಾರ್ಜುನ ನೋಡಾ, ಕಲ್ಲಯ್ಯಾ. ॥ ೫೧೬ ॥

೧೩೫೫

ತಿಳಿದು ತಿಳಿದು ವಿಷಯಕ್ಕೆ ಮೈಗೊಟ್ಟಡೆ ಅನುಭಾವಿಯೆ, ಅಯ್ಯಾ ?
ಅಳಿದು ಅಳಿದು ಆನಂದಕ್ಕೆ ಮೈಗೊಟ್ಟಡೆ ಅಜ್ಞಾನಿಯೆ, ಅಯ್ಯಾ ?
ತಿಳಿದ ಬಳಿಕ ವಿಷಯಗಳಳಿಯಬೇಕು.
ಅಳಿದ ಬಳಿಕ, ಎಳೆಯ ಚಂದ್ರಧರ ಕಪಿಲಸಿದ್ಧಮಲ್ಲಿಕಾರ್ಜುನನಾಗಲೆಬೇಕು.
॥ ೫೧೭ ॥

೧೩೫೬

ಉಟ್ಟಡೇನು ತೊಟ್ಟಡೇನು ಮಲಮೂರು ಮುಟ್ಟದನ್ನಕ್ಕ ?
ಉಟ್ಟು ತೊಟ್ಟು ಬೆಟ್ಟುಣಿಗಿ
ಕಟ್ಟಳೆ ಷಟ್ಸ್ಥಲಗುರುವರ್ಯ ಚೆನ್ನಬಸವಣ್ಣ ಮೆರೆಯಲಿಲ್ಲವೆ ?
ಕಪಿಲಸಿದ್ಧಮಲ್ಲಿಕಾರ್ಜುನಲಿಂಗವೆ. ॥ ೫೧೮ ॥

೧೩೫೭

ಎನ್ನ ಪಾದವಿಡಿದು ಮಧ್ಯತನಕ ಪ್ರಭುವು ನೋಡಾ,
ಮಧ್ಯವಿಡಿದು ಹೃದಯ ಪರಿಯಂತರ ಬಸವಣ್ಣ ನೋಡಾ ;
ಹೃದಯವಿಡಿದು ಕಂಠಪರಿಯಂತರ ಮಡಿವಾಳ ನೋಡಾ ;
ಕಂಠವಿಡಿದು ಕೇಶಾಂತತನಕ ಚೆನ್ನಬಸವಣ್ಣ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೧೯ ॥

೧೩೫೮

ಹಸ್ತವದು ಬಸವಣ್ಣ, ಜಿಹ್ವೆಯದು ಚೆನ್ನಬಸವಣ್ಣ,
ಉದರ ತೃಪ್ತಿಯದು ಅಲ್ಲಮ ನೋಡಾ,
ಎನ್ನ ನಲ್ಲ ಕಪಿಲಸಿದ್ಧಮಲ್ಲೇಶನೆ. ॥ ೫೨೦ ॥

೧೩೫೯

ಕ್ರಿಯೆಯದು ಚೆನ್ನಬಸವಣ್ಣನ ಎಡಪಾದ,
ಜ್ಞಾನವದು ಚೆನ್ನಬಸವಣ್ಣನ ಬಲಪಾದ,
ನಾನವರ ಚಮ್ಮಾವುಗೆ, ನೀನವನ ಮನೆದಾಸ, ನೋಡಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೨೧ ॥

೧೩೭೦

ಕ್ರಿಯೆ ಎಂಬುದು ಪಿಪೀಲಿಕನ ಗುಣ.
ಜ್ಞಾನವೆಂಬುದು ವಿಹಂಗದ ಗುಣ.
ಮೆಲ್ಲಮೆಲ್ಲನೆ ತಿಳಿದಲ್ಲಿ ಕ್ರಿಯೆ ಎನಿಸಿತ್ತು ;
ಏಕಕಾಲಕ್ಕಳವಟ್ಟಲ್ಲಿ ಕಪಿಲಸಿದ್ಧಮಲ್ಲಿಕಾರ್ಜುನನ ಮನೆಯ
ಸೂರೆಗೊಂಬ ತಸ್ಕರಜ್ಞಾನವೆನಿಸಿತ್ತು, ಮರುಳು ಶಂಕರಯ್ಯಾ. ॥ ೫೨೨ ॥

೧೩೭೧

ಕ್ರಿಯೆಗಳಲ್ಲಿ ಭೇದವಲ್ಲದೆ ಜ್ಞಾನದಲ್ಲಿ ಭೇದವಿಲ್ಲಯ್ಯಾ.
'ಕ್ರಿಯಾಸು ಶತಶೋ ಭೇದಾ ಜ್ಞಾನಮೇಕಂ ವಿರಾಜತೇ |
ಸುರುಚೀನಿ ಪದಾರ್ಥಾನಿ ಜಿಹ್ವೈಕೈವ ವಿರಾಜತೇ ॥'
ಎಂಬುಪನಿಷತ್ತು ಪುಸಿಯಲ್ಲ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ.
॥ ೫೨೩ ॥

೧೩೭೨

ಕ್ರಿಯಾಜ್ಞಾನ ಎಂಬುದಕ್ಕೆ ಭೇದ ತಿಲಾಂಶವಿಲ್ಲ, ನೋಡಾ.
'ದ್ವಂದ್ವೇನ ಭೇದಃ' ಎಂಬ ಆಥರ್ವಣಶಾಖೆಯದು ಸಟೆಯೆ ?
ಸೂಕ್ಷ್ಮೇಂದ್ರಿಯ ನಿಗ್ರಹದಲ್ಲಿ ಜ್ಞಾನವೆನಿಸಿತ್ತು.
"ಜ್ಞಾನಂ ವಿನಾ ಕ್ರಿಯಾ ನೋ ಭಾತಿ, ಕ್ರಿಯಾಂ ವಿನಾ ನೋ ಭಾತಿ ತತ್"
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೨೪ ॥

೧೩೭೩

ದೇಹವೆಂಬುದು ಅವಿದ್ಯೆ ಎಂಬುವರು ; ಅದೆಂತಯ್ಯಾ ?
ದೇಹ ತಾನಿಲ್ಲದಿರೆ ಆಶ್ರಯಿಸುವ ಪರಿ ಎಂತಯ್ಯಾ ?
ಅರಿದಡೆ ಆಶ್ರಯಿಸ ; ಮರೆದಡೆ ಆಶ್ರಯಿಸುವ.
'ಅಜ್ಞಾನಾದಧಶ್ಚಲತಿ' ಎಂಬುದ ಅರಿದೆನಯ್ಯಾ.
ದೇಹವದು ಜಡಸಾಕ್ಷಿ !
ಅಜಡವೆಂಬ ಭಾವ ವಚನವಲ್ಲಲ್ಲದೆ ಅನುಭಾವದಲ್ಲಿಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೨೫ ॥

೧೩೬೪

ಶರಣಸತಿ ಲಿಂಗಪತಿ ಎಂದ ಬಳಿಕ
ಲಿಂಗದ ರಾಣಿವಾಸ ನೋಡಾ, ಅವರು.
ಎಮ್ಮಕ್ಕ ಮಹಾದೇವಿ, ಎಮ್ಮಕ್ಕ ಗಂಗಾದೇವಿ,
ಹಿರಿಯಕ್ಕ ಚಿಕ್ಕಕ್ಕ ಎಂದಡೆ ವಿರೋಧ.
ವಿರೋಧಿಸಿದಡೇನು ?
ನಾನು ಚಿಕ್ಕಾಕೆ ಕಪಿಲಸಿದ್ಧಮಲ್ಲಿಕಾರ್ಜುನಂಗೆ. ॥ ೫೨೬ ॥

೧೩೬೫

ಅಯ್ಯಾ, ನಿಮ್ಮನರಿದವನ ಮಂದಿರ
ಮಹಾದೇವಿಯರಮನೆಯಯ್ಯಾ.
ಅಯ್ಯಾ, ನಿಮ್ಮನರಿದವನ ನಿರೀಕ್ಷಣೆಯಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೫೨೭ ॥

೧೩೬೬

ವಾಯುಪುತ್ರನಾಗುವುದು ಲೇಸೆ ? ಮನವೆ, ಬೇಡ ಬೇಡ !
ಹೋದಹೋದಲ್ಲಿ ವಸ್ತುರೂಪಾಗುವುದು ಲೇಸೆ ? ಮನವೆ, ಅಲ್ಲಲ್ಲ !
ವಾಯು ಬಿಟ್ಟು, ವಾಯುವೈರಿಯಾದಡೆ,
ಮನವೆ, ನಿನ್ನ ಸಾಹಸ, ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ. ॥ ೫೨೮ ॥

೧೩೬೭

'ಸರ್ವಂ ಶಿವಮಯಂ ಜಗತ್' ಎಂದ ಬಳಿಕ,
ತನ್ನ ದೇಹ ನಿರ್ಮಲಕ್ಕಿಕ್ಕಬಹುದೆ ಅಯ್ಯಾ ?
'ಸರ್ವಂ ಖಲ್ವಿದಂ ಬ್ರಹ್ಮ' ಎಂದ ಬಳಿಕ,
ಕರಣಂಗಳಾವರಣಕ್ಕೆ ಸಿಲ್ಕಿಸಬಹುದೆ,
ಕಪಿಲಸಿದ್ಧಮಲ್ಲಿಕಾರ್ಜುನಾ ? ॥ ೫೨೯ ॥

೧೩೬೮

ಮನದಲ್ಲಿ ಭೇದವಲ್ಲದೆ ವಸ್ತುವಿನಲ್ಲಿ ಭೇದವಿಲ್ಲವಯ್ಯಾ.
ಕ್ರಿಯಾಕ್ರಿಯೆಯಲ್ಲಿ ಭೇದವಲ್ಲದೆ ಜ್ಞಾನದಲ್ಲಿ ಭೇದವಿಲ್ಲವಯ್ಯಾ.

ರೂಪಾರೂಪದಲ್ಲಿ ಭೇದವಲ್ಲದೆ ಚೈತನ್ಯದಲ್ಲಿ ಭೇದವಿಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೩೦ ॥

೧೩೭೯

ಜಡಕ್ಕೆ ಜಡವ ಕಟ್ಟಿ ಅಜಡನಾದೆನೆಂಬ ಜಡ ನಾನಲ್ಲವೆ ದೇವಾ ?
ಜಡಪೂಜೆ ಸಂಪದಾದಿ ಜಾಡ್ಯಕ್ಕೆ ಒಳಗು ಅಲ್ಲವೆ ದೇವಾ ?
ಅಜಡಪೂಜೆ ಮೋಕ್ಷಕ್ಕೆ ಒಳಗು ಅಲ್ಲವೆ ದೇವಾ ?
ಜಡ ಅಜಡವೆಂದೆನಿಸದು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನದೇವಾ. ॥ ೫೩೧ ॥

೧೩೮೦

ಪೂಜೆಯು ಪರಿಯುನೊರೆವೆ ಆಲಿಸಾ ದೇವಾ :
"ಮನೋ ನಿರ್ಮಲಮಭಿಷೇಕಂ ತಸ್ಯ ನಾಹಂ ಜಡ ಇತಿ ಭಸ್ಮಧಾರಣಂ ।
ನಾಹಂ ಸಾಕ್ಷೀತ್ಯಮಲಬಿಲ್ವಂ ತನ್ಮಸ್ತಕೇ ॥"
ಇಂತಪ್ಪ ಪೂಜೆಯು ಮಾಡದೆ ಮರೆದೆ.
ಎಲೆಮರೆಯು ನೀರಸುಟ್ಟ ಬೂದಿಯುದಂ ಪೂಜಿಸಿ,
ಸಿದ್ಧಿಗಳ ಗುದ್ದಾಟಕ್ಕೊಳಗಾದವರ ಕಡೆಮೆಟ್ಟಿ ಬಿಟ್ಟಿಪ್ಪನೆ,
ಬೆಟ್ಟಜೆಪತಿ ದಿಟ್ಟ ಕಪಿಲಸಿದ್ಧಮಲ್ಲಿಕಾರ್ಜುನಾ ? ॥ ೫೩೨ ॥

೧೩೮೧

ನಾನಿಲ್ಲದಿರೆ ನೀನೆಲ್ಲಿಯುವನಯ್ಯಾ ?
ಬಾಣನ ಮನದಲ್ಲಿ ಸಿಲ್ಕಿ ಬಾಗಿಲ ಕಾಯ್ದಿರಿ ಅಣ್ಣಾ.
ಸಿಂಧುಬಲ್ಲಾಳನ ವಧುವಿನಲ್ಲಿ ಸಿಲ್ಕಿ ಸ್ವಯಂಭು ಆಳಿದಿರಿ.
ಚೋಳಿಯಕ್ಕನ ಭಕ್ತಿಯಲ್ಲಿ ಸಿಲ್ಕಿ, ಮಾಜದಿರಿ ಅಮ್ಮನವರಿಗೆ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೩೩ ॥

೧೩೮೨

ಇಕ್ಷುವಿನ ಮನದಲ್ಲಿಪ್ಪ ಕುಟಿಲ ಕೇಸರಿಯು ರೂಪಕ್ಕಂಜುವರಲ್ಲದೆ,
ರಾಗ ರಂಜನೆಗಂಜುವರೇನಯ್ಯಾ ?
ಸ್ಥಲದಲ್ಲಿಪ್ಪ ವೇಷಧಾರಿಯ ರೂಪಕ್ಕಂಜುವರಲ್ಲದೆ,
ವಿಷಯುಗುಣ–ರಂಜನೆಗಂಜುವರೇನಯ್ಯಾ,

ಕಪಿಲಸಿದ್ಧಮಲ್ಲಿಕಾರ್ಜುನಾ,
ನಿಮ್ಮ ಶರಣರೆಂಬ ಮದದಾನೆಗಳು ? ॥ ೫೩೪ ॥

೧೩೭೩

ಅರಿಷಡ್ವರ್ಗಂಗಳಳಿದವ ಶರಣನೆಂಬರು ; ಅದೆಂತಯ್ಯಾ ?
ಕಾಮವದು ಲಿಂಗಾರ್ಚನೆಯಲ್ಲಿ ;
ಕ್ರೋಧವದು ಷಣ್ಮತನಾಶದಲ್ಲಿ ;
ಲೋಭವದು ಸಮ್ಯಗ್‌ಜ್ಞಾನದಲ್ಲಿ ;
ಮೋಹವದು ಮುಕ್ತ್ಯಂಗನೆಯಲ್ಲಿ ;
ಮದವದು [ದ]ಮನದಲ್ಲಿ ;
ಮತ್ಸರವದು ಶಮನದಲ್ಲಿ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೩೫ ॥

೧೩೭೪

ಶಿಶುವಿನ ಕ್ರೀಡೆಯದು ತಾಯಿಗಲ್ಲದೆ ಅನ್ಯರಿಗುಂಟೆ ?
ಪಶುವಿನ ತಪ್ಪು ಪಶುಪತಿಯಾದವಂಗಲ್ಲದೆ ಅನ್ಯರಿಗುಂಟೆ ?
ಎನ್ನಹಂಕಾರ ನಿಮಗಲ್ಲದೆ ಜಗದ ಜಡರಿಗುಂಟೆ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೩೬ ॥

೧೩೭೫

ಜನಕ್ಕೆ ಜಂಗಮನಲ್ಲದೆ ಎನ್ನ ಮನಕ್ಕೆ ಜಂಗಮನಲ್ಲ ನೋಡಾ ;
ಎನ್ನ ಮನಕ್ಕೆ ಜಂಗಮನಲ್ಲದೆ ಎಮ್ಮ ಪುರಾತರಿಗೆ ಜಂಗಮನಲ್ಲ ನೋಡಾ ;
ಎಮ್ಮ ಪುರಾತರಿಗೆ ಜಂಗಮನಲ್ಲದೆ ಚೆನ್ನಬಸವಣ್ಣಂಗೆ ಜಂಗಮನಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೩೭ ॥

೧೩೭೬

"ಜಂಗಮೋ ಹಿ ಜಗತ್ಪೂಜ್ಯೋ ಜಂಗಮೋಹಿ ಸದಾಶಿವಃ ।
ಕ್ರೋಧಾನ್ನಾಶಯತೇ ಲೋಕಂ ಮೋಹಾಲ್ಲೋಕಂ ವಿವರ್ಧತೇ ॥"
ಇಂತಪ್ಪ ಪರಮ ಜಂಗಮದ ಪಾದಕ್ಕೆ ನಮೋ ನಮೋ ಎಂಬೆನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೩೮ ॥

೧೩೭೭

ಕರಿಕೆಯ ಕಂಡು ಪಶುಗಳಾಶ್ರಯಿಸುವವು.
ಜೌತಣ ಕಂಡು ದ್ವಿಜರಾಶ್ರಯಿಸುವರು.
ಯುದ್ಧವ ಕಂಡು ಶೂರರಾಶ್ರಯಿಸುವರು.
ಸಭೆಯ ಕಂಡು ವಿದ್ವಾಂಸರಾಶ್ರಯಿಸುವರು.
ಇವರೆಲ್ಲ ಮಾಯಾಮೂಕರಲ್ಲದೆ ಮಾಯಾರಹಿತರಲ್ಲಯ್ಯಾ.
ಕಂಡು ಕಂಡು ಕಣ್ದೆರೆದು ನೋಡದ ಮಹಾಮಹಿಮ ಜಂಗಮನ ಪಾದಕ್ಕೆ
ನಮೋ ನಮೋ ಎಂಬೆನಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೩೯ ॥

೧೩೭೮

ಜಲಪ್ರಳಯದಲ್ಲಿ ಸುಳಿಯಬಹುದು ಅನೇಕ ಯುಗಜುಗಂಗಳಲ್ಲಿ.
ನಿಮ್ಮ ಶರಣರ ಚಿತ್ತ ಬೇಸರವಾದಲ್ಲಿ
ಸುಳಿಯಬಾರದೊಂದು ನಿಮಿಷ ನೋಡಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೪೦ ॥

೧೩೭೯

ಬಿಟ್ಟ ಪದವಿಯ ಬಟ್ಟೆಗೆ ಪೋಪಾತನಲ್ಲ ನೋಡಾ, ಶರಣನು.
ಬಿಟ್ಟು ಬಿಟ್ಟು ಬಯಲಿಟ್ಟು ಅಟ್ಟೆಬಟ್ಟೆಗೊಂಡರು ಭವಕ್ಕೆ.
ಹಿಡಿಗು ಹಿಡಿದು ಭವಕ್ಕೆ ಬಾರದೆ ಭವವಿರಹಿತರಾದರು ಕಂಡೆಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಮಹಾಮಹಿಮ ಶರಣರು. ॥ ೫೪೧ ॥

೧೩೮೦

ಮನುಜರ ಮನ್ನಣೆಯದು ಮಸೆವಲಗಿನ ಗಾಯ ನೋಡಾ.
ಮನುಜರ ಮನ್ನಣೆಯದು ಪರಿಮಳಪುಷ್ಪದ ಸೋಂಕು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೪೨ ॥

೧೩೮೧

ತಿಳಿದು ನುಡಿ ಕೊಡಬೇಕಲ್ಲದೆ,
ತಿಳಿಯದ ನುಡಿಯದು ಅಪಭ್ರಂಶವಯ್ಯಾ.
[ತಿಳಿ] ನುಡಿ ಎರಡೊಂದಾದಡೆ,

ಮೃಡಮೂರ್ತಿ ಕಪಿಲಸಿದ್ಧಮಲ್ಲಿಕಾರ್ಜುನ
ನುಡಿಗೊಮ್ಮೆ ನುಡಿಯು ನೋಡಾ, ಬೊಮ್ಮಣ್ಣಾ. || ೫೪೩ ||

೧೩೮೨

ಮಾನವಿಲ್ಲದ ಭೋಜನವದು ಶ್ವಾನನ ಮಾಂಸವಯ್ಯಾ.
ಜ್ಞಾನವಿಲ್ಲದ ಕ್ರಿಯೆಯದು ಸಿದ್ಧಿಗಳಿಗೀಡಯ್ಯಾ.
ಧ್ಯಾನವಿಲ್ಲದ ಪೂಜೆಯದು ಕಾನನ ಜ್ಯೋತಿಯಯ್ಯಾ.
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ,
ನೀನಿಲ್ಲದ ಭಕ್ತಿಯದು ಚಾಂಡಾಲ ಪಾಕವಯ್ಯಾ. || ೫೪೪ ||

೧೩೮೩

ಚತುರ್ವರ್ಣಿಯಾದಡೇನು,
ಚತುರ್ವರ್ಣಾತೀತನೆ ವೀರಶೈವ ನೋಡಾ.
ಚತುರ್ವೇದಿಯಾದಡೇನು,
[ಚರಮ]ದೇಹವಳಿಯದವನೆ ಚಾಂಡಾಲ ನೋಡಾ,
ಚತುರಂಗಬಲಯುಕ್ತನಾದಡೇನು,
ಚತುರಗುಣವಿಲ್ಲದಿದ್ದಡೆ ದೇಶವನಾಳ್ವ ಪರಿಯ ನೋಡಾ.
[ಚರಮ]ದೇಹಿಯಾದಡೇನು,
ಗಜಚರ್ಮಧರ ಕಪಿಲಸಿದ್ಧಮಲ್ಲಿಕಾರ್ಜುನನ
ಪ್ರಸನ್ನವಾಗದನ್ನಕ್ಕ ಬಾಳುವೆ ನೋಡಾ. || ೫೪೫ ||

೧೩೮೪

ಸಂಪಿಗೆಗಂಧವ ಸೇವಿಸಿದಲ್ಲಿ ಭ್ರಮರ ಜನ್ಮ ಈಡಾಡಿತ್ತು.
ಕೇಸರಿ ತನ್ನ ಗಂಧಕ್ಕಾಗಿ ತನ್ನ ಜನ್ಮ ಈಡಾಡಿತ್ತು.
ಶರಣನ ಬೋಧೆ ಸೇವಿಸಿದಲ್ಲಿ ಎನ್ನ ಜನ್ಮ ಈಡಾಡಿತ್ತು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. || ೫೪೬ ||

೧೩೮೫

ಬೋಧವೆಂದಡೆ,
ಕರ್ಣವನೂದಿ ಮಂತ್ರವ ಹೇಳಿದುದು ಬೋಧವೆ ? ಅಲ್ಲಲ್ಲ !

ಬೋಧವೆಂದಡೆ,
ತನುತ್ರಯಸಾಕ್ಷಿ ನೀನೆ ಪರವಸ್ತು ಎಂಬುದೆ ನಿಜಬೋಧ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೪೭ ॥

೧೩೮೬

ಹೇಳಿದ ಬೋಧ ಶಿಲಾಲಿಪಿಯಂತಾದಡೆ,
ಶಿಲಾಸದೃಶ ನೋಡಾ ಭವಕ್ಕೆ.
ಹೇಳಿದ ಬೋಧೆ ಜಲಲಿಪಿಯಾದಡೆ,
ಜಲಸದೃಶ ನೋಡಾ ಭವಕ್ಕೆ.
ಹೇಳಿದ ಬೋಧೆ ಗಟ್ಟಿಗೊಂಡಡೆ,
ಆಳುವುದೆತ್ತ ನಿನ್ನ ಮಾಯಾಜಾಲವ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೪೮ ॥

೧೩೮೭

ಮಂತ್ರವ ಜಪಿಸಿ ಫಲವೇನಯ್ಯಾ, ಮಂತ್ರಮೂರ್ತಿ ಕಾಣದನ್ನಕ್ಕ ?
ಯಂತ್ರವ ಧರಿಸಿ ಫಲವೇನಯ್ಯಾ ಅಂತರ ರೋಗ ಪರಿಹಾರವಾಗದನ್ನಕ್ಕ ?
ತಂತ್ರವನೋದಿ ಫಲವೇನಯ್ಯಾ, ಆದರಂತರ ಮೈಗೂಡದನ್ನಕ್ಕ ?
ಶರಣನಾಗಿ ಫಲವೇನಯ್ಯಾ,
ಲಿಂಗ_ಜಂಗಮವ ಪೂಜಿಸಿ ಮೋಕ್ಷವಡೆಯದನ್ನಕ್ಕ ?
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೪೯ ॥

೧೩೮೮

ಲಿಂಗವ ಪೂಜಿಸಿದ ಫಲ ನೀಲಲೋಚನೆಗಾಯಿತ್ತು.
ಜಂಗಮವ ಪೂಜಿಸಿದ ಫಲ ಬಸವಣ್ಣಂಗಾಯಿತ್ತು.
ಮಂತ್ರವ ಪೂಜಿಸಿದ ಫಲ ಅಜಗಣ್ಣಂಗಾಯಿತ್ತು.
ಯೋಗವ ಪೂಜಿಸಿದ ಫಲ ಸಿದ್ಧರಾಮಂಗಾಯಿತ್ತು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೫೦ ॥

೧೩೮೯

ಪೂಜಾಫಲವಂತಿಂತಲ್ಲ :
'ಪೂಜಾಫಲಂ ಫಲಂ ಮನ್ಯೇ ತವ ಪಾಣಿಗ್ರಹಂ ಶಿವೇ'

ಪೂಜಾಫಲವಂತಿಂತಲ್ಲ ;
'ಪೂಜಾಫಲಂ ಫಲಂ ಮನ್ಯೇ ಮದ್ಧ್ಯಾನಾಸಕ್ತಪೂರುಷಃ'
ಎಂದು ನೀ ಹೇಳಿದ ವಾಕ್ಯ ಹುಸಿಯೇನಯ್ಯಾ
ಕಪಿಲಸಿದ್ಧಮಲ್ಲಿಕಾರ್ಜುನಾ ? ॥ ೫೫೧ ॥

೧೩೯೦

ಲಿಂಗಾಂಗಿಯಾದ ಬಳಿಕ ಭವಿಸಂಗ ಮಾಡಲಾಗದು,
ಭವಿಗೆ ದಾನವ ಕೊಡಲಾಗದು.
ಭವವಿರಹಿತ ಕಾರ್ಯವನ್ನೈದಿ, ಭವಬೀಜದ ನೆಲೆಯನಾಶ್ರಯಿಸಿದಡೆ,
ಭವ ತಪ್ಪದು ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೫೨ ॥

೧೩೯೧

ಭವಿಯೆಂದಡೆ ಲಿಂಗವಿಲ್ಲದವ ಭವಿಯೆ ? ಅಲ್ಲಲ್ಲ.
ಭವಿಯೆಂದಡೆ ವೇದವೇದಾಂತವನೋದಿ,
ಲಿಂಗವ ಧರಿಸದವ ಭವಿಯೆ ? ಅಲ್ಲಲ್ಲ.
ಅಂಗದ ಸ್ಥಿತಿಯನರಿದಡೇನಾಯಿತ್ತು ?
ಗುಣ ತಿಳಿದು ಲಿಂಗವ ಕೊಡುವ ಗುರುವಿಲ್ಲ.
ಬಹಿರಂಗದಲ್ಲಿ ಲಿಂಗವಿರಹಿತ, ಅಂತರಂಗದಲ್ಲಿ ಲಿಂಗಲೋಲುಪ್ತ.
ಹೊಲಬುಳ್ಳವನಾದಡೇನು, ತಿಳಿಯದವರಿಲ್ಲದನ್ನಕ್ಕ ?
ಸತ್ಕ್ರಿಯಾಸಾಮರಸ್ಯಕ್ಕೆ ಭವಿಯಲ್ಲದೆ ಅನುಭವಗೋಷ್ಠಿಗೆ ಭವಿಯೆ ? ಅಲ್ಲಲ್ಲ.
ಭವಿಯೆಂದಡೆ ಮದ್ಯಪಾನ ಮಾಂಸಭಕ್ಷಣ ಪರಸ್ತ್ರೀಸಂಗ
ಪರಧನಚೋರತ್ವ ನಿಜವಸ್ತು ಅಂತರತ್ವವಿದ್ದವನೆ ಭವಿಯಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೫೩ ॥

೧೩೯೨

ಎಲ್ಲ ದೇವರಂತಲ್ಲ ನೋಡವ್ವಾ ಈ ದೇವ :
ಮೊಲೆಯ ನಂಬಿ[ದ] ನಂಬಿಯಣ್ಣಂಗೆ ಮುದ್ದು ಕುಂಟಣಿಗನಾದ.
ಎಲ್ಲ ದೇವರಂತಲ್ಲ ನೋಡವ್ವಾ ಈ ದೇವ :
ಸರಳಿಲೆ ಹೊಯ್ದ ಪಾಂಡವಂಗೆ ಪಾಶುಪತಾಸ್ತ್ರವನಿತ್ತ.
ಎಲ್ಲ ದೇವರಂತಲ್ಲ ನೋಡವ್ವಾ ಈ ದೇವ :
ಕಲ್ಲಲಿಟ್ಟ ಶಂಖಿಯಂಗೆ ಕೈವಲ್ಯಪದವಿಯ ಕೊಟ್ಟನೆಂದು.

ಎಲ್ಲ ದೇವರಂತಲ್ಲ ನೋಡವ್ವಾ ಈ ದೇವ :
ಒಬ್ಬ ಬಿಲ್ಲೇಶಯ್ಯನಿಂದ ಸಹಸ್ರ ಕಂಡುಗ
ಕಪಿಲೆಯಮೃತವ ಕೊಂಡ ನೋಡವ್ವಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೫೪ ॥

೧೩೯೩

ಲಿಂಗ ಹೋದಡೇನು, ಗುರುವುಂಟೆಂಬ ಬಾಲಭಾಷೆಯು ಕೇಳಲಾಗದು ;
ಕೇಳಿದವನ ಸಂಗ ಸಿಂಗಿ ಕಾಳಕೂಟ ವಿಷವು ;
ಆತನ ಸಂಗದಲ್ಲಿರಲು ಪಂಚಮಹಾಪಾತಕ ತಪ್ಪದು.
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೫೫ ॥

೧೩೯೪

ಲಿಂಗವ ಧರಿಸಿದ ಯೋಗಿಗೆ ಅಂಗನೆಯರು ಲಿಂಗದ ರಾಣಿವಾಸ.
ಲಿಂಗವ ಧರಿಸಿದ ಭೋಗಿಗೆ ಕಾಷಾಯಾಂಬರಧಾರಿಗಳು ರುದ್ರಗಣಂಗಳು.
ಲಿಂಗವ ಧರಿಸಿದ ಜೀವಜಾಲವು ಕಪಿಲಸಿದ್ಧಮಲ್ಲಿಕಾರ್ಜುನನೆಂದು
ನಂಬಿದೆ ನೋಡಾ, ಗುರುವೆ ಚೆನ್ನಬಸವಣ್ಣನೆ. ॥ ೫೫೬ ॥

೧೩೯೫

ಉದಕವೆಲ್ಲ ಒಂದೆ :
ಈಚಲವ ಆಶ್ರಯಿಸಿ ಮದ್ಯಪಾನವೆನಿಸಿತ್ತು ;
ಸುರತರುವ ಆಶ್ರಯಿಸಿ ಅಮೃತವೆನಿಸಿತ್ತು.
ದೇಹವೆಲ್ಲ ಒಂದೆ :
ಅಂಗನೆಯರ ಆಶ್ರಯಿಸಿ ಭವಕ್ಕೆ ಬೀಜವಾಯಿತ್ತು. ;
ಲಿಂಗವ ಆಶ್ರಯಿಸಿ ಭವಾರಣ್ಯಕ್ಕೆ ದಾವಾನಲವೆನಿಸಿತ್ತು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ, ॥ ೫೫೭ ॥

೧೩೯೬

ಬಂದ ಪದಾರ್ಥವ ನೋಡಿ ಹಿಗ್ಗುವನಲ್ಲ ಶರಣ :
ಬಾರದ ಪದಾರ್ಥವನಿಚ್ಛೈಸಿ ಕುಗ್ಗುವನಲ್ಲ ಶರಣ.
ಶರಣನ ನಡೆಯೆ ಲಿಂಗರೂಪು ;
ಶರಣನ ನುಡಿಯೆ ಲಿಂಗಪ್ರಸಾದ.

ಪೂಜಿಸಿದಡೆ ಹರ್ಷಿಯಾಗನು, ಪೂಜಿಸದಿರೆ ಕ್ರೋಧಿಯಾಗನು.
ಬೆಳೆಯುವ ಹೊಲ ಪ್ರಾಣಿಮಾತ್ರಕ್ಕಲ್ಲದೆ ತನ್ನೊಳಗಿಲ್ಲ.
ಪೂಜಿಸಿದ ಫಲ ಭಕ್ತಂಗಲ್ಲದೆ ಲಿಂಗಕ್ಕಿಲ್ಲ.
ಬಂದ ಪದಾರ್ಥ ಲಿಂಗವೆಂದನಲ್ಲದೆ ಪದಾರ್ಥವೆಂದು ಭಾವಿಸಲಿಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಶರಣನು. ॥ ೫೫೮ ॥

೧೩೯೭

ಶರಣ ಎಂಬ ಶಬ್ದವಂತಿಂತಲ್ಲ.
[ನೋಃಣಃ] ಎಂಬ ಸೂತ್ರದಿಂದ ಶರಣನೆನಿಸಿದನು.
ಶರ ಎಂದರೆ ಬಾಣ, ನ ಎಂದಡೆ ಅಂಥ ಮನ್ಮಥಬಾಣವಿಲ್ಲದವ.
[ಅವ]ನೇ ಶರಣ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೫೯ ॥

೧೩೯೮

ಭಸ್ಮವ ಪೂಸಿದಲ್ಲಿ ಶರಣನೆ ? ಅಲ್ಲಲ್ಲ ;
ಮಾಡುವ ಕ್ರಿಯೆ ಭಸ್ಮವಾದಡೆ ಶರಣ.
ನೋಡುವ ಕೃತ್ಯ ರುದ್ರಾಕ್ಷಿಯಾದಡೆ ಶರಣ ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥ ೫೬೦ ॥

೧೩೯೯

ಶರಣನ ಸಂಭ್ರಮ ಲಿಂಗಪೂಜೆ, ಜಂಗಮದಾಸೋಹ ನೋಡಯ್ಯಾ.
ಶರಣನ ಸಂಭ್ರಮ ಅನುಭವ ಓದಿ ಭವ ಗೆಲಿಯುವುದು.
ಆದೆ ಸಂಭ್ರಮಕಾರ್ಯ ನೋಡಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೫೬೧ ॥

೧೪೦೦

ಶರಣನ ಜಾಗ್ರತಿಯೆ ಶಿವರಾತ್ರಿ ಕಂಡಾ ಮನವೆ.
ಶರಣನ ನಿದ್ರೆಯೆ ಶಿವಯೋಗಸಮಾಧಿ ಕಂಡಾ ಮನವೆ.
ಶರಣನ ನುಡಿಯೆ ಶ್ರೀರುದ್ರ ಪಂಚಬ್ರಹ್ಮೋಪನಿಷತ್ತು ಕಂಡಾ ಮನವೆ.
ಶರಣನ ನಡೆಯೆ ಮುಕ್ತಿಸೋಪಾನ ಕಂಡಾ ಮನವೆ.
ಶರಣನ ಭೋಜನವೆ ಕಪಿಲಸಿದ್ಧಮಲ್ಲಿಕಾರ್ಜುನನರ್ಪಣ ಕಂಡಾ ಮನವೆ.
॥ ೫೬೨ ॥

೧೪೦೧

ಶರಣನ ಇರವ ನೆನೆನೆನೆದು ಶರಣನಾದೆನಯ್ಯಾ.
ಇನ್ನು ಮರೆದಡೆ ನಿಮ್ಮ ಶರಣ ಚೆನ್ನಬಸವಣ್ಣನಾಣೆ.
ಇನ್ನು ಈ ಭವಕ್ಕೆ ಬಂದೆನಾದಡೆ, ಹಲ್ಲುದೋರೆ ಮೂಗ ಕೊಯ್ಯಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೬೩ ॥

೧೪೦೨

ಆಕಾಶದಲ್ಲಿಯ ಕಪ್ಪು ಅಂಗೈ ತಿನ್ನೆಂದಡೆ
ತಿಂಬುವುದೆ ಅಯ್ಯಾ ?
ಮರೀಚಿಯ ನೀರು ಮಡಿಯ ಕ್ರೀಯಕ್ಕೆ ಬಾ ಎಂದಡೆ
ಬರುವುದೇನೊ ಅಯ್ಯಾ ?
ಎಲೆ ಲಿಂಗಮೂರ್ತಿ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೬೪ ॥

೧೪೦೩

ಶರಣನ ನೋಟ ಭವದ ಕಾಟ ನೋಡಯ್ಯಾ.
ಶರಣನ ದೃಷ್ಟಿ ಶಿವದೃಷ್ಟಿ ನೋಡಯ್ಯಾ.
ಶರಣನ ದೇಹ ಶಿವದೇಹ ನೋಡಯ್ಯಾ.
ಶರಣನ ಪಾದುಕೆ ಎಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ಚಮ್ಮಾವುಗೆ ನೋಡಾ,
ಮಡಿವಾಳ ಮಾಚಣ್ಣಾ. ॥ ೫೬೫ ॥

೧೪೦೪

ಶರಣನ ನಡೆ ಅಂತಿಂತೆನಬೇಡ.
ಶರಣ ಮಾದರ ಚೆನ್ನಯ್ಯನ ನಡೆ ಯಾವ ಆಗಮದಲ್ಲಿ ಹೇಳಿತ್ತು ?
ಶರಣ ಡೋಹರ ಕಕ್ಕಯ್ಯನ ನಡೆ ಯಾವ ವೇದದಲ್ಲಿ ಹೇಳಿತ್ತು ?
ನಡೆದ ಆಚರಣೆಯೆ ಸಚ್ಛೀಲ ;
ನುಡಿದ ವಾಕ್ಯವೆ ಮೋಕ್ಷಪ್ರದಾಯಕ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ.
॥ ೫೬೬ ॥

೧೪೦೫

ಸ್ಥಲವಿಡಿದಾಚರಿಸಬೇಕೆಂಬನ ಭಾಷೆ ಬಾಲಭಾಷೆ.
ಭಕ್ತನಾಗಿ, ಭಕ್ತಸ್ಥಲವಾವರಿಸುವುದದು ಯೋಗ್ಯವಯ್ಯಾ.

ಭಕ್ತನಾಗಿ, ಮಹೇಶಸ್ಥಲ ಅಳವಡಬಾರದೇನಯ್ಯಾ ?
ಭಕ್ತನಾಗಿ, ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯಸ್ಥಲ
ಅಳವಡಬಾರದೇನಯ್ಯಾ ?
ಮನೆಯಲ್ಲಿದ್ದ ಲೆತ್ತಗಳು ಮನೆಯ ಮೀರಿ ಮೀರಿ ಹಾರಬಾರದೇನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ ? ॥ ೫೬೭ ॥

೧೪೦೬

ಷಟ್‌ಸ್ಥಲವೆಂಬ ಷಣ್ಮುಖಮುದ್ರೆಯೊಳು,
ನವವಿಧಭಕ್ತಿ ಎಂಬ ನವನಾದ ಕೇಳದವ ಶರಣನೆ ಅಯ್ಯಾ ?
ಷಟ್‌ಸ್ಥಲವೆಂಬ ಷಣ್ಮುಖಮುದ್ರೆಯೊಳು,
ಷಡಕ್ಷರವೆಂಬ ಮಂತ್ರವ ಜಪಿಸಿ,
ಷಡ್ವಿಧಲಿಂಗವ ಪೂಜಿಸದವ ಶರಣನೆ ಅಯ್ಯಾ ?
ಷಟ್‌ಸ್ಥಲವೆಂಬ ಷಣ್ಮುಖಮುದ್ರೆಯೊಳು,
ಬೀಜಾಕ್ಷರತ್ರಯಂಗಳನೋದಿ ಷಡಕ್ಷರಂಗಳ ಸಾಧಿಸಿ,
ಷಣ್ಮುಖಶಿವನಾಗದವ ನಿಮ್ಮ ಶರಣನೆ ಅಯ್ಯಾ ?
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೬೮ ॥

೧೪೦೭

ಶರಣಸ್ಥಲ ನೋಡುವಡೆ ಬಹು ಸುಲಭ ನೋಡಯ್ಯಾ.
ಶರಣನು ತಿಳಿದು ತಿಳಿದು ಆಚರಿಪನು,
ಮರೆದು ಮರೆದು ಆಚರಿಸನು.
ಜ್ಞಾನದಿಂದ ಭೇದವಲ್ಲದೆ, ದೇಹದಿಂದ ಭೇದವಿಲ್ಲ ನೋಡಯ್ಯಾ.
ಶರಣ ತನ್ನ ದೇಹವನೆ ದೇಹವೆಂದು ಜಡವೆಂದು
ಪ್ರಳಯಕ್ಕೊಳಗು ಮಾಡಿಟ್ಟ.
ಶರಣನ ದೇಹವೆಲ್ಲ ಪಂಚಾಕ್ಷರಮಯ ನೋಡಾ :
ನಕಾರವೆ ಅಸ್ಥಿ, ಮಕಾರವೆ ಮಾಂಸ, ಶಿಕಾರವೆ ತ್ವಕ್ಕು
ವಕಾರವೆ ನಾಡಿ, ಯಕಾರವೆ ರೋಮ.
ನಕಾರವೆ ರಸ, ಮಕಾರವೆ ರುಧಿರ, ಶಿಕಾರವೆ ಶುಕ್ಲ
ವಕಾರವೆ ಪಿತ್ತ, ಯಕಾರವೆ ಶ್ಲೇಷ್ಮ .
ನಕಾರವೆ ಕ್ಷುಧೆ, ಮಕಾರವೆ ತೃಷ್ಣೆ, ಶಿಕಾರವೆ ನಿದ್ರೆ
ವಕಾರವೆ ಆಲಸ್ಯ, ಯಕಾರವೆ ಸಂಗ.

ನಕಾರವೆ ಪರಿವ, ಮಕಾರವೆ ಪಾರುವ, ಶಿಕಾರವೆ ಸುಳಿವ,
ವಕಾರವೆ ಹಬ್ಬುವ, ಯಕಾರವೆ ಅಗಲುವ [ಗುಣಂಗಳು].
ನಕಾರವೆ ರಾಗ, ಮಕಾರವೆ ದ್ವೇಷ, ಶಿಕಾರವೆ ಭಯ,
ವಕಾರವೆ ಲಜ್ಜೆ, ಯಕಾರವೆ ಮೋಹ.
ಕ್ಲಂ ಕ್ಲೀಂ ಎಂಬುದ ಎಚ್ಚು, ಕಠಿಣ ಮೃದುವಿಗೆ ಇಟ್ಟ ನೋಡಾ
ಕ್ಲಂ ಕ್ಲೀಂ ಎಂಬುವ ಉಷ್ಣ ಚಲನೆಗೆ ಸೇರಿಸಿದ ನೋಡಾ.
ನಮಃಶಿವಾಯ ಎಂಬುದ
ಗಂಧ ರಸ ರೂಪು ಸ್ಪರ್ಶ ಶಬ್ದಕ್ಕೆ ಸಂಬಂಧಿಸಿದ ನೋಡಾ.
ನಮಃಶಿವಾಯ ಎಂಬುದ
ಪಾಯು ಗುಹ್ಯ ಪಾದ ಪಾಣಿ ವಾಕ್ಕಿಗೆ ಸಂಬಂಧಿಸಿದ ನೋಡಾ.
ನಮಃಶಿವಾಯ ಎಂಬುದ
ನಾಸಿಕ ಜಿಹ್ವೆ ನೇತ್ರ ತ್ವಕ್ಕು ಶ್ರೋತ್ರಕ್ಕೆ ಸಂಬಂಧಿಸಿದ ನೋಡಾ.
ನಮಃಶಿವಾಯ ಎಂಬುದ
ಪ್ರಾಣ ಅಪಾನ ವ್ಯಾನ ಉದಾನ ಸಮಾನಕ್ಕೆ ಸಂಬಂಧಿಸಿದ ನೋಡಾ.
ನಮಃಶಿವಾಯ ಎಂಬುದ
ಚಿತ್ತ ಬುದ್ಧಿ ಅಹಂಕಾರ ಮನ ಜ್ಞಾನಕ್ಕೆ ಸಂಬಂಧಿಸಿದ ನೋಡಾ.
ಈ ರೀತಿಯಿಂದರಿದ ಶಿವತತ್ತ್ವ ತಾನಾಗಿ ನಿಂದ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೬೯ ॥

೧೪೦೮

ಬಂದು ಬಂದು ಹೋಗದಿರಾ, ಮನವೆ.
ನಿಂದು ನಿಂದು ನಡೆಯದಿರಾ, ಮನವೆ.
ಬಂದು ಬಂದು ನೀನಿಂಥುದರ
ಕಪಿಲಸಿದ್ಧಮಲ್ಲಿಕಾರ್ಜುನನ ಪೂಜಿಸು, ಮನವೆ. ॥ ೫೭೦ ॥

೧೪೦೯

ಬಂದುದದು ಬರಲಿ, ಬಾರದದು ಬರಲಿ.
ದೇವ ಬರಬಹುದು ಬರಬಹುದೆ ?
ಬಲ್ಲವನಾದ ಬಳಿಕ ಬರಬಾರದು ಬರಬಾರದು.
ಬರಬಾರದು ಬಲ್ಲವನಾದ ಬಳಿಕ.
ಕಪಿಲಸಿದ್ಧಮಲ್ಲನ ಮಾಯೆಯ ಎಡೆಯಾಟಕ್ಕೆ. ॥ ೫೭೧ ॥

೧೪೧೦

ಅನುಭವವೆಂಬುದದು ಅನುಭಾವಿಕಗಲ್ಲದೆ
ಹೊತ್ತಗೆಯಲ್ಲಿಲ್ಲ ನೋಡಾ, ಮಾನವಾ,
ರತ್ನಂಗಳು ಸಮುದ್ರದಲ್ಲಲ್ಲದೆ
ಕೀಳು ಕುಲ್ಯಾದಿಗಳಲ್ಲಿಲ್ಲ ನೋಡಾ, ಮಾನವಾ.
ನವಮಂತ್ರಂಗಳ ಮರ್ಮವದು ಗುರುಮುಖದಲ್ಲಲ್ಲದೆ,
ಬರಿಯ ಪುರಾಣಂಗಳಲ್ಲಿಲ್ಲ ನೋಡಾ, ಮಾನವಾ.
ಇಂದಿನ ಪ್ರಮಥರು ಮುಂದೆ ಬಂದಹರೆಂಬ
ಭ್ರಮೆ ಬೇಡ ನೋಡಾ, ಮಾನವಾ.
ನೀನಂದಿಂಗೆನ್ನದೆ ಕಪಿಲಸಿದ್ಧಮಲ್ಲಿಕಾರ್ಜುನನ ನಂಬು ನೋಡಾ, ಮಾನವಾ.
॥ ೫೭೨ ॥

೧೪೧೧

ಮಣ್ಣೆಲ್ಲ ಮಹಾದೇವನ ಸದ್ಯೋಜಾತಮುಖ ನೋಡಾ.
ನೀರೆಲ್ಲ ಮಹಾದೇವನ ವಾಮದೇವಮುಖ ನೋಡಾ.
ಪ್ರಳಯಾಗ್ನಿಯೆಲ್ಲ ಮಹಾದೇವನ ಅಘೋರಮುಖ ನೋಡಾ.
ಮಾರುತವೆಲ್ಲ ಮಹಾದೇವನ ತತ್ಪುರುಷಮುಖ ನೋಡಾ.
[ಆಕಾಶವೆಲ್ಲ ಮಹಾದೇವನ ಈಶಾನಮುಖ ನೋಡಾ].
ಆತ್ಮವೆಲ್ಲ ಮಹಾದೇವನ ಗೋಪ್ಯಮುಖ ನೋಡಾ.
'ಸರ್ವಂ ಶಿವಮಯಂ ಜಗತ್ತೆಂ'ಬ ಶ್ರುತಿಶಾಖೆ ಪುಸಿಯಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೭೩ ॥

೧೪೧೨

'ಯದ್ದೃಷ್ಟಂ ತನ್ನಷ್ಟಂ'
ಎಂಬ ಶ್ರುತಿವಾಕ್ಯವ[ನ]ನರ್ಥವ ಮಾಡಿ ಮುಳುಗದಿರಾ, ಮನವೆ.
ಭೇದಬುದ್ಧಿಯಿಂದರಿವುದದೆ ನಷ್ಟ ನೋಡಾ, ಮನವೆ.
ಭೇದವಳಿದು ಭವವಿರಹಿತಮೂರ್ತಿಯ
ಪಂಚತತ್ವವೆಂದು ನಂಬು ಕಂಡಾ, ಮನವೆ.
'ಸರ್ವಂ ಕಪಿಲಸಿದ್ಧಮಲ್ಲಿಕಾರ್ಜುನಮಯಂ ಜಗತ್'' ಎಂಬುದು
ಪುಸಿಯೆ ಮನವೆ ? ॥ ೫೭೪ ॥

೧೪೧೩

'ತದನುಸರಣಾತ್ ಜನ್ಮ ಜನ್ಮ' ಎಂಬುದು ಹುಸಿಯಲ್ಲ,
ಹುಸಿಯಲ್ಲ, ನೋಡಯ್ಯಾ.
ಭೇದಬುದ್ಧಿಯಿಂದಲ್ಲದೆ ಅಭೇದಬುದ್ಧಿಗೆ ತೋರಬಾರದು.
'ಸರ್ವಂ ಕಪಿಲಸಿದ್ಧಮಲ್ಲಿಕಾರ್ಜುನಮಯಂ ಜಗತ್' ಎಂಬುದು
ನಿಶ್ಚಯ ನೋಡಯ್ಯಾ, ಎಲೆ ಲಿಂಗವೆ. ॥ ೫೭೫ ॥

೧೪೧೪

ಶರಣನ ವಾಗ್ರಚನಪ್ರತಾಪಸ್ಥಲ
ತರ್ಕಿಸಿದಲ್ಲಿ ವಾದಿಸಿ ಶಿಖಾಮುದ್ರೆ ಸಾಧಿಸುವವರೊಂದು ಕೋಟಿ.
ವೇದಾಂತದಲ್ಲಿ ವಾದಿಸಿ ಶಿಖಾಮುದ್ರೆಯ ಸಾಧಿಸುವವರೊಂದು ಕೋಟಿ.
ಶರಣನ ವಾದಿಸಿ ಶಿಖಾಮುದ್ರೆಯ ಸಾಧಿಸುವದದು
ಶರಣನ ಬಿಟ್ಟು ಶರ ತಾಗಿದವರಲ್ಲೋರ್ವರಿಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೭೬ ॥

೧೪೧೫

ತಿಳಿಯದ ಜನರು ಆವು ಶಿವನಲ್ಲ, ಜಡಜೀವಿಗಳು ಎಂಬುವರು.
ಅದೆಂತಯ್ಯಾ 'ಪಂಚತತ್ತ್ವಂ ಮುಖೋದ್ಭೂತಂ' ಎಂಬಾಗಮವಾಕ್ಯಸಿದ್ಧಿ ?
ಪಂಚತತ್ತ್ವಂಗಳೆಲ್ಲ ಶಿವನ ಪಂಚಮುಖದಿಂದಾದವು.
ಆ ಪಂಚತತ್ತ್ವದಿಂದ ಸಕಲ ಚರಾಚರಬ್ರಹ್ಮಾಂಡವಾಯಿತ್ತಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಲೀಲೆಯಿಂದ ಕಲ್ಲಯ್ಯಾ. ॥ ೫೭೭ ॥

೧೪೧೬

ಲೀಲೆಯದು ಪರಬೊಮ್ಮದ ಇಚ್ಛೆ.
ಇಚ್ಛೆಯದು ಸಕಲ ಜೀವಜಾಲೋತ್ಪತ್ತಿ.
ಸಕಲ ಜೀವಜಾಲೋತ್ಪತ್ತಿಯದು ಜಗದ್ರಚನೆ.
ಜಗದ್ರಚನೆಯದು ಜಗತ್ಪ್ರಳಯ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೭೮ ॥

೧೪೧೭

ಶಿವಂಗೆ ಪಂಚಮುಖವೆಂಬುದ ಮೂಲೋಕವೆಲ್ಲ ಬಲ್ಲುದು ;
ನರಂಗೆ ಪಂಚಮುಖವೆಂಬುದ ಆರೂ ಅರಿಯರು.
ಮುಂಭಾಗವದು ಸದ್ಯೋಜಾತ, ಬಲಭಾಗವದು ತತ್ಪುರುಷ,
ಎಡಭಾಗವದು ಅಘೋರ, ಹಿಂಭಾಗವದು ವಾಮದೇವ,
ಮಧ್ಯಭಾಗವದು ಕಪಿಲಸಿದ್ಧಮಲ್ಲಿಕಾರ್ಜುನನ ಈಶಾನ್ಯಮುಖ
ನೋಡಾ, ಕಲ್ಲಯ್ಯಾ. ॥ ೫೭೯ ॥

೧೪೧೮

ಬ್ರಾಹ್ಮಣನ ಉತ್ಪತ್ತಿ ಸದ್ಯೋಜಾತಮುಖದಿಂದಾಯಿತ್ತು.
ಕ್ಷತ್ರಿಯನ ಉತ್ಪತ್ತಿ ವಾಮದೇವಮುಖದಿಂದಾಯಿತ್ತು.
ವೈಶ್ಯನ ಉತ್ಪತ್ತಿ ಅಘೋರಮುಖದಿಂದಾಯಿತ್ತು.
[ಶೂದ್ರನ ಉತ್ಪತ್ತಿ ತತ್ಪುರುಷಮುಖದಿಂದಾಯಿತ್ತು.]
ಲಿಂಗಾಂಗಿಯ ಉತ್ಪತ್ತಿ ಈಶಾನ್ಯಮುಖದಿಂದಾಯಿತ್ತು.
ಪ್ರಮಥರ ಉತ್ಪತ್ತಿ ನಿರಂಜನ ಪ್ರಣವದ ಘೋಷವುಳ್ಳ
ಕಪಿಲಸಿದ್ಧಮಲ್ಲಿಕಾರ್ಜುನನ ಗೋಪ್ಯಮುಖದಿಂದಾಯಿತ್ತು
ನೋಡಾ, ಕಲ್ಲಯ್ಯಾ. ॥ ೫೮೦ ॥

೧೪೧೯

ಜನ್ಮಕ್ಕೊಮ್ಮೆ ಬಂದು 'ಶಿವಾಯನಮಃ' ಎಂದಡೆ ಸಾಲದೆ ?
ಜನ್ಮಕ್ಕೊಮ್ಮೆ ಬಂದು 'ಹರಾಯ ನಮಃ' ಎಂದಡೆ ಸಾಲದೆ ?
ಜನ್ಮಕ್ಕೊಮ್ಮೆ ಬಂದು ಬಸವನ ಪ್ರಸಾದವ ತೆಗೆದುಕೊಂಡಡೆ ಸಾಲದೆ ?
ಜನ್ಮಕ್ಕೊಮ್ಮೆ ಬಂದು ಚೆನ್ನಬಸವಣ್ಣನ ಪಾದೋದಕ[ವ]
ತೆಗೆದುಕೊಂಡಡೆ ಸಾಲದೆ ?
ಜನ್ಮಕ್ಕೊಮ್ಮೆ ಬಂದು ಪ್ರಭುವಿನ ಪಾದಕ್ಕೆ ವಂದಿಸಿದಡೆ ಸಾಲದೆ ?
ಜನ್ಮಕ್ಕೊಮ್ಮೆ ಬಂದು ಮಡಿವಾಳಣ್ಣನ ಅನುಭವದಲ್ಲಿದ್ದಡೆ ಸಾಲದೆ ?
ಜನ್ಮಕ್ಕೊಮ್ಮೆ ಬಂದು ಕಪಿಲಸಿದ್ಧಮಲ್ಲಿಕಾರ್ಜುನನ ಪೂಜಿಸಿದಡೆ
ಸಾಲದೇನೋ ಕಲ್ಲಯ್ಯಾ ! ॥ ೫೮೧ ॥

೧೪೨೦

ಗುರು ಏರಿದ ಮಂಚವನೇರಿದೆನಾದಡೆ,
ಕಾಲ್ಗಳು ಹರಿದು ಹೋಗಲಿ ದೇವಾ.

ಗುರು ಹೊದ್ದ ವಸ್ತ್ರವ ಹೊದ್ದೆನಾದಡೆ,
ಚರ್ಮವು ಸುಲಿದು ಹೋಗಲಿ ದೇವಾ.
ಗುರು ಮುಟ್ಟಿದ ಪದಾರ್ಥವ ಮುಟ್ಟಿದೆನಾದಡೆ,
ಪುಳುಗೊಂಡವ ಮಾಡಲಿ ಕಪಿಲಸಿದ್ಧಮಲ್ಲಿಕಾರ್ಜುನದೇವ. ॥ ೫೮೨ ॥

೧೪೨೧

ಹೊನ್ನು ಬಿಡದನ್ನಕ್ಕ ಗುರುಪಾದೋದಕ ಸಲ್ಲದು.
ಮಣ್ಣು ಬಿಡದನ್ನಕ್ಕ ಲಿಂಗಪಾದೋದಕ ಸಲ್ಲದು.
ಹೆಣ್ಣು ಬಿಡದನ್ನಕ್ಕ ಜಂಗಮಪಾದೋದಕ ಸಲ್ಲದು.
ಈ ಸರ್ವವು ಅಳಿಯದನ್ನಕ್ಕ,
ಕಪಿಲಸಿದ್ಧಮಲ್ಲಿಕಾರ್ಜುನನಿಂಬುಗೊಡನು ಮಹಾಬಯಲಲ್ಲಿ, ಕಲ್ಲಯ್ಯಾ.
॥ ೫೮೩ ॥

೧೪೨೨

ಶರಣನ ಕೂಡ ವಾದ ಸಲ್ಲದು ಸಲ್ಲದು ನೋಡಾ.
ಆತನ ನಡೆ ಬೇರೆ, ಆತನ ನುಡಿಗಡಣ ಬೇರೆ.
ಕ್ರಿಯೆವಿಡಿದು ಆಚರಿಸಿದಲ್ಲಿ [ಜ್ಞಾನವಿಡಿದು ವಾದಿಸುವ] ;
ಜ್ಞಾನವಿಡಿದು ಆಚರಿಸಿದಲ್ಲಿ ಕ್ರಿಯೆವಿಡಿದು ವಾದಿಸುವ.
ನಿರ್ದ್ವಂದ್ವನಾಗಿ ನಿಂದಲ್ಲಿ ತೋರಿದ ಕಪಿಲಸಿದ್ಧಮಲ್ಲಿಕಾರ್ಜುನನೆಂದು
ಡಂಗುರಹೊಯ್ದು ನಾಟ್ಯವಾಡುವ. ॥ ೫೮೪ ॥

೧೪೨೩

ಜಂಗಮವಾಗಿ ಫಲವೇನು,
ನೋಡಿ ಮನದೆರೆದು ಮಾತನಾಡಿಸಿ
ಜನಜನನವಿಪಿನದಾವಾನಲವಾಗದನ್ನಕ್ಕ ?
ಜಂಗಮವಾಗಿ ಫಲವೇನು,
ಭಕ್ತ ತನುತಾಪತ್ರಯುವ ನೋಡಿ ಮನದೆರೆದು
ಮಾತನಾಡಿಸಿ ಮರುಗದನ್ನಕ್ಕ ?
ಜಂಗಮವಾಗಿ ಫಲವೇನು,
ಭಕ್ತ ವಾಂಛಿತಾರ್ಥಂಗಳನರಿದು, ಪೂಜಾಮುಖದಿಂ ಭೂತಿಯ ಕೊಟ್ಟು,
ಆತನ ಪ್ರಪಂಚ ಸಂಭ್ರಮವ ನೋಡದನ್ನಕ್ಕ ?

ಜಂಗಮವಾಗಿ ಫಲವೇನಯ್ಯಾ,
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ಕೂಡಿ,
ಸುಭಕ್ತರ ಹಸ್ತದಲ್ಲಿ ಕೊಟ್ಟು ಮೋಹ ಮಾಡದನ್ನಕ್ಕ ? ॥ ೫೮೫ ॥

೧೪೨೪

ಆ ದೇವ ಬಂದಡೆ ಈ ದೇವಿಯ ಸಂಭ್ರಮ ನೋಡಾ !
ಈ ದೇವಿ ಹೋದಡೆ ಆ ದೇವನ ಮನೋವ್ಯಾಕುಲ ನೋಡಾ !
ಈ ದೇವಿಯಿಲ್ಲದಿರ್ದಡೆ ಆ ದೇವ ಸೈರಿಸನು,
ಆ ದೇವನಿಲ್ಲದಿರೆ ಈ ದೇವಿ ಸೈರಿಸಳು.
ಒಂದರಲ್ಲಲ್ಲದೆ ಎರಡರ್ಥದಲ್ಲಿ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ.
॥ ೫೮೬ ॥

೧೪೨೫

ಮುಟ್ಟಿಹರೆಂದು ಬಟ್ಟೆಯನ್ನುಲ್ಲಂಘಿಸುವರ ನೋಡಾ !
ನೋಡಿ ನೋಡಿ ನಾಚಿತ್ತಯ್ಯಾ ಎನ್ನ ಮನ.
ಮುಟ್ಟಿದ ಪರುಷ ಪಾಷಾಣವಾಗುವುದೆ ಅಯ್ಯಾ ?
ಮಾಡಬಾರದೆಂದು ಸಂದೇಹವುಳ್ಳಡೆ ಮಹೇಶಸ್ಥಲವೆಂತಯ್ಯಾ ?
ಮುಟ್ಟಬಾರದು ಮುಟ್ಟಬಾರದು ಮಲತ್ರಯಂಗಳ.
ಮುಟ್ಟದ ಬಟ್ಟಬಯಲು ಗಟ್ಟಿಗೊಂಡಚ್ಚ ಮಹೇಶನ ತೋರಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೮೭ ॥

೧೪೨೬

ಮುಟ್ಟಿನರೆಂದು ಶಿರಮುಟ್ಟ ನೀರು ಮುಟ್ಟಿದ ಬಳಿಕ
ಬಟ್ಟಬಯಲಾದೆಯೇನಯ್ಯಾ, ಮನವೆ ?
ಮುಟ್ಟಬಾರದೆಂದು ಸಂಶಯ ತೋರ್ಪಡೆ,
ಮುಟ್ಟಿದ ಎಲ್ಲಾ ದುರ್ಮಲ ಭಾಂಡ, ಮನವೆ.
ಸಂಕಲ್ಪ ವಿಕಲ್ಪಂಗಳಳಿದು,
ಬೆಟ್ಟಜಾಪತಿ ಕಪಿಲಸಿದ್ಧಮಲ್ಲಿಕಾರ್ಜುನನಾಗಿ ಬದುಕು, ಮನವೆ. ॥ ೫೮೮ ॥

೧೪೨೭

ಶಿಷ್ಯನಿಲ್ಲದಡೆ ಗುರು ಎಲ್ಲಿಹನಯ್ಯಾ ?
ಪೂಜಕನಿಲ್ಲದಡೆ ಲಿಂಗವೆಲ್ಲಿಹುದಯ್ಯಾ ?
ಭಕ್ತನಿಲ್ಲದಡೆ ಜಂಗಮವೆಲ್ಲಿಹನಯ್ಯಾ ?
ಜಲವಿಲ್ಲದಡೆ ಪಾದೋದಕವೆಲ್ಲಿಹುದಯ್ಯಾ ?
ಧೇನುವಿಲ್ಲದಡೆ ಭೂತಿಯೆಲ್ಲಿಹುದಯ್ಯಾ ? ?
ತ್ರೈಪುರವಿಲ್ಲದಡೆ ರುದ್ರಾಕ್ಷಿಗಳೆಲ್ಲಿಹವಯ್ಯಾ ?
ವರ್ಣಂಗಳಿಲ್ಲದಡೆ ಮಂತ್ರಂಗಳೆಲ್ಲಿಹವಯ್ಯಾ ?
ನಾನಿಲ್ಲದಡೆ ನೀನೆಲ್ಲಿಯುವನಯ್ಯಾ ?
ಇವೆಲ್ಲ ಭಾವಭ್ರಮೆಯಲ್ಲದೆ,
ನಿರ್ಭಾವ ನಿಜಾನಂದ ತೂರ್ಯಾತೀತ ಪರವಸ್ತುವಿನ ಕೂಟದಲ್ಲಿ
ಆನು ನೀನೆಂಬುಭಯ ಭಾವ ಇದ್ದಡೆ, ತೋರ ಬಾರಾ,
ಮಾರಹರ ಧೀರ ಗಂಭೀರ ಕಪಿಲಸಿದ್ಧಮಲ್ಲಿಕಾರ್ಜುನವೀರ. ॥ ೫೮೯ ॥

೧೪೨೮

ಬಲ್ಲಿದ ಬಾಣನ ಬಾಗಿಲ ಕಾಯ್ವರವರು ಭೂತಗಳೇನಯ್ಯಾ?
ಅಪ್ಪ ರೇವಣಸಿದ್ಧ ನೀರುಹೊತ್ತನೆಂಬರು ;
ನಮ್ಮ ನೀರು ಹೊರುವವರವರು ಕೂಲಿಕಾರರೇನಯ್ಯಾ ?
'ಸರ್ವೇಷಾಂ ಹೃದಿ ಸ್ಥಿತಶ್ಚಂದ್ರಮೌಲೀ'
ಎಂಬ ಶ್ರುತಿವಾಕ್ಯವ ನಂಬು ನಂಬು,
ಕಪಿಲಸಿದ್ಧಮಲ್ಲಿಕಾರ್ಜುನನ ಮುಂದೆ, ಎಲೆ ಮನವೆ. ॥ ೫೯೦ ॥

೧೪೨೯

ಮಾಡಬಾರದು ಮಾಡಬಾರದು ಪರಸ್ತ್ರೀಸಂಗವ.
ನೋಡಬಾರದು ನೋಡಬಾರದು ದೃಷ್ಟಿಯನೆತ್ತಿ ಪರದ್ರವ್ಯವ.
ಕೂಡಬಾರದು ಕೂಡಬಾರದು ಕುಲವಿಲ್ಲದವನಲ್ಲಿ.
ಆಡಬಾರದು ಆಡಬಾರದು ದುರ್ವಿಷಯಂಗಳಲ್ಲಿ.
ಮಾಡಿ ನೋಡಿ ಕೂಡಿ ಆಡಿದಡೆ ಈಡು ನೋಡಾ,
ಯಮ ಮಾಡಿದ ಪುಳುಗೊಂಡಕ್ಕೆ, ಎಲೆ ಬಿಲ್ಲೇಶಾ,
ಕಪಿಲಸಿದ್ಧಮಲ್ಲಿಕಾರ್ಜುನಾರ್ಯನ ಸಾನ್ನಿಧ್ಯದಲ್ಲಿ ಕೇದಾರ ಗುರು ಸಾಕ್ಷಿಯಾಗಿ.
॥ ೫೯೧ ॥

೧೪೩೦

ನಿನ್ನ ನೀ ತಿಳಿದು ನೋಡಿದಡೆ ಶಿವಮಯ ಜಗತ್ತು ನೋಡಾ.
ಓಂಕಾರ ಪ್ರಣವವೆ ಪ್ರಕೃತಿಯಾಗಿ ನಿಂದಿತ್ತು ;
ನಕಾರ ಪ್ರಣವವೆ ಪೃಥ್ವಿಯಾಗಿ ನಿಂದಿತ್ತು ;
ಮಕಾರ ಪ್ರಣವವೆ ಉದಕವಾಗಿ ನಿಂದಿತ್ತು ;
ಶಿಕಾರ ಪ್ರಣವವೆ ಅಗ್ನಿಯಾಗಿ ನಿಂದಿತ್ತು ;
ವಕಾರ ಪ್ರಣವವೆ ವಾಯುವಾಗಿ ನಿಂದಿತ್ತು ;
ಯಕಾರ ಪ್ರಣವವೆ ಸರ್ವವಸ್ತು ಆಚರಿಸುವುದಕ್ಕೆ ಆಕಾಶವಾಗಿ ನಿಂದಿತ್ತು.
ನೆನೆನೆನೆದು ಸುಖಿಯಾದೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಲಿಂಗವೆ. ॥ ೫೯೨ ॥

೧೪೩೧

ಅನಿರ್ವಾಚ್ಯವೆ ವಾಚ್ಯವಾದಲ್ಲಿ ಹಕಾರವೆನಿಸಿತ್ತು ;
ಆ ಹಕಾರವೆ [ನಿರಂಜನ] ಪ್ರಣವವೆನಿಸಿತ್ತು ;
ಆ ನಿರಂಜನ ಪ್ರಣವವೆ ಜಂಗಮಾಕೃತಿ, ಜಗದಾಧಾರ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೯೩ ॥

೧೪೩೨

ಬಗೆಬಗೆದು ನೋಡಿದಡೆ ದೇಹವೆಲ್ಲ ಮೂರು ಮಾತ್ರೆಯಿಂದಾದುವಯ್ಯಾ.
ಸ್ಥೂಲದೇಹ ಅಕಾರಪ್ರಣವ, ಸೂಕ್ಷ್ಮದೇಹ ಉಕಾರ ಪ್ರಣವ,
ಕಾರಣದೇಹ ಮಕಾರಪ್ರಣವ.
ಮೂರು ಮಾತ್ರೆ ಏಕವಾದಲ್ಲಿ ಓಂಕಾರವಾಯಿತ್ತು.
ತತ್ಪ್ರಣವಕ್ಕೆ ಸಾಕ್ಷಿಯಾಗಿ ನಿಂದೆ ;
ನಿಂದೆನೆಂಬುದಕ್ಕೆ ಅನಿರ್ವಾಚ್ಯ ಪ್ರಣವವಾದೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೯೪ ॥

೧೪೩೩

ಮಣ್ಣ ಕೊಟ್ಟು ಪುಣ್ಯವ ಪಡೆವೆನೆಂಬವನ ಭಾಷೆ ಹೊಲ್ಲ ಹೊಲ್ಲ.
ಮಣ್ಣಿನ ಪುಣ್ಯ ಮುಕ್ಕಣ್ಣನ ಮುಖಕ್ಕೆ ಬಂದಿತ್ತು.

ನೀರನೆರೆದು ಪುಣ್ಯವ ಪಡೆವೆನೆಂಬವನ ಭಾಷೆ ಹೊಲ್ಲ ಹೊಲ್ಲ.
ನೀರಿನ ಪುಣ್ಯ ನಿರಂಜನನ ಮುಖಕ್ಕೆ ನಿಮಿರಿತ್ತು.
ಜ್ಯೋತಿಯು ಬೆಳಗಿ ಪಾಪವ ಕಳೆವೆನೆಂಬವನ ಭಾಷೆ ಹೊಲ್ಲ ಹೊಲ್ಲ.
[ಜ್ಯೋತಿಯು ಪುಣ್ಯ....ದೀಪದ....ಮುಖಕ್ಕೆ ಹೋಯಿತ್ತು.]
[ಚಾಮರವ ಬೀಸಿ ಪಾಪವ ಕಳೆವೆನೆಂಬವನ ಭಾಷೆ ಹೊಲ್ಲ ಹೊಲ್ಲ.]
ಚಾಮರದ ಪುಣ್ಯ ಚಾಮರಾಧೀಶನ ಮುಖಕ್ಕೆ ಅಮರಗೊಂಡಿತ್ತು.
ದೇವಾಲಯವ ಕಟ್ಟಿ ದೇವತ್ವವ ಪಡೆವೆನೆಂಬವನ ಭಾಷೆ ಹೊಲ್ಲ ಹೊಲ್ಲ.
ದೇವಾಲಯದ ಪುಣ್ಯ ಅಧೋಮುಖಂಗೆ ಸೇರಿತ್ತು.
ಕೊಟ್ಟ ಭಕ್ತನಾರನೂ ಕಾಣೆ, ಕೈಕೊಂಡ ಜಂಗಮನಾರನೂ ಕಾಣೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೯೫ ॥

೧೪೩೪

ಮಗನ ಕೊಟ್ಟು ಮನೆಯ ಸೇರಿದೆನೆಂಬ ಬಿಂಕ ಬೇಡ ಬೇಡ.
ಸ್ತ್ರೀಯ ಕೊಟ್ಟು ತ್ರಿಣೇತ್ರನಾದೆನೆಂಬ ಬಿಂಕ ಬೇಡ ಬೇಡ.
ರುಂಡವ ಕೊಟ್ಟು ಬ್ರಹ್ಮಾಂಡಶೇಖರನಾದೆನೆಂಬ ಬಿಂಕ ಬೇಡ ಬೇಡ.
'ಶಿವೋ ದಾತಾ ಶಿವೋ ಭೋಕ್ತಾ' ಎಂಬ ಶ್ರುತಿವಾಕ್ಯವ
ನಂಬಿ ನಂಬಿ ನಡೆಯಿರಾ, ಕಪಿಲಸಿದ್ಧಮಲ್ಲಿಕಾರ್ಜುನನ ಮಂದಿರದಲ್ಲಿ.
॥ ೫೯೬ ॥

೧೪೩೫

ಬಾವಸ್ಯಗಳಿಗನ್ನವ ಕೊಟ್ಟೆನೆಂಬವನ ಮುಖವ ನೋಡಲಾಗದು.
ಉಣಲಿಕ್ಕೀತನೇನು ಅನಾದಿ ಬಸವನೊ ?
ತೆಗೆದುಕೊಳಲಿಕ್ಕಾತನೇನು ಅನಾದಿ ಪ್ರಭುವೊ ?
ಹೊಲೆದು ಬರುವುದೆಲ್ಲ ಹೊಲೆಪದಾರ್ಥ,
ನಿರುಪಾಧಿಯಿಂದ ಬಂದ ಪದಾರ್ಥ ಶಿವಪ್ರಸಾದ.
ಆ ಪ್ರಸಾದವೆ ಎನ್ನ ಕಪಿಲಸಿದ್ಧಮಲ್ಲಿಕಾರ್ಜುನಂಗೆ
ಮಹಾಆರೋಗಣೆಯಾಯಿತ್ತು ! ॥ ೫೯೭ ॥

೧೪೩೬

ಪಶುಗಳಿಗೆಲ್ಲ ಪೃಷ್ಠದಲ್ಲಿ ಬಾಲವಿದ್ದಡೆ,
ಮಾಡುವೆನೆಂಬವನ ಮುಖದಲ್ಲಿ ಬಾಲ ನೋಡಾ.

ಪಶುಗಳಿಗೆಲ್ಲ ಮಸ್ತಕದಲ್ಲಿ ಶೃಂಗವಿದ್ದಡೆ,
ಮಾಡಿದ ಪೂಜೆ ಕೈಕೊಂಡೆನೆಂಬವನ
ಮನದ ಕೊನೆಯ ಮೇಲೆ ಶೃಂಗ ನೋಡಾ.
ಮಾಡಿದೆನೆಂಬುದುಳ್ಳನ್ನಕ್ಕ ಭಕ್ತನೆಂಬೆ[ನೆ ಅ]ಯ್ಯಾ ?
ಮಾಡಿಸಿಕೊಂಡೆನೆಂಬುದುಳ್ಳನ್ನಕ್ಕ,
ನಿರುಪಾದಿ ನಿರಂಜನ ಜಂಗಮವೆಂಬೆನೆ ಅಯ್ಯಾ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೫೯೮ ॥

೧೪೩೭

ದೇಹವ ಮುಟ್ಟಿದವರು ನಿರ್ದೇಹಿಯ ಮುಟ್ಟುವುದದು
ದುರ್ಲಭವಯ್ಯಾ.
ನಿರ್ದೇಹಿಯ ಮುಟ್ಟಿದವರು ದೇಹವ ಮುಟ್ಟರು ನೋಡಯ್ಯಾ.
ಮುಟ್ಟಿದವ ಕ್ಷಣಿಕ ಸುಖ ಕಂಡ ; ಮುಟ್ಟದವ ನಿಜಾನಂದ ಸುಖ ಕಂಡ,
ನೋಡಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೫೯೯ ॥

೧೪೩೮

ಮಾನಾಪಮಾನವೆಂಬುದು ಮನದ ಭ್ರಮೆ ನೋಡಯ್ಯಾ.
ಮೇಲಕ್ಕೆ ಕರೆದಡೆ ಮಾನವೆಂಬುದೀಲೋಕ ;
ಮೂಗುವಟ್ಟಡೆ ಅಪಮಾನವೆಂಬುದೀ ಲೋಕ.
ತಿರುಗುವ ಭೂಮಿಯೆಲ್ಲ ನಕಾರ ಪ್ರಣವವಾಯಿತ್ತು.
ಏಕೈಕವಾದ ಭೂಮಿಯಲ್ಲಿ ಪೀಠವ ಕೊಟ್ಟು ಮನ್ನಿಸುವ
ಅಣ್ಣಗಳ ಬಾಯಲ್ಲಿ ಹುಡಿಮಣ್ಣ ಹೊಯ್ಯದೆ ಮಾಬನೆ
ಕಪಿಲಸಿದ್ಧಮಲ್ಲಿಕಾರ್ಜುನ ? ॥ ೬೦೦ ॥

೧೪೩೯

ಮಾಡಬಾರದ ನೇಮವ ಮಾಡಿ ಕೆಡದಿರಾ, ಮನವೆ.
ಮಾಡುವ ನೇಮ, ಮಾಡಬಾರದ ನೇಮಂಗಳವು,
ಭೂತ ಭವಿಷ್ಯ ವರ್ತಮಾನಂಗಳವು.
ಮಾಡುವ ನೇಮಂಗಳು : ನಿತ್ಯ ಲಿಂಗಾರ್ಚನೆ ಜಂಗಮದಾಸೋಹವೆಂದು
ಕಪಿಲಸಿದ್ಧಮಲ್ಲಿಕಾರ್ಜುನನ ವಚನ, ಮನವೆ. ॥ ೬೦೧ ॥

೧೪೪೦

ಭೂತ ಭವಿಷ್ಯದ್ವರ್ತಮಾನಗಳರಿವಿಕೆಯದು
ಭೂತಪ್ರಾಣಿಗಳಿಗೆ ರಂಜನೆಯಲ್ಲದೆ
ಭೂತೇಶನ ಮನೋರಂಜನೆಯಾಗದು ನೋಡಾ ಮನವೆ.
ನಿತ್ಯ ಲಿಂಗಾರ್ಚನೆ, ನಿತ್ಯಾನುಷ್ಠಾನ, ನಿತ್ಯ ಮಂತ್ರವಿಚಾರ,
ನಿತ್ಯ ಪಾದೋದಕ–ಪ್ರಸಾದ ಸ್ವೀಕಾರವದು
ಕಪಿಲಸಿದ್ಧಮಲ್ಲಿಕಾರ್ಜುನನ ಮನಃಕಿಂಜಲ್ಕ ವಿಕಸನ ನೋಡಾ,
ಮನೋಭ್ರಮರವೆ. ॥ ೬೦೨ ॥

೧೪೪೧

ದೇವರಿಗೆ ಕೃಷಿಯ ನೇಮಕವ ಮಾಡುವರಲ್ಲದೆ,
ದೇವರ ಪ್ರಥಮ ಮುಖ ಭೂಮಿ ಎಂದರಿಯರೀ ಲೋಕ.
ದೇವರಿಗೆ ನದಿಯ ಜಲವೆರೆಯಬೇಕೆಂಬ ನೇಮಕವ ಮಾಡುವರಲ್ಲದೆ,
ದೇವರ ದ್ವಿತೀಯ ಮುಖ ಜಲ ಎಂದರಿಯರೀ ಲೋಕ.
ದೇವರಿಗೆ ದೀವಿಗೆಯ ನೇಮಕವ ಮಾಡುವರಲ್ಲದೆ,
ದೇವರ ತೃತೀಯ ಮುಖ ಜ್ಯೋತಿಯೆಂದರಿಯರೀ ಲೋಕ.
ದೇವರಿಗೆ ತಾಲವೃಂತದ ನೇಮಕವ ಮಾಡುವರಲ್ಲದೆ,
ದೇವರ ಚತುರ್ಥಮುಖ ವಾಯುವೆಂದರಿಯರೀ ಲೋಕ.
ದೇವರಿಗೆ ಆಶ್ರಯವ ಮಾಡಬೇಕೆಂಬ ನೇಮಕವ ಮಾಡುವರಲ್ಲದೆ,
ದೇವರ ಪಂಚಮುಖ ಆಕಾಶವೆಂದರಿಯರೀ ಲೋಕ.
ದೇವರಿಗೆ ಪ್ರಾಣಪ್ರತಿಷ್ಠೆಯ ಮಂತ್ರ ಹೇಳುವರಲ್ಲದೆ,
ದೇವರ ಆರನೆಯ ಮುಖ ಆತ್ಮಪ್ರಾಣವೆಂದರಿಯದೀ ಲೋಕ, ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೦೩ ॥

೧೪೪೨

ತಮ್ಮಿಚ್ಛೆಗೆ ಬಂದ ಪದಾರ್ಥ ಲಿಂಗದಿಚ್ಛೆ ಎಂಬರು ;
ತಮ್ಮಿಚ್ಛೆಗೆ ಬರದ ಪದಾರ್ಥ ಲಿಂಗದಿಚ್ಛೆ ಇಲ್ಲವೆಂಬರು.
ಹೋದ ವಾಕ್ಕು ಶಿವಾಜ್ಞೆ ಎಂಬರು.
ಇದ್ದ ಮಾತು ತನ್ನಾಜ್ಞೆ ಎಂಬರು, ಅದೆಂತಯ್ಯಾ ?
ಇಚ್ಛೆಗೆ ಒಳಗಾಗುವನಲ್ಲಯ್ಯಾ ಲಿಂಗವು.
'ಶಿವೋ ದಾತಾ ಶಿವೋ ಭೋಕ್ತಾ' ಎಂಬುದ ತಿಳಿದು,

ಲಿಂಗಮುಖದಿಂದ ಬಂದ ಪದಾರ್ಥವ ಕೈಕೊಂಬಡೆ,
ಅಚ್ಚ ಲಿಂಗೈಕ್ಯನೆಂಬೆ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೦೪ ॥

೧೪೪೩

'ಕರ್ಮತ್ರಯಂಗಳ ಭೋಗಿಸಿದಲ್ಲದೆ ಬಿಡದು' ಎಂಬ ಶ್ರುತಿಗೇಳಿ
ಮನದೆರೆದು ಮಾತಾಡನಯ್ಯಾ.
ದುಃಖದಿಂ ಭೋಗಿಸಿದ ಕರ್ಮತ್ರಯದೊಳಗಯ್ಯಾ.
ಆದ ಭೋಗ ಸುಖವಾದಡೆ ಮುಂದೆ ಭವಕ್ಕೆ ಈಡಯ್ಯಾ.
ಸುಖದುಃಖಂಗಳ ಸಮಾನಗೊಂಡವಂಗೆ
ವಿಧಿತ್ರಯಂಗಳಿನ್ನೆಲ್ಲಿಹವಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೦೫ ॥

೧೪೪೪

ಕ್ಷೀರ ಶರಧಿಯೊಳಿರುವ ಹಂಸೆಗೆ
ಅನ್ಯ ಕ್ಷೀರದ ಹಂಗುಂಟೇನಯ್ಯಾ ?
ಸುಗಂಧಮಯ ಪುಷ್ಪದಲ್ಲಿರುವ ಭೃಂಗಂಗೆ
ಅನ್ಯ ಪರಿಮಳದ ಹಂಗುಂಟೇನಯ್ಯಾ ?
ಸಮುದ್ರದೊಳಿರುವ ಮಂಡೂಕಂಗೆ
ಅನ್ಯ ಅಂಬುವಿನ ಹಂಗುಂಟೇನಯ್ಯಾ ?
ಮೊಲೆಯನುಣ್ಣುವ ಶಿಶುವಿಂಗೆ
ಅನ್ಯ ಕ್ಷೀರ ನೀರಿನ ಹಂಗುಂಟೇನಯ್ಯಾ ?
ಸಕಲಪ್ರದಾಯಕ ಲಿಂಗದೊಳಿದ್ದ ಶರಣಂಗೆ
ಅನ್ಯ ಪದದಾಶೆಯ ಹಂಗುಂಟೇ ?
ಹೇಳಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೦೬ ॥

೧೪೪೫

ಸಮತೆಯೆಂಬ ಕಂಥೆಯ ಧರಿಸಿಪ್ಪ ನೋಡಾ ಜಂಗಮನು.
ಅಮಿತವೆಂಬ ಭಸ್ಮವ ಧರಿಸಿಪ್ಪ ನೋಡಾ ಜಂಗಮನು.
ಲಿಂಗವೆಂಬ ಕರ್ಪರವ ಕರಸ್ಥಲದಲ್ಲಿ ಧರಿಸಿಪ್ಪ ನೋಡಾ ಜಂಗಮನು.
ಸರ್ವಜೀವ ದಯಾಪಾರಿಯೆಂಬ ವಿಮಲ ರುದ್ರಾಕ್ಷಿಯ ಧರಿಸಿಪ್ಪ
ನೋಡಾ ಜಂಗಮನು.
ನಿರ್ಮೋಹವೆಂಬ ಕೌಪೀನವ ಧರಿಸಿಪ್ಪ ನೋಡಾ ಜಂಗಮನು.

ನಿಸ್ಸಂಗವೆಂಬ ಮೇಖಲಾಪರಿಪೂರ್ಣ ನೋಡಾ ಜಂಗಮನು.
ಸುಷುಮ್ನಾನವೆ ಕಿರೀಟವಾಗಿ, ಶುದ್ಧ ಜ್ಞಪ್ತಿಯೆ ಮಕುಟವಾಗಿ,
ನಿರಂಹಂಕಾರವೆ ಬಹಿರ್ವಾಸವಾಗಿ,
ದುರ್ವ್ಯಸನ ದುರ್ಭ್ರಮೆ ಹೃಷೀಕೋತ್ಪಾತವಿಜಯ ಶಿವಯೋಗವಾಗಿ,
ಚರಿಸುವನು ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನನೆಂಬ ಮಹಾಜಂಗಮನು.
॥ ೬೦೭ ॥

೧೪೪೬

ಪರರಾಣಿಯರ ನೋಡುವಲ್ಲಿ, ಅಂಧನಾಗಿಪ್ಪ ನೋಡಾ ಜಂಗಮನು.
ಪರಧನವ ಕಂಡಲ್ಲಿ, ಹುಲಿಯು ಕಂಡ ಹುಲ್ಲೆಯಂತೆ
ಭೀತಿಬಡುವ ನೋಡಾ ಜಂಗಮನು.
ದುರ್ನರರ ಸಂಭಾಷಣೆಯು ಕೇಳುವಲ್ಲಿ,
ಅತಿಮೂರ್ಖನಾಗಿಪ್ಪ ನೋಡಾ ಜಂಗಮನು.
ದುಷ್ಕರ್ಮಪಥದೊಳರಸುವಲ್ಲಿ, ಕಡುಜಡ ಹೆಳವ ನೋಡಾ ಜಂಗಮನು.
ಅಕ್ಷಾಂಗವಿಷಯಂಗಳೊಳು, ನಿಷ್ಕರುಣಿಯಾಗಿಪ್ಪ ನೋಡಾ ಜಂಗಮನು.
ಶಿವನಿಂದಕರ ಸ್ವರಗೇಳುವಲ್ಲಿ, ಬಧಿರನಾಗಿಪ್ಪ ನೋಡಾ ಜಂಗಮನು.
ದುರಾತ್ಮರಿಗೆ ಜ್ಞಾನದ್ರವ್ಯ ಕೊಡುವಲ್ಲಿ, ಲೋಭಿಯಾಗಿಪ್ಪ
ನೋಡಾ ಜಂಗಮನು, ಕಪಿಲಸಿದ್ಧಮಲ್ಲಿಕಾರ್ಜುನನು. ॥ ೬೦೮ ॥

೧೪೪೭

ಸಕಲ ಪರಿಪೂರ್ಣನಾದುದರಿಂದ ಬಾಲಕನಂತೆ ತೋರುವನಯ್ಯಾ.
ವಿಧಿ-ನಿಷೇಧಂಗಳಿಲ್ಲದರಿಂದ ಉನ್ಮತ್ತನಂತೆ ತೋರುವನಯ್ಯಾ.
ಜನರಂಜನ ಲಾಂಛನವಿಲ್ಲದರಿಂದ ಪೈಶಾಚಿಯಂತೆ ತೋರುವನಯ್ಯಾ.
ನಿಶ್ಶಬ್ದಬ್ರಹ್ಮ ವೇದ್ಯನಾದುದರಿಂದ ಮೂಕನಂತೆ ತೋರುವನಯ್ಯಾ.
ಸಕಲಾಗಮದ ಮೂರ್ತಿ ತಾನಾದುದರಿಂದ
ವಿದ್ವಾಂಸರೊಳ್ ಬೆರಸುವ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನನೆಂಬ ಮಹಾಮೂರ್ತಿ ಜಂಗಮನು. ॥ ೬೦೯ ॥

೧೪೪೮

ತಲೆಗೆ ಮೂರು ಚಿಪ್ಪು,
ಅಂಗಕ್ಕೆ ಆರು ಚಿಪ್ಪು.

ಮಿಕ್ಕಾದ ಸರ್ವಾಂಗಕ್ಕೆಲ್ಲ
ಒಂದೆ ಚಿಪ್ಪಿನ ಕುಪ್ಪಸ.
ಇದರಂಗದ ಆಚರಣೆಯ ಬಲ್ಲವ
ಪ್ರಸನ್ನ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವ ಬಲ್ಲವ. ॥ ೬೧೦ ॥

೧೪೪೯

ಹೊರ ಕಣ್ಣನೆ ಮುಚ್ಚಿ ಒಳ ಕಣ್ಣನೆ ತೆರೆದು
ಮನದೊಡೆಯ ಬಂದಾನೆಂಬ ಭರವಸಕ್ಕೆ
ಕಿವಿಯಾಂತು ಕೇಳುತ್ತಿದ್ದೆನಯ್ಯಾ.
ಆದೆತ್ತಣಿಂದ ಬಂದು ನಿಜರೂಪು ಸುಳಿಯಿತ್ತೆಂದರಿಯೆ.
ಪರಮನ ಪ್ರತಿಬಿಂಬ ಹೊಳೆವಡೆ ಕಣ್ತುಂಬಿ ನೋಡಿದೆ.
ಕರತುಂಬಿ ಹಿಡಿದು, ಮನಮುಟ್ಟಿ ನೆರೆದೆ ಕಾಣಾ,
ಕಪಿಲಸಿದ್ಧಮಲ್ಲಿಕಾರ್ಜುನನ ಕೂಡಿದೆ. ॥ ೬೧೧ ॥

೧೪೫೦

ಒಂದೇ ವಸ್ತು, ತನ್ನ ವಿಚಿತ್ರಮಹಿಮೆಯ ಕೇಳುವಲ್ಲಿ ಕರ್ಣವಾಗಿ,
ಸ್ಪರ್ಶಿಸುವಲ್ಲಿ ತ್ವಕ್ಕಾಗಿ, ನೋಡುವಲ್ಲಿ ನೇತ್ರವಾಗಿ,
ರುಚಿಸುವಲ್ಲಿ ರಸನೆಯಾಗಿ, ಪರಿಮ[ಳವ ಘ್ರಾಣಿ]ಸುವಲ್ಲಿ ಘ್ರಾಣವಾಗಿ
ನಿಂದೆ ನೀ ನೋಡಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೬೧೨ ॥

೧೪೫೧

ಪೂಜಾರ್ಥವಾಗಿ ಎನ್ನ ಹಸ್ತಕ್ಕೆ ಇಷ್ಟಲಿಂಗವಾಗಿ ಬಂದೆಯಯ್ಯಾ.
ಪೂಜಿಸುವಲ್ಲಿ ಭಕ್ತನಾಗಿ ನಿಂದೆಯಯ್ಯಾ.
ಜನ್ಮವಳಿವಲ್ಲಿ ಜಂಗಮವಾಗಿ ಬಂದು, ಪಾದೋದಕ ಪ್ರಸಾದವ ಕೊಟ್ಟೆ.
ಪೂಜಾಫಲ ತೀರ್ಗಡೆ ಮಾಡಬೇಕೆಂದು,
ಎನ್ನ ಮನಭಾಂಡಾರವ ನೋಡಬಂದೆಯಯ್ಯಾ,
ಎಲೆ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವೆ. ॥ ೬೧೩ ॥

೧೪೫೨

ಕೆರೆಯಲ್ಲಿಯು ತೀರ್ಥ, ಮನದಲ್ಲಿಯು ಸರ್ವ ಜೀವದಯಾಪರತ್ವ
ವೈದೆಗೆಡದೆ, ನಿಮ್ಮ ಪಾದಸಾಕ್ಷಿ, ಎನ್ನ ಮನಸಾಕ್ಷಿ.

ನಮ್ಮಿರ್ವರ ಮುಂದೆ ಕೇದಾರ ಗುರುಗಳೆ ಸಾಕ್ಷಿ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೧೪ ॥

೧೪೫೩

ನಾ ಮಾಡಿದ ಪೂಜಾಫಲ ಅಂತಿಂತಲ್ಲ.
ಬಾಣ ಪೂಜಿಸಿದ ಫಲ ಬಾಗಿಲ ಕಾಯ್ದಲ್ಲಿ ಹೋಯಿತ್ತು.
ಮಯೂರ ಪೂಜಿಸಿದ ಫಲ ವಿದ್ಯಾದಾನದಲ್ಲಿ ಹೋಯಿತ್ತು.
ಹನುಮಂತ ಪೂಜಿಸಿದ ಫಲ ವಜ್ರದೇಹದಲ್ಲಿ ಹೋಯಿತ್ತು.
ನಾ ಪೂಜಿಸಿದ ಫಲ ಕೊಟ್ಟು ಕೊಟ್ಟು ತೀರದೆ ನಿಂದಿತ್ತು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೧೫ ॥

೧೪೫೪

ಶರಣನ ಪೂಜೆಯುದು ಮರಣದ ಕೇಡು ನೋಡಿರಯ್ಯಾ.
ಶರಣನ ಪೂಜೆಯುದು ಶಿವನ ಕರುಣಾರಸ ನೋಡಿರಯ್ಯಾ.
ಶರಣನ ಪೂಜೆಯುದು ಕಪಿಲಸಿದ್ಧಮಲ್ಲಿಕಾರ್ಜುನನ ಪೂಜೆ ನೋಡಿರಯ್ಯಾ.
॥ ೬೧೬ ॥

೧೪೫೫

ಅಲ್ಲಮನ ಲಕ್ಷ್ಯ ವೈರಾಗ್ಯದಲ್ಲಿ ;
ಚೆನ್ನಬಸವಣ್ಣನ ಲಕ್ಷ್ಯ ಕ್ರಿಯಾಜ್ಞಾನದಲ್ಲಿ ;
ಬಸವಣ್ಣನ ಲಕ್ಷ್ಯ ಭಕ್ತಿಯಲ್ಲಿ ;
ಮಡಿವಾಳನ ಲಕ್ಷ್ಯ ಅಹಂಕಾರನಾಶನಲ್ಲಿ ;
ಸಕಳೇಶಯ್ಯನ ಲಕ್ಷ್ಯ ಸಮತೆಯಲ್ಲಿ ;
ಶಿವಯೋಗಿ ಸಿದ್ಧರಾಮನೆಂಬ ಬಾಲಕನ ಲಕ್ಷ್ಯ ಲಿಂಗಪೂಜೆಯಲ್ಲಿ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಲಿಂಗವೆ. ॥ ೬೧೭ ॥

೧೪೫೬

ಅವರವರ ಲಕ್ಷ್ಯ ಭಿನ್ನವಾದಲ್ಲಿ ಫಲವೇನಯ್ಯಾ ?
ತ್ರಿಷು ಲೋಕೇಷು ದೇವೇಶಿ ವೈರಾಗ್ಯಂ ಪೂಜ್ಯಮೇವ ಚ ।
ತದ್ವೈರಾಗ್ಯಂ ಚ ಪ್ರೋಕ್ತಂ ಹಿ ಲಿಂಗಪೂಜಾ ಚ ಪಾವನೀ ॥

ಜ್ಞಾನಲಿಂಗಮಿತಿ ಪ್ರೋಕ್ತಂ ಕ್ರಿಯಾಯಾ ವಿಧಿರುಚ್ಯತೇ ।
ದ್ವಯೋಃ ಸಂಯೋಗಮಾಪ್ನೋತಿ ಲಿಂಗಪೂಜಾ ಪ್ರಕೀರ್ತಿತಾ ॥
ಅನೇಕ ಜನ್ಮನಃ ಪುಣ್ಯಾತ್ಸರ್ವಸ್ಮಿನ್ ಭಕ್ತಿರುಚ್ಯತೆ ।
ಸಾ ಭಕ್ತಿಃ ಪ್ರಥಮಾ ಪೂಜಾ ಲಿಂಗಾರ್ಚನಮಥೋಚ್ಯತೇ ॥
ಯೋ ರುಗ್ಣಾತ್ಯರಿಷಡ್ವರ್ಗಂ ಸ ಏವ ಲಿಂಗಸಂಭ್ರಮಃ ।
ಸಮಭಾವಸ್ತು ಪೂಜಾ ಯಾ ವದಂತಿ ಮಮ ಕಿಂಕರಾಃ ।
ಲಿಂಗಾರ್ಚನಂ ತು ದೇವೇಶಿ ತ್ವಂ ಕರೋಷಿ ದಿನೇ ದಿನೇ ।
ಎಂಬುದದು ಸುಪ್ರಭೇದ ಪುಸಿಯೇನಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ ?
॥ ೬೧೮ ॥

೧೪೫೭

ಲಿಂಗಲೀಲೆ ಹೇಳುವಡೆನಗಸಾಧ್ಯ ನೋಡಾ, ಅಯ್ಯಾ.
ಭಕ್ತನ ಹಸ್ತದಲ್ಲಿ ಜಂಗಮವಾಗಿ ನೆಲೆಸಿದನಯ್ಯಾ ಲಿಂಗಮೂರ್ತಿ ;
ಜಂಗಮದ ಹಸ್ತದಲ್ಲಿ ಭಕ್ತನಾಗಿ ನೆಲೆಸಿದನಯ್ಯಾ ಲಿಂಗಮೂರ್ತಿ.
ಜಂಗಮ ಪೂಜಿಸಿದ ಫಲ ಸಂಪದಾದಿ ಮೋಕ್ಷ ಕೊಟ್ಟಿತ್ತು ಭಕ್ತಂಗೆ ;
ಭಕ್ತ ಪೂಜಿಸಿದ ಫಲ ಜ್ಞಾನಸಂಪದಾದಿ ವೈರಾಗ್ಯ ಕೊಟ್ಟಿತ್ತು ಜಂಗಮಂಗೆ.
ಇಂತಪ್ಪ ಲಿಂಗಮೂರ್ತಿಯ ನೋಡಿ ನೋಡಿ,
ರೋಮಂಗಳೆಲ್ಲ ನಯನಂಗಳಾದವು ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ.
॥ ೬೧೯ ॥

೧೪೫೮

ಚರಿಸಿ ಜಂಗಮವೆನಿಸಿತ್ತಯ್ಯಾ ಲಿಂಗವು.
ನೆಲಸಿ ಲಿಂಗವೆನಿಸಿತ್ತಯ್ಯಾ ಲಿಂಗವು.
ಇದರಿರವ ಅರುಹಿದಲ್ಲಿ ಗುರುವೆನಿಸಿತ್ತಯ್ಯಾ ಲಿಂಗವು.
ಗುರು–ಲಿಂಗ–ಜಂಗಮಕ್ಕೆ ತಿಲಾಂಶ ಭೇದವಿಲ್ಲ ನೋಡಾ, ಎಲೆ ದೇವಾ.
ಭೇದಿಸಿದವಗೆ ಭವಬಾಧೆ ತಪ್ಪುವದೆ,
ದೇವರ ದೇವ ಕಪಿಲಸಿದ್ಧಮಲ್ಲಿಕಾರ್ಜುನದೇವಾ ? ॥ ೬೨೦ ॥

೧೪೫೯

“ಗೃಹಸ್ಯ ರಕ್ಷಂ ಪ್ರಾಯಸ್ತು ಬಾಲಕೋ ಪಿ ವರಾನನೇ”
ಎಂಬಾಗಮವಾಕ್ಯವಂತಿರಲಿ.

ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ಶರಣರ ಮಹಾಮಂದಿರಕ್ಕೆ
ಲಿಂಗಪೂಜೆಯೆ ರತ್ನಪ್ರಾಯ ನೋಡಾ, ಪಾಪಿಸಪಾಳ ಕಲ್ಲಯ್ಯಾ. ॥ ೬೨೧ ॥

೧೪೬೦

'ಏಕಜನ್ಮನ್ಯೇವ ವಿದ್ಯಾಪ್ರಾಪ್ತಿರ್ಭವಿಷ್ಯತಿ'
ಎಂಬ ವಾಕ್ಯವದು ಹುಸಿಯೇಸಯ್ಯಾ ?
ಶಾಸ್ತ್ರವನೋದಿ ಓದಿ ಪಿಶಾಚಿಯಾಗನೆ ಅಂದು ಕಾಶಿಯಲ್ಲಿ ಹರಿದತ್ತನು ?
ವಾದಿಸಿದಲ್ಲಿ ಫಲವೇನಯ್ಯಾ, ವಾದಿಸಬೇಡ !
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವ ಪೂಜಿಸದೆ ವ್ಯರ್ಥ ದಿನಗಳೆಯಬೇಡ.
॥ ೬೨೨ ॥

೧೪೬೧

ಆಗುವ ಭೋಗಂಗಳಿಗೆ ಮೈಗೊಟ್ಟುದು ಎಂದಡೆ,
ಮೈಗೊಡದು ನೋಡಾ, ಲಿಂಗಾರ್ಚನಾಫಲ.
ಆಗಬಾರದ ಕಾರ್ಯ ಮಾಡೆನೆಂದಡೆ,
ಮೈಗೊಡುವುದು ನೋಡಾ, ಲಿಂಗಾರ್ಚನಾಫಲ.
ದೃಢವಿರಬೇಕು ಲಿಂಗಾರ್ಚನೆಯಲ್ಲಿ !
ದೃಢವಿಲ್ಲದವನ ಹೆಡಗುಡಿಯ ಕಟ್ಟಿ ಎಡಹಿಬಿಡುವ ಭವದಡಿಗೆ,
ಎಮ್ಮ ಮೃಡಮೂರ್ತಿ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವು. ॥ ೬೨೩ ॥

೧೪೬೨

ಪೂಜಾಫಲದಿಂದ ಅರ್ಜುನ ಬಾಣಂಗಳೆಲ್ಲ
ಅರಳ್ಗಳಾದುವಯ್ಯಾ ನಿನ್ನಂಗಕ್ಕೆ.
ಪೂಜಾಫಲದಿಂದ ಕನ್ನಯ್ಯನ ಮಾಂಸವೆಲ್ಲ
ಪರಮ ಷಡ್ರುಚಿಯಾಯಿತ್ತಯ್ಯಾ, ನಿನ್ನ ರಸನೆಗೆ.
ಪೂಜಾಫಲದಿಂದ ಚೋಳಿಯ ರತಿ
ಪರಮಲೀಲಾನಂದವಾಯಿತ್ತಯ್ಯಾ, ದೃಷ್ಟಿಗೆ.
ಪೂಜಾಫಲದಿಂದ ಅಮ್ಮನವರ ಅಪಶಬ್ದಗಳೆಲ್ಲ
ಸಾಮಗಾನವ ತಿರಸ್ಕರಿಸಿದುವಯ್ಯಾ ನಿನ್ನ ಶ್ರೋತ್ರಕ್ಕೆ.
ಪೂಜಾಫಲದಿಂದಂದು ಚಂದ್ರಕೊಡಿಯ ಕೈಯ ಮದುಗುಣಿಯ ಪುಷ್ಪ
ಗಂಧಮಯವಾಗಿ ಮಸ್ತಕಕ್ಕಲಂಕಾರವಾಯಿತ್ತಯ್ಯಾ.

ಪೂಜಾಫಲ ಅಂತಿಂತಲ್ಲ, ಪೂಜಾಫಲ ಸ್ವಾಧೀನವಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೨೪ ॥

೧೪೬೩

ಅಗ್ನಿಯ ಸೋಂಕಿದಲ್ಲಿ ಕನಕದ ಕಲಂಕ ಹೋಯಿತ್ತು.
ಜಲವ ಸೋಂಕಿದಲ್ಲಿ ದೇಹದ ಕಲಂಕ ಹೋಯಿತ್ತು.
ಭಾಗೀರಥಿಯ ಸೋಂಕಿನಲ್ಲಿ ದೋಷ ದಗ್ಧವಾಗಿ ಹೋಯಿತ್ತು.
ನಮ್ಮ ಮಲ್ಲಿಕಾರ್ಜುನನೆಂಬ ಲಿಂಗವ ಸೋಂಕಿದಲ್ಲಿ
ಪ್ರಾರಬ್ಧತ್ರಯ ನಿವಾರಣವಾಗಿ ಪೋಯಿತ್ತು, ಕಂಡೆಯಾ ಬಾಚರಸಯ್ಯಾ.
॥ ೬೨೫ ॥

೧೪೬೪

ಶ್ವಾನನ ಗುಣ ನೋಡದು ನೋಡಾ ಮದಗಜವು.
ಕಾನನದ ಗುಣ ನೋಡದು ನೋಡಾ ಮಹದಗ್ನಿಯು.
ಕಾವಳದ ಗುಣ ನೋಡದು ನೋಡಾ ಮಹತ್ಪ್ರಕಾಶವು.
ಜನನದ ಗುಣ ನೋಡದು ನೋಡಾ ಶಿವಾನುಭಾವಜ್ಞಾನವು.
ಎನ್ನ ಗುಣ ನೋಡದು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನನ ಪೂಜಿಸಿದ ಫಲವು. ॥ ೬೨೬ ॥

೧೪೬೫

ಅಂಗೈಯಲ್ಲಿ ಪೂಜಿಸಿದ ಫಲ ಲಿಂಗಯ್ಯ ಕೊಡನೆಂದು
ಮರುಗದಿರಾ ಮನವೆ.
ಅಂಗೈಯಲ್ಲಿ ಫಲ ಅಂಗ ಲಿಂಗ ನೋಡಿದಂತೆ ನೋಡಾ ಮನವೆ.
ಅಂಗೈಯ ಫಲ ಲಿಂಗಯ್ಯನಾಗದಿರೆ ಪೂಜಿಸುವರೆ ಪ್ರಮಥರು ?
ನೋಡಾ ಮನವೆ.
ಕಪಿಲಸಿದ್ಧಮಲ್ಲಿಕಾರ್ಜುನನ ಪೂಜಿಸಿ ಪೂಜಿಸಿ ಬದುಕು ಮನವೆ. ॥ ೬೨೭ ॥

೧೪೬೬

ಆರಾಧನೆಯ ಮಾಡಿ ಫಲವೇನಯ್ಯಾ, ಸಂತೃಪ್ತಿವಡೆಯದನ್ನಕ್ಕ ?
ಮದುವೆಯಾಗಿ ಫಲವೇನಯ್ಯಾ, ಮೋಹದ ವಿಘ್ನಂಗಳಾಗದನ್ನಕ್ಕ ?
ಭಕ್ತನಾಗಿ ಫಲವೇನಯ್ಯಾ ಲಿಂಗಪೂಜೆಯ ಮಾಡದನ್ನಕ್ಕ ?

ಲಿಂಗವ ಪೂಜಿಸಿ ಫಲವೇನಯ್ಯಾ, ಮೋಕ್ಷವ ಹಡೆಯುದನ್ನಕ್ಕ ?
ಮೋಕ್ಷಮಾದ ಫಲವೇನಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನನೆಂಬ
ನಾಮಧೇಯುವಳಿಯುದನ್ನಕ್ಕ, ಕೇದಾರ ಗುರುವೆ. ॥ ೬೨೮ ॥

೧೪೬೭

ಇಲ್ಲಿರುವ ಕೋಂಟೆಗಳೆಲ್ಲ ಅಲ್ಲಿಹ ರುದ್ರಗಣಂಗಳ ಮಂದಿರವಯ್ಯಾ.
ಇಲ್ಲಿರುವ ಗುಡ್ಡರೆಲ್ಲ ಅಲ್ಲಿಹ ಮಹಾಗಣಂಗಳಯ್ಯಾ.
ಇಲ್ಲಿರುವ ಭಾಮಿನಿಯರೆಲ್ಲ ಅಲ್ಲಿಹ ರುದ್ರಕನ್ನಿಕೆಯರಯ್ಯಾ.
ಇಲ್ಲಿರುವ ತಟಾಕಂಗಳೆಲ್ಲ ಅಲ್ಲಿಹ ದೇವಗಂಗೆಯಯ್ಯಾ.
ಇಲ್ಲಿರುವ ಕಪಿಲಸಿದ್ಧಮಲ್ಲಿಕಾರ್ಜುನ
ಅಲ್ಲಿಹ ಪಂಚಮುಖ, ಶತಮುಖ, ಸಹಸ್ರಮುಖ, ಅನಂತಮುಖ
ಪಾರ್ವತೀಪ್ರಿಯ ಮಹಾದೇವ ನೋಡಾ, ಕೇದಾರ ಗುರುದೇವಾ. ॥ ೬೨೯ ॥

೧೪೬೮

ಇಂದ್ರ ನೋಡುವಡೆ ಭಗದೇಹಿ ;
ಚಂದ್ರ ನೋಡುವಡೆ ಗುರುಪತ್ನೀಗಮನಿ ;
ಉಪೇಂದ್ರ ನೋಡುವಡೆ ಬಾರದ ಭವದಲ್ಲಿ ಬಂದ ಅವತಾರಿ ;
ಬ್ರಹ್ಮ ನೋಡುವಡೆ ಸ್ವಪುತ್ರೀಪತಿ ;
ಮುನಿಗಣ ನೋಡುವಡೆ ಕುಲಹೀನರು ;
ಗಣಪತಿ ನೋಡುವಡೆ ಗಜಾನನ ;
ವೀರಭದ್ರ ನೋಡುವಡೆ ಮಹತ್ಪ್ರಳಯಾಗ್ನಿ ಸಮಕ್ರೋಧಿ ;
ಷಣ್ಮುಖ ನೋಡುವಡೆ ತಾರಕಧ್ವಂಸಿ.
ಇವರೆಲ್ಲರು ಎಮ್ಮ ಪೂಜೆಗೆ ಬಾರರು.
ನೀ ನೋಡುವಡೆ ಶ್ಮಶಾನವಾಸಿ, ರುಂಡಮಾಲಾದ್ಯಲಂಕಾರ ;
ನಿನ್ನ ವಾಹನ ಚಿದಂಗ ಆದಿವೃಷಭ.
ನಿರೂಪಿಸಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೩೦ ॥

೧೪೬೯

ಆಕಾಶದಲ್ಲಿಯ ತಾರೆಗಳು ಕಾಣಬಾರದೆಂಬ
ಯೋಚನೆಯುಳ್ಳಡೆ ಸೂರ್ಯೋದಯಕ್ಕಯ್ಯಾ.

ಆಕಾಶದಲ್ಲಿಯ ತಾರೆಗಳು ಕಾಣಬೇಕೆಂಬ
ಯೋಜನೆಯುಳ್ಳಡೆ ಸೂರ್ಯಾಸ್ತಮಾನಕ್ಕಯ್ಯಾ !
ಕಾಣಬಾರದು ಕಾಣಬಾರದು, ಜ್ಞಾನದಲ್ಲಿ ಆನಂದ ಅನಾನಂದವ.
ಕಾಣಬಹುದು ಕಾಣಬಹುದು ; ಅಜ್ಞಾನದಲ್ಲಿ
ಸುಖದುಃಖೋಭಯದ್ವಂದ್ವವ.
ಭೋ ಭೋ ! ಕಪಿಲಸಿದ್ಧಮಲ್ಲಿಕಾರ್ಜುನ ಭೋ ! ॥ ೬೩೧ ॥

೧೪೭೦

ಶಿವಾಂಶಿಕಭಕ್ತನ ಸೊಮ್ಮು ಶಿವಜಂಗಮರಿಗೆ ಸಲ್ಲುವುದಲ್ಲದೆ,
ಶಿವೆ ಬಸವೆಯರೆಂಬ ವಾರಾಂಗನೆಯರಿಗೆ ಸಲ್ಲುವುದೆ, ಅಯ್ಯಾ ?
ಡಾಂಭಿಕ ಭಕ್ತನ ಸೊಮ್ಮು ಡಾಂಭಿಕಯ್ಯಗಳಿಗೆ ಸಲ್ಲುವುದಲ್ಲದೆ.
ಡಂಭವಿರಹಿತಂಗೆ ಸಲ್ಲುವುದೆ, ಅಯ್ಯಾ ?
ಎಮ್ಮ ಕಪಿಲಸಿದ್ಧಮಲ್ಲಿಕಾರ್ಜುನನೆಂಬ ಷಟ್‌ಸ್ಥಲಬ್ರಹ್ಮಿ ಚೆನ್ನಬಸವನ
ಜಿಹ್ವಾಶೇಷದ ಸೊಮ್ಮು ಎನಗೆ ಸಲ್ಲುವುದಲ್ಲದೆ,
ಜಗದ ಭಂಡಯ್ಯಗಳಿಗೆ ಸಲ್ಲುವುದೇನಯ್ಯಾ ? ॥ ೬೩೨ ॥

೧೪೭೧

ಭಕ್ತನಾದ ಬಳಿಕ ವಿರಕ್ತಿಯ ನೋಡಿ ಆಚರಿಸುವುದಲ್ಲದೆ,
ಭಕ್ತಿ ಲಕ್ಷ್ಯಕ್ಕೆ ಮೈಗೊಡುವುದೆಂತಯ್ಯಾ ?
ಭಕ್ತನಾದಡೆ ವಸ್ತ್ರಾನ್ನಕ್ಕೆ ಭಕ್ತನಲ್ಲದೆ,
ಸಾಮರಸ್ಯಕ್ಕೆ ಭಕ್ತನೆ ಅಯ್ಯಾ ?
"ಭಕ್ತಿಸಂಪನ್ನ ಭಕ್ತೋsಪಿ ದೃಷ್ಟ್ವಾ ಗುಣಗಣಾನಿ ವೈ ।
ಸ್ವೀಕಾರಯೇಜ್ಜಂಗಮಸ್ಯ ಪಾದೋದಕಮಹರ್ನಿಶಂ॥"
ಎಂಬ ವಾಕ್ಯವದು ಅಬದ್ಧವೇನಯ್ಯಾ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೩೩ ॥

೧೪೭೨

"ಭಕ್ತೇಭ್ಯಸ್ತು ಚರಶ್ರೇಷ್ಠರೇಭ್ಯಸ್ತು ಪರಾತ್ಪರಂ ।
ವಸ್ತು ಸೋ ಭಾತಿ ದೇವೇಶಿ ತಂ ತ್ಯಕ್ತ್ವಾ ಚಾಲ್ಲಮಪ್ರಭುಃ॥"
ಎಂಬ ಮಕುಟಾಗಮ ವಾಕ್ಯ ವಿಚಾರಿಸಿವಲ್ಲಿಂದಚ್ಚೊತ್ತಿಹುದಯ್ಯಾ
ಎನ್ನ ಮನಕ್ಕೆ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೩೪ ॥

೧೪೭೩

ಭಕ್ತನಾಗಿ ಮಲತ್ರಯಂಗಳೊಳಾವುದು ಲೇಸು ಕಂಡೆಯಾ, ಮನವೆ ;
ಜಂಗಮವಾಗಿ ಮಲತ್ರಯಂಗಳಳಿವುದು ದುರ್ಲಭ ಕಂಡೆಯಾ, ಮನವೆ.
ಭಕ್ತ ಮಹೇಶ ಪ್ರಸಾದಿಸ್ಥಲತ್ರಯಂಗಳ ಮೀರಿ,
ಪ್ರಾಣಲಿಂಗಿಸ್ಥಲದಲ್ಲಿ ನಿಂದೆಯಲ್ಲಾ, ಮನವೆ.
ಇನ್ನು ಮೈದೆಗೆದು ತಿರಿದುಂಡಡೆ, ಬೆನ್ನ ಬಾರನೆತ್ತುವ ನೋಡಾ, ಮನವೆ,
ಕಪಿಲಸಿದ್ಧಮಲ್ಲಿಕಾರ್ಜುನನೆಂಬ ಭೂಪಾಲನು. ॥ ೬೩೫ ॥

೧೪೭೪

ಒಂದು ಜೋಳಿಗೆಯೊಳಗೆರಡು ಗೋವುಗಳಾಡುತ್ತೈದಾವೆ ನೋಡಾ.
ಒಂದು ಗೋವದು ಬಹು ಮೋಹನದು ;
ಒಂದು ಗೋವದು ಬಹು ಕ್ರೂರಸ್ವಭಾವದು.
ಒಂದು ಗೋವಿನ ಸಾಧನೆಯದು ಕೀಳ ಭವಕ್ಕೆ ಲೇಸು ;
ಒಂದು ಗೋವಿನ ಸಾಧನೆಯದು ಕಪಿಲಸಿದ್ಧಮಲ್ಲಿಕಾರ್ಜುನನ
ಮಂದಿರದ ಸಾಧನೆ ಲೇಸು ನೋಡಾ, ಕೇದಾರ ಗುರುದೇವಾ. ॥ ೬೩೬ ॥

೧೪೭೫

ಶ್ರುತಿಯಲ್ಲಿ ಕೂಗಿಡುವುದದು ಪರಾತ್ಪರ ಪಂಚಾಕ್ಷರ ಎಂಬುದಾಲಿಸಯ್ಯಾ.
ಎನ್ನ ಮತಿಯಲ್ಲಿ ತೋರುವುದದು ಪರಾತ್ಪರ ಪದಮಾಷ್ಟವರ್ಣಂ :
'ಓಂ ಚೆನ್ನಬಸವಾಯನಮಃ' ಎಂಬುದಾಲಿಸಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೩೭ ॥

೧೪೭೬

ತಿಳಿಯದೆ ಜಪಿಸಿದ ಮಂತ್ರ ನಿಷ್ಫಲವಾದುದು ನೋಡಾ, ಗುರುವೆ.
ಪ್ರಣವಪಲ್ಲವಗಳರಿದು ಜಪಿಸುವುದದು ಸಫಲ ನೋಡಾ, ಗುರುವೆ.
ಇದರಂದವ ತೋರಿದ ಎನ್ನ ಗುರು ಚೆನ್ನಬಸವ ನೋಡಾ, ಗುರುವೆ.
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೩೮ ॥

೧೪೭೭

ಜಪವೆಂಬುದು ಪಾಪಕ್ಕೆ ಬಹು ತಾಪ ನೋಡಯ್ಯಾ.
ಜಪವೆಂಬುದು ಪುಣ್ಯದ ನಾಣ್ಯ ನೋಡಯ್ಯಾ.
ಜಪವೆಂಬುದು ಚೆನ್ನಬಸವನ ಪಾದದಲ್ಲಿಯೆ ಐಕ್ಯ ನೋಡಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೬೩೯ ॥

೧೪೭೮

ಜಪಿಸಬಾರದು ಜಪಿಸಬಾರದು ಕುಮಂತ್ರಂಗಳ.
ಜಪಿಸಬಾರದು ಜಪಿಸಬಾರದು ಮೋಹನದ ಮಂತ್ರಂಗಳ.
ಜಪಿಸಬಾರದು ಜಪಿಸಬಾರದು ಮಾರಣಮಂತ್ರಂಗಳ.
ಜಪಿಸಬೇಕು ಜಪಿಸಬೇಕು, 'ಕಪಿಲಸಿದ್ಧಮಲ್ಲಿಕಾರ್ಜುನಾಯ ನಮಃ'
ಎಂದು ಕೇಳಾ ಕೇದಾರ ಗುರುದೇವಾ. ॥ ೬೪೦ ॥

೧೪೭೯

ಜಪಿಸಬೇಕು ಜಪಿಸಬೇಕು ಸತ್ಯಶೀಲವ.
ಜಪಿಸಬೇಕು ಜಪಿಸಬೇಕು ಪರಹಿತವ.
ಜಪಿಸಬೇಕು ಜಪಿಸಬೇಕು ಪರಸ್ತ್ರೀ ಪರಧನವನೊಲ್ಲೆನೆಂಬುದ.
ಜಪಿಸಬೇಕು ಜಪಿಸಬೇಕು ಗುರು–ಲಿಂಗ–ಜಂಗಮ ದಾಸೋಹವ.
ಜಪಿಸಬೇಕು ಜಪಿಸಬೇಕು 'ಕಪಿಲಸಿದ್ಧಮಲ್ಲಿಕಾರ್ಜುನಾಯ ನಮಃ'
ಎಂದು, ಕೇಳಾ ಕೇದಾರ ಗುರುದೇವಾ. ॥ ೬೪೧ ॥

೧೪೮೦

ಜಪಿಸಬೇಕು ಜಪಿಸಬೇಕು ದೇಹ ನಾನಲ್ಲೆಂದು.
ಜಪಿಸಬೇಕು ಜಪಿಸಬೇಕು ಜೀವಾತ್ಮ ಸಾಕ್ಷಿಯಲ್ಲೆಂದು.
ಜಪಿಸಬೇಕು ಜಪಿಸಬೇಕು ನಾ ಚೆನ್ನಬಸವನೆಂದು.
ಜಪಿಸಬೇಕು ಜಪಿಸಬೇಕು ಕಪಿಲಸಿದ್ಧಮಲ್ಲಿಕಾರ್ಜುನನ
ಪಾದಪದ್ಮ ಭ್ರಮರವೆಂದು. ॥ ೬೪೨ ॥

೧೪೮೧

ಮಂತ್ರದೇಹಿ ತಾನಾದ ಬಳಿಕ
ಮಲತ್ರಯಕ್ಕೊಳಗಾಗಬಹುದೇನಯ್ಯಾ ?
ಸರ್ವದೇಹಿ ಅಂತರ್ಯಾಮಿ ತಾನೆಂದರಿದ ಬಳಿಕ,
ಕೊಲ್ಲುವುದಕ್ಕೆ ಒಳಗಾಗಬಹುದೇನಯ್ಯಾ,
ಕೇದಾರ ಗುರುದೇವಯ್ಯಾ ?*
॥ ೬೪೩ ॥

*ಅಂಕಿತವಿಲ್ಲದ ಸಿದ್ಧರಾಮನ ವಚನ.

೧೪೮೨

ನರಜನ್ಮಕ್ಕೊವ್ಮ್ಮೆ ಬಂದ ಬಳಿಕ,
ಗುರುವಿನ ಕುರುಹ ಕಾಣಬೇಕು.
ಗುರುವಿನ ಕುರುಹ ತಾ ಕಂಡ ಬಳಿಕ,
ಶಿಷ್ಯನಾಗಿ ಗುರುಕರಜಾತನಾಗಬೇಕು.
ಗುರುಕರಜಾತನಾದ ಬಳಿಕ, ಗುರುಸ್ವರೂಪಾಗಿ,
ಕಪಿಲಸಿದ್ಧಮಲ್ಲಿಕಾರ್ಜುನನ ಪಾದಪದ್ಮದಲ್ಲಿ ಐಕ್ಯವ ಗಳಿಸಬೇಕು,
ಘಟ್ಟಿವಾಳಯ್ಯಾ. ॥ ೬೪೪ ॥

೧೪೮೩

ಜನರಿಲ್ಲದ ಘಟ್ಟದೊಳು ಘನವಿಲ್ಲದೊಂದು ಪಟ್ಟಣವಿದೆ ನೋಡಾ.
ಪಟ್ಟಣವೊಂದರೊಳು ಮೂರು ಕಟ್ಟಿಗೆಯಿವೆ ನೋಡಾ.
ಮೂರರಲ್ಲಿ ಮೂಲೋಕ ಮುಟ್ಟಿ, ಮುಟ್ಟಿ,
ಕಪಿಲಸಿದ್ಧಮಲ್ಲಿಕಾರ್ಜುನನ ನೆಟ್ಟನೆ ಘಟ್ಟಿಗೊಳ್ಳವು ನೋಡಾ,
ದಿಟ್ಟ ನಿಜ ನಟ್ಟ ಘಟ್ಟಿವಾಳಾ ! ॥ ೬೪೫ ॥

೧೪೮೪

ವನವೊಂದರಲ್ಲಿ ಘನಕಾಸಾರ ಬೆಳೆದುದ ಕಂಡೆ.
ಆ ಘನಕಾಸಾರದಲ್ಲಿ ಮೂರು ಹೂಗಳ ಕಂಡೆ.
ಆ ಮೂರು ಹೂಗಳಲ್ಲಿ ಮೂರು ಮೂರ್ತಿಗಳ ಕಂಡೆ.
ಆ ಮೂರು ಮೂರ್ತಿಗಳಲ್ಲಿ ಮೂಲೋಕದರಸ
ಕಪಿಲಸಿದ್ಧಮಲ್ಲಿಕಾರ್ಜುನನ ಕಂಡು ಕಣ್ದೆರೆದು ಕಂಡೆ ಕಂಡೆ,
ಕಂಡೆಯಾ ಕೇದಾರ ಗುರುವೆ. ॥ ೬೪೬ ॥

೧೪೮೫

ಅರಿದ ಬಳಿಕ ಬ್ರಹ್ಮವೆಂಬುದು ಮೃಗಜಲ ನೋಡಾ.
ಅರಿದ ಬಳಿಕ ಬ್ರಹ್ಮವೆಂಬುದು ವಂಧ್ಯಾಪುತ್ರ ನೋಡಾ.
ಅರಿದ ಬಳಿಕ ಬ್ರಹ್ಮವೆಂಬುದು ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ
ಶಬ್ದಮುಗ್ಧ ನೋಡಾ, ಕಲ್ಲಯ್ಯಾ. ॥ ೬೪೭ ॥

೧೪೮೬

ಅರಿಯಲಿ, ಅರಿಯದೆ ತಾ ಸಹಜ ಇರಲಿ,
ಕಡೆಯಲ್ಲಿ ಪರಾತ್ಪರವಸ್ತು ತಾನೆಂಬುದು ದಿಟ ನೋಡಾ.
ಅರಿದ ದಾರಿಯದು ಆರನು ಕೇಳದು ;
ಅರಿಯದ ದಾರಿಯದು ನೂರಾರನು ಕೇಳಿ,
ಕಡೆಗೆ ಕಪಿಲಸಿದ್ಧಮಲ್ಲಿಕಾರ್ಜುನ ನಗರ ಸೇರುವುದು ಓರೆಯಾಗದು,
ಕೇದಾರ ಗುರುವೆ. ॥ ೬೪೮ ॥

೧೪೮೭

ಆಕಾಶದಲ್ಲಿಯ ಮೇಘದಂತೆ, ಜಲದಲ್ಲಿಯ ತೆರೆಯಂತೆ
ಬರುತ್ತಿದೆ ನೋಡಾ ಈ ಘಟ.
ಬಂದುದರಿಯೆ, ಹೋದುದರಿಯೆ.
ನಿಂದ ವಸ್ತುವದು ನಿಜವೆಂದರಿದೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೪೯ ॥

೧೪೮೮

ಆದಿಯಲ್ಲಿ ಬಯಲು, ಅಂತ್ಯದಲ್ಲಿ ಬಯಲು,
ಮಧ್ಯದಲ್ಲಿ ತೋರಿ ಕೆಡುವುದದು ನೋಡಾ, ಈ ಘಟವು.
ತೋರಿ ತೋರಿ ಕೆಡುವುದಕ್ಕೆ,
ಈ ಜಗದಲ್ಲಿ ಇದೆ ದೃಷ್ಟ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೫೦ ॥

೧೪೮೯

ಪಂಚಮುಖವರ್ಣಂಗಳವು ಪಂಚಮುಖನಂಘ್ರಿರೇಣುವಿಗೆ
ಯೋಗ್ಯ ನೋಡಾ.
ಷಣ್ಮುಖವರ್ಣಂಗಳವು ಅಷ್ಟಮೂರ್ತಿಯ
ಪದಪದ್ಮದೈಕ್ಯಕ್ಕೆ ಯೋಗ್ಯ ನೋಡಾ.
ಷಡ್ಚಕ್ರವರ್ಣಂಗಳವು ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಐಕ್ಯ ನೋಡಾ,
ಎಂದರುಹಿದ ಗುರು ಚೆನ್ನಬಸವಣ್ಣನ ಪಾದವ ನೆನೆನೆನೆದು
ಮುಕ್ತನಾದೆ ನೋಡಾ. ॥ ೬೫೧ ॥

೧೪೯೦

ಮೂರಕ್ಷರದಲ್ಲಿ ಏಳು ಭುವನ ಓಲಾಡುತ್ತಿದೆ.
ಮೂರಕ್ಷರದಲ್ಲೀರಾರು ಪ್ರಣವಂಗಳಾಡುತ್ತಿವೆ.
ಮೂರಕ್ಷರ ಮೂರು ಮೂರ್ತಿಯ ಕ್ರಿಯೆಯಾಚರಿಸುತ್ತಿದೆ.
ಮೂರಕ್ಷರದಲ್ಲಿ ಮಾರಹರ ಕಪಿಲಸಿದ್ಧಮಲ್ಲಿಕಾರ್ಜುನನ
ರೂಹು ತೋರುತ್ತಿದೆ. ॥ ೬೫೨ ॥

೧೪೯೧

ಆರು ಪ್ರಣವದ ಕಡೆಯಕ್ಷರ ಚಿದಾಕಾಶದ ಅಂಗ ನೋಡಾ.
ಆರು ಪ್ರಣವದ ಮೂಲಾಕ್ಷರ ಚಿನ್ಮಯ ಮಂದಿರ ನೋಡಾ.
ಆರು ಪ್ರಣವದ ಮಧ್ಯ ನಾಲ್ಕಕ್ಷರ ಶಿವಶಕ್ತಿರೂಪು ನೋಡಾ.
ಆರು ಪ್ರಣವದ ಜಪವದು ಕಪಿಲಸಿದ್ಧಮಲ್ಲಿಕಾರ್ಜುನನ ಒಲುಮೆ ನೋಡಾ.
॥ ೬೫೩ ॥

೧೪೯೨

ನವಗ್ರ[ಹ] ವರ್ಣಂಗಳ ಧ್ಯಾನವೆಂಬುವುದು
ನವಸಹಸ್ರಕರ್ಣಿಕೆಯಲ್ಲಿರುವ ಪರಂಜ್ಯೋತಿ ರೂಪುಪ್ರಾಪ್ತಿ ನೋಡಾ.
ದ್ವಾದಶಾದಿತ್ಯವರ್ಣಂಗಳ ಧ್ಯಾನವೆಂಬುವುದು
ದ್ವಾದಶಾದಿತ್ಯರ ಪ್ರಭೆಯ ನುಂಗಿದ
ಮಹಾಲಿಂಗಮೂರುತಿ ಪ್ರಾಪ್ತಿ ನೋಡಾ.
ಷೋಡಶಕಲಾವರ್ಣಂಗಳ ಧ್ಯಾನವೆಂಬುವುದು
ಷೋಡಶಕಲಾಚಂದ್ರಧರ ಕಪಿಲಸಿದ್ಧಮಲ್ಲಿಕಾರ್ಜುನ ತಾನೆ ನೋಡಾ,
ಕೇದಾರ ಗುರುದೇವಾ. ॥ ೬೫೪ ॥

೧೪೯೩

ಅಕಾರವದು ಸತ್ವ, ಉಕಾರವದು ರಜ, ಮಕಾರವದು ತಮ.
ಅಕಾರವದು ಬ್ರಹ್ಮಜನಕ, ಉಕಾರವದು ವಿಷ್ಣುಜನಕ,
ಮಕಾರವದು ರುದ್ರಜನಕ.
ಅಕಾರವದು ಸೃಷ್ಟಿ, ಉಕಾರವದು ಸ್ಥಿತಿ, ಮಕಾರವದು ಲಯ.
ಅಕಾರವದು ಪೀತ, ಉಕಾರವದು ಶ್ಯಾಮ, ಮಕಾರವದು ಶುಕ್ಲ.

ಅಕಾರವದು ವಿಧಿ, ಉಕಾರವದು ವಿಧಾನ, ಮಕಾರವದು ಧ್ಯಾನ.
ಅಕಾರವದು ಪಾತಾಳ, ಉಕಾರವದು ಮೃತ್ಯ್, ಮಕಾರವದು ಸ್ವರ್ಗ.
ಅಕಾರ ಉಕಾರ ಮಕಾರ ಮೂರರ ಏಕತ್ವವೆ ಓಂಕಾರ.
ಆ ಓಂಕಾರವೆ ಆದಿಶಕ್ತಿಯ ಗದ್ದುಗೆ.
ಆ ಗದ್ದುಗೆಯೆ ಕಪಿಲಸಿದ್ಧಮಲ್ಲಿಕಾರ್ಜುನನ ಅರಮನೆ ನೋಡಾ. ॥ ೬೫೫ ॥

೧೪೯೪

ಅನಿರ್ವಾಚ್ಯವೆ ವಾಚ್ಯಪ್ರಣವವಾಗಿ ನಿಂದಿತ್ತು ;
ವಾಚ್ಯವೆ ವಚಿಸುವುದಕ್ಕೆ ಮೂಲ ಪ್ರಣವವಾಯಿತ್ತು ;
ಮೂಲವೆ ಭೂತಾಂಗ ಪಂಚಾಕ್ಷರವಾಯಿತ್ತು ;
ಪಂಚಾಕ್ಷರವೆ ಪಂಚಮುಖವಾಯಿತ್ತು ;
ಪಂಚಮುಖಂಗಳೆ ಪಂಚಕರಣಂಗಳಾಯಿತ್ತು ;
ಪಂಚಕರಣಂಗಳೆ ಪಂಚವರ್ಣವಾಯಿತ್ತು ;
ಪಂಚವರ್ಣವೆ ಪ್ರಪಂಚ ರಚನೆ ನಿಮಿರಿತ್ತು ;
ನಿಮಿರಿ ನಿಮಿರಿದ ರಚನೆ ನೋಡಿ ಎನ್ನ ಚಿತ್ತ ಚಂಚಲವಾಯಿತ್ತಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೫೬ ॥

೧೪೯೫

ಭಕ್ತ ತಾನಾದ ಬಳಿಕ ಪಂಚಮುದ್ರೆಗಳಿಂದಲಂಕೃತನಾಗಿರಬೇಕು.
ಅಲಂಕಾರಿ ತಾನಾದ ಬಳಿಕ ಶಿವಮುದ್ರೆ ಶಿವಭಾವ ಅಚ್ಚೊತ್ತಿರಬೇಕು.
"ಗುರೌ ಲಿಂಗೇಕ್ಷಮಾಲಾಯಾಂ ಮಂತ್ರೇ ಭಸ್ಮನಿ ಪಂಚಸು
ಏತಾಸು ಶಿವಮುದ್ರಾಸು ಶಿವಸದ್ಭಕ್ತಿಮಾಚರೇತ್ ॥"
ಎಂದು ವಾತುಲಾಗಮದಲ್ಲಿ ಕಪಿಲಸಿದ್ಧಮಲ್ಲಿಕಾರ್ಜುನನ ವಚನವುಂಟು,
ನೋಡಾ ಕೇದಾರಯ್ಯಾ. ॥ ೬೫೭ ॥

೧೪೯೬

ತಾ ಶಿವಭಕ್ತನಾಗಿ ತನ್ನ ಬಂಧುಗಳ ಭವಿತನದಲ್ಲಿರಿಸಬಾರದಯ್ಯಾ.
ಮಾತಿನಿಂದಾಗಲಿ ಮನದಿಂದಾಗಲಿ ಭೀತಿಯಿಂದಾಗಲಿ
ಶಿವಭಕ್ತಿಯ ಪೂರೈಸುವುದಯ್ಯಾ.
"ಆತ್ಮೀಯಾನ್ವಿವಿಧಾನ್ ಭೋಗಾಂ ಸ್ತ್ರೀಪುತ್ರ ಪ್ರಮುಖಾನಪಿ ।
ಸ್ವಾತ್ಮನೋsಪಿ ವಿಶೇಷೇಣ ತೇಷಾಂ ಚೈವ ಸಮಾನಯೇತ್ ॥"

ಎಂಬ ನುಡಿಯು ನೋಡಿದೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನದೇವಾ, ತುಲದಲ್ಲಿ ಕಲ್ಲಯ್ಯಾ. ॥ ೬೫೮ ॥

೧೪೯೭

ಭಕ್ತನಾಗಿ ಭಕ್ತಿಯಿಲ್ಲದವ ಶಿವದ್ರೋಹಿ ನೋಡಾ, ಮನವೆ.
"ಯೋ ಭಕ್ತೋ ಭಕ್ತಿಮಾನ್ ಲೋಕೇ ಭೇದಂ ಮೋಹಾತ್ಕರೋತಿ ಹಿ ।
ಶಿವದ್ರೋಹೀ ಸ ವಿಜ್ಞೇಯಸ್ಸರ್ವಕರ್ಮ ಬಹಿಷ್ಕೃತಃ ॥"
ಎಂಬ ವಾಕ್ಯ ಪಾಲಿಸಿದೆ ನೋಡಾ, ಮನವೆ.
ಎನ್ನ ಗುರು ಚೆನ್ನಬಸವ ಕಪಿಲಸಿದ್ಧಮಲ್ಲಿಕಾರ್ಜುನನಿಂದೆ, ಮನವೆ.
॥ ೬೫೯ ॥

೧೪೯೮

ಕುಲದಲ್ಲಿ ಶೂದ್ರನಾದಡೇನು
ಮನದಲ್ಲಿ ಮಹಾದೇವ ನೆಲೆಗೊಂಡವನೆ ವೀರಶೈವ ನೋಡಾ.
"ಕಾಂಚನಂ ರಜತಂ ತಾಮ್ರಂ ರಸಯೋಗಾತ್ಸುವರ್ಣ ತಾಂ ।
ತಥಾ ಶಿವಜ್ಞಾನರಸಾಚ್ಛೂದ್ರಾದ್ಯಃ ಶಿವತಾಂ ವ್ರಜೇತ್॥ "
ಎಂಬುದು ಸಟೆಯೇನಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಲಿಂಗವೆ ? ॥ ೬೬೦ ॥

೧೪೯೯

ಜನನವಿಲ್ಲದ ಮೂರ್ತಿ ಮನದ ಮೊನೆಯಲ್ಲಿ ಚರಿಸುತ್ತಿದೆ ನೋಡವ್ವಾ.
ಘನಕ್ಕೆ ನಿಲುಕದ ಮೂರ್ತಿ ಅಣುರೇಣುವಿನಲ್ಲಿ
ಮನೆಮಾಡಿ ಚರಿಸುತ್ತಿದೆ ನೋಡವ್ವಾ.
ತಿಳಿದಿಹೆ ನಾನೆಂದಡೆ ತಿಳಿಯದೆ ದೂರವಾಗಿ ಚರಿಸುತ್ತಿದೆ ನೋಡವ್ವಾ.
ಇದರಂದವನರಿದರಿದು ಬೇಸತ್ತು ಬೆಂಬಿದ್ದೆನವ್ವಾ,
ಕಪಿಲಸಿದ್ಧಮಲ್ಲಿಕಾರ್ಜುನಂಗೆ. ॥ ೬೬೧ ॥

೧೫೦೦

ಕರಡಿಗೆಯೊಳೊಬ್ಬ ಕುರುಡ ಮೂರುತಿ ತೋರುತ್ತಾನೆ.
ಒಡನೊಡನೆ ನಡೆದಡೆ ಮೈಯೆಲ್ಲಾ ಚಕ್ಷುವಾಗಿ ತೋರುತ್ತಾನೆ.
ನಡೆಯದಿರ್ದಡೆ ಕಪಿಲಸಿದ್ಧಮಲ್ಲಿಕಾರ್ಜುನನು ಕುರುಡ,
ಇವನೂ ಕುರುಡ ನೋಡಾ, ಕೇದಾರ ಗುರುದೇವಾ. ॥ ೬೬೨ ॥

೧೫೦೧

ಕಣ್ಣೊಳಗೆ ಮೂರು ಬಣ್ಣದ ಚಿತ್ರದಲ್ಲಿ
ಚಿನ್ಮಯರೂಪು ಹೊಳೆಯುತ್ತಿದೆ ನೋಡಾ.
ಕಣ್ಣಾರ ನೋಡಿದಡೆ ಮುಕ್ಕಣ್ಣನ ರೂಪು ಅದೆ ನೋಡಾ,
ನೋಡದಿರೆ ಅವ ಹಾಳು ಮಣ್ಣು ನೋಡಾ,
ಮೂಲೋಕದೆರೆಯ ಕಪಿಲಸಿದ್ಧಮಲ್ಲಿಕಾರ್ಜುನನು. ॥ ೬೬೩ ॥

೧೫೦೨

ಗುರು ತೋರಿದಡೆ ಕೀಲು ಇಂದರಿದು ಬಂದಿತ್ತೆಲಗವ್ವಾ.
ನಾರೀಪರನೆಂಬಲ್ಲಿ ನಾರಿಯಾದೆನೆಲೆಗವ್ವಾ, ಇನ್ನಾರೆ !
ನೆರೆಯಬೇಕಾದಡೆ, ಗಂಡ ಕಪಿಲಸಿದ್ಧಮಲ್ಲಿಕಾರ್ಜುನನ,
ಬಯಲಿಗೆ ಬಯಲಾಗಿ ಏಕವಾದನೆಲಗವ್ವಾ. ॥ ೬೬೪ ॥

೧೫೦೩

ಎಲ್ಲರ ಬಣ್ಣಿಸಬಹುದು, ಎನ್ನ ಗುರುದೇವನ ಬಣ್ಣಿಸಬಾರದು.
ಅಲ್ಲನ ನುಡಿಸಬಹುದು, ಎನ್ನ ನಲ್ಲ ಕಪಿಲಸಿದ್ಧಮಲ್ಲೇಂದ್ರನ ರೂಪು
ಚೆನ್ನಬಸವನ ನುಡಿಸಿ ಗೆಲಬಾರದು, ಖುಲ್ಲತನದಿಂದಾದಡೂ ಕಲ್ಲಯ್ಯಾ.
॥ ೬೬೫ ॥

೧೫೦೪

ಬಂದೆ [ಹೆ] ನೆಂದು ಹೇಳಿದ ಬಳಿಕ,
ಬಾರದೆ ಇಪ್ಪನೆ ಹೇಳಾ, ಭಾಳಲೋಚನನು ?
ನಿಂದೆಹೆನೆಂದು ನಿರೂಪಿಸಿದ ಬಳಿಕ ನಿಂದಿಪ್ಪನೆ !
ಇಂದುಧರ ಬಂದಡೆ ಬಹು ಲೇಸು,
ನಿಂದಡೆ ಎರಡು ಲೇಸು.
[ಬಂದೆಹೆನೆಂದು] ಬಾರ[ದಿದ್ದಡೆ], ನಿಂ[ದೆಹೆನೆಂ]ದು ನಿಂದಿರದಿದ್ದಡೆ,
ಇಂದು ಈ ಪೂಜೆ ಸಮಾಪ್ತಿ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ.
॥ ೬೬೬ ॥

೧೫೦೫

ಸಾಕುವವರು ತಾವಾದ ಬಳಿಕ
ನೂಕುವವರು ತಾವಾಗಬಾರದಯ್ಯಾ.
ಹೇಳಿದವರು ತಾವಾದ ಬಳಿಕ
ಈ ಪ್ರಪಂಚದಲ್ಲೆನ್ನ ಗೋಳಿಡಿಸಬಾರದಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೬೬೭ ॥

೧೫೦೬

ಅಲ್ಲಿರುವಾತನ ರೂಹು ನೀವಲ್ಲೆಂಬಡೆ,
ಅಲ್ಲಿರುವಾತನ ರೂಹು ದೇವಾಲಯುವ ತೆಗೆಸರಯ್ಯಾ.
ಅಲ್ಲಿಯು ರೂಹು ಇಲ್ಲಿಯು ರೂಹು
ಕಪಿಲಸಿದ್ಧಮಲ್ಲಿಕಾರ್ಜುನನೆಂದು ಕಂಡೆನು.
ಅಲ್ಲಮದೇವಾ, ಇನ್ನಾದರೂ ಕರುಣಿಸಯ್ಯಾ. ॥ ೬೬೮ ॥

೧೫೦೭

ನಿರಾಕಾರಮೂರ್ತಿ ನೀನಾಕಾರಕ್ಕೆ ಬಂದೆ ಎನಲಾರೆ.
ಆಕಾರಮೂರ್ತಿ ನಿರಾಕಾರಕ್ಕೆ ಹೋಹುದೆಂದೆನಲಾರೆ.
ನಿಂತಡೆ ನೆರಳಿಲ್ಲ, ನೋಡಿದಡೆ ರೂಹಿಲ್ಲ ;
ಮುಟ್ಟಿದಡೆ ಸ್ಪರ್ಶವಿಲ್ಲ, ನಡೆದಡೆ ಹೆಜ್ಜೆಯಿಲ್ಲ,
ನೀನೊಡೆಯು ಕಪಿಲಸಿದ್ಧಮಲ್ಲಿಕಾರ್ಜುನನಲ್ಲೆನಬಹುದೆ ? ॥ ೬೬೯ ॥

೧೫೦೮

ಬಾಣನವನೊಬ್ಬ ಲಿಂಗಪೂಜಕ.
ಮಾದಾರ ಚೆನ್ನಯ್ಯನವನೊಬ್ಬ ಲಿಂಗಪೂಜಕ.
ಈ ಕಪಿಲಸಿದ್ಧಮಲ್ಲಿಕಾರ್ಜುನನ ಮಹಾಮಂದಿರದಲ್ಲಿ
ನಾನೊಬ್ಬ ಲಿಂಗಪೂಜಕ. ॥ ೬೭೦ ॥

೧೫೦೯

ಎಲ್ಲರು ಲಿಂಗವ ಪೂಜಿಸಿ ಮಹಾಪದಸ್ಥರಾದ ಪರಿಯನೊರೆವೆ ಕೇಳಾ :
ಸ್ಫಟಿಕ ಶಿಲಾಮಯ ಲಿಂಗವ ಪೂಜಿಸಿ,
ಸತ್ಯಲೋಕವ ಪಡೆದ ನೋಡಾ, ವಿಧಾತೃನು.

ಇಂದ್ರನೀಲಮಣಿ ಲಿಂಗವ ಪೂಜಿಸಿ,
ವೈಕುಂಠವ ಪಡೆದ ನೋಡಾ, ನಾರಾಯಣನು.
ಮರಕತಲಿಂಗವ ಪೂಜಿಸಿ, ಅಮರಾವತಿಯ ಪಡೆದ ನೋಡಾ, ಉಪೇಂದ್ರನು.
ಚಿಂತಾಮಣಿ ಲಿಂಗವ ಪೂಜಿಸಿ,
ಅನಂತ ಸ್ತ್ರೀಯರ ಪಡೆದ ನೋಡಾ ಇಂದ್ರನು.
ಸುವರ್ಣಲಿಂಗವ ಪೂಜಿಸಿ, ಅಳಕಾವತಿ ನವನಿಧಿ ಉಚ್ಚೈಶ್ರವ
ಪರಮಾತ್ಮಮಿತ್ರತ್ವ ಪಡೆದ ನೋಡಾ, ಕುಬೇರನು.
ಹಿತ್ತಾಳಿಯ ಲಿಂಗವ ಪೂಜಿಸಿ,
ಸರ್ವಸಖತ್ವ ಸರ್ವದ್ರವ್ಯತ್ವ ಶಿವಕರುಣತ್ವ ಪಡೆದ ನೋಡಾ, ಪವನನು.
ಕಾಂಸ್ಯಮಯ ಲಿಂಗವ ಪೂಜಿಸಿ,
ಅಷ್ಟದಿಕ್ಕುಗಳ ಪಡೆದರು ನೋಡಾ, ವಸುಗಳು.
ಮೃಣ್ಮಯ ಲಿಂಗವ ಪೂಜಿಸಿ,
ಸಂಜೀವನ ಮೊದಲಾದೌಷಧಿಗಳ ಪಡೆದರು ನೋಡಾ, ಅಶ್ವಿನೀಕುಮಾರರು
ಶ್ವೇತಶಿಲಾಮಯ ಲಿಂಗವ ಪೂಜಿಸಿ,
ಮಹತ್ಪ್ರಭೆ ಸಹಸ್ರಕಿರಣ ಪಡೆದ ನೋಡಾ ಸೂರ್ಯನು.
ಮೌಕ್ತಿಕಲಿಂಗವ ಪೂಜಿಸಿ,
ಸರ್ವಸಸಿ ಅಂಕುರತ್ವ ಶಿವಮೌಳಿಧಾರಣತ್ವ ಪಡೆದ ನೋಡಾ, ಚಂದ್ರನು.
ವಿಚಿತ್ರವರ್ಣದ ಲಿಂಗವ ಪೂಜಿಸಿ,
ತಮ್ಮ ತಮ್ಮ ಜನನ ಮಹತ್ವ ಪಡೆದವು ನೋಡಾ, ನಕ್ಷತ್ರಂಗಳು.
ಪಚ್ಚಮಯ ಲಿಂಗವ ಪೂಜಿಸಿ,
ಸರ್ವಶಾಸ್ತ್ರ ಧುರೀಣತ್ವವ ಪಡೆದ ನೋಡಾ ಬುಧನು.
ಕಬ್ಬಿಣ ಲಿಂಗವ ಪೂಜಿಸಿ ದೈತ್ಯಾಚಾರತ್ವವ ಪಡೆದ ನೋಡಾ, ಶುಕ್ರನು.
ವಿದ್ರುಮ ಲಿಂಗವ ಪೂಜಿಸಿ, ರಸಿಕತ್ವ ಪಡೆದ ನೋಡಾ ಮಂಗಳನು.
ಮಾಣಿಕ್ಯ ಲಿಂಗವ ಪೂಜಿಸಿ,
ಸರ್ವಮಂತ್ರ ಕುಶಲತ್ವ ಪಡೆದ ನೋಡಾ, ಬೃಹಸ್ಪತಿಯು.
ಅಧೋಮಯ ಲಿಂಗವ ಪೂಜಿಸಿ,
ಸರ್ವರಲ್ಲಿ ಕಷ್ಟತ್ವ ತನ್ನುಪಾಸಕರಲ್ಲಿ ಸುಖತ್ವ ಪಡೆದ ನೋಡಾ, ಶನಿಯು.
ಧೂಮ್ರಮಯ ಲಿಂಗವ ಪೂಜಿಸಿ,
ಅಮೃತವ ಪಡೆದರು ನೋಡಾ, ರಾಹು ಕೇತುಗಳು.
ಗೋಮಯ ಲಿಂಗವ ಪೂಜಿಸಿ,
ಕಲ್ಪತರುಗಳ ಪಡೆದರು ನೋಡಾ, ನಿರುತಿಯರು.
ಕುಶ ಲಿಂಗವ ಪೂಜಿಸಿ, ಅನೇಕ ಸಿದ್ಧಿಗಳ ಪಡೆದರು ನೋಡಾ, ಸಿದ್ಧರು.

ಮೂಲಿಕೆ ಲಿಂಗವ ಪೂಜಿಸಿ,
ಮರಣದೂರತ್ವ ದುಃಖಸಮೀಪತ್ವ ಪಡೆದರು ನೋಡಾ, ಧನ್ವಂತರಿಗಳು.
ಶಂಖ ಲಿಂಗವ ಪೂಜಿಸಿ.
ಶಿವಪ್ರಸನ್ನತ್ವ ಪಡೆದ ನೋಡಾ, ಮಾರ್ಕಂಡೇಯನು.
ಪವಿತ್ರ ಲಿಂಗವ ಪೂಜಿಸಿ,
ಅಂತಃಕರಣತ್ವ ಪಡೆದ ನೋಡಾ, ಸರ್ವರಲ್ಲಿ ವಸಿಷ್ಠನು.
ದರ್ಭಸ್ತಂಭ ಲಿಂಗವ ಪೂಜಿಸಿ,
ಅರ್ಧಬ್ರಹ್ಮತ್ವ ಪಡೆದ ನೋಡಾ, ವಿಶ್ವಾಮಿತ್ರನು.
ಕೂರ್ಚ ಲಿಂಗವ ಪೂಜಿಸಿ,
ಸರ್ವದೇವತಾಶಿಕ್ಷತ್ವ ಪಡೆದ ನೋಡಾ, ವಾಮದೇವನು.
ತಮ್ಮ ಜ್ಞಾನಸ್ವರೂಪ ಲಿಂಗವ ಸದಾ ಪೂಜಿಸಿ,
ಜ್ಞಾನವ ಪಡೆದರು ನೋಡಾ, ಸನಕಾದಿ ಮಹಾಮುನಿಗಳು.
ಶಿರೋರತ್ನ ಲಿಂಗವ ಪೂಜಿಸಿ, ದಿವ್ಯ ಸುಂದರತ್ವ ದಿವ್ಯ ಬುದ್ಧಿಶಕ್ತಿತ್ವ
ಅನೇಕ ವರ್ಷ ನಿಜರತ್ವಪಡೆದರು ನೋಡಾ, ನಾಗರ್ಕಳು.
ಕೀಟಾಕೃತಿ ಲಿಂಗವ ಪೂಜಿಸಿ,
ಶಿವಸಭಾಪ್ರಸನ್ನತ್ವ ಪಡೆದರು ನೋಡಾ, ರಾಕ್ಷಸರು.
ತ್ರಿಪುರ ಲಿಂಗವ ಪೂಜಿಸಿ,
ಅನೇಕ ಪುರಗಮನತ್ವ ಕಿಂಚಿತ್ ಕಿಂಚಿತ್ ಕುಟಿಲತ್ವ ಪಡೆದರು ನೋಡಾ,
ಬ್ರಹ್ಮರಾಕ್ಷಸ ಪಿಶಾಚಿಗಳು.
ತ್ರಿಲೋಹ ಲಿಂಗವ ಪೂಜಿಸಿ,
ಅದೃಶ್ಯತ್ವ ಗೋಪನೀಯ ಕಾರ್ಯತ್ವ ಪಡೆದರು ನೋಡಾ,
ಗುಹ್ಯಕದೇವತೆಗಳು.
ಪಂಚಲೋಹ ಲಿಂಗವ ಪೂಜಿಸಿ,
ಅನೇಕ ಮಂತ್ರಸಿದ್ಧಿತ್ವ ಪಡೆದರು ನೋಡಾ, ಶಾಬರಾದಿ ಮಾಂತ್ರಿಕರು.
ವಜ್ರ ಲಿಂಗವ ಪೂಜಿಸಿ,
ನಿತ್ಯ ಶಿವಾಭಿಷೇಕ ಮಾಡುವರು ನೋಡಾ, ಸಪ್ತ ಮಾತೃಕೆಯರು.
ಪ್ರಸೂನ ಲಿಂಗವ ಪೂಜಿಸಿ,
ಮೂರು ಲೋಕವ ತನ್ನೊಳ್ಮಾಡಿದ ನೋಡಾ, ಮನ್ಮಥನು.
ಇಚ್ಛಾಲಿಂಗವ ಪೂಜಿಸಿ,
ಆದಿನಾರಾಯಣನ ಪಡೆದಳು ನೋಡಾ, ಲಕ್ಷ್ಮಿಯು.
ಕ್ರಿಯಾಲಿಂಗವ ಪೂಜಿಸಿ,
ಬ್ರಹ್ಮನ ಪಡೆದಳು ನೋಡಾ, ಸರಸ್ವತಿಯು.

ಪತಿ ಎಂಬ ಲಿಂಗವ ಪೂಜಿಸಿ,
ಪತಿವ್ರತತ್ವ ಪಡೆದರು ನೋಡಾ, ಆರುಂಧತಿ, ಅನುಸೂಯೆ,
ಅನಲಾಯಿ ಸಾವಿತ್ರಿಯರು.
ಬಿಲ್ವಫಲ ಲಿಂಗವ ಪೂಜಿಸಿ,
ನವ್ಯ ಪ್ರಥಮಪಾದವ ಪಡೆದರು ನೋಡಾ, ಧರ್ಮದೇವತೆಗಳು.
ಜಂಬೂಫಲ ಲಿಂಗವ ಪೂಜಿಸಿ,
ಸರ್ವರ ಪ್ರಾಣಾಕರ್ಷಣವ ಪಡೆದಳು ನೋಡಾ, ಮೃತ್ಯುದೇವತೆ.
ನಿಂಬಫಲ ಲಿಂಗವ ಪೂಜಿಸಿ,
ನಿರೋಗ ಆರೋಗ್ಯ ಪಡೆದಳು ನೋಡಾ, ಆರೋಗ್ಯದೇವತೆ.
ಆಕಾಶ ಲಿಂಗವ ಪೂಜಿಸಿ, ಬಯಲ ಪಡೆದರು ನೋಡಾ, ದಿಗಂಬರರು.
ಧ್ವಜ ಲಿಂಗವ ಪೂಜಿಸಿ, ಖೇಚರತ್ವ ಪಡೆದರು ನೋಡಾ, ಗಗನಚಾರಿಗಳು.
ಮೋಹ ಲಿಂಗವ ಪೂಜಿಸಿ,
ಸರ್ವಜನವಶ್ಯತ್ವ ಪಡೆದುವು ನೋಡಾ, ಪಶುಪ್ರಾಣಿಗಳು.
ಬೀಜಧಾನ್ಯ ಲಿಂಗವ ಪೂಜಿಸಿ,
ಸರ್ವಧಾನ್ಯವ ಪಡೆದರು ನೋಡಾ, ಕರ್ಷಕರು.
ಇಂತಪ್ಪ ನಾನಾಕೃತಿ ಲಿಂಗವ ಪೂಜಿಸಿ, ಹಲಕೆಲವು ಪದಸ್ಥರಾದರು ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗದಲ್ಲಿ. ॥ ೬೭೧ ॥

೧೫೧೦

ಅಗ್ನಿಲಿಂಗವ ಬ್ರಾಹ್ಮಣ ಪೂಜಿಸಿದ ;
[ಧನುರ್ಲಿಂಗ]ವ ಕ್ಷತ್ರಿಯು ಪೂಜಿಸಿದ ;
[ಧನ]ಲಿಂಗವ ವೈಶ್ಯ ಪೂಜಿಸಿದ ;
ಖಡ್ಗ ಲಿಂಗವ ರಾಜ ಪೂಜಿಸಿದ ;
ಧಾನ್ಯಲಿಂಗವ ಶೂದ್ರ ಪೂಜಿಸಿದ
ಪರ್ವತಲಿಂಗವ ಶೈವ ಪೂಜಿಸಿದ.
ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗವ ಸಿದ್ಧರಾಮ ಪೂಜಿಸಿದ ನೋಡಾ,
ಕೇದಾರ ಗುರುದೇವ. ॥ ೬೭೨ ॥

೧೫೧೧

ಧರ್ಮವ ಧರಿಸಿದ ಬಳಿಕ
ಲಿಂಗಾರ್ಚನೆಯ ಮಾಡಿ ಸಾಯಬಹುದಯ್ಯಾ.

ಸತ್ತಡೆ ಸಾಯಬಹುದು,
ಹೊತ್ತಿಗೊಮ್ಮೆ ಸೂರ್ಯನಂತೆ ಬರಬಾರದಯ್ಯಾ.
ಬಂದಡೆ ಬರಬಹುದು,
ತನ್ನಾಯತವ ಮರೆದಿರಬಾರದಯ್ಯಾ,
ಮಹಾದೇವ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೭೩ ॥

೧೫೧೨

ಲಿಂಗಾರ್ಚಕನಾದ ಬಳಿಕ,
ಲಿಂಗ ವಿಧಿವಿಧಾನಂಗಳನರಿದರಿದು ಮಾಡಬೇಕು.
ಲಿಂಗದೇಹಿ ತಾನಾದ ಬಳಿಕ,
ಅಲಿಂಗಿಗಳ ಸಂಗವಳಿದಿರಬೇಕು.
ಲಿಂಗಧ್ಯಾನಿ ತಾನಾದ ಬಳಿಕ,
ಅಂಗನೆಯರ ನೋಡದಿರಬೇಕು.
ಲಿಂಗೈಕ್ಯ ತಾನಾದ ಬಳಿಕ,
ಕರುಣಾಕರ ಅಭಯಕರ ಕಪಿಲಸಿದ್ಧಮಲ್ಲಿಕಾರ್ಜುನನ
ಕಾರ್ಯದಲ್ಲಿ ಅಭೇದವಿರಬೇಕು ಕಾಣಾ, ಕೇದಾರಯ್ಯಾ. ॥ ೬೭೪ ॥

೧೫೧೩

ಲಿಂಗವ ಪೂಜಿಸಿ ಪಡೆದರು ಫಲಪದವನೆಂದು ಹೇಳದಿರಾ.
ಅಂದಿನ ವೃತ್ತಾಂತವ ನೀನಿಂದರಿವಡೆ ಮಾಡಿ ಮಾಡಿ ನೋಡಾ,
ಲಿಂಗಾರ್ಚನೆಯ.
ಮಾಡದೆ ನೋಡದೆ ನೀಡಾಡದೆ ಅರಿಯಬಾರದು,
ಕಪಿಲಸಿದ್ಧಮಲ್ಲಿಕಾರ್ಜುನನ ಲೀಲೆಯ ಎಲೆ ಕಲ್ಲಯ್ಯಾ. ॥ ೬೭೫ ॥

೧೫೧೪

ಶಿವ ಶಿವಾ, ಶಿವ ಶಿವಾ, ಶಿವ ಶಿವಾ ಎಂದೊಮ್ಮೆ
ಶಿವನಾಗಿ ಶಿವನ ಪೂಜಿಸು ಮನವೆ.
ಹರ ಹರಾ, ಹರ ಹರಾ, ಹರ ಹರಾ ಎಂದೊಮ್ಮೆ
ಹರನಾಗಿ ಪುರಹರನ ಪೂಜಿಸು ಮನವೆ.
ಲಿಂಗವೇ ಲಿಂಗವೇ [ಲಿಂಗವೇ] ಎಂದೊಮ್ಮೆ
ಕಪಿಲಸಿದ್ಧಮಲ್ಲಿಕಾರ್ಜುನಲಿಂಗವ ಪೂಜಿಸಿ ಲಿಂಗವಾಗು ಮನವೆ. ॥ ೬೭೬ ॥

೧೫೧೫

ಕಾಮಾರಿ ರೂಪು ಬಂದಾನೆಂದು,
ಕಾಮಾದ್ಯರಿಷಡ್ವರ್ಗಂಗಳ ಮಾಡದಿರು ಮನವೆ,
ಕಪಿಲಸಿದ್ಧಮಲ್ಲಿಕಾರ್ಜುನ ಸಾಕ್ಷಿಯಾಗಿ. ॥ ೬೭೭ ॥

೧೫೧೬

ಒಬ್ಬ ಮೂರ್ತಿ ಹಲವು ರೂಪಾಗಿ ಪೂಜಿಸಿಕೊಂಡ ನೋಡಾ, ಮನವೆ :
ಆದಿಲಿಂಗವಾಗಿ ತುಪ್ಪದ ಅಭಿಷೇಕ ಕೈಕೊಂಡ ;
ಅಮೃತಲಿಂಗವಾಗಿ ಅಮೃತದಭಿಷೇಕ ಕೈಕೊಂಡ ;
ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗವಾಗಿ
ಸರ್ವಾಭಿಷೇಕ ಕೈಕೊಂಡ ನೋಡಾ ಮನವೆ. ॥ ೬೭೮ ॥

೧೫೧೭

ವಿಷ ಉಂಡು ದಣಿಯಲಾರದೆ,
ವಿಷ ನೈವೇದ್ಯವ ಮಾಡಿಕೊಂಡ ನೋಡಾ, ಈ ದೇವಾ.
ತ್ರಿಪುರಾಂತಕ ಕೆರೆಯಗುಳಿ ದಣಿಯಲಾರದೆ,
ಹಲವು ಗುಡ್ಡ ರೂಪಾಗಿ ಕೆರೆಯಗುಳಿಸಿಕೊಂಡ ನೋಡಾ [ಈ ದೇವ].
ಇದ್ದ ದೇವಾಲಯವಲ್ಲದೆ ಮತ್ತೆ
ದೇವಾಲಯವ ಮಾಡಿಸಿಕೊಂಡ ನೋಡಾ, ಈ ದೇವ.
ತಾನಖಂಡಮೂರ್ತಿಯ ರೂಪು ಧರಿಸದೆ,
ಇಲ್ಲಿ ಲಕ್ಷ ತೊಂಬತ್ತಾರು ಸಾಸಿರ[ವಾಗಿ] ನೆಲಸಿಪ್ಪ ನೋಡಾ ಈ ದೇವ,
ಕಪಿಲಸಿದ್ಧಮಲ್ಲಿಕಾರ್ಜುನದೇವ. ॥ ೬೭೯ ॥

೧೫೧೮

ಇಷ್ಟಲಿಂಗ ಪೂಜೆಯದು ಅಷ್ಟೈಶ್ವರ್ಯಪ್ರದವಾಯಿತ್ತು.
ಪ್ರಾಣಲಿಂಗ ಪೂಜೆಯದು ಅಖಂಡಚಿದೈಶ್ವರ್ಯಪ್ರದವಾಯಿತ್ತು.
ಭಾವಲಿಂಗಪೂಜೆಯದು ನಿರ್ಭಾವ ನಿಜಾನಂದ ವಸ್ತುಸ್ವರೂಪವಾಯಿತ್ತು,
ಕೇಳಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೮೦ ॥

೧೫೧೯

ಅಕಾರವದು ಇಷ್ಟಲಿಂಗ, ಉಕಾರವದು ಪ್ರಾಣಲಿಂಗ,
ಮಕಾರವದು ಭಾವಲಿಂಗ.
ಭಕ್ತಂಗಾಗಲಿ ಷಟ್‌ಸ್ಥಲಬ್ರಹ್ಮಿಯಾದವಂಗಾಗಲಿ,
ಲಿಂಗತ್ರಯ ಪೂಜೆಯೆ ಬೇಕು.
ಲಿಂಗತ್ರಯ ಪೂಜೆಯರಿತು ಮಾಡದವರ ಮನದೆರೆದು ಮಾತಾಡೆನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಲಿಂಗವೆ. ॥ ೬೮೧ ॥

೧೫೨೦

ಎಲ್ಲರಿಗಿಂತಲೂ ಶಿವಭಕ್ತರಧಿಕರೆಂಬ ಕಾರಣವೇನಯ್ಯಾ ?
ನಿತ್ಯ ಲಿಂಗಾರ್ಚನೆ ಮೂರು ವೇಳೆ ;
ಲಿಂಗಾರ್ಚನೆಗೊಮ್ಮೆ ಲಿಂಗತ್ರಯಪೂಜೆ ;
ಪೂಜೆಗೊಮ್ಮೆ ಮಹಾಪ್ರಣವ ಜಪ ; ಜಪಕ್ಕೊಮ್ಮೆ ನಿಜಧ್ಯಾನ ;
ನಿಜಧ್ಯಾನಕ್ಕೊಮ್ಮೆ ಚಿತ್ತಿನ ಲಯ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೮೨ ॥

೧೫೨೧

ಅಕಾರಪ್ರಣವದಿಂದ ಸ್ಥೂಲದೇಹ ದಗ್ಧವಾಯಿತ್ತು ;
ಉಕಾರಪ್ರಣವದಿಂದ ಸೂಕ್ಷ್ಮದೇಹ ನಿರ್ಮಲವಾಯಿತ್ತು ;
ಮಕಾರಪ್ರಣವದಿಂದ ಕಾರಣದೇಹ ಕರ್ಮ[ಬೀಜ]ವಳಿಯಿತ್ತು.
ಅಕಾರದಲ್ಲಿ ಜಾಗೃತಿ, ಉಕಾರದಲ್ಲಿ ಸ್ವಪ್ನ, [ಮಕಾರದಲ್ಲಿ ಸುಷುಪ್ತಿ].
[ಜಾಗ್ರ] ಸ್ವಪ್ನದಲ್ಲಿದ್ದ ರೂಹು ಸುಷುಪ್ತಿಯ[ಲ್ಲಿ]ಲ್ಲ.
ತ್ರಿವಿಧಾವಸ್ಥೆಯುಲ್ಲೊಂದಾಗದ ಮಾತ್ರ ಪ್ರಾಣಲಿಂಗಿ ಆತನಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೮೩ ॥

೧೫೨೨

ದೇಹ ಎರಡರಲ್ಲಿ ಭಾವ ಒಂದಾಗದವ ಪ್ರಾಣಲಿಂಗಿಯಲ್ಲ.
ದೇಹ ಮೂರರಲ್ಲಿ ಸಾಕ್ಷಿ ತಾನಾಗದವ ಪ್ರಾಣಲಿಂಗಿಯಲ್ಲ.
ದೇಹ ನಾಲ್ಕರಲ್ಲಿ ನಿರ್ದ್ವಂದ್ವ ಅಸಾಕ್ಷಿಕ ತಾನಾಗದವ ಪ್ರಾಣಲಿಂಗಿಯಲ್ಲ.
ಈ ಛಂದವ [ನು ಅ] ನಿಂದೆಯೆಂದೆನಾಗಿ.

ಚೆನ್ನಬಸವನ ಗುರುಮೂರ್ತಿಯಿಂದ,
ಆತನ ಒಕ್ಕುದ ಮಿಕ್ಕುದ ಕಾಯ್ದುಕೊಂಡಿಪ್ಪಾತನ ಪಾದಕ್ಕೆ
ನಮೋ ನಮೋ ಎಂಬೆನಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೬೮೪ ॥

೧೫೨೩

ನಿರಾಕಾರದ ಮೂರ್ತಿಯು ಆಕಾರಕ್ಕೆ ತಂದೆಯಲ್ಲಾ ಬಸವಾ !
ಆಕಾರದ ಮೂರ್ತಿಯು ಹೃದಯಕಂಜದಲ್ಲಿ ವಾಸಗೊಂಡು
ತೋರಿದೆಯಲ್ಲಾ ಬಸವಾ !
ಈ ಆಕಾರಕ್ಕೆ ತಂದು, ಭಕ್ತಿಯುನನುಗೈದು,
ದಿಗುವಶದಲ್ಲಿ ಬೆಳೆದೆಯಲ್ಲಾ ಬಸವಾ ?
ಇನ್ನಾಕಾರವ ನಿರಾಕಾರದಲ್ಲಿ ಅನುಗೊಳಿಸಬೇಕೆಂದು,
ಕಪಿಲಸಿದ್ಧಮಲ್ಲಿಕಾರ್ಜುನನ ಹೃದಯದಲ್ಲಿ
ಮರೆಯಾದೆಯಲ್ಲಾ ಬಸವಾ ! ॥ ೬೮೫ ॥

೧೫೨೪

ಮೂರ್ತಿ ಮೂರರಲ್ಲಿ [ಅ]ಮೂರ್ತಿಯು[ಲೆಂ]ದು
ಬಂದೆಯಲ್ಲಾ ಮಡಿವಾಳಾ.
ದೇಹ ಮೂರರಲ್ಲಿ ನಿರ್ದೇಹಿಯಾಗಿ ಬಂದಾಚರಿಸಿದೆಯಲ್ಲಾ ಮಡಿವಾಳಾ.
ವಾಣಿ ನಾಲ್ಕರಲ್ಲಿ ಆನು ನಾನಲ್ಲೆಂಬ ಭಾವವಳಿದು ಶಬ್ದಮುಗ್ಧವಾಗಿ
ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಚಿದಾಕಾಶವಾಗಿ
ಪೋದೆಯಲ್ಲಾ ಮಡಿವಾಳಾ. ॥ ೬೮೬ ॥

೧೫೨೫

ಘನಕ್ಕೆ ಘನವೆಂಬವರ ಮನಕ್ಕೆ ತಂದು
ಅನುಗೊಳಿಸಿದೆಯಲ್ಲಾ, ಅಲ್ಲಮದೇವಾ.
'ಸರ್ವಂ ಖಲ್ವಿದಂ ಬ್ರಹ್ಮ' ಎಂದು ವಾದಿಸಿದಲ್ಲಿ,
ಲಿಂಗತ್ರಯದಲ್ಲಿ ಬೋಧಗೊಳಿಸಿದೆಯಲ್ಲಾ, ಅಲ್ಲಮದೇವಾ.
ಮಾಡಿ ನೀಡುವೆನೆಂಬವರ ರೂಹು
ಮೂಡದಂತೆ ಮಾಡಿದೆಯಲ್ಲಾ, ಅಲ್ಲಮದೇವಾ.
ದೃಷ್ಟಿಗೆ ಬಿದ್ದವರ ಮಹದೈಶ್ವರ್ಯಕ್ಕಿಟ್ಟು,

ನೀ ನೆಟ್ಟನೆ ಬೆಟ್ಟದಲ್ಲಿಯು ಬಟ್ಟಬಯಲ
ಕದಳಿಯಲಿ ಹೋಗಿ ಬಟ್ಟಬಯಲಾಗಿ,
ಜಗದಂತರ್ಯಾಮಿ ಕಪಿಲಸಿದ್ಧಮಲ್ಲಿಕಾರ್ಜುನನಾಗಿ
ನಿಂದೆಯಲ್ಲಾ ಅಲ್ಲಮದೇವಾ. ॥ ೬೮೭ ॥

೧೫೨೬

ನಾಗೇಶನ ತಿಳಿದೆವೆಂಬರು ಆನಾಗದೆ ಹೋದರು, ನಾಗಾಯಿ.
ನಾಗಕುಂಡಲನರಿದೆವೆಂಬರು ನಾಗದೇವತೆಗಳಾದರು, ನಾಗಾಯಿ.
ನಾಗಾಂಕನ ಅರಿದು ತಾನಾಗದೆ ನಾಗಕಂಕಣನಾದ, ನಾಗಾಯಿ,
ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ. ॥ ೬೮೮ ॥

೧೫೨೭

ಎನ್ನ ಘ್ರಾಣದಲ್ಲಿ ಆಚಾರಲಿಂಗವಾಗಿ ಬಂದ ಗುರು ಚೆನ್ನಬಸವಣ್ಣ.
ಎನ್ನ ಜಿಹ್ವೆಯಲ್ಲಿ ಗುರುಲಿಂಗವಾಗಿ ಬಂದ ಗುರು ಚೆನ್ನಬಸವಣ್ಣ.
ಎನ್ನ ನೇತ್ರದಲ್ಲಿ ಶಿವಲಿಂಗವಾಗಿ ಬಂದ ಗುರು ಚೆನ್ನಬಸವಣ್ಣ.
ಎನ್ನ ತ್ವಕ್ಕಿನಲ್ಲಿ ಜಂಗಮಲಿಂಗವಾಗಿ ಬಂದ ಗುರು ಚೆನ್ನಬಸವಣ್ಣ.
ಎನ್ನ ಶ್ರೋತ್ರದಲ್ಲಿ ಪ್ರಸಾದಲಿಂಗವಾಗಿ ಬಂದ ಗುರು ಚೆನ್ನಬಸವಣ್ಣ.
ಎನ್ನ ಹೃದಯದಲ್ಲಿ ಮಹಾಲಿಂಗವಾಗಿ ಬಂದ ಗುರು ಚೆನ್ನಬಸವಣ್ಣ.
ಎನ್ನ ಸ್ಥೂಲದೇಹದಲ್ಲಿ ಇಷ್ಟಲಿಂಗವಾಗಿ ಬಂದ ಗುರು ಚೆನ್ನಬಸವಣ್ಣ.
ಎನ್ನ ಸೂಕ್ಷ್ಮದೇಹದಲ್ಲಿ ಪ್ರಾಣಲಿಂಗವಾಗಿ ಬಂದ ಗುರು ಚೆನ್ನಬಸವಣ್ಣ.
ಎನ್ನ ಕಾರಣದೇಹದಲ್ಲಿ ಭಾವಲಿಂಗವಾಗಿ ಬಂದ ಗುರು
ಕಪಿಲಸಿದ್ಧಮಲ್ಲಿಕಾರ್ಜುನನೆಂಬ ಚೆನ್ನಬಸವಣ್ಣ. ॥ ೬೮೯ ॥

೧೫೨೮

ಇಂದ್ರಿಯ ಕಟ್ಟಿದ ದೇಹವದು ಚಂದ್ರನ ಲಕ್ಷಣ ಧರಿಸಿತ್ತು ನೋಡಾ.
ಚಂದ್ರನ ಲಕ್ಷಣವದು ಇಂದ್ರಪದ[ವನೀ]ಡಾಡಿತ್ತು ನೋಡಾ.
ಇಂದ್ರಪದವದು ಸಾಂದ್ರವಾಗಿ ಭೋಗಿಸುವುದಕ್ಕೆ ಮೈಗೊಟ್ಟಿತ್ತು ನೋಡಾ.
ಸಾಂದ್ರವಾದುದಕ್ಕೆ ಮಹೇಂದ್ರಜಾಲವನೊಡ್ಡಿ,
ಕಪಿಲಸಿದ್ಧಮಲ್ಲೇಂದ್ರನ ಇಂದ್ರಿಯಂಗಳಲ್ಲಿ ತಂದಿಟ್ಟಿತ್ತು
ನೋಡಾ, ಬಾಚರಸಯ್ಯಾ. ॥ ೬೯೦ ॥

೧೫೨೯

ಗರ್ಭವಿದ್ದಂಗನಗೆ ಒಮ್ಮೆ ಸಂಭ್ರಮವಲ್ಲದೆ,
ಗರ್ಭಗರ್ಭಕ್ಕೊಮ್ಮೆ ಸಂಭ್ರಮವಿಲ್ಲ ನೋಡಾ, ಗುರುವೆ.
ನೀನಿದ್ದ ಭಕ್ತಿಗೊಮ್ಮೆ ಒರೆದು ನೋಡಬಾರದು ನೋಡಾ, ಗುರುವೆ.
ನಾನಿದ್ದ ಕೇರಿಯುವರೆಲ್ಲರ ಒಮ್ಮೆ ಲಜ್ಜಿಸಬಹುದಲ್ಲದೆ,
ಮತ್ತೆ ಮತ್ತೆ ಲಜ್ಜಿಸುವುದು ಬೇಡ,
ಕಪಿಲಸಿದ್ಧಮಲ್ಲಿಕಾರ್ಜುನ ಗುರುವೆ. ॥ ೯೧ ॥

೧೫೩೦

ಸಾಕಾರದ ಲಕ್ಷ್ಯವದು ನಿರಾಕಾರದಲ್ಲಿ ಲೀನವಲ್ಲದೆ,
ಸಾಕಾರದಲ್ಲಿ ಲೀನವಾಗಬಾರದು.
ಕೀಟ_ಭ್ರಮರ ನ್ಯಾಯದಂತೆ ಚರಿಸಬಲ್ಲಡವನೆ
ನಿರ್ದೇಹ ಜೀವನ್ಮುಕ್ತನಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೯೨ ॥

೧೫೩೧

ವಾಙ್ಮನಕ್ಕಗೋಚರ ವಸ್ತುವೆಂದರಿದ ಬಳಿಕ,
ವಾಕ್ಯದಿಂದಾಗದು, ಮನದಿಂದಾಗದು.
ಅರಿದ ಅರಿವಿನಿಂದ ನೆನೆದು,
ನಿರಾಕಾರ ನಿಜವಸ್ತು ನಿರ್ಮಲ ಶುದ್ಧ ಶಬಲಾಂಶ
ತಾನಾಗಬಾರದೇನಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೯೩ ॥

೧೫೩೨

ಪುಣ್ಯದ ಬಲಿಯುದು ಪಾಪದಲ್ಲಿ ಪುಣ್ಯ ಬಲಿಯೆ ನೋಡಯ್ಯಾ.
ಪಾಪದ ಬಲಿಯುದು ಪುಣ್ಯದಲ್ಲಿ ಪಾಪ ಬಲಿಯೆ ನೋಡಯ್ಯ.
ನಾಗನ ಸ್ವಭಾವವೆ ವಿಷ ; ಮಧ್ಯಕ್ಷೀರ ಕ್ಷೀರವಾಗದು,
ವಿಷವೆ ಸಹಜ ನೋಡಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ, ॥ ೯೪ ॥

೧೫೩೩

ಯಾವಾದರೂ ತೀರ್ಗಡೆಯುಂತ್ಯದಲ್ಲಿ
ಜಪ ತಪ ಶಿವಾರಾಧನೆ ಫಲಪದವು.

ತೀರ್ಗಡೆಯಾ[ಗ]ದಲ್ಲಿ ಫಲಿಸದು ಫಲಿಸದು ಪುಣ್ಯಪಾಪಗಳವು.
ದೇಹಶುದ್ಧವಾದವಂಗೆ ರಸಸಿದ್ಧಿ
ರಸಸಿದ್ಧಿಯಾದವಂಗೆ ದೇಹಶುದ್ಧಿ.
ದೇಹಶುದ್ಧವಿಲ್ಲದವಂಗೆ ರಸಸಿದ್ಧಿಯಾಗದು ;
ರೋಗ ಪರಿಹಾರ [ವಾಗದು] ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೯೫ ॥

೧೫೭೪

ಪುಣ್ಯ ಪಾಪಗಳಿಗೆ ದೂರ ಹೇಳುವರಲ್ಲದೆ,
ಸಮೀಪ ಹೇಳುವರನಾರನು ಕಾಣೆ.
ಪುಣ್ಯ ಪಾಪ ಸಂಕೀರ್ತವಾದಲ್ಲಿ
ಕುಲಹೀನ ಕೀರ್ತಿವಂತ, ಸತ್ಕುಲ ಅಕೀರ್ತಿವಂತ
ಇದೆ ಕೀರ್ತಿ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೯೬ ॥

೧೫೭೫

ಮಾಡಿದ ಪೂಜೆಯದು ಮಹಾದೇವಂಗಲ್ಲದೆ,
ಅನ್ಯ ದೇವತವೆಂಬುದು ಹೊಲ್ಲ ನೋಡಾ.
ಬೇಡುವ ಕಾಟವದು ದಾನಶೂರಂಗಲ್ಲದೆ
ಅನ್ಯಲೋಭಿಗದು ಹೊಲ್ಲ ನೋಡಾ.
ನೋಡುವ ನೋಟವದು [ತನ್ನ ಸ್ತ್ರೀಯಲ್ಲಲ್ಲದೆ
ಪರಸ್ತ್ರೀಯಲ್ಲಿ ಹೊಲ್ಲ] ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೬೯೭ ॥

೧೫೭೬

ಕಾಮಧೇನುವಿನ ವಂಶವಿವು ಎಂದಡೆ,
ಹಿಂಡಲರಿಯವು ನೋಡಾ, ಆವುಗಳು.
ಕಾಮಾರಿಯ ರೂಪುಗಳಿವರೆಂದಡೆ,
ಅರಿಷಡ್ವರ್ಗಂಗಳಳಿಯಪಡೆಯವು ನೋಡಾ ತ್ರಿಶಕ್ತಿಗಳು.
ನಾ ನಿನ್ನವನೆಂದಡೆ [ನಿ]ಮ್ಮ ಮಹಿಮೆಗಳನರಿಯಬಾರದು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೬೯೮ ॥

೧೫೩೭

ಎಲ್ಲರೂ ಜಪಿಸುವ ಜಪವ ಜಪಿಸಲಾರೆನಯ್ಯಾ.
ಕ್ಷಣಕ್ಕೊಮ್ಮೆ 'ನಮಃ ಶಿವಾಯ' ಎಂಬೆ ;
ಕ್ಷಣಕ್ಕೊಮ್ಮೆ 'ನಮಃ ಶಿವಾಯ' ಎಂಬೆ.
ಕ್ಷಣ ಕ್ಷಣಕ್ಕೊಮ್ಮೆ ಇದೆ ಮಂತ್ರ ಘನವೆಂದುಸುರುವೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನದೇವಾ. ॥ ೧೯೯ ॥

೧೫೩೮

ಮಂತ್ರಂಗಳ ಭೇದ ಬೃಹಸ್ಪತಿಯೋರ್ವಂಗಲ್ಲದೆ,
ಉಳಿದ ದೇವ ದೇವತೆಗಳಿಗದು ದುರ್ಘಟ ನೋಡಾ.
ಮಂತ್ರ ಮನ ಒಂದಾದಡೆ
ಮಂತ್ರಮೂರ್ತಿಯಪ್ಪ ಮಹಾದೇವಿಯರ ಅಷ್ಟೈಶ್ವರ್ಯಕ್ಕಧಿಕಾರಿ
ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೦೦ ॥

೧೫೩೯

ತಿಳಿದೊಮ್ಮೆ ಜಪಿಸಿದ ಜಪವದು ಜಪ,
ಜಪಮಾಲಿಕೆಯ ಪಿಡಿಯನು ನೋಡಾ ;
ತಿಳಿದೊಮ್ಮೆ ಜಪಿಸಿದ ಜಪವದು [ಜಪ].
ಜಪದ ರೀತಿಯನರುಪುವ ಜಪಮಾಲಿಕೆಯ ಪಿಡಿಯನು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನನ ಶರಣ. ॥ ೨೦೧ ॥

೧೫೪೦

ಭಕ್ತನಾದಡೇನು, ಮಹೇಶನಾದಡೇನು ?
ಮೊದಲಲ್ಲಿ ಶಕ್ತಿಯ ಜಪವೆ ಜಪ ನೋಡಾ.
ಭಕ್ತನಾದಡೇನು, ಮಹೇಶನಾದಡೇನು ?
ಕಡೆಯಲ್ಲಿ ಶಿವನ ಜಪವೆ ಜಪ ನೋಡಾ.
ಜಪ ರೀತಿ, ಜಪ ಲಕ್ಷಣ, ಜಪ ಪ್ರಣವಂಗಳರಿಯದೆ,
ತಾಪತ್ರಯಕ್ಕೊಳಗಾಗಿ ಭವಕ್ಕೀಡಾದರು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೨೦೨ ॥

೧೫೪೧

ಆವನಾದಡೇನು,
ಭಾವದಲ್ಲಿ ಪ್ರೀತನಲ್ಲದೆ ನಡೆ ನುಡಿ ಗಡಣದಲ್ಲಿ ಪ್ರೀತಿಯುಂಟೆ ದೇವಾ.
ಅರಸನಾದಡೇನು,
ಆಳುವಲ್ಲಿ ಅಧಿಕಾರಿಯಲ್ಲದೆ ಅಳಿವಲ್ಲಿ ಅಧಿಕಾರಿಯುಂಟೆ ದೇವಾ ?
ಭಕ್ತನಾದಡೇನು,
ಭಕ್ತನಲ್ಲಿ ಸಲುಗೆಯಲ್ಲದೆ ಮಹೇಶನಲ್ಲಿ ಸಲುಗೆಯುಂಟೇನಯ್ಯಾ ?
ಕಪಿಲಸಿದ್ಧಮಲ್ಲಿಕಾರ್ಜುನದೇವಾ. ॥ ೭೦೩ ॥

೧೫೪೨

ಭಕ್ತನಾದ ಬಳಿಕ ಭಕ್ತಿವಿಡಿದಾಚರಿಸುವುದೆಂತಯ್ಯಾ ?
ಭಕ್ತ ತಾನಾದ ಬಳಿಕ ಭಕ್ತಿಯ ಹೊಲಬನರಿಯಬೇಕು.
ಭಕ್ತ ತಾನಾದ ಬಳಿಕ ಜ್ಞಾನಕ್ರಿಯಾವಿವರವ ವಿಚಾರಿಸಿ ನೋಡಬೇಕು.
ಭಕ್ತ ತಾನಾದ ಬಳಿಕ ಅರುಹಿನ ಕುರುಹುವಿಡಿದಾಚರಿಸಬೇಕು.
ಭಕ್ತ ತಾನಾದ ಬಳಿಕ ತಾಪತ್ರಯಕ್ಕೊಳಗಾಗದೆ,
ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಐಕ್ಯ ಹೊಂದಲೇಬೇಕು. ॥ ೭೦೪ ॥

೧೫೪೩

ಕುರಿಯ ಹೆಸರು ಒಂದೆ, ಅಗ್ನಿಯ ಹೆಸರು ಒಂದೆ ಆದಲ್ಲಿ,
ಅಗ್ನಿಯ ಸಾಮರ್ಥ್ಯ ಕುರಿಗೆ ಬಂದೀತೇನಯ್ಯಾ ?
ಕಪ್ಪೆಯ ಹೆಸರು ಹಾವಿನ ಹೆಸರು ಒಂದೆ ಆದಲ್ಲಿ,
ಹಾವಿನ ಸಾಮರ್ಥ್ಯ ಕಪ್ಪೆಗೆ ಬಂದೀತೇನಯ್ಯಾ ?
ನನ್ನ ಹೆಸರು, ನಮ್ಮ ಶಿವಶರಣರ ಹೆಸರು ಒಂದೆ ಆದಲ್ಲಿ,
ಅವರ ಸಾಮರ್ಥ್ಯ ಎನಗೆ ಬಂದೀತೇನಯ್ಯಾ ?
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೭೦೫ ॥

೧೫೪೪

ಪರ್ವತದ ಮಹಿಮೆಯದು ಘನವೆಂದಡೆ,
ಪರ್ವತದಲ್ಲಲ್ಲದೆ ವೇಶ್ಯಾಕೋಶಕ್ಕೆ ಹರಿದು ಹರನೆಂದೆನಿಸದಿರಯ್ಯಾ.
ಶರಣರ ಮಹಿಮೆಯದು ಘನವೆಂದಡೆ,

ಶಿವಶರಣನಲ್ಲಲ್ಲದೆ ಕಿಂಚಿಜ್ಞ ಮಾನವನಲ್ಲಿ ಹರಿಯದು ನೋಡಯ್ಯ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೭೦೬ ॥

೧೫೪೫

ಶಿವನಿರ್ಮಿತ ಮಂತ್ರಂಗಳು ಕೋಟಾನುಕೋಟಿ.
ಶಿವನಿರ್ಮಿತ ಯಂತ್ರಂಗಳು ಕೋಟಾನುಕೋಟಿ.
ಶಿವನಿರ್ಮಿತ ಮಹಾಮೂಲಿಕೆಗಳು ಕೋಟಾನುಕೋಟಿ.
ಶಿವನಿರ್ಮಿತ ವಿದ್ಯಾದಿಗಳು ಕೋಟಾನುಕೋಟಿ.
ಇದರಂದವನರಿಯಬೇಕೆಂಬವರು ಕೋಟಾನುಕೋಟಿ.
ಸಿದ್ಧಿಯ ಹೊಂದಿ ಪ್ರಸಿದ್ಧಿಗೆ ಬಂದವರು,
ಕೋಟಾನುಕೋಟಿಯೊಳಗೆ ಕೋಟಿಯಿಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಲಿಂಗವೆ. ॥ ೭೦೭ ॥

೧೫೪೬

ಮಂತ್ರ ಮೂರರಲ್ಲಿ ಮಂತ್ರವೆ ಮಂತ್ರ ನೋಡಾ.
ಶಕ್ತಿಯ ಮಂತ್ರದಲ್ಲಿ ಮಂತ್ರವೆ ಮಂತ್ರ ನೋಡಾ,
ಶಿವನ ಮಂತ್ರ ಮೂರರಲ್ಲಿ ಮಂತ್ರವೆ ಮಂತ್ರ ನೋಡಾ.
ನಿಜಲಿಂಗದ ಮಂತ್ರ ಮೂರರಲ್ಲಿ ಮಂತ್ರವೆಂಬುದು ತ್ರಿಲೋಕದಲ್ಲಿಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೦೮ ॥

೧೫೪೭

ಬಂದೊಮ್ಮೆ ಜಪಿಸುವುದಾಗದಿರೆ,
ನಿಂದೊಮ್ಮೆ ನೆನೆಯಬೇಕು ನೋಡಾ, ಮಂತ್ರ ಮೂರನು.
ಬಂದೊಮ್ಮೆ ಜಪಿಸುವುದಾಗದಿರೆ,
ನಿಂದೊಮ್ಮೆ ನೋಡಬೇಕು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಲಿಂಗವ. ॥ ೭೦೯ ॥

೧೫೪೮

ಆ ಶರಣನ ರೂಹು ಈ ಶರಣನ ಹಸ್ತಕಮಲದಲ್ಲಿ ತೋರುತ್ತಿದೆ ;
ಈ ಶರಣನ ರೂಹು ಆ ಶರಣನ ಪಾದದಲ್ಲಿ ತೋರುತ್ತಿದೆ.
ಆ ಶರಣನ ಪಾದ ಈ ಶರಣನ ಮಹಾಹೃದಯದಲ್ಲಿ ಮಹಾಲಿಂಗ,

ನೇತ್ರದಲ್ಲಿ ಶಿವಲಿಂಗವಾಗಿ, ತೋರಿದ ಜಗತ್ತಿಗೆ ವಿಶ್ವೋದರಿಯಾಗಿ
ತೋರಿತ್ತು ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೧೦ ॥

೧೫೪೯

ನೋಡುವ ನರರಿಗೆ ನಿನ್ನ ರೂಹು ತೋರದಯ್ಯಾ.
ನುಡಿಸುವ ನರರಿಗೆ ನೀ ನುಡಿದುದು ಮಾಜುವುದಲ್ಲಯ್ಯಾ.
ಹಾಡುವ ನರರಿಗೆ ನೀ ಮನವನೀಡುಮಾಡುವನಲ್ಲಯ್ಯಾ.
ತೋರುವ ತೋರ್ಪ, ನುಡಿವ ನುಡಿಸುವ ಪ್ರಮಥರ
ಏಕೆ ಒಳಕೊಂಡೆ ಹೇಳಾ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೭೧೧ ॥

೧೫೫೦

ಒಲಿಯದ ಮೂರ್ತಿ : ಒಲಿಸಿಕೊಟ್ಟ ನಮ್ಮ ಚೆನ್ನಬಸವ.
ಉಲಿಯುವ ಮೂರ್ತಿ : ಬಲೆಯ ಹಾಕಿಕೊಟ್ಟ ನಮ್ಮ ಚೆನ್ನಬಸವ.
ಕಲಿಯುಗ ಕಲಿಯುಹ ಕಲಾಧರಧರ ಗುರುವೈಕ್ಯವನರಿದು,
ಇನ್ನರುಹಿನ ಮನೆಯಲ್ಲಿರಲಾರೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನದೇವಾ. ॥ ೭೧೨ ॥

೧೫೫೧

ಲಿಂಗಪೂಜೆಯಿಂದೊಬ್ಬ ಜೀವನ್ಮುಕ್ತ,
ಜಲಪ್ರಭಾವದಿಂದೊಬ್ಬ ಜೀವನ್ಮುಕ್ತ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೧೩ ॥

೧೫೫೨

ಅರಿಗೆ ನಿಲುಕದ ಬ್ರಹ್ಮವ,
ನೀನಾರಿಸಿ ನೋಡಿದಡೆ ಹುರುಳಿಲ್ಲ ನೋಡಾ, ಮರುಳು ಮಾನವಾ,
ಅರಿಗೆಂಬಲ್ಲಿ ಜೀವಭಾವ, ಅರಿಸಿದೆನೆಂಬಲ್ಲಿ ಅಹಂಭಾವ.
ಅರಿಗೆಂಬುದು, ಅರಿಸಿದೆನೆಂಬುದು ಅಳಿದಡೆ,
ಅದೇ ಪರಬ್ರಹ್ಮ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೧೪ ॥

೧೫೫೩

ಯೋಗಿಯು ಹೊಲಬು ಯೋಗಿಯಾದವಂಗಲ್ಲದೆ,
ಇತರ ನರಂಗೆ ಸಾಧಿಸಬಾರದು ಕೇಳಯ್ಯಾ.
ಧಾತುವಾದವದು ರಸವಾದಿಯಾದವಂಗಲ್ಲದೆ,
ಇತರ ನರಂಗದು ಸಾಧಿಸಬಾರದು ಕೇಳಯ್ಯಾ.
ನೋಡಿ ಮಾಡುವುದಾದಡೆ ಭವವೆಲ್ಲಿಹುದು,
ದರಿದ್ರವೆಲ್ಲಿಹುದು ಹೇಳಯ್ಯಾ, ಕಪಿಲಸಿದ್ಧಯ್ಯಾ. ॥ ೭೧೫ ॥

೧೫೫೪

ಯೋಗವ ಸಾಧಿಸಿದವನೊಬ್ಬ ನಿಜಗುಣ ;
ಯೋಗವ ಸಾಧಿಸಿದವನೊಬ್ಬ ವೃಷಭಯೋಗೀಶ್ವರ ;
ಯೋಗವ ಸಾಧಿಸಿದವನೊಬ್ಬ ಶಿವನಾಗಮಯ್ಯ ;
ಯೋಗವ ಸಾಧಿಸಿದೆ ನಾನೊಬ್ಬ
ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಕೂಡುವ ಯೋಗವ. ॥ ೭೧೬ ॥

೧೫೫೫

ಮೂರು ಗುಂಡಿನ ಒಲೆಯಲ್ಲಿ,
ಮಾರಾರಿ ಮೂರುತಿಯು ಪಾಕವ ಮಾಡುತ್ತಾನೆ ನೋಡಾ.
ಆ ಪಾಕ ಪಕ್ವವಾಗದು.
ಈ ವಿಚಿತ್ರವ ನೋಡಿ ನಿಬ್ಬೆರಗಾದೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೧೭ ॥

೧೫೫೬

ಅಯ್ಯಗಳು ರುದ್ರಾಕ್ಷಿಯ ಕೊಟ್ಟಲ್ಲಿ ಫಲವಲ್ಲದೆ,
ಸುಮ್ಮನೆ ಧರಿಸಿದಲ್ಲಿ ಫಲವಿಲ್ಲ ನೋಡಾ.
ಭಕ್ತನು ಪದಾರ್ಥ ನೀಡಿದಲ್ಲಿ ಫಲವಲ್ಲದೆ,
ಬೇಡಿ ರುಚಿಸಿದಲ್ಲಿ ಫಲವಿಲ್ಲ ನೋಡಾ.
ನಿನ್ನರಿವ ನಾನರಿತಲ್ಲಿ ಫಲವಲ್ಲದೆ,
ಅರುಹಿಸಿದಲ್ಲಿ ಫಲವಿಲ್ಲ.
ಅಹುದೆಂಬುದು ನೀತಿ, ಬಲ್ಲೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೧೮ ॥

೧೫೫೭

ಇದ್ದೊಂದು ಕಲ್ಲೊಳು ಪ್ರಸಿದ್ಧವಾಗಿಹ ಮುಗ್ಧನ ಕಂಡೆ.
ಆ ಮುಗ್ಧ ಮಾತಾಡನು, ಮಾತಾಡದೆ ಸುಮ್ಮನಿರನು.
ಆತನ ಸೊಮ್ಮು ಅರಿಯದು ;
ಅರಿಯಬೇಕೆಂದಡೆ ಕರಣಂಗಳ ಒಡನಾಟ ಆಗಬಾರದು,
ನೋಡೈ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೧೯ ॥

೧೫೫೮

ಕಲ್ಲುದೇವರಲ್ಲಿ ವಲ್ಲಭನಿದ್ದಾನೆಂದು ಲಲ್ಲೆಗರೆಯಬೇಡ, ಖುಲ್ಲತನದಿಂದ.
ಒಮ್ಮೆ ಅರಿಯಬಲ್ಲಡೆ, ಕಪಿಲಸಿದ್ಧಮಲ್ಲಿಕಾರ್ಜುನನ ಶರಣರ ಪಾದದಲ್ಲಿ
ತಲ್ಲೀಯವಾಗಾ, ಕಲ್ಲಯ್ಯಾ. ॥ ೭೨೦ ॥

೧೫೫೯

ಮಣಿ ಮೂರರಲ್ಲಿ ಗುಣತ್ರಯಾತೀತನ ಕಂಡೆ.
ಗುಣತ್ರಯಾತೀತನಲ್ಲಿ ಹವಣಿಸಬಾರದ ಆನಂದಯೋಗವ ಕಂಡೆ.
ಆ ಆನಂದಯೋಗವ ಸಾಧಿಸಬಾರದು, ಸಾಧಿಸಬಾರದು,
ಮತ್ತೆ ಭವಭವದ ದಾವಾನಲ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೨೧ ॥

೧೫೬೦

ಮೂರು ಗುಣ ಮುರಿಮುರಿದು ಮೂರಕ್ಕೆ
ತಂದು ಮುರಿದಿಟ್ಟಿತ್ತು ನೋಡಾ,
ಮಾರಹರ ಪಾದಪದ್ಮಭ್ರಮರ.
ಮೂರು ಗುಣದಂತಾಚರಿಸಬಾರದು ;
ಮೂರು ಗುಣ ಬಿಡಬಾರದು ನೋಡಾ.
ಮೂರರಿಂದಾರು ಲಿಂಗವ ದಾಂಟಿ, ಮೂರರಲ್ಲಿ ಐಕ್ಯವ ನೋಡೆ–
ಪುರಾರಿ ಪರಮಾತ್ಮ ಕಪಿಲಸಿದ್ಧಮಲ್ಲಿಕಾರ್ಜುನ
ತಾನೆ ನೋಡಾ, ಮಾರಯ್ಯಾ. ॥ ೭೨೨ ॥

೧೫೬೧

ಮಂಚವೊಂದರಲ್ಲಿ ಕಂಚುಕಿ ಸಹ ಮೂರ್ತವ ಮಾಡಿದ್ದಾನೆ.
ಆ ಮೂರ್ತಿಯು ಹಂಚುಹಂಚಿನಲ್ಲಿ ಕಂಚುಕಿಯಾಗಿದ್ದಾನೆ.

ಆ ಮಂಚ, ಈ ಹಂಚು ಕಂಚುಕಿಯರಿಯಬಲ್ಲಡೆ,
ಸಂಚಿತತ್ರಯ ಒಡಕ ಹಂಚು ನೋಡಾ,
ಪ್ರಪಂಚಹರ ಪಂಚಮುಖ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೨೩ ॥

೧೫೬೨

ಕುಂಬಾರನ ಆವಿಗೆಯಲ್ಲಿ ಕುಂಬಾರನಿಲ್ಲ ;
ಕಂಬಾರನ ಕಲಶಂಗಳಲ್ಲಿ ಕಂಬಾರನಿಲ್ಲ.
ಆವಿಗೆ ಕಲಶಂಗಳಲ್ಲಿ ಅಸ್ತಿತ್ವ ಉಂಟಾಗಿಹ
ಕುಂಬಾರ ಕಂಬಾರನಂತಿಪ್ಪ ನೋಡಾ,
ಈ ಪ್ರಪಂಚದಲ್ಲಿ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೨೪ ॥

೧೫೬೩

ಬೀಜವೊಂದರಲ್ಲಿ ಸೋಜಿಗದ ಮೂರುತಿ
ಮಾಜುವ ಬುದ್ಧಿಯೊಳ್ಳಿದಾನೆ ನೋಡವ್ವಾ.
ಬೀಜವ ನೋಡಿದಡೆ ತಾನು ಬೀಜ.
ಆದರಲ್ಲಿಯು ಸೋಜಿಗನು ತಾನು ಮಾಜುವ ಬುದ್ಧಿ
ತಾ ಎನಬಾರದು, ಮಾಯೆ ಎನಬಾರದು.
ಇವರಿರ್ವರಲ್ಲಿ ಜೂಜು ಇಟ್ಟು ಚಲಿಸುತ್ತದೆ ನೋಡವ್ವಾ,
ಕಪಿಲಸಿದ್ಧಮಲ್ಲಿಕಾರ್ಜುನನೆಂಬ ಮಹಾವಸ್ತುವವ್ವಾ. ॥ ೭೨೫ ॥

೧೫೬೪

ಸಾಧಿಸಲಸಾಧ್ಯ ನೋಡಾ, ಸಾಧಿಸಬಾರದ ವಸ್ತುವ.
ಸಾಧಿಸಲಸಾಧ್ಯ ನೋಡಾ, ಸಾಧಿಸಬಾರದ ಮಹಾಜ್ಞಾನವ.
ಸಾಧಿಸಲಸಾಧ್ಯ ನೋಡಾ,
ಸಾಧಿಸಬಾರದ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ನಿರ್ವಂಚಕತ್ವವ. ॥ ೭೨೬ ॥

೧೫೬೫

ಅವಸ್ಥಾತ್ರಯ ಜೀವಾಂಗದ ಬಳಿಕ, ಜೀವವೆಂಬುದು ಪರಮಾತ್ಮ.
ಪರಮಾತ್ಮಂಗವಸ್ಥಾತ್ರಯವೆಂದ ಬಳಿಕ, ಜನನಮರಣಕ್ಕೊಳಗಾಯಿತ್ತು.
ಜೀವಂಗಲ್ಲ, ಪರಮಾತ್ಮಂಗಲ್ಲ, ಅಂತರಾತ್ಮಂಗಲ್ಲ,
ಆಗುವ ಅವಸ್ಥೆ ಮಾಯಾಶಕ್ತಿಗೆ, ಕಪಿಲಸಿದ್ಧಮಲ್ಲಿಕಾರ್ಜುನಾ, ॥ ೭೨೭ ॥

೧೫೬೬

ಪಂಚವರ್ಣದ ಗಿಳಿಯೊಂದು ಪ್ರಪಂಚರಚನೆಗೆ ಬಂದು,
'ಭವ ಬ್ರಹ್ಮ, ಭವ ಬ್ರಹ್ಮ' ಎಂಬುತ್ತಿದೆ,
ಆ ಗಿಳಿಯುಂ ಮೂರು ಮನೆಯ ಪಂಜರದಲ್ಲಿ ಕೂತು,
'ಕುರುಷ್ವ ಲಿಂಗಪೂಜಾಂ, ಲಿಂಗಪೂಜಾಂ' ಎಂಬುತ್ತಿದೆ.
ಆ ಗಿಳಿಯ ವಚನವ ಕೇಳಿದಾತಂಗೆ ಸುಖ, ಗಿಳಿಗೆ ಸುಖ;
ಕೇಳದವಂಗೆ ಸುಖವಿಲ್ಲ, ಹೇಳಿದವಂಗೆಯುಂ ಸುಖವಿಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೨೮ ॥

೧೫೬೭

ಒಣಗಿದ ಮರವದು ಭೂಮಿಯಲ್ಲೇ ಲೀನ ನೋಡಾ,
ಒಣಗದ ಮರವದು ಭೂಮಿಯಲ್ಲೇ ಲೀನ ನೋಡಾ,
ತಿಳಿಯದ ಯೋಗಿಯು ಲಯವಿಲ್ಲ !
ಸ್ವರ್ಗಕ್ಕೆ ಹೋದೆಹೆನೆಂಬುದು ಗೊಡ್ಡು–ಹುಸಿ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೨೯ ॥

೧೫೬೮

ಮನದಲ್ಲಿಲ್ಲದ ಮಹಾಂತರು ಮನದಲ್ಲಿ ಘನಗೊಳಿಸಬಾರದ ಅಂಗನೆಯರಲ್ಲಿ !
ಮನದಲ್ಲಿಲ್ಲದ ಕಾಯದಲ್ಲಿಲ್ಲದ ಮಹಾಂತರ ಕಂಡಡೆ,
ಎನ್ನ ಮನ ಮನೋಹರವಾಯಿತ್ತಯ್ಯಾ,
ಮಹಾದೇವ ಮದನಮರ್ದನ ಮಹಾಂತ ಮಹಿಮಾಶಾಲಿ
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೩೦ ॥

೧೫೬೯

ತಾನೊಮ್ಮೆ ಸ್ಥೂಲಕ್ಕೆ ಬಂದ ಬಳಿಕ,
ಆತನ ತಾನು ಒಮ್ಮೆ ಸೊಮ್ಮುಗೊಳಿಸಬೇಕು.
ತಾನೊಮ್ಮೆ ಸಿದ್ಧನಾಗಿ ನಿಂದ ಬಳಿಕ,
ಕಪಿಲಸಿದ್ಧಮಲ್ಲಿಕಾರ್ಜುನನ ಕೀಲ ತಿಳಿಸಬೇಕು, ಕೇದಾರಯ್ಯಾ. ॥ ೭೩೧ ॥

೧೫೭೦

ಆವ ಜ್ಞಾನಿಯಾದಡೇನು
ದೇಹಾವಸಾನದಲ್ಲಿಯು ಭಾವದಂತೆ ತಪ್ಪಲರಿಯದು ನೋಡಾ.
ಆವ ಜ್ಞಾನಿಯಾದಡೇನು
ಭಾವವೆಂಬುದು ಜನ್ಮಕ್ಕೆ ಈಡು, ನಿರ್ಭಾವವೆಂಬುದು ಜನ್ಮಕ್ಕೆ
ಕಾಡುಗಿಚ್ಚು ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. || ೭೩೨

೧೫೭೧

'ಯಥಾ ಭಾವಸ್ತಥಾ ದೇವಃ' ಎಂದ ಬಳಿಕ,
ದೇವರ ಬಯಲ ಭಾವ ತನ್ನಲ್ಲಿ ಇಂಬುಗೊಂಡಡೆ ಮುಕ್ತಿ.
ದೇವ ರೀತಿಯೊಂದು ತನ್ನ ರೀತಿಯೊಂದಾದ ಬಳಿಕ,
ಘಟಿಸದು ಕಪಿಲಸಿದ್ಧಮಲ್ಲಿಕಾರ್ಜುನನ ಐಕ್ಯವು. || ೭೩೩ ||

೧೫೭೨

ಆಕಾರವಿಲ್ಲದ ಮೂರ್ತಿಯು ಆಕಾರಕ್ಕೆ ತಂದು
ಪೂಜಿಸಿದೆ ನೋಡಾ, ಮನವೆ.
ಆಕಾರದ ಮೂರ್ತಿಯು ನಿರಾಕಾರಕ್ಕೆ ತಂದು
ಪೂಜಿಸಲರಿಯೆ ನೋಡಾ, ಮನವೆ.
'ಯದ್ದೃಷ್ಟಂ ತನ್ನಷ್ಟಂ' ಎಂದ ಬಳಿಕ,
ನಿರಾಕಾರ ನಿಜನಿರ್ವಯಲವೆ ಸ್ಥಿರವೆಂದು ನಂಬು ಮನವೆ,
ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ. || ೭೩೪ ||

೧೫೭೩

ಆಚಾರವಿಲ್ಲದವನ ಗುರು ಕಂಡಡೆ,
ವಿಚಾರಿಸಿ ನೋಡನು ಜ್ಞಾನಾಜ್ಞಾನದಲ್ಲಿ.
ಆಚಾರವಿಲ್ಲದ ಗುರು, ಆಚಾರವಿಲ್ಲದ ಶಿಷ್ಯ
ಇವರೀರ್ವರು ಚರಿಸಿ ಬೆಡಗಿನ ಭವಕ್ಕೆ ಗುರಿಯಾದರು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಲಿಂಗವೆ. || ೭೩೫ ||

೧೫೭೪

ಲಿಂಗವಂತರು ತಾವಾದ ಬಳಿಕ,
ಅಂಗನೆಯರ ನಡೆನುಡಿಗೊಮ್ಮೆ
ಲಿಂಗದ ರಾಣಿಯರೆಂದು ಭಾವಿಸಬೇಕು.
ಲಿಂಗವಂತರು ತಾವಾದ ಬಳಿಕ,
ಅನುಭವ ವಚನಗಳ ಹಾಡಿ
ಸುಖದುಃಖಗಳಿಗಭೇದ್ಯವಾಗಿರಬೇಕು.
ಲಿಂಗವಂತರು ತಾವಾದ ಬಳಿಕ,
ಜಂಗಮವ ಪೂಜಿಸಿ ಸದಾ ಲಿಂಗೈಕ್ಯಸುಖಿಗಳಾಗಿರಬೇಕು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೩೬ ॥

೧೫೭೫

ಸರ್ವರು ಲಿಂಗವಂತರೆಂದು ಮನದಲ್ಲಿ ಭಾವಿಸಿ ನಡೆಯಬೇಕಲ್ಲದೆ,
ನಡೆನುಡಿಯಲ್ಲಿ ಭಾವಿಸಿ ನಡೆಯಬಾರದು ನೋಡಯ್ಯಾ.
ಸರ್ವರು ಲಿಂಗವಂತರೆಂದು ಭಾವಿಸಿದಲ್ಲಿ ಪೂರೈಸಿಕೊಳ್ಳಬೇಕಲ್ಲದೆ,
ಪುರಹರ ಕಪಿಲಸಿದ್ಧಮಲ್ಲಿಕಾರ್ಜುನನ ಮಂದಿರವಾಸಿಗಳೆಂದು
ಭಾವಿಸಬಾರದು ನೋಡಯ್ಯಾ. ॥ ೭೩೭ ॥

೧೫೭೬

ಶ್ರೀಶೈಲದ ಮಹಿಮೆಯದು ಕರ್ಣಾಭರಣ.
ಶ್ರೀಶೈಲದ ಮಹಿಮೆಯದು ಸಾಧಿಸುವಡೆ ಬಹುವೈವರ್ಣ್ಯ.
ಶ್ರೀಶೈಲದ ಮಹಿಮೆಯದು ಶ್ರೀಶೈಲದಲ್ಲಿ.
ನಿಮ್ಮ ಮಹಿಮೆ ಮೂಲೋಕವೆಲ್ಲ ಇಂಬುಗೊಂಡಿತ್ತು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೩೮ ॥

೧೫೭೭

ಎಲ್ಲರು ತಪವ ಮಾಡಿದರು ;
ನಮ್ಮ ಶ್ರೀಶೈಲನ ತಪವಂತೆ ತಪದ–ಒರ್ವರನು ಕಾಣೆ.
ಎಲ್ಲರು ಲಿಂಗವ ಪೂಜಿಸಿದರು ;
ನಮ್ಮಮ್ಮನವರ ಪೂಜೆಯಂತೆ [ಪೂಜೆಯ]–ಒರ್ವರನು ಕಾಣೆ.

ಎಲ್ಲರು ಮಹಿಮೆಯ ಮಾಡಿದರು ;
ನಮ್ಮ ಶ್ರೀಶೈಲವಲ್ಲಭ ಕಪಿಲಸಿದ್ಧಮಲ್ಲನಂತೆ ಒರ್ವರನು ಕಾಣೆ,
ಬೊಮ್ಮಣ್ಣಾ. ॥ ೭೩೯ ॥

೧೫೭೮

ಜನ್ಮವನೊಮ್ಮೆ ಧರಿಸಿದ ಬಳಿಕ,
ಜನನವಿನಾಶ ವಿಗ್ರಹ ಮೂರ್ತಿಯ ಪೂಜಿಸಲೆ ಬೇಕು.
ಜನ್ಮವನೊಮ್ಮೆ ಧರಿಸಿದ ಬಳಿಕ,
ಶ್ರೀಶೈಲ ಮಹಿಮೆಯ ಸಾಧಿಸಿ ನೋಡಲೆಬೇಕು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೪೦ ॥

೧೫೭೯

ಭಕ್ತಿಯೆ ಲಿಂಗಪೂಜೆಯಾಗಿ ಅಳವಡಿಸಿಕೊಂಡ ಬಸವೇಶ.
ಜ್ಞಾನಕ್ರೀಯೆ ಲಿಂಗಪೂಜೆಯಾಗಿ ಅವಳಡಿಸಿಕೊಂಡ ಚೆನ್ನಬಸವೇಶ.
ವೈರಾಗ್ಯವೆ ಲಿಂಗಪೂಜೆಯಾಗಿ ಅಳವಡಿಸಿಕೊಂಡ ಅಲ್ಲಮೇಶ.
ಅನುಭಾವವೆ ಲಿಂಗಪೂಜೆಯಾಗಿ ಅಳವಡಿಸಿಕೊಂಡ ನಿಮ್ಮ ಬಾಲಕೇಶ,
ಕಪಿಲಸಿದ್ಧಮಲ್ಲೇಶ, ವ್ಯೋಮಕೇಶ, ನಾಶಪಾಶಾ. ॥ ೭೪೧ ॥

೧೫೮೦

'ಭವ ಭರ್ಗ ಭೀಮ ನೀಲಲೋಹಿತ ವಿರೂಪಾಕ್ಷ' ಎನ್ನು ಮನವೆ.
'ನೀಲಕಂಠ ಉಮಾಪತಿ ದಯಾಳು ದಯಾಸಾಗರ' ಎನ್ನು ಮನವೆ.
'ಉಗ್ರ ಕಪರ್ದಿ ಕೈಲಾಸವಾಸಿ ಸಿತಕಂಠ ಭಾಳಲೋಚನ' ಎನ್ನು ಮನವೆ.
'ಕಾಲಾರಿ ಕಾಮಾರಿ ತ್ರಿಪುರಾರಿ ಪಾಪಾರಿ ಕಪಿಲಸಿದ್ಧಮಲ್ಲಿಕಾರ್ಜುನ'
ಎನ್ನು ಮನವೆ. ॥ ೭೪೨ ॥

೧೫೮೧

ವೇದ ವೇದಂಗಳೆಲ್ಲ ಶಿವನ ಹೊಗಳಿ ನಿರ್ಮಲವಾದವು ನೋಡಾ.
'ಓಂ ನಮಃ ಸೋಮಾಯ ಚ ರುದ್ರಾಯ ಚ' ಎಂದು ವೇದವಾಕ್ಯ ನೋಡಾ.
'ನಮಸ್ತಾಮ್ರಾಯ ಚಾರುಣಾಯ ಚ' ಎಂದು
ಪಂಡಿತಮುಖಪ್ರಸಿದ್ಧ ನೋಡಾ.

'ನಮಃ ಶೃಂಗಾಯ ಚ ಪಶುಪತಯೇ ಚ' ಎಂದು
ವೇದಾಧ್ಯಾಯಿಗಳರಿಕೆ ನೋಡಾ.
'ನಮಃ ಶಿವಾಯ ಚ ಶಿವತರಾಯ ಚ' ಎಂದು
ಕಪಿಲಸಿದ್ಧಮಲ್ಲಿಕಾರ್ಜುನನ ಪಂಚಮುಖದಲ್ಲಿ
ನಿತ್ಯ ನಿತ್ಯ ಘೋಷ ನೋಡಾ, ಕೇದಾರಯ್ಯಾ. ॥ ೭೪೩ ॥

೧೫೮೨

ನೀಲಲೋಹಿತ ಗಣೇಶ್ವರಾಯ, ಕಾಲಲೋಹಿತ ಗಣೇಶ್ವರಾಯ.
ಕಪಾಲ ಮೂಲಾಧಾರ ಗಣೇಶ್ವರಾಯ, ಮಾರಹರ ಗಣೇಶ್ವರಾಯ.
ವೃಷಾಂಕವಾಹನ ಗಣೇಶ್ವರಾಯ, ಜಗದಂಬಾಸ್ವರೂಪ ಗಣೇಶ್ವರಾಯ.
ಕಾಲಕಂಠ ಗಣೇಶ್ವರಾಯ, ಪಾರ್ವತೀಧ್ಯಾನಾಸಕ್ತ ಗಣೇಶ್ವರಾಯ.
ಸೋಮವಿಭೂಷಣ ಗಣೇಶ್ವರಾಯ, ಕುಮಾರಪಿತ ಗಣೇಶ್ವರಾಯ.
ವೀರಭದ್ರ ಗಣೇಶ್ವರಾಯ, ವ್ಯಾಲಭೂಷಣ ಗಣೇಶ್ವರಾಯ.
ಶಾಂಭವಮುಸೀಶ್ವರ ಗಣೇಶ್ವರಾಯ, ವೃಷಭಯೋಗೀಶ್ವರ ಗಣೇಶ್ವರಾಯ.
ನಮೋ ನಮಃ ಶಂಕರ ಗಣೇಶ್ವರಾಯ,
ನಮೋ ನಮಃ ಕಪಿಲಸಿದ್ಧಮಲ್ಲಿಕಾರ್ಜುನಾಯ,
ಮಹಾದೇವಾಯ ನಮೋ ನಮಃ. ॥ ೭೪೪ ॥

೧೫೮೩

ಎಲ್ಲರು ಶಿವಮಂತ್ರವ ಜಪಿಸುವುದಕ್ಕಿಂತ,
ಎಮ್ಮಮ್ಮನವರ ಮಂತ್ರವ ಜಪಿಸಿ ಸೇವೆಯಲ್ಲಿರಲಾರರು
ನೋಡಾ, ಮನುಮುನೀಶ್ವರರು.
ಎಲ್ಲರು ಶಿವಮಂತ್ರವ ಜಪಿಸುವುದಕ್ಕಿಂತ ಎಮ್ಮಮ್ಮನವರ ಮಂತ್ರ
'ಸರ್ವಮಂಗಳಾಯೈ ಶಿವಾಯೈ ಜಗದಂಬಾಯೈ
ಜಗದ್ವಂದ್ಯಜಗದಾಧಾರಾಯೈ ನಮೋ ನಮಃ' ! ಎನ್ನರು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ, ಮಹಾಪ್ರಮಥರು. ॥ ೭೪೫ ॥

೧೫೮೪

ಐದಕ್ಕರವವು ಎಮ್ಮಮ್ಮನವರು.
ಮುಂದಣ ಅಕ್ಕರವದು ಜಗಜ್ಜನಕನದು.
ಮುಂದೊಂದು ತಾರೆ, ಮುಂದೊಂದು ತಾರೆ

ಇಡಲದು ತೋರುವಳು ಈ ಸ್ಥಾನವಿೀಸಂಪದ್ವೈಭವ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೪೬ ॥

೧೫೪೫

ಎನ್ನ ರೋಮಂಗಳೆಲ್ಲವು ನಯನಂಗಳಾದಡೆ ಸಾಲ್ವವು ನೋಡಾ,
ಜಗದಂಬೆಯ ಪಾದಪಂಕಜದರ್ಶನಕ್ಕೆ.
ಎನ್ನ ನಯನಂಗಳೆಲ್ಲ ಜ್ಞಾನಚಕ್ಷುಗಳಾದಡೆ ಸಾಲ್ವವು ನೋಡಾ,
ಜಗದಂಬೆಯ ಪಾದಪಂಕಜಧ್ಯಾನಕ್ಕೆ.
ಎನ್ನ ಜ್ಞಾನಚಕ್ಷುಗಳೆಲ್ಲ 'ಅಖಂಡಾದ್ವಯ ಏಕೋನೇತ್ರ'ವಾದಡೆ
ಕೂಡುವುದು ನೋಡಾ, ಜಗದಂಬೆಯ ಪಾದಪಂಕಜದಲ್ಲಿ ಭಾವವು,
ಭವಹರ ಪುರಹರ ಕಪಿಲಸಿದ್ಧಮಲ್ಲೇಂದ್ರಾ. ॥ ೭೪೭ ॥

೧೫೪೬

ತಾನು ಧನವಂತನಾಗಬೇಕೆಂಬಾಶೆಯುಳ್ಳಡೆ,
ಜಪಿಸಿ ನೋಡಾ ಶ್ರೀಮಂತ್ರವ.
ತಾನುಪೇಂದ್ರನಾಗಬೇಕೆಂಬಾಶೆಯುಳ್ಳಡೆ,
ಜಪಿಸಿ ನೋಡಾ ಶಕ್ತಿಮಂತ್ರವ.
ತಾನು ಬ್ರಹ್ಮನಾಗಬೇಕೆಂಬಿಚ್ಛೆಯುಳ್ಳಡೆ,
ಜಪಿಸಿ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನ-ಮಹಾದೇವಿಯ ಮಹಾಮಂತ್ರವ. ॥ ೭೪೮ ॥

೧೫೪೭

ಭೋ ಜಗದಂಬಾ, ಭೋ ಜಗದಂಬಾ, 'ಮಮಾಂಬಾ'
ಎಂದು ನಂಬಿದೆ.
ಭೋ ಸರ್ವಮಂಗಳಾ, 'ಸರ್ವಮಂಗಳಾ' ಎಂದು ನಂಬಿದೆ.
ಭೋ ಅಂಬಾ, 'ಮಮಾಂಬಾ' ಎಂದು ನಂಬಿದೆ.
ಭೋ ಕಪಿಲಸಿದ್ಧಮಲ್ಲಿಕಾರ್ಜುನಾ, ಭೋ,
ನಿಮ್ಮ ಶಕ್ತಿ ನಿಮಗಾಧಾರವೆಂದು ನಂಬಿದೆ. ॥ ೭೪೯ ॥

೧೫೪೮

"ಯಥಾ ಷಡಕ್ಷರಂ ಮಂತ್ರಂ ದೇವ್ಯೈ ದೇವಸಮಿಾರಿತಂ" ಎಂದ ಬಳಿಕ
ಷಡಕ್ಷರವೆಂಬುದು ಶಿವಮಂತ್ರ ; ಪಂಚಾಕ್ಷರವು ಶಕ್ತಿಮಂತ್ರ.

ಇದರಂತುವನರಿಯಬಲ್ಲಡೆ ಗುರುವಿನಿಂದಲ್ಲದೆ
ಪೆರ ನರರಿಂದಾಗದು ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೫೦ ॥

೧೫೪೯

ಪಂಚಾಕ್ಷರವೆಂಬುದದು ಪಂಚಮುಖಪ್ರಸಾದ
ನೋಡಾ, ಬಸವಂಗೆ.
ಪಂಚಾಕ್ಷರಮಂತ್ರವೆಂಬುದು ಮಹಾದೇವಿಯ ಪ್ರಸನ್ನತೆ
ನೋಡಾ, ಚೆನ್ನಬಸವಂಗೆ.
ಪಂಚಾಕ್ಷರಮಂತ್ರವೆಂಬುದು ಪಂಚಾವಸ್ಥಾತೀತ
ಪರವಸ್ತುವಿನಲ್ಲಿ ಮೇಳನ ನೋಡಾ, ಪ್ರಭುದೇವಂಗೆ.
ಪಂಚಾಕ್ಷರವೆಂಬುದು ಪಂಚವರ್ಷದ ಕುಮಾರಾವಸ್ಥೆ
ನೋಡಾ, ಸನತ್ಕುಮಾರಂಗೆ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೫೧ ॥

೧೫೫೦

ಕೋಟಿ ಕೋಟಿ ಜನ್ಮವ ತಾಳಿ ಕೋಟಲೆಗೊಳುವುದೇಕಯ್ಯಾ ?
ಕೋಟಿಯೊಳಗರ್ಧ, ಅರ್ಧದೊಳಗರ್ಧ ನಾಟಿಸಿದೆ.
'ನಮಃಶಿವಾಯ' ಎಂದಡೆ, ಕೋಟಿ ಕೋಟಿ ನರಕಂಗಳನೀಡಾಡಿ,
ಮಹಾದೇವಿಯುರ ಮಂದಿರದ ಕೋಟೆಯನೇರಿಸಿತ್ತು
ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೫೨ ॥

೧೫೫೧

ಎಂಟು ಮಣಿಯ ಮನೆಯಲ್ಲಿ ಕಂಟಕವಿಲ್ಲದ ಮೂರ್ತಿ
ತಾ ನಾಟ್ಯವ ಮಾಡುತ್ತಿದೆ ನೋಡಾ.
ಆ ಎಂಟು ಮಣಿಯಲ್ಲಿ ತನ್ನಂಟು ಇಲ್ಲದೆ,
ತಾ ಸ್ವತಂತ್ರ ನಾಟ್ಯನಾಗಿ ಆಡುತ್ತಿಹ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನ ಮೂರ್ತಿಯು. ॥ ೭೫೩ ॥

೧೫೫೨

ಜಾಗ್ರದಲ್ಲಿಹ ಮನುಷ್ಯಂಗೆ
ಸ್ವಪ್ನ ಸುಷುಪ್ತಿ ಮಿಥ್ಯೆಂಬುದು ಪ್ರಸಿದ್ಧ.

ಸ್ವಪ್ನದಲ್ಲಿಹ ಮನುಷ್ಯಂಗೆ [ಜಾಗ್ರ] ಸುಷುಪ್ತಿ
ಎಂಬುದು ತೋರಬಾರದು,
ಸುಷುಪ್ತಿಯಲ್ಲಿ ಜಾಗ್ರ ಸ್ವಪ್ನವೆಂಬುದು ತಿಲಮಾತ್ರ ತಿಳಿಯಬಾರದು,
ನೋಡಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೭೫೪ ॥

೧೫೫೩

ಪಂಚಕರಣ ಕ್ರಿಯದಿಂದಲ್ಲದೆ ದೇಹದಿಂದರಿಯಬಾರದು.
ಪಂಚೇಂದ್ರಿಯ ಪಂಚಮುಖದಿಂದಲ್ಲದೆ ಸ್ವತಂತ್ರ
ತಿಳಿಯಬಾರದು ನೋಡಾ, ಕಲ್ಲಯ್ಯಾ.* ॥ ೭೫೫ ॥

೧೫೫೪

ಮೀರಿದ ಮಹಾಮಂತ್ರವಿದೆಂದು ಕೂಗುವ
ಅಷ್ಟಾದಶ ಪುರಾಣ ನೋಡಿ ನೀ ಕೂಗದಿರು ಮರುಳೆ !
ಕಡೆಯಕ್ಷರದ ಅರ್ಥವದು ಕಾರಣಾತೀತ ವಸ್ತು ನೋಡಾ ಮರುಳೆ !
ಆ ವಸ್ತುವಿಗೆ ನೀನಾಗಬೇಕೆಂಬುವುದಕ್ಕೆ 'ನಮಃ' ಎನ್ನು ಮರುಳೆ !
ಕಪಿಲಸಿದ್ಧಮಲ್ಲಿಕಾರ್ಜುನ ಮಹಾಲಿಂಗದಲ್ಲಿ. ॥ ೭೫೬ ॥

೧೫೫೫

ಮನನ ಮಾಡಿದ ಮಂತ್ರ ಮಹಾಪದವಿಯ ಕೊಟ್ಟಿತ್ತಯ್ಯಾ.
ಮನನವರಿಯದ ಮಂತ್ರ ಮಂತ್ರದಲ್ಲಿಯ ವಸ್ತುವ ಕೊಟ್ಟಿತ್ತಯ್ಯಾ.
ಮಂತ್ರವೇನು ಮನವೆ ? ಕಪಿಲಸಿದ್ಧಮಲ್ಲಿಕಾರ್ಜುನನ ಫಲವೇನು ?
ವಿಚಾರದಿಂದ, ವಿಶ್ವಾಸದಿಂದಗಣಿತ ಫಲವ ಕೊಟ್ಟಿತ್ತಯ್ಯಾ. ॥ ೭೫೭ ॥

೧೫೫೬

ಜಪವೇನು, ತಪವೇನು,
ಸಾಧಿಸುವಾತಂಗದು ದುರ್ಲಭವಲ್ಲವೆ, ಮನವೆ ?
ನೇಮವೇನು, ನಿತ್ಯವೇನು,
ಸಾಧಿಸುವಾತಂಗದು ದುರ್ಲಭ ದೇವಾ.

*ಅಂಕಿತವಿಲ್ಲದ ಸಿದ್ಧರಾಮನ ವಚನ.

ಪೂಜೆಯು ಸೋಜಿಗತನದ ಮಹಾಮಹತ್ವವೇನು ?
ಸಾಧಿಸುವಾತಂಗದು ದುರ್ಲಭವಲ್ಲವೆ ?
ಹೇ ದೇವಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೫೮ ॥

೧೫೯೭

ತಾ ಜಿತೇಂದ್ರಿಯನಾಗಿ ಹಲಕೆಲವು ತಪಸ್ಸಿನಾಸೆ ತನಗೇಕಯ್ಯಾ ?
ತಾ ಪರುಷವಾಗಿ ಅನ್ಯ ರಜತ ತಾಮ್ರ ಚಿನ್ನದಾಸೆ ತನಗೇಕಯ್ಯಾ ?
ತಾ ಜೀವನ್ಮುಕ್ತನಾಗಿ ಭವದ ನಿಬಿಡದಾಸೆ ತನಗೇಕಯ್ಯಾ ?
ತಾ ಕಪಿಲಸಿದ್ಧಮಲ್ಲಿಕಾರ್ಜುನನಾಗಿ
ಮೂಲೋಕದ ಸುದ್ದಿಯಾಸೆ ತನಗೇಕಯ್ಯಾ, ಕೇದಾರಯ್ಯಾ ? ॥ ೭೫೯ ॥

೧೫೯೮

ಲಿಂಗದ ಅಂಗವದು ಅಳವಡಿದಿರೆ
ಸಂಗವ ಮಾಡು ಪುರಾತರ, ಮನವೆ.
ಕಂಗಳವರಿಯದಿರೆ ತಿಂಗಳಧರನ ಪೂಜಿಸು ಮನವೆ.
ಲಿಂಗಾಂಗ ಸಮರಸವಾಗದಿರೆ
ಗಂಗಾಧರ ಕಪಿಲಸಿದ್ಧಮಲ್ಲಿಕಾರ್ಜುನ ಎನ್ನು, ಮನವೆ. ॥ ೭೬೦ ॥

೧೫೯೯

ಹುಣಚಿಯು ಮರದಲ್ಲೊಂದು ಹಣಚಿಯು ಬೆರಳಿಟ್ಟು ಹೋದಲ್ಲಿ,
ಆ ಹುಣಚಿಯು ಮರ ಹಣಚಿಯು ಮರವಾಗಿ ತಾ ಕಣಚಿ ಹೋದುದ ಕಂಡೆ.
ಈ ಹುಣಚಿಯು ಹಣಚಿಯು ಹವಣವ ತಿಳಿದು ಅರಿಯಬಲ್ಲಡೆ,
ಹಣೆಯು ಕಣ್ಣಿನ ಶರಣನೆಂಬೆ ನೋಡಾ,
ತ್ರಿಣಯನ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೬೧ ॥

೧೬೦೦

ಕಾದುವರೆ ಕೈಯೆರಡುಂಟೆ ?
ಬೇಡುವರೆ ಬಾಯಿ ಹರಿಯದುಂಟೆ ?
ಕಾದಬಾರದು ಬೇಡಬಾರದು,
ಕೊಡುವ ಕಾಲಕ್ಕೆ ಕೊಡಲಿಡಬಾರದು ಕಾಣಾ,
ಗುರು ಚೆನ್ನಬಸವಣ್ಣನಲ್ಲಿ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೬೨ ॥

೧೬೦೧

ವ್ಯಾಕರಣವನೋದಿದಲ್ಲಿ ಶಬ್ದಶುದ್ಧಿಯಲ್ಲದೆ,
ಮನ ಶುದ್ಧವಾಗಿ ಜ್ಞಾನಶುದ್ಧಿಯಾಗದು.
ಛಂದಸ್ಸನು ಸಾಧಿಸಿದಲ್ಲಿ ಕವಿತಾಶುದ್ಧಿಯಲ್ಲದೆ,
ಕವಿತೆಯು ಸಾಧಿಸಿ, ವ್ಯಾಸನಂತೆ ಚಿರಂಜೀವಿಯಹಾಗನು.
ಅಷ್ಟಾದಶಪುರಾಣವ ಸಾಧಿಸಿದಲ್ಲಿ ವಾಕ್‌ಶುದ್ಧಿಯಲ್ಲದೆ,
ಕಪಿಲಸಿದ್ಧಮಲ್ಲಿಕಾರ್ಜುನ ಮಹಾದೇವಾ,
ದೇಹಸ್ವಭಾವ ಶುದ್ಧಿಯಾಗದು ನೋಡಾ, ಮಡಿವಾಳ ಮಾಚಯ್ಯಾ.
॥ ೭೬೩ ॥

೧೬೦೨

ರೇಖೆ ರೇಖೆ ಕೂಡಿದಲ್ಲಿ ಅಕ್ಷರವಾದುವು ;
ಅಕ್ಷರಾಕ್ಷರ ಕೂಡಿದಲ್ಲಿ ಶಬ್ದವಾಯಿತ್ತು ;
ಶಬ್ದ ಶಬ್ದ ಕೂಡಿದಲ್ಲಿ ಗ್ರಂಥಾನ್ವಯವಾಯಿತ್ತು.
ಅಕ್ಷರದಲ್ಲಿಲ್ಲ, ಶಬ್ದದಲ್ಲಿಲ್ಲ, ಗ್ರಂಥಾನ್ವಯದಲ್ಲಿಲ್ಲ ;
ಏನೆಂಬುದಿಲ್ಲ, ಮೊದಲೆ ಇಲ್ಲ.
ಇಲ್ಲೆಂಬುವ ಆಹುದೆಂಬುವ ಉಭಯ ಶಬ್ದಕ್ಕೆ ಲೋಪವಿಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನ ಮಹಾಮಹಿಮನು. ॥ ೭೬೪ ॥

೧೬೦೩

ದೀಪದಂತಿಹ ಜನ್ಮ
ಬಂದುದು ತಿಳಿಯಬಾರದು, ಹೋಹುದು ತಿಳಿಯಬಾರದು.
ಮೇಘದಂತಿಹ ಜನ್ಮ
ಬಂದುದು ತಿಳಿಯಬಾರದು, ಹೋಹುದು ತಿಳಿಯಬಾರದು.
ಶಿಶುವಿನಂತಹ ಜನ್ಮ
ಬದುಕುವುದು ತಿಳಿಯದು, ಬದುಕಿ ಬಾಳೀತೆಂಬುದು ತಿಳಿಯಬಾರದು
ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೬೫ ॥

೧೬೦೪

ಸ್ವಪ್ನದಲ್ಲಿ ಪಾಶಬದ್ಧತ್ವಕ್ಕೆ
ಸ್ವಪ್ನದಲ್ಲಿ ಬೇರ್ಪಡಿಸು ಕಂಡಾ ಗುರುವೆ,
ಕಪಿಲಸಿದ್ಧಮಲ್ಲಿಕಾರ್ಜುನ ಗುರುವೆ. ॥ ೭೬೬ ॥

೧೬೦೫

ದಿನ ಒಂದರಲ್ಲಿ ವಾರ ಏಳು ನೋಡಾ.
ಆ ಏಳು ವಾರಗಳೆಂಬುವುದು ಕಲ್ಪಿತವಲ್ಲದೆ
ದೃಷ್ಟಿಯನ್ನಿಟ್ಟು ನೋಡಬಾರದು ನೋಡಾ.
ದೇವರೆಂಬುವುದೊಂದು ನೋಡಾ.
ಆ ದೇವರೆಂಬುವುದೊಂದರಲ್ಲಿ,
ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ವಿರಾಟ್ಪುರುಷರೆಂಬುವುದು ;
ನೋಡಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೭೬೭ ॥

೧೬೦೬

ಚೌಕೋಣೆಯ ಮಂಟಪದಲ್ಲಿ ಪಂಚಕೋಣೆಯ ದೇವ,
ತ್ರಿಕೋಣೆಯಲ್ಲಿ ನಿಂತು ಸುಳಿಯುತ್ತಿರ್ಪ.
ಆ ತ್ರಿಕೋಣೆಗಳಿದ್ದಂತಿರ್ಪವೆಂಬುದ ಅರಿಯಬಾರದು.
ಹೊತ್ತಿಗೊಮ್ಮೆ ಪರಿಪರಿಯಾಗಿ ಕೇಡುಗೊಂಡುವು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ. ॥ ೭೬೮ ॥

೧೬೦೭

ತಾನು ಮಾನವಂತನಾದಡೆ,
ಅಹಂಕಾರದ ನಾಶದಲ್ಲಿ ಮರೆಯ ಮಾಡಿಕೊಂಡಿರ್ಪುದು
ಬಹುಕರ ಲೇಸಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೭೬೯ ॥

೧೬೦೮

ಘಟವೆಂಬುದು ದಿಟವಲ್ಲ ನೋಡಾ, ಕೇದಾರಯ್ಯಾ.
ಪಟವೆಂಬುದು ದಿಟವಲ್ಲ ನೋಡಾ, ಕಲ್ಲಯ್ಯಾ.
ಮಾಡಿದ ಘಟ, ನೆಯ್ದ ವಸ್ತ್ರಪಟ ಕಡೆ ಕಾಣಬಲ್ಲಡೆ,
ಲಯವೆಂಬುದೆಲ್ಲಿಹುದು ಹೇಳಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನನ ಸಾನ್ನಿಧ್ಯದಲ್ಲಿ ? ॥ ೭೭೦ ॥

೧೬೦೯

ಜೀವಾತ್ಮವೆಂಬುದು ಪಂಚಭೂತಮಯ
ದೇಹವನಾಶ್ರಯಿಸಿತ್ತು ನೋಡಾ.

ಪರಮಾತ್ಮವೆಂಬುದು ಅಜಾಂಡ ನೂರಾರನೊಳಗುಮಾಡಿ,
'ಅತ್ಯತಿಷ್ಠದ್ದಶಾಂಗುಲಂ' ಎನಿಸಿತ್ತು ನೋಡಾ.
ಅಂತರಾತ್ಮವೆಂಬುದು ಜೀವಾತ್ಮವನಳಿದು
ಪರಮಾತ್ಮನಲ್ಲಿ ಕೂಡುವ ಕೂಟವೆನಿಸಿತ್ತು.
ಈ ಆತ್ಮತ್ರಯ ಕಡೆಗೆ ಕಪಿಲಸಿದ್ಧಮಲ್ಲಿಕಾರ್ಜುನನ ರೂಪು ಪ್ರಸಿದ್ಧ.
ನೋಡಾ, ಕೇದಾರಯ್ಯಾ. ॥ ೭೭೧ ॥

೧೬೧೦

"ಶಿವಾ ಭವಾನೀ ರುದ್ರಾಣೀ ಶಿವೋ ಮಹೇಶ್ವರಃ ಶಂಭುಃ" ಎಂಬಲ್ಲಿ,
ನಮ್ಮಮ್ಮನ ಶಿವನ ನಾಮ ಒಂದೆ ನೋಡಾ.
ವಿವೇಕದೃಷ್ಟಿಯಿಂದ ನೋಡಿದಡೆ,
ಅದು ಶಿವನ ಶಕ್ತಿಮಂತ್ರವಾಗಿ ಅರಿಯಬಂದಿತ್ತು ನೋಡಾ.
'ಓಂ ನಮಃ ಶಿವಾಯ, ನಮಃ ಶಿವಾಯ್ಯೆ'
ಎಂಬುಭಯ ಮಂತ್ರ ಒಂದೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೭೨ ॥

೧೬೧೧

ಪಂಚಾಕ್ಷರವೆಂಬುದು ಶಿವನ ಪಂಚಾವಸ್ಥೆ ನೋಡಾ.
ಪಂಚಾಕ್ಷರವೆಂಬುದು ಪಂಚಾಚಾರಫಲದಾಯಕ ನೋಡಾ.
ಪಂಚಾಕ್ಷರವೆಂಬುದು ಪಂಚಮುಖ ಪಂಚಮುಖಿ ಮಹಾದೇವಿ
ಕಪಿಲಸಿದ್ಧಮಲ್ಲಿಕಾರ್ಜುನನ ಪ್ರಸನ್ನತೆ ನೋಡಾ,
ಎಂದು ತಿಳುಹಿದ ಚೆನ್ನಬಸವಣ್ಣನ ಪಾದಕ್ಕೆ ನಮೋ ನಮೋ ಎಂಬೆ,
ನೋಡಾ, ಮಡಿವಾಳ ಮಾಚಯ್ಯಾ. ॥ ೭೭೩ ॥

೧೬೧೨

ಕಾಯ್ದ ಕಬ್ಬುನ ನೀರನೊಳಕೊಂಬಂತೆ,
ಬಿದ್ದ ಬಿಂದುವ ಭೂಮಿಯೊಳಕೊಂಬಂತೆ,
ನವನೀತ ಘೃತವನೊಳಕೊಂಬಂತೆ,
ವೀಳ್ಯ ರಸವನೊಳಕೊಂಬಂತೆ–
ಎನ್ನ ಕಾಯುವ ತನ್ನ ಕಾಯದಲ್ಲಿ ಒಳಕೊಂಬ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನ ಮಹಾಶರಣನ. ॥ ೭೭೪ ॥

೧೬೧೩

ಕಾಲು ಮೇಲು ಮಾಡಿ, ಕೋಲು ಕೆಳಯಿಕೆ ಊರಿ,
ಕಾಲಕಾಲ ತಪಶ್ಚರ್ಯೆ ಮಾಡಿದಡೆ ಕಾಲಾಂತಕ ನೋಡಾ.
ದೇಶಕಾಲವಸ್ತುತ್ರಯವನರಿದಲ್ಲಿ,
ಕಾಲಾರಿ ಕಾಲಕಾಲದಲ್ಲಿ ಕಾಲ್ದೊಡಕಾಗಿರುವ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೭೫ ॥

೧೬೧೪

ವೇದವನೋದಿ ವೇದಾಧ್ಯಯನವ ಮಾಡಿದಡೇನು,
ಬ್ರಾಹ್ಮಣನಾಗಬಲ್ಲನೆ ?
ಬ್ರಹ್ಮವೇತ್ತುಗಳ ಶುಕ್ಲಶೋಣಿತದಿಂದ ಜನಿಸಿದಡೇನು,
ಬ್ರಾಹ್ಮಣನಾಗಬಲ್ಲನೆ ?
ಯಜನಾ[ದಿ ಇ]ಷ್ಟ, ಷಟ್ಕರ್ಮಂಗಳ ಬಿಡದೆ ಮಾಡಿದಡೇನು,
ಬ್ರಾಹ್ಮಣನಾಗಬಲ್ಲನೆ ?
'ಬ್ರಹ್ಮ ಜಾನಾತಿ ಇತಿ ಬ್ರಾಹ್ಮಣಃ' ಎಂಬ ವೇದವಾಕ್ಯವನರಿದು,
ಬ್ರಹ್ಮಭೂತನಾದಾತನೆ ಬ್ರಾಹ್ಮಣ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೭೬ ॥

೧೬೧೫

ಗುಣದಿಂದ ಹಾರುವನಲ್ಲದೆ, ಅಗಣಿತ ವಿದ್ಯಾಭ್ಯಾಸದಿಂದ ಹಾರುವನಲ್ಲ.
ಹಾರಬೇಕು ಮಲತ್ರಯಂಗಳ ; ಹಾರಬೇಕು ಸೃಷ್ಟಿ-ಸ್ಥಿತಿ-ಲಯವ ;
ಹಾರಬೇಕು, ಸರ್ಪಹಾರ ಕಪಿಲಸಿದ್ಧಮಲ್ಲಿಕಾರ್ಜುನನ ಆ ಹಾರದಲ್ಲಿ. ॥ ೭೮೭ ॥

೧೬೧೬

ಶಿಷ್ಯನೆಂಬ ವನಕ್ಕೆ ವಸಂತ ನೋಡಾ ಗುರು.
ಶಿಷ್ಯನೆಂಬ ತಿಮಿರಕ್ಕೆ ಜ್ಯೋತಿ ನೋಡಾ ಗುರು.
ಶಿಷ್ಯನೆಂಬ ರಾತ್ರಿಗೆ ಸೂರ್ಯ ನೋಡಾ ಗುರು.
ಶಿಷ್ಯನೆಂಬ ನನಗೆ ಪ್ರಕೃಷ್ಟ ಪ್ರಮಥ ಚಿಂತಾಮಣಿ
ಚೆನ್ನಬಸವ ಗುರು, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೭೮ ॥

೧೬೧೭

ಕುಲದಿಂದಧಿಕವೆಂದು ಹೋರಾಡುವ ಅಣ್ಣಗಳಿರಾ, ಕೇಳಿರಯ್ಯಾ :
ಬ್ರಾಹ್ಮಣನವ ಮಧುವಯ್ಯ, ಚಂಡಾಲನವ ಹರಳಯ್ಯ,

ದೂರ್ವಾಸನವ ಮಚ್ಚಿಗ, ಊರ್ವಶಿಯಾಕೆ ದೇವಾಂಗನೆ,
ಚಂಡಾಲನವ ಪರಾಶರ, ಕುಸುಮಗಂಧಿಯಾಕೆ ಕಬ್ಬಿಲಗಿತ್ತಿ.
'ಜಪತಸ್ತಪತೋ ಗುಣತಃ' ಕಪಿಲಸಿದ್ಧಮಲ್ಲಿಕಾರ್ಜುನಾ ಕೇಳಾ,
ಕೇದಾರಯ್ಯ. ॥ ೭೭೯ ॥

೧೬೧೮

ಜೀವಾತ್ಮಕ ಜೀವನಲ್ಲ, ಜೀವಾತ್ಮಕ ಶಿವನಲ್ಲ.
ಶಿವನಂತುವನರಿಯದೆ ಹೋದವು ವೇದಗಳು,
ಜೀವನಂತುವನರಿಯದೆ ಹೋದರು ಮಹಾಮುನಿಗಳು.
ಶಿವಜೀವಕ್ಕೆ ಭೇದವಿಲ್ಲೆಂಬುವರ ನಾ ನೋಡಲಾರೆನು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೭೯ ॥

೧೬೧೯

ಈ ರಚನೆಯೆಂಬುದು
ಇಮ್ಮಡಿ ಮುಮ್ಮಡಿಯಿಂದಲ್ಲದೆ ಒಮ್ಮಡಿಯಿಂದಾಗದು.
ಆದಿಯಲ್ಲಿ ಬ್ರಹ್ಮ, ಅನಾದಿಯಲ್ಲಿ ಏನೆಂಬುದಿಲ್ಲ.
ಇತ್ತಲದು ಮಾಯಾಶಕ್ತಿಯಿಂ ಮಾಧವನ ಉತ್ಪತ್ತಿ ;
ಮಾಧವನ ಉತ್ಪತ್ತಿಯಿಂ ಮೂಲೋಕ ನಿರ್ಮಿತ್ತು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೮೦ ॥

೧೬೨೦

ಕಾಜಿನ ಮಣಿ ಪಚ್ಚದಂದವಿರೆ, ಕಾಜಿನ ಮಣಿಯೆ ಪ್ರಸಿದ್ಧ.
ಲೋಕದ ಮಾನವ ಯೋಗಿಯಂತಿರೆ, ಲೋಕದ ಮಾನವನೆ ಪ್ರಸಿದ್ಧ.
ಬಾಹ್ಯವರ್ಣ ಜನಪ್ರಸಿದ್ಧವಲ್ಲದೆ,
ಕಪಿಲಸಿದ್ಧಮಲ್ಲಿಕಾರ್ಜುನನ ಚಿತ್ತಕ್ಕೆ ಪ್ರಸಿದ್ಧವಲ್ಲ. ॥ ೭೮೧ ॥

೧೬೨೧

ಆಂದೋಲನದಲ್ಲಿಹ ರಾಜಶಿಶುವಿನಂತಿರಬಲ್ಲಡೆ,
ಅದು ಯೋಗಿಗೆ ಭೂಷಣ.
ಸಂಧ್ಯಾಕಾಲದಲ್ಲಿಹ ಪ್ರಕಾಶದಂತೆ ವಿಷಯಸುಖವಿರಬಲ್ಲಡೆ,

ಅದು ಯೋಗಿಗೆ ಭೂಷಣ.
ವಾರಾಂಗನೆಯಲ್ಲಿಹ ಪ್ರೀತಿಯಂತಿರಬಲ್ಲಡೆ,
ಅದು ಯೋಗಿಗೆ ಭೂಷಣ.
ಪತಿವ್ರತೆಯಲ್ಲಿಹ ಭಕ್ತಿಯಂತಿರಬಲ್ಲಡೆ
ಅದು ಯೋಗಿಗೆ ಭೂಷಣ.
ಕಪಿಲಸಿದ್ಧಮಲ್ಲಿಕಾರ್ಜುನಂಗದು ಬಹು ತೋಷಣ ಕೇಳಾ, ಮನವೆ.
॥ ೭೮೨ ॥

೧೬೨೨

ಸಂಯೋಗವೆಂಬುದು ಪರಮೇಶ್ವರನ ಲೀಲೆಯದು.
ಅಲ್ಲ ಅಲ್ಲವೆಂದಡೆ, ಆ ಸಂಯೋಗದಿಂದವೆ ಜಗದುತ್ಪನ್ನ.
ಉತ್ಪತ್ತಿನಾಶನಕ್ಕೆಯೂ ಸಂಯೋಗವೇ ಬೇಕು.
ಆ ಸಂಯೋಗ ಸರಿಯೆ ಪ್ರಾರಬ್ಧವಳಿಯಿತ್ತೆಂಬರು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೮೩ ॥

೧೬೨೩

ದೇಶವ ತಿರುಗಿದಡೇನು, ಕಾಶೀ ರಾಮೇಶ್ವರ
ಯಾತ್ರೆಯ ಮಾಡಿದಡೇನು,
ಕೋಶತ್ರಯವನರಿದು ದಾಂಟದನ್ನಕ್ಕ ?
ದೇಶವ ತಿರುಗಿದಲ್ಲಿ ಲಕ್ಷಣಾಲಕ್ಷಣಾವಲೋಕನವೆ ಪ್ರಾಪ್ತಿ ;
ಯಾತ್ರೆಯ ಮಾಡಿದಲ್ಲಿ ಮೂಢಜನಕ್ಕೆ ಸಾಧುದೃಷ್ಟತ್ವವೆ ಪ್ರಾಪ್ತಿ.
ಕೋಶತ್ರಯವ ದಾಂಟಿದಲ್ಲಿ ಕಪಿಲಸಿದ್ಧಮಲ್ಲಿಕಾರ್ಜುನನ ಸ್ವಭಾವವೆ ಪ್ರಾಪ್ತಿ
ನೋಡಾ, ಕೇದಾರಯ್ಯಾ. ॥ ೭೮೪ ॥

೧೬೨೪

ಏಕಪಂಙ್ತಿಯಲ್ಲಿ ತಾ ಭೋಜನಭೇದ ಮಾಡಬಾರದು.
ಭೋಜನಭೇದ ಮಾಡಿದಡೆಯು ತಾನೆಣಿಸಬಾರದು.
ತಾನೆಣಿಸಿದಲ್ಲಿಯೂ ಅನ್ಯರಿಗೆ ತಿಳಿಯಬಾರದು.
ಅನ್ಯರಿಗೆ ತಿಳಿದಡೆಯು ಮನೆ ಬೇರಾಗಬಾರದು.
ಮನೆ ಬೇರಾದಡೆಯು ಮನ ಬೇರಾಗಬಾರದು,
ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ, ॥ ೭೮೫ ॥

೧೬೨೫

ಗುರುಸಾಹಿತ್ಯ ಚೆನ್ನಬಸವಂಗಾಯಿತ್ತು ;
ಲಿಂಗಸಾಹಿತ್ಯ ಬಸವಂಗಾಯಿತ್ತು ;
ಜಂಗಮಸಾಹಿತ್ಯ ಅಲ್ಲಮದೇವಂಗಾಯಿತ್ತು ;
ಪ್ರಸಾದಸಾಹಿತ್ಯ ಬಿಬ್ಬಿಬಾಚರಸಂಗಾಯಿತ್ತು ;
ಪಾದೋದಕಸಾಹಿತ್ಯ ಹೊಡೆಹುಲ್ಲ ಬಂಕಯ್ಯಂಗಾಯಿತ್ತು ;
ಭಸ್ಮಸಾಹಿತ್ಯ ಅಕ್ಕನಾಗಮ್ಮಂಗಾಯಿತ್ತು ;
ರುದ್ರಾಕ್ಷಿಸಾಹಿತ್ಯ ಸರ್ವಪ್ರಮಥರಿಗಾಯಿತ್ತು.
ಮಂತ್ರಸಾಹಿತ್ಯದವರ ಕಂಡಡೆ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯನಿವರೆ ಎಂದು
ಎನ್ನ ಮನ ನಂಬಿತ್ತು ನೋಡಾ, ಮಡಿವಾಳ ಮಾಚಯ್ಯ. ॥ ೭೮೬ ॥

೧೬೨೬

ಸರ್ವರು ಜ್ಞಾನದಿಂದಲ್ಲದೆ,
ಗೋತ್ರಾಭಿಮಾನದಿಂದ ಮೋಕ್ಷವಂತರಲ್ಲ ಕೇಳಾ.
"ತಪಸಾ ಬ್ರಾಹ್ಮಣೋ ಜಾತೋ ವಿಶ್ವಾಮಿತ್ರೋ ಮಹಾಮುನಿಃ ।
ತಪಸಾ ಬ್ರಾಹ್ಮಣೋ ಜಾತೋ ನಾರದೋ ಹಿ ಮಹಾಮುನಿಃ ॥
ತಪಸಾ ಬ್ರಾಹ್ಮಣೋ ಜಾತಿಶ್ಚಾಗಸ್ತ್ಯೋ ಮುನಿಪುಂಗವಃ ।
ತಪಸಾ ಬ್ರಾಹ್ಮಣೋ ಜಾತಃ ಪರಾಶರಮಹಾಮುನಿಃ ॥
ತಪಸಾ ಬ್ರಾಹ್ಮಣೋ ಜಾತೋ ದೂರ್ವಾಸಸ್ತು ಮಹಾಮುನಿಃ ।
ತಪಸಾ ಬ್ರಾಹ್ಮಣೋ ಜಾತೋ ಭೃಗುರ್ವ್ಯಾಸಶ್ಚ ಮಾಂಡವಃ ॥"
ಎಂಬುದು ಹುಸಿಯಲ್ಲ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೮೭ ॥

೧೬೨೭

ಕುಲದಲ್ಲಿಯೂ ಅಧಿಕ ಜ್ಞಾನದಲ್ಲಿಯೂ ಅಧಿಕನಾಗಲಾಗಿ,
ಆ ಕುಲೀನ ಜ್ಞಾನವಂತನಲ್ಲಿ ಸಮರಸ ಸಲ್ಲದು ನೋಡಾ, ಗುರುವೆ.
ಶಿವಶಕ್ತಿಯೆ ಸತ್ಕುಲ,ಶಿವಧ್ಯಾನವೆ ಸತ್ಕುಲ,
ಶಿವಪೂಜೆಯೆ ಸತ್ಕುಲ ನೋಡಾ ಗುರುವೆ.
ಶಿವಕಥಾವರ್ಣನವೆ ಸತ್ಕುಲ, ಶಿವಗೋಷ್ಠಿಯೆ ಸತ್ಕುಲ ನೋಡಾ ಗುರುವೆ,
ಕಪಿಲಸಿದ್ಧಮಲ್ಲಿಕಾರ್ಜುನ ಗುರುವೆ. ॥ ೭೮೮ ॥

೧೬೨೮

ಆಕಾರದ ಮೂರ್ತಿ ವರ್ಣಿಸಿಹೆನೆಂದಡೆ ತೀರದು.
ನಿರಾಕಾರದ ಮೂರ್ತಿ ವರ್ಣಿಸಿಹೆನೆಂದಡೆ ಮೊದಲಿಗೆ ತೀರದು.
ತೀರದು ಎಂದು ಶಬ್ದಮುಗ್ಧವಾಗಿರಬಾರದು, ಬಾರದು ;
ಕಪಿಲಸಿದ್ಧಮಲ್ಲಿಕಾರ್ಜುನ ಎನ್ನಬಹುದು ಎನ್ನಬಹುದು ಮನವೆ.
॥ ೭೮೯ ॥

೧೬೨೯

ಅಕ್ಷರತ್ರಯದ ಗುಂಡಿನಲ್ಲಿ
ಸಕಲಾಕ್ಷರ ಮೂರ್ತಿ ಮನೆಯು ಮಾಡಿಕೊಂಡಿದೆ.
ಅಕ್ಷರವರಿಯಬಾರದು ;
ಅರಿದ ಬಳಿಕ ಜನನ ಮರೆಯಬಾರದು ;
ಮರೆದ ಬಳಿಕ ಅಕ್ಷರದ ಧ್ಯಾನ ನೆಲೆಗೊಳಿಸಬಾರದು, ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೯೦ ॥

೧೬೩೦

ಸಾಂಬನಾಗಲಿ, ಶಿವನೆ ತಾನಾಗಲಿ,
ಪಂಚಭೌತಿಕಕ್ಕೆ ಬಂದ ಬಳಿಕ ಕೇಡೆಂಬುದು ನಿಶ್ಚಯ.
ಭೌತಿಕದಲ್ಲಿ ಕೇಡು ನಿಶ್ಚಯವಲ್ಲದೆ, ಮಹಾ ಅರುಹಿನಲ್ಲಿ ಕೇಡಿಲ್ಲ.
'ತತ್ತ್ವಾತ್ಮಕಂ ವಪುರ್ದೇವಿ ನಾಶಾರ್ಥಂ ಕಾರಣಂ ದೃಢಂ'
ಎಂಬುದು ಪುಸಿಯಲ್ಲ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೯೧ ॥

೧೬೩೧

ಅಲಿಂಗಿಗಳ ಸಂಗ ಸಲ್ಲದೆಂದಡೆ,
ಉದರದಲ್ಲಿಹ ಲಿಂಗ ಲಿಂಗವಲ್ಲವೆ, ಲಿಂಗಯ್ಯಾ ?
ಅಲಿಂಗಿಗಳ ಭೋಜನ ಸಲ್ಲದೆಂದಡೆ,
ಪಶು ಪೃಥ್ವಿಗಳು ಅಂಗವಲ್ಲವೆ, ಲಿಂಗಯ್ಯಾ ?
'ಲಿಂಗಮಧ್ಯೇ ಜಗತ್ ಸರ್ವಂ' ಎಂದ ಬಳಿಕ ಲಿಂಗವಲ್ಲವೆ,
ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗಯ್ಯಾ ? ॥ ೭೯೨ ॥

೧೬೩೨

ಮೇಲುಮಾಡಿದ ನುಡಿಯಂತೆ ನಡೆಯಬೇಹಡೆ,
ಮೃಡಭಾವವಡಗಿರಬೇಕು.
ಪ್ರಾಣದಲ್ಲಿ ಅಡಗಿದ ಭಾವ[ವ] ನಡಹಿಕೊಳಬೇಕಾದಡೆ,
ದೃಢಲಿಂಗಮೂರ್ತಿಯ ಧರಿಸಬಹುದೆ ದೇಹದಲ್ಲಿ ?
ಅರಿದು ಧರಿಸದೆ, ಧರಿಸಿ ಅರಿಯದೆ ಇದ್ದವನ ಭಾವ
ಬಯಲಲ್ಲಿಹ ದೀಪದಂತೆ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೯೩ ॥

೧೬೩೩

ವಸ್ತು ನಿರಾಕಾರವೆಂದಡೆ ಆಕಾರಕ್ಕೆ ಬರುವುದೆ ?
ವಸ್ತು ನಿರ್ವಿಕಾರವೆಂದಡೆ ವಿಕಾರಕ್ಕೆ ಬರುವುದೆ ?
ವಸ್ತು ಉಭಯವೆಂದಡೆ ಉಭಯ ಸಂದೇಹತ್ವದಿಂಬಳಿವುದೆ ?
ವಸ್ತುವಿನ ವ್ಯವಹಾರ ಆರಿಗೂ ಅರಿಯಬಾರದು.
ಕಪಿಲಸಿದ್ಧಮಲ್ಲಿಕಾರ್ಜುನಲಿಂಗ ಉಭಯಾತೀತ ನೋಡಾ, ಪ್ರಭುವೆ.
॥ ೭೯೪ ॥

೧೬೩೪

ತೋರುವ ಜಗತ್ತು ಬ್ರಹ್ಮವೆಂದೊಮ್ಮೆ ವಾದಿಸುವೆ.
ತೋರುವ ಜಗತ್ತು ಮಾಯೆಯೆಂದೊಮ್ಮೆ ವಾದಿಸುವೆ.
ತೋರಿಯಡಗಿದಲ್ಲಿ ಮಾಯೆ ಎನಿಸಿತ್ತು ;
ತೋರಿ ತೋರಿದಲ್ಲಿ ಬ್ರಹ್ಮವೆನಿಸಿತ್ತು.
ತೋರಿದಲ್ಲಿ ತೋರಿ ಕೆಡದಲ್ಲಿ ಏನೆಂದೆನಿಸದು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೯೫ ॥

೧೬೩೫

ನಿರ್ಗುಣ ಮಹಾದೇವನೆಂದ ಬಳಿಕ ಗುಣಹೀನನಲ್ಲವೆ ?
ಸಗುಣನವನು ತನ್ನರಿವಿಗೆ ;
ನಿರ್ಗುಣನವನು ಜಗಜ್ಜೀವಿಗಳಿಗೆ.
ಅಂದಡೆ ನಿರ್ಗುಣನಲ್ಲ, ಸಗುಣ ಗುಹಾಗ್ರಗಣ್ಯ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೯೬ ॥

೧೬೩೬

ಕನಕ ಒಂದರಲ್ಲಿ ಕಡಗ ಕಂಠಿಯಾದಂತೆ,
ಶಕುನವೊಂದರಲ್ಲಿ ಶಕುನ ಬೇರಾದಂತೆ,
ಘನಕೆ ಘನವಾದ ಪರವಸ್ತುವಿನಲ್ಲಿ ಜನನವಾಯಿತ್ತು ಮೂಲೋದಕ,
ಮಹಾಲಿಂಗ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೯೭ ॥

೧೬೩೭

ಮೃತ್ತಿಕೆಯೊಂದರಲ್ಲಿ ಮಡಕೆಗಳು ನೂರಾರು.
ಮನವೊಂದರಲ್ಲಿ ಕ್ರಿಯಾದಿಗಳು ನೂರಾರು.
ಜನಕನೊಬ್ಬನಲ್ಲಿ ಸಂತತಿಗಳು ನೂರಾರು.
ಘನಕ್ಕೆ ಘನವಾದ ಚಿನ್ಮಯ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ
ಜಗತ್ತುಗಳು ನೂರಾರು. ॥ ೭೯೮ ॥

೧೬೩೮

'ಸರ್ವಂ ಖಲ್ವಿದಂ ಬ್ರಹ್ಮ' ಎಂಬುದ ಅರಿದ ಬಳಿಕ,
ಲಿಂಗದಲ್ಲಿ ಶಿಲೆಯ ಭಾವವನರಸಲುಂಟೆ ?
'ಸರ್ವಂ ಖಲ್ವಿದಂ ಬ್ರಹ್ಮ' ಎಂದರಿದ ಬಳಿಕ,
ಗುರುವಿನಲ್ಲಿ ನರನ ಭಾವವನರಸಲುಂಟೆ ?
'ಸರ್ವಂ ಖಲ್ವಿದಂ ಬ್ರಹ್ಮ' ಎಂದರಿದ ಬಳಿಕ
ಮಾಯಾಮಯ ಸಂಸಾರವೆಂದರಸಲುಂಟೆ ?
'ಸರ್ವಂ ಖಲ್ವಿದಂ ಬ್ರಹ್ಮ' ಎಂದರಿದ ಬಳಿಕ,
ನಾನು ಜೀವಿ, ನಾನು ಜಡ, ನಾನು ಬದ್ಧನೆಂದರಸಲುಂಟೆ ?
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೭೯೯ ॥

೧೬೩೯

ಅರಿದಾಚರಿಸುವವನಾಚರಣೆ ಬ್ರಹ್ಮಮಯ.
ಅರಿಯದವನಾಚರಣೆ ಮಾಯಾಮಯ.
ಅರಿಯಬೇಕು, ಅರಿಯಬೇಕು ಗುರುಮುಖದಿಂದ.
ಆರು ಪರಶಿವನೆಂಬುದನರಿಯದವನರಿವು,
ಸ್ವಪ್ನದಲ್ಲಿಯ ರತಿಯಂತೆ, ರತಿಯಲ್ಲಿಯ ರಾಜಸುತನಂತೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೦೦ ॥

೧೬೪೦

ಲೋಕದಲ್ಲಿಹ ನೂರಾರು ಗುರುಗಳ ನೋಡಿ ನೋಡಿ
ನಾನು ಬೇಸರುಗೊಂಡೆನಯ್ಯಾ.
ವಿತ್ತಾಪಹಾರಿ ಗುರುಗಳು ನೂರಾರು ;
ಶಾಸ್ತ್ರಾರ್ಥ ಹೇಳುವ ಗುರುಗಳು ನೂರಾರು ;
ಮಂತ್ರತಂತ್ರದಿಂದುಭಯ ಲೋಕದಲ್ಲಿ
ಸುಖದುಃಖವೀವ ಗುರುಗಳು ನೂರಾರು ;
ಸತ್ಕರ್ಮೋಪದೇಶವನರುಹಿ
ಸ್ವರ್ಗಮರ್ತ್ಯದಲ್ಲಿ ಸುಖವೀವ ಗುರುಗಳು ನೂರಾರು ;
ವಿಚಾರಮುಖದಿಂದ ಷಟ್ಸಾಧನೆಯನರುಹುವ ಗುರುಗಳು ನೂರಾರು.
ವಿಷಯಂಗಳೆಲ್ಲ ಮಿಥ್ಯಂಗಳೆಂದರುಹಿ
ಆತ್ಮಾನುರಾಗತ್ವವನೀವ ಗುರುಗಳು ನೂರಾರು ;
ಶಿವಜೀವರ ಏಕತ್ವವನರುಹಿ
ನಿರ್ಮಲಜ್ಞಾನವೀವ ಗುರುಗಳು ಪ್ರಮಥರು.
ಸಂಶಯಾಳಿಗಳನೆಲ್ಲ ಜ್ಞಾನಾಗ್ನಿಯಿಂದ ದಹಿಸಿ
ಮುಕ್ತಿಯ ಹಂಗೆಂಬುದ ಅರುಹಿನ ಬಂಧದಲ್ಲಿರಿಸಿದ ಗುರು
ಚೆನ್ನಬಸವಣ್ಣನಲ್ಲದೆ ಮತ್ತೊರ್ವನ ಕಾಣೆ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೦೧ ॥

೧೬೪೧

ನಿರಾಕಾರ ಪರವಸ್ತು ತಾನೆಂದರಿದಡೆಯು
ಕಿರಿದಾಗಿ ನುಡಿಯಲೆಬೇಕು, ಗುರುದೇವಾ.
ಜಡದೇಹಿ ನಾನೆಂಬರುಹು ಉಳ್ಳವಂಗಾದಡೆಯು ಅರುಹಿಕೊಡಲೆ ಬೇಕು,
ಸಜ್ಜನರವರು ಗುರುದೇವಾ,
ಮಹಾಮಹಿಮ ಕಪಿಲಸಿದ್ಧಮಲ್ಲಿಕಾರ್ಜುನದೇವಾ. ॥ ೮೦೨ ॥

೧೬೪೨

ಅಯ್ಯಾ, ನಿಮ್ಮ ಶರಣ ಉಂಡ ಶಬ್ದವೆನ್ನಮನಕ್ಕೆ ವೇದ್ಯವಾಯಿತ್ತು.
ಅಯ್ಯಾ, ನಿಮ್ಮ ನಿಜವುಂಡ ನಿಲವು ಎನ್ನ ಮತಿಗೆ ವೇದ್ಯವಾಯಿತ್ತು.
ನಿಮ್ಮ ಕಾಯುವಿಡಿದಿಪ್ಪ ಕರಸ್ಥಲವೆಂತು ಹೇಳಾ,
ಕಪಿಲಸಿದ್ಧಮಲ್ಲಿನಾಥಾ. ॥ ೮೦೩ ॥

೧೬೪೩

ಆನು ಆರೆಂಬುವುದಕ್ಕೆ ಅಷ್ಟಪ್ರಮಾಣಂಗಳಂತಿರಲಿ, ದೇವಾ.
ಆರು ಆರೆಂಬುವುದಕ್ಕೆ ಪ್ರತ್ಯಕ್ಷ ಪ್ರಮಾಣದಿಂದರಿಯಬೇಹುದು ದೇವಾ.
ಅವಸ್ಥೆ ಮೂರರ ತೂರ್ಯ ತಿಳಿಯಿತ್ತು ;
ತೂರ್ಯವೆರಡರ ಚಿನ್ಮಯಮೂರ್ತಿ ಅರಿಯಿತ್ತು, ದೇವಾ.
ಆನು ಆರೆಂಬಬಾರದು, ಘನಗುರು ಚೆನ್ನಬಸವನರುಹಿದ ಬಳಿಕ,
ಕಪಿಲಸಿದ್ಧಮಲ್ಲಿಕಾರ್ಜುನದೇವಾ. ॥ ೮೦೪ ॥

೧೬೪೪

ಮಾಡುವ ಕ್ರಿಯಾಕ್ರಿಯೆಗಳು ಸುಖದುಃಖಂಗಳಿಗಲ್ಲದೆ, ಭವವೀಡಾಡವು ;
ಮೃಡನ ಪದ ದೊರೆಯದು ನೋಡಾ.
ಮಾಡುವ ಕ್ರಿಯೆ ಮನೋಧರ್ಮ, ಮಾಡದ ಕ್ರಿಯೆ ಚಿತ್ತಿನ ಧೈರ್ಯ,
ತಾನರಿದ ಮನೋತೀತ ಮಾಡುವನಲ್ಲ,
ಇದ್ದು ಬಿಡುವನಲ್ಲ, ಬಿಟ್ಟು ಭವಭಾರಿಯಲ್ಲ,
ಕಪಿಲಸಿದ್ಧಮಲ್ಲಿಕಾರ್ಜುನ ಗುರುವೆ. ॥ ೮೦೫ ॥

೧೬೪೫

ಆಗದಯ್ಯಾ, ಆಗದಯ್ಯಾ ಇಲ್ಲದವಂಗೆ ;
ಆಗದಯ್ಯಾ ಅಲ್ಲದವಂಗೆ ;
ಆಗದಯ್ಯಾ ಇಲ್ಲದವಂಗೆ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೮೦೬ ॥

೧೬೪೬

ಆಗದು ಆಗದು, ಕಾಯದ ಗುಣವಳಿಯದವಂಗೆ ಜೀವನ್ಮುಕ್ತಿ.
ಆಗಬೇಕು ಇದಿರಿಟ್ಟು, ಆಗಬೇಕು ಪಶ್ಚಾತ್ತಾಪ.
ಆಗದೆ ಆದೆನೆಂಬ ಮನುಜನ ಅರಿವು
ಶ್ವಾನನರಿವು ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೦೭ ॥

೧೬೪೭

ಇಲ್ಲದ ಮಾಯೆಯ ಇಲ್ಲೆನಿಸುವುದದೆ ಅಲ್ಲನ ಅರುಹು ಕಂಡಯ್ಯಾ.
ಇಲ್ಲದ ಮಾಯೆ ಅಹುದೊ ಅಲ್ಲವೊ ಎಂಬುಭಯ ಭಾವ
ಜಲ್ಲರಿಯ ಕಳಂಕು ಕಂಡಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೮೦೮ ॥

೧೬೪೮

ಅರುಹಿನ ಆಚರಣೆಯಿದು ಕುರುಹಿನ ಕರುಮಾಡ ನೋಡಾ, ಲಿಂಗಯ್ಯಾ.
'ಕ್ರಿಯಾಽಪಿ ಜ್ಞಾನೇನ ವರ್ತತೇ' ಎಂದ ಬಳಿಕ,
ಅರುಹು ಬೇಕು ಆಚರಣೆಯಲ್ಲಿ, ಮರಹು ಬೇಕು ವಿಷಯಂಗಳಲ್ಲಿ.
ಈ ಅರುಹಿನ ಮರವೆಯು ಶರಣನ ಕಂಡು ಕಣ್ದೆರಹುವ
ಕಪಿಲಸಿದ್ಧಮಲ್ಲಿಕಾರ್ಜುನನು. ॥ ೮೦೯ ॥

೧೬೪೯

ತಾನು ಪ್ರಪಂಚಿಕನಾಗಿ ಪರಮಾರ್ಥವ ಪಡೆಯಬೇಕೆಂಬಾಶೆಯುಳ್ಳಡೆ,
ಪರಧನ ಪರಸ್ತ್ರೀಯರ ವಿವರ್ಜಿಸಿ ಪೂಜಿಸುವ ಪರಶಿವನ.
ತಾನು ಪ್ರಪಂಚಿಯಾಗಿ ಕೀರ್ತಿಯ ಪಡೆಯಬೇಕೆಂಬಾಶೆಯುಳ್ಳಡೆ,
ಜೀವದಯಾಪರತ್ವ, ಮೃಷಾಭಾಷಾನಿರಾಕರಣತ್ವ,
ಯಾಚಕರೊಳ್ದಾತೃತ್ವವ ಮಾಡಿ [ಪೂಜಿಸುವ] ನೋಡಾ ಪರಶಿವನ.
ಇದೆ ಅಂತರಂಗದ ವಿಚಾರ, ಇದೆ ಬಹಿರಂಗದಲ್ಲಿ ಭೂಷಣ.
ಇದೆ ಕಪಿಲಸಿದ್ಧಮಲ್ಲಿಕಾರ್ಜುನನೆಂಬ ಮಹಾಬೊಮ್ಮ ತಾನು,
ಕಂಡೆಯಾ ಬೊಮ್ಮಯ್ಯಾ. ॥ ೮೧೦ ॥

೧೬೫೦

ಕರದಲ್ಲಿಯ ಅರುಹು ಕರಕರಿಸಿ ಬೆರಸಿದಂತಾದಡೆ,
ಕರಕಂಜದ ಪರವಸ್ತು ತಾನೆ ನೋಡಾ.
ಕರದಲ್ಲಿಯ ಅರುಹು ಕರದಂತಾಗಬಾರದಯ್ಯಾ.
'ಕರಾಭ್ಯಾಂ ರಹಿತಸ್ಯ ಕುತಃ ಕರ್ಮ ಕುತ ಆನಂದಃ ।'
ಎಂಬುದು ಪ್ರಸಿದ್ಧ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೧೧ ॥

೧೬೫೧

ಹರಿ ನಾನೆಂದಲ್ಲಿ ಭವಮದಗಜಕ್ಕೆ ಹರಿಯಲ್ಲದೆ,
ದಶಾವತಾರದ ಹರಿಯಲ್ಲ ನೋಡಾ.
ಹರ ನಾನೆಂದಲ್ಲಿ ಸರ್ವಭಾವನಾವಿರಹಿತ ನಾನಲ್ಲದೆ,
ಪಂಚಕೃತ್ಯಾಧಿಕಾರಿ ಹರನಲ್ಲ ನೋಡಾ,

ನರ ನಾನೆಂದಲ್ಲಿ ಉತ್ಪತ್ತಿವಿರಹಿತ ನಾನಲ್ಲದೆ,
ಉತ್ಪತ್ತ್ಯಧಿಕಾರಿ ನರ ನಾನಲ್ಲ ನೋಡಾ,
ತೋರುವ ಸಚರಾಚರ ನಾನೆಂದಲ್ಲಿ ಜಡಾಜಡ ನಾನಲ್ಲದೆ,
ಜನನ ಮರಣ ಪೊದ್ದಿದ ಸಚರಾಚರ ನಾನಲ್ಲ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೧೨ ॥

೧೬೫೨

ಸ್ವರ್ಗವೆಂದಡೆ ಸುಖಕ್ಕೆ ನಾಮ, ನರಕವೆಂದಡೆ ಬಾಧೆಗೆ ನಾಮ.
ಸುಖವೆಂದಡೆ ಪುಣ್ಯ ನೋವೆಂದಡೆ ದುಃಖ.
ಸುಖವಿಯೋಗವಾದಲ್ಲಿ ದುಃಖವೆನಿಸಿತ್ತು,
ದುಃಖವಿಯೋಗವಾದಲ್ಲಿ ಸುಖವೆನಿಸಿತ್ತು.
ಸುಖಾಸುಖವೆಂದರಿಯಬಾರದು, ಮೊದಲ ಹಿಡಿದ ಸಂಗತಿಯಿಂದ ;
ಸುಖಸಂಗದಿಂದ ದುಃಖ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೧೩ ॥

೧೬೫೩

ಸುಖಕ್ಕೆ ದೈವವೆಂದು, ಸುಖಕ್ಕೆ ವಿಧಿಲಿಪಿಯೆಂದು,
ಸುಖಕ್ಕೆ ಪುಣ್ಯವೆಂದು, ಸುಖಕ್ಕೆ ಪ್ರಾರಬ್ಧವೆಂದು,
ನುಡಿವರಯ್ಯಾ ಸಿದ್ಧಾಂತಿಗಳು.
ಸುಖವೆ ದೈವವೆನಲಾಗಿ ಮಾಡುವ ಕ್ರಿಯೆಯಲ್ಲರಿಯಬಂದಿತ್ತು.
ಸುಖವು ದೈವವಲ್ಲ ;
ದೈವವದು ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಕೂಡುವ ಕೂಟವು. ॥ ೮೧೪ ॥

೧೬೫೪

ಹುಟ್ಟಿದ ಮಗನ ರಚನೆ ಹುಟ್ಟಲಿಕ್ಕೆ ಯೋಗ್ಯವಾದಂತೆ
ಹುಟ್ಟಿದ ಮಾಯೆ ಬೆಟ್ಟಜನ ಅರಿವ ಪರಿಯಂತೆ
ನೀನಿಪ್ಪೆ ಜೀವಭಾವದಲ್ಲಿ, ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೧೫ ॥

೧೬೫೫

ಬಸವನವ ಎರಡನೆಯ ಶಂಭುವೆನ್ನುವರು.
ನಾವು ಮೂರನೆಯ ಶಂಭುವೇನಯ್ಯಾ ?

ತನ್ನ ತಾ ತಿಳಿದಲ್ಲಿ ಎರಡನೆಯ ಶಂಭುವೆನಿಸಿದ :
ತನ್ನ ತಾ ಮರೆದಲ್ಲಿ ಮಹೀತಳದ ಮಾನವನೆನಿಸಿದ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೧೬ ॥

೧೬೫೬

ತಿಳಿದೆ ನಾ ತಿಳಿದೆ ನಾ ಎಂದು ಹಲಬರು ಹೋದರು ಅಹಂಕಾರದಲ್ಲಿ.
[ತಿಳಿಯೆ ನಾ] ತಿಳಿಯೆ ನಾ ಎಂದು ಹಲಬರು ಹೋದರು ಮರವೆಯಲ್ಲಿ.
ತಿಳಿದೆನೆಂಬುದು ತಿಳಿಯೆನೆಂಬುದು ಜ್ಞಾನದ ವ್ಯಾದೊಡಕು.
ತಿಳಿಯೆ ಅರಿವು ಮರವೆಯೆಂಬುಭಯವ ತಿಳಿದು ತಿಳಿಯದಂತಿರೆ,
ತಿಳಿನೀರ ನಳಿನಾಕ್ಷನುತ ಕಪಿಲಸಿದ್ಧಮಲ್ಲಿಕಾರ್ಜುನ ತಾನೆ. ॥ ೮೧೭ ॥

೧೬೫೭

ಚರಿಸುವ ಚರನಿಗೆ ಚರ್ಚೆಯೆ ಭೂಷಣ.
ಸುಂದರ ನಾರಿಗೆ ಗಂಭೀರ ಪುರುಷನೆ ಭೂಷಣ.
ಕೊಳನಲ್ಲಿಯ ನೀರಿಗೆ ಕಲಹಂಸೆಯೆ ಭೂಷಣ.
ವನದಲ್ಲಿಯ ವಸಂತಕ್ಕೆ ಕೋಕಿಲನಾದವೆ ಭೂಷಣ.
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ಶರಣರಿಗೆ
ನಿರ್ಮಲ ನಿಜಾನಂದವೆ ಭೂಷಣ. ॥ ೮೧೮ ॥

೧೬೫೮

ಕಲ್ಲಿನಲ್ಲಿ ವಲ್ಲಭನಿದ್ದಾನೆಂದು ಅಲ್ಲಾಡುತ್ತಾರೆ ನೋಡಾ,
ಅಲ್ಲಯ್ಯಾ, ಈ ಖುಲ್ಲಮನುಜರು.
ಕಲ್ಲಿನಲ್ಲಿ ವಲ್ಲಭನ ಕಂಡೆವೆಂದು ಬಡಿದಾಡುತ್ತಾರೆ ನೋಡಾ,
ಅಲ್ಲಯ್ಯಾ, ಈ ಹೊಲ್ಲಮನುಜರು.
ಕಲ್ಲಿನಲ್ಲುಂಟು, ಮಣ್ಣಿನಲ್ಲಿಲ್ಲವೆಂದೆಂಬಡೆ,
ಅಂತರ್ಯಾಮಿ ಪರಿಪೂರ್ಣತ್ವ ಭಂಗವಹುದಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥ ೮೧೯ ॥

೧೬೫೯

ಚರಿಸುವ ಜನರೆಲ್ಲ ದೇವರಲ್ಲ ;
ಚರಿಸಿ ಚರಿಸಿ ಭ್ರಮೆಗೊಂಡರು ಮತ್ತೆ ದೇವರು ದೇವರು ಎಂದು, ನೋಡಾ,

ಚರಿಸುವ ಜನರು ದೇವರು, ಚರಿಸದ ವಸ್ತು ದೇವರು,
ನಾ ನೀನೆಂಬುಭಯ ದೇವರು,
ಕಪಿಲಸಿದ್ಧಮಲ್ಲಿಕಾರ್ಜುನದೇವರು ದೇವರು. ॥ ೬೨೦ ॥

೧೬೬೦

ಆಗದಾಗದು ಮಾಡದವಂಗೆ ಬ್ರಹ್ಮಪದವಿ.
ಆಗದಾಗದು ಮಾಡದವಂಗೆ ವಿಷ್ಣುಪದವಿ.
ಆಗದಾಗದು ಮಾಡದವಂಗೆ ಶಿವಪದವಿ.
ಆಗದು ಮಾಡದವಂಗೆ ತೂರ್ಯಾತೀತ ನಿರ್ಮಲ ನಿಜಾನಂದ,
ಕಪಿಲಸಿದ್ಧಮಲ್ಲಿಕಾರ್ಜುನನ ಅರಿವು. ॥ ೮೨೧ ॥

೧೬೬೧

ಮಾಡಬೇಕು ಮಾಡಬೇಕು, ಮಹಾನುಭಾವರ ಸಂಗವ.
ನೋಡಬೇಕು ನೋಡಬೇಕು, ಸಿದ್ಧಾಂತವೇದಾಂತಂಗಳ.
ಹಾಡಬೇಕು ಹಾಡಬೇಕು, ಪರಶಿವಲಿಂಗವ.
ಕೂಡಬೇಕು ಕೂಡಬೇಕು, ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗವ. ॥ ೮೨೨ ॥

೧೬೬೨

ನನ್ನಿಚ್ಛೆ ತನ್ನ ತಂದೀತೆಂದರಿಯೆ ;
ಆತನಿಚ್ಛೆಯಿಂದ ನಾ ಬಂದೆನೆಂಬುದ ಅರಿಯೆ.
ನನ್ನಿಚ್ಛೆಯಾಗಲಿ, ಶಿವನಿಚ್ಛೆಯಾಗಲಿ, ಬಂದುದು ನೀ ನಾನೆಂದೆ.
ಇದಕ್ಕೆ ಇನ್ನು ಬರಬಾರದ ಚೆನ್ನ ಮಾರ್ಗ ತೋರಾ,
ಚೆನ್ನಬಸವ ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೨೩ ॥

೧೬೬೩

ಪರತರವ ಸಾಧಿಸುವಡೆ ಪ್ರಪಂಚದ ವಿಷಯ ಅಳಿದಿರಬೇಕು.
ರಾಜ್ಯವ ಸಾಧಿಸುವಡೆ ಪ್ರಾಣದಾಸೆಯ ಮರೆದಿರಬೇಕು.
ವಿದ್ಯೆಯ ಸಾಧಿಸುವಡೆ ಅನ್ಯ ಆಸೆಯ ಮರೆದಿರಬೇಕು.
ಕಪಿಲಸಿದ್ಧಮಲ್ಲಿಕಾರ್ಜುನನ ಕೂಡುವಡೆ
ಸಂಶಯವಳಿದು ನಿಶ್ಚಿಂತನಾಗಬೇಕು. ॥ ೮೨೪ ॥

೧೬೬೪

ಬಡವರ ಭೋಜನ ಭೋಗಿಸಿದವ ಭವಾನೀಪುತ್ರ ನೋಡಯ್ಯಾ.
ಕಡವರನ ಎಡೆಗೊಂಡವ ವಿಷ್ಣುವಿನ ವಂಶದವ ನೋಡಯ್ಯಾ.
ಬಡವರ ಭೋಜನ ಅಮೃತ ಸೇವನೆ :
ಕಡವರನಮೃತ ಸುರಾಪಾನ ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೨೫ ॥

೧೬೬೫

ಅಂತರ್ಲಿಂಗ ಬಾಯಿ ತೆರೆದ ಬಳಿಕ
ಬಹಿರ್ಲಿಂಗದ ಪೂಜೆ ಮೋಟನ ಮರೌಳಿಯಂತೆ.
ಅಂತರ್ಲಿಂಗ ಬಹಿರ್ಲಿಂಗ ಬೇರಾದ ಬಳಿಕ
ಕಪಿಲಸಿದ್ಧಮಲ್ಲಿಕಾರ್ಜುನ ಒಲಿಯನಂತೆ! ॥ ೮೨೬ ॥

೧೬೬೬

ಹಸಿವುದೋರದ ಮುನ್ನ, ತೃಷೆದೋರದ ಮುನ್ನ,
ವ್ಯಾಧಿವಿಪತ್ತುಗಳು ಬಂದಡಸದ ಮುನ್ನ,
ಕಪಿಲಸಿದ್ಧಮಲ್ಲಿಕಾರ್ಜುನಲಿಂಗವ ಪೂಜಿಸೋ ಮುನ್ನ ಮುನ್ನ! ॥ ೮೨೭ ॥

೧೬೬೭

ತನ್ನವರೆನ್ನಬಾರದು, ತನ್ನ ಬಂಧುಗಳೆನ್ನಬಾರದು ;
ತನಗನ್ಯರೆನ್ನಬಾರದು.
ತಮ್ಮ ತಮ್ಮ ಮನಕ್ಕೆ ಮನವೆ ಸಾಕ್ಷಿ ;
ಮನಕ್ಕೆ ಮಹಾದೇವ ಕಪಿಲಸಿದ್ಧಮಲ್ಲಿಕಾರ್ಜುನನೆ ಸಾಕ್ಷಿ, ಬಿಲ್ಲೇಶಯ್ಯಾ.
॥ ೮೨೮ ॥

೧೬೬೮

ನ್ಯಾಯಿ ತಾನಾದಡೆ ಅನ್ಯಾಯ ಮಾಡಬಾರದು ;
ಲಿಂಗಿ ತಾನಾದಡೆ ಅಂಗಿ ತಾನಾಗಬಾರದು ;
ಭೋಗಿ ತಾನಾದಡೆ ತಾ ಯೋಗಿಯಾಗಬಾರದು,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೨೯ ॥

೧೬೬೯

ಮಾಡಿದವನ ಹೆಸರು ಮಣ್ಣಿನಲ್ಲಿ ;
ಮಣ್ಣು ಮಾಡಿದವನ ಹೆಸರು ಮೂಱುಲೋಕದಲ್ಲಿ.
ಮಾಡಿದನೆಂಬುದು ಮನದ ಗುಣ ;
ಮಾಡಿದವನವನೆಂಬುದು, ಮಹಾದೇವ ಕಪಿಲಸಿದ್ಧಮಲ್ಲಿಕಾರ್ಜುನನ
ಕೊಡುವ ಗುಣ, ಮಡಿವಾಳಯ್ಯ ಸಾಕ್ಷಿಯಾಗಿ. ॥ ೮೩೦ ॥

೧೬೭೦

ಎನ್ನ ಮಸ್ತಕದಲ್ಲಿ ಹಕಾರವಾಗಿದ್ದಾತ ಪ್ರಭುದೇವ.
ಎನ್ನ ಲಲಾಟದಲ್ಲಿ ಓಂಕಾರವಾಗಿದ್ದಾತ ಚೆನ್ನಬಸವ.
ಎನ್ನ ಘ್ರಾಣದಲ್ಲಿ ನಕಾರವಾಗಿದ್ದಾತ ಮಡಿವಾಳಯ್ಯ.
ಎನ್ನ ಬಾಯಿಯಲ್ಲಿ ಮಕಾರವಾಗಿದ್ದಾತ ಮರುಳು ಶಂಕರಯ್ಯ.
ಎನ್ನ ನೇತ್ರದಲ್ಲಿ ಶಿಕಾರವಾಗಿದ್ದಾತ ಬಸವ.
ಎನ್ನ ಕಪೋಲದಲ್ಲಿ ವಕಾರವಾಗಿದ್ದಾತ ಪಡಿಹಾರಿ ಬಸವಯ್ಯ.
ಎನ್ನ ಶ್ರೋತ್ರದಲ್ಲಿ ಯಕಾರವಾಗಿದ್ದಾತ ಹಡಪದಪ್ಪಣ್ಣ.
ಎನ್ನ ಜಿಹ್ವೆಯಲ್ಲಿ ಹ್ರೀಂಕಾರವಾಗಿದ್ದಾಕೆ ಅಕ್ಕನಾಗಮ್ಮ.
ಎನ್ನ ಸರ್ವಾಂಗದಲ್ಲಿ ಸಕಲ ಪ್ರಣವರೂಪಾಗಿದ್ದಾತ
ಗುರುವಿನ ಗುರು ಚೆನ್ನಬಸವನ ಪಾದಕ್ಕೆ ನಮೋ ನಮೋ ಎಂಬೆನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥ ೮೩೧ ॥

೧೬೭೧

ಎಲ್ಲರ ಮಱೆಯಬಹುದು ;
ಎನ್ನ ವಲ್ಲಭ ಗುರುಮೂರ್ತಿಯ ಮಱೆಯಬಾರದು.
ಎಲ್ಲರ ಕೀರ್ತಿಸಬಹುದು ;
ಎನ್ನ ಗುರುಮೂರ್ತಿಯ ಕೀರ್ತಿಸಬಾರದು.
ಎಲ್ಲರು ಹೊಗಲಾಡಿದರೆಂದು ಎನ್ನ ನಲ್ಲನು ಹೊಗಲಾಡನು,
ನೀ ಹೊಗಲಾಡೆಸೆ, ಕಪಿಲಸಿದ್ಧಮಲ್ಲಿಕಾರ್ಜುನಾ,
ನಿಮ್ಮ ಪಾದಸಾಕ್ಷಿಯಾಗಿ. ॥ ೮೩೨ ॥

೧೬೭೨

ಅಂತರಂಗದಲ್ಲಿಹ ಲಿಂಗ ಬಹಿರಂಗದಲ್ಲಿ ಲಿಂಗವಾಯಿತ್ತೆಂಬುದರಿಯೆ.
ಬಹಿರಂಗದಲ್ಲಿಯು ಲಿಂಗ ಅಂತರಂಗದಲ್ಲಿ ಲೀಯವಾಗುವ ಕಾರಣವರಿಯೆ.
ಅಂತರಂಗ ಬಹಿರಂಗವೆಂಬೆರಡರ ಸಂಗ
ಕಪಿಲಸಿದ್ಧಮಲ್ಲಿಕಾರ್ಜುನಯ್ಯನೆಂಬುದರಿಯೆ ; ಏನೆಂದರಿಯೆ. ॥ ೮೩೩ ॥

೧೬೭೩

ಆಕಾಶದಲ್ಲಿಯ ಮಿಂಚಿನಂತೆ, ಯೋಗಿಯಲ್ಲಿಯ ಕೋಪದಂತೆ,
ವೇಶಿಯಲ್ಲಿಯ ಅನುರಾಗದಂತೆ, ಗಾಳಿಯಲ್ಲಿಯ ದೀಪದಂತೆ,
ಓಗರದಲ್ಲಿಯ ಪ್ರಸಾದದಂತೆ, ಗುರುಮೂರ್ತಿಯಲ್ಲಿಯ ಪಾದೋದಕದಂತೆ,
ಕಪಿಲಸಿದ್ಧಮಲ್ಲಿಕಾರ್ಜುನನ ಲೀಲೆಯಂತೆ ಎನ್ನ ಪ್ರಾಣಲಿಂಗದ ಐಕ್ಯ.
ಆದರಂತೆ ಶಬ್ದಮುಗ್ಧವಾಯಿತ್ತಯ್ಯಾ,
ಶಿವಶಿವಾ, ಶಿವಶಿವಾ, ಶಿವಶಿವಾ, ಶಿವಶಿವಾ, ಶಿವಶಿವಾ. ॥ ೮೩೪ ॥

ಅನುಬಂಧ

ಹೆಚ್ಚಿಗೆ ದೊರೆತ ವಚನಗಳು*

೧೬೭೪

ಅನುನಯದ ಅಸ್ಮಕ್ಕೆ ತೆರಹುಗುಡದೆ ಇಪ್ಪ
ಕರುಣಸಾಗರದೊಳಗೆ ಮುಳುಗಾಡುವ
ಕರುಣಾಕರನು ಕವಿಲಸಿದ್ಧಮಲ್ಲೇಶ್ವರನ
ತೆರಹಿಲ್ಲದೊಡಗೂಡಿ ಇಪ್ಪ ಸುಖದಿಂ. [೫೨]

---

*'ಅಕ್ಷರಾಂಕ' ಹೆಸರಿನ ತಾಡವೋಲೆ ಪ್ರತಿ 310/2 ಚಿತ್ರದುರ್ಗದ ಬೃಹನ್ಮಠದ ಸಂಗ್ರಹದಲ್ಲಿ ದೊರೆತದ್ದು. ಮೇಲಿನ ಆರು ವಚನಗಳನ್ನು ಮೊದಲಿಗೆ ಗುರುತಿಸಿದವರು ಮಿತ್ರರಾದ ಶ್ರೀ ಎಸ್. ಶಿವಣ್ಣನವರು. ಇತ್ತೀಚೆಗೆ ದೊರೆತ ಈ ಅಪ್ರಕಟಿತ ವಚನಗಳನ್ನು ಈ ಸಂಪುಟದಲ್ಲಿ ಬಳಸಿಕೊಳ್ಳಲು ಅನುಮತಿಸಿದ್ದಕ್ಕಾಗಿ ಅವರಿಗೆ ನಮ್ಮ ಧನ್ಯವಾದಗಳು.

೧೬೭೫

ಆದಿ ಅಕ್ಷರದ ಸೊಮ್ಮಿನಾನತದ ಭೇದವನು
ನಾದ ಮಧ್ಯದ ಒಳಗೆ ಭೇದಿಸಿತ್ತು.
ಆದ್ಯಂತಶೂನ್ಯ ಕವಿಲಸಿದ್ಧಮಲ್ಲೇಶ್ವರನ
ಆಮೋದದಾ ಮನೆಯನಿತ್ತು ತೋರೆ. [೩೨]

೧೬೭೬

ತಾಮಸದಿಂದ ನಿನ್ನ ನೆನವರಿಗೆ
ತಾಮಸದ ಪದವನೀವಿರಯ್ಯ.
ಆರೈದು ನಿನ್ನು ವನು ಓರಂತೆ ನೆನವರಿಗೆ
ಕಾರುಣ್ಯದಪದವನೀವೆಯಯ್ಯ.
ಅನಾದಿ ಮೂರುತಿ ಕವಿಲಸಿದ್ಧಮಲ್ಲಿನಾಥಯ್ಯಾ,
ಆರೇನ ಮಾಡಿದುದನಂತೀವೆ. [೭೩]

೧೬೭೭

ದೀಕ್ಷಾತ್ರಯದಲ್ಲಿ ಸಂಪನ್ನರಾಗಿ,
ಪ್ರಸಾದದಲ್ಲಿ ಲೋಲುಪ್ತರಾಗಿ,
ಜಂಗಮವೆ ಲಿಂಗವೆಂಬವರ ಸಂಗದೊಳಿರಿಸೆನ್ನ
ಕವಿಲಸಿದ್ಧಮಲ್ಲಿಕಾರ್ಜುನಲಿಂಗ ನಿಮ್ಮ ಧರ್ಮ. [೧೦೮]

೧೬೭೮

ದೇಶ ಪರಿಭಾಷೆಯಲಿ ಆಸುರದ ಲಾಂಛನ
ದೂಸೆಯಪ್ಪವರೆಲ್ಲರರಿಯಲಹುದೆ ?
ಸರ್ವೇಶ ಕವಿಲಸಿದ್ಧಮಲ್ಲಿಕಾರ್ಜುನನ ಭಕ್ತಿ
ಭಾಷೆಯಾದಂಗಲ್ಲದರಿಯಲಿಲ್ಲ. [೨೩]

೧೬೭೯

ಮಲತ್ರಯವನತಿಗಳೆದು ಮದವಿದಾರಣರಪ್ಪವರ ಎನಗೆ ತೋರಾ ;
ಶುದ್ಧದಲ್ಲಿ ಪ್ರವೇಶಿಸಿ, ಸಿದ್ಧದಲ್ಲಿ ಪ್ರಕಟಿಸಿ,

ಶುದ್ಧ ಸಿದ್ಧಪ್ರಸಿದ್ಧದಲ್ಲಿ ಪರಮಾಣದವರ ಎನಗೆ ತೋರಾ ;
ನೆನಹೆ ಮನೆಯಾಗಿ, ಆ ಮನೆಯೆ ತಮಗೆ ಮಾತೆಯಾಗಿ,
ಆ ಮಾತೆಯೆ ಮಹಾಬೆಳಗಿನ ಕೂಟವಾಗಿ ಇಪ್ಪವರ ಎನಗೆ ತೋರಾ,
ಆನಂದವಿದಾರಣ ಕವಿಲಸಿದ್ಧಮಲ್ಲಿಕಾರ್ಜುನಾ. [೮೭]

ಅನುಬಂಧ

ಕಠಿಣ ಪದಕೋಶ

ವಚನದ ಆರಂಭ — ವ. ಸಂ.

ಅ

ಅಂಗ–ಶರೀರ ೬೪೩
ಅಂಗಜ–ಮನ್ಮಥ ೭೦೯
ಅಂಗವಿಸು–ಅಳವಡಿಸು ೧೦
ಅಂಘ್ರಿ–ಪಾದ ೧೦
ಅಂಜನ–ಕಾಡಿಗೆ ೧೩
ಅಂತಕ–ಯಮ ೧೩೨೬
ಅಂತರಿಸು–ಅಗಲು ೧೫
ಅಂಬಲಿ–ಗಂಜಿ ೯೬೩
ಅಕ್ಷಾಂಗವಿಷಯ–ರೂಪಾದಿವಿಷಯ ೧೪೪೬
ಅಗುಳು–ತೋಡು, ಅಗಿ ೧೩೧೨
ಅಜ–ಬ್ರಹ್ಮ ೨೩
ಅಟಮಟ–ಹುಸಿ, ಮೋಸ, ವಂಚನೆ ೬೩೭
ಅಟ್ಟುಂಬುದು–ಅಡಿಗೆ ಮಾಡಿ ಉಣ್ಣುವುದು ೧೨೭೯
ಅಡರು–ಏರು ೧೦೬೦
ಅಣಲು–ದವಡೆ ೯೨
ಅದಮಾನಿ–ದುಷ್ಟ (?) ೧೨೧೭
ಅಧ್ಯಾರೋಪ–ಒಂದು ವಸ್ತುವಿನ ಗುಣವನ್ನು ಮತ್ತೊಂದಕ್ಕೆ ಆರೋಪಿಸುವುದು ೧೧೯೩
ಅನಂಗವಿದಾರಣ–ಮನ್ಮಥನನ್ನು ಧ್ವಂಸ ಮಾಡಿದವನು–ಶಿವ ೨೨೩
ಅನಾಮಯ–ಭವರೋಗವಿಲ್ಲದವ ೯೫
ಅನುಭಾವಿ–ಜ್ಞಾನಿ ೧೩೫೪, ೧೩೫೫
ಅನುವು–ದೃಢತ್ವ ೩೭೪
ಅನುಷ್ಠಾನ–ಆಚರಣೆ ೧೪೪೦
ಅಬದ್ಧ-ಸುಳ್ಳು ೧೪೭೧
ಅಯ್ಯಗಳು-ಗುರುಗಳು ೩೬೭,೧೧೭೫, ೧೩೨೨
ಅರತು–ಬತ್ತು, ಒಣಗು, ಕಾಣದಾಗು ೭
ಅರಿದು–ಆಶ್ಚರ್ಯಕರವಾದುದು, ತಿಳಿಸಿ ಹೇಳಲಿಕ್ಕೆ ಬಾರದುದು ೭೯೫
ಅರುವೆ–ವಸ್ತ್ರ ೧೩೨೩
ಅರುಹು–ಜ್ಞಾನ, ತಿಳುವಳಿಕೆ ೧೨೬೨
ಅರ್ತಿ–ಅಳ್ತಿ, ಪ್ರೀತಿ ೩೨
ಅವಗ್ರಹಿಸು–ಆವರಿಸು, ಹಿಡಿ, ಹೊಂದು ೧೪೪
ಅವಧರಿಸು–ಕೇಳು, ಲಾಲಿಸು ೨೭
ಅವಮನ್ನಣೆ–ನಿರಾಕರಿಸು, ಅಗೌರವಿಸು ೮೯
ಅವಿತತ–ಹರವು, ವಿಸ್ತಾರ, ವಿಶಾಲತೆ ೧೬೬
ಅವಿರತ–ನಿರಂತರ ೬೮
ಅವ್ಯಯ–ನಾಶವಾಗದ ೨೦೬, ೪೩೩
ಅಷ್ಟದಿಗುದಂತಿ–ಎಂಟು ದಿಕ್ಕುಗಳನ್ನು ಹೊತ್ತಿರುವ ಆನೆಗಳು ೭೭೭
ಅಷ್ಟಮದ–ಕುಲಮದ, ಛಲಮದ, ಧನಮದ, ರೂಪಮದ, ಯೌವನಮದ, ವಿದ್ಯಾಮದ, ರಾಜಮದ, ತಪೋಮದ ೧೨೦೩
ಅಷ್ಟಮೂರ್ತಿ–ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ, ಸೂರ್ಯ, ಚಂದ್ರ, ಆತ್ಮ ೧೪೮೯
ಅಳ್ಳಿರಿ–ಚುಚ್ಚು, ತಿವಿ ೩೫೫

ಆ

ಆಂದೋಳನಾಗು–ಉಯ್ಯಾಲೆಯಾಡು, ಸರಿದಾಡು ೭೯
ಆಕಳು–ಹಸು ೧೩೦೫
ಆಗ್ರಹ–ಕೋಪ, ಹಠ, ಒತ್ತಾಯ ೯೩೬
ಆಣತಿ–ಆಜ್ಞೆ ೧೦೫೧

	ಪ. ಸಂ.
ಒ	
ಒಚ್ಚತಗೊಡು–ಅರ್ಪಿಸು, ಕೊಡು	೬೯೨
ಒಡ್ಡಣೆ–ಬಲೆ	೩೦೪
ಒಬ್ಬಿ–ಒಬ್ಬಟ್ಟು (?)	೧೩೧೩
ಒರಸೊರಸು–ವಿರೋಧ, ಘರ್ಷಣೆ	೧೦೧೦
ಒಸೆದು–ಬಯಸಿ, ಪ್ರೀತಿಸಿ	೬೫೨
ಓ	
ಓಗರ–ಅನ್ನ	೨೨೪
ಓತು–ಪ್ರೀತಿಸಿ	೩೦೦
ಓರಂತೆ–ಒಂದೇ ರೀತಿಯಾಗಿ	೧೬೬, ೨೯೬
ಓರೆ–ವಕ್ರ	೧೪೮೬
ಕ	
ಕಂಜ–ಕಮಲ	೧೬೫೦
ಕಂಜ ಕರ್ಣಿಕೆ–ಕಮಲದ ಬೀಜಕೋಶ	೨೯
ಕಂಟಣಿಸು–ಹಿಂಜರಿ, ತೊಂದರೆಪಡು	೩೦೩
ಕಂಥೆ- ಚಿಂದಿಬಟ್ಟೆ	೧೪೪೫
ಕಂಬಾರ- ಲೋಹಕಾರ	೧೫೬೨
ಕಂಬು–ನೀರು	೩೦೫
ಕಟ್ಟಳೆ–ಉಪಯೋಗ	೧೨೬೯
ಕಟು–ಕಹಿ	೧೨೮೧
ಕಡವರ–ಬಂಗಾರ	೧೬೬೪
ಕತ್ರಿ–ವಂಚನೆ	೬೧೩
ಕನ್ನಯ್ಯ-ಬೇಡರ ಕಣ್ಣಪ್ಪ	೧೪೬೨
ಕಪಿಲೆ–ಕಂದುಬಣ್ಣದ ಹಸು	೧೩೯೨
ಕಪೋಲ–ಕೆನ್ನೆ	೧೬೭೦
ಕಬ್ಬಿಲ–ಬೇಡ	೧೩೧೩
ಕಬ್ಬಿಲಗಿತ್ತಿ–ಬೆಸ್ತರವಳು, ಮೀನು ಹಿಡಿಯುವವಳು	೧೬೧೭
ಕರಕರಿಸು–ಹಂಬಲಿಸು	೧೬೫೦
ಕರುಮಾಡ–ಉಪ್ಪರಿಗೆ	೧೬೪೮
ಕರ್ಣಾಟ–ಕಿವಿಗೆ ಇಂಪಾದದ್ದು	೧೨೬೧
ಕರ್ತ–ಒಡೆಯ	೧೦೫೩

	ಪ. ಸಂ.
ಕರ್ಪರ–ಭಿಕ್ಷಾಪಾತ್ರೆ	೧೪೪೫
ಕರ್ಮಕಾಂಡಿ–ದುಷ್ಕರ್ಮಿ	೧೧೯೭
ಕಲ್ಮುಡಿಗ–ಒಡ್ಡ, ಕಲ್ಲು ಒಡೆಯುವವ	೧೨೫೩
ಕಷ್ಟ–ನೀಚ	೨೫
ಕಾಂಕ್ಷೆ–ಬಯಕೆ	೪೧೯
ಕಾಂಸ್ಯ- ಕಂಚು	೧೫೮೯
ಕಾಬವರು–ಕಾಣುವವರು	೧೪೯
ಕಾಲಕೂಟ–ವಿಷ	೭೨೦
ಕಾವಳ–ಕತ್ತಲೆ	೧೪೬೪
ಕಾಷ್ಠ–ಕಟ್ಟಿಗೆ	೭೧೪
ಕಾಸಾರ- ಸರೋವರ	೧೪೮೪
ಕಾಳಿಕೆ–ಕಲಂಕ, ದೋಷ	೩೦೬
ಕಾಳಿಗೆವಟ್ಟೆ- ಕಪ್ಪುವಸ್ತ್ರ	೮
ಕಿಂಜಲ್ಕ- ಪುಷ್ಪಕೇಸರ	೧೪೪೦
ಕಿಲ್ಮಿಷ–ಹೊಲಸು	೧೨೨೯
ಕೀಳಿಲ–ಮೊಗಸಾಲೆ	೯೪೪
ಕುಂಜರ–ಆನೆ	೧೩, ೨೯
ಕ್ಷುತ್ಪಿಪಾಸೆ–ಹಸಿವು ಬಾಯಾರಿಕೆ	೯೫೫
ಕುಕ್ಕುರ–ನಾಯಿ	೭೨೮
ಕುರುಹು- ಚಿನ್ಹೆ	೬೨೭
ಕುಶ–ದರ್ಭೆ	೧೫೮೯
ಕುಳಿರ್ಗಾಳಿ–ತಂಗಾಳಿ	೧೨೫೪
ಕೂಕಂಬಿ- ಹಡಗದಲ್ಲಿನ ಧ್ವಜಸ್ತಂಭ	೯೩
ಕೂಟ- ಸಹವಾಸ ; ಸಮರಸ	೨೩
ಕೂಪ- ಪ್ರಿಯ	೫೩೮
ಕೂರ್ಚ- ಕುಂಚು	೧೫೮೯
ಕೃಷೀವಲ- ಒಕ್ಕಲಿಗ	೧೩೧
ಕೃಸರ–ಕಿಚಡಿ	೧೨೫೫
ಕೆಮ್ಮನೆ–ವ್ಯರ್ಥವಾಗಿ, ಸುಮ್ಮನೆ	೧೦೩೧
ಕೆಳದಿ–ಗೆಳತಿ	೧೧೧
ಕೈವಲ್ಯ- ಮೋಕ್ಷ	೧೩೦೫
ಕೋಡಗ–ಮಂಗ, ಕೋತಿ	೧೫೪
ಗ	
ಗಣಾಚಾರ–ಪಂಚಾಚಾರಗಳಲ್ಲಿ ಒಂದು	೨೭
ಗತಿ- ದಾರಿ	೪೦೭

	ವ. ಸಂ.
ಗಹ್ವರ-ಗವಿ	೩೭೫
ಗಾರು-ಘಾಸಿ	೬೮೪
ಗಾರುಡ-ವಿಷಪರಿಹಾರಿ ಮಂತ್ರ	೧೦೦೪
ಗಾವಿಲ-ಹಳ್ಳಿಯವ, ಹುಂಬ	೧೨೬೩
ಗುಡಿಗಟ್ಟು-ಆನಂದಿಸು, ಧ್ವಜಹಾರಿಸು	೫೫೦
ಗೊಂದಿ-ಸುದ್ದಿ, ಗೊಡವೆ	೧೨೪೨
ಗೋಮಯ-ಸಗಣಿ	೧೫೮೯
ಗೌಳಿಯರು-ದೊಡ್ಡದನಿಯಲ್ಲಿ ಮಾತನಾಡುವವರು ?	೬೨

ಘ

ಘಟ-ಗಡಿಗೆ, ಪಾತ್ರೆ	೧೧೯೨
ಘನ-ಹಿರಿದು, ದೊಡ್ಡದು	೫೪೮
ಘೃತ-ತುಪ್ಪ	೭೬೭
ಘ್ರಾಣ-ಮೂಗು	೬೧೫

ಚ

ಚಂಡಾಲಗಿತ್ತಿ-ಹೊಲತಿ	೧೨೦೩
ಚರಿಸು-ನಾಶಮಾಡು	೧೨೧೬
ಚರ್ಯಾತೀತ-ಜ್ಞಾನಾರೂಢ	೧೨೫೫
ಚಾಚು-ತಳ್ಳು	೬೫೨
ಚಿಗರಿ-ಜಿಂಕೆ	೨೯೨
ಚಿತ್ತು-ಚಿಚ್ಛಕ್ತಿ	೧೫೨೦
ಚಿಚ್ಛಕ್ತಿ-ಜ್ಞಾನಶಕ್ತಿ	೧೨೪೫
ಚುಳುಕಾಗು-ಸೂಕ್ಷ್ಮರೂಪಾಗು	೯೫

ಜ

ಜಂಗುಳಿ-ಗುಂಪು	೭
ಜಂಬೂಫಲ-ನೇರಳೆಹಣ್ಣು	೧೫೮೯
ಜರಿ-ನಿಂದಿಸು	೧೬
ಜಲಗ-ಜಾಳಿಗೆ (?)	೫೨೫
ಜಲ್ಲರಿ-ಜಾಲರಿ, ಜಾಳಿಗೆ	೧೬೪೭
ಜಾಗ್ರ-ಎಚ್ಚರದ ಸ್ಥಿತಿ	೧೮೯೨

	ವ. ಸಂ.
ಜಿಹ್ವೆ-ನಾಲಗೆ	೬೧೫
ಜ್ಞಪ್ತಿ-ಜ್ಞಾನ, ತಿಳುವಳಿಕೆ	೧೪೪೫

ಠ

ಠಕ್ಕು-ಮೋಸ, ವಂಚನೆ	೪೦೩, ೬೧೪

ಡ

ಡಿಂಗರಿಗ-ಸೇವಕ	೯೪೪

ತ

ತಕ್ರ-ಮಜ್ಜಿಗೆ	೯೦೭
ತಗುಳ್-ಹೊಡೆದೋಡಿಸು	೧೭೭
ತಸ್ಕರ-ಕಳ್ಳ	೧೩೬೦
ತಳಿ-ಸಿಂಪಡಿಸು	೧೧
ತಳ್ಳಿ-ತೊಡಕು, ಗೋಜು	೧೨೭೩
ತಾಲವೃಂತ-ತಾಳೆಗರಿಯ ಬೀಸಣಿಗೆ	೧೪೪೧
ತಾವಡ-ಸರ, ಮಾಲೆ	೨೬
ತಿಮಿರ-ಕತ್ತಲೆ	೩೦೬
ತಿಲ-ಎಳ್ಳು	೭೧೪
ತ್ರಿವಿಧೋದಕ-ಅಂಗೋಧಕ, ಲಿಂಗೋದಕ, ಪ್ರಸಾದೋದಕ	೧೨
ತೂರ್ಯ-ನಾಲ್ಕನೆಯ ಅವಸ್ಥೆ, ತುದಿ, ಕೊನೆ	೧೩೫
ತೆರಹು-ಅವಕಾಶ	೭೯೫
ತೆರಹುಗೆಡು-ಅವಕಾಶವಿಲ್ಲದಂತಾಗು	೧೬೫
ತೊಂಡ-ಸೇವಕ	೨೩೨
ತೋಟಿ-ಜಗಳ, ಗುದ್ದಾಟ	೧೮೪೯
ತೋಯ-ನೀರು	೫೪೮
ತ್ವಕ್ಕು-ಚರ್ಮ	೬೧೫

ದ

ದಂದುಗ-ಶ್ರಮದ ಕೆಲಸ ; ಚಿಂತೆ	೨೩೦,೯೩೩
ದಧಿ-ಮೊಸರು	೯೫೧

ವ. ಸಂಖ್ಯೆ.

ದರ್ಪಣ—ಕನ್ನಡಿ ೪೦೮

ದಶವಿಧ ಪಾದೋದಕ—ಗುರು ಪಾದೋದಕ, ಲಿಂಗ ಪಾದೋದಕ, ಜಂಗಮ ಪಾದೋದಕ, ಸ್ಪರ್ಶನೋದಕ, ಅವಧಾನೋದಕ, ಆಪ್ಯಾಯನೋದಕ, ಹಸ್ತೋದಕ, ಪರಿಣಾಮೋದಕ, ನಿರ್ನಾಮೋದಕ, ಸತ್ಯೋದಕ ೫೧

ದಾವಾನಲ—ಕಾಡ್ಗಿಚ್ಚು ೧೩೯೫

ದಿತಿ—ಧೃತಿ, ಧೈರ್ಯ ೩೦

ದೀಕ್ಷಾತ್ರಯ—ವೇಧಾ, ಮಂತ್ರ, ಕ್ರಿಯಾ ಎಂಬ ಮೂರು ಬಗೆಯ ದೀಕ್ಷೆಗಳು ೫೩, ೪೮೧

ದ್ವಾತ್ರಿಂಶ—ಮೂವತ್ತೆರಡು ೧೧೫

ಧೂಮ್ರ—ಹೊಗೆ ೧೫೦೯

ಧೇನು—ಹಸು ೧೨೯೯

ನ

ನಡೆ-ರೀತಿ, ನಡತೆ, ದಾರಿ, ಮಾರ್ಗ ೧೪೦೪

ನವನೀತ—ಬೆಣ್ಣೆ ೯೫೧

ನಳಿನಾಕ್ಷ-ಕಮಲಾಕ್ಷ ೧೬೫೬

ನಿಂಬಫಲ—ನಿಂಬೆಹಣ್ಣು ೧೫೦೯

ನಿಗಮ-ವೇದ ೭೮

ನಿಡು-ಉದ್ದವಾದ ೧೭೪

ನಿಧಾನ—ಹೂಳಿಟ್ಟ ದ್ರವ್ಯ ೫೨೫

ನಿರಂಜನ—ಪರಮಾತ್ಮ ೯೦೦

ನಿರವಯ—ನಿರಾಕಾರ ೧೨೧೫

ನಿರಾಳ—ಪ್ರಶಾಂತತೆ ೧೦೬೬

ನಿರಿ-ನೆರಗು ೩೬೬

ನಿರಿಗೆ-ಕ್ರಮಬದ್ಧವಾದ ಜೋಡಣೆ ೧೫೬

ನಿರೂಪ—ಆದೇಶ ೩

ನಿರುಪಾಧಿಕ—ಮಾಯಾರಹಿತ, ಸಹಜ ೧೧೯೬

ನಿರ್ದಾಟಿಸು—ಹೊರದೂಡು, ತಳ್ಳು ೫೪೯

ನಿರ್ಭರವಾಗು—ಗಾಢವಾಗು, ಹೆಚ್ಚಾಗು ೬೬೧

ನಿರ್ವಯಲು—ಬ್ರಹ್ಮ ೧೨೦೯

ನಿಶ್ಚಿಂತ—ಸ್ಪಷ್ಟ ೬೨೩

ವ. ಸಂ.

ನೆಮ್ಮಿ—ಆಶ್ರಯಿಸಿ ೭೦೮

ನೇಣು—ಹಗ್ಗ ೯೩

ಪ

ಪಂಚಮಹಾಪಾತಕ-ಬ್ರಹ್ಮಹತ್ಯೆ, ಸುರಾಪಾನ, ಸ್ತೇಯ, ಗುರ್ವಂಗನಾಗಮನ ಮತ್ತು ಇಂತಹ ದುರಾಚಾರಿಗಳೊಡನೆ ಸಹವಾಸ ೧೨೩

ಪಂಚಮುಖ—ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ-ಇವು ಶಿವನ ಐದು ಮುಖಗಳು ೧೪೮೯

ಪಚ್ಚಡಿಸು—ಹಾಸು ೩೬

ಪಡಿ—ಪ್ರತಿಯಾಗಿ ಕೊಟ್ಟ ವಸ್ತು ೮೨೯

ಪದ್ಮಪತ್ರ—ಕಮಲ ೪೦೮

ಪದ್ಮಿನಿ—ನಾಲ್ಕು ಬಗೆಯ ಸ್ತ್ರೀಯರಲ್ಲಿ ಉತ್ತಮವರ್ಗದ ಸ್ತ್ರೀ ೧೩೧

ಪರತರ—ಮೋಕ್ಷ ೧೬೬೩

ಪರದಳವು—ಶತ್ರು ಸೈನ್ಯ ೩೯೯

ಪರಮಹಂಸ—ಪರಬ್ರಹ್ಮವನ್ನು ಸಾಕ್ಷಾತ್ಕರಿಸಿ ಕೊಂಡವನು ೪೩೨

ಪರಿಚ್ಛೇದ—ವಿಭಜನೆ ೧೧೯೫

ಪಾಂಡವ—ಅರ್ಜುನ ೧೩೯೨

ಪಾತಕರು—ಪಾಪಿಗಳು ೫೬೮

ಪಾದೋದಕತ್ರಯ—ಲಿಂಗಮಜ್ಜನೋದಕ, ಲಿಂಗ ನಿರೀಕ್ಷಣೋದಕ, ಲಿಂಗ ಪ್ರಸಾದೋದಕ ೪

ಪಾವೆ—ನೌಕಾಪಟ ೯೩

ಪಾಷಾಣ—ಕಲ್ಲು ೭೮೫

ಪಿಪೀಲಿಕ—ಇರುವೆ ೧೩೬೦

ಪೃಷ್ಠ—ಹಿಂಭಾಗ ೧೪೩೬

ಪ್ರಾರಬ್ಧ—ದೈವ ೧೬೫೩

ಬ

ಬಗೆ—ರೀತಿ, ಕ್ರಮ, ವಿಧಾನ ೬೩೮

ಬಟ್ಟೆ—ಮಾರ್ಗ, ದಾರಿ ೨

	ವ. ಸಂ.
ಬಧಿರ–ಕಿವುಡ	೧೪೪೬
ಬಯಿವುದು–ನಿಂದಿಸುವುದು	೬೪೯
ಬವಣೆ–ಅಲೆದಾಟ	೧೨೫೨
ಬಹಿರ್ವಾಸ–ಹೊರಗಿನ ಬಟ್ಟೆ	೧೪೪೫
ಬಾಣಸ–ಅಡಿಗೆ	೨೬
ಬಾತು–ಕೊಳೆತು	೧೧೦೧
ಬಾರಿ–ಸರದಿ	೯೧
ಬಾರು–ಚರ್ಮದ ಪಟ್ಟಿ	೧೨೧೫
ಬಿಸಾಟು–ಚೆಲ್ಲು, ದಬ್ಬು	೬೩೧
ಬೀಸರ–ವ್ಯರ್ಥ	೫೬೨
ಬುದ್ಬುದ–ಗುಳ್ಳೆ	೪೧೭
ಬೆಂಗುಂಡು–ಬೆನ್ನಿಗೆ ಕಟ್ಟಿದ ಗುಂಡು	೯೩
ಬೆಚ್ಚು–ಹೆದರು, ಅಂಜು	೧೦೫೨
ಬೆಟ್ಟಜೆ–ಗಿರಿಜೆ	೧೩೭೦
ಬೆನಕ–ಗಣಪತಿ	೫
ಬೆರಗು–ಅಚ್ಚರಿ	೫೫೭
ಬೆಳವಿಗೆ–ಪ್ರಗತಿ, ಅಭಿವೃದ್ಧಿ	೨೯೪
ಬೇಗೆ–ಬೆಂಕಿ	೬೨೦
ಬೇಟ–ಬಯಕೆ, ಅಪೇಕ್ಷೆ, ವಿರಹ	೨೩
ಬೈಗೆಯ–ಬಯ್ಯಲಿ	೧೭೬
ಬೊಜಗ–ವಿಟ	೩೫೬
ಬೊಪ್ಪ–ತಂದೆ	೭೬೧
ಬೊಮ್ಮ–ಬ್ರಹ್ಮ	೧೦೬೩
ಬೋಜೆಗಟ್ಟು–ತೂತುಮಾಡು	೫೧
ಬೋಡು–ಬರಿದು	೭೫
ಬೋಸರಿಸು–ಪ್ರೀತಿಸುವಂತೆ ನಟಿಸು, ಕಪಟ ಆದರವನ್ನು ತೋರಿಸು, ಪುಸಲಾಯಿಸು	೬೫
ಭಂಗ–ಅವಮಾನ, ಕೇಡು	೫೪೮
ಭಂಡ-ಸರಕು, ಸಾಮಾನು	೯೩
ಭಗ-ಯೋನಿ	೧೪೬೮
ಭೃತ್ಯ–ಸೇವಕ	೧೪
ಭೈತ್ರ–ಹಡಗು	೯೩

ಮ

	ವ. ಸಂ.
ಮಂಡೂಕ–ಕಪ್ಪೆ	೧೪೪೪
ಮಗ್ನ–ಮುಳುಗು	೧೦೬೩
ಮಚ್ಚಿಸಿ–ಪ್ರೀತಿಸಿ	೫೫೧
ಮದಮಹಿಷಿ–ಮದಿಸಿದ ಎಮ್ಮೆ	೯೧೩
ಮದಹಸ್ತಿ–ಮದಿಸಿದ ಆನೆ	೬೪೧
ಮಧುಕರ–ದುಂಬಿ	೨೯
ಮರೀಚಿ–ಮೃಗಜಲ, ಬಿಸಿಲುಕುದುರೆ	೧೪೦೨
ಮಲತ್ರಯ–ಆಣವ, ಮಾಯಾ, ಕಾರ್ಮಿಕ ಮಲಗಳು	೬೨೪
ಮಲಭಾಂಡ–ಮಲದ ಪಾತ್ರೆ	೮೦೮
ಮಸ್ತಕ–ಶಿರ	೩೨೯
ಮಹ–ಪರವಸ್ತು	೬೫೩
ಮಾಟ–ಕ್ರಿಯೆ	೮೩೫
ಮಾಣಲಿ–ಹೋಗಲಿ	೧೦೫೧
ಮಾಣು–ಬಿಡು	೬೬೯
ಮಾದು–ಕಳೆದು, ಬಿಟ್ಟು	೯೮, ೨೨೧
ಮಾಬನೆ–ಬಿಡುವನೆ	೧೨೯೨
ಮಾಳ–ಮಹಳ, ಶ್ರಾದ್ಧ	೯೫೨
ಮಿಟ್ಟಿಯ ಭಂಡ–ಹೊಲಸು ಸೋಗಿನವ	೧೮೮
ಮುಂಡ–ಶಿರವಿಲ್ಲದ ದೇಹ	೬೬೮
ಮುಕುಳ–ಮೊಗ್ಗೆ, ಮುಗುಳು	೨೧೩
ಮುಮುಕ್ಷು-ಮೋಕ್ಷವನ್ನು ಬಯಸುವವ	೮೬೨
ಮುರುಚು–ನುಣುಚು ; ತಪ್ಪಿಸಿಕೊಳ್ಳು	೯೩೬
ಮೃಣ್ಮಯ–ಮಣ್ಣಿನಿಂದಾದ	೧೫೦೯
ಮೃತಮಹಿಷ–ಸತ್ತ ಎಮ್ಮೆ	೩೯೪
ಮೃಷಾ–ವ್ಯರ್ಥ	೧೬೪೯
ಮೆಟ್ಟು–ಹೊಂದು, ಪಡೆ	೧೨೬೯
ಮೇಖಲೆ–ನಡುವಿನ ಪಟ್ಟಿ	೧೪೪೫
ಮೊರಹು–ಧ್ವನಿ	೧೯೩
ಮೋಟ–ಅಂಗವಿಹೀನ	೧೬೭೫
ಮೌಳಿ-ತಲೆ	೧೬೭೫

ವ. ಸಂ.

ಯ

ಯೋಗಿಸು–ಕೂಡು, ಸೇರು ೫೮೩

ರ

ರಜತ–ಬೆಳ್ಳಿ ೧೧೯೩
ರಜ್ಜು–ಹಗ್ಗ ೧೧೯೩
ರವರವೆ–ಥಳಕ್ಕನೆ ಕಾಣಿಸಿಕೊಳ್ಳುವ ಪ್ರಭೆ (?) ೩೬೫
ರೂಹು–ಆಕಾರ ೧೨೮೬

ಲ

ಲಕ್ಷ್ಯ–ಗುರಿ ೧೪೫೬
ಲಗ್ನ–ವಿವಾಹ ೧೨೧೬
ಲೀಢ–ಲೇಪ ೧೨೧೯
ಲೀಯ–ಅಡಗು, ಸೇರು, ಕೂಡು ೭೦೮
ಲೆತ್ತ–ಪಗಡೆ ೧೪೦೫
ಲೊಳಲೊಟ್ಟೆ–ಹುರುಳಿಲ್ಲದ್ದು ೧೩೧೪
ಲೋಷ್ಟ–ಮಣ್ಣಿನ ಹೆಂಟೆ ೧೨೪೪

ವ

ವನರುಹ–ಕಮಲ ೬೭೮
ವರ್ಮ–ರಹಸ್ಯ ೬೨೩
ವಾತ–ಶರೀರದಲ್ಲಿರುವ ವಾತ ಪಿತ್ತ ಶ್ಲೇಷ್ಮಗಳೆಂಬ ಮೂರು ರೋಗಗಳಲ್ಲಿ ಒಂದು ೧೨೮೦
ವಾಮನೇತ್ರ–ಎಡಗಣ್ಣು ೧೨೧೬
ವಿದ್ರುಮ–ಹವಳ ೧೫೧೯
ವಿಧಾತೃ–ಬ್ರಹ್ಮ ೧೫೧೯
ವಾಯು–ಹುಸಿ, ಮೋಸ ೬೭, ೪೭೮
ವಾರಾಂಗನೆ–ವೇಶ್ಯಾಸ್ತ್ರೀ ೬೧೩
ವಾಹಿಗೊಟ್ಟಿಗೆ–ನೀರಿನಲ್ಲಿ ಚಲಿಸುವ ಮನೆ ೨೧೨

ವ. ಸಂ.

ವಿಂಧ್ಯ–ಕಾಡು ೯೦
ವಿಚ್ಛಂದ–ಏಂಳಿತ ೪೦೦
ವಿದಳ–ಅರಳಿದ ೪೫೩
ವಿಷಮಾಕ್ಷ–ಸಮನಲ್ಲದ ಕಣ್ಣುಳ್ಳವನು–ಶಿವ ೫೯೪
ವಿಹಂಗ–ಪಕ್ಷಿ ೬೫೦
ವೆಗ್ಗಳ–ಹೆಚ್ಚಳ ೧೦೪೯
ವೈಶಿಕ–ಕಪಟಕೃತ್ಯ, ಮೋಸ ೩೩೧, ೬೨೭
ವ್ಯಾಘ್ರ–ಹುಲಿ ೨೯೨
ವ್ಯಾಳ್ಯ–ಸಮಯ ೫೧

ಶ

ಶಂಖಿ–ಶಂಖಿ ತೊಂಡಿಯು ತಮಿಳುನಾಡಿನ 63 ಪುರಾತನ ಭಕ್ತರಲ್ಲಿ ಒಬ್ಬ ೧೩೯೨
ಶಲಾಕೆ–ಶಲ್ಯ, ಕೈದು ೭೭೭
ಶಶವಿಷಾಣ–ಮೊಲದ ಕೋಡು ೬೬೬
ಶಾರ್ದೂಲ–ಹುಲಿ ೪೬೨
ಶುಕ್ತಿ–ಮುತ್ತು ೧೧೯೩
ಶೃಂಗ–ಕೊಂಬು ೧೪. ೬
ಶ್ವಾನ–ನಾಯಿ ೧೪೬೪
ಶ್ಲೇಷ್ಮ–ಕಫ ೧೨೮೦
ಶ್ರೋತ್ರ–ಕಿವಿ ೬೧೫

ಷ

ಷಟ್ಚಕ್ರ–ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ ಎಂಬ ಆರು ಚಕ್ರಗಳು ೧೪೮೯

ಸ

ಸಂದು–ಭೇದ ೭೦೮
ಸಟೆ–ಸುಳ್ಳು ೩೬೬
ಸದೆ–ಅನವಶ್ಯಕವಾದ ಕಳೆ ೩೯೮
ಸಬುದ–ಶಬ್ದ ೧೭

ವ. ಸಂ.

ಸಮತೆ–ಸರಿ ಎನ್ನುವ ಭಾವ ೧೬೬
ಸಮನಿಸದು–ಹೊಂದದು ೭೭೨
ಸಮನಿಸು–ಉಂಟಾಗು, ಒದಗು ೭೭೩
ಸಮಯ–ಧರ್ಮ ; ಪರಂಪರೆಯಿಂದ ಬಂದುದು ೩೭೮
ಸರಹು–ಶಬ್ದ ೬೨೨
ಸರಳು–ಬಾಣ ೧೩೯೨
ಸರಿ–ನದಿ, ಹೊಳೆ (?) ೧೭೦
ಸಲುವಳಿ–ಸಲ್ಲುವ ಮಾತು, ಯೋಗ್ಯ ೧೨೪೯
ಸವೆ–ಒಪ್ಪಿಸು ೨೨೧
ಸಸಿಧರ–ಚಂದ್ರನನ್ನು ಶಿರದಲ್ಲಿ ಧರಿಸಿದವನು–ಶಿವ ೧೬೫
ಸಾಂದ್ರ–ಅಧಿಕ, ದಟ್ಟ ೧೫೨೮
ಸಾಯುಜ್ಯ–ಪರಮಾತ್ಮನಲ್ಲಿ ಐಕ್ಯವನ್ನು ಹೊಂದುವುದು : ಮೋಕ್ಷದ ನಾಲ್ಕು ಪ್ರಕಾರಗಳಲ್ಲಿ ಒಂದು ೮೭೭
ಸಾರು–ಸೇರು, ಕೂಡು, ಹೊಗು ೩೦೨
ಸಿಂಗಿ–ಹೆಣ್ಣು ಸಿಂಹ, ಸಿಂಹಿಣಿ ೧೩೯೩
ಸಿಂಪ್ರದಕ–ಹನಿ ನೀರು ೪೪೮
ಸುಧೆಯಕೂಪ–ಅಮೃತದ ಬಾವಿ ೨೯
ಸುರಭೂಜ–ಕಲ್ಪವೃಕ್ಷ ೧೧೨೯
ಸುಷುಪ್ತಿ–ಗಾಢವಾದ ನಿದ್ರೆ ೧೫೯೨
ಸುಳುಹು-ಸಂಚಾರ ೧೨೦, ೫೬೦
ಸೂತಕ–ದೋಷ ೮೩೫
ಸೂರೆ–ಸುಲಿಗೆ, ಲೂಟಿ ೫
ಸೆರಗು–ಆಶ್ರಯ ೯೪೦
ಸೆವಿಗೆ-ಪವಿತ್ರವಾದ ವಸ್ತ್ರ ? ೬೮
ಸೈವೆರಗು–ಆಶ್ಚರ್ಯ ೩೬೩
ಸೊನೆ–ತುಂಬಿನ ರಸ ೧೦೫೦
ಸೊಮ್ಮು–ಸಂಪತ್ತು ೭೦೮, ೧೨೧೫
ಸೋದು–ಸ್ವಾದು ೧೩೦೫
ಸೋಪಾನ-ಮೆಟ್ಟಿಲು ೫೯೬
ಸೋಹಂ–ತಾನೇ ಪರಮಾತ್ಮ ಎಂಬ ಭಾವನೆ ೧೧೬೪

ವ. ಸಂ.

ಸ್ಥಾಣು–ಕಂಬ ೧೧೯೩
ಸ್ವಾದಿಸು–ರುಚಿನೋಡು ೩೧೫
ಸ್ವಾಯತ–ಪ್ರಾಣಲಿಂಗ ೯೪೧
ಸ್ತೌತ್ಯ–ಹೊಗಳು ೧೬೬

ಹ

ಹದುಳ–ಕ್ಷೇಮ ೮೦೨
ಹರಹರಿಕೆ–ಸ್ವೇಚ್ಛಾವೃತ್ತಿ ೧೧೩
ಹರಿ–ಸಿಂಹ ; ವಿಷ್ಣು ೧೬೫೧
ಹರಿದು–ಬಿಟ್ಟು, ತ್ಯಜಿಸಿ ೯೬೮
ಹರಿಹಂಚಾಗು–ಹರಿದು ಹಂಚಿಹೋಗು ೧೨೯
ಹವಣು–ಪ್ರಮಾಣ, ಅಳತೆ ೧೪೯
ಹಳಚು–ತಾಗು ೯೪೦
ಹಾಯಿ–ದೋಣಿಯ ಕಂಬಕ್ಕೆ ಕಟ್ಟಿದ ಬಟ್ಟೆ ; ದೋಣಿ ೯೪
ಹಾರೆ–ಬಯಸೆ ೫೩೯
ಹಾಹೆ–ಗೊಂಬೆ ೪೩೩
ಹಿತವೆ–ಹಿತ ಬಯಸುವವಳು ೨೨೦, ೭೦೫
ಹುದು–ಜೋಪಾನ ೭೨೭
ಹುಳ್ಳಿ–ಕಟ್ಟಿಗೆ, ಸೌದೆ ೭೯೬
ಹೂಸು–ಹಚ್ಚು ೨೪೮, ೮೩೫
ಹೃಷೀಕ–ಇಂದ್ರಿಯ ೧೪೫೧
ಹೆಡಗುಡಿಯಕಟ್ಟು–ಹೆಡಮುರಿಗೆ ಕಟ್ಟು ೨೬
ಹೆಳವ–ಕಾಲಿಲ್ಲದವ ೧೪೫೨
ಹೇಮಶೈಲ–ಚಿನ್ನದ ಬೆಟ್ಟ ೬೧೫
ಹೊದ್ದಿಸದಿರು–ಸಮೀಪ ಸೇರಿಸದಿರು ೨೫
ಹೊಮ್ಮೃಗ–ಬಂಗಾರದ ಮೃಗ ೩೦೭
ಹೊಯ್ಲು–ಹೊಡೆತ ೯೩
ಹೊರಜು–ದಪ್ಪ ಹಾಗೂ ಉದ್ದ ಹಗ್ಗ ೭೨೮
ಹೊರೆ–ಸಮೀಪ ೫೯೫
ಹೊಲೆ–ಮೈಲಿಗೆ ೧೪೩೫
ಹೊಲ್ಲೆಹ–ಕೆಟ್ಟ ೯೬
ಹೊಳ್ಳು–ಪೊಳ್ಳು, ಜೊಳ್ಳು, ಪ್ರಯೋಜನವಿಲ್ಲದ್ದು ೧೦೬೪
ಹೋಟೆ-ಹೊದರು ೩೦೮
ಹೋಹೆ–ಹೋಗುವೆ ೯೩೬

ಸಿದ್ಧರಾಮೇಶ್ವರರ ಷಟ್‌ಸ್ಥಲ ವಚನಗಳ ಅಕಾರಾದಿ

ಗ

ದ

ನ

ಆಕರ ಗ್ರಂಥಗಳು

"ಅಕ್ಷರಾಂಕ" ತಾಡವೋಲೆ
ಪ್ರತಿ 310/2 (ಅಪ್ರಕಟಿತ)
ಬೃಹನ್ಮಠ, ಚಿತ್ರದುರ್ಗ.

ಅದ್ವೈತಾನಂದದ ವಚನಗಳು
ಸಂ. ಡಾ॥ ಬಿ. ಆರ್. ಹಿರೇಮಠ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೩

ಅನುಭವಜ್ಞಾನಸಾರಾಮೃತ ಸಂಪಾದನಾ ಸ್ತೋತ್ರ
–ಸಂಪಾದನೆಯ ಪರ್ವತೇಶ್ವರ
ಸಂ. ಬಿ. ಆರ್. ಹೂಗಾರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೯

ಅಪ್ಪಾವರಣದ ವಚನಗಳು
–ಎಳಮಲೆಯ ಗುರುಶಾಂತದೇವರು
ಸಂ. ಡಾ॥ ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೩

ಆಚರಣೆಯ ಸಂಬಂಧದ ವಚನಗಳು
–ಸಂಪಾದನೆಯ ಹರತಾಳ ಚನ್ನನಂಜಯದೇವರು
ಸಂ. ಪಿ. ಎಂ. ಗಿರಿರಾಜು
ಗೌ॥ಸಂ॥ 'ಶರಣ ಸಂತಾನ' (ತ್ರೈಮಾಸಿಕ)
೪೪೭–ಸಂತೇಪೇಟೆ, ಮೈಸೂರು–೨೪ ೧೯೮೨

ಆಚರಣೆಯ ಸಂಬಂಧದ ವಚನಗಳು
–ಸಿದ್ಧವೀರೇಶ್ವರದೇವರು
ಸಂ. ಪಿ. ಎಂ. ಗಿರಿರಾಜು
ಗೌ॥ಸಂ॥ 'ಶರಣ ಸಂತಾನ' (ತ್ರೈಮಾಸಿಕ)
೪೪೭–ಸಂತೇಪೇಟೆ, ಮೈಸೂರು–೪ ೧೯೮೦

ಎಲ್ಲ ಪುರಾತರ ವಚನ–ಕುಂತೂರು ಮಹತ್ತದೇವ
ಸಂ. ಜಿ. ಎ. ಶಿವಲಿಂಗಯ್ಯ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೯೦

ಏಕೋತ್ತರ ಶತಸ್ಥಲ-ಮಹಾಲಿಂಗದೇವರು
ಸಂ. ಪ್ರೊ॥ ಸಂ. ಶಿ. ಭೂಸನೂರಮಠ
ಶ್ರೀ ನಿ. ಪ್ರ. ಸ್ವ. ಶಿವಬಸವ ಮಹಾಸ್ವಾಮಿಗಳು
ರುದ್ರಾಕ್ಷಿಮಠ, ನಾಗನೂರು, ಬೆಳಗಾಂ ಜಿಲ್ಲೆ ೧೯೭೪

ಏಕೋತ್ತರ ಶತಸ್ಥಲ–ಸಿದ್ಧಲಿಂಗ
ಸಂ. ಫ. ಗು. ಹಳಕಟ್ಟಿ
ಶಿವಾನುಭವ ಗ್ರಂಥಮಾಲೆ, ವಿಜಾಪುರ

ಏಕೋತ್ತರ ಶತಸ್ಥಲ ಸಾರಾಮೃತ (ಅಪ್ರಕಟಿತ)
–ಕಟ್ಟಿಗೆಹಳ್ಳಿ ಸ್ವಾಮಿ

ಗಣಭಾಷ್ಯ ರತ್ನಮಾಲೆ–ಗುಬ್ಬಿಯ ಮಲ್ಲಣಾರ್ಯ
ಸಂ. ವೇ॥ ನಂಜುಂಡಶಾಸ್ತ್ರಿಗಳವರ ಶಿವಪ್ಪಶಾಸ್ತ್ರಿಗಳು
ಬಳ್ಳಾಪುರಪೇಟೆ, ಬೆಂಗಳೂರು ಸಿಟಿ ೧೯೦೯

ಚಿತ್ಕ್ರಿಯಾ ಸಂಗ್ರಹ–ಜಿಗುನಿ ಮರುಳದೇವರು
ಸಂ. ಡಾ॥ ಎಸ್. ವಿದ್ಯಾಶಂಕರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ. ೧೯೮೩

ಚಿದೈಶ್ವರ್ಯ ಚಿದಾಭರಣ–ಗುರುಸಿದ್ಧದೇವರು
ಸಂ. ಪಿ. ಎಂ. ಗಿರಿರಾಜು

ಗೌ॥ಸಂ॥ 'ಶರಣ ಸಂತಾನ' ತ್ರೈಮಾಸಿಕ
೪೪೭-ಸಂತೇಪೇಟೆ, ಮೈಸೂರು-೨೪ ೧೯೮೫

ಚೆನ್ನಬಸವೇಶ್ವರ ಸ್ತೋತ್ರದ ವಚನಗಳು
-ಸಂಪಾದನೆಯು ಸಿದ್ಧವೀರಣಾರ್ಯ
ಸಂ. ಜಿ. ಎ. ಶಿವಲಿಂಗಯ್ಯ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ.
ನಿರಾಸನದ ವಚನಗಳು ೧೯೯೧

ಜ್ಞಾನಷಟ್ಸ್ಥಲಸಾರ-ಗುರುಶಂಕರಸ್ವಾಮಿ
(ಅಪ್ರಕಟಿತ ಹಸ್ತಪ್ರತಿ)
ಕನ್ನಡ ಸಂಶೋಧನ ಸಂಸ್ಥೆ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪರಮಮೂಲಜ್ಞಾನ ಷಟ್‌ಸ್ಥಲ-ಚಿಕ್ಕವೀರಣ್ಣೊಡೆಯ
ಸಂ. ಡಾ॥ ಎಂ. ಎಸ್. ಸುಂಕಾಪುರ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೭

ಪ್ರಭುದೇವರ ಸ್ತೋತ್ರದ ವಚನಗಳು
-ಸಂಪಾದನೆಯು ಸಿದ್ಧವೀರಣಾರ್ಯ
ಸಂ. ಎಸ್. ಶಿವಣ್ಣ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೯೧

ಪ್ರಭುಲಿಂಗಲೀಲೆ-ಚಾಮರಸ
ಸಂ. ಪ್ರೊ. ಎಸ್. ಎಸ್. ಬಸವನಾಳ
ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ. ೧೯೫೭
(ಎ. ಮು)

ಪ್ರಭುಲಿಂಗನ ಕಂದ (ಕಾವ್ಯ)
ಸಂ. ಎಸ್. ಶಿವಣ್ಣ
ಬೃಹನ್ಮಠ, ಚಿತ್ರದುರ್ಗ. ೧೯೪೯

ಪ್ರಸಾದಿಸ್ಥಲದ ವಚನಗಳು
ಸಂ. ಡಾ॥ ಎಂ. ಎಸ್. ಸುಂಕಾಪುರ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. ೧೯೭೭

ಬಸವಸ್ತೋತ್ರದ ವಚನಗಳು–ಚೆನ್ನಂಜೆದೇವರು
ಸಂ. ಡಾ॥ ಎಂ. ಎಂ. ಕಲ್ಬುರ್ಗಿ
ಬಸವೇಶ್ವರಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೬

ಬಸವಸ್ತೋತ್ರದ ವಚನಗಳು
–ಸಂಪಾದನೆಯ ಬೋಳಬಸವರಾಜದೇವರು
ಸಂ. ಡಾ॥ ಎಂ. ಎಂ. ಕಲ್ಬುರ್ಗಿ
ಬಸವೇಶ್ವರಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೬

ಬ್ರಹ್ಮಾದ್ವೈತ ಸಿದ್ಧಾಂತ ಷಟ್ಸ್ಥಲಾಭರಣ
–ಕರಸ್ಥಲದ ಮಲ್ಲಿಕಾರ್ಜುನ ಒಡೆಯರು
ಸಂ. ಡಾ॥ ಆರ್. ಸಿ. ಹಿರೇಮಠ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೩

ಭಕ್ತ್ಯಾನಂದ ಸುಧಾರ್ಣವ
ಸಂ. ಡಾ॥ ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೫

ಮಿಶ್ರಸ್ತೋತ್ರದ ವಚನಗಳು–ಎಳಮಲೆಯ ಗುರುಶಾಂತದೇವರು
ಸಂ. ಡಾ॥ ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೩

ಮಿಶ್ರಸ್ತೋತ್ರದ ವಚನಗಳು—ಸಂಪಾದನೆಯ ಚೆನ್ನಂಜೇದೇವರು
ಸಂ. ಹೊಸಹಳ್ಳಿಯ ಸಂಸ್ಥಾನ ಮಠದ ಶ್ರೀ ಪ್ರಭುಸ್ವಾಮಿಗಳು
ಹೊಸಹಳ್ಳಿ. ೧೯೫೨

ಮೋಕ್ಷದರ್ಶನ ಸಂಗ್ರಹ—ಪ್ರಭುದೇಶಿಕ (ಅಪ್ರಕಟಿತ)
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ
ಮೈಸೂರು.

ಲಿಂಗಚಿದಮೃತ ಬೋಧೆ—ಶಾಂತಬಸವೇಶ್ವರ
ಸಂ. ಡಾ॥ ಎಂ. ಎಸ್. ಸುಂಕಾಪುರ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೫

ಲಿಂಗಲೀಲಾವಿಲಾಸ ಚಾರಿತ್ರ—ಕಲ್ಲುಮಠದ ಪ್ರಭುದೇವ
ಸಂ. ಪ್ರೊ॥ ಸಂ. ಶಿ. ಭೂಸನೂರಮಠ
ಶ್ರೀ ನಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು
ಮುರುಘಾಮಠ, ಧಾರವಾಡ. ೧೯೫೬

ಲಿಂಗವಿಕಳಾವಸ್ಥೆಯ ವಚನಗಳು—ಎಳಮಲೆಯ ಗುರುಶಾಂತದೇವ
ಸಂ. ಡಾ॥ ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೩

ಲಿಂಗ ಸ್ತೋತ್ರದ ವಚನಗಳು—
ಸಂಪಾದನೆಯ ಸಿದ್ಧವೀರಣ್ಣದೇವರು
ಸಂ. ವೀರಭದ್ರಪ್ಪ ಕೊಪ್ಪಳ
ಶ್ರೀ ಗುರುಬಸವ ಮಂಟಪ ಟ್ರಸ್ಟ್ ಕಮಿಟಿ, ಹುಬ್ಬಳ್ಳಿ. ೧೯೬೪

ವಚನಸಾರ
ಸಂ. ಡಾ॥ ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೯

ವಚನಾಮೃತಸಾರ
ಸಂ. ಕಾಶೀಪುಟ್ಟಸೋಮಾರಾಧ್ಯರು ಮತ್ತು
ಡಾ॥ ವೀರಣ್ಣ ರಾಜೂರ
ಮಂಗಳ ಪ್ರಕಾಶನ, ಕಲ್ಯಾಣನಗರ ಧಾರವಾಡ. ೧೯೭೯

ವಿರತಾಚರಣೆಯ ಶರಣ ಸಂಬಂಧದ ವಚನಗಳು-ಶಂಕರದೇವರು
ಸಂ. ಪಿ. ಎಂ. ಗಿರಿರಾಜು
ಗೌ॥ ಸಂ॥ 'ಶರಣ ಸಂತಾನ' (ತ್ರೈಮಾಸಿಕ)
೪೪೭-ಸಂತೇಪೇಟೆ, ಮೈಸೂರು-೨೪ ೧೯೭೯

ವಿಶೇಷಾನುಭವ ಷಟ್‌ಸ್ಥಲ
ಸಂ. ಡಾ॥ ಆರ್. ಸಿ. ಹಿರೇಮಠ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೧

ವೀರಶೈವ ಚಿಂತಾಮಣಿ-ಮಹದ್ದೇವಯೋಗಿ
ಸಂ. ಡಾ॥ ಆರ್. ಸಿ. ಹಿರೇಮಠ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೧

ವೀರಶೈವ ಶಿಖಾರತ್ನ (ಶಾಸ್ತ್ರಕಾವ್ಯ) (ಹಸ್ತಪ್ರತಿ)
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ.

ವೀರಶೈವಾಭರಣ (ಶಾಸ್ತ್ರಕಾವ್ಯ)-ಗೌರವಾಂಕ
(ಮೈಸೂರಿನ ಶ್ರೀ ಜಿ. ಎ. ಶಿವಲಿಂಗಯ್ಯನವರ ಹಸ್ತಪ್ರತಿ)

ಶರಣ ಚಾರಿತ್ರ್ಯದ ವಚನಗಳು-ಸಂಪಾದನೆಯ ಸಣ್ಣಬರಹದ
ಗುರುಬಸವರಾಜದೇವರು
ಸಂ. ಡಾ॥ ಬಿ. ವಿ. ಶಿರೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೪

ಶರಣಮುಖಮಂಡನ
ಸಂ. ಡಾ॥ ಬಿ. ವಿ. ಶಿರೂರ ಮತ್ತು ಶ್ರೀ ಬಿ. ಆರ್. ಹೂಗಾರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೮

ಶರಣಸ್ತೋತ್ರದ ವಚನಗಳು_ಎಳಮಲೆಯ ಗುರುಶಾಂತದೇವ
ಸಂ. ಡಾ॥ ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೩

ಶಿವನ ಬಿರುದಾವಳಿಸ್ತೋತ್ರದ ವಚನಗಳು
_ಸಂಪಾದನೆಯ ಸಿದ್ಧವೀರಣಾರ್ಯ
ಸಂ. ಎಸ್. ಶಿವಣ್ಣ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೯೧

ಶಿವಮಹಿಮಾ ಸ್ತೋತ್ರದ ವಚನಗಳು
_ಸಂಪಾದನೆಯ ಸಿದ್ಧವೀರೇಶ್ವರದೇವರು [ವೀರಸಂಗಯ್ಯ]
ಸಂ. ಡಾ॥ ವೀರಣ್ಣ ರಾಜೂರ
ಕರ್ನಾಟಕ ಭಾರತಿ (ತ್ರೈಮಾಸಿಕ) ಸಂ. ೧೯. ಸಂ. ೨ ೧೯೮೯

ಶಿವಯೋಗಚಿಂತಾಮಣಿ
_ಜಾಳಿಗೆಕಂತೆ ಸಿದ್ಧಲಿಂಗ ಶಿವಯೋಗಿಗಳು
ಸಂ. ಡಾ॥ ಉಮಾದೇವಿ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೭

ಶೀಲಸಂಪಾದನೆ
ಸಂ. ಡಾ॥ ವೀರಣ್ಣ ರಾಜೂರ

ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ.

ಶೂನ್ಯ ಸಂಪಾದನೆ–ಗುಮ್ಮಳಾಪುರದ ಸಿದ್ಧಲಿಂಗದೇವ
ಸಂ. ಡಾ|| ಆರ್. ಸಿ. ಹಿರೇಮಠ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೨

ಶೂನ್ಯ ಸಂಪಾದನೆ–ಗೂಳೂರು ಸಿದ್ಧ ವೀರಣೊಡೆಯ
ಸಂ. ಪ್ರೊ|| ಸಂ. ಶಿ. ಭೂಸನೂರಮಠ
ರಾವೂರ ಸಿದ್ಧಲಿಂಗೇಶ್ವರಮಠ ಮತ್ತು ಆದವಾನಿಯ
ಕಲ್ಲುಮಠದ ಅಧಿಪತಿಗಳು, ರಾವೂರು. ೧೯೫೮

ಶೂನ್ಯ ಸಂಪಾದನೆ–ಶಿವಗಣಪ್ರಸಾದಿ ಮಹಾದೇವಯ್ಯ
ಸಂ. ಡಾ|| ಆರ್. ಸಿ. ಹಿರೇಮಠ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೮೭

ಶೂನ್ಯ ಸಂಪಾದನೆ–ಹಲಗೆದೇವರು (ಅಪ್ರಕಟಿತ)
ಕೆ. ಎ. ೧೦೫, ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು.

ಷಟ್ಪ್ರಕಾರ ಸಂಗ್ರಹ–ಶಾಂತದೇವ
ಸಂ. ಜಿ. ಎ. ಶಿವಲಿಂಗಯ್ಯ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೭

ಷಟ್ಸ್ಥಲಬ್ರಹ್ಮಾನಂದ ವಿರಕ್ತ ಚಾರಿತ್ರ ಸಂಪಾದನೆಯ ವಚನಗಳು
–ಸಂಪಾದನೆಯ ಬೋಳಬಸವರಾಜದೇವರು
ಸಂ. ಪ್ರೊ|| ಎಸ್. ಉಮಾಪತಿ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೪

ಷಟ್ಸ್ಥಲ ಸ್ತೋತ್ರದ ವಚನಗಳು-ಎಳಮಲೆಯ ಗುರುಶಾಂತದೇವರು
ಸಂ. ಡಾ॥ ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೩

ಸಂಪಾದನೆಯ ಸಾರಾಮೃತ-ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿ
ಸಂ. ಡಾ॥ ಬಿ. ಆರ್. ಹಿರೇಮಠ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೮

ಸಂಬಂಧಾಚರಣೆಯ ವಚನಗಳು
ಸಂ. ಪಿ. ಎಂ. ಗಿರಿರಾಜು
ಗೌ॥ ಸಂ. 'ಶರಣ ಸಂತಾನ' (ತ್ರೈಮಾಸಿಕ)
೪೪೭-ಸಂತೇಪೇಟೆ, ಮೈಸೂರು-೨೪ ೧೯೮೬

ಸಕಲ ಪುರಾತನರ ವಚನಗಳು ಸಂಪುಟ ೧
ಸಂ. ಡಾ॥ ಆರ್. ಸಿ. ಹಿರೇಮಠ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೨

ಸಕಲ ಪುರಾತನರ ವಚನಗಳು ಸಂಪುಟ ೩
ಸಂ. ಡಾ॥ ಎಂ. ಎಸ್. ಸುಂಕಾಪುರ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೮

ಸಿದ್ಧರಾಮೇಶ್ವರ ವಚನಗಳು-ಸಿದ್ಧರಾಮ
ಸಂ. ಡಾ॥ ಆರ್. ಸಿ. ಹಿರೇಮಠ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೬೮

ಸಿದ್ಧರಾಮಯ್ಯನ ಶಿವಯೋಗ ಷಟ್ಸ್ಥಲಾನುಭಾವದ ವಚನ
_ಮುತ್ತಿನಪೆಂಡೆಯು ಒದುವ ಅನ್ನದಾನಿದೇವರು
ಸಂ. ಎಸ್. ಶಿವಣ್ಣ
ಬಸವ ಸಮಿತಿ, ಬಸವ ಭವನ
ಶ್ರೀ ಬಸವೇಶ್ವರ ವೃತ್ತ, ಬೆಂಗಳೂರು_1 ೧೯೮೬

ಸಿದ್ಧರಾಮೇಶ್ವರ ದೇವರು ನಿರೂಪಿಸಿದ ಷಟ್‌ಸ್ಥಲದ ವಚನಗಳು
ಕಾಗದದ ಪ್ರತಿ ಸಂಖ್ಯೆ ೭೬೦
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಸುಖಸಂಪಾದನೆಯ ವಚನಗಳು
ಸಂ. ಡಾ|| ಬಿ. ಆರ್. ಹಿರೇಮಠ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೭

ಬಸವಣ್ಣನವರ ವಚನಸಂಪುಟ

ಸಂ : ಡಾ: ಎಂ.ಎಂ. ಕಲಬುರ್ಗಿ

ಅಲ್ಲಮಪ್ರಭುದೇವರ ವಚನಸಂಪುಟ

ಸಂ : ಡಾ: ಬಿ.ವ್ಹಿ. ಮಲ್ಲಾಪುರ

ಚೆನ್ನಬಸವಣ್ಣನವರ ವಚನಸಂಪುಟ

ಸಂ : ಡಾ: ಬಿ.ವ್ಹಿ. ಮಲ್ಲಾಪುರ

ಸಿದ್ಧರಾಮೇಶ್ವರ ವಚನಸಂಪುಟ

ಸಂ : ಡಾ: ಎಸ್. ವಿದ್ಯಾಶಂಕರ

ಶಿವಶರಣೆಯರ ವಚನಸಂಪುಟ

ಸಂ : ಡಾ: ವೀರಣ್ಣ ರಾಜೂರ

ಸಂಕೀರ್ಣ ವಚನಸಂಪುಟ : ಒಂದು

ಸಂ : ಡಾ: ಎಂ.ಎಂ. ಕಲಬುರ್ಗಿ

ಸಂಕೀರ್ಣ ವಚನಸಂಪುಟ : ಎರಡು

ಸಂ : ಡಾ: ಎಸ್. ವಿದ್ಯಾಶಂಕರ

ಸಂಕೀರ್ಣ ವಚನಸಂಪುಟ : ಮೂರು

ಸಂ : ಡಾ: ಬಿ.ಆರ್. ಹಿರೇಮಠ

ಸಂಕೀರ್ಣ ವಚನಸಂಪುಟ : ನಾಲ್ಕು

ಸಂ : ಡಾ: ಬಿ.ಆರ್. ಹಿರೇಮ

ಸಂಕೀರ್ಣ ವಚನಸಂಪುಟ : ಐದು

ಸಂ : ಡಾ: ವೀರಣ್ಣ ರಾಜೂ

ಸಂಕೀರ್ಣ ವಚನಸಂಪುಟ : ಆರು

ಸಂ : ಎಸ್. ಶಿವಣ್ಣ

ಸಂಕೀರ್ಣ ವಚನಸಂಪುಟ : ಏಳು

ಸಂ : ಡಾ: ವೀರಣ್ಣ ರಾಜೂ

ಸಂಕೀರ್ಣ ವಚನಸಂಪುಟ : ಎಂಟು

ಸಂ : ಡಾ: ವೀರಣ್ಣ ರಾಜೂರ

ಸಂಕೀರ್ಣ ವಚನಸಂಪುಟ : ಒಂಬತ್ತು

ಸಂ : ಡಾ: ವೀರಣ್ಣ ರಾಜೂರ

ವಚನ ಪರಿಭಾಷಾಕೋಶ

ಸಂ : ಡಾ: ಎಸ್. ವಿದ್ಯಾಶಂಕರ

ಸಮಗ್ರ ವಚನಸಾಹಿತ್ಯ ಪ್ರಕಟನ ಯೋಜನೆ

'ಸಮಗ್ರ ವಚನಸಾಹಿತ್ಯದ ಪ್ರಕಟನ ಯೋಜನೆ' ಕರ್ನಾಟಕ ಸರ್ಕಾರದ ಈ ವರೆಗಿನ ಸಾಹಿತ್ಯಕ ಸಾಧನೆಗಳಲ್ಲಿ ಒಂದು ಮಹತ್ವದ ದಾಖಲೆಯಾಗಿದೆ. ಇದು ಒಂದು ಸಾಹಿತ್ಯಕೃತಿಯ ಪ್ರಕಟನೆಯಲ್ಲ; ಒಂದು ಸಾಹಿತ್ಯಪ್ರಕಾರದ ಪ್ರಕಟನೆ.

ತತ್ವಕ್ಕೆ ತತ್ವ, ಸಾಹಿತ್ಯಕ್ಕೆ ಸಾಹಿತ್ಯವಾಗಿರುವ 'ವಚನ ವಾಙ್ಮಯ' ಏಕಕಾಲಕ್ಕೆ ಆತ್ಮಕಲ್ಯಾಣವನ್ನೂ ಸಮಾಜಕಲ್ಯಾಣವನ್ನೂ ಪ್ರತಿಪಾದಿಸುವ ಮೂಲಕ ಜಾಗತಿಕ ಮಹತ್ವ ಗಳಿಸಿದೆ. ಈ ಮೌಲಿಕ ಸಾಹಿತ್ಯವನ್ನು ಸುಲಭ ಬೆಲೆಯಲ್ಲಿ ಜನತೆಗೆ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ಇವತ್ತಿನ ಮಿತಿಗೆ ಸಿಗುವ ಬಸವಯುಗ ಮತ್ತು ಬಸವೋತ್ತರ ಯುಗಗಳ ಎಲ್ಲ ಶರಣರ ಎಲ್ಲ ವಚನಗಳನ್ನು ಸಂಗ್ರಹಿಸಿ, ಸಂಸ್ಕರಿಸಿ, ಪ್ರಕಟಿಸಿದ ಪ್ರಯತ್ನವಿದು. ಈ ಮೂಲಕ ಬಸವಯುಗದ ಹಲವು ಹೊಸ ವಚನಗಳು ಬೆಳಕಿಗೆ ಬರುವುದರೊಂದಿಗೆ ಬಸವೋತ್ತರ ಯುಗದ ಸಮಗ್ರ ವಚನ ಸಂಪತ್ತು ಪ್ರಥಮಸಲ ಹೊರಬರುತ್ತಿರುವುದು ಈ ಯೋಜನೆಯ ವಿಶೇಷ ಸಾಧನೆಯಾಗಿದೆ.

೮೦೦ ವರ್ಷಗಳುದ್ದಕ್ಕೂ ಬೆಳೆದುಬಂದ ಈ ಸಾಹಿತ್ಯದ ವ್ಯಾಪ್ತಿಯನ್ನು ಪ್ರಥಮಬಾರಿ ಗುರುತಿಸಿಕೊಡುತ್ತಿರುವ ಈ ಸಾಹಸದ ಫಲವಾಗಿ, ೨೦ ಸಾವಿರ ವಚನಗಳು ಸುಮಾರು ೧೦ ಸಾವಿರ ಪುಟ ವ್ಯಾಪ್ತಿಯ ೧೫ ಸಂಪುಟಗಳಲ್ಲಿ (ವಚನ ಪರಿಭಾಷಾಕೋಶ ಸೇರಿ) ಬೆಳಕು ಕಾಣುತ್ತಿವೆ.